ಡಾಕ್ಟರ್ ಕಮಲೇಶ್

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
No. 7, ಲ್ಯಾಂಗ್‌ಫೋರ್ಡ್ ರಸ್ತೆ
ಬೆಂಗಳೂರು—25.

ಡಾಕ್ಟರ್ ಕಮಲೇಶ್

"ಆಸ್ತೇ ಭಗ ಆಸೀನಸ್ಯ |
ಊರ್ಧ್ವಸ್ತಿಷ್ಠತಿ ತಿಷ್ಠತಃ
ಶೇತೇ ನಿಪದ್ಯಮಾನಸ್ಯ |
ಚರಾತಿ ಚರತೋ ಭಗಃ
ಚರೈವೇತಿ ! ಚರೈವೇತಿ !! "

ಪ್ರಥಮ ಮುದ್ರಣ ೧೯೬೯
ದ್ವಿತೀಯ ಮುದ್ರಣ ೧೯೭೬

— ಬೆಲೆ ಹದಿನೈದು ರೂಪಾಯಿ —

ಮುದ್ರಕರು :
ಓರಿಯಂಟ್ ಪವರ್ ಪ್ರೆಸ್,
೫೪, ಲಾಲ್‌ಬಾಗ್ ರಸ್ತೆ
ಬೆಂಗಳೂರು—೨೭.

" ಶ್ರೀ ಸೀತಾಪಾದಾರ್ಪಣಮಸ್ತು "

ಡಾಕ್ಟರ್ ಕಮಲೇಶ್

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
No. 7, ಲ್ಯಾಂಗ್‌ಫೋರ್ಡ್ ರಸ್ತೆ
ಬೆಂಗಳೂರು—25.

ನಿವೇದನೆ

ಬೃಹತ್ ಮನುಕುಲದ ಜೀವನ ಜಗತ್ತಿನಲ್ಲಿ ಭಾರತ ಗೃಹಿಣಿಯರ ಸ್ಥಿತಿಗತಿಯ ಕಿಂಚಿತ್ ಪರಿಚಿತಿಯನ್ನು ಸಹೃದಯರ ಮುಂದಿಡುವ ಸಲುವಾಗಿ ಸಂಜನಿಸಿದ ಕೃತಿ ಡಾ|| ಕಮಲೇಶ್. ಪರಕೀಯರಿಗೆ ಭಾರತ ಸಾಮ್ರಾಜ್ಯದ ಜೀವನ ವಾಹಿನಿಯಲ್ಲಿ ಮುಳುಗೇಳದ ಹೊರತು ಸ್ತ್ರೀಜನರ ಜೀವನಗತಿಯಾಗಲೀ ಕಾರ್ಯಜ್ಞಾನದ ವಿಸ್ತಾರವಾಗಲೀ ಬೌದ್ಧಿಕಸ್ತರದ ವಿಶೇಷವಾಗಲೀ ವಿನಯ ವಿಧೇಯತೆಗಳ ಸೂಕ್ಷ್ಮತೆಯಾಗಲೀ ತಿಳಿಯಲಾಗುವುದಿಲ್ಲ. ಮುಖ್ಯವಾಗಿ ಸ್ತ್ರೀಜನಕ್ಕೆ ಸಹಬಾಳ್ವೆಯಿಲ್ಲದೆ ಬದುಕುವುದು ಸಾಧ್ಯವಿಲ್ಲದಿರುವಾಗ ಸಹಕಾರವೂ ಇಲ್ಲದೆ ಹೋದರೆ ಜೀವನ ಬಲು ಘೋರ; ಬದುಕು ಅತಿ ದುಸ್ತರ.

ವಿಶ್ವಸಂಸ್ಥೆಯು ಅಖಿಲ ನಾರೀಜನರ ಮೇಲ್ಮೆಗಾಗಿ ೧೯೭೫ನೇ ಸಂವತ್ಸರವನ್ನು 'ಮಹಿಳಾವರ್ಷ'ವೆಂದು ಘೋಷಿಸಿ ತನ್ಮೂಲಕ ಸ್ತ್ರೀಯರ ಪ್ರಗತಿ ಸಾಧಿತವಾಗಲೆಂದು ಆಶಿಸಿದುದರ ಪ್ರಯುಕ್ತ ಪ್ರಪಂಚದಾದ್ಯಂತ ಹುರುಪಿನಿಂದ ಅನೇಕ ಬಗೆಯ ಅತ್ಯುತ್ತಮ ಕಾರ್ಯಕ್ರಮಗಳನ್ನು ರೂಪಿಸಿ ಆಚರಿಸಲಾಯಿತು. ಅವುಗಳಲ್ಲಿ ಮಹಿಳೆಯರ ಗ್ರಂಥ ಪ್ರಕಟಣೆಯೂ ಒಂದು. ಅಂತಹ ಸಂದರ್ಭದಲ್ಲಿ ಮಹಿಳೆಯರಿಗಾಗಿ 'ಡಾ|| ಕಮಲೇಶ್' ಎರಡನೆಯ ಆವೃತ್ತಿಯನ್ನು ಕಂಡು ಹೊರಬೀಳುವುದು ಉಚಿತವಾಗಿತ್ತು. ಆದರೆ ಉದ್ದೇಶಪೂರ್ವಕವಾದ ಯೋಜನೆಯಂತೆ ಸಾಧನೆ ಕೈಗೂಡುವುದಿರಲಿ. ನಮ್ಮಲ್ಲಿ ಉಳಿದಿದ್ದ ಕೇವಲ ಕೆಲವೇ ಕೆಲವು ಪ್ರತಿಗಳನ್ನು ಬೆಳಕಿಗೆ ಬಿಡಲೂ ಸಹ ಸಾಧ್ಯವಾಗಲಿಲ್ಲ. ಅಂದಮೇಲೆ ಈ ದಿಶೆಯಲ್ಲಿ ಪ್ರಗತಿಯ ವಿಸ್ತಾರವನ್ನು ಯಾರೇ ಆಗಲಿ ತಿಳಿಯಹೋಗುವುದು ಸರ್ವಥಾ ವ್ಯರ್ಥ. ಇದರಿಂದ ಮನದಲ್ಲಿ ಎಷ್ಟು ಉತ್ಸಾಹವೋ ಪರಿಸ್ಥಿತಿ ಅಷ್ಟೇ ನಿರಾಶಾದಾಯಕ ಎಂಬುದು ಸುವ್ಯಕ್ತ. ಇಂದೂ, ಈಗಲೂ, ನಮ್ಮ ಸಮಾಜದಲ್ಲಿ ಭದ್ರವಾಗಿ ಬೇರು ಬಿಟ್ಟಿರುವ ಸ್ತ್ರೀ ಶಕ್ತಿಯ ತೀವ್ರ ಅನಾದರಣೆ ರಾಷ್ಟ್ರದ ಬಡತನಕ್ಕೆ ಹೇಳಿಮಾಡಿಸಿದ ಒಂದು ವಿಶಿಷ್ಟರೂಪ ಎಂದರೆ ಅದೇನೂ ತಪ್ಪಲ್ಲ.

ಈ ಕಾದಂಬರಿಯು ಪುಟಪುಟದಲ್ಲೂ ಹಿಂದೂಸ್ಥಾನದ ಸ್ತ್ರೀ ಜೀವನವನ್ನು ವಿಚಾರಾತ್ಮಕವಾಗಿ ವೈವಿಧ್ಯಮಯವಾಗಿ ಶ್ರಮ-ಶ್ರದ್ಧೆಗಳ ಏಕತ್ರ ಪೂರ್ಣತೆಯಿಂದ ರೂಪಿಸಿ ಮಹಿಳಾಮಣಿಯರ ಅಂತಃಚಕ್ಷುವನ್ನು ತೆರೆಸಲೆಂದೇ ಚಿತ್ರಿಸಿದ ಕಥಾವಸ್ತುವು ಪ್ರೋತ್ಸಾಹದಾರಿದ್ರ್ಯದಿಂದ ಹಿಂದೆ ಬೀಳಲು ಖಂಡಿತ ಕಾರಣವಿಲ್ಲದಿಲ್ಲ. ಮಹಿಳಾವರ್ಷವು ಮೂಡಿ ಎಲ್ಲಾ ರಾಷ್ಟ್ರಗಳಲ್ಲೂ ವರ್ಷವಿಡೀ ನೆಲೆನಿಂತು ಅಲ್ಲಿ-ಇಲ್ಲಿ ಮಿಣುಕಾಡಿ ಹೋಯಿತಷ್ಟೆ. ಆದರಿಂದ ಆದ ಲಾಭ ಪತ್ರಿಕೆಗಳಿಗೆ ಸುದ್ದಿ; ಮಾತಾಳಿಗಳ ಹರಟೆಗೆ ವಸ್ತು; ಆಚರಿಸುವವರಿಗೆ ಕ್ಷಣಿಕ ಸ್ಫೂರ್ತಿ! ಈ ಒಂದು ಪ್ರಸಂಗವೇ ಸಾಕು, ನಮ್ಮ ಜಡಭರತತ್ವಕ್ಕೆ. ಇನ್ನು ಮಹಿಳೆಯರ ಸಲುವಾಗಿ ಒಂದು ಮಾತನ್ನು ಒತ್ತಿ ಹೇಳುವುದಾದರೆ ನಾವು ನಮ್ಮ ಅಂತಃಚಕ್ಷುವನ್ನು ತೆರೆಯದ ಹೊರತು ಮನೋವಿಕಾಸ ಮತ್ತು ಆತ್ಮವಿಕಾಸವನ್ನು ಖಂಡಿತ ಹೊಂದಲಾರೆವು. ಮಹಿಳಾ ಪ್ರಗತಿಯಾಗದೆ ಜೀವನಪ್ರಗತಿ ರಾಷ್ಟ್ರಪ್ರಗತಿ ಎರಡೂ ಸರ್ವತ್ರ ಕುಂಠಿತ. ಇದನ್ನು ಪ್ರತಿಯೊಬ್ಬ ಸತ್ಪ್ರಜೆಯೂ ಅಕ್ಷರಶಃ ಬಲ್ಲ. ಆದರೂ ಸಹ ಮಹಿಳೆಯರು ತಮ್ಮ 'ಭೋಗ ವಸ್ತು' ವಾಗಿರಬೇಕೆಂಬ ಅಂತರ್ಯಾಭಿಲಾಷೆಯನ್ನು ಬಿಟ್ಟುಕೊಡಲು ಯಾರೂ ಸಿದ್ಧರಿಲ್ಲ. ಅಂದಮೇಲೆ ಸದ್ಯ, ನಮ್ಮ ಜೀವನ ಪರಿಸ್ಥಿತಿಯನ್ನು ಯಾವ ಅಳತೆಗೋಲಿಂದ ಅಳೆದರೂ ಕಂಡು ಬರುವುದು ಒಂದೆಡೆ ಆಡಂಬರದ ವೈಪರೀತ್ಯ; ಇನ್ನೊಂದೆಡೆ ಅಜ್ಞಾನದ ಗೊಡ್ಡುತನ. ಈ ಸತ್ಯಸ್ಯ ಸತ್ಯ ಚಿತ್ರಕಲ್ಪನೆ ಇಂದು ನಿನ್ನೆಯದಲ್ಲ. ನಾಳೆ ನಾಡಿದ್ದಿಗೆ ಮುಗಿಯುವುದೂ ಇಲ್ಲ.

ಈಚಿನ ಕಾನೂನು ಕಟ್ಟಳೆಗಳಲ್ಲಿ ಸ್ತ್ರೀಯರಿಗೆ ಪಾಲು ವಿದಿತ. ಆದರೆ ಆಚರಣೆಯಲ್ಲಿ ಸೊನ್ನೆ. ಆರ್ಥಿಕ ಸ್ವಾತಂತ್ರ್ಯ ವೈಯುಕ್ತಿಕ ಸ್ವಾತಂತ್ರ್ಯಗಳಿಲ್ಲದೆ ಜೀವನ ಪ್ರಗತಿಗಾಗಿ ತಾಕಲಾಡುವುದಕ್ಕಿಂತ ಆಕೆ ಅಂಗೈಲಾಡುವಗಿಣಿಯಾದರೇನೇ ಸ್ವಜೀವನ ಸೌಖ್ಯ. ಹತ್ತಕ್ಕೋ ನೂರಕ್ಕೋ ಒಬ್ಬೊಬ್ಬರು ಜೀವನದ ನವ್ಯಪಥದಲ್ಲಿ ಸಾಗಿ ಹೋದರೆ ಏನೇನೂ ಸಾಲದು; ಅದು ಪ್ರಗತಿಯ ಲಕ್ಷಣವೂ ಅಲ್ಲ. ಸರ್ವರಿಗೂ ಸಮಪಾಲು ಸಮಬಾಳ್ವೆ ಅತ್ಯಂತ ಆತ್ಮೀಯವಾಗಿ ಒದಗಿದರೆ ಮಾತ್ರ ಪ್ರಗತಿಯ ಹಾದಿಯಲ್ಲಿ ರಾಷ್ಟ್ರ; ಅಂದರೆ ಜಪಾನ್

ದೇಶವು ಇಪ್ಪತ್ತೈದು ವರ್ಷಗಳಲ್ಲಿ ಸಾಧಿಸಿದುದನ್ನು ಸ್ವಲ್ಪ ಹೆಚ್ಚುಕಡಿಮೆಯಾಗಿ ನಾವೂ ಸಾಧಿಸುವಂತಾದೇವು ಎಂದು ಧೈರ್ಯವಾಗಿ ಹೇಳಬಹುದು. ಅದನ್ನು ಅಖಿಲ ಮಹಿಳಾ ಜನಾಂಗ ಅರಿತುಕೊಂಡು ಸರ್ವತ್ರ ಸದಾ ಕಾರ್ಯಸಿದ್ಧರಾಗಿ ಪ್ರಬುದ್ಧರಾದರೆ ಮಾತ್ರ ಜೀವನ ಸಿದ್ಧಿ ಮತ್ತು ಬದುಕಿನ ಪರಮ ಲಕ್ಷ್ಯ.

ಈ ಕೃತಿಗೆ ಅಗತ್ಯವಾಗಿದ್ದ ಅನೇಕ ವಿಷಯಗಳನ್ನೊದಗಿಸಿ ಉಪಕಾರ ಮಾಡಿದ ನನ್ನ ಬಳಗದ ಡಾಕ್ಟರಿಗೂ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ಸ್ಮೃತಿ'ಗೆ ಸಂಬಂಧಿಸಿದ ಲೇಖನವನ್ನು ಈ ಕೃತಿಗೆ ಅಳವಡಿಸಿಕೊಳ್ಳಲು ಅನುಮತಿ ನೀಡಿದ ಲೇಖಕರಿಗೂ ಹಸ್ತಪ್ರತಿಯನ್ನು ಓದಿ ತಿದ್ದುವಲ್ಲಿ ಸಹಾಯ ಮಾಡಿದ ಮಿತ್ರರಿಗೂ ವಂದನೆಗಳನ್ನರ್ಪಿಸುವುದು ನನ್ನ ಆದ್ಯ ಕರ್ತವ್ಯ.

ಇನ್ನೊಂದು ವಿಜ್ಞಾಪನೆ ಏನೆಂದರೆ, ಎಷ್ಟೇ ಶ್ರಮವಹಿಸಿದರೂ ಮುದ್ರಣ ಕಾಲದಲ್ಲಿ ಮುದ್ರಾರಾಕ್ಷಸನ ಹಾವಳಿಯನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದುದರಿಂದ ಅತ್ಯಂತ ವಿಷಾದವುಂಟಾಗಿದೆ. 389ನೇ ಪುಟದಲ್ಲಿ 'INTUSSUSCEPTION' ಎಂಬಲ್ಲಿ ಮಧ್ಯೆ ಒಂದು s ಬಿದ್ದು ಹೋಗಿದೆ. ಇಂತಹ ಅಚಾತುರ್ಯ ಅನೇಕಕಡೆ ನಡೆದಿದೆ. ಕೆಲವೊಮ್ಮೆ ಅಕ್ಷರಗಳೂ ಚಿಹ್ನೆಗಳೂ ಸ್ಥಳಪಲ್ಲಟವಾಗಿವೆ. ಇವನ್ನು ಸಂದರ್ಭೋಚಿತವಾಗಿ ಸಹೃದಯರಾದ ಓದುಗರು ತಿದ್ದಿಕೊಳ್ಳಬೇಕಾಗಿ ವಿನಂತಿ.

ಶ್ರೀ ಬಸವಣ್ಣನವರ ವಚನವೊಂದನ್ನು ಈ ಕೃತಿಗೆ ಆಯ್ದುಕೊಳ್ಳಲಾಗಿದ್ದು, ಸಂದರ್ಭೋಚಿತವಾಗಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಲಾಗಿದೆ.

'ನೀನೊಲಿದರೆ ಕೊರಡು ಕೊನರುವುದಯ್ಯಾ
ನೀನೊಲಿಯದಿರೆ ಹಯನು ಬರಡಹುದಯ್ಯಾ'

೨೫—೯—೧೯೭೩ —ಮಲ್ಲಿಕಾ

ಡಾಕ್ಟರ್ ಕಮಲೇಶ್

೧

...ಕಾಲೇಜಿನ ಹೊರವಲಯದಲ್ಲಿ ವಾಹನಗಳ ಮೇರೆ ಮೀರಿದ ಸದ್ದು. ಒಳ ವಲಯದಲ್ಲಿ ಸುಖದುಃಖಗಳ ಪರಿಷೆ.

....ಹೊತ್ತು ಒಂಭತ್ತರ ಅಂಚನ್ನು ದಾಟಿ ಮುಂದೆ ಹೆಜ್ಜೆ ಇಡುತ್ತಿದೆ.

ಮಹಾರಾಣಿ ಕಾಲೇಜಿನ ವಲಯಕ್ಕೆ ಕಾಲಿಡುವಾಗಲೇ ಕಮಲೇಶಳ ಬೊಗಸೆಗಂಗಳ ನೋಟ ತನ್ನ ಆತ್ಮೀಯ ಗೆಳತಿಯರಿಗಾಗಿ ಬಹಳ ವಿಚಕ್ಷಣೆಯಿಂದ ತಡುಕಾಡಿತು. ಚಂಪಾ ವನಮಾಲಿಯರು ತನಗಿಂತ ಮುಂದಾಗಿ ಬಂದಿರುತ್ತಾರೆಂಬುದು ಶತಸಿದ್ಧ. ಅವರಿಗೆ ಬಸ್ಸಿನ ಸೌಕರ್ಯ ಅನುಕೂಲವಾಗಿರುವುದರೊಂದಿಗೆ ಕಾಲೇಜು ಸಮೀಪವು ಸಹ. ಅಂದಮೇಲೆ ಬಂದಿರಲೇ ಬೇಕು. ಅಂತಲೇ ಅವರಿಗಾಗಿ ಕಣ್ಣುಗಳು ಎಡೆಬಿಡದೆ ಕೆಲಸ ಮಾಡುತ್ತಿವೆ. ಬಿಸಿಲ ಬೇಗೆಯಲ್ಲಿ ಬೆಂದು ಬಾಡಿ ನಿಂತ ಗಿಡಮರಗಳು ಬಯಸದಿದ್ದರೂ ದಿಟ್ಟಿಗೆ ಬಿದ್ದುವು. ಮಳೆಗಾಲದಲ್ಲಿ ಹಸುರು ಕಕ್ಕುವ ವಲಯ ಈಗ ಬಾಡಿ ಬತ್ತಿ ಧೂಳೀ ಧೂಸರಿತವಾಗಿ....ತಲೆಗೆದರಿ ಹಸ್ತವನ್ನು ಚಾಚಿನಿಂತ ದಾರಿದ್ರ್ಯದೇವತೆಯಂತೆ ತೋರುತ್ತಿದೆ. ಎಲ್ಲಿ ನೋಡಿದರೂ ಉದುರಿದ ದರುಗೆಲೆಗಳ ರಾಶಿ....ರಾಶಿ. ಗುಡಿಸುವವರು ದಿನವೂ ಗುಡಿಸುತ್ತಾರೆ. ಆದರೂ ಅವಶೇಷಕ್ಕೆ ಕೊರತೆಯೇ ಇಲ್ಲ. ನೋಟದ ನೇರಕ್ಕೆ ಹೆಮ್ಮರದ ನೆತ್ತಿಯ ಮೇಲೆ ಅಡಗಿ ಕುಳಿತ ಕೋಗಿಲೆ ಆನಂದೋನ್ಮತ್ತತೆಯಿಂದ ಹಾಡಿತು. ಕುಹೂ ! ಕುಹೂ! ಕುಹೂ!

ಸಿಳ್ಳು ಹಾಕಲು ಬಂದಿದ್ದರೆ ಕಮಲೇಶ್ ಮರುದನಿ ಕೊಡುತಿದ್ದಳೇನೋ ....ಸುಮ್ಮನೆ ಸಹಜವಾಗಿ ದನಿ ಬಂದೆಡೆಗೆ ದಿಟ್ಟಿಯನ್ನು ಹೊರಳಿಸಿ, ಎಳೆಯ ಮನಕ್ಕೆ ಆನಂದವನ್ನು ತುಂಬಿಕೊಂಡು ಮುಂದುವರಿದಳು. ಪಾದರಕ್ಷೆಗಳ ಪಟ ಪಟಾತ್ಕಾರ ನಿಶ್ಶಬ್ದತೆಯ ಮೇಲೆ ಸುತ್ತಿಗೆಯ ಪೆಟ್ಟಿನಂತೆ ಬೀಳುತ್ತಿದೆ. ದೇಹವನ್ನಲಂಕರಿಸಿದ ಪಂಜಾಬಿಯುಡಿಗೆಯ ನೀಳವಾದ ತಿಳಿನೀಲಿ ವರ್ಣದ ಶಲ್ಯದೊಡನೆ ತಂಗಾಳಿ ಚಿನ್ನಾಟವಾಡುತ್ತಿದೆ. ಹಣೆಯ ಮೇಲೆ ಅಡರಿ

ಬಂದ ಅಲೆಗೂದಲನ್ನು ಹಿಂದಕ್ಕೆ ತಳ್ಳಿ ನೋಟವನ್ನು ದೂರಗವ್ಯದೆಡೆಗೆ ಹರಿಸಿದಾಗ ಓ....ಅಲ್ಲಿ ದೂರದ ...ನೆರಳು ಬಿಸಿಲಿನ ವಲಯದಲ್ಲಿ ಚಂಪಾ ವನಮಾಲಿಯರು ಮಾತುಕತೆಯಲ್ಲಿ ನ್ಮೈಮರೆತಿರುವುದು ತೋರಿಬಂತು. ಒಡನೆ ಉತ್ಸಾಹ ಗರಿಗೂಡಿ ಹರ್ಷೋನ್ಮತ್ತಳಾಗಿ ಆಕಡೆ ನಡೆದಳು.

"ಓಹೋ....ಆಗಲೇ ಎಲ್ಲಾ ಪೂರೈಸಿದಿರಾ ?"

"ಡಾಕ್ಟರಿಲ್ಲದೆ ಪೂರೈಸುವಂತಿಲ್ಲ !" ಹಾಸ್ಯವಾಣಿ ಅಲ್ಲಿಂದಲೇ ಮೊಳಗಿತು.

"ಡಾಕ್ಟರು...?" ವಿಶಾಲ ವಿಸ್ಮಯ ನೇತ್ರಗಳು ಇನ್ನಷ್ಟು ಅರಳಿದುವು. ತನ್ನೆರಡು ಕೈಗಳನ್ನೂ ಎದೆಯ ಮೇಲಿಟ್ಟು ನಾಟ್ಯಭಂಗಿಯಲ್ಲಿ ನುಡಿದಳು ಕಮಲೇಶ್. "ನಿಜವಾಗಿಯೂ ಇಷ್ಟರೊಳಗಾಗಿ ಡಾಕ್ಟರಾಗಿದ್ದಿದ್ದರೆ ಎಷ್ಟು ಚೆನ್ನಾಗಿರುತಿತ್ತು ? ಇನ್ನೂ ಐದಾರು ವರ್ಷ ಕಲಿಯಬೇಕಲ್ಲಾ ಎಂದು ನನಗೂ ಸಂಕಟ. ಎಷ್ಟೆಂದರೂ ನಿಮ್ಮದೇ ಸುಖ ...ಆಗಲೇ ಉತ್ತುಂಗಕ್ಕೇರಿದ್ದೀರಿ !....ಕೋಕಿಲಗಾನ ಚಂಪಾ ! ನಾಟ್ಯವಿಶಾರದೆ ವನಮಾಲ !.... ಇದ್ದರೆ ಹಾಗಿರಬೇಕು ! ನನ್ನಲ್ಲೇನುಂಟು ಅಪ್ಪ ಒಪ್ಪಿದರೆ ಮೆಡಿಕಲ್ ಕಾಲೇಜು ಇಲ್ಲದಿದ್ದರೆ ತ್ರಿಶಂಕು ಸ್ವರ್ಗ !"

ಕಮಲೇಶ್ ಉಳಿದ ಹತ್ತು ಹೆಜ್ಜೆಗಳನ್ನು ಓಡುತ್ತಲೆ ದಾಟಿ ಗೆಳತಿಯರನ್ನು ಪ್ರೇಮಾತಿಶಯದಿಂದ ಎಡಬಲಗಳಲ್ಲಿ ಅಪ್ಪಿ ಹಿಡಿದುಕೊಂಡಳು. ಒಲವು ತುಂಬಿದ ಹೃದಯಗಳು ಹೂವಿನಂತರಳಿದರೂ ಅಂತರಾಳದಲ್ಲಿ ನೋವಿನ ಊಟೆಯು ತುಂಬಿತ್ತು, ಬೂದಿ ಮುಚ್ಚಿದ ಹೂಗೆಂಡದಂತೆ.

"ಡಾಕ್ಟರಿಕೆಯ ಮುಂದೆ ನಮ್ಮದೇನು ಬಿಡಮ್ಮಾ...."

"ನನಗೆ ತಿಳಿಯದೇ ? ಎಲ್ಲಾ ಮೇಲು ಮೇಲಕ್ಕೆ !"

ಮೂವರ ಮುಖದಲ್ಲೂ ಎಳೆನಗು ನಲಿಯಿತು.

"ನೀವು ಬಂದು ಎಷ್ಟು ಹೊತ್ತಾಯಿತು....?"

"ನಾವೂ ಇದೀಗಷ್ಟೆ ಬಂದೆವು."

"ಓ...." ಎನ್ನುತ್ತಾ ಕಮಲೇಶ್ ದಿಟ್ಟಿಯನ್ನು ಸುತ್ತಲೂ ಅಟ್ಟಿದಳು. ಕಾಲೇಜಿಗೆ ವಿದ್ಯಾರ್ಥಿನಿಯರಿನ್ನೂ ಬಂದಿರಲಿಲ್ಲ. ಹಿರಿಯ ಕಟ್ಟಡ "ಬಿಕೋ" ಎನ್ನುವಷ್ಟು ಬರಿದಾಗಿದೆ. ಕೆಲಸಗಾರರು ಅಲ್ಲಲ್ಲಿ ಕಸವುಡುಗುತಿದ್ದಾರೆ.

ಆಫೀಸಿನ ಗುಮಾಸ್ತರುಗಳು ಒಬ್ಬೊಬ್ಬರಾಗಿ ಆಗಮಿಸುತ್ತಿದ್ದಾರೆ. ಆದರೂ ಸಪ್ಪಗದ್ದಲಗಳ ಸೊಲ್ಲೇ ಇಲ್ಲ. ಎಲ್ಲೆಲ್ಲೂ ನಿಶ್ಶಬ್ದ; ನೀರವ.

ಇಂದಿನ ವಾತಾವರಣ ಎಂದಿನಂತಿದ್ದರೂ ಚಂಪಾ ವನಮಾಲಿ ಕಮಲೇಶರ ಮನದಾಗಸದಲ್ಲಿನ ವಾತಾವರಣವೇ ಬೇರೆ. ಹಿಂದಿನ ದಿನವೇ ತಮ್ಮ ಪರೀಕ್ಷೆ ಮುಗಿಸಿದ್ದ ಹುಡುಗಿಯರು ಇಂದು ಕೊನೆಯ ಭೇಟಿಗಾಗಿ ಪುನರಾಗಮಿಸಿದ್ದರು. ಬಗೆ ಕದಡಿದ್ದರೂ ದುಃಖಕ್ಕೆ ಇಂಬುಕೊಡಬಾರದೆಂದು ಪ್ರಯತ್ನಪೂರ್ವಕವಾಗಿ ತಡೆಹಾಕಿದರು. ಆದರೂ ಕಣ್ಣು ಮೂಗು ಮುಖಗಳಲ್ಲಿ ಚಂದನವೊರೆದಂತೆ ರಂಗು ಮೂಡಿತು. ಸುದ್ದಿಯೆತ್ತಿದರೆ ಕಂಬನಿಯ ಕಟ್ಟೆಯೊಡೆಯುವುದೆಂದು ಇತರ ವಿಚಾರಗಳಲ್ಲಿ ನಿಮಗ್ನರಾಗಿ ಸಂತಸದಿಂದ ಹೊತ್ತು ಕಳೆಯುವ ಇಚ್ಛೆ. ಆದರೆ ಮೇಲೆಸೆದ ಕಲ್ಲು ಇಳಿಮುಖವಾಗಿ ಬಂದು ಬೀಳುವಂತೆ ಯಾವ ಸುದ್ದಿಯನ್ನಾರಿಸಿದರೂ ವಿಷಯ ಮೂಲದೆಡೆಗೆ ಸರಿಯಹತ್ತಿತು.

ಗೃಹಿಣಿಯಾಗಿ ಹೊಸ್ತಿಲು ದಾಟಲಿದ್ದ ವನಮಾಲಿ ಕಾಲೇಜಿಗೆ ಎರಡೂ ಕೈಗಳಿಂದ ಶರಣುಹೊಡೆಯಲಿದ್ದಾಳೆ....ಮೆಡಿಕಲ್ ಕಾಲೇಜನ್ನು ಸೇರ ಬಯಸಿದ್ದ ಕಮಲೇಶ್ ಇನ್ನು ಮಹಾರಾಣಿ ಕಾಲೇಜಿಗೆ ಬರುವ ಅಗತ್ಯವಿಲ್ಲ.... ಅವರಿಬ್ಬರನ್ನೂ ಬಿಟ್ಟುಕೊಟ್ಟು ಚಂಪಾ ಮಹಾರಾಣಿ ಕಾಲೇಜಿನಲ್ಲಿ ತಾನೇ ತಾನಾಗಿ ಕಲಿಕೆಯನ್ನು ಮುಂದುವರಿಸಬೇಕು. ಹಾದಿ ಕವಲೊಡೆಯುವ ಮುನ್ನ ಕಾಲೇಜಿಗೆ ಕೊನೆಯ ಭೇಟಿ ನೀಡಿದ ಕಮಲೇಶ್ ವನಮಾಲಿಯರನ್ನು ಬೀಳ್ಕೊಡಲು ಭಾರವಾದ ಹೃದಯವನ್ನು ಹೊತ್ತು ಮುಂದಾಗಿದ್ದ ಚಂಪಕಮಾಲಿನಿ ಗಿಡಮರಗಳ ನೆರಳು–ಬಿಸಿಲಿನ ವಲಯದಲ್ಲಿ ಅಡ್ಡಾಡುತ್ತಾ "ವನಮಾಲಿ...." ಎಂದಳು. ದುಃಖದ ಒತ್ತಡದಲ್ಲಿ ಕಂಠವು ಗದ್ಗದಿತವಾದುದರಿಂದ ಮುಂದೆ ಮಾತು ಹೊರಡಲಿಲ್ಲ.

" ಶ್ಶ್ !" ತುಟಿಯ ಮೇಲೆ ಬೆರಳಿಟ್ಟು ದುಃಖಿಸಬಾರದೆಂದು ಚಂಪಳಿಗೆ ಸೂಚನೆ ನೀಡಿ, ಅವಳ ಮೃದು ಹಸ್ತಗಳನ್ನು ಅದುಮಿ ಹಿಡಿದುಕೊಂಡು ವನಮಾಲಿಗೆಂದಳು ಕಮಲೇಶ್,

" ನೀನು ಇಷ್ಟು ಬೇಗನೆ ಮದುವೆಗೊಪ್ಪಿಕೊಂಡಿರುವುದನ್ನು ನೋಡಿದರೆ ಕಲೆಯನ್ನು ಇಷ್ಟಕ್ಕೆ ಕೈ ಬಿಡುತ್ತೀಯೇನೋ ಎಂಬ ಅನುಮಾನ ಮೂ

ಡುತ್ತದೆ. ಆಗುವುದಂತೂ ಆಯಿತು. ನಾಟ್ಯಕಲೆಯನ್ನು ಮಾತ್ರ ಕೈ ಬಿಡ ಬೇಡ. ಏನೇ ಬರಲಿ, ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯುವ ಹೇಡಿತನ ವಿರಬಾರದು. ”

“ ಇಷ್ಟು ಕಲಿತು ನಾಟ್ಯರಾಣಿ ಎನಿಸಿಕೊಂಡ ಮೇಲೂ ಕೈ ಬಿಡಲು ಯಾರಿಗೆ ಇಷ್ಟವಾದೀತು ಹೇಳು. ಅಪ್ಪ ಅಮ್ಮನಿಗೆ ಭಾವೀ ಬೀಗರ ಮುಂದೆ ನಿಲ್ಲಿಸುವ ಧೈರ್ಯವಿಲ್ಲ ...ಮುಂದೇನಾಗುವುದೋ ಎಂಬ ಚಿಂತೆ ಈಗಲೇ ನನಗೆ ಹಿಡಿದಿದೆ. ಒಂದುವೇಳೆ ಅವರ ಕಡೆಯವರು ಕಲೆಯನ್ನು ಬಾಳಿಸಲು ಒಪ್ಪದೆ ಹೋದರೆ ನನ್ನ ಗತಿ ಗಂಗಮ್ಮನ ಪಾಲು. ”

ವನಮಾಲಿಯ ಮುಖಮುದ್ರೆಯಲ್ಲಿ ಗಾಢವಾದ ಚಿಂತೆ ತಲೆದೋರಿತು.

ಮಾನವ ಸಮಾಜದಲ್ಲಿಯ ನೀತಿನಿಯಮ ಎಷ್ಟೇ ಪುರಾತನವಾದರೂ ನಿತ್ಯ ನೂತನತೆಯನ್ನು ತಳೆಯುತ್ತಲೇ ಇರುತ್ತದೆ. ನಾಗರಿಕ ಜಗತ್ತಿನ ನಾಗರಿಕ ಜೀವನದ ನಾಗರಿಕ ಮಹಾಶಯನಿಗೆ ಇಂದಿನ ಚಿರ ನೂತನತೆಯು ಪರಿಚಯವಾಗಿದ್ದರೂ ಮನೋವಿಕಾಸಗೊಳಿಸುವ ವಿದ್ಯಾಸೌಕರ್ಯಗಳು ಒದಗಿದ್ದರೂ ದುರದೃಷ್ಟವಶಾತ್ ಸಪ್ರಮಾಣದಲ್ಲಿ ಮನೋವಿಕಾಸವಾಗಲಿಲ್ಲ. ತನ್ನ ಭೋಗವಿಲಾಸಗಳಿಗಾಗಿಯೇ ಪ್ರಕೃತಿ ವಿಕಾಸಲು ಎಂಬ ಅಜ್ಞಾನ ಪ್ರೇರಿತವಾದ ಮಹಾ ದುರ್ಭಾವನೆ ಬಹುತೇಕವಾಗಿ ಎಲ್ಲರಲ್ಲೂ ಬಲವತ್ತರವಾಗಿರುವುದರಿಂದ ಇಂದಿಗೂ ಭೋಗ ಭಾಗ್ಯ ಅಧಿಕಾರಗಳು ಪುರುಷನ ಅಧೀನದಲ್ಲಿವೆ. ಆತನ ಕೈಗೊಂಬೆಯಾಗಿ ವ್ಯಕ್ತಿಗತ ಪರಿಜ್ಞಾನವನ್ನು ಕಳೆದುಕೊಂಡು ಕೊಚ್ಚೆಯಲ್ಲಿನ ಕ್ರಿಮಿಯಾಗಿ ಕೊಳೆಯುವ ಯೋಗ ಹೆಣ್ಣಿನ ಪಾಲಿಗೆ ಬಂದಿದೆ. ಕಣ್ಣೀರಿನಲ್ಲಿ ಕೈ ತೊಳೆದರೂ ಸತ್ಯ ಧರ್ಮ ತ್ಯಾಗಗಳ ವಶೀಭೂತಳಾದರೂ ಆಕೆ ಶೃಂಖಲೆಗಳಿಂದ ವಿಮುಕ್ತಳಾಗುವಂತಿಲ್ಲವೆಂಬುದನ್ನು ಆ ಸರ್ವಾಂತರ್ಯಾಮಿಯೂ ಸಹ ಬಲ್ಲ....

ಕಮಲೇಶ್ ವಿಚಾರಪರವಶಳಾಗಿ ವನಮಾಲಿಯ ಭಾವಪೂರ್ಣ ನಯನಗಳನ್ನು ಕೆಲವು ಕ್ಷಣ ನಿಟ್ಟಿಸಿ ನೋಡಿದಳು. ಆ ಸಿಂಧೂರಯುಕ್ತ ರೂಪ ಲಕ್ಷ್ಮಿಯ ಅಂತರ್ಯದಲ್ಲಿ ಉರಿಯುವ ರಾಗಜ್ಯೋತಿ ನಿಚ್ಚಳವಾಗಿ ಹೊಳೆಯುತಿದ್ದರೂ ಉಜ್ವಲ ಭವಿಷ್ಯದ ಅನಿಶ್ಚಿತತೆ ಅವಳನ್ನು ಸಮೂಲವಾಗಿ ಅಲುಗಾಡಿಸಿಬಿಟ್ಟಿದೆ....ಅವಳ ಭರತನಾಟ್ಯದ ಅಪೂರ್ವ ಭಾವಭಂಗಿಯು

ಮಧುರಾನುಭೂತಿಗಳು ಅಂತಃಪಟಲದ ಮೇಲೆ ಮತ್ತೆಮತ್ತೆ ಜ್ವಲಿಸಿ ಎದೆಯಾಳದಲ್ಲಿ ಕಸಿವಿಸಿ ಮೂಡಿಸಿತು. ಕಮಲೇಶ್ ನಿಡುಸುಯ್ಯುತ್ತ ಹೇಳಿದಳು; "ಕಲೆ ಕೈಗೂಡಿ ಬಂದಿದೆ ವನಮಾಲಿ. ಇನ್ನು ಕೆಲವುಕಾಲ ಕಲಿತಲ್ಲಿ ನೀನು ಭಾರತದ ಕಲಾಕೋವಿದರ ಶ್ರೇಣಿಯಲ್ಲಿ ಶೋಭಿಸುವುದರಲ್ಲಿ ಅನುಮಾನವಿಲ್ಲ. ಮುಖ್ಯವಾಗಿ ದೃಢಮನಸ್ಸು ನಾಡು. ನಿಮ್ಮವರನ್ನು ಒಪ್ಪಿಸುವ ಕಾರ್ಯಭಾರವೂ ಸಹ ನಿನ್ನದೇ."

"ನಿಜವಾಗಿಯೂ ವನಮಾಲೀ, ಕಮಲೇಶ್ ಹೇಳುವುದರಲ್ಲಿ ಸತ್ಯವಿದೆ." ಹುಬ್ಬೇರಿಸಿದಳು ಚಂಪಾ. ನಿಷ್ಕಳಂಕ ಹೃದಯದಲ್ಲಿ ಉತ್ಸಾಸೆಯ ಝರಿ ತುಂಬಿ ಹರಿಯಿತು.

ವನಮಾಲಿ ಸುಖದುಃಖಗಳ ಕಡಲಲ್ಲಿ ಮಿಂದೆದ್ದಳು. ಭವಿಷ್ಯದ ಚಿಂತೆ ಎಳೆಯ ಹೃದಯದಲ್ಲಿ ಉದಯಮಾನೋತ್ಸವವನ್ನು ಆಚರಿಸಿ ಮುಖ ಮಂಡಲಕ್ಕೆ ಮ್ಲಾನತೆಯ ಬಣ್ಣ ಬಳಿಯಿತು. ಮಂತ್ರಮುಗ್ಧಳಂತೆ ಮೌನವಾಗಿ ಗೆಳತಿಯರೊಂದಿಗೆ ಹೆಜ್ಜೆ ಹಾಕಿದಳು.

ಹೊತ್ತು ಹತ್ತೂವರೆಯಂಚನ್ನು ದಾಟಿ ಮುಂದೆ ಹೆಜ್ಜೆಯಿಡುತ್ತಲೂ, ಇನ್ನೂ ಪರೀಕ್ಷೆ ಮುಗಿಯದ ವಿದ್ಯಾರ್ಥಿನಿಯರ ದಂಡು ಒಳ ಬಳಬಳ ಬರಹತ್ತಿತು. ಪರೀಕ್ಷೆಗೆ ಕೂಡಲಿರುವುದರಿಂದ ಮುಖಮುದ್ರೆಯಲ್ಲಿ ಉದ್ವಿಗ್ನತೆ ಸಹ ಗೋಚರಿಸುತ್ತಿದೆ. ರಂಗುರಂಗಿನ ಉಡುಗೆಯುಟ್ಟ ಹುಡುಗಿಯರನ್ನು ಅಂದಿನಿಂದ ನೋಡುತಿದ್ದರೂ ಇಂದೇಕೋ ಅತ್ಯಂತ ಆಕರ್ಷಣೀಯತೆ ಇದೆ........ ಬಹುಶಃ ಕೊನೆಯ ನೋಟವೆಂದಿದ್ದರೂ ಇರಬಹುದು. ಹೂಬಿಸಿಲು ಕಾವೇರತೊಡಗಿತು. ನಸು ದೂರದಲ್ಲಿ ಸಂಪಗೆಯ ಮರದ ತಣ್ಣೆಳಲು ಬಾಬಾರೆಂದು ಕರೆಯುವಷ್ಟು ಹಿತವಾಗಿರುವುದನ್ನು ಗಮನಿಸಿ ಮೂವರೂ ಆ ಕಡೆ ಹೊರಟರು. ಪದಾಘಾತಕ್ಕೆ ಸಿಕ್ಕುವ ದರುಗೆಲೆಗಳ 'ಲರಲರ' ಸದ್ದಿನ ಸಣ್ಣ ಶೃತಿಯಲ್ಲಿ ಎದೆಯ ಸಂತಾಪ ಪಲ್ಲವಿ ಜೋಗುಳ ಹಾಡುತ್ತಿದೆ. ಬಾಲ್ಯದಿಂದ ಕೌಮಾರ್ಯದವರೆಗೆ ಸಂವೃದ್ಧಿಯಾಗಿ ಬೆಳೆಸಿಕೊಂಡು ಬಂದ ಸ್ನೇಹಧಾರೆ ಚರಮಗೀತೆಯನ್ನು ಬಿತ್ತರಿಸುವಾಗ ಮರದ ಮೇಲಿನ ಹಸರು ವರ್ಣದ ಸಣ್ಣ ಪಕ್ಷಿ ತನ್ನ ಇನಿದನಿಯನ್ನು ಹರಿಯ ಬಿಟ್ಟಿತು........ಕಮಲೇಶ್ ಖಿನ್ನಳಾಗಿ ಚಂಪಳ ಕೈಯನ್ನು ಅದುಮಿ ಹಿಡಿದುಕೊಂಡು "ನಮ್ಮಿಬ್ಬರಿಗಿಂತ ನಿನ್ನದೇ

ಹೆಚ್ಚು ಕಷ್ಟ. ಒಬ್ಬಳೇ ಉಳಿದೆನೆಂಬ ಚಿಂತೆ ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಾವು ಎಂದಾದರೂ ಅಗಲಲೇ ಬೇಕಾಗಿತ್ತು ಎಂಬುದನ್ನು ಗಮನಿಸಿದರೆ ನಿನಗೆ ಅಷ್ಟು ವ್ಯಸನವಾಗದು." ಎಂದು ಮುಂತಾಗಿ ನಲ್ಮೆಯಿಂದ ಸಮಾಧಾನ ಪಡಿಸಿದಳಾದರೂ ತನ್ನ ಸುನೀಲ ಲೋಚನಗಳಲ್ಲಿ ಪ್ರೇಮಾಶ್ರುಧಾರೆಯನ್ನು ಪಟಪಟ ಉದುರಿಸುವುದೊಸಹ ಆಗ ಅನಿವಾರ್ಯವಾಯಿತು.

ಇಂಥಹ ದುಃಖಪೂರ್ಣ ಹೃದಯ ಏರಿ ಇಳಿಯುತಿತ್ತು....ಕಮಲೇಶಳಿಗೆ ಅಗಲಿಕೆಯ ನೋವು ಹೃದಯವನ್ನು ಕೊರೆಯುತಿದ್ದರೂ ಮೆಡಿಕಲ್ ಕಾಲೇಜನ್ನು ಏರುವ ಹುರುಪು ಹೆಗಲನ್ನೇರಿ ಮನವನ್ನು ಹೂವಿನಂತೆ ಅರಳಿಸಿದೆ. ಅದೇ ನೇರಕ್ಕೆ ಗೃಹಿಣಿಯಾಗಲಿರುವ ವನಮಾಲಿಗೆ ಗೃಹಿಣೀತ್ವ ತನುಮನಗಳನ್ನು ಸೂಜಿಗಲ್ಲಿನಂತೆ ಸೆರೆಹಿಡಿದಿದೆ....ಆದರೂ ನಿಶ್ಚಲವಾದ ಅನುರಾಗದೃಷ್ಟಿಗೆ ಅಗಲಿಕೆಯ ಶೋಕ ಅನಿವಾರ್ಯ. ಎಳೆತನದ ಮುಗ್ಧತೆ, ಅನಾಯಕ ನಿಲುವು, ಕಲಿಕೆಯಲ್ಲಿನ ಹುರುಪು ಬಾಲಕಿಯರನ್ನು ಉತ್ತುಂಗಕ್ಕೊಯ್ಯಲು ಸಿದ್ಧವಾಗಿದ್ದರೂ....ಶೃಂಖಲಾಬದ್ಧರಾದ ಅಸ್ವತಂತ್ರ ದೇಶೀಯರ ನಿಯಮಿತ ಸ್ಥಿತಿಯಂತಾಗಿದೆ ವಸ್ತುಸ್ಥಿತಿ. ತಥಾಪಿ, ಸಮಸ್ತ ಜೀವರಾಶಿ ಅನಿವಾರ್ಯವಾದ ತಮ್ಮ ಕಷ್ಟಪರಿಸ್ಥಿತಿಯಲ್ಲಿ ಮನೋದೌರ್ಬಲ್ಯವನ್ನು ದುಃಖರೂಪದಲ್ಲಿ ವ್ಯಕ್ತಪಡಿಸುವಂತೆ ಅಂತರಂಗದಲ್ಲಿ ಅಡಗಿರುವ ಸುಂದರ ಮಾರ್ದವ ಭಾವನೆ ದುಸ್ಸಹವಾದ ತಡೆಗಟ್ಟೆಯನ್ನು ಹೊಂದಿದರೂ ಆ ಮುಹೂರ್ತದಲ್ಲಿ ಕಂಬನಿಯ ರೂಪದಲ್ಲಿ ಅಕಳಂಕವಾಗಿ ಹರಿಯಿತು. ಸಂತಾಪ ಭರಿತ ಎಳೆಯ ರಮಣೀವೃಂದ ರುದ್ರಮೌನ ಸಾಮ್ರಾಜ್ಯದಲ್ಲಿ ಮುಳುಗಿದಾಗ ಎದೆಯ ಮಿಡಿತದ ಸಂಜ್ಞೆ–ಸಂಕೇತಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡುವು. ಬಿಟ್ಟಿಯ ನೇರಕ್ಕೆ ಕಾಲೇಜಿನ ಬೃಹತ್ ಕಟ್ಟಡದ ಒಳಾಂತರದಲ್ಲಿ ಪರೀಕ್ಷಾ ಪತ್ರಗಳಿಗೆ ಉತ್ತರ ಬರೆಯುತ್ತಿರುವ ಆ ಸಹಸ್ರ ಸಹಸ್ರ ಹುಡುಗಿಯರ ಹೃನ್ಮಂದಿರಗಳಲ್ಲಿ ಇನ್ನಾವ ಬಗೆಯ ಯುದ್ಧಕಾಂಡವೋ ಎಂಬುದನ್ನು ನಿಗಮಗೋಚರನೊಬ್ಬನೇ ಬಲ್ಲ.

"ಅವ್ವಾ !"

ಆ ಅಮಾಯಕ ಧನಿ ಕಿವಿಯನು ತಾಗುತ್ತಲೂ ಶೋಕಾಕುಲತೆಯಲ್ಲಿ

ಸ್ತಬ್ಧವಾಗಿದ್ದ ಗಮನ ಇತ್ತ ಹರಿಯಿತು. ಕಸವುಡುಗಲು ಅಣಿಯಾಗಿ ಬಂದ ವೃದ್ಧೆ ತಾವು ಸ್ಥಳ ಬಿಟ್ಟುಕೊಡುವುದನ್ನು ಕಾಯುತ್ತಾ ಕೈಯಲ್ಲಿ ಪೊರಕೆ ಬುಟ್ಟಿಗಳನ್ನಾಂತು ನಿಂತಿದ್ದಾಳೆ.

"ಕಸ ಗುಡಿಸಬೇಕೇನಜ್ಜೀ ?"

"ಹೂ, ಕಣ್ರವ್ವಾ !"

ಹುಡುಗಿಯರು ಬಟ್ಟೆ ಕೊಡವಿಕೊಂಡೆದ್ದರು. ವೃದ್ಧೆ ನಡುಬಾಗಿ ಕಸ ಉಡುಗತೊಡಗಿದಳು. ಉಟ್ಟ ಅಗ್ಗದ ಸೀರೆ ಅಸ್ತವ್ಯಸ್ತವಾಗಿ ಅವಳನ್ನು ಬಳಸಿ ಸುತ್ತಿದೆ. ನೀರು ಕಾಣದ ಮೈ, ಎಣ್ಣೆ ಕಾಣದ ಕೂದಲು, ನಕಲಿ ನಗ ನಾಣ್ಯಗಳು, ಪುಷ್ಕಳವಾಗಿ ಉಂಡು ಅದೆಷ್ಟು ಕಾಲವೋ....ಕಸವುಡುಗುವ ಕೈಗಳ ಬಲದ ಮೇಲೆ ದೇಶದ ನಾಗರಿಕತೆ ಮೆರೆದಿದೆ. ಆದರೂ ಅವುಗಳೆಡೆಗೆ ಪರಮ ಲಕ್ಷ್ಯವಿಲ್ಲ. ಸ್ತ್ರೀ ಜೀವನದ ಮುಗ್ಧಮಾಧುರ್ಯ, ಮಾತೃಪದದ ಹಿರಿಮೆ, ಸಹಜ ಶಾಂತ ಸೌಂದರ್ಯ, ಅನುಪಮ ಸೇವಾ ಸೌಜನ್ಯತೆಗಳು ಅಜ್ಞಾನ ಪ್ರೇರಿತವಾದ ಕುಸಂಸ್ಕಾರ ಕುವಿದ್ಯೆಗಳ ಪದಾಘಾತಕ್ಕೆ ಸಿಕ್ಕಿ ನುಚ್ಚು ನೂರಾಗಿವೆ. ಅಂಗನೆಯರ ಜೀರ್ಣಿತ ಜೀವನ ಕರುಣಾಜನಕವಾದರೂ ಹಿಂದೂಸ್ಥಾನದಲ್ಲಿ ಕಾರುಣ್ಯದಾರಿದ್ರ್ಯವೇ ಅವರಿಗೆ ಪರಮಗತಿ.... ಚಿಂತಿಸುತ್ತ ಮುಂದಡಿಯಿಟ್ಟಳು ಕಮಲೇಶ್.

ವೃದ್ಧೆ ಕಸವನ್ನು ಬುಟ್ಟಿಗೆ ತುಂಬಿಕೊಂಡು ಹೊರಟಾಗ ಹುಡುಗಿಯರು ಅವಳ ಕೈಗೆ ಕಾಸನಿಟ್ಟು "ತುಂಬ ಉಪಕಾರವಾಯಿತು ಅಜ್ಜೀ !" ಎಂದರು.

"ನನ್ಕೆಲಸ ನಾನು ಮಾಡಿದೆ ಅಷ್ಟೆ." ಅಜ್ಜಿ ನೀರಸನಗೆ ಬೀರಿದಳು.

....ಶತಮಾನಂ ಭವತಿ.

"ವನಮಾಲ ! ನಿನ್ನ ಭಾವೀಪತಿ ಬಿ.ಇ., ನೋ ? ಎಂ.ಇ., ನೋ ?"

ವನಮಾಲಿ ಒಂದು ಘಳಿಗೆ ತಬ್ಬಿಬ್ಬಾದಳು. ಮನೆಯಲ್ಲಿ ಯಾರೂ ಆ ವಿಚಾರ ಪ್ರಸ್ತಾಪಿಸದಿದ್ದುದರಿಂದ ಅದು ಆಕೆಗೂ ಸಹ ತಿಳಿಯದು. ತಿಳಿದುಕೊಳ್ಳದೇನೇ ಹೆಜ್ಜೆಯನ್ನು ಮುಂದಿಟ್ಟ ಅಚಾತುರ್ಯ ತಲೆಯಲ್ಲಿ ಗೊಂದಲವೆಬ್ಬಿಸಿತು. ಪೆಚ್ಚಾಗಿ ನುಡಿದಳು, "ಅದು ತಿಳಿಯದು ಕಮಲೇಶ್, ಅವರೀಗ ಸರ್ವೇಯರಾಗಿ ಕೆಲಸ ಮಾಡುತ್ತಿದ್ದಾರೆ. ಅಷ್ಟುಮಾತ್ರ ನನಗೆ ಗೊತ್ತು."

"ಅಯ್ಯೋ, ಹೆಡ್ಡೆ !" ಉದ್ಗಾರ ತೆಗೆದಳು ಕಮಲೇಶ್ "ಸರ್ವೇ

ಯರುಗಳಲ್ಲಿ ಡಿಪ್ಲೋಮ ಮಾಡಿದವರೂ ಇರುತ್ತಾರೆಂಬುದು ಗೊತ್ತೋ! ನಿನಗೆ? ಬೇಸ್ತು ಬಿದ್ದೆಯೋ ಹೇಗೆ?"

ವಾಸ್ತವ ಜೀವನದ ಶಿಲಾ ಕಾಠಿಣ್ಯತೆ ಮುಗ್ಧ ಮನಸ್ಸಿನ ಮೇಲೆ ರಪ್ಪನೆ ಅಪ್ಪಳಿಸಿದಾಗ ವನಮಾಲಿ ಮೃಗಶಿಶುವಿನಂತೆ ಮಿಕಿ ಮಿಕಿ ನೋಡಿದಳು.

"ಹೋಗಲಿ ಬಿಡು, ಹಾಗೇನಾದರೂ ಆಗಿದ್ದರೆ ನೀನು ಕಲಾರಾಧನೆ ಮಾಡು. ಹಣ ಕುಳಿತಲ್ಲಿಗೆ ಬರುತ್ತೆ. ನಿನಗಾಗಿ ನಿನ್ನ ಕಲೆಗಾಗಿ ನಾನು ಪ್ರಾರ್ಥಿಸುವೆ" ಎಂದಳು ಕಮಲೇಶ್.

"ನಾನೂ ಸಹ........" ಧ್ವನಿಗೂಡಿಸಿದಳು ಚಂಪಾ.

"ದೈವ ಬಲವಿದ್ದು ಪೂರ್ವಜ ಪುಣ್ಯಫಲವೂ ಇದ್ದರೆ...."

ಅವಳನ್ನು ಮುಂದೆ ಮಾತಾಡಗೊಡದಂತೆ ನಡುವೆ ಬಾಯಿ ಹಾಕಿದಳು ಕಮಲೇಶ್ "ಹಾಗೆನ್ನುತ್ತಲೇ ಶತಶತಮಾನಗಳು ಉರುಳಿದುವು ವನಮಾಲೀ. ಮುಖ್ಯವಾಗಿ ಮನುಷ್ಯನಲ್ಲಿ ಮನುಷ್ಯತ್ವವೂ ಇಲ್ಲ; ಮನುಷ್ಯ ಪ್ರಯತ್ನವೂ ಇಲ್ಲ. ಸ್ವಾರ್ಥದ ಮಹತ್ತು ಮನುಷ್ಯತ್ವವನ್ನು ನಾಶಮಾಡಿದೆ. ಅಪನಂಬಿಕೆ ನಂಬಿಕೆಯನ್ನು ಕೊಲೆಗೈದಿದೆ........ಶತ ಶತ ಶತ ಶತ ಶತಮಾನಗಳಿಂದ ಎಷ್ಟು ಮಂದಿ ಮಹಾನುಭಾವರು ಜನ್ಮಧಾರಣೆ ಮಾಡಲಿಲ್ಲ? ಮಾನವೀಯತೆಗಾಗಿ–ಮನುಷ್ಯನಲ್ಲಿರುವ ಮನುಷ್ಯತ್ವವನ್ನು ಉಳಿಸುವುದಕ್ಕಾಗಿ ತಮ್ಮ ಜೀವನಧಾರೆಯನ್ನೆರೆದು ಎಷ್ಟು ಕಂಠ ಶೋಷಣೆ ಮಾಡಲಿಲ್ಲ? ಸುಧಾರಣೆಯ ಮಾತಿರಲಿ ಸಮಾಜವೇ ರೊಚ್ಚಿಗೆದ್ದು ಸುಧಾರಕರ ಸರ್ವನಾಶಗೈಯಲಿಲ್ಲವೆ? ಏಸು, ಸಾಕ್ರೆಟೀಸ್, ಲಿಂಕನ್, ಗಾಂಧಿ, ಕೆನಡಿಯರ ಗತಿಯೇನಾಯಿತು? ಫ್ರಾನ್ಸಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ಮಹಿಳೆ ಜೋನ್ ಆಫ್ ಆರ್ಕಳನ್ನು ಕಂಬಕ್ಕೆ ಕಟ್ಟಿ ಬೆಂಕಿ ಹಚ್ಚಲಿಲ್ಲವೇ? ಜಗತ್ತು ಯುಗಪುರುಷರನ್ನೂ ಸಹ ಅರ್ಥಮಾಡಿಕೊಳ್ಳಲಾರದೆ ಹೋಗಿದೆ. ಇರಲಿ, ಅವರೆತ್ತರಕ್ಕೆ ಏರಲು ನಮಗೆ ರೆಕ್ಕೆಗಳಂತೂ ಇಲ್ಲ, ನಿಜ; ಅವರ ವಿಚಾರಧಾರೆಯನ್ನು ಕೇಳಿಸಿಕೊಳ್ಳಲಾರದಷ್ಟು ಕಿವಿ ಕಿವುಡೇನೂ ಅಲ್ಲವಲ್ಲಾ? ನಮ್ಮ ಆತ್ಮೋನ್ನತಿಯಾಗದಿದ್ದರೆ ಹೋಗಲಿ, 'ಅವರಿರಲಿ ಅವರಿ ಗಾಗಿ' ಎಂಬಷ್ಟು ಮಾನವೀಯತೆಯೂ ಬೇಡವೇ?

"ಇದುವರೆಗಿನ ಇತಿಹಾಸವನ್ನು ಒರೆಗೆ ಹಚ್ಚಿನೋಡಿದರೆ ಯಾವ

ಮಹಾತ್ಮನಿಗೂ ಮನುಷ್ಯನಿಗೆ ಮನುಷ್ಯತ್ವವನ್ನು ಕಲಿಸಲು ಸಾಧ್ಯವಾಗಿಲ್ಲ. ಆಡಳಿತ ದರ್ಪದಿಂದಲೇ ಆಗಲಿ, ಕಾನೂನಿನ ಭದ್ರಮುಷ್ಟಿಯಿಂದಲೇ ಆಗಲಿ, ಕ್ರಾಂತಿಯಿಂದಲೇ ಆಗಲಿ, ವಿದ್ಯಾಭ್ಯಾಸದಿಂದಲೇ ಆಗಲಿ ಇದುವರೆವಿಗೆ ಮನುಷ್ಯ ಮನುಷ್ಯನಾಗಿ ಉಳಿಯಲಿಲ್ಲ. ಬಾಳು ನಿರ್ಮಲವಾಗಲಿಲ್ಲ. ಅಂದ ಮೇಲೆ....?"

"ಹೋಗಲಿ ಬಿಡು ಕಮಲೇಶ್ ! ಈ ಕಾಲದಲ್ಲಿ ಜೀವನವನ್ನು ಕೊನೆಗಾಣಿಸಲಿಕ್ಕೆ ಸುಲಭ ಸಾಧನಗಳಿವೆ! ಸುಖವಾಗಿದ್ದರೆ ನಕ್ಕು ನಲಿಯೋಣ. ಇಲ್ಲವಾದರೆ ಸತ್ತು ಸ್ವರ್ಗವೇರೋಣ ?"

"ಹಾ ! ಹಾಗಾಗಬಾರದು !"

"ಬದುಕು ಸಾರ್ಥಕವಾಗದ ಮೇಲೆ....ಬದುಕಿ ಫಲವೇನು ? ನೀನೇ ಯೋಚಿಸಿ ನೋಡು ಕಮಲೇಶ್ !"

ತಲೆಯಾಡಿಸುತ್ತ ಧೀರಗಂಭೀರಳಾಗಿ ನುಡಿದಳು ವಿಚಾರಶೀಲೆ-"ಏನೆ ಬರಲಿ, ಧೃತಿಗೆಡದೆ ಸಾಧಿಸುವುದೇ ಗುರಿಯತ್ತ ಸಾಗುವಿಕೆ. ಸಾಧನೆ ಬಿಡದಿದ್ದರೆ ಸೋತರೂ ಗೆದ್ದಂತೆ. ಹಾಗೆಂದು ಪ್ರಮಾಣ ತೊಡು....ಅದುವೇ ಜೀವನ"

"ಸರಿ, ಇಂದಿನ ಸ್ಮರಣಾರ್ಥವಾಗಿ ಮೂವರೂ ಪ್ರಮಾಣ ವಚನ ತೊಡೋಣ."

ಅನಂತರ ಮೂವರೂ....ಏನೇ ಬಂದರೂ ಸೆಣಸಿ ಹೋರಾಡಿ ಗುರಿ ಮುಟ್ಟುವುದಾಗಿ....ಪ್ರಮಾಣ ವಚನ ಕೈಕೊಂಡರು. ಉತ್ಸಾಹ ಭರಿತ ಹೃದಯ ತುಸು ಹಗುರವಾದಂತಾಯಿತು.

ಭೂಮ್ಯಾಕಾಶಗಳು ಸಾಕ್ಷಿಯಾದುವು.

ಪ್ರಮಾಣವಚನ ಮನೋದಾರ್ಢ್ಯತೆಗೆ ಪುಷ್ಟಿ ನೀಡಿತು.

ಮೂವರೂ ಕ್ಯಾಂಟೀನಿನ ಕಡೆ ಹೊರಟರು. ಕೈ ಕೈ ತೆಕ್ಕೆ ಹಾಕಿ.

"ನೀವಿಬ್ಬರೂ ಈಗಾಗಲೇ ವಿಜಯ ಪತಾಕೆ ಹಾರಿಸಿದ್ದೀರಿ. ಮುಂದೇ ಸಿದ್ದರೂ ಕಲೆಯನ್ನು ಉಳಿಸಿಕೊಂಡು ಬರುವುದಷ್ಟೇ....ನಾನಿನ್ನೂ ಐದಾರು ವರ್ಷ ಓದಿ ಡಾಕ್ಟರಾಗಬೇಕಲ್ಲ ?"

"ಆಗಲಿ ...ಒಮ್ಮೆ ಡಾಕ್ಟರಾದರೆ ಮುಗಿಯಿತು. ಅಡ್ಡಿ ಆತಂಕಗಳ

ಹೆಸರೇ ಇಲ್ಲ. ದಾರಿ ನಿರಾಳ.... ”

“ ಕನಸಿನ ಗಂಟು !”

“ ಏನಿಲ್ಲ ...ಉದ್ದಕ್ಕೂ ಪ್ರಥಮ ಶ್ರೇಣಿಯಲ್ಲಿ ನಿಲ್ಲುವ ಹುಡುಗಿ. ಮೆಡಿಕಲ್ ಕೋರ್ಸನ್ನು ನೀರು ಕುಡಿದಷ್ಟು ಸರಾಗವಾಗಿ ಜೀರ್ಣಿಸಿಕೊಳ್ಳುತ್ತಿ ನನಗೊತ್ತು.”

“ ಬುದ್ಧಿಯೊಂದಿದ್ದರೆ ಸಾಲದು, ಹಣದಹೊಳೆಯೂ ಹರಿಯಬೇಕು!”

“ ಅಪ್ಪ ಲಾಯರು....ಗಳಿಸುವ ಅಣ್ಣಂದಿರು. ಇನ್ನೂ ಸಾಲದೆ ?”

ಹಾದಿ ಕಳೆದು ಕ್ಯಾಂಟೀನ್ ಮೆಟ್ಟಿಲು ಹತ್ತಿದರು. ಸುಡು ಬಿಸಿಲಾದದರಿಂದ ತಣ್ಣನೆಯ ಪಾನೀಯ ಸಾಕಾಗಿತ್ತು. ಅತಿಥೇಯಳಾದ ಚಂಪಾ ಹಣ ನೀಡಿದಳು. ಮೂವರೂ ಶುಭ ಹಾರೈಸಿ ಸ್ವಸ್ಥಿಪಾನ ಮಾಡುವಾಗ ಅಗಲಿಕೆಯ ನೆನಪು ಮೂಡಿ ನಸುಗೆಂಪು ತಳೆದರು. ಕಣ್ಣುಗಳಂಚಿನಲ್ಲಿ ಬೆಳ್ಳಿಯ ಗೆರೆಯಂತೆ ನೀರಾಡಿತು. ಪಾನೀಯವನ್ನು ಹೀರಿ ಸೀಸೆಗಳನಿಟ್ಟು ಹಿಂದಿರುಗುವಾಗ ಹೃದಯ ಭಾರವಾಗಿದ್ದರೂ ಅಲ್ಲಿಂದ ಗೇಟಿನವರೆಗೂ ಪರಸ್ಪರ ಹಿತವಚನಗಳ ವಿನಿಮಯ ನಡೆಯಿತು.

ಅನಂತರ,

ಎಂದಾದರೂ ಕವಲೊಡೆಯ ಬೇಕಿದ್ದ ಸುಂದರ ಸುರಮ್ಯ ಹಾದಿ ಅಂದೇ ಕವಲೊಡೆಯಿತು....ಹುಡುಗಿಯರು ಮತ್ತೆ ಹನಿಗಣ್ಣಾಗುವಂತೆ.

ಅಧ್ಯಾಯ

೧

ಸುರೇಶ ದಲ್ಡಾಲಿ ನಿಪುಣ ಲಾಯರಾದರೂ ಹಣವಂತನಲ್ಲ ಎಂದು ಹೇಳಬಹುದು. ಅವನ ಭಾಗಕ್ಕೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ವಿದ್ಯೆ. ಕೈಹಿಡಿದ ಸತೀಮಣಿ ಬರುವಾಗಲೇ ಭಾಗ್ಯತಂದ ಹೆಣ್ಣು. ಅವಳ ಹಣದಿಂದ ಹಳೆಯ ಮನೆಯೊಂದನ್ನು ಕೊಂಡು ದುರಸ್ತಿ ಮಾಡಿಸಿ ವಾಸಕ್ಕೆ ಅನುಕೂಲ ಮಾಡಿಕೊಂಡಿದ್ದ. ತನ್ನ ಹಣವೆಲ್ಲವನ್ನು ಸುರಿದರೂ ಆ ಮನೆಯಾದರೂ ನನ್ನ ಹೆಸರಿಗಿರಲಿ ಎಂದು ಅವಳು ಕೇಳಲಿಲ್ಲ. ಇವನು ಮಾಡುವ ಗೋಜಿಗೆ ಹೋಗಲಿಲ್ಲ. ಮೂರು ಹೆಣ್ಣು ಎರಡು ಗಂಡುಮಕ್ಕಳಿಗೆ ಜನ್ಮವಿತ್ತ ಸುರೇಶ ದಲ್ಡಾಲಿ ಸ್ವರ್ಣಮಾಲಿನಿಯರ ಸಂಸಾರ ಅಚ್ಚುಕಟ್ಟಾಗಿತ್ತು. ಹಿರಿಯ ಮಗಳು ಚಂದ್ರಮುಖಿ ಆಸ್ತಿವಂತ ಲಾಯರನ್ನು ಕೈಹಿಡಿದು ಮೈಸೂರಿನಲ್ಲಿ ಸುಖವಾಗಿದ್ದಾಳೆ. ಎರಡನೆಯವಳಾದ ಸತ್ಯಭಾಮ ಸೇರಿದ್ದು ಮುಂಬೈ. ಆಡಿಟರಾದ ಅವಳ ಗಂಡನಿಗೆ ಹೆಚ್ಚಿನ ಆದಾಯವಿರಲಿಲ್ಲವಾದುದರಿಂದ ಜೀವನ ಸುಖದಾಯಕವಾಗಿರಲಿಲ್ಲ ಎಂದು ಹೇಳಬಹುದು. ಅನಂತರ ಇಬ್ಬರು ಗಂಡುಮಕ್ಕಳು. ಹಿರಿಯವನಾದ ಮುರಳೀಧರ ದಲ್ಡಾಲಿ ಜೀಗ್ಗೆ ಲಾ ಕಾಲೇಜಿನಲ್ಲಿ ಓದುತ್ತಿದ್ದು ಹಗಲು ಕೆಲಸ ಹಿಡಿದಿದ್ದ. ಶ್ರೀಧರ ದಲ್ಡಾಲಿ ಹಗಲು ಕೆಲಸ ಮಾಡಿ ರಾತ್ರಿಯ ಕಾಲೇಜಿನಲ್ಲಿ ಓದುತ್ತಿದ್ದ. ಅವರಿಬ್ಬರೂ ತಮ್ಮ ಖರ್ಚನ್ನು ತಾವೇ ನಿರ್ವಹಿಸುತ್ತಿದ್ದುದರಿಂದ ಸುರೇಶ ದಲ್ಡಾಲಿ ಅರ್ಧ ಶ್ರಮ ದಿಂದ ವಿಮುಕ್ತನಾಗಿದ್ದ. ಇನ್ನುಳಿದವಳು ಕಮಲೇಶ್ ಒಬ್ಬಳೇ. ಅವಳನ್ನು ಯಾರಾದರೊಬ್ಬ ಧೀಮಂತ ತರುಣನಿಗೆ ಧಾರೆಯೆರೆದರೆ ನನ್ನ ಜವಾಬ್ದಾರಿ ಮುಗಿಯಿತು ಎಂಬಷ್ಟು ಆತುರ ಸುರೇಶ ದಲ್ಡಾಲಿಗೆ. ಅಂತಲೇ ಮದುವೆ ಗೆಂದು ಒಂದೊಂದು ಚಿಕ್ಕಾಸುಗಳನ್ನೂ ಕಲೆಹಾಕುತ್ತಿದ್ದ....ಆದರೆ ಕಮಲೇ ಶಳ ರೀತಿಯೇ ಬೇರೆ. ಮೆಡಿಕಲ್ ಕೋರ್ಸ್ ಓದುವ ಆಸೆಯನ್ನು ತಂದೆಗೆ ತಿಳಿಸಿ ಕಾಡಿ ಬೇಡಿಯಾಗಿದೆ. 'ನೋಡೋಣ' ಎಂದಷ್ಟು ಮಾತ್ರ ಆಶ್ವಾಸನೆ ದೊರಕಿದ್ದರೂ ಅದರಲ್ಲೇ ಓತ. ಅಪ್ಪ ಒಪ್ಪದಿದ್ದರೆ ಸತ್ಯಾಗ್ರಹ ಹೂಡಿ

ಯಾದರೂ ಗೆಲ್ಲುವೆ ಎಂಬಷ್ಟು ಹುಮ್ಮಸ್ಸು; ಅನುಪಮ ಆಕಾಂಕ್ಷೆ... ಅಣ್ಣಂದಿರಿಗಾಗಲೀ ಹಿರಿಯಕ್ಕನಾದ ಚಂದ್ರಮುಖಿಗಾಗಲೀ ಅಷ್ಟೊಂದು ಇಷ್ಟವಿಲ್ಲ. ಸ್ವರ್ಣಮಾಲಿನಿ ವಿರೋಧಿಸದಿದ್ದರೂ ಪೂರ್ಣ ಒತ್ತಾಸೆ ನೀಡು ತ್ತಿಲ್ಲ. ಸತ್ಯಭಾಮೆ ಮಟ್ಟಿಗೆ ನೀನು ಡಾಕ್ಟರಾಗು ಎಂದು ಅಂದಿನಿಂದ ಹೇಳುತ್ತಾ ಬಂದಿದ್ದಾಳೆ. ಅವಳ ಪೂರ್ಣ ಒತ್ತಾಸೆ ಇಲ್ಲದಿದ್ದರೆ ಬಹುಶಃ ಕಮ ಲೇಶ್ ಮನಸ್ಸು ಮಾಡುತ್ತಿದ್ದಳೋ ಇಲ್ಲವೋ ಅದೂ ಸಹ ಅನುಮಾನ....

ಕಮಲೇಶ್ ಕಾಲೇಜಿನಿಂದ ಹಿಂದಿರುಗಿ ಬಂದಾಗ ಮೇಜಿನ ಮೇಲೆ ಆವಳಿಗಾಗಿ ಚಂದ್ರಮುಖಿಯ ಕಾಗದ ಕಾದಿತ್ತು. ನೋಡಿದೊಡನೆಯೇ ಸಂತಸದಿಂದ ಕೈ ಹಚ್ಚಿದಳು.

....ಡಾಕ್ಟರಾಗಲೇಬೇಕೆಂಬ ನಿನ್ನ ದೃಢ ನಿಶ್ಚಯ ಮೆಚ್ಚುವಂತಾದ್ದು. ಆದರೂ, ಯಾವುದೇ ನಿರ್ಧಾರವನ್ನು ಕೈಕೊಳ್ಳುವ ಮುನ್ನ ಬಹಳವಾಗಿ ಯೋಚಿಸಬೇಕು ಕಮಲೇಶ್. ಒಂದುವೇಳೆ ಹೆಜ್ಜೆ ಮುಂದಿಟ್ಟು ಹಿಂದೆ ಬೀಳು ವಂತಾದರೆ ಅದೂ ಅಭಾಸ. ಒಂದಲ್ಲ ಹತ್ತು ಬಾರಿ ಯೋಚಿಸಿ ನೋಡು. ಮೆಡಿಕಲ್ ಕೋರ್ಸ್ ಎಂದರೆ ಸಾಮಾನ್ಯವೇ? ಹಣದ ಪೂರೈಕೆ ಹೇಗೆ? ಓದಿಗೂ ಖರ್ಚು ಮಾಡಿ ಮದುವೆಗೂ ಖರ್ಚು ಮಾಡುವುದೆಂದರೆ ಅಪ್ಪನ ಸ್ಥಿತಿ ಹೇಗಿರಬೇಡ? ಅವರ ಇಳಿ ವಯಸ್ಸಿನಲ್ಲಿ ನೀನೊಂದು ಹೊರೆಯಾಗ ಬಾರದು. ಸಾವಧಾನದಿಂದ ಯೋಚಿಸು. ಒಂದೆರಡು ವರ್ಷ ಓದಿ ಕೈಬಿಟ್ಟು ಮದುವೆಯಾಗುವುದೆಂದರೆ ಅದೂ ಸಹ ನಷ್ಟ. ಭಗವದನುಗ್ರಹದಿಂದ ನಿನಗೆ ಒಳ್ಳೆಯ ಜೊತೆಗಾರ ಸಿಕ್ಕಿದರೆ ಮದುವೆಯಾಗಿ ಗೃಹಿಣಿಯಾಗು. ಅದರಲ್ಲಿ ಭಗವಂತನ ಆಶೀರ್ವಾದವಿದೆ. ಹಿರಿಯರ ಆಶೀರ್ವಾದವಿದೆ. ಆತ್ಮಸಂತೋ ಷವಿದೆ....

ಓದಿದ ಕಾಗದವನ್ನು ಹಾಗೇ ಇಟ್ಟು ಹಾಸಿಗೆಯಮೇಲೆ ತುಸು ವಿಶ್ರಾಂತಿಗಾಗಿ ಅಡ್ಡಾದಳು, ಪ್ರಖರವಾದ ಸುಡು ಬಿಸಿಲು ಒಂದೇಸಮನೆ ಬೇಯುತ್ತಿದ್ದುದರಿಂದ ಮುಖದ ಮೇಲೆ ಬೆವರಿನ ಕಣಗಳು ಒರಿಸಿಕೊಂಡಷ್ಟೂ ತುಂತುರು ತುಂತುರಾಗಿ ಮೂಡುತಿದ್ದುವು.

ಇಂದೂ,

ಈ ಅತೀತಯುಗದ ನವ್ಯ ನಾಗರೀಕತೆಯ ದುರ್ದಿನಗಳಲ್ಲೂ ಸ್ತ್ರೀಶಕ್ತಿಗಿರುವ ಪ್ರೋತ್ಸಾಹದಾರಿದ್ರ್ಯವನ್ನು ಗಮನಿಸಿದರೆ.... ಈ ರಾಗಮಯ ಜೀವನದಲ್ಲಿ ಇರುವ ಹುರುಳಾದರೂ ಏನು? ಅದೇ ಸ್ವಾರ್ಥಮಯವಾದ ಮೂಲ ಪಥದಲ್ಲಿ ಸಾಗುವ ಜೀವನ ಯಾತ್ರಿಯು ರಾಗಾನುರಾಗಗಳ ವ್ಯಾಮೋಹದಿಂದ ಸ್ತ್ರೀ ಜೀವನದ ಪರಮೋದ್ದೇಶವನ್ನು ನಿರ್ಲಕ್ಷಿಸಿ ದ್ರೋಹ ಬಗೆದಿದ್ದಾಗಿದೆ. ವೈಯ್ಯಕ್ತಿಕ, ಆರ್ಥಿಕ, ಬೌದ್ಧಿಕ, ದಾರ್ಶನಿಕ ಮೌಲ್ಯಗಳನ್ನು ಬಲಿಗಿಟ್ಟು ಈ ತ್ಯಾಗಮಯ ಜೀವನದಲ್ಲಿ ಆಕೆ ಸಾಧಿಸಿದುದಾದರೂ ಏನು?.... ಇದಕ್ಕೆ 'ಪ್ರಾಣಾರ್ಪಣೆ.' ಎನ್ನುವುದೇ?.... ಅಥವಾ ಸ್ತ್ರೀಜೀವನದ 'ಪರಮ ಸಿದ್ಧಿ' ಎಂದು ಹೆಸರಿಸಬಹುದೇ? ಎಂಬುದೂ ಸಹ ತರ್ಕ ಬದ್ಧ. ಒಂದುವೇಳೆ ಈ ಅಸಹನೀಯ ಕರ್ಮಕಾಂಡದಿಂದ ಆಕೆಯ ಎದೆಯಲ್ಲಿ ಸ್ವಾತಂತ್ರ್ಯ ಕಿರಣ ಮೂಡಿತೆಂದರೆ ಸಾಕು, ಆ ಮುಹೂರ್ತದಲ್ಲೇ ದ್ವೇಷಭಾವನೆ ಮೂಡಿ ಸತ್ಸಂಪ್ರದಾಯ ಅಡವಿಪಾಲಾಯಿತೆಂಬ ಬೊಬ್ಬೆ ಏಳುತ್ತದೆ. ಈ ಭಾರತ ಸಾಮ್ರಾಜ್ಯದ ಮನುಷ್ಯನ ನಿಷ್ಠುರ ನ್ಯಾಯಸ್ಥಾನದಲ್ಲಿ ಅನಾದಿಯಿಂದ ನಡೆಯುತ್ತಿರುವ ಅನಾಚಾರಕ್ಕೆ ಕೀಳುಮನೋಧರ್ಮದ ಪರಮಾಧಿಕ್ಯಕ್ಕೆ ಮುಕ್ತಿಯೂ ಇಲ್ಲ; ನಿಷ್ಕೃತಿಯೂ ಇಲ್ಲ.... ಚಿಂತಿಸುತ್ತಾ ನಿಡುಸುಯ್ದಳು ಕಮಲೇಶ್.

ಹೊತ್ತು ನಾಲ್ಕರ ಅಂಚನ್ನು ದಾಟಿದುದರಿಂದ ಬಿಸಿಲ ಝಳ ಕಡಿಮೆಯಾಗುತ್ತಿದೆ. ಮಾರು ಕಟ್ಟೆಗೆ ಹೋದ ಸ್ವರ್ಣಮಾಲಿನಿ ಇನ್ನೂ ಹಿಂದಿರುಗಿರಲಿಲ್ಲ. ಮಾಡಿನ ನೇರಕ್ಕೆ ದಿಟ್ಟಿಯನ್ನಿಟ್ಟು ಜನ ಜೀವನದ ರೀತಿನೀತಿಗಳನ್ನು ಮೆಲುಕು ಹಾಕ ತೊಡಗಿದಳು. ಗಿಡಮರಗಳ ಮೇಲೆ ಸರಿದು ಬಂದ ತಂಗಾಳಿ ತಣ್ಣನೆಯ ತಂಪನ್ನು ತಂದು ಒಳಗಡೆ ಸಿಂಪಡಿಸಿದಾಗ ಕೊಠಡಿಯಲ್ಲಿ ತಂಪಿನ ಕಂಪು ತುಂಬಿ ಹರಡಿ ಹಾಯೆನಿಸಿತು.

ಸ್ವಲ್ಪ ಹೊತ್ತಿನೊಳಗಾಗಿ ತಲೆಬಾಗಿಲ ಕರೆಗಂಟೆ ಕಿರ್ರನೆ ಸದ್ದುಗೈದು ಕರೆ ನೀಡಿತು. ಕಮಲೇಶ್ ಸರ್ರನೆ ಹೋಗಿ ಕದ ತೆರೆದಳು. ಸುರೇಶ ದಲ್ಲಾಲಿ ಮಹಾಶಯ ಮುಖದ ಮೇಲಿನ ಬೆವರಿನ ತುಂತುರುಗಳನ್ನು ಕರವಸ್ತ್ರದಿಂದ ತೀಡಿಕೊಳ್ಳುತ್ತಾ ಒಳ ಬಂದರು. ಜೊತೆಗೆ ಮೂವರು ಕಕ್ಷಿಗಾರರಿದ್ದರು. ಸುರೇಶ ದಲ್ಲಾಲಿ ತೊಟ್ಟ ಕರಿಯ ಕೋಟು ಜರಿಯ ಪೇಟಗಳನ್ನು ಕಳಚಿ

ಮೈಭಾರವನ್ನು ಕಳೆದು, ಆರಾಮು ಕುರ್ಚಿಯ ಮೇಲೆ ಮೈ ಚೆಲ್ಲಿದಾಗ ತನು ಮನಗಳ ಸೋಲು ಮುಖಮುದ್ರೆಯಲ್ಲಿ ಪ್ರಕಟವಾಗಿತ್ತು. ಕಳಚಿದ ಕೋಟನ್ನು ಮಡಿಸುತ್ತ ಕಮಲೇಶ್–"ಮುಖ ತೊಳೆಯಿರಿ ಅಪ್ಪಾಜಿ, ಚಹ ತರುವೆ."

"ಮಾಲಿನಿ ಇಲ್ಲವೇನಮ್ಮಾ?"

"ಮಾರುಕಟ್ಟೆಗೆ ಹೋದವರಿನ್ನೂ ಬಂದಿಲ್ಲ."

"ಹೊರಗಡೆ ಮೂವರಿದ್ದಾರೆ ಅವರಿಗೂ ಚಹ ತಾ, ಮಗೂ."

ಸುರೇಶ ದಲ್ಲಾಲಿ ಏಳಲಿಲ್ಲ. ಹಲವಾರು ಮೊಕದ್ದಮೆಗಳ ವಿಚಾರ ಸಂಘರ್ಷಣೆಯಲ್ಲಿ ಮನಸ್ಸು ಕಲಸು ಮೇಲೋಗರವಾಗಿತ್ತು. ಎದೆಯಮೇಲೆ ಎರಡೂ ಕೈಗಳನ್ನು ಕಟ್ಟಿಕೊಂಡು ವಿಚಾರಮಗ್ನರಾದರು. ಮೊಕದ್ದಮೆಗಳ ವಿದ್ಯಮಾನವನ್ನೂ ಅನಂತರ ಅವು ತಳೆದ ರೂಪುರೇಷೆಗಳನ್ನೂ ಮೆಲ್ಲತೊಡಗಿತು ಮನಸ್ಸು. ಕಮಲೇಶ್ ಕೋಟು ಪೇಟಗಳನ್ನು ಎತ್ತಿಟ್ಟು ಒಳಹೋಗಿ ಸ್ಟವ್ ಮೇಲೆ ಚಹಕ್ಕೆ ನೀರಿಟ್ಟು ದೈನಿಕವೊಂದನ್ನು ತೆಗೆದುಕೊಂಡಳು. ಮೊಟ್ಟಮೊದಲಿಗೆ ವಾಚಕರ ವಾಣಿಯಲ್ಲಿ ಕಣ್ಣಿಗೆ ಬಿದ್ದ ಶಿರೋನಾಮೆ ಕಣ್ಮನಗಳನ್ನು ಸೆಳೆಯಿತು. ಹಳ್ಳಿಯ ಆಸ್ಪತ್ರೆಯೊಂದರಲ್ಲಿ ಹಲವಾರು ವರ್ಷಗಳಿಂದ ಲೇಡಿ ಡಾಕ್ಟರಿಲ್ಲದೆ ಗರ್ಭಿಣಿ ಸ್ತ್ರೀಯರ ಕಷ್ಟಕಾರ್ಪಣ್ಯಗಳನ್ನು ಕರುಳು ಹಿಂಡುವಂತೆ ಬಣ್ಣಿಸಲಾಗಿತ್ತು. ಸುದ್ದಿಯನ್ನು ಓದಿ ಮನಸ್ಸು ಮಂಜಿನಂತೆ ಕರಗಿತು. ಕಮಲೇಶ್ ಚಹ ತಯಾರಿಸಿ ಬೀರುವಿನಲ್ಲಿದ್ದ ಸಿಹಿಕಾರಗಳೊಡನೆ ಒಯ್ದು ಕೊಡುವ ಕಾರ್ಯಾಚರಣೆಯಲ್ಲಿ ತೊಡಗಿದರೂ ಅಂತರಂಗಿಕವಾಗಿ ನಡೆಸಿದ್ದು ಪತ್ರಿಕಾ ವರದಿಯ ವಿಚಾರಮಂಥನ. ಅಂತಹ ಒಂದು ಕೊರತೆಯನ್ನು ತನ್ನಿಂದ ಕಿಂಚಿತ್ ತುಂಬಲ್ಪಡುವುದಾದರೆ ಈ ಜನ್ಮ ಸಾರ್ಥಕ ಎಂಬ ತರ್ಕಬದ್ಧವಾದ ಆಸೆ–ಆಕಾಂಕ್ಷೆಗಳು ಮನಃಪ್ರಾಣಗಳನ್ನು ಮಂತ್ರಮುಗ್ಧಗೊಳಿಸಿ ಹೆಡೆಮುರಿಗಟ್ಟಿದುವು.

ಸಮಸ್ಯೆ ಇಂದ ತಪಸ್ಯೆಗೆ ಸಿದ್ಧವಾಯಿತು ಉತ್ಸುಕ ಚಿತ್ತ.

ಅಂದಿನ ಸತ್ಯಭಾಮಳ ಪತ್ರದಲ್ಲಿ ಹರಿದ ವಿಚಾರಧಾರೆ,

........ಏನೇ ಬರಲಿ, ನಿನ್ನ ದೃಢ ನಿರ್ಧಾರವನ್ನು ಕೈಬಿಡಬೇಡ. ನಾನಂತೂ ಕಲಿಯದೆ ಕಷ್ಟಕಾರ್ಪಣ್ಯಗಳ ಬೀಡಿನಲ್ಲಿ ತೊಳಲಾಡುವಂತಾದೆ. ಮನೆಯಲ್ಲಿ ನಾವು ಎಷ್ಟೇ ದುಡಿದರೂ ನಮ್ಮ ದುಡಿಮೆಗೆ ಬೆಲೆ ಏನುಂಟು ? ಹೊರಗಡೆ ದುಡಿದು ನಾವೂ ನಾಲ್ಕು ಕಾಸು ಗಳಿಸಿಕೊಳ್ಳುವಂತಿದ್ದರೆ ಅದರ

ರೀತಿಯೇ ಬೇರೆಯಾಗಿರುತಿತ್ತು. "ಕಾಸಿದ್ದರೆ ಕೈಲಾಸ" ಎಂದು ಯಾವ ತೀರ್ಥರೂಪ ಮಹಾಶಯರು ನುಡಿ ಮುತ್ತನ್ನು ಚೆಲ್ಲಿದರೋ ಅವರ ಅನುಭವ ನಿಜವಾಗಿಯೂ ಅಪಾರ.

ಸಾಕ್ಷಾತ್,

ಭಾರತ ರಮಣಿಯ ಶ್ರೀಹೃದಯದಲ್ಲಿ ಆತ್ಮಪ್ರದೀಪವನ್ನು ಸರ್ವಸಹಸಾ ಬೆಳಗಿಸದ ಹೊರತು ಭಾರತ ಜನನಿ ಎಚ್ಚತ್ತುಕೊಳ್ಳಳು. ಆ ದಿವ್ಯಾನುಭೂತಿಗೆ ಅಗತ್ಯವಾದ ಶಿಕ್ಷಣವನ್ನೀಡದೆ ಹೆಂಗಳೆಯರನ್ನು ಆಲೋಚನಾರಹಿತರನ್ನಾಗಿ ಜಡಮತಿಗಳನ್ನಾಗಿ ಮಾಡಿ ದಾಸ್ಯ ಜೀವನವಲ್ಲಿಟ್ಟಿರುವುದು ಖಂಡಿತವಾಗಿಯೂ ಅಧರ್ಮ. ಯೋಚಿಸಿ ನೋಡು ಕಮುಲೇಶ್ ! ಒಂದಲ್ಲ, ಹತ್ತಲ್ಲ, ನೂರು ಬಾರಿ ಯೋಚಿಸಿ ನೋಡು........

ಕಾಗದವನ್ನು ಓದಿದನಂತರ ಎದೆಯಾಳದಿಂದ ನೀಳವಾದ ನಿಟ್ಟುಸಿರೊಂದು ಹೊರಹೊಮ್ಮಿತು........ಭಾವ ಶ್ರೀಪತಿ ದಯಾರಹಿತ ವ್ಯಕ್ತಿ. ಮುಂಬೈ ಜೀವನವಲ್ಲಿ ಕ್ಲಬ್ಬಿನ ಹವ್ಯಾಸವನ್ನು ಹಚ್ಚಿಕೊಂಡನ. ಆತನಿಂದ ನಿಜವಾಗಿಯೂ ಸತ್ಯಭಾಮ ಸುಖಿಯಾಗಿಲ್ಲ. ಪಾಪ, ಅವಳ ಜೀವನ ಇನ್ನೆಷ್ಟು ಗೋಳಿನಿಂದ ಕೂಡಿದೆಯೋ........

"ಕಮುಲೇಶ್ !"

ತಂದೆಯ ದನಿ ಕರ್ಣಪಟಲಗಳ ಮೇಲೆ ಪ್ರತಿಧ್ವನಿಸಿತು. ಓಗೊಡುವುದರೊಳಗಾಗಿ ಪುನಃ ಅದೇ ದನಿ ಮೊಳಗಿತು........ಕಮುಲೇಶ್ !

ಕಮುಲೇಶ್ ಕಾಗದವನ್ನು ಅಲ್ಲಿಯೇ ಬಿಟ್ಟು ಅತ್ತ ಓಡಿದಳು. ಸುರೇಶದಲ್ಲಾಲಿ ಪಲ್ಲಂಕದಮೇಲೆ ಅಡ್ಡಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಮೇಜಿನ ಮೇಲೆ ಮೊಕದ್ದಮೆಯ ಬೊಂತೆಗಳು ಅಸ್ತವ್ಯಸ್ತವಾಗಿ ಹರಡಿವೆ. ಇನ್ನೊಂದೆಡೆ ಟಪ್ಪಾಲೂ, ಲಾ ಪುಸ್ತಕಗಳೂ ವಿಕೃತ ಮೇಳನಡೆಸಿವೆ. ಮಧ್ಯೆ ದೈನಿಕ ಸಾಪ್ತಾಹಿಕ ಮಾಸಿಕಗಳೂ ಸುಖಾಸೀನವಾಗಿವೆ. ಅವನ್ನು ನೋಡಿದೊಡನೆಯೇ ಎಲ್ಲವನ್ನೂ ವಿಂಗಡಿಸಿ ಜೋಡಿಸಲು ಕೈ ಹಚ್ಚಿದಳು ಕಮುಲೇಶ್. ಕಿಷ್ಕಿಂದಾಪುರಿಯಾದ ಆಫೀಸನ್ನು ಶುದ್ಧಗೊಳಿಸುವುದು ಅಷ್ಟೇನೂ ಸುಲಭದ ಮಾತಲ್ಲ. ಅದರ ಸ್ಥಿತಿಗತಿಯನ್ನು ಗಮನಿಸಿದಾಗಲೆಲ್ಲಾ "ನೀವು ಹೊರಗಡೆ ಆಫೀಸು ತೆರೆಯುವುದು ಲೇಸು" ಎಂದು ಸ್ವರ್ಣಮಾಲಿನಿ ಅನೇಕ ಬಾರಿ

ಅಂದುದುಂಟು. ಆದರೆ ಅದಾವುದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ ಸುರೇಶ ದಲ್ಡಾಲಿ.

"ಮುರಳಿ ಲಾ ಕಲಿತರೂ ದಕ್ಷತೆ ಸಾಲದು. ಮುಂದೆ ಹೇಗೋ...." ಎಂದರು ತಂದೆ. ಯಾವುದೋ ಕರಾವಳಿಯಲ್ಲಿ ಓಡುತಿತ್ತು ಅವರ ಮನಸ್ಸು. ಕಮಲೇಶ್ ಮಾತನಾಡದೆ ನಕ್ಕಳು.

"ಮುಖ್ಯವಾಗಿ ಆಸಕ್ತಿಯೂ ಇಲ್ಲ."

"ಒಂದೆರಡು ವರ್ಷ........ಅನಂತರ ಅಭ್ಯಾಸವಾದೀತು."

ವಸ್ತುವಸ್ತುವನ್ನು ಸ್ವಸ್ಥಾನದಲ್ಲಿ ಜೋಡಿಸಿ ಧೂಳುರುಳಾಡಿಸಿ ಶುಚಿಗೊಳಿಸುತಿದ್ದ ಮಗಳನ್ನು ಗಮನಿಸುತ್ತಾ ಸುರೇಶದಲ್ಡಾಲಿ "ಹೆಣ್ಣಿಗಿರುವ ದಯೆ ಸಹನೆಗಳು ಪ್ರಾಚೀನ ಸಂಪ್ರದಾಯಗಳ ಕೊಡುಗೆ ಕಮಲೇಶ್. ಪ್ರಾಯಶಃ ಈಗಿನವರಿಗೆ ನನ್ನ ಅಭಿಪ್ರಾಯ ಸರಿಯೆನಿಸದಿದ್ದರೂ ಮೂಲ ಶಕ್ತಿಯಿಂದ ವಿಮುಕ್ತಿ ಹೊಂದಲಾರದು" ಅಂದಾಗ ಹೆಮ್ಮೆಯ ಕಿರುನಗೆ ತುಟಿಗಳಲ್ಲಿ ನಲಿಯಿತು.

ಆ ವ್ಯಕ್ತಿಯಲ್ಲಿ ಸ್ತ್ರೀ ಜೀವನ ಯಾತ್ರೆ ಎಷ್ಟು ಮಹತ್ವಪೂರ್ಣವಾದುದೋ ಅದನ್ನು ತಿಳಿದುಕೊಳ್ಳುವ ಶಕ್ತಿಯಾಗಲೀ, ನಾಗರಿಕ ಜೀವನವನ್ನು ವಿಮರ್ಶಿಸುವಷ್ಟು ಭಾವಾತ್ಮಕ ಶ್ರದ್ಧೆಯಾಗಲೀ ಎಂದೂ ಇರಲಿಲ್ಲ. ಯಾವ ಅಭಿಮಾನ ಪ್ರೇರಣೆಯಿಂದ ಮುಖಬಿಂಬದಲ್ಲಿ ಹಸನಾದ ಕಿರುನಗೆ ಮೂಡಿತೋ........ಸಮಯಾಸಮಯಗಳಲ್ಲೂ ಈ ಕಿರುನಗೆ ಹೇಗೆ ಅವರಿಗೆ ಸಹಜವಾಗಿ ಹೋಗಿದೆಯೋ ಅದರ ಗುಟ್ಟು ದೇವಾಧಿದೇವನೊಬ್ಬನ ವಿನಾ ಇನ್ನಾರೂ ಅರಿಯರು. ಆ ಮುಹೂರ್ತದಲ್ಲಿ ಕಮಲೇಶಳ ಉಜ್ವಲ ನೇತ್ರಗಳು ವಿಸ್ಫಾರಿತವಾದುವು.

"ಅಪ್ಪಾಜಿ, ಪ್ರಾಚೀನ ಸಂಪ್ರದಾಯ ಸೂತ್ರಗಳನ್ನು ಗಣನೆಗೆ ತೆಗೆದುಕೊಳ್ಳುವುದರಲ್ಲಿರುವ ನಿಮ್ಮ ಆಸ್ಥೆ ನನಗರ್ಥವಾಗುವುದಿಲ್ಲ. ಇಂದಿನ ನವ್ಯ ನಾಗರಿಕತೆಗೆ ಜ್ಞಾನ ನಿಧಿಯ ಬೆಂಬಲವಿದೆ....ವಿಜ್ಞಾನದ ಮುನ್ನಡೆಯಿದೆ.... ಕಾಲಜ್ಞಾನದ ಪರಿಶ್ರಮವಿದೆ........ಆದರೂ........"

ದಲ್ಡಾಲಿ ಮಹಾಶಯ ಮಗಳನ್ನು ವಿಸ್ಮಯಪೂರಿತ ದೃಷ್ಟಿಯಿಂದ ನೋಡುತ್ತಾ ತನ್ನ ದನಿಯನ್ನು ಶಂಖಧ್ವನಿಯಂತೆ ಹರಿಹಾಯಿಸಿದರು, "ಏನೇ ಆದರೂ........ ಪ್ರಾಚೀನ ಸತ್ಸಂಪ್ರದಾಯಗಳನ್ನು ಬಿಟ್ಟುಕೊಡು

ವಂತಿಲ್ಲ ಕಮಲೇಶ್."

ಕಮಲೇಶಳ ಅಂತರಂಗ ಸ್ತಬ್ಧವಾಯಿತು. ಮೆಡಿಕಲ್ ಕಾಲೇಜಿಗೆ ಸೇರಲು ಅನುಮತಿ ಬೇಡಲು ಬಯಸಿದ್ದ ಅವಳು ಬಾಯ್ದೆರೆಯದಾದಳು. ಕೈಗಳು ಯಾಂತ್ರಿಕವಾಗಿ ಕೆಲಸ ಮಾಡುತ್ತಿರುವಾಗ ಮಾನಸ ಪಕ್ಷಿ ಮೆಡಿಕಲ್ ಕಾಲೇಜಿನ ಬಳಿ ಸುತ್ತಾಡಿ ಭವ್ಯ ಭವಿತವ್ಯದ ವೇದಿಕೆಯ ಮೇಲೆ ಡಾಕ್ಟರಾಗಿ ಅಂಡಲೆದು ಆಶಾಸೌಧವನ್ನು ನಿರ್ಮಿಸುತಿತ್ತು.

ಆದರೆ........

ಕಮಲೇಶಳ ದಿಟ್ಟಿ ಕಿಟಕಿಯಲ್ಲಿ ತೂರಿ ಶೂನ್ಯಜಗತ್ತನ್ನು ನಿಟ್ಟಿಸಿತು. ಕೆಂಧೂಳೀ ಧೂಸರಿತವಾದ ಹೊರ ವಲಯದಲ್ಲಿ ಬಿಸಿಲ ತೆರೆ ದಿಂಗಂತ ವ್ಯಾಪಿಯಾಗಿ ಹರಡಿದೆ.

"ಅಪ್ಪಾಜಿ, ನಾಗರಿಕ ಜೀವನದ ಬಗ್ಗೆ ನೀವೇನೆನ್ನುತ್ತೀರಿ?"

"ನಾಗರಿಕತೆಯ ಬಗ್ಗೆ ಅಲಕ್ಷ್ಯವಿಲ್ಲ ಕಮಲೇಶ್. ಆದರೂ ಸಾರೋದ್ಧಾರವಾಗಿ ಬಂದ ನಮ್ಮ ಪೂರ್ವ ಸಂಸ್ಕೃತಿಯನ್ನು ಮರೆಯಲೂಬಾರದು."

ಕಮಲೇಶಳ ತುಟಿಗಳು ಬಿರಿಯಲಿಲ್ಲ.

ಯುಗಯುಗಯುಗಯುಗಾಂತರಗಳಿಂದ ಸಮಾಜವು ಚತುರೋಪಾಯಗಳಿಂದ ಅಖಿಲ ಸ್ತ್ರೀ ಸಮೂಹವನ್ನು ರಕ್ಷಣೆಯ ಮರೆಯಲ್ಲಿ....ಸತೀತ್ವದ ಹೆಸರಿನಲ್ಲಿ ...ಮಾತೃಪದದ ಹಿರಿಮೆಯಲ್ಲಿ ...ನಿತ್ಯ ಪೂಜನೀಯತೆಯ ಸೋಗಿನಲ್ಲಿ ಗೃಹಬಂಧನದೊಳಿಟ್ಟು ಮಾನವ ಮಾನವನಾಗುವುದನ್ನು ತಡೆಗಟ್ಟಿ ಆತ್ಮವಂಚನೆ ಮಾಡಿದುದನ್ನು 'ಸಂಸ್ಕೃತಿ' ಎನ್ನುವುದಕ್ಕಿಂತ 'ಕುಸಂಸ್ಕಾರ' ಎನ್ನಬಹುದು....ಇಂದೂ ಈ ಇಪ್ಪತ್ತನೇ ಶತಮಾನದ ಸಂಧ್ಯೆಯಲ್ಲೂ ಸ್ತ್ರೀ ಜೀವನದ ಮೇಲೆ ಅನುಪಮ ಲಕ್ಷ್ಯವಿಲ್ಲ. ಭಾರತ ಸಾಮ್ರಾಜ್ಯದಲ್ಲಿ ವೇದ ಭೂಮಿಯ ಮಡಿಲಲ್ಲಿ ಪ್ರಾಚೀನ ಸುಸಂಸ್ಕೃತ ಚಾರಿತ್ರ್ಯವಾಹಿನಿಯಲ್ಲಿ ಮುಳುಗಿ ನೋಡಿದರೆ ಸ್ತ್ರೀಜೀವನದ ಪರಮ ಸಿದ್ಧಿ ಎಷ್ಟು ಕಾರುಣ್ಯಪೂರಿತವಾಗಿದೆ....ಎಷ್ಟು ಸಂಕಟಪ್ರದವಾಗಿದೆ....ಎಂಬುದು ಅವರ್ಣನೀಯ....

ಕಮಲೇಶ್ ವಿಚಾರಪರವಶಳಾಗಿ ಒಳ ಬಂದಾಗ ಸ್ವರ್ಣಮಾಲಿನಿ ಮೈಬಾಗಿ ಕಸವುಡುಗುತಿದ್ದಳು. ಅವಳ ಕೈಯಿಂದ ಕಸಬರಿಗೆಯನ್ನು ತಾನು ತೆಗೆದುಕೊಂಡು ಕಸವನ್ನು ಗುಡಿಸಿ ಮುಗಿಸುವಷ್ಟರಲ್ಲಿ ಹಿಂದಿನಿಂದ ಪಾದರಕ್ಷೆಗಳ ಪಟಪಟ ಸದ್ದು ಕೇಳಿಬಂತು, ಜೀವನ ತರಂಗಗಳ ಸಂಘರ್ಷಣೆಯಂತೆ.

ನೋಟ ಅತ್ತ ತಾನಾಗಿ ಹೊರಳಿತು. ಆಫೀಸಿನ ಕೆಲಸ ಮುಗಿಸಿದ ಶ್ರೀಧರ ದಲ್ಡಾಲಿ ಒಳಬರುತ್ತಿದ್ದ. ಮುಖದ ಮೇಲೆ ಬಳಲಿಕೆಯು ಮ್ಲಾನತೆ ಮುದ್ರೆಯೊತ್ತಿತ್ತು. ಬರಬರುತ್ತಲೇ ಅವನು ಅವಸರಿಸಿದ "ಕಾಲೇಜಿಗೆ ಹೊತ್ತಾಯಿತು. ಬೇಗನೆ ತಿಂಡಿಕೊಡು ಕಮಲೇಶ್."

"ಇನ್ನೂ ಮುಖ ತೊಳೆಯಲಿಲ್ಲ. ಆಗಲೇ ಅವಸರ."

"ಅದೆಷ್ಟೊತ್ತಿನ ಕೆಲಸ ? ಒಂದೇ ನಿಮಿಷದಲ್ಲಿ ಬಂದು ಬಿಡುವೆ."

ಶ್ರೀಧರ ದಲ್ಡಾಲಿ ನುಡಿದಂತೆಯೇ ನಡೆದಿದ್ದ. ಸ್ಟವ್ ಹತ್ತಿಸಿ ಕಾಫಿ ಬಿಸಿ ಮಾಡುವುದರೊಳಗಾಗಿ ಮತ್ತೆ ಅವಸರಿಸಿದ "ಹೊತ್ತಾಯಿತು ಕಮಲೇಶ್ !"

"ಅದೇಕಷ್ಟು ಅವಸರ ? ನೀನು ತಿಂಡಿ ತಿನ್ನುವುದರೊಳಗಾಗಿ ಕಾಫಿ ಬಿಸಿಯಾಗುತ್ತೆ"

ಶ್ರೀದರ ದಲ್ಡಾಲಿ ಮಾತನಾಡಲಿಕ್ಕೂ ಸಮಯವಿಲ್ಲದವನಂತೆ ಒಂದೇ ಉಸುರಿಗೆ ತಿನ್ನತೊಡಗಿದ. ಕಾಫಿಯನ್ನು ತಂದ ಕಮಲೇಶ್ ಕಣ್ಣರಳಿಸಿ "ಹತ್ತು ಹೆಜ್ಜೆ ಹಾದಿಗೆ ಇಷ್ಟೊಂದು ಅವಸರವೆ ?" ಎಂದಳು ಸಖೇದಾಶ್ಚರ್ಯದಿಂದ.

"ನನ್ನ ನೋಟ್ಸ್ ಬಲರಾಮನ ಹತ್ತಿರ ಇದೆ, ಅವನಲ್ಲಿಗೆ ಹೋಗಿ ತೆಗೆದುಕೊಂಡು ಹೋಗಬೇಕು." ಎಂದವನೇ ಉಳಿದ ಉಪಹಾರವನ್ನು ಒಂದೇ ತುತ್ತಿಗೆ ನುಂಗಿ ಕಾಫಿಯನ್ನು ಹೀರಿ ಎದ್ದ. ಕೂದಲನ್ನು ತಿದ್ದಿ ಕರವಸ್ತ್ರಕ್ಕೆ ಕೈಹಾಕಿದಾಗ ವಸ್ತ್ರದೊಡನೆ ಎರಡು ಸಿನಿಮಾ ಟಿಕೆಟ್ಟುಗಳು ಜಾರಿ ಕೆಳಗೆ ಬಿದ್ದುದು ದಿಟ್ಟಿಗೆ ಬಿತ್ತು. ಅಚ್ಚರಿಯಿಂದ ತುಟಿಯ ಮೇಲೆ ಬೆರಳಿಟ್ಟು ಕೊಂಡಳು ಕಮಲೇಶ್. ಮಿನರ್ವಾ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದ್ದುದು ಅಂಕಲ್ ಜಾನ್ ಎಂಬ ನಗ್ನ ಚಿತ್ರ....!

"ಓ....ಹೊ!" ತುಂಟನಗೆ ಬೀರಿದಳು ಕಮಲೇಶ್.

"ಅದು ನನಗಲ್ಲ. ನನ್ನ ಗೆಳೆಯರಿಗೆ!" ಎಂದವನೇ ಒಂದು ಕ್ಷಣವೂ ನಿಲ್ಲದೆ ರಸ್ತೆಗೆ ಹಾರಿದ. ಆ ಅತೀವ ಆತುರಾಭಿಲಾಷೆಗಳು ಆತನ ಅಂತಃಪಟಲಕ್ಕೆ ಕೈಗನ್ನಡಿಯನ್ನು ಹಿಡಿದುವು. ಗೆಳೆಯ ಬಲರಾಮನ ಮನೆ ಇರುವುದು ಬಲಭಾಗದಲ್ಲಿ. ಅವನು ಹಿಡಿದುದು ಎಡಭಾಗದ ರಸ್ತೆ. ಮಿನರ್ವಾ ಟಾಕೀಸು ಇರುವುದು ಆ ಕಡೆಯೆ! ಎಂಥ ಹುಡುಗ! ಹೇಳಿ ಹೋಗಿದ್ದಿದ್ದರೆ ಏನು ನಷ್ಟ

ವಾಗುತಿತ್ತು? ಸಿನಿಮಾ ಪ್ರಾರಂಭವಾಗಲು ಇನ್ನು ಐದು ನಿಮಿಷಗಳು ಮಾತ್ರ ಇವೆ....! ಹಾಳು ಚಪಲ........ಅದಕ್ಕೆ ಅಷ್ಟೊಂದು ಅವಸರ.

ಒಳ ಬಂದಾಗ ಸ್ವರ್ಣಮಾಲಿನಿ ಸಂಜೆಯಡುಗೆಗೆ ಹವಣಿಸುತ್ತಿದ್ದುದನ್ನು ಕಂಡು ಬಸಿ ಬಟ್ಟಲುಗಳನ್ನು ಎತ್ತಿಟ್ಟು ತಾಯಿಯೊಂದಿಗೆ ಕೂಡಿಕೊಂಡಳು ಕಮಲೇಶ್.

"ಮಗೂ, ನೀನೇನೋ ಮೆಡಿಕಲ್ ಕಾಲೇಜ್ ಸೇರುವ ಬಯಕೆ ಇಟ್ಟು ಕೊಂಡಿದ್ದಿ. ಹೆಣ್ತನಕ್ಕೆ ಒಂದೊಂವೇ ಹೊರೆ ಅಂದಮೇಲಿ ಸಂಸಾರ ಉದ್ಯೋಗ ಎರಡರ ಹೊರೆ ಸಾಮಾನ್ಯವಲ್ಲ ಯೋಚಿಸಿನೋಡು." ಮಗಳ ಭವಿಷ್ಯವನ್ನು ಕುರಿತು ಚಿಂತಿಸುತ್ತ ನುಡಿದಳು ಸ್ವರ್ಣಮಾಲಿನಿ.

"ಮಗಳು ಸುಖವಾಗಿರಬೇಕೆಂಬುದು ನಿಮ್ಮ ಉದ್ದೇಶ ಅಲ್ಲವೆ?........ ನಾನು ಸ್ವಂತವಾಗಿ ದುಡಿಯುವಂತಾದರೆ ನಿಜವಾಗಿಯೂ ಸುಖವಾಗಿರುವೆ ಮಾ." ಒತ್ತಿ ಹೇಳಿದಳು ಕಮಲೇಶ್. ಅಂತರಾಳದ ದೃಢ ಸಂಕಲ್ಪ ಮುಖದ ಮೇಲೆ ಸ್ವಚ್ಛಂದವಾಗಿ ಮುದ್ರೆಯೊತ್ತಿತು.

"ಈಗೇನೋ ಸರಿಯೆ. ಮುಂದೆ ಕಷ್ಟ ಎಂಬುದೊಂದು ಚಿಂತೆ."

"ನೀವಿರುತ್ತೀರಲ್ಲ ಮಾ!"

ಸ್ವರ್ಣಮಾಲಿನಿ ನಕ್ಕುಬಿಟ್ಟಳು.

ಅಡುಗೆ ಮುಗಿಸಿ ಮುಖ ಮಜ್ಜನ ಮಾಡಿ ದೇವರಿಗೆ ದೀಪ ಹಚ್ಚಲು ಹೋದಳು ಸ್ವರ್ಣಮಾಲಿನಿ. ಒಂದು ಗಂಟೆ ಧ್ಯಾನಾನಂತರ ಮಗಳನ್ನು ಮಂಗಳಾರತಿಗೆ ಕರೆಯುವುದು ಅನುದಿನದ ವಾಡಿಕೆ. ತಾಯಿ ದೇವರಮನೆಯ ಕದವನ್ನು ಮುಚ್ಚಿಕೊಳ್ಳುತ್ತಲೂ ತನ್ನ ಕೊಠಡಿಗೆ ತೆರಳಿ ಕಿಟಕಿಯನ್ನು ತೆರೆದು, ಅಪ್ಪನ ಆಫೀಸಿನಿಂದ ನಿರಾಳವಾಗಿ ಕೇಳಿಬರುವ ಕಕ್ಷಿಗಾರರ ಮಾತು ಕತೆಯ ಸದ್ದು ಗದ್ದಲಗಳಿಗೆ ಪ್ರತಿಬಂಧ ಹಾಕಲು ಕದವನ್ನು ಮುಚ್ಚಿ, ತನ್ನ ಮೇಜಿನ ಮುಂದೆ ಕುಳಿತುಕೊಂಡಳು. ಮೇಜಿಗೆದುರಾಗಿ ಕಿಟಕಿ. ಕಿಟಕಿಗೆದು ರಾಗಿ ಪುಷ್ಪಭರಿತ ದುಂಡುಮಲ್ಲಿಗೆಯ ಬಳ್ಳಿ. ಸಂಜೆಯ ಸವಿಗಾಳಿ ತೀಡಿ ಬಂದಂತೆಲ್ಲಾ ಸುಗಂಧದ ಧಾಳಿ....ಘಮ....ಘಮ....ಘಮ....ಘಮ.

ನೋಟ ಕಿಟಕಿಯಲ್ಲಿ ಹರಿಹಾಯ್ದು ದೂರದಿಗಂತದಲ್ಲಿ ನೆಟ್ಟು ಗಗನ ವಿಹಾರದಲ್ಲಿ ತೊಡಗಿತು. ಗತಕಾಲದ ಪಾವಟಿಗೆಗಳನ್ನು ಚಕಚಕ ಇಳಿದು ಹಳೆಯ ನೆನಪುಗಳಲ್ಲಿ ವಿಹರಿಸಿತು ಮಾನಸಪಕ್ಷಿ.

........ಅಂದು ಕಾಲೇಜಿನ ವಾರ್ಷಿಕೋತ್ಸವ. ಪ್ರಥಮತಃ ಚಂಪಕ ಮಾಲಿನಿಯ ಹಾಡುಗಾರಿಕೆಯಿಂದ ಆರಂಭವಾಯಿತು. ಅವಳು ಹಾಡಿದಷ್ಟೂ ಮನತಣಿಯದ ಮಂದಿ "ಒನ್ಸ್‌ಮೋರ್!" ಎಂದು ಕೂಗತೊಡಗಿದರು. ಅವಳು ಪುನಃ ಹಾಡಿದರೂ ಕೇಳಿಬರುತಿತ್ತು ಅದೇ ಘೋಷಣೆ. ಇನ್ನುಳಿದ ಕಾರ್ಯಕ್ರಮಗಳಿಗೆ ಸಮಯ ಸಾಲದೆ ಬರುವುದೆಂದು ಕಾರ್ಯದರ್ಶಿಗಳು ಕೈ ಮುಗಿದು ಸಭೆಯನ್ನು ಕ್ಷಮೆ ಕೇಳಿಕೊಂಡರು. ಅನಂತರ ಕಮಲೇಶಳ ಭಾರತ ಮಾತೆಯ 'ಟ್ಯಾಬ್ಲೊ'. ತೆರೆ ಮೇಲೆದ್ದೊಡನೆಯೇ ಸಭಿಕರು ಹರ್ಷೋದ್ಗಾರ ಮಾಡಿದರು. ಮಾಡು ನೊಳಗುವಂತೆ, ಕಿವಿ ಕಿವುಡಾಗುವಂತೆ ಮತ್ತೆಮತ್ತೆ ಚಪ್ಪಾಳೆಗಳ ಮೊರೆತ. ಆನಂದ ತುಂಬಿ ಹೃದಯ ಸಮುದ್ರ ಉಕ್ಕೇರಿದರೂ, ಮಾನಸ ಗಂಗೋತ್ರಿ ಮಾರ್ದವತೆಯನ್ನು ಕಳೆದು ವೇಗಗಾಮಿನಿಯಾದರೂ ಮುಖದಲ್ಲಿ ಭಾವೋದ್ವೇಗವನ್ನು ಪ್ರಕಟಿಸುವಂತಿಲ್ಲ. ಸಂತೋಷಾತಿರೇಖದ ಮಹಾಪ್ರಳಯವನ್ನು ಹತ್ತಿಕ್ಕಿ ಕಿಂಚಿತ್ತೂ ಅಲುಗದೆ ಘನ ಗಾಂಭೀರ್ಯದಿಂದ ನಿಲ್ಲುವುದೆಂದರೆ ಅದೆಷ್ಟು ಕಷ್ಟವಾಗಿತ್ತೋ....ಅದಾದನಂತರ ಉಡಿಗೆ ತೊಡಿಗೆ ಗಳನ್ನು ಕಳಚಿ ವನಮಾಲಿಯ ಭರತನಾಟ್ಯವನ್ನು ನೋಡುವ ಹುಮ್ಮಸ್ಸಿನಿಂದ ಮೈಯೆಲ್ಲಾ ಮನಸ್ಸಾಗಿ ಹೊರಬಂದರೆ ಪ್ರೇಕ್ಷಕರ ನೋಟವೆಲ್ಲಾ ಇತ್ತಲೇ! ಹುಡುಗಿಯರೆಲ್ಲ ಸುತ್ತಮುತ್ತ ಮುತ್ತಿಕೊಂಡರು. ಅಭಿನಂದನೆಗಳ ಸುರಿಮಳೆ ಯೊಡನೆ ಗೆಳತಿಯರು ಆದರದ ಸವಿಯನ್ನೂ ಡಿಸಿದರು. ಸಂತಸದುಬ್ಬರದಲ್ಲಿ ಹೃದಯ ಬಿರಿಯುವಂತೆ ತೋರಿತು. ಮರುಘಳಿಗೆಯಲ್ಲಿ ವನಮಾಲಿಯ ಭರತ ನಾಟ್ಯ. ಆ ನಾಟ್ಯ ವೈಖರಿ, ಹೆಜ್ಜೆ ಹೆಜ್ಜೆಯಲ್ಲೂ ಹೊರ ಹೊಮ್ಮುತಿದ್ದ ಹಿರಿತನ ಎಲ್ಲರ ಮನವನ್ನು ಸೂರೆಗೊಂಡಿತು. ಭಾವಪರವಶಳಾಗಿರುವಾಗಿನ ಶ್ರೀಮುಗ್ಧಗಾಂಭೀರ್ಯ, ಶೃಂಗಾರರಸ ಶೋಕರಸಗಳನ್ನು ಪ್ರದರ್ಶಿಸುವಾಗಿನ ಭಾವಪೂರ್ಣಭಂಗಿ, ನಾಟ್ಯ ಕಲಾವೈಖರಿ....ಒಂದೊಂದೂ ಇದೀಗ ನೋಡಿ ದಂತಿದೆ....ಅಂದು ಕೇಳಿದ ಒಕ್ಕೊರಲಿನ ಘೋಷಣೆ........ಕೋಕಿಲಗಾನ ಚಂಪಾ! ನಾಟ್ಯವಿಶಾರದೆ ವನಮಾಲ! ಆಹಾ! ಇಂದೂ, ಈಗಲೂ ಕರ್ಣ ದೇಶದಲ್ಲಿ ಮರುಪ್ರಸಾರ ಮಾಡುತ್ತಿದೆ.

ಎಳೆಯ ಮನಸ್ಸು ಅರಳಿ ಹೂವಾಯಿತು, ಕಮಲೇಶ್ - ಭಾವಪರವಶ ಳಾಗಿ ಕರಗಳನ್ನು ಜೋಡಿಸಿಕೊಂಡು ಭಗವಂತನನ್ನು ಮನಃಪೂರ್ವಕ ವಾಗಿ ಪ್ರಾರ್ಥಿಸಿಕೊಂಡಳು....ಸರ್ವೇಜನಾಃ ಸುಖಿನೋ ಭವಂತು... ....

ಅಧ್ಯಾಯ

೩

....ಅಭಿಜಿತ್ ಮುಹೂರ್ತ....

....ವಾಲಗಗಳ ಮೊರೆತ. ಜನಗಳ ಗದ್ದಲ.

ವನಮಾಲಿಯ ಮದುವೆ ಅದ್ದೂರಿಯಿಂದ ನಡೆಯದಿದ್ದರೂ ನಡೆದ ಸಣ್ಣ ಸಮಾರಂಭ ಅಚ್ಚುಕಟ್ಟಾಗಿತ್ತು. ಕಮಲೇಶ್ ಚಂಪಕ ಮಾಲಿನಿಯರು ಮುಖ್ಯ ಪಾತ್ರ ವಹಿಸಿ ಓಡಾಡಿ ಗೆಳತಿಯ ಮನಕ್ಕೆ ಆನಂದವನ್ನೊಡಿಸಿ ಗೆಳೆತನಕ್ಕೆ ಕಳೆಯೇರಿಸಿದರು. ಮದುವೆಯಾದನಂತರ ಗೆಳತಿಯರು ಹೊರಟಾಗ ವನಮಾಲಿಯ ಕಣ್ಣುಗಳು ಆನಂದಾತಿಶಯದಿಂದ ತುಂಬಿ ಬಂದುವು.

ಮದುವೆಯ ಸಡಗರದಲ್ಲಿ ವಾರದ ಗಾಲಿ ನಿರಾತಂಕವಾಗಿ ಉರುಳಿತು.

ವನಮಾಲಿಯ ಗಂಡ ಡಿಪ್ಲೋಮಾ ಮಾಡಿದವನಾದರೂ ಕಲ್ಕತ್ತೆಯ ಸಂಸ್ಥೆಯೊಂದರಲ್ಲಿ ಇತ್ತೀಚೆಗೆ ಒಳ್ಳೆಯ ಕೆಲಸ ಪಡೆದಿದ್ದ. ವನಮಾಲಿ ಕಲಿಕತ್ತೆಗೆ ಹೋಗುವ ಮುನ್ನ ಮುಂಬೈಗೆ ಹೋಗಿ ಅತ್ತೆ ಮಾವಂದಿರೊಂದಿಗೆ ಒಂದುವಾರ ಕಳೆಯಲಿದ್ದಾಳೆಂದು ತಿಳಿದುಬಂದಾಗ ಅವಳೊಂದಿಗೆ ಹೋದರೆ ಮುಂಬೈ ನೋಡಿದ ಹಾಗೂ ಆಯಿತು ಅಕ್ಕ ಸತ್ಯಭಾಮೆಯ ಮನೆಯಲ್ಲಿ ಇದ್ದ ಹಾಗೂ ಆಯಿತು, ಎಂದುಕೊಂಡಳು ಕಮಲೇಶ್. ಇದುವರೆವಿಗೆ ಮುಂಬೈ ನೋಡಿರದ ಅವಳಿಗೆ ಹೋಗಲೇಬೇಕೆಂಬ ಉತ್ಕಟ ಆಕಾಂಕ್ಷೆ ಮನದಲ್ಲಿ ಪ್ರ್ಯೋವೋನ್ನತವಾಗಿ ಮೊಳೆಯಿತು.

ವನಮಾಲಿ ಮನೆಯಿಂದ ಬಂದವಳೇ ನೀರು ಮನೆಗೆ ಹೋದಳು ಕಮಲೇಶ್. ತನ್ನ ಅಭಿಲಾಷೆಯನ್ನು ವನಮಾಲಿಗೆ ತಿಳಿಸುವ ಮುನ್ನ ಮನೆಯಲ್ಲಿ ಒಪ್ಪಿಗೆ ಪಡೆಯುವುದೊಳ್ಳೆಯದೆನ್ನಿಸಿ ಆಸೆಯುಬ್ಬರವನ್ನು ತಡೆ ಹಿಡಿದಿದ್ದರೂ ಚಿತ್ತವೆಲ್ಲ ಆಗಲೇ ಮುಂಬೈ ನಗರಿಯ ಸುತ್ತಮುತ್ತ ಪ್ರದಕ್ಷಿಣೆಗೈಯ್ಯುತಿತ್ತು.

ಎಲ್ಲಕ್ಕೂ ಅಪ್ಪ ಒಪ್ಪಬೇಕೆ ?

ಮರುಘಳಿಗೆಯಲ್ಲೇ ಈ ಪ್ರಶ್ನೆ ಏಳಬೇಕೆ? ಆತುರವಿದ್ದರೂ ತಾಯಿಯ

ಬಳಿಗೆ ಹೋಗುವಂತಿಲ್ಲ. ಹೊರ ಹೋದವರೆಲ್ಲಾ ಕೈಕಾಲು ತೊಳೆದುಕೊಂಡೇ ಒಳ ಹೋಗಬೇಕೆಂಬುದು ನಡೆನುಬಂದ ವಾಡಿಕೆ. ಜಳಜಳ ತಣ್ಣೀರು ಚೆಲ್ಲಿ ಮುಖ ಪ್ರಕ್ಷಾಲನೆ ಮಾಡಿ ತನುತಂಪಾದಮೇಲೆ ತಾಯಿಯ ಬಳಿಗೆ ಹೋಗಿ ವಿಷಯವನ್ನು ಮುಂದಿಟ್ಟು "ಹೋಗಿಬರಲೇ?" ಎಂದಳು. ಕಣ್ಣುಗಳು ಆಶೆಯ ಬೆಳಕನ್ನು ಚೆಲ್ಲಿದುವು. ತುಟಿಗಳಲ್ಲಿ ಸರಳ ಸ್ನಿಗ್ಧ ಹಾಸ ನಲಿಯಿತು.

ಆದರೆ....ಹಣ ?

ಸ್ಥಿರ ಗಂಭೀರೆಯಾದ ಸ್ವರ್ಣಮಾಲಿನಿ ಆಲೋಚನಾಮಗ್ನಳಾಗಿ ನುಡಿದಳು "ನೀನು ಹೋಗುವುದಕ್ಕಿಂತ ಅವಳನ್ನೆ ಕರೆಸಿಕೊಂಡಿದ್ದರೆ ಮಕ್ಕಳನ್ನು ನೋಡಬಹುದಾಗಿತ್ತು. ಅವಳೂ ಒಂದು ತಿಂಗಳು ಹಾಯಾಗಿ ಇದ್ದು ಹೋಗುತಿದ್ದಳು." ಗೌರವರ್ಣದ ಮುಖ ಮಾತೃ ಪ್ರೇಮದಿಂದ ತುಂಬಿ ತುಳುಕಿತು.

"ಅದು ಸರಿಯಾದರೂ ಮೂವರಿಗೆ ರೈಲು ಚಾರ್ಜ್ ಕೊಡಬೇಕಲ್ಲ, ಅದಕ್ಕಿಂತ ನಾನು ಹೋಗಿ ಬರುವುದು ಉಳಿತಾಯ ದೃಷ್ಟಿಯಿಂದ ಕ್ಷೇಮ."

ಸ್ವರ್ಣಮಾಲಿನಿ ನಕ್ಕುಬಿಟ್ಟಳು.

ತಾಯಿಯನ್ನು ಎರಡೂ ಕೈಗಳಿಂದ ಅಪ್ಪಿಕೊಂಡು ರಮಿಸುವಂತೆ ಕಿಲಕಿಲ ನಗ ತೊಡಗಿದಳು ಕಮಲೇಶ್.

ಹೊರಬಾಗಿಲ ಕರೆ ಗಂಟೆಯ ಕರ್ಕಶ ಧ್ವನಿ ಅಮೂಲ್ಯ ರಸ ನಿಮಿಷವನ್ನು ಕಸಿದುಕೊಳ್ಳದಿದ್ದರೆ ಆ ಸುಖಾನುಭವ ಇನ್ನೆಷ್ಟು ಹೊತ್ತು ನಡೆಯುತಿತ್ತೋ....ಕಮಲೇಶ್ ತಾಯಿಯನ್ನು ಅಷ್ಟಕ್ಕೆ ಬಿಟ್ಟು ಹೊರ ಬಾಗಿಲಿಗೆ ಹೋಗಿ ಕದ ತೆಗೆದಳು. ಮುರಳೀದರ ದಲ್ವಾಲಿ ಕೆಲಸ ಮುಗಿಸಿಕೊಂಡು ಬಂದಿದ್ದ. ಬರಬರುತ್ತಲೇ ಅಂದ "ನನಗಿಂದು ತಿಂಡಿ ಬೇಡ."

"ಅದೇಕೆ ?" ಸ್ವರ್ಣಮಾಲಿನಿ ಕೇಳಿದಳು.

"ಬಹುಶಃ ಹೋಟೆಲಿಗೆ ಹೋಗಿ ಬಂದಿರಬಹುದು ಎಂದಳು" ಕಮಲೇಶ್.

"ಎಂ. ಟಿ. ಆರ್.ನಲ್ಲಿ ಫಲಾಹಾರ!" ಮುರಳೀಧರ ದಲ್ವಾಲಿ ತುಂಟ ನಗೆ ಬೀರಿದ.

ಮಾತು ಹೊರಬಿದ್ದೊಡನೆಯೆ ಕಮಲೇಶ್ ಹುಸಿಕೋಪವನ್ನು ಪ್ರಕಟಿಸಿ "ಪರವಾಯಿಲ್ಲ....ಒಬ್ಬನೇ ತಿಂದಿದ್ದಿ! ಅದ್ಹೇಗೆ ಮನಸ್ಸು ಬಂತೋ....?"

"ನೀನೂ ಚೆನ್ನಾಗಿ ತಿಂದಂತಿವೆ ?" ಹುಬ್ಬೇರಿಸಿದ ಮುರುಳಿ.

"ನಾನು....?" ವಿಸ್ಮಯ ಚಕಿತ ನೇತ್ರಗಳನ್ನರಳಿಸಿ "ಬಹಳ ಚಾಲೂಕು ಕಣಪ್ಪಾ, ಹಾಗೆಂದುಬಿಟ್ಟರೆ ತಂಗಿಗೆ ಕೊಡಿಸುವ ಅಗತ್ಯವಿರುವುದಿಲ್ಲ !"

"ಓ! ಮುಚ್ಚುಮರೆ ಇರಲಿ, ನಿನ್ನ ಸೊಗಸಾದ ಉಡುಗೆಯೇ ಹೇಳುತ್ತೆ ನೀನೂ ಸಹ ಹೊರಗೆ ಹೋಗಿದ್ದೆ ಎಂದು!" ಮುಖದಲ್ಲಿ ಮಂದಸ್ಮಿತಧಾರೆ ಹರಿಯಿತು.

"ನಿನ್ನಂತೆ ಹೋಟೆಲಿಗೆ ಹೋಗಲಿಲ್ಲ ಬಿಡು." ಶಾಂತಿಪೂರ್ವಕವಾಗಿ ನುಡಿದಳು, ಕಮಲೇಶ್.

"ಎಲ್ಲಿಗೆ ಹೋಗಿದ್ದೆ....ಹೇಳು ?"

"ಇನ್ನೆಲ್ಲಿಗೆ ಹೋಗಲಿ?....ವನಮಾಲಿ ಮನೆಗೆ ಹೋಗಿ ಬಂದೆ."

"ಅಲ್ಲಿ ನೀನು ಫಲಹಾರ ಮಾಡಲಿಲ್ಲವೋ?"

"ಫಲಹಾರ ?....ಬರೀ ಶರಬತ್ತು ಮಾತ್ರ...."

"ಹಾಗಿದ್ದರೆ ಅವಳಿನ್ನೆಂತಹ ಗೆಳತಿ ?"

"ಸರಿ; ಸರಿ. ಗೆಳೆತನವಿರುವುದು ಹೊಟ್ಟೆತುಂಬುವುದಕ್ಕಲ್ಲ."

"ಅಂತಹ ಪೊಳ್ಳು ಗೆಳೆತನವಾದರೂ ಏಕಿರಬೇಕು?" ಸವಾಲು ಹಾಕಿದ ಮುರುಳಿ. ಕಣ್ಣು ಕೆನ್ನೆಗಳಲ್ಲಿ ಯುವಾವಸ್ಥೆಯ ತುಂಟುತನ ನಲಿಯುತಿತ್ತು. ತುಟಿಗಳಂಚಿನಲ್ಲಿ ಮಿಂಚಿನ ನಗೆ ಉದಯಮಾನ ಪ್ರತಿಭೆಯಂತೆ ಹೊಳೆಯಿತು.

"ಅದೆಲ್ಲಾ ಒತ್ತಟ್ಟಿಗಿರಲಿ, ನಿನ್ನಿಂದ ಚಕ್ರಬಡ್ಡಿ ಸಹಿತ ವಸೂಲು ಮಾಡದಿದ್ದರೆ ಕೇಳು ! ನೀವಿಬ್ಬರೂ ಹೊರಗಡೆ ಚೆನ್ನಾಗಿ ತಿಂದು ಬರುತ್ತೀರಿ. ನಾವಿಲ್ಲಿ ಬೆಳಗಿನಿಂದ ರಾತ್ರಿಯವರೆಗೆ ದುಡಿದಿದ್ದೇ ಬಂತು!"

ಒಡನೆ ಮುರುಳಿಯು ಧೀರಪ್ರಸನ್ನಭಾವದಲ್ಲಿ ನವಮಲ್ಲಿಕೆಯಂತೆ ಅರಳಿದ ಮುಖದಿಂದ– "ಯಾರಿಗೆ ಗೊತ್ತು ? ಅಡುಗೆ ಮನೆಯ ಭಂಡಾರವೇ ನಿಮ್ಮ ಕೈಲಿದೆ! ನಾವಿಲ್ಲದಾಗ ಯಾವ ಯಾವ ಔತಣ ನಡೆಯುತ್ತೋ!"

ಅಣಕದ ದನಿಯಲ್ಲಿ ನಿರಾಳವಾಗಿ ಹಾರಿದ್ದು ಹಾಸ್ಯದ ಚಟಾಕಿ.

"ಹೌದಪ್ಪಾ ಹೌದು ! ನಮಗೆ ಅದೇ ಕೆಲಸ !" ಕಣ್ಣರಳಿಸಿದಳು ಕಮಲೇಶ್, ಹುಸಿಮುನಿಸು ಮುಖಮುದ್ರೆಯಲ್ಲಿ ಮೂಡಿತು.

ಮುರಳಿ ನಗುನಗುತ್ತಾ ಟವಲೊಂದನ್ನು ಹೆಗಲಮೇಲೆ ಹಾಕಿಕೊಂಡು ಸ್ನಾನದ ಮನೆಗೆ ಹೋದ. ಅವನು ಕೈಕಾಲು ತೊಳೆದುಕೊಂಡು ಒಳ ಬರುವ

ವರೆಗೂ ಕಾದಿದ್ದು ತಾನು ಮುಂಬೈಗೆ ಹೋಗಬಯಸಿದ ವಿಷಯವನ್ನು ಮುಂದಿಟ್ಟು "ನೀನು ಐವತ್ತು ರೂಪಾಯಿ, ಶ್ರೀ ಐವತ್ತು ರೂಪಾಯಿ ನನಗೆ ಕೊಡಿ." ಎಂದಳು ಮೃದು ಮಧುರವಾಗಿ.

"ಐವತ್ತು ಲತ್ತೆ ಬೇಕೆ ಹೇಳು...." ಕಿಲಕಿಲ ನಗುವಿನ ವಿಮಲಧಾರೆಯನ್ನು ಹರಿಸಿದ ಮುರುಳಿ.

"ಮುರುಳೀ...."

ಒಂದು ಬಸಿ ಕಾಫಿಯನ್ನು ಮುಂದಿಟ್ಟು ಮತ್ತೆ ಗೋಗರೆದಳುಕಮಲೇಶ್.

"ಆಗಲೇ ಬೇಡ ಅಂದೆನಲ್ಲಾ. ಆದರೂ ಲಂಚ ತಂದ ಹಾಗೆ ತಂದಿಡುತಿದ್ದಿ !"

ಮಕ್ಕಳ ತುಂಟತನವನ್ನೀಂಟಿ ತನ್ನ ಮನಕ್ಕಾನಂದವನ್ನು ತುಂಬಿಕೊಂಡಳು ಸ್ವರ್ಣಮಾಲಿನಿ. ಸಿಂಧೂರ ತಿಲಕ ಸುಶೋಭಿತ ಮುಖಮಂಡಲ ಅಷ್ಟಮೀಚಂದ್ರನಂತೆ ಮಂಗಳಮಯ ಎಂದರೂ ಎನ್ನಒಹುದು.

"ಓ....ನೀನಂದದ್ದು ತಿಂಡಿಬೇಡ ಅಂತ. ಕಾಫಿ ಬೇಡ ಅನ್ನಲಿಲ್ಲವಲ್ಲಾ? ಅಣ್ಣ ಅಂತ ಕೊಟ್ಟರೆ ಅದಕ್ಕೂ ಲಂಚದ ಹೆಸರಿಟ್ಟು ಬಿಟ್ಟಿ!"

ಆ ಹೊಳಪುಗಣ್ಣುಗಳಲ್ಲಿ ಮಿನುಮಿನುಗುತ್ತಿದ್ದ ಆಸೆಯ ಬೆಳಕನ್ನು ನೋಡುತಿದ್ದಂತೆ ಅವಳನ್ನಿಷ್ಟು ಗೋಳು ಹುಯ್ಯಬೇಕೆನಿಸಿತು ಮುರುಳಿಗೆ. ತುಂಬುಗಲ್ಲದ ಮೇಲೆ ತುಂಟತನವನ್ನು ಹರಿಹಾಯಿಸಿ ನೈಯೆಲ್ಲಾ ಮನಸ್ಸಾಗಿ ನಿಂತ, ಎಳೆಯ ಅಣುಗನಂತೆ.

"ಅಪ್ಪನಿಂದ ನನಗೆರಡು ನೀಲಿ ನೋಟು ಕೊಡಿಸುವುದಾದರೆ...."

"ನಿನಗೆ ನೀಲಿ ನೋಟು ಕೊಡಿಸುವುದಾದರೆ ನಾನೇಕೆ ತೆಗೆದುಕೊಳ್ಳಬಾರದು?"

"ನೀನು ಹೊರಟರೆ ನಿನ್ನ ಜೊತೆಗೊಬ್ಬರು ಬೇಕಲ್ಲ ?"

"ಓ........ಯಾರೂ ಬೇಕಿಲ್ಲ."

"ಹೋಗುವಾಗಂತೂ ಸರಿ, ಬರುವಾಗ ?"

"ಅಣ್ಣಂದಿರಿದ್ದಾರೆ ಕೊಟ್ಟಾರು ಎಂದುಕೊಂಡರೆ....ಪರವಾಯಿಲ್ಲ.... ನೀನು !"

ಹಿ ಹ್ಹಿ ಹ್ಹಿ !

ಮುಂಬಾಗಿಲ ಕರೆಗಂಟೆ ಕಿರ್ರನೆ ಸದ್ದುಮಾಡಿ ಕ್ಷಣಮಾತ್ರದಲ್ಲಿ ಗಮನವನ್ನು ಸೆಳೆದುಕೊಂಡಿತು.

ಕದ ತೆರೆಯಲು ಕಮಲೇಶ್ ಓಡಿದಳು. ಕರಿಯ ಕೋಟು ಜರಿಯಪೇಟ ಧರಿಸಿ, ಪಾದರಕ್ಷೆಗಳ ಪಟಪಟ ಸದ್ದು ಮಾಡುತ್ತಾ, ಕೈಯಲ್ಲಿ ಹತ್ತಾರು ಮೊಕದ್ದಮೆಗಳ ಜೊಂತೆಗಳನ್ನಾಂತು ಒಳಬಂದ ವಕೀಲ ಮಹಾಶಯರು ಜೇಬಿನಲ್ಲಿದ್ದ ಕರವಸ್ತ್ರವನ್ನು ತೆಗೆದು "ಇದನ್ನಿಷ್ಟು ತೊಳೆದುಹಾಕು ಕಮಲೇಶ್!" ಎನ್ನುತ್ತ ಅವಳ ಕೈಗೆ ನೀಡಿದರು.

ಅತೀ ನಶ್ಯ ಸೇವನೆಯಿಂದ ಹೊಲಸುಗೊಂಡಿದ್ದ ಅದನ್ನು ಮುಟ್ಟುವುದು ಸಹ ಅಸಹ್ಯವಾಗಿತ್ತು. ಆದರೂ ತೆಗೆದುಕೊಂಡು ಹೋಗಿ ಸಿಂಕಿನಲ್ಲಿ ಅದ್ದಿ ತೊಳೆದುಹಾಕಿ, ಚಹಕ್ಕೆ ನೀರಿಟ್ಟು, ಮನದಲ್ಲಿ ಮುಂಬೈ ಮಹಾನಗರಿಯ ರೂಪುರೇಷೆಗಳನ್ನು ನೇಯುತ್ತಾ ಕಿಟಕಿಯ ಧೂಳನ್ನು ಝಾಡಿಸಹತ್ತಿದಳು. ಕುಳಿತಲ್ಲಿ ನಿಂತಲ್ಲಿ, ಚೊಕ್ಕಟಗೊಳಿಸುವುದು ಅವಳ ಸ್ವಭಾವ. ಒಮ್ಮೊಮ್ಮೆ ಇಬ್ಬರು ಅಣ್ಣಂದಿರನ್ನೂ ತರಾಟೆಗೆ ತೆಗೆದುಕೊಳ್ಳುತ್ತಿದ್ದುದೂ ಉಂಟು.

"ಅಪ್ಪನಿಗೇನೋ ಬಿಡುವಿಲ್ಲವಾದರೆ ನೀವೇಕೆ ನಿಮ್ಮ ಕೊಠಡಿಯನ್ನು ಚೊಕ್ಕಟವಾಗಿಟ್ಟುಕೊಳ್ಳಬಾರದು ?"

ಆದರೆ ಅವರು ಕೇಳಬೇಕಲ್ಲ ?

ತಕ್ಷಣ ಪ್ರತ್ಯುತ್ತರವೂ ಪುಟ ನೆಗೆದು ಬರುತಿತ್ತು "ಓ........ನೀನಿರುವುದೇಕೊ? ಗಣೆ ಬೆಳೆದ ಹಾಗೆ ಬೆಳೆಯುತ್ತಿದ್ದಿ! ನಾವು ಓದಲೂ ಬೇಕು! ದುಡಿಯಲೂ ಬೇಕು !"

ಅನಾಗರಿಕರಂತೆ ಅವ್ಯವಸ್ಥೆಯಲ್ಲಿ ವಿಜಯ ಸಾಧಿಸುತ್ತಿದ್ದ ಅವರು ಕಿವಿಗೊಟ್ಟರಷ್ಟೆ....ಆ ಕೊಳಕನ್ನು ನೋಡಲಾಗದೆ ತಾನೇ ಅವರ ಕೊಠಡಿಯನ್ನು ಚೊಕ್ಕಟಗೊಳಿಸುವಾಗ ಒಗೆಯುವ ಒಟ್ಟಿಗಳೊಂದಿಗೆ ಒಗೆದ ಒಟ್ಟಿಗಳನ್ನೂ ಸೇರಿಸಿ ಅಜೆಗೆ ಹಾಕಿಬಿಡುವಳು. ಇಬ್ಬರಿಗೂ ಅವಳ ತುಂಟತನ ಗೊತ್ತಿರುತ್ತಿದ್ದುದರಿಂದ ಜಡೆಯನ್ನು ಹಿಡಿದು ಜಗ್ಗಿ ಅವಳಾಗಿ ತಂದುಕೊಡುವಂತೆ ಗೋಳು ಹುಯ್ಯುತಿದ್ದರು. ಅನೇಕ ವೇಳೆ ಸ್ವರ್ಣಮಾಲಿನಿ ಮಗಳಿಗೆ ಸಹಾಯಕಳಾಗಿ ನಿಲ್ಲಬೇಕಾಗುತಿತ್ತು.

ಕಮಲೇಶ್ ಚಹವನ್ನು ತೆಗೆದುಕೊಂಡು ಹೋಗಿ ಎಲ್ಲರಿಗೂ ಕೊಟ್ಟಳು. ಸುರೇಶ ದಲ್ಡಾಲಿ ಮೊಕದ್ದಮೆಯ ಕಟ್ಟುಗಳನ್ನು ಮೇಜಿನ ಮೇಲಿಟ್ಟು ಕಕ್ಷಿಗಾರರೊಂದಿಗೆ ಮಾತನಾಡುತ್ತಾ ಕುಳಿತಿದ್ದರು. ಅವಳು ತನ್ನ ವಿಚಾರ ತರಂಗಾವರ್ತನದಲ್ಲಿಯೇ ಮುಳುಗಿ ತೇಲುತ್ತಾ ಒಳಬಂದ ಕೆಲವೇ ನಿಮಿಷಗಳೊಳಗಾಗಿ ತಂದೆಯ ಕರೆ ಮತ್ತೆ ಕಿವಿಯನ್ನು ತಾಗಿತು. ಆ ಗಂಭೀರ ಧ್ವನಿಯಲ್ಲಿ ಪ್ರಶಾಂತತೆ ತುಂಬಿ ಹರಿದಂತೆ ಕೇಳಿಸುತಿತ್ತು.

"ಕಮಲೇಶ್!"

ಓಗೊಟ್ಟ ಅವಳು ವರಾಂಡಕ್ಕೆ ಹೋದಾಗ ಅಲ್ಲಿ ಇನ್ನಿಬ್ಬರು ನಾಜೂಕಿನ ಉಡುಪು ತೊಟ್ಟ ಕಕ್ಷಿಗಾರರು ಬಂದು ಕುಳಿತುಕೊಂಡಿದ್ದರು. ಅವರ ಉಡಿಗೆ ತೊಡಿಗೆ ಶ್ರೀಮಂತರೆಂಬುದನ್ನು ಸಾರಿ ಹೇಳುತಿತ್ತು. ತಟ್ಟನೆ ಎದುರು ನಿಂತ ಹಾಲ್ಗೆನ್ನೆಗಳ ದೀರ್ಘದೇಹಿಯ ರೂಪಶ್ರೀಯನ್ನು ನಾಲ್ಕು ಕಣ್ಣುಗಳೂ ಎವೆಯಿಕ್ಕದೆ ಹೀರತೊಡಗಿದುವು. ಆ ಅವಿಚಾರಕರ ಕಲುಷಿತ ಕಾಮನೆಯಿಂದ ಅವಳ ಕಾಮನಬಿಲ್ಲಿನಂತಹ ಹುಬ್ಬುಗಳು ಗಂಟಿಕ್ಕಿಕೊಂಡುವು. ಸುರೇಶ್ ದಲ್ಡಾಲಿ "ಇನ್ನೆರಡು ಬಿಸಿ ಚಹಾ ತಾ ಮಗೂ!"

ಇಸ್ಸಿಸ್ಸಿ! ಥೂತ್ಕರಿಸಿತು ಮನಸ್ಸು.

ಕಮಲೇಶ್ ಒಳಗಡೆ ಹೋದಳು. ಚಹ ಮಾಡಿದರೂ ಅದನ್ನು ತಾನೇ ಒಯ್ದು ಕೊಡಲು ಮನಸ್ಸು ಹೇಸಿತು. ಏನು ಮಾಡುವುದೆಂದು ಯೋಚಿಸುವುದರೊಳಗಾಗಿ ಶ್ರೀಧರ ದಲ್ಡಾಲಿ ಒಳ ಬಂದುದನ್ನು ನೋಡಿ 'ಬದುಕಿದೆ' ಎಂದುಕೊಂಡಳು. ಹೃದಯ ಹಗುರವಾಯಿತು.

"ಶ್ರೀ............!"

ಕಮಲೇಶ್ ಅವನ ಬಳಿಗೋಡಿ ಚಹವನ್ನು ಒಯ್ದುಕೊಡಲು ನಲಿಯಿಂದ ಕೇಳಿಕೊಂಡಳು. ಅವನು ಅದನ್ನು ವಹಿಸಿಕೊಂಡರೂ ಪ್ರತಿಫಲವನ್ನು ಯಾಚಿಸಿದ.

"ನನಗೆ ಚಹ ಬೇಕು." ಹುಬ್ಬೇರಿಸಿದ ಶ್ರೀಧರ ದಲ್ಡಾಲಿ.

"ಈಗಷ್ಟೆ ಎರಡು ಬಾರಿ ಚಹ ಮಾಡಿದ್ದಾಯ್ತು. ನಿನಗೆ ಕಾಫಿ ಮಾಡಿಟ್ಟಿದ್ದೇನಪ್ಪಾ! ನೀನು ಹೇಗೂ ಕಾಫಿ ಕುಡಿಯುವವನು."

"ಉಹೂ, ನನಗೆ ಚಹ ಬೇಕು. ಇಲ್ಲದಿದ್ದರೆ ಸಾಧ್ಯವೇ ಇಲ್ಲ!"

"ಸುಮ್ಮಸುಮ್ಮನೆ ಗೋಳು ಹುಯ್ಯಬೇಡ. ನೀನು ಐದು ನಿಮಿಷ ಮುಂದಾಗಿ ಬಂದಿದ್ದರೆ ಇದರೊಂದಿಗೆ ನಿನಗೂ ಮಾಡಬಹುದಿತ್ತು." ಎಂದು ಸಮಾಧಾನಪೂರ್ವಕವಾಗಿ ನುಡಿದಳು ಅವಳು.

"ಉಹೂ ....!" ಗೋಣು ಆಡಿಸುತ್ತಾ ನಿಂತ ಶ್ರೀಧರ.

ಕಮಲೇಶ್ ಕೂಡಲೇ ಒಂದು ಬಸಿ ನೀರನ್ನು ಸ್ಟವ್ ಮೇಲಿಟ್ಟು "ಹೋಗಪ್ಪಾ ಆಗಲೇ ಚಹ ತಣ್ಣಗಾಗುತ್ತಿದೆ. ಇನ್ನೊಂದು ಘಳಿಗೆಯೊಳಗಾಗಿ ನಿನಗೆ ಚಹ ತಯಾರಿಸಿ ಕೊಡುವೆ."

ಅವನು ನಗುಮುಖದಿಂದ ಚಹವನ್ನು ತೆಗೆದುಕೊಂಡು ಹೊರಹೋದೊಡನೆ ಆ ನೀರನ್ನು ಸಿಂಕಿನಲ್ಲಿ ಸುರಿದು ಅದರಲ್ಲಿ ಕಾಫಿಯನ್ನಿಟ್ಟು ಸ್ಟವ್ ನಂದಿಸಿ ತನ್ನ ಕೊಠಡಿಗೆ ಹೋಗಿ ಮುಸುಮುಸು ನಗುತ್ತಾ ಕುಳಿತುಕೊಂಡಳು. ಅವನು ಚಹ ನೀಡಿ ಬಂದನಂತರ ಪಾತ್ರೆ ತೆರೆದು ನೋಡಿದರೆ ಚಹಕ್ಕೆ ಬದಲಾಗಿ ಕಾಫಿ ಇತ್ತು. ತಾನು ಬೇಸ್ತು ಬಿದ್ದರೂ ಬಿಡದೆ ಕಾಫಿಯನ್ನು ಹೀರಿ, ನೇರವಾಗಿ ಅವಳಲ್ಲಿಗೆ ಹೋಗಿ ಜಡೆ ಹಿಡಿದು ಜಗ್ಗಿ "ಈಗ ನೀನೇ ಆ ಬಸಿಗಳನ್ನು ತರಬೇಕು" ಎಂದ, ಕೋಪತಾಪಗಳಿಂದ ಉತ್ತೇಜಿತನಾಗಿ.

ಆದರೆ ಅವಳು ಕೇಳಿಸಿಕೊಳ್ಳಬೇಕಲ್ಲ? ಒಂದೇ ಸಮನೆ ಮುಸು ಮುಸು ನಗುತಿದ್ದಾಳೆ. ಮೋಟು ಜಡೆಯನ್ನು ಅವನು ಎಳೆಯದಂತೆ ಬಿಗಿಯಾಗಿ ಹಿಡಿದುಕೊಂಡು ಆನಂದೋನ್ಮತ್ತೆಯಿಂದ ನಗುತಿದ್ದ ಅವಳ ತುಂಟತನವನ್ನು ನೋಡಿ ಕಿಚ್ಚಿಟ್ಟಂತೆ ಹೊಟ್ಟೆ ಉರಿಯಿತು. ಅಣಕಿಸಿ ಅಂದ "ಅಪ್ಪ ಕರೆಯುತಿದ್ದಾರೆ ಹೋಗು!"

"ನೀನೇ ಹೋಗು! ನೀನು ತಾನೆ ಚಹ ಕೊಟ್ಟವನು?"

ಮರುಘಳಿಗೆಯಲ್ಲಿ ನಿಜವಾಗಿಯೂ ತಂದೆಯ ಧ್ವನಿ ಕೇಳಿಸಿತು. "ಕಮಲೇಶ್!" ಶ್ರೀಧರನಿಗೀಗ ಎಲ್ಲಿಲ್ಲದ ಸಂತಸ. ಕುಣಿಕುಣಿಯುತ್ತಾ– "ನಿನ್ನನ್ನೇ ಕರೆಯುತಿದ್ದಾರೆ, ಹೋಗು!"

ಅವನ ಕಾಟವನ್ನು ತಡೆಯಲಾರದೆ ಕಮಲೇಶ್ ತಾಯಿಯನ್ನು ಕರೆದು ಹೇಳಿದಳು. ಅವಳ ಹೇಳಿಕೆಗೂ ಶ್ರೀಧರ ಮಣಿಯದೆ ಪಟ್ಟು ಹಿಡಿದು ನಿಂತ. ಇಬ್ಬರ ತುಂಟಾಟವನ್ನು ನೋಡಿ ನಗುನಗುತ್ತಾ ತಾನೇ ಬಸಿಗಳನ್ನು ತರಲು ಹೋದಳು ಸ್ವರ್ಣಮಾಲಿನಿ. ಕಮಲೇಶಳಿಗಾಗಿ ಕಾದಿದ್ದ ಅತಿಥಿಯ ಕಣ್ಣುಗಳು

ಸ್ವರ್ಣಮಾಲಿನಿಯನ್ನು ಕಾಣುತ್ತಲೂ ಮಿಡುಕಿ ತಟ್ಟನೆ ನೆಲದೆಡೆಗೆ ಸಿಡಿದುವು.

ಅಂದು ರಾತ್ರಿ ಹಾಲಿನ ತುಂಬು ಬಸಿಯೊಡನೆ ಒಳ ಬಂದ ಕಮಲೇಶ್ ಹೊರ ಹೋಗದೆ ನಿಂತುದನ್ನು ನೋಡಿ "ಏನಮ್ಮಾ?" ಎಂದರು ದಲ್ವಾಡಿ ಮಹಾಶಯ-ಮೆಡಿಕಲ್ ಕಾಲೇಜಿಗೆ ಸೇರಲು ಇನ್ನೊಮ್ಮೆ ಕೇಳಲೆಂದೇ ನಿಂತಿದ್ದಾಳೆಂಬ ಭಾವನೆಯಿಂದ. ಒಂದು ಗುಟುಕು ಹಾಲನ್ನು ಹೀರಿ ಉತ್ತರಕ್ಕಾಗಿ ಅವಳ ಮುಖವನ್ನೆ ನಿಟ್ಟಿಸಿದಾಗ ಕೈಯಲ್ಲಿ ಬಿಚ್ಚಿ ಹಿಡಿದ ಮೊಕದ್ದಮೆಯ ಬೊಂತೆ ಹಾಗೇ ಉಳಿಯಿತು.

ಕಮಲೇಶ್ ಮೆಲ್ಲನೆ ತನ್ನ ಬೇಡಿಕೆಯನ್ನು ಮುಂದಿಟ್ಟಳು. ನುಡಿ ಕೇಳಿ ಒಮ್ಮೆಲೇ ಹೌಹಾರಿತು ವೃದ್ಧ ಜೀವ. "ಓಹೋ! ನೆರೆಮನೆಯೇನು ಮುಂಬೈ?"

ಆ ನಿಶ್ಚಲಮೂರ್ತಿಯಲ್ಲಿ ಎಂತಹ ಕಾಠಿಣ್ಯ ಹೃದಯವಿತ್ತೋ ಅಷ್ಟೇ ದೃಢವಾದ ಮನಸ್ಸು ಇಲ್ಲವೆಂಬುದನ್ನು ಕಮಲೇಶ್ ಬಲ್ಲವಳಾದರೂ ಅಲ್ಲಿ ನಿಲ್ಲದೆ ಒಳಗಡೆ ಹೋದಳು. ಸುರೇಶ ದಲ್ವಾಡಿ ವಿಚಲಿತರಾಗದೆ ಹಾಲನ್ನು ಗುಟುಕಿಸ ತೊಡಗಿದರು. ಮನಸ್ಸು ಯೋಚನಾವಳಿಯಲ್ಲಿ ಸಿಕ್ಕಿ ಅಂಡಲೆಯ ತೊಡಗಿದುದರಿಂದ ಯಾವ ನಿರ್ಣಯಕ್ಕೂ ಒಮ್ಮೆಲೇ ಬರಲಾಗಲಿಲ್ಲ. ಹಾಲು ಸಕ್ಕರೆಯ ಸವಿಯಲ್ಲಿ ಸ್ವಲ್ಪ ಹೊತ್ತು ಉರುಳಿತು.

ಕಾಸು ಕಾಸನ್ನೂ ಅಮೂಲ್ಯವಾಗಿ ಪರಿಗಣಿಸುವ ದಲ್ವಾಡಿ ಮಹಾಶಯ ಮಗಳು ಮುಂಬೈ ಪಯಣ ಬಯಸಿದುದನ್ನು ಸಾಮಾನ್ಯವೆಂದು ಭಾವಿಸಲಿಲ್ಲ. ವೃಥಾ ಅಷ್ಟು ಹಣ ಖರ್ಚು ಮಾಡುವುದು ವಿಹಿತವಲ್ಲವೆನಿಸಿದರೂ ಅದೇ ನೇರಕ್ಕೆ ಸತ್ಯಭಾಮಳ ಸ್ಥಿತಿಗತಿ ಮನದಾಳದಲ್ಲಿ ಚಿಂತೆಯನ್ನು ಮೂಡಿಸಿತು ಮುಂಬೈಗೆ ಅವಳಿಗೋಸುಗ ಯಾರೂ ಇಲ್ಲಿಂದ ಹೋಗದುದರಿಂದ ಅವಳಿಗೂ ಅಪಾರವಾದ ವ್ಯಥೆಯುಂಟಾಗಿದೆ. ಅಲ್ಲದೆ ಅವಳನ್ನು ಕರೆಸಿ ಮೂರು ವರ್ಷಗಳಾದುವು. ಅವಳನ್ನು ಕರೆಸುವುದಕ್ಕಿಂತ ಇವಳನ್ನೇ ಕಳುಹಿಸುವುದು ಉಳಿತಾಯ ದೃಷ್ಟಿಯಿಂದಲೂ ಅನುಕೂಲ........ಅದೇ ಚಂದ್ರಮುಖಿ ಆಗಾಗ್ಗೆ ಬರುತ್ತಿರುತ್ತಾಳೆ. ಇಲ್ಲಿಂದಲೂ ಯಾರಾದರೂ ಹೋಗಿ ಬರುವುದುಂಟು. ಸತ್ಯಭಾಮ ತಪ್ಪುಮಾಡಿ ಹುಟ್ಟಿದಳು........ಎಂಬ ಯೋಚನೆ ಬಂದು ಅಶಾಂತ ಕ್ಷೋಭೆಯಿಂದ ಮುಖಮಂಡಲ ಮುದುಡಿಕೊಂಡಿತು.

ಕಮಲೇಶ್ ತಾಯಿಯೊಂದಿಗೆ ಒಳಗಿನ ಕೆಲಸ ಬೊಗಸೆ ಮುಗಿಸುವಷ್ಟ

ರಲ್ಲಿ ತಂದೆಯ ಉಚ್ಚಸ್ವರ ಕಿವಿಯನ್ನು ತಾಗಿತು. ಖಾಲಿಯಾದ ಹಾಲಿನ ಬಸಿಯನ್ನು ತಂದಿರಲಿಲ್ಲವಾದುದರಿಂದ ಕರೆ ಅದಕ್ಕಾಗಿಯೇ ಇರಬಹುದೆಂದು ಹೋದಳು. ಮನದಲೆಯಲ್ಲಿ ಲೌಕಿಕ ವ್ಯವಹಾರ, ಯುಗಧರ್ಮದ ಧ್ಯೇಯ, ಜೀವನಧರ್ಮದ ತಾಕಲಾಟಗಳ ತಾನವಿತಾನಗಳು ಧಾಳಿಯೆಬ್ಬಿಸಿದ್ದುವು. ವಕೀಲ ಮಹಾಶಯರು ಕಣ್ಣಿನ ಮೇಲೆ ಕನ್ನಡಕ ಏರಿಸಿ ರಿಕಾರ್ಡುಗಳನ್ನು ತದೇಕ ಚಿತ್ತದಿಂದ ನೋಡುತ್ತಲೇ ಇದ್ದಾರೆ. ಈ ಜಗತ್ತಿನ ಇನ್ನಾವ ವ್ಯವಹಾರಗಳೂ ಗಮನಕ್ಕೆ ಬಾರದಷ್ಟು ಮೊಕದ್ದಮೆಯ ಸಾಹಿತ್ಯದಲ್ಲಿ ಮುಳುಗಿದ್ದ ಗಮನ ಮಗಳು ಲೋಟಕ್ಕೆ ಕೈಹಾಕುತ್ತಲೂ ವಿಮುಖವಾಯಿತು.

"ನೀನು ಹೋಗಲೇ ಬೇಕೇನಮ್ಮಾ?" ಕೊರಳೆತ್ತಿ ಕೇಳಿದರು, ದಲ್ಲಾಲಿ ಮಹಾಶಯ.

ಕಮಲೇಶ್ ಮಾತಾಡದೆ ಮುಗುಳು ನಕ್ಕಳು.

ಸುರೇಶ ದಲ್ಲಾಲಿ ವಿಷಯವನ್ನು ಇನ್ನೊಮ್ಮೆ ಪರ್ಯಾಲೋಚಿಸಿ ಒಪ್ಪಿಗೆಯನ್ನು ಕೊಟ್ಟಾಗ ಕಮಲೇಶಳಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯಿತು. ಆನಂದೋನ್ಮತ್ತಳಾಗಿ ಲೋಟದೊಡನೆ ಒಳ ಹೋದಳು.

ಮರುದಿನ ಮುರಳೀಧರ ಲಾ ಕಾಲೇಜನ್ನು ಮುಗಿಸಿಕೊಂಡು ಮನೆಗೆ ಮರಳುವಷ್ಟರಲ್ಲಿ ಕಮಲೇಶ್ ಬಟ್ಟೆಗಳನ್ನು ಇಸ್ತ್ರಿಮಾಡುವುದರಲ್ಲಿ ಮಗ್ನಳಾಗಿದ್ದುದನ್ನು ನೋಡುತ್ತಲೂ ಅವನಿಗಿಷ್ಟು ಗೋಳು ಹುಯ್ಯಬೇಕೆನಿಸಿತು ಅವನಿಗೆ. ತನ್ನ ಕೆಲವಾರು ಬಟ್ಟೆಗಳನ್ನು ಕಲೆಹಾಕಿ ಅವಸರಪಸರವಾಗಿ ತಂದು ಅವಳ ಬಟ್ಟೆಗಳನ್ನತ್ತ ತಳ್ಳಿ "ನನ್ನದೀಗ ಆಗಲೇಬೇಕು. ಬಹಳ ಅರ್ಜೆಂಟ್!" ಎಂದ ಗಂಭೀರ ಘೋಷದಿಂದ.

"ನಿಜವಾಗಿಯೂ?"

"ಹೌದು....ರಾಣೀ!" ಹುಸಿನಗು ಬೀರಿದ ಮುರಳಿ.

"ಆಗಲಿ, ರಾಜಾ." ಅದೇ ಧಾಟಿಯಲ್ಲಿ ಬಿತ್ತರಿಸಿದಳು ಕಮಲೇಶ್.

ಅವನಿಗೆ ಬಹಳ ಅಗತ್ಯವಿರಬಹುದೇನೋ ಎಂದುಕೊಂಡು ಸುಮ್ಮನಾದರೆ ಅಲ್ಲಿಗೂ ಬಿಡದೆ "ನನಗೊಂದಿಷ್ಟು ನೋಟ್ಸ್ ಬರೆಯುವುದಿದೆ. ನೀನೇ

ಮಾಡು" ಅಂದ. ಆದನ್ನೂ ಸಹ ನಿಜವೆಂದು ನಂಬಿ ಪೂರ್ಣ ಲಕ್ಷ್ಯವಿಟ್ಟು ಪ್ಯಾಂಟನ್ನು ಓರಣವಾಗಿ ಮಡಿಸುತಿದ್ದ ಅವಳಿಗೆ ಸಹಾಯ ಮಾಡುವ ನೆವದಲ್ಲಿ ಮೈಗೆ ಮೈ ಹಚ್ಚಿನಿಂತು ಹಾಗೂ ಹೀಗೂ ಕೈಯಾಡಿಸಿ, ಬೆನ್ನಿಗೊಂದು ದೊಡ್ಡ ಅಕ್ಷರಗಳಲ್ಲಿ ಬರೆದ ಚೀಟಿಯನ್ನು ಗುಂಡು ಸೂಜಿಯುಲ್ಲಿ ಸಿಕ್ಕಿಸಿ ಮೆಲ್ಲನೆ ಅಲ್ಲಿಂದ ಜಾರಿದ. ಆಗ ಜಗತ್ತೇ ಮಧುಮಯವಾಗಿ ರಾಗಮಯವಾಗಿ ತೋರಿತು ಮುರುಳಿಗೆ.

"Big fat fool!"

ಅವನ ಸಂಚನ್ನರಿಯದೆ ವರ್ಣಮಯ ಬಟ್ಟೆಗಳನ್ನು ಇಸ್ತ್ರಿಮಾಡುತ್ತಲೇ ಇದ್ದಾಳೆ. ಪಕ್ಕದ ಆಫೀಸಿನಲ್ಲಿ ಕೆಲಸ ಮಾಡುತಿದ್ದ ಶ್ರೀಧರ ದಲ್ಲಾಲಿ ಗುಟುಕು ಚಹಕ್ಕಾಗಿ ಹತ್ತೂವರೆಗೆ ಮನೆಗೆ ಬರುವುದುಂಟು. ಹಾಗೆ ಬಂದವನೇ ಅಣ್ಣನ ಬಟ್ಟೆಗಳನ್ನು ನಾಜೂಕಾಗಿ ಇಸ್ತ್ರಿಮಾಡುತಿದ್ದ ತಂಗಿಯನ್ನೂ ಅವಳ ಬೆನ್ನಿನ ಮೇಲಿದ್ದ ಚೀಟಿಯನ್ನೂ ನೋಡಿ ನಗುವಿನ ಗುಲ್ಲೆಬ್ಬಿಸಿದ. ದನಿ ಕೇಳಿ ಸ್ವರ್ಣಮಾಲಿನಿ ಅಡುಗೆಯ ಮನೆಯಿಂದ ಹೊರ ಬಂದಳು. ಮುರುಳಿಯೂ ಸದ್ದಿಲ್ಲದೆ ಬಂದು ನಿಂತ. ಕಮಲೇಶಳಿಗೆ ಅಚ್ಚರಿಯೋ....ಅಚ್ಚರಿ.

ನಿಶ್ಯಬ್ದ ಪ್ರಕೃತಿಯ ಅಂತರಾಳದಲ್ಲಿ ಕೋಲಾಹಲವೆದ್ದಿತು....ಏನಿರಬಹುದು ?

"ನಿನ್ನ ಬೆನ್ನಿನ ಮೇಲೆ ನೋಡು, ಏನು ಹಚ್ಚಿದಾನೆ ?" ಸ್ವರ್ಣಮಾಲಿನಿ ನಕ್ಕು ನುಡಿದಳು. ಆ ಶಾಂತ ಸ್ನಿಗ್ಧ ಸುಂದರ ನಗೆ ಸ್ವಚ್ಛಂದವಾಗಿತ್ತು.

ಕಮಲೇಶ್ ಬೆನ್ನಿನ ಮೇಲೆ ಕೈಯಾಡಿಸಿ ಚೀಟಿಯನ್ನು ತೆಗೆದೊಡನೆ ಆವರಿಬ್ಬರೂ ಕಿಲಕಿಲ ನಗುವಿನ ಗುಲ್ಲೆಬ್ಬಿಸಿದರು. ಕಮಲೇಶ್ ಹುಬ್ಬು ಗಂಟಿಕ್ಕಿದರೂ ಅವರ ಸವಿ ನಗೆಯಲ್ಲಿ ಪಾಲ್ಗೊಂಡಳು. ಅಣ್ಣಂದಿರಿಬ್ಬರೂ ಬಾರಿ ಬಾರಿಗೂ ಹಂಗಿಸಿದರು.....Big fat fool !

ಅಧ್ಯಾಯ

೪

ಪಯಣದ ತೀವ್ರವೇಗ ಕಡಿಮೆಯಾಗಿ ನಿಧಾನಿಯಾದ ಹೆಬ್ಬಾವಿನಂತೆ ಮಂದಗತಿಯಲ್ಲಿ ನಿಲ್ಮನೆಯನ್ನು ಸೇರಿತು ರೈಲು. ಅಹೋರಾತ್ರಿಯ ಸುದೀರ್ಘ ಪಯಣ ಕೊನೆಗೊಂಡು ಮುಂಬೈ ನಿಲ್ದಾಣವನ್ನು ತಲುಪಿದಾಗ ಕಮಲೇಶಳ ಹೃದಯ ಆನಂದದ ಆಗರವಾಯಿತು. ಅಪಾರವಾದ ಜನ ಸಂದಣಿಯಲ್ಲಿ ಅಕ್ಕ ಭಾವಂದಿರಿಗಾಗಿ ಉತ್ಕಂಠಿತ ನಯನಗಳು ತಡುಕಿದುವು. ರೈಲಿನಿಂದ ಗಡಬಡಿಸಿ ಇಳಿಯುವ ಹತ್ತುವ ಜನ ಜಂಗುಳಿಯ ಮಧೆ ಬೆರೆತು ನಿಂತ ಅವರು ಸ್ವಲ್ಪ ಸಮಯ ಕಂಡುಬರಲಿಲ್ಲ. ಅನಂತರ ಅವರ ಕುತೂಹಲತೃಷಿತ ನೋಟವು ಡಬ್ಬಿಯಿಂದ ಡಬ್ಬಿಗೆ ಹರಿಯುತಿದ್ದುದನ್ನು ಕಂಡು ಆನಂದಾತಿರೇಕ ದಿಂದ ಕೈಯೆತ್ತಿ ಕರವಸ್ತ್ರವಾಡಿಸಿ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಳು ಕಮಲೇಶ್.

"ಓ....ಕಮಲೇಶ್ !" ಪ್ರೇಮಭಾವದಿಂದ ಕರೆದ ಹೃದಯ ತುಂಬಿ ಬಂತು. ಸತ್ಯಭಾಮ ಪುಳಕಿತಳಾದಳು.

"ಸತ್ಯಾ....!" ಅಲ್ಲಿಂದಲೇ ಕೇಕೆ ಹಾಕಿದಳು ಕಮಲೇಶ್. ಸ್ವರ ಉಲ್ಲಾಸ ಪೂರ್ಣವಾಗಿತ್ತು.

ವನಮಾಲಿ ತನ್ನ ಸಾಮಾನನ್ನು ಇಳಿಸಿಕೊಂಡ ಬಳಿಕ ಗೆಳತಿಯಿಂದ ಬೀಳ್ಕೊಂಡು ಹೊರಟಳು. ಶ್ರೀಪತಿ ಬಳಿಗೆ ಬಂದವನೆ, "ಏನಮ್ಮಾ, ಬಹಳ ದೊಡ್ಡ ಮನಸ್ಸುಮಾಡಿ ಹೊರಟದ್ದಿ? ಎಂದ. ಮುಖದಲ್ಲಿ ಮಂದಹಾಸ ಮಿನಗಿ ಮಾಯವಾಯಿತು, ಗಗನಾಂಗಣದಲ್ಲಿ ಫಳಕ್ಕನೆ ಮಿಂಚುವ ಮಿಂಚಿ ನಂತೆ.

ಭಾವ ಶ್ರೀಪತಿಯನ್ನು ಐದಾರು ವರ್ಷಗಳಿಂದ ನೋಡಿರಲಿಲ್ಲ. ಎಂದಾದ ರೊಮ್ಮೆ ತನ್ನ ಕಷ್ಟ ಕಾರ್ಪಣ್ಯಗಳನ್ನು ಮುಂದಿಟ್ಟು ಅಪ್ಪನಿಗೆ ಬರೆಯುತಿದ್ದ ಕಾಗದಗಳಿಂದ ಆತನ ಮನೋಧರ್ಮದ ಪರಿಚಯವಿದೆ. ಹೆಂಡತಿ ಮಕ್ಕಳ ರಕ್ಷಣೆಯ ಹೆಸರಿನಲ್ಲಿ ಅಪ್ಪನಿಂದ ಹಣ ಕಸಿಯುವ "ಸಣ್ಣತನ" ಆತನಲ್ಲಿ

ಹೇಳರವಾಗಿದ್ದುದು ಸತ್ಯಭಾಮೆಗೆ ಸಂಕಟ. ಕುಟುಂಬಿಗರಿಗೆ ಕೋಪ; ತಾತ್ಸಾರ....ಕ್ಲಬ್ಬಿನ ಹವ್ಯಾಸದಿಂದ ಮುಂಬೈ ಶ್ರೀಮಂತ ಸಮಾಜದ ಸದಸ್ಯನಾಗುವ ಬಯಕೆಯೊಂದಿಗೆ ಜೀವನೋದ್ದೇಶವನ್ನು ಸುಲಭವಾಗಿ ಪಡೆಯುವ ಹುಚ್ಚೂ ಇದೆ. ಉನ್ನತ ಪ್ರಮಾಣದಲ್ಲಿ ಜೀವನದ ಸಾರವನ್ನುಂಡಿದ್ದರೂ ಲಾಲಸೆಯನ್ನು ನಿಯಂತ್ರಣಕ್ಕೊಪ್ಪಿಸುವ ಮನೋಭಾವ ಅವನಲ್ಲಿಲ್ಲ. ಹೆಜ್ಜೆಗೆ ಪರಿಮಿತಿಯನ್ನು ನಿರ್ಮಿಸಿಕೊಳ್ಳುವುದನ್ನು 'ಸಂಯಮ' ಅಥವಾ 'ನಿಗ್ರಹ' ಎನ್ನುವಂತಿದ್ದರೆ ಅದರಿಂದ ವ್ಯಕ್ತಿಗೆ ಇರಬಹುದಾದ ಗೌರವವೇ ಹೋಗಬಹುದು ಎಂಬುದು ಅವನ ತೀವ್ರ ಶಂಕೆ....ಮೋಹ ಮಮತೆಗಳೇ ಮಂಗಳದ ಕಡೆಗೊಯ್ಯುವ ಸಮನ್ವಯ ಶಕ್ತಿ. ಗಣನೀಯವಾದ ರಸೋಲ್ಲಾಸ ಕ್ರೀಡೆಗಳೇ ಸ್ವರ್ಗಕ್ಕೆ ಸೋಪಾನ ಎಂಬಷ್ಟು ವಿಭಿನ್ನ ದೃಷ್ಟಿ....ಅರ್ಥರಹಿತವಾದ ಸಂಕಲ್ಪ....ಅಸಫಲತೆಯ ಕ್ರೋಧ....ನಾಗರಿಕ ಜಗತ್ತಿನ ನಾಗರಿಕ ಸಂಪತ್ತಿಯ ಮೇಲೆ ಅಸೀಮ ಪ್ರೇಮ....ಈ ಎಲ್ಲಾ ಗಣನೀಯ ಗುಣಗಳ ಉನ್ಮಾದದಲ್ಲಿ ಆತ್ಮ ಪ್ರದೀಪವನ್ನು ನಿರ್ಲಕ್ಷಿಸುವ ಮಹನೀಯ....

ಟ್ಯಾಕ್ಸಿ ಹೊರಟಿತು.

ಕಮಲೇಶಳ ವಿಚಾರಪರ ದೃಷ್ಟಿ ಮುಂಬೈ ನಗರಿಯ ವಿಶೇಷವನ್ನು ಗಮನಿಸುತಿತ್ತು. ಹಾದಿಯಲ್ಲಿ ಅವಸರವಸರವಾಗಿ ಹೆಜ್ಜೆ ಹಾಕುವ ಜನ.... ಕಷ್ಟ ಕಾರ್ಪಣ್ಯಗಳ ಭರಾಟೆಯಲ್ಲಿ ಸಿಕ್ಕಿ ಜೋಲು ಬಿದ್ದ ಮುಖಗಳು....ಕಾರ್ಯ ಭಾರದ ಒತ್ತಡದಿಂದ ವಯಸ್ಸಿಗೆ ಮುನ್ನ ಮುಪ್ಪು ಆವರಿಸಿದ ಜನ...ನಗುಮುಖದ ನಲ್ಲನಲ್ಲೆಯರು....ಅಪ್ರಬುದ್ಧ ತರುಣ ತರುಣಿಯರು....ನಿಗಿನಿಗಿ ನಲಿಯುವ ಮಕ್ಕಳು....ನಾನಾ ಭಾಷೆಗಳು....ನಾನಾ ವರ್ಣೀಯರು ನಾನಾ ವೇಷಭೂಷಣಗಳು, ಒಂದಲ್ಲ, ಹತ್ತಲ್ಲ, ಜೀವನದ ನಾನಾ ಮುಖಗಳು ಒಂದೇ ಬಾರಿಗೆ ತೋರಿ ಬಂದುವು.

ಇಕ್ಕೆಲಗಳ ಹಿರಿಯ ಕಟ್ಟಡಗಳನ್ನು ಹಿಂದೆ ಹಾಕಿ ಮುಂದೆ ಓಡಿತು ಟ್ಯಾಕ್ಸಿ. ಕಿವಿ ಕಿವುಡಾಗುವಷ್ಟು ಸದ್ದುಗದ್ದಲಗಳ ಪರಂಪರೆ....ಟ್ಯಾಕ್ಸಿಯ ಮುಂದೆ ಓಡುತ್ತಿದ್ದ ಸಿನಿಮಾ ವ್ಯಾನಿನ ಚಿತ್ರಭಿತ್ತಿಯಲ್ಲಿ ದುಷ್ಟ ಸಮಾಜದ ಖಡ್ಗಹತಿಗೆ ಸಿಕ್ಕಿ ಆರ್ತನಾದಗೈಯ್ಯುತ್ತಿರುವ ಅಬಲೆಯ ದಾರುಣ ಚಿತ್ರ ನೋಡುವವರ ನೆತ್ತರು ಹೆಪ್ಪುಗಟ್ಟುವಂತೆ ಚಿತ್ರಿಸಲ್ಪಟ್ಟಿದೆ. ನೋಡುನೋಡುತಿದ್ದಂತೆ ದೇಶದ ಅಬಲೆಯರೆಲ್ಲ ಮನದಲೆಯಲ್ಲಿ ಘೇರಿ ನಡೆಸಿದರು.

ಯೋಚನೆಯಲೆಯಲ್ಲಿ ಸಿಕ್ಕಿ ನೈಮರೆತಳು ಕಮಲೇಶ್. ಚಿದಾಕಾಶದಲ್ಲಿ ವಿಚಾರ ತರಂಗಗಳ ಉನ್ಮತ್ತ ಬಿರುಗಾಳಿ ಬೀಸತೊಡಗಿತು.

ಈ ದೇಶದಲ್ಲಿ ಅಖಿಲ ಸ್ತ್ರೀ ಜಾತಿಗೆ ಮುಕ್ತಿ ಎಂಬುದೇ ಇಲ್ಲ....ಗಂಡಸು ಎಷ್ಟೇ ದುಷ್ಟನಾದರೂ ದುರ್ಮಾರ್ಗಿಯಾದರೂ ಅವನಿಗೆ ಸಮಾಜ ಸ್ವಾಗತ ನೀಡುತ್ತದೆ. ಆದರೆ ಹೆಣ್ಣಿನ ಪಾಲಿಗೆ ಎಲ್ಲರ ಹೃದಯ ಕವಾಟಗಳೂ ಮುಚ್ಚಲ್ಪಡುತ್ತವೆ. ಒಂದು ವೇಳೆ ಅವಳು ದುರ್ಮಾರ್ಗದಿಂದ ಸತ್ಪ್ರವರ್ತನೆಗೆ ತೊಡಗಿದರೂ ತೊಡಗುವೆನೆಂದರೂ ಮೋಕ್ಷವಿಲ್ಲ....ಆಕೆ ವಿದ್ಯಾಬುದ್ಧಿಗಳಿಲ್ಲದೆ ಪರತಂತ್ರಳಾಗಿ ಅಜ್ಞಾನ ಪ್ರೇರಣೆಯಿಂದ ತಪ್ಪು ಹೆಜ್ಜೆ ಇಟ್ಟಳೆಂಬುದೂ ಸಹ ಗಣನೀಯವಲ್ಲ; ತುಲನಾತ್ಮಕವಲ್ಲ. ಆಕೆ ಆತ್ಮ ಸಂಕಟದಿಂದ ಬದುಕಿ ಕಂಬನಿಯ ಕೋಡಿಯಲ್ಲಿ ಮಿಂದರೂ ಆಕೆಯ ಪಾಲಿಗೆ ಸಮಾಜ ನೀಡುವುದು ದಯಾದಾರಿದ್ರ್ಯ....

"ಏನಮ್ಮಾ, ಬಹಳವಾಗಿ ಯೋಚಿಸುತಿದ್ದಿ ?"

"ಮುಂಬೈ ನೋಡಿ ಗಾಬರಿಯಾದೆಯೇನು ?"

ಅಕ್ಕ ಭಾವಂದಿರ ಪ್ರಶ್ನೆಗಳು ಏಕಕಾಲದಲ್ಲಿ ಹೊರಬಿದ್ದಾಗ ಯೋಚನಾಲಹರಿ ತುಂಡುಗಡಿಯಿತು. ಇಬ್ಬರಿಗೂ ಎಂಬಂತೆ ಮೃದು ಮಧುರವಾಗಿ ಉತ್ತರಿಸಿದಳು ಕಮಲೇಶ್ "ಹಾಗೇನಿಲ್ಲ."

ಮುಖಮಂಡಲದ ಮೇಲೆ ಶುದ್ಧ ಗಾಂಭೀರ್ಯದ ಸ್ಥಿರತೆ ಕಾಣುತಿತ್ತು.

"ಹೇಗೂ ಬಂದಿದ್ದಿ, ಬೇಸಗೆ ರಜೆ ಕಳೆಯುವವರೆಗೂ ಇದ್ದುಹೋಗು ಕಮಲೇಶ್" ಉಕ್ಕಿಬಂದ ಆನಂದಾತಿಶಯದಿಂದ ನುಡಿದಳು ಸತ್ಯಭಾಮ.

"ನೋಡೋಣ...."

ಶ್ರೀಪತಿ ಅವಳ ಮನೋಭಾವನೆಗಳನ್ನವಲೋಕಿಸಿ ಸುಮ್ಮನಾದ.

"ನೀನಿಲ್ಲದೆ ಮಾ–ಗೆ ಬೇಸರವಾಗಿರಲಿಕ್ಕೂ ಸಾಕು."

"ಇಲ್ಲ ಸತ್ಯಾ....ದೆಹಲಿಯಿಂದ ಹೇಮರತಿ ಮಾಮಿ ಬಂದಿದ್ದಾರೆ....ಚಿಕ್ಕ ಮಕ್ಕಳಿಗೆ ನೈಮೇಲೆ ಬೊಬ್ಬೆ ಎದ್ದುದರಿಂದ ಅಲ್ಲಿರಲಾಗದೆ ಇಲ್ಲೇ ಒಂದೆರಡು ತಿಂಗಳು ಇರುವ ಯೋಚನೆ ಅವರದು. ಕೈ ಮಗುವನ್ನೂ, ಸುಚಿತ್ರಸೇನನನ್ನೂ ಕರೆತಂದಿದ್ದಾರೆ. ಚಿತ್ರಸೇನ ತಂದೆಯೊಂದಿಗೆ ಅಲ್ಲೇ ಉಳಿದಿದ್ದಾನೆ.... ಇನ್ನೆಲ್ಲಿಯ ಬೇಸರ ?"

"ಓಹೋ! ಕೈಮಗು ಹೆಣ್ಣೋ ಗಂಡೋ?"

"ಇದೂ ಗಂಡೇ. 'ಬಸಂತಸೇನ' ಎಂದು ಹೆಸರಿಟ್ಟಿದ್ದಾರೆ, ಮಗು ತುಂಬ ಮುದ್ದಾಗಿದೆ."

"ಅವರ ಮಕ್ಕಳೆಲ್ಲ ಮುದ್ದು! ನಾ–ಗೆ ಗೆಳತಿಯ ಆಗಮನದಿಂದ ಬಹಳ ಸಡಗರವಾಗಿರಬಹುದು!"

"ಓಹೋ...."

ಇಬ್ಬರ ಮುಖದಲ್ಲೂ ಹಸನಾದ ಕಿರುನಗೆ ಅರಳಿತು.

ಮನೆಯ ಮುಂದೆ ಟ್ಯಾಕ್ಸಿ ನಿಂತಿತು. ಬಾಗಿಲನ್ನು ತೆಗೆದು ಹೊಂದಾವರೆಯಂತಹ ಜೋಡಿ ಹೆಜ್ಜೆಗಳನ್ನು ಮೊದಲು ಹೊರನೀಡಿ ಇಳಿದಳು ಕಮಲೇಶ್. ಮುಗಿಲೆತ್ತರಕ್ಕೆ ಏರಿ ನಿಂತ ಗೃಹ ಶ್ರೇಣಿಗಳು ಮನವನ್ನು ಸೂರೆಗೊಂಡುವು. ಟ್ಯಾಕ್ಸಿವಾಲ ಪೆಟ್ಟಿಗೆಯನ್ನು ಹೊರಗಿಟ್ಟಾಗ ಗಮನ ಅತ್ತ ಹೊರಳಿತು. ಶ್ರೀಪತಿ ಪೆಟ್ಟಿಗೆಗೆ ಕೈ ಹಚ್ಚುತ್ತಲೂ "ಆಗಲೂ ನೀವೇ ಹೊತ್ತಿದ್ದೀರಿ. ಈಗ ನಾನು ತೆಗೆದುಕೊಳ್ಳುವೆ." ಎಂದಳು ಅನುನಯದಿಂದ.

"ಹ್ಞಾ....ನೀನು ತೆಗೆದುಕೊಳ್ಳುವುದಾದರೆ ನನ್ನ ಅಡ್ಡಿಯಿಲ್ಲ."

"ನಿನ್ನಿಂದಾಗದು ಕಮಲೇಶ್. ಪೆಟ್ಟಿಗೆಯ ಸಹಿತ ನೀನು ಅಷ್ಟೊಂದು ಮೆಟ್ಟಿಲನ್ನು ಹತ್ತಲಾರೆ." ನಡುವೆ ಬಾಯಿ ಹಾಕಿದಳು ಸತ್ಯಭಾಮ.

ಶ್ರೀಪತಿ ಹುಬ್ಬು ಹಾರಿಸಿ ನಕ್ಕ.

"ಈಗ ನೀವು ಹೇಗೂ ತೆಗೆದುಕೊಂಡಿದ್ದೀರಷ್ಟೆ, ಮೇಲೆ ಕೊಟ್ಟುಬಿಡಿ." ಶ್ರೀಪತಿ ಪೆಟ್ಟಿಗೆಯ ಸಹಿತ ಸರಸರ ಮೆಟ್ಟಿಲೇರಿದ.

ಮುಂಬೈ ಜೀವನ ಪರಿಸ್ಥಿತಿ ನಾರೀ ಅಂತರಂಗಕ್ಕೆ ಸಂಬಂಧಿಸಿದ ಅದ್ಭುತವಾದ ಜೈಲು; ಅಭಿಷಾಪದ ಕಣ. ಆಹಾರ ವಿಹಾರಗಳು, ಅನುದಿನದ ಸಾಮಾನ್ಯ ಆವಶ್ಯಕತೆಗಳು, ಗೃಹಕಾರ್ಯಗಳು, ಮಿಗಿಲಾಗಿ ಯಾಂತ್ರಿಕ ಜೀವನದ ತಾಕಲಾಟ, ಒಂದೆಡೆಯಿಂದ ಒಂದೆಡೆಗೆ ಹೋಗಿ ಬರುವುದರಲ್ಲಿ ಇರಬಹುದಾದ ಅಡಚಣೆ, ಅಸಹಾಯಕತೆ ಆಲೋಚನಾತೀತವಾದ ವಿಷಯ ಪರಿಸ್ಥಿತಿಯನ್ನು ಸುಧಾರಿಸಲಾಗಲೀ ಅಥವಾ ಕುರಿತು ಯೋಚಿಸಲಾಗಲೀ ಸಮಯ, ಸಹನೆ ಎರಡೂ ಇಲ್ಲದಂತಹ ಪ್ರಜೀವನ.

ಟ್ಯಾಕ್ಸಿಯವನಿಗೆ ಹಣ ಕೊಟ್ಟು ಹಿಂದಿರುಗುವುದರೊಳಗಾಗಿ ಮೇಲಿ

ನಿಂದ ತುಂಬುಗರ್ಭಿಣಿಯನ್ನು ಇಬ್ಬರು ಹಿರಿಯ ಹೆಂಗಸರು ಇಳಿಸಿಕೊಂಡು ಬರುತ್ತಿರುವುದು ಕಾಣಬಂತು. ಆಗಲೇ ತೀವ್ರ ನೋವು ಆರಂಭವಾಗಿದೆ. ಇಳಿಯಲಾರದೆ ಇಳಿದು ಬರುವ ಅಂಗನೆಯನ್ನು ನೋಡಿ ಮನಸ್ಸು ಮಂಜಿನಂತೆ ಕರಗಿ, ಅಂತರಂಗದಿಂದ "ಪಾಪ...." ಎಂಬ ಕರುಣಾಪೂರಿತ ಧ್ವನಿ ಹೊರಬಿತ್ತು.

"ಟ್ಯಾಕ್ಸಿ ಗೊತ್ತುಮಾಡಿದ್ದೀರಾ ?" ಕೇಳಿದಳು ಸತ್ಯಭಾಮ.

"ಇಲ್ಲಮ್ಮಾ, ಅನಿರೀಕ್ಷಿತವಾಗಿ ನೋವು ಆರಂಭವಾದುದರಿಂದ ಯಾವುದಕ್ಕೂ ಸಮಯವಿಲ್ಲದೆ ಹೋಯಿತು. ಮೊದಲು ಮೆಟ್ಟಿಲು ಇಳಿಸಿಕೊಂಡದ್ದು ಒಂದು ದೊಡ್ಡ ಗಂಡಾಂತರವನ್ನು ಕಳೆದಂತಾಯಿತು" ದುಗುಡ ಮಿಶ್ರಿತ ದನಿಯಲ್ಲಿ ನುಡಿದಳು ಹಿರಿಯಾಕೆ.

ತಾವು ಬಂದ ಟ್ಯಾಕ್ಸಿಯನ್ನು ಹೋಗದಂತೆ ಆ ಕ್ಷಣ ತಡೆ ಹಿಡಿದು ಅವರಿಗೆ ಅನುವು ಮಾಡಿಕೊಟ್ಟಳು ಕಮಲೇಶ್.

"ಬಹಳ ಉಪಕಾರವಾಯಿತು ಮಗೂ."

ಮೂವರೂ ಹತ್ತಿದನಂತರ ಟ್ಯಾಕ್ಸಿ ಹೊರಟಿತು. ಕಮಲೇಶ್ ಸತ್ಯಭಾಮೆಯೊಡನೆ ಮೆಟ್ಟಲೇರಿದಳು. ಸತ್ಯಭಾಮೆಯ ಎರಡು ಕೋಣೆಯ ಸಂಸಾರವನ್ನು ಒಂದು ಘಳಿಗೆಯೊಳಗಾಗಿ ಅಳೆದು ನೋಡಿದ್ದಾಯಿತು.... ಯಾರದೋ....ಎಲ್ಲಿಯದೋ....ಕೇಳಿಬರುವ ಶೋಕರಾಗ ತನ್ನ ಹೃದಯ ತಂತುಗಳಲ್ಲಿ ಮಿಡಿಯುತ್ತಿದೆ. ಎದೆಯಾಳದಲ್ಲಿ ಹರಿದಾಡುವ ಬಿಸಿಯುಸಿರಿನಲ್ಲಿ ಎಲ್ಲಿಯದೋ ಬಿಸುಸುಯ್ಲು ಹೊರಹೊಮ್ಮಿತು. ಕಮಲೇಶ್ ಸುಖ ದುಃಖಗಳ ಪಾಲಾದರೂ ಮಕ್ಕಳೊಡನೆ ಮುದ್ದು ಮಾತುಗಳಲ್ಲಿ ಮೈಮರೆತಳು.

ಮುಂಬೈಯಿಯ ಯಾಂತ್ರಿಕ ಜೀವನದಲ್ಲಿ ವಾರವೊಂದು ಉರುಳಿತು. ಈಗ ಮೊದಲಿನ ಉತ್ಸಾಹವೇ ಇಲ್ಲ....ಬೆಳಗಾದರೆ ದಿನಗಳೆಯುವುದು ಹೇಗೆಂಬ ಚಿಂತೆ ಮೂಡುವುದು....ಸತ್ಯಭಾಮಳೊಂದಿಗೆ ಮಾರುಕಟ್ಟೆ, ಜುಹೂ, ದಾದರ್, ವಿಠ್ಠಲ್ ಮಂದಿರ್, ಸಿನಿಮಾಗಳ ಕಡೆ ಹೋಗಿ ಬಂದಿದ್ದಾಗಿದೆ. ಮಾಡುತ್ತೇನೆಂದರೂ ಕೆಲಸವಿಲ್ಲ. ಓದುತ್ತೇನೆಂದರೂ ಪುಸ್ತಕವಿಲ್ಲ. ಲೈಬ್ರರಿಗೆ ಹೋಗೋಣವೆಂದರೂ ಹೋಗಿಬರುವುದೊಂದು ಮಹಾಪ್ರಯಾಸ, ಬೇಸರ ತೋರಿದಾಗ ಹಳೆಯ ಪತ್ರಿಕೆಗಳನ್ನೂ ಮಾಸಿಕಗಳನ್ನೂ ತಿರುವಿ ಹಾಕಿ

ದ್ದಾಯ್ತು....ಮುಂದೆ ?

ತಲೆಬಾಚಿ ಮುಡಿಗಟ್ಟುತ್ತಾ ಸತ್ಯಭಾಮ ಹೇಳಿದಳು "ನಿನಗಾಗಲೇ ಮುಂಬೈ ಜೀವನ ಬೇಸರ ತಂದಿದೆ. ಇಲ್ಲಿ ತೊಳಲುವ ನಮ್ಮ ಗತಿಯೇನು ಹೇಳು. ಅಡ್ಡಾಡುತ್ತೇನೆಂದರೆ ಒಂದು ಅಡಿ ಜಾಗ ಬೇಕಲ್ಲ, ಒಂದು ಘಳಿಗೆ ಬಾಲ್ಕನಿಗೆ ಹೋಗೋಣವೆಂದರೆ ಅಲ್ಲಿ ನಮ್ಮಂತಹವರೇ ನೂರಾರು ಮಂದಿ ತುಂಬಿರುತ್ತಾರೆ....ಎಷ್ಟೋಬಾರಿ ಒಂದು ತಿಂಗಳು ಬೆಂಗಳೂರಿನಲ್ಲಿದ್ದು ಬರೋಣ ಎನಿಸುತ್ತೆ. ಈ ಕಷ್ಟ ಯಾರಿಗೂ ಬೇಡ ಕಮಲೇಶ್...."ಅನಿರೀಕ್ಷಿತವಾಗಿ ಅವಳ ಕಂಠ ಗದ್ಗದಿತವಾಯಿತು. ಯಾವ ವಿಶಾದ ಗೀತೆಯಿಂದ ಅವಳ ಕಂಠ ಗದ್ಗತವಾಯಿತೋ ಅದನ್ನು ಪ್ರಕಟ ಪಡಿಸಿವುದು ಸ್ವಲ್ಪವೂ ಹಿತವೆನಿಸಲಿಲ್ಲ; ಆದರೂ ಆಗಿಹೋದುದಕ್ಕಾಗಿ ನೊಂದುಕೊಂಡು ವಿಧಿಯಿಲ್ಲದೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಉದ್ದಿಶ್ಯದಿಂದ ಪುನಃ ನುಡಿದಳು. "ಎಷ್ಟೋ ವೇಳೆ ಒಬ್ಬಳೇ ಆದಾಗ....ಮನಸ್ಸಿಗೆ ಬೇಸರ ಮೂಡಿದಾಗ ನಿಮ್ಮನ್ನೆಲ್ಲಾ ನೆನೆಸಿಕೊಂಡು ಕಂಬನಿಗರೆದಿರುವೆ."

ಕಮಲೇಶಳ ಅಂತಃಕರಣ ಬೆಣ್ಣೆಯಂತೆ ಕರಗಿತು. ಕೆಲಸಮಯ ಏನು ಹೇಳಬೇಕೋ ಹೊಳೆಯಲಿಲ್ಲ. ಗಂಭೀರ ಸ್ಥಿತಿಯಲ್ಲಿ ಶೀತಲ ಮೌನ ಆವರಿಸಿತು.

"ಕಮಲೇಶ್, ಒಬ್ಬಳೇ ಕುಳಿತು ಎಷ್ಟೋ ಬಾರಿ ಯೋಚಿಸುವೆ.... ಹೆಣ್ಣಿನ ಜೀವನ ನಾಲ್ಕು ಗೋಡೆಯೊಳಗೆ ವ್ಯರ್ಥವಾಗುವುದಕ್ಕಿಂತ ಯಾವುದಾದರೊಂದು ಸೂಕ್ತ ಉದ್ಯೋಗ ಹಿಡಿದರೆ ಬದುಕು ಸುಗಮವಾಗುತ್ತದೆ ಅಂತ. ಆದರೆ ನನ್ನ ಹಣೆಯಲ್ಲಿ ಬರೆಯಲಿಲ್ಲ. ನೀನಾದರೂ ನಿನ್ನ ದೃಢ ನಿರ್ಧಾರದಿಂದ ಹಿಂತೆಗೆಯಬೇಡ....ಯಾರು ಏನೇ ಅನ್ನಲಿ, ಜೀವನದಲ್ಲಿ ಗುರಿಯನ್ನು ಮುಟ್ಟಬೇಕೆಂದರೆ ಹಠಸಾಧನೆ ಮಾಡಲೇಬೇಕು."

ಸಿಂಕಿನಲ್ಲಿ ಬಸಿ ಬಟ್ಟಲುಗಳನ್ನು ತೊಳೆಯುತಿದ್ದಂತೆ ಹರಿದ ಅವಳ ದನಿ ನೀರಿನ ತಿಳಿಸದ್ದಿನೊಂದಿಗೆ ಸೇರಿ ಸಣ್ಣ ಶ್ರುತಿಯಾಗಿ ಸುರವ್ಯವಾಗಿ ಸುಖ ದುಃಖಗಳ ಹೊನಲಾಗಿ ಮನವನ್ನು ಆಕ್ರಮಿಸಿತು. ಕಮಲೇಶ್ ಯೋಚನಾಮಗ್ನಳಾದಳು. ಮಾನಸ ಪಕ್ಷಿ ಕನಸಿನ ಗೋಪುರ ಕಟ್ಟಿ ಭಾವನಾಲೋಕದಲ್ಲಿ ಭವಿಷ್ಯದ ವೇದಿಕೆಯ ಮೇಲೆ ಡಾಕ್ಟರಾಗಿ ಅಂಡಲೆಯಿತು.

ಅದೇ ಸಮಯದಲ್ಲಿ ಹೊರಬಾಗಿಲ ಕರೆಗಂಟೆ ಗಂಭೀರ ಧ್ವನಿಯಲ್ಲಿ ಆಗ್ರಹ ಪೂರ್ವಕವಾಗಿ ಕರೆ ನೀಡಿ ಭವಿಷ್ಯದ ವೇದಿಕೆಯಿಂದ ಗಮನವನ್ನು ಸರ್‍ರನೆ ಸೆಳೆಯಿತು. ಕಮಲೇಶ್ ಕದ ತೆರೆದಳು. ಶ್ರೀಪತಿ ಒಳಬಂದ. ಒಡಲ ಉಷ್ಣತರಂಗ ಅಶಾಂತಿಯ ಬೆಂಕಿಯಂತೆ ಕಣ್ಣುಗಳಲ್ಲಿ ಲಾಸ್ಯವಾಡುತಿತ್ತು. ಬರಬರುತ್ತಲೇ ಅವನೆಂದ.

"ಇಂದೇಕೋ ಸಣ್ಣಗೆ ತಲೆ ನೋಯುತ್ತಿದೆ. ಕೆಲಸ ಮಾಡಲಾಗಲಿಲ್ಲ ಬಂದುಬಿಟ್ಟೆ."

"ನಿಮಗೆ ಮಾತ್ರೆ ನುಂಗುವ ಅಭ್ಯಾಸ ಇದೆಯೆ?" ಕೇಳಿದಳು ಕಮಲೇಶ್.

"ಒಂದು ಗಂಟೆ ವಿಶ್ರಾಂತಿ ತೆಗೆದುಕೊಂಡರೆ ಅದೇ ಮಾತ್ರೆ."

ಶ್ರೀಪತಿ ಮುಖ ಮಜ್ಜನ ಮಾಡಿ ಬರುವಷ್ಟರಲ್ಲಿ ಚಹ ಅಣಿಯಾಗಿತ್ತು. ಸತ್ಯಭಾಮ ಚಹವನ್ನು ಸಿಹಿ ಖಾರಗಳ ಸಹಿತ ತಂದು ಮುಂದಿಟ್ಟಳು. ಶ್ರೀಪತಿ ಚಹ ಮುಗಿಸಿ ಪಲ್ಲಂಕದ ಮೇಲೆ ಆಡ್ಡಾಗಿ ಸರಸ ಸಮ್ರಣಿಯಾದರೂ ಪೂರ್ವಜರ ಅಭಿಶಾಪದಿಂಧ ವಂಚಕನಾದ ದುರ್ದೈವಿಯಂತೆ ಅಶಾಂತ ಕ್ಷೋಭೆಯಿಂದ ದೀರ್ಣವಿದೀರ್ಣವಾದ ಧ್ವನಿಯಲ್ಲಿ ನುಡಿದ, "ಈ ಕೆಲಸವನ್ನು ನೆಚ್ಚಿಕೊಳ್ಳುವುದಕ್ಕಿಂತ ನನಗೊಂದಿಷ್ಟು ಬಂಡವಾಳವಿದ್ದರೆ ಯಾವುದಾದರೊಂದು ಸ್ವತಂತ್ರ ಉದ್ಯಮವನ್ನು ಹಿಡಿದು ಸ್ವಾತಂತ್ರ್ಯ ಜೀವನ ನಡೆಸಿ ಈ ಕಷ್ಟನಿಷ್ಠೂರಗಳನ್ನು ಕಿತ್ತೊಗೆದು ಸ್ವರ್ಗಾಧಿಪತಿಯಾಗಬಹುದಾಗಿತ್ತು." ಮುಖಮಂಡಲದ ಮೇಲಿನ ಕುಟಿಲ ತೀಕ್ಷ್ಣ ಮುದ್ರೆ ಅಂತಃಸ್ಥಿತಿಯನ್ನು ಸಾರಿ ಹೇಳಿತು.

"ಕಲ್ಪನೆಯ ಕುದುರೆಯನ್ನೇರುವುದಕ್ಕಿಂತ ಧರ್ಮಬುದ್ಧಿಯಿಂದ ನಡೆದರೆ ಅದೇ ಸಗ್ಗದಾಧಿಪತ್ಯ." ಎಂದಳು ಸತ್ಯಭಾಮ. ದೀರ್ಘ ನಿಶ್ವಾಸವೊಂದು ಮೆಲ್ಲನೆ ತಪ್ಪಿಸಿಕೊಂಡಿತು.

"ಕಲ್ಪನೆಯ ಕುದುರೆಯನ್ನೇರಿ ಎಂದು ಎಷ್ಟು ಸರಾಗವಾಗಿ ನುಡಿಯುತ್ತಿ ಸತ್ಯಾ, ಕಲ್ಪಿಸದೆ ಜೀವನ ರೂಪುಗೊಳ್ಳುವುದುಂಟೇ?"

"ಕಲ್ಪನೆ ಸಾಧುವಾದರೂ ಪೂರ್ಣದೃಷ್ಟಿಯಿದ್ದರೆ...."

ಶ್ರೀಪತಿ ಕಮಲೇಶಳ ಕಡೆ ಮಿಂಚಿನಂತಹ ನೋಟಬೀರಿ ಅಂದ "ಕಮಲೇಶ್ ಯಾವುದನ್ನು ನಿನ್ನ ಅಕ್ಕ 'ಪೂರ್ಣದೃಷ್ಟಿ' ಎಂದು ಕರೆಯುತ್ತಾಳೋ

ಆ ಪೂರ್ಣ ದೃಷ್ಟಿಗೆ ಈ ಕಾಲದಲ್ಲಿ ಬೆಲೆಯೇ ಇಲ್ಲ. ಸುಖ ಜೀವಿಗಳು ಸುಖ ವಾಗಿಯೇ ಇರುತ್ತಾರೆ. ನಮ್ಮಂತಹ ಶ್ರಮಜೀವಿಗಳ ಶ್ರಮದಾನವನ್ನು ಕೇಳುವವರಾರು? ಮೈಮುರಿಯೆ ದುಡಿದರೂ ಮನಶ್ಶಾಂತಿ ಇಲ್ಲ...."

"ನೀವು ಹೇಗೂ ನಿಮ್ಮ ಮಾರ್ಗದಲ್ಲಿ ಪಳಗಿದ್ದೀರಿ....ನಿರ್ಭಯವಾಗಿ ನಿಮ್ಮ ಕ್ಷೇತ್ರದಲ್ಲಿ ದುಡಿಯುವ ಮಾನ್ಯತೆಯೂ ಇದೆ. ಮೈ ಮನಸ್ಸುಗಳ ನ್ನಿಷ್ಟು ಚುರುಕುಗೊಳಿಸಿದರಾಯಿತು."

ಮುಗ್ಧ ದನಿಯ ಅನಾಯಕ ಉತ್ತರ ಕೇಳಿದೊಡನೆಯೆ ಶ್ರೀಪತಿ ಚಕಿತನಾದ. ಆ ಕುಡಿನೋಟದಿಂದ ಮಿಂಚಿದ ಮಿಂಚು, ಸುಪ್ತವಾದ ಅಂತ ರಂಗವನ್ನು ಬಡಿದೆಬ್ಬಿಸಿ ಬಹಿರಂಗಗೊಳಿಸಲು ಪ್ರಯತ್ನಿಸಿದಂತೆ ತೋರಿಬಂತು. ಒಂದೆರಡು ಘಳಿಗೆ ಮೈಮರೆತು ಅವಿಚ್ಛಿನ್ನವಾಗಿ ಚಿಂತಿಸಿದ. ಶಿಲಾಕಾಠಿಣ್ಯ ಮೂರ್ತಿಯ ಅಂತರ್ಯದ ಮೃದು ಮಧುರ ಭಾವನೆಯಂತೆ... ...ಶೃಂಖಲಾ ಬದ್ಧರಾದ ಸಮಸ್ತ ಜೀವಕೋಟಿಯ ಆಕ್ರಂದನದಂತೆ........ತಡೆಹಿಡಿದರೂ ಧಾರ್ಮಿಕ ದಾರಿದ್ರ್ಯ ತನ್ನ ಹತೋಟಿಯನ್ನು ಮೀರಿ ಹೊರಹೊಮ್ಮಿತು.

"ನಾನು ಅಷ್ಟು ಮಾತ್ರ ಚಿಂತಿಸದ ಪರಮ ಮೂರ್ಖನಲ್ಲ ಕಮಲೇಶ್. ನನ್ನ ಕೈಯಲ್ಲಾದಷ್ಟು ಪುರುಷ ಪ್ರಯತ್ನವನ್ನು ಭಗೀರಥ ಧೈರ್ಯದಿಂದ ನಿಯೋಗಿಸಿದ್ದೇನೆ........ಆದರೆ ಎಲ್ಲಿಯೂ ಸಫಲನಾಗಲಿಲ್ಲ. ನಾನು 'ದುರ್ದೈವಿ' ಎಂದು ದೌರ್ಬಲ್ಯವನ್ನು ಪ್ರದರ್ಶಿಸುವುದಕ್ಕಿಂತ ಪ್ರತೀಕಾರ ಹೂಡುವುದು ಲೇಸು!"

ಕಮಲೇಶ್ ಮಾತನಾಡಲಿಲ್ಲ. ಸತ್ಯಭಾಮೆಯ ಎದೆಯಿಂದ ಅಂತಃ ಸುಪ್ತವಾದ ದೀರ್ಘ ನಿಶ್ವಾಸವೊಂದು ತಪ್ಪಿಸಿಕೊಂಡಿತು. ಅವಳ ತುಟಿಗಳು ಏನನ್ನೋ ಹೇಳಲು ಪ್ರಯತ್ನಿಸಿ ಸುಮ್ಮನಾದುವು. ಶ್ರೀಪತಿ ಎದ್ದು ಕೂದಲು ತಿದ್ದಿ ನುಡಿದ "ಹಗಲಿನ ಪರಿಶ್ರಮದ ಆಯಾಸ ಆಕ್ರೋಶಗಳನ್ನು ಸಂಜೆಯ ಹೊತ್ತಿನಲ್ಲಿ ನಮ್ಮ ಗೆಳೆಯರ ಕೂಟ ಬಡಿದೋಡಿಸಿ ಆನಂದವನ್ನು ನೀಡುವು ದಷ್ಟೇ ಅಲ್ಲ, ಆಯುರಾರೋಗ್ಯವನ್ನೂ ಸಹ ವೃದ್ಧಿಗೊಳಿಸುತ್ತದೆ ಅಂದರೆ ಒಪ್ಪಿಕೊಳ್ಳುವೆಯಷ್ಟೆ, ಕಮಲೇಶ್!"

ಕಮಲೇಶ್ ಉತ್ತರವನ್ನು ಸಿದ್ಧಗೊಳಿಸುವುದರೊಳಗಾಗಿ ಅವನು ಬಾಗಿ ಲನ್ನು ತೆರೆದು ಹೊರಬಿದ್ದಾಗಿತ್ತು. ಸತ್ಯಭಾಮ ಸ್ತಬ್ಧಳಾಗಿ ನಿಂತುಬಿಟ್ಟಳು.

ಕ್ಷಣ ಕ್ಷಣಗಳು ಗಭೀರ ಸನ್ನಿವೇಶದಲ್ಲಿ ಹೇಳಹೆಸರಿಲ್ಲದೆ ಕರಗಿದುವು.

ನಿಮಿಷ ನಿಮಿಷಗಳು ಮನಃಕ್ಷೋಭೆಯ ಸಾಮ್ರಾಜ್ಯದಲ್ಲಿ ವ್ಯರ್ಥಾಲಾಪ ಮಾಡಿದುವು.

ತಲೆ ಬಾಗಿಲ ಗಂಟೆ ಗಂಭೀರ ಧ್ವನಿಯಲ್ಲಿ ಕರೆ ನೀಡಿತು.

ಕಮಲೇಶ್ ವರ್ತಮಾನ ಪತ್ರಿಕೆಯನ್ನು ಬದಿಗಿಟ್ಟು ಕದ ತೆರೆದಳು. ಹೊಸ್ತಿಲ ಬಳಿ ಕಣ್ಗೋಚರಿಸಿದ ಖನಿ ಸಿಂಧೂರ ಸುಶೋಭಿತ ಸೌಂದರ್ಯಶಾಲಿನಿಯಾದ ನವ ತರುಣಿ. ಮಂದಸ್ಮಿತ ವದನಾರವಿಂದದಲ್ಲಿ ಮಿನುಗುವ ಚಂಚಲ ನೇತ್ರದ್ವಯಗಳಲ್ಲಿ ಆತ್ಮಜ್ಯೋತಿ ಜ್ವಲಿಸುತ್ತಿದೆ. ಸಂಜೆಯ ತಿಳಿಗಾಳಿಗೆ ಸೆರಗು ಹಾರದಂತೆ ಹಿಡಿದಿದ್ದ ಅವಳು ಮೆಲುದನಿಯಲ್ಲಿ ಕೇಳಿದಳು "ನಾನು ಒಳಗೆ ಬರಬಹುದೇ?"

"ಬನ್ನಿ........ಬನ್ನಿ" ಎಂದಳು ಕಮಲೇಶ್ ವಿಸ್ಮಿತ ನೇತ್ರಳಾಗಿ.

ಯಾವುದೋ, ಎಲ್ಲಿಯದೋ ಅಲ್ಲ–ಅಲ್ಲ, ಜನ್ಮಜನ್ಮಾಂತರಗಳ ಸಸ್ನೇಹ ಜ್ಯೋತಿ ಒಮ್ಮೆಗೇ ಕ್ರೋಢೀಕರಿಸಿದಂತೆ ರಾಗಪರಿಪೂರ್ಣವಾಗಿ, ಜ್ವಾಜಲ್ಯಮಯವಾಗಿ ಎದೆಯಾಳಗಳಲ್ಲಿ ಉಜ್ವಲಿಸಿ ಮುಖಭಾವದಲ್ಲಿ ಪ್ರಕಟವಾಯಿತು. ಹುಡುಗಿಯರಿಬ್ಬರೂ ನಗು ಮುಖದಿಂದ ಪರಸ್ಪರ ವೀಕ್ಷಿಸಿದರು.

"ನೀನಾರಮ್ಮಾ?" ಸತ್ಯಭಾಮ ಕೇಳಿದಳು.

"ಆಡಿಟರ್ ಜಿನದತ್ತರ ಮಗಳು ಚೇತನಾ!"

"ಓ........ಹೋ! ನಮ್ಮ ಯಜಮಾನರಿಗೂ ನಿಮ್ಮ ತಂದೆಯವರಿಗೂ ತುಂಬ ಪರಿಚಯ. ಬಾಮ್ಮ, ಕೂಡು."

"ಓ! ನನಗದು ತಿಳಿಯದು. ಕೆಳಗಿನ ಹತ್ತನೆಯ ನಂಬರಿನ ಮನೆಗೆ ಬಂದಿದ್ದೆ. ಅಲ್ಲಿ ಮೂವತ್ತನೆಯ ನಂಬರಿನ ಮನೆಗೆ 'ಟೈಮ್ಸ್' ಬರುತ್ತೆ, ಅದರಲ್ಲಿ ಬಾಡಿಗೆ ಮನೆಯ ಬಗ್ಗೆ ಜಾಹೀರಾತು ಪ್ರಕಟವಾಗಿದೆ ಎಂದರು. ನನಗದು ಬಹಳ ಅಗತ್ಯವಾಗಿತ್ತು. ನಿಮ್ಮನ್ನು ಕೇಳೋಣವೆನ್ನಿಸಿತು. ಸಂಕೋಚಿಸದೆ ಬಂದೆ....ಹೀಗೆ ಹೇಳದೆ ಕೇಳದೆ ಏಕಾಏಕಿ ಬಂದುದರಿಂದ ನಿಮಗೆ ತೊಂದರೆಯಾಯಿತೇನೊ ದಯವಿಟ್ಟು ಕ್ಷಮಿಸಿ." ಸವಿನಯಪೂರ್ಣ ಸ್ವರದಲ್ಲಿ ಹೇಳಿದಳು ಚೇತನಾ.

"ಇಲ್ಲ....ಇಲ್ಲ. ಅಂಥಾದ್ದೇನೂ ಇಲ್ಲ; ಬಾಮ್ಮ"

ಚೇತನಾ ಒಳಬಂದಳು. ಪರಸ್ಪರ ಪರಿಚಯವಾದನಂತರ ಸಾಂಪ್ರದಾಯಿಕವಾಗಿ ಕ್ಷೇಮ ಸಮಾಚಾರಗಳ ವಿತರಣೆ ನಡೆದು ಬಳಕೆ ಮೂಡಿತು. ಸತ್ಯಭಾಮ ಕಮಲೇಶಳನ್ನು ಅವಳೊಂದಿಗೆ ಬಿಟ್ಟು ತಾನು ಮಾರುಕಟ್ಟೆಗೆ ಹೊರಟಳು. ಕಮಲೇಶಳ ಆದರಾತಿಥ್ಯಗಳ ಪ್ರೇಮ ಜ್ವಾಲೆ ಮುತ್ತಿ ಹೊತ್ತು ಉರುಳಿದುದರ ಪರಿವೆಯಿಲ್ಲದೆ ಅಲ್ಲಿ ಉಳಿದಳು ಚೇತನಾ. ಹಳೆಯ ಪತ್ರಿಕೆಯಲ್ಲಿ ತನಗೆ ಬೇಕಾಗಿದ್ದ ಜಾಹಿರಾತು ದೊರಕಿದರೂ ಆಗಲೇ ಮನೆಗೆ ಹೋಗಲು ಮನಸ್ಸು ಬರಲಿಲ್ಲ.

ತತ್ರಾಪಿ........ಅವಿಭಕ್ತಂ ವಿಭಕ್ತೇಷು

ಕಮಲೇಶಳಿಗೆ ಎಲ್ಲಿಲ್ಲದ ಆಶ್ಚರ್ಯ........ಮಹಾರಾಣಿ ಕಾಲೇಜಿಗೆ ಕೊನೆಯ ಭೇಟಿ ಇತ್ತಂದು ಇಂತಹ ಗೆಳತಿಯರನ್ನು ಇನ್ನೆಂದೂ ಪಡೆಯಲಾರೆ ಎಂಬ ತೀರ್ಮಾನಕ್ಕೆಡೆ ಕೊಟ್ಟಿತ್ತು ಮನಸ್ಸು. ಹೃದಯ ದುಃಖಾಂಬುಧಿಯಲ್ಲಿ ಮುಳುಗಿ ಮೌನವಾಗಿ ರೋದಿಸಿತ್ತು. ಆದರೆ ಇದೇನು ಸೋಜಿಗವೋ ಆ ಸರ್ವಾಂತರ್ಯಾಮಿಯೇ ಬಲ್ಲ....ಮುಂಬೈಯಲ್ಲಿದ್ದ ದಿನಗಳೆಲ್ಲಾ ಬಹಳ ಮಟ್ಟಿಗೆ ಚೇತನಳ ಪ್ರೇಮಾಶ್ರಯದಲ್ಲಿ ಕಳೆದುವು. ಅವಳಿಲ್ಲದಾಗ ಎಲ್ಲವೂ ಶೂನ್ಯವಾಗಿ ನೀರಸವಾಗಿ ತೋರಿ ತನುಮನಗಳು ಅರ್ಥರಹಿತವಾಗಿ ಪರಿತಪಿಸುತ್ತವೆ.

ಒಲೆಯ ಮುಂದೆ ಕುಳಿತು ಕಡ್ಡಿಗಳನ್ನು ನೂಕಿ ಬೆಂಕಿಯನ್ನು ಪ್ರಜ್ವಲಿಸುವಂತೆ ಮಾಡುತ್ತ ತಮ್ಮ ಆತ್ಮಜ್ಯೋತಿಯನ್ನು ನಂದಿಸಿಕೊಳ್ಳುವ ಸ್ತ್ರೀಜಾತಿಯಲ್ಲಿ ಈ ನವೀನ ಉಜ್ವಲ ನಾರಿಯರು ತಮ್ಮ ಹೃಜ್ಯೋತಿಯನ್ನು ಪ್ರಜ್ವಲಿತಗೊಳಿಸಿ ದೂರಗಮ್ಯದೆಡೆಗೆ ದಾರಿ ದೀಪವಾಗುವ ಅಭಿಜ್ಞಾನ ಸಂಪತ್ತಿಯಲ್ಲಿ ಸಸ್ನೇಹಪ್ರದೀಪಗಳನ್ನು ಛಂದೋಬದ್ಧವಾಗಿ ಹೆಣೆದುಕೊಂಡರು. ಭಾರತ ಸಾಮ್ರಾಜ್ಯದ ನಾರೀಮಣಿಯರೆಲ್ಲ ಎಚ್ಚೆತ್ತು ನವಕ್ರಾಂತಿಗೆ ಓಗೊಟ್ಟು ಜೀವನಯಜ್ಞದಲ್ಲಿ ಹವಿಸ್ಸು ಮತ್ತು ಸಮಿತ್ತುಗಳಂತೆ "ಆಹುತಿ"ಯಾಗುವ ಮುನ್ನ ದೂರಗಮ್ಯದೆಡೆಗೆ ಉಜ್ವಲ ಜ್ಯೋತಿಯನ್ನು ದಿಟ್ಟತನದಿಂದ ಒಯ್ದಂದು ಭವ್ಯ ಭಾರತದ ಭವಿಷ್ಯತ್ತು ಉಜ್ವಲೋಜ್ವಲವಾಗುವುದರಲ್ಲಿ ಅನುಮಾನವೇನುಂಟು ? ಆ ಸುದಿನ ಬಂದಂದು ಭಾರತಾಂಬೆ ಧನ್ಯೆ !

ಮುಂಬೈಯಲ್ಲಿದ್ದ ಎರಡು ತಿಂಗಳೂ ಬಹಳ ಮಟ್ಟಿಗೆ ಚೇತನಳ ಸಹವಾಸದಲ್ಲಿ ಕಳೆದುವು. ಅಂದು ಸಂಜೆಯ ರೈಲಿಗೆ ಬರುವುದಾಗಿ ಮುರುಳಿ ಬರೆದಿದ್ದ. ಇನ್ನು ಒಂದೆರಡುದಿನಗಳಲ್ಲಿ ಕಮಲೇಶ್ ಬೆಂಗಳೂರಿಗೆ ಹೊರಡುವುದು ನಿಶ್ಚಯ ...ಅಂದರೆ ಆಗಲೇ ಗೆಳತಿಯರ ಕಣ್ಣುಗಳಲ್ಲಿ ಬಳಬಳ ನೀರು.

ಪರಸ್ಪರ ಸ್ನೇಹಲಾಭದಿಂದ ಮುಂಬೈ ದಿನಗಳು ಅದೆಷ್ಟು ಕಳೆಗೂಡಿಕೊಂಡುವೋ.

ಒಮ್ಮೆ ಪ್ರಾಸಂಗಿಕವಾಗಿ, ಅಂದರೆ ಕಮಲೇಶ್ ಬೆಂಗಳೂರಿಗೆ ಹಿಂದಿರುಗುವ ಸಂದರ್ಭದಲ್ಲಿ "ಈ ಸ್ನೇಹ ನಿಜವಾಗಿಯೂ ಈ ಜನ್ಮದ್ದಲ್ಲ, ಯಾವುದೋ ಪೂರ್ವಜನ್ಮದ ಸ್ನೇಹ ಬಂಧನ." ಎಂದು ದುಃಖಪೂರ್ಣದನಿಯಲ್ಲಿ ಬಿತ್ತರಿಸಿದಳು ಚೇತನಾ.

"ಹಾಗಿದ್ದರೆ ಪೂರ್ವಜನ್ಮದಲ್ಲಿ ನೀನು ಅತ್ತೆ ನಾನು ಸೊಸೆ!" ಹಾಸ್ಯದ ಚಟಾಕಿ ಹಾರಿಸಿದಳು ಕಮಲೇಶ್. ಇಬ್ಬರ ಮುಖಗಳೂ ಮಳೆಬಿಸಿಲಾದುವು.

"ಇರಲಿ ಆ ಜನ್ಮದಲ್ಲಿ ಆ ಬಂಧ; ಈ ಜನ್ಮದಲ್ಲಿ ಈ ಬಂಧ. ನೀನು ಡಾಕ್ಟರಾದಾಗ ನಾನು ಪೇಷಂಟ್! ಮರೆಯಬೇಡ ಜ್ಞಾಪಕವಿಟ್ಟಿರು!"

"ಓ, ಮಹಾರಾಷ್ಟ್ರೀಯರಿಗೂ, ಮೈಸೂರಿನವರಿಗೂ ಮೊದಲೇ ಎಣ್ಣೆ ಸೀಗೆಕಾಯಿ! ನೀನು ಬಂದರೆ ಅಲ್ಲೇ ನಿನ್ನ ಗತಿ ಮುಗಿಸಿ ಬಿಡುವೆ!" ಪುನಃ ನಗುವಿನ ಲಹರಿ ಉಕ್ಕಿ ಹರಿಯಿತು.

ಶೀತಲ ಸಂಧ್ಯೆಯಲ್ಲಿ ಚೇತನಳನ್ನು ಬೀಳ್ಕೊಟ್ಟ ಅರ್ಧ ಘಂಟೆಯೊಳಗಾಗಿ ಮುರುಳಿ ಆಗಮಿಸಿದ. ಕಮಲೇಶಳಿಂದ ಪಾಠ ಹೇಳಿಸಿಕೊಳ್ಳುತಿದ್ದ ಮಕ್ಕಳು ಕೇಕೆ ಹಾಕಿದರು "ಮಾಮಾ ಬಂದರು!"

ಮುರುಳಿ ಸಂತಸದ ಬೀಡಾಗಿ ನಿಟ್ಟಿಸಿದ. ಸತ್ಯಭಾಮ ನಗುನಗುತ್ತಾ "ನೀನೇನೋ ಈಗಲೇ ಬಂದಿದ್ದಿ. ಕಮಲೇಶ್ ಹೊಸ ಗೆಳತಿಯನ್ನು ಬಿಟ್ಟು ಹೊರಡಬೇಕಾದರೆ ಇನ್ನೆಷ್ಟು ಕಂಬನಿ ಕರೆಯಬೇಕೋ."

"ಏಕೆ? ಅಂಥಾದ್ದೇನು?"

"ಅವಳು ಇಲ್ಲಿಗೆ ಬಂದಮೇಲೆ ಒಬ್ಬ ಒಳ್ಳೆಯ ಗೆಳತಿಯನ್ನು ಸಂಪಾದಿಸಿದ್ದಾಳೆ. ಇಬ್ಬರಿಗೂ ಗಳಸ್ಯ ಕಂಠಸ್ಯ." ಅನುಭಾವಪೂರ್ಣ ಕಣ್ಣುಗಳು ವಿಸ್ಫಾರಿತವಾಗುವ, ನುಡಿಗಟ್ಟು ಹೊರಹೊಮ್ಮುತ್ತಾ ನಗು ಮಲರಿದಾಗ.

"ಚೆನ್ನಾಗಿದ್ದಾಳೆಯೆ ಹೇಳು !"

"ಬೆಳ್ಳಗಿದ್ದಾಳೆ !" ಲೀಲ ಶೀಲ ಇಬ್ಬರೂ ಏಕಕಂಠದಿಂದ ನುಡಿದರು.

"ಅವಳು ಹೇಗಾದರೂ ಇರಲಿ, ನಿನಗೇಕೆ ಅದೆಲ್ಲ ?" ಕಮಲೇಶ್ ಹುಸಿ ಮುನಿಸು ತೋರಿದಳು.

"ಹೆಚ್ಚು ವರದಕ್ಷಿಣೆ ಕೊಡುವಂತಿದ್ದರೆ ಹೇಳು ಅವಳಿಗೆ ನಾನೇ ವರ !"

"ಹ್ಞೂ....ಹ್ಞೂ....ಕಾಸಿಲ್ಲ ಕೊಸರಿಲ್ಲ, ನಿನ್ನನ್ನಾರು ಮದುವೆಯಾಗುತ್ತಾರೆ ?"

"ವರದಕ್ಷಿಣೆ ಇದ್ದರೆ ಸಾಕಲ್ಲ."

"ಓ....ಹೋ....ಹೋ !"

"ಜೆಳಿಗ್ಗೆ ಅವಳನ್ನು ಪರಿಚಯ ಮಾಡಿಸುತ್ತೀ ತಾನೆ ?"

"ಸದ್ಯ ಸ್ನಾನ ಮಾಡಪ್ಪಾ. ನಿನ್ನನ್ನು ನೋಡಿದರೆ ಉಂಡಿದ್ದೆಲ್ಲಾ ಈಚೆ ಬರುತ್ತೆ !"

"ಹೌದು ಮಾಮಾ ! ಸ್ನಾನ ಮಾಡಿ ಬೆಳ್ಳಗಾಗಿ ಬಿಡಿ !"

ಒಡನೆ ನಗುವಿನ ಗುಲ್ಲೆದ್ದಿತು.

ಸತ್ಯಭಾಮ ಹಾಸ್ಯದ ಸವಿಯನ್ನು ಸವಿದು ಹಿಗ್ಗಿದಳು. ಹೃದಯ ಹಾಲ್ಗಡಲಾಯಿತು.

ಅಧ್ಯಾಯ

೫

........ಮೇಗಡೆ ಉರಿಯುವ ಝಳ ಝಳ ಬಿಸಿಲು.

........ಒಳಗಡೆ ಹಸಿವಿನ ತಳಮಳ.

ಎಳೆಮೈ ತಾಳಲಾರೆನೆಂದು ಕೂಗಿ ಮೊರೆಯಿಡುವಷ್ಟು ಬಾಡಿ ಬಳಲಿದೆ. ಮುಂಬಾಗಿಲ ಕರೆಗಂಟೆಯನ್ನು ಮೆಲ್ಲಗೆ ಒತ್ತಲು ಪ್ರಯತ್ನಿಸಿದರೂ ತುಸು ಜೋರಾಗಿಯೇ ಒತ್ತಿದ್ದಳೇನೋ....ಕಿರ್ರನೆ ಅದು ಅರಚಿದ ರೀತಿಯನ್ನು ಗಮನಿಸಿದಾಗ 'ಅಯ್ಯೋ' ಎನ್ನಿಸಿ ಶಾಂತ ಚಿತ್ತ ತುಸು ಕಲಕಿತು.

ಕದ ತೆರೆದ ಸ್ವರ್ಣಮಾಲಿನಿ–"ನಿನ್ನ ಮುಖ ನೋಡುವಂತಿಲ್ಲ ಬಹಳ ಬಾಡಿದ್ದಿ."

"ಬಹಳ ಬಿಸಿಲು...."ಎನ್ನುತ್ತಾ ಹೊಸ್ತಿಲು ದಾಟಿದಳು ಕಮಲೇಶ್.

ಬಿಸಿಲ ಝಳ ತಗುಲಿದ ಕಣ್ಣುಗಳಿಗೆ ಒಳಗಡೆ ಬರುತ್ತಲೂ ಮಂಜು ಕವಿದು ಕತ್ತಲಾವರಿಸಿತು. ಕಣ್ಣುಗಳನ್ನು ಮುಚ್ಚಿ ತೆರೆಯುತ್ತ ಪೂರ್ವಸ್ಮೃತಿಯಿಂದ ಒಳಬಂದಳು. ಊಟ ಮಾಡುತ್ತಿದ್ದ ಅಣ್ಣಂದಿರಿಬ್ಬರೂ ದನಿಯನ್ನು ಹರಿಯಬಿಟ್ಟರು "ಓ....ಹೋ....ಹೊ! ಬೆಲ್ಲು ಒತ್ತಿದ ರೀತಿಯನ್ನು ಗಮನಿಸಿದರೆ ಈಗಲೇ ಡಾಕ್ಟರಾಗಿ ಬಿಟ್ಟಳೇನೋ ಎನ್ನುವಂತಿದೆ!"

"ರಾಣಿಯವರು ತಿಳಿದುಕೊಂಡಿರುವುದೇ ಹಾಗೆ!" ವಿನೋದಪೂರ್ವಕವಾಗಿ ಸಮರ್ಥಿಸಿದ, ಶ್ರೀಧರ.

"ತಟ್ಟೆಯ ಮುಂದೆ ಕುಳಿತಾಗ ಪೌರುಷವಿರಲೇಬೇಕಲ್ಲ!"

"ಈ ಒಂದು ವರ್ಷ ಮೆರೆದಾಡು....ಅನಂತರ ಗಂಟುಹಾಕದಿದ್ದರೆ ಕೇಳು!"

"ಆಗಲಿ ನೋಡೋಣ." ಸರಸ ಮಧುರ ಹಾಸ ತುಟಿಗಳಲ್ಲಿ ನಲಿಯಿತು.

"ಹೇಗಿತ್ತು ಇಂಟರ್ ವ್ಯೂ?"

"ನಿಮ್ಮಂತಹವರೆಲ್ಲ ಇದ್ದಮೇಲೆ ಹೇಗಿರಬೇಕೋ ಹಾಗಿತ್ತು!" ನಿಶ್ಚಲ ಕಂಠದಿಂದ ಬಿತ್ತರಿಸಿದಳು.

ಅದೇ ನೇರಕ್ಕೆ ದೀಪ್ತ ಕಂಠ ಮೊಳಗಿತು "ಜಂಬದ ಕೋಳಿ!"

ಸ್ವರ್ಣಮಾಲಿನಿ ವಿನೋದಪೂರ್ಣವೂ ಸ್ವಾರಸ್ಯಕರವೂ ಆದ ಸಂಭಾಷಣೆಯ ದಧಿಸಾರವನ್ನು ಸವಿದಳು.

ಆದಿನ ಇವರಿಬ್ಬರೂ ಅಪ್ಪನೊಂದಿಗೆ ಸೇರಿಕೊಂಡು ನಮಗಿಲ್ಲದ ಮೆಡಿಸನ್ ನಿನಗೇಕೆ? ಮದುವೆಯಾಗಿ ಹಾಯಾಗಿರು ಎಂದು ಬಿಡುವುದೇ? ಇವರನ್ನು ಮೆಡಿಸನ್ ಓದಬೇಡಿ ಎಂದು ಯಾರಾದರೂ ಹೇಳಿದ್ದಾರೆಯೆ? ತಾವು ಓದದಿದ್ದರೆ ಬಿಡಲಿ, ನನಗೇಕೆ ಅಡ್ಡಿಯಾಗಬೇಕು?....ವಿಷಯ ಮನದಲೆಗಳನ್ನು ಹೊಡೆದೆಬ್ಬಿಸಿತು. ಕಮಲೇಶ್ ಕಣ್ಣುಗಳನ್ನು ಅರಳಿಸಿ "ಅಹ್ಹಹ್ಹಾ ಕಂಕ ನರಿಗಳು!" ಎಂದಳು ವಿಸ್ಮಯ ವಿಸ್ತೃತ ನೋಟವನ್ನಟ್ಟಿ.

"ನಾವು ನೋಡಿದರೆ ದುಡಿದು ಓದಬೇಕು! ನಿನಗೆ ಮೆಡಿಸನ್ ಓದಿಸಿ ಮದುವೆ ಮಾಡಿ........ರೊಕ್ಕದ ಹೊಳೆ ಹರಿಸಿದರೆ ನಮಗೆ ಜಾಗಟೆ ತಂಬೂರಿಯೇ ಗತಿ!"

"ಬೇಡಪ್ಪಾ ಬೇಡ. ನೀವು ಮದುವೆ ಮಾಡುವ ತೊಂದರೆ ತೆಗೆದುಕೊಳ್ಳುವುದು ಬೇಡವೇ ಬೇಡ. ಓದನ್ನೂ ಸಹ ಸ್ಕಾಲರ್‌ಷಿಪ್-ನಿಂದ ಮುಗಿಸದಿದ್ದರೆ ಕೇಳಿ!"

"ಎಲ್ಲಾ ಹುಡುಗಿಯರೂ ಅನ್ನುವುದೇ ಹಾಗೆ! ಅನಂತರ ನಮಗೇ ಉರುಳು!"

ತರುಣ ಹಾಸ್ಯ ಸರಸವಾಣಿ ಹೊರಬಿದ್ದಾಗ ಕಂಗಳಲ್ಲಿ ಮಿಂಚಿನಂತಹ ಬೆಳಕು ಮಿಂಚಿತು.

"ಇನ್ನೇನು ಬಹಳ ದಿನಗಳಿಲ್ಲ ನೋಡುತ್ತಾ ಇರಿ."

"ಹೊಸವರಲ್ಲಿ ಅಗಸ ಗೋಣಿ ಒಗೆವ ಹಾಗೆ."

ಇಬ್ಬರ ದನಿಯಲ್ಲಿಯೂ ಅಣಕ ಹರಿದುಬಂದುದು ಒಂದೇ ರೀತಿಯ ಮೋಡಿಯಲ್ಲಿ.

"ಒಂದು ವೇಳೆ ನಿಮ್ಮಿಂದ ಹಣ ತೆಗೆದುಕೊಂಡರೂ ನಾನು ಡಾಕ್ಟರಾದ ಮೇಲೆ ಚಕ್ರ ಬಡ್ಡಿ ಸಹಿತ ತೀರಿಸಿಬಿಡುವೆ. ನೀವು ಜಾಗಟೆ ತಂಬೂರಿ ಹಿಡಿಯುವ ತಾಪತ್ರಯ ಖಂಡಿತಾ ಬೇಡ."

"ಹಾಗೆಂದವರು ಬಹಳ ಮಂದಿ!"

"ಅವಳಿನ್ನೂ ಕಾಲೇಜು ಹತ್ತಲಿಲ್ಲ. ಅಷ್ಟರೊಳಗಾಗಿ ಅವಳನ್ನು ಗೋಳು

ಹುಯ್ಯುತಿದ್ದೀರಿ.” ಎಂದಳು ಸ್ವರ್ಣಮಾಲಿನಿ, ಕಾರುಣ್ಯಪೂರ್ಣ ಸ್ವರದಲ್ಲಿ.

ಹುಡುಗರಿಬ್ಬರೂ ಮುಗುಳು ನಕ್ಕರು.

“ಈ ವರ್ಷ ಫ್ರೀಡಮ್! ಮುಂದಿನ ವರ್ಷ ತೊಂಡಿ!”

ಮತ್ತೆ ಅದೇ ರಾಗ ಹಾಡಿದ ಮುರುಳಿ.

ಅವಳು ಅಲ್ಲಿಂದಲೇ ನುಡಿದಳು “ನನಗಲ್ಲಾ ನಿನಗೆ!”

ಕಿಸಲಯ ಕೋಮಲ ನಗುವಿನ ನಿನಾದ ಮನಮೋಹಕವಾಗಿ ಮೊಳಗಿತು.

ಕಮಲೇಶ್ ಊಟ ಮುಗಿಸಿ ಕನ್ನಡಿಯ ಮುಂದೆ ನಿಂತು ಮೋಟುಜಡೆಯನ್ನು ಬಿಚ್ಚಿ ಬಾಚಿ ಜಡೆ ಹಾಕಿಕೊಳ್ಳತೊಡಗಿದಳು. ಕನ್ನಡಿಯೊಳಗಿನ ಉಜ್ವಲ ಪ್ರತಿಬಿಂಬ ತನ್ನ ಕಣ್ಣುಗಳನ್ನೇ ಆಕರ್ಷಿಸುವಂತಿದೆ........ಚಂದ್ರಮುಖಿ ಬಂದಾಗಲೆಲ್ಲಾ “ನಿನಗೆ ಯಾವುದು ಕಡಿಮೆ ಅಂತ ಡಾಕ್ಟರಾಗಿ ದುಡಿಯುವ ಯೋಚನೆ ಮಾಡಿದ್ದಿ? ನಿನ್ನಂತಹ ಸುರಸುಂದರಿಗೇಕೆ ದೇಹದಂಡನೆ? ನಿನ್ನನ್ನು ಕೈಹಿಡಿದ ಮಹಾನುಭಾವ ಚಿನ್ನದ ಪುತ್ಥಳಿಯಂತಿಟ್ಟಾನು!” ಎಂದು ವಾಖ್ಯೆ ಮಾಡುವುದುಂಟು.

“ನನಗೆ ವೈಯ್ಯಕ್ತಿಕ ಸ್ವಾತಂತ್ರ್ಯ ಬೇಕು. ಎರಡೂ ಕೈಗಳಿಂದ ಮನಮುಟ್ಟಿ ಸೇವೆ ಸಲ್ಲಿಸುವ ಯೋಗ್ಯತೆ ಬೇಕು. ನನ್ನನ್ನು ನಾನು ಅಡವಿಟ್ಟುಕೊಳ್ಳಲಾರೆ.” ಎಂದು ಅಂತರ್ವಾಣಿಯೊಂದು ಕೂಗಿ ಹೇಳಿತು.

ಒಮ್ಮೆಲೇ ಚಿತ್ತವೆಲ್ಲ ರಾಣೀ ಭವತಾರಿಣೀ ಆಸ್ಪತ್ರೆಯ ಕಡೆ ಹಕ್ಕಿಯಂತೆ ಹಾರಿತು. ಆ ಹಿರಿಯ ಕಟ್ಟಡದ ತಣ್ಣೆಳಲಲ್ಲಿ ಎಲ್ಲಾ ರೋಗಿಗಳಿಗೆ ಸಲ್ಲುವ ಸೇವೆ ಪ್ರಕೃತಿಮಾತೆಯ ಆಶೀರ್ವಾದದಂತೆ ದೇವಪುರುಷನ ದಯೆಯಂತೆ ತೋರಿಬಂತು. ಬಿಳಿಯ ತೊಡಿಗೆ ರೋಮ ರೋಮಗಳಲ್ಲೂ ಮಾನವೀಯತೆಯನ್ನು ಸ್ರವಿಸುವ ಸಂಕೇತ........ಮತ್ತು ಸಂಕಲ್ಪ. ಅದಕ್ಕಿಂತಲೂ ಒರಿದಾದ ಮಾನವತೆ ಇನ್ನು ಇಲ್ಲವೇ ಇಲ್ಲ. ಏನೇ ಬರಲಿ, ದೂರಗಮ್ಯದೆಡೆಗೆ ಮುನ್ನುಗ್ಗುವುದೇ ಗುರಿ. ಗುರಿ ಮುಟ್ಟುವತನಕ ಹೋರಾಡುವುದು ಪರಮ ಗಂತವ್ಯ.

ಕಮಲೇಶಳಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿದಾಗ ಯಾರಿಗೂ ವಿಶೇಷವೆನಿಸಲಿಲ್ಲ. ವರ್ಷ ವರ್ಷವೂ ಪ್ರಥಮ ಶ್ರೇಣಿಯಲ್ಲಿ ಸಿಲ್ಲುತಿದ್ದ ಅವಳು

ಮೊದಲನೆಯ ಮತ್ತು ಎರಡನೆಯ ವರ್ಷಗಳನ್ನು ಸರಾಗವಾಗಿ ಕಳೆದಳು. ಎಂದಾದರೊಮ್ಮೆ ಕನ್ಯಾರ್ಥಿಗಳು ಬಂದಾಗ ಸುರೇಶ ದಲ್ಡಾಲಿ ತನ್ನ ಹೊಣೆಗಾರಿಕೆಯನ್ನಿಳಿಸಿಕೊಳ್ಳಲು ಮುಂದಾಗುತಿದ್ದ. ಹಾಗೆ ಬಂದಾಗಲೆಲ್ಲಾ ಮನೆಯಲ್ಲೊಂದು ಹಗರಣ. ಸ್ವರ್ಣಮಾಲಿನಿ ಮಗಳಿಗೆ ಪ್ರೋತ್ಸಾಹ ನೀಡಿದರೂ ಮುಂದೇನೋ ಎಂಬ ಕಳವಳ ತುಂಬಿಕೊಳ್ಳುವಳು. ಸುರೇಶ ದಲ್ಡಾಲಿ ಮಗಳ ದೃಢ ಭಾವಕ್ಕೆ ಮಣಿದಾಗ "ಕಮಲೇಶ್, ಎಲ್ಲಾ ಕಾಲವೂ ಹೀಗೆಯೇ ಇರುವುದಿಲ್ಲ; ಯಾವ ಘಳಿಗೆಯಲ್ಲಿ ಏನೋ...."ಎನ್ನುವ.

"ಹುಟ್ಟಿಸಿದವನು ಹುಲ್ಲು ಮೇಯಿಸುತ್ತಾನೆ ಅಪ್ಪಾಜಿ." ಅಷ್ಟೇ ಸರಳವಾದ ಉತ್ತರ.

ಸುರೇಶ ದಲ್ಡಾಲಿ ಏನನ್ನೋ ಹೇಳಲು ಪ್ರಯತ್ನಿಸಿ ಸುಮ್ಮನಾದಾಗ ತುಟಿಗಳಲ್ಲಿ ಹಸನಾದ ಎಳೆನಗು ಮೂಡಿತು. ಬೇರೆ ಏನೇ ಇದ್ದರೂ ಅವಳ ಅಸಾಧಾರಣ ಪ್ರತಿಭೆಯನ್ನು ಮನಸ್ಸು ಮೆಚ್ಚಿಕೊಂಡಿತ್ತು. ಈಗೀಗ ಅವಳ ಧೈರ್ಯವೂ ಸಹ ಡಂಗು ಬಡಿಸುತ್ತದೆ. ಆ ಮಹೂರ್ತದಲ್ಲಿ ಮೂಡಿದ ಮಂದಹಾಸ, ಮಾತಿನ ವೈಖರಿ ನೋಟದ ತೀಕ್ಷ್ಣತೆ, ಮುಖಭಾವ ಇವುಗಳನ್ನು ನೋಡಿ ಯಾರು ಏನು ಬೇಕಾದರೂ ತಿಳಿದುಕೊಳ್ಳಬಹುದು. ಸಾಮಾನ್ಯವಾಗಿ ದಲ್ಡಾಲಿ ಮಹಾಶಯ ಯಾವುದೇ ವಿಷಯವನ್ನು ಕುರಿತು ಮಾತಾಡಿದರೆ....ಒಂದುವೇಳೆ ಅದು ಅಸಂಗತವಾಗಿದ್ದರೂ ಅನ್ಯಾಯವೆನಿಸಿದರೂ ಅದನ್ನೇ ಪಟ್ಟು ಹಿಡಿದು ಸಮರ್ಥಿಸುವ ಹಠ ವಕೀಲಿಯ ವೈಖರಿಯಲ್ಲೇ ಹೊರಹೊಮ್ಮುತ್ತದೆ. ಶರೀರಕ್ಕೆ ಮುಪ್ಪು ತಾಗಿದ್ದರೂ ನವಚೈತನ್ಯ ತರಂಗಗಳಿಂದ ಕೂಡಿದ ಅಂತಃಪ್ರಜ್ಞೆ ಸಮಯಾಸಮಯಗಳಲ್ಲೂ ತುಟಿಗಳ ಮೇಲೆ ಎಳೆನಗುವನ್ನು ಚೆಲ್ಲಿ, ಮನಃಸ್ವಾಸ್ಥ್ಯವನ್ನೂ ಬುದ್ಧಿಯ ಸಮತೋಲನೆಯನ್ನೂ ಉದ್ದಂಡವಾಗಿ ಪ್ರದರ್ಶಿಸುವುದುಂಟು. ಸದಾ ಮಿನುಗುವ ಆ ಮಂದಹಾಸದಲ್ಲಿ ಪ್ರಧಾನ ಅಂಶವೇನೂ ಇಲ್ಲವೆಂಬುದನ್ನು ಸಹ ಯಾರಾದರೂ ಊಹಿಸಬಹುದಾದಷ್ಟು ಸರಳತೆ ವ್ಯಾಪಕವಾಗಿರುತ್ತದೆ. ಆತನ ಎದೆಯ ನಿಘಂಟಿನಲ್ಲಿ "ಪುತ್ರಿವಾತ್ಸಲ್ಯ" ಎಂಬುದಕ್ಕಿಂತ "ಹೊಣೆಗಾರಿಕೆ" ಎಂಬುದಕ್ಕೆ ಹೆಚ್ಚು ಪ್ರಾಧಾನ್ಯತೆ ಇದೆ.

"ಹುಟ್ಟಿಸಿದವನು ಹುಲ್ಲು ಮೇಯಿಸುತ್ತಾನೆ." ಎಂಬ ಮನೋಧಾರ್ಢ್ಯ

ಗಮನಿಸುತ್ತಿದ್ದರೂ ನುಂಗಲಾರದ ತುತ್ತಿನಂತಾಗಿ ಸುರೇಶ ದಲ್ಲಾಲಿ ಸುಮ್ಮನಾಗುವ. ಸಮಯ ಸಂದರ್ಭಗಳಲ್ಲಿ ಅಣ್ಣಂದಿರೂ ಗೋಳು ಹುಯ್ಯು ತ್ತಾರೆ. ಈ ಎಲ್ಲಾ ಹಣಾಹಣಿಯಲ್ಲಿಯೂ ತನ್ನ ದಿನಚರಿಯಲ್ಲಿ ಕಮಲೇಶ್ ಪೂರ್ಣಸುಖಿ.

ಅದುವರೆಗಿನ ದಿನಗಳು ಹರ್ಷಮಯವಾಗಿ ಕಳೆದಿದ್ದ ಕಮಲೇಶಳನ್ನು ವಿಷಮಶೀತ ಜ್ವರ ತನ್ನ ತೋಳತೆಕ್ಕೆಯಲ್ಲಿ ತಬ್ಬಿ ಹಿಡಿಯಿತು. ಜ್ವರ ಬಿಟ್ಟರೂ ಪುನಃಪುನಃ ಮರುಕಳಿಸುತ್ತಿದ್ದ ಅದು ಅವಳ ಶಕ್ತಿಯ ಸಾರವನ್ನು ಹಿಂಡಿ ಹೀರ ತೊಡಗಿತು. ಸ್ವರ್ಣಮಾಲಿನಿ ಆಸ್ಪತ್ರೆಗೂ ಮನೆಗೂ ಓಡಾಡಿ ದಣಿದಳು. ಸದಾ ಕಾಣದ ದೇವರಿಗೆ ಕೈ ಮುಗಿದು ಸಂಧ್ಯಾದೀಪ ಇಟ್ಟು ಮಗಳಸಲುವಾಗಿ ಬೇಡಿಕೊಳ್ಳುವಳು. ಅದೇ ನೇರಕ್ಕೆ ತಿಂಗಳೆರಡರಿಂದ ಆಸ್ಪತ್ರೆಯಲ್ಲಿ ಮಲಗಿ ಅನುಭವ ಪಕ್ವವಾಗಿ ಅಲ್ಲಿನ ಸುದೀರ್ಘ ರೋಗಿಗಳ ಬಗೆಗೆ ಮನಸ್ಸು ಆತಂಕ ಕರುಣೆಗಳಿಂದ ಮಾರ್ದವಗೊಂಡು ಶ್ರೀಮಂತತೆಯಿಂದ ಬೆಳಗಿದಳು ಕಮಲೇಶ್ ರಾಣೀ ಭವತಾರಿಣೀ ಆಸ್ಪತ್ರೆಯ ಆಶ್ರಯ. ಡಾ|| ರಘುರಾಂರವರ ಆರೈಕೆ. ಆದರೂ ಜ್ವರ ಬಿಡಲಿಲ್ಲವಲ್ಲಾ ಎಂಬುದೊಂದು ಸಣ್ಣ ಕೊರಗು. ಸ್ವರ್ಣ ಮಾಲಿನಿ ಮನೆಯಿಂದ ಬಂದವಳೇ ಮಳೆ ಬಿಸಿಲಾಗಿ ಬಾಷ್ಪರುದ್ಧ ಕಂಠದಿಂದ ಹೇಳಿದಳು,

"ಕಮಲೇಶ್, ಆತ್ಮಾರಾಂಕರ್ವೆ ಸಂಸಾರ ಸಮೇತ ಅಮೆರಿಕಾ ಪ್ರವಾಸ ಕೈಗೊಂಡಿದ್ದಾರೆ. ಆರೇಳು ವರ್ಷ ಅಲ್ಲೇ ಇರುವ ಯೋಜನೆಯಂತೆ. ಸದ್ಯ ದಲ್ಲೇ ಹೊರಡುವುದರಿಂದ ಈಗ ಇಲ್ಲಿಗೆ ಬರಲಾಗುವುದಿಲ್ಲವೆಂದು ಬರೆದಿದ್ದಾರೆ. ಕೇಳಿದಾಗಿನಿಂದ ನನಗೆ ಸಂಕಟ....ಇನ್ನವರನ್ನು ನೋಡುವುದೆಂದಿಗೋ...."

"ಹೋಗಲಿ ಬಿಡಿ, ಬೇಕಾದಷ್ಟು ಹಣ ಇದೆ. ಇಲ್ಲೇ ಇದ್ದರೆ ದೇಶ ನೋಡುವುದಕ್ಕಾಗುತ್ತದೆಯೆ ?"

"ಅದೇನೋ ಸರಿಯೆ....ಅಂತಹ ಸ್ನೇಹ ಪೂರ್ಣ ಜನ ಯಾರಿದ್ದಾರೆ ಇಲ್ಲಿ ?"

"ಅದಕ್ಕೇನು ಮಾಡೋಣ ಅದರಲ್ಲಿ ಅವರ ಹಿತವೂ ಉಂಟಷ್ಟೆ ?" ಕಮಲೇಶ್ ನೀರಸ ನಗೆ ಬೀರಿದಳು.

ಇಂದು ನಿನ್ನೆಗಿಂತಲೂ ಚಾರ್ಟಿನಲ್ಲಿ ಕೆಂಪುರೇಖೆ ಏರಿತ್ತು. ಇದುವರೆ

ವಿಗೂ ಮಾತುಕತೆಯಲ್ಲಿ ನಿಮಗ್ನಳಾದ ಸ್ವರ್ಣಮಾಲಿನಿ ಆದರ ಕಡೆ ಗಮನ ಹರಿಸಿರಲಿಲ್ಲ. ಅದನ್ನು ನೋಡಿದೊಡನೆ ತುಸು ಕಸಿವಿಸಿಯುಂಟಾಯಿತು. ಡಾ|| ರಘುರಾಂರವರನ್ನು ಕಂಡುಬರಲು ಆದೇ ಆಕ್ಷಣ ಹೊರಟಳು. ಕಮಲೇಶ್ "ಅವರೀಗ ಬಂದೇಬರುತ್ತಾರೆ, ಮತ್ತೇಕೆ ?" ಎಂದರೂ ಕೇಳಲಿಲ್ಲ.

ಬಾಗಿಲ ಬಳಿ ಕಟಕಟ ಸದ್ದು.

"Yes Please!" ನಲ್ಮೆಯಿಂದ ಹೊರಬಿತ್ತು ಕ್ಷೀಣಿತ ದನಿ.

ಮುಚ್ಚಿದ ತುಂಡು ಬಾಗಿಲ ಕೆಳಗೆ ಬಣ್ಣ ಬಣ್ಣದ ಸೀರೆಗಳ ಸಾಲು ನಿರಿ ಗೋಚರಿಸುವುದರೊಳಗಾಗಿ ಕಂಪು ಸೂಸುವ ಅತ್ತರಿನ ಪೆಂಪು ಮೂಗಿನ ತನಕ ನುಗ್ಗಿ ಬಂದು ಗೆಳತಿಯರಾಗಮನದ ಸುದ್ದಿಯನ್ನು ಹೃದಯ ಉಕ್ಕೇರು ವಂತೆ ಬಿತ್ತರಿಸಿತು.

ಓರಗೆಯ ವಿದ್ಯಾರ್ಥಿನಿಯರಾದ ಸುಧಾರಾಣಿ, ಜುಬೇದಾ, ಸಕ್ಕೂ ಒಳ ಬಂದರು. ಮುಖದಲ್ಲಿ ಎಳೆ ನಗು ಅರಳಿತು. "ಹೇಗಿದ್ದಿ ಕಮಲೇಶ್ ?"

"ನೋಡು...."

ಸಕ್ಕೂ ಛಾರ್ಟನ್ನು ಕೈಗೆ ತೆಗೆದುಕೊಂಡಳು. ಎಲ್ಲರ ದಿಟ್ಟಿಯೂ ಅತ್ತ ಹೊರಳಿತು. ಕೆಂಪುರೇಖೆ ತುಸು ಮೇಲಕ್ಕೇರಿದ್ದುದು ಗೆಳತಿಯರ ಮನಸ್ಸಿಗೆ ಕಸಿವಿಸಿ ಮೂಡಿಸಿತು. ಚಾರ್ಟನ್ನು ಸ್ವಸ್ಥಾನದಲ್ಲಿರಿಸಿ ಮೂವರೂ ಬಳಿಯಲ್ಲಿ ನಿಂತರು.

"ಮಾ ಬರಲಿಲ್ಲವೇ ಕಮಲೇಶ್ ?" ಸಕ್ಕೂ ಕೇಳಿದಳು.

ಮಾತು ಮುಗಿಯುವುದರೊಳಗಾಗಿ ಬಾಗಿಲಲ್ಲಿ ಕಟಕಟ ಸದ್ದು ಕೇಳಿ ಬಂತು.

ಎಲ್ಲರ ಕಣ್ಣಾಲಿಗಳೂ ಸಹಜಭಾವದಿಂದ ಆಕಡೆ ನಿಟ್ಟಿಸಿದುವು. ಮುಚ್ಚಿದ ತುಂಡುಬಾಗಿಲನ್ನು ತಳ್ಳಿ ಡಾ|| ರಘುರಾಂ ಒಳ ಬಂದರು. ಅವರ ಹಿಂದೆಯೇ ಸ್ವರ್ಣಮಾಲಿನಿಯೂ ವಾರ್ಡಿಗೆ ಪದಾರ್ಪಣೆ ಮಾಡಿದಳು. ನೆರೆದ ಲಲನೆಯರು ವಿನಯ ಪೂರ್ವಕವಾಗಿ ಕರ ಜೋಡಿಸಿದರು....

"ಪ್ರಣಾಮ್ ಸರ್ !"

"ನೀವೆಲ್ಲ ಕೂಡಿ ಅವಳಿಗೆ ಭಯ ಹಿಡಿಸಿದಿರಾ ?" ಹುಬ್ಬೇರಿಸಿದರು ಡಾ|| ರಘುರಾಂ.

"ಇಲ್ಲ ಸರ್" ಮುಗುಳುನಗೆ ತುಂಬುಗಲ್ಲದ ಮೇಲೆ ಪಸರಿಸಿತು.

"ಹೇಗಿದ್ದಿ ಕಮಲೇಶ್ ?"

"ಅಷ್ಟೇನು ಆಯಾಸವಿಲ್ಲ ಸರ್."

"ಮತ್ತೇಕೆ ನಿಮ್ಮಮ್ಮ ಗಾಬರಿಯಾಗಿದ್ದಾರೆ ?"

ಡಾ|| ರಘುರಾಂ ನಾಡಿಯನ್ನು ಪರೀಕ್ಷಿಸಿ, ಹೃದಯದ ಮಿಡಿತವನ್ನು ಗಮನಿಸಿ, ಅವಳ ಸ್ಥಿತಿಗತಿಯನ್ನು ಕೂಲಂಕಶವಾಗಿ ನೋಡಿ "ಇನ್ನು ಪರವಾಗಿಲ್ಲ ಕಮಲೇಶ್....ನೀನು ಒಂದೆರಡು ದಿನಗಳಲ್ಲಿ ಸರಿಹೋಗಿಬಿಡುತ್ತಿ." ಎಂದರು ಸಮಾಧಾನದಿಂದ. ಅವರ ಉಜ್ವಲ ನೇತ್ರಗಳು ನಿಶ್ಚಲವಾಗಿ ಬೆಳಗಿದುವು. ಹೃದಯದ ಹೊಂಗಡಲಿನಿಂದ ಅನುರಾಗಪೂರ್ಣವಾದ ದನಿ ಹರಿದು ಬಂತು "ನೀನು ಡಾಕ್ಟರಾಗಲಿರುವ ಹುಡುಗಿ........ನಿನಗೆ ಎಷ್ಟು ಧೈರ್ಯವಿದ್ದರೂ ಸಾಲದು. ಹೀಗಾದರೆ ಹೇಗೆ? ಮನಸ್ಸಿನಲ್ಲಿ ಯಾವ ಕಳವಳವನ್ನೂ ಇಟ್ಟುಕೊಳ್ಳಬಾರದು ಮಗೂ...."

"ಇಲ್ಲ ಸರ್........ನಿಜವಾಗಿಯೂ ನನಗೆ ಕಳವಳವಿಲ್ಲ."

"ಇನ್ನು ಆರಾಮವಾಗಿರು........ಏನೂ ತೊಂದರೆಯಿಲ್ಲ." ವಿದ್ಯಾರ್ಥಿನಿಯರ ಕಡೆ ತಿರುಗಿ "ನಿಮಗಿಂದು ಕ್ಲಾಸ್ ಇಲ್ಲವೆ ?" ಎಂದರು ಡಾ||ರಘುರಾಂ.

"ಉಂಟು. ಡಾ|| ಹುಸೇನ್‌ರವರ ಕ್ಲಾಸು ಹತ್ತೂವರೆಯ ನಂತರ ಇದೆ."

ಸ್ವರ್ಣಮಾಲಿನಿಗೆ ಎರಡು ಸಮಾಧಾನದ ಮಾತುಗಳನ್ನು ಹೇಳಿ ಹೊರಟರು ಡಾ|| ರಘುರಾಂ. ಹುಡುಗಿಯರು ಹತ್ತೂವರೆಯತನಕ ಕುಳಿತು ಮಾತುಕತೆಯಾಡಿ ಗೆಳತಿಯ ಮನಕ್ಕೆ ಹರ್ಷವನ್ನೂಡಿಸಿ, ಸ್ವರ್ಣಮಾಲಿನಿಯ ಮನದ ಬೇಸರವನ್ನು ದೂರಗೊಳಿಸಿ ತಮ್ಮ ತರಗತಿಗಳಿಗೆ ಹೊರಟರು.

ಮುಚ್ಚಿದ ತುಂಡು ಬಾಗಿಲಾಚೆ ಉದ್ದವಾಗಿ ಹರಿದ ಕಾರಿಡಾರಿನಲ್ಲಿ ಓಡಾಡುವ ಜನರ ಪ್ಯಾಂಟು ಬೂಟುಗಳಿಂದ ಶೋಭಿತವಾದ ಹೆಜ್ಜೆಗಳು, ಅಂದವಾದ ಸೀರಿಗಳಿಂದ ಸುತ್ತುವರಿದು ಚಪ್ಪಲಿ ತುಳಿದ ಹೆಜ್ಜೆಗಳು, ಧವಳ ವರ್ಣರಂಜಿತವಾದ ಪಾದರಕ್ಷೆಗಳನ್ನು ಧರಿಸಿದ ಹೆಜ್ಜೆಗಳು ಅತ್ತಿತ್ತ ಓಡಾಡುವುದನ್ನು ನೋಡುತ್ತಾ ಮಲಗಿದಳು ಕಮಲೇಶ್. ಸ್ವರ್ಣಮಾಲಿನಿಯು ಪುಸ್ತಕ ಪಠಣ ಕೈಗೊಂಡಿದ್ದಳು.

ಮರುದಿನ ಗೆಳತಿಯರ ತಂಡ ಆಗಮಿಸಿದಾಗ ತುಸು ಹೊತ್ತೇ ಆಗಿತ್ತು.

ಕಮಲೇಶ್ ಕಣ್ಣರಳಿಸಿದಳು "ಏಕೆ ಇಷ್ಟು ಹೊತ್ತು ?"

"ನೀನು ಮಾತನಾಡಿ ದಣಿಯಬಾರದು. ನಾವು ಹೇಳುತ್ತೇವೆ........ ಸುಮ್ಮನೆ ಕೇಳು." ಎಂದಳು ಸಕ್ಕು. ಚೆಂದುಟಿಗಳು ಬಿರಿದಾಗ ಕೆನ್ನೆಗಳಲ್ಲಿ ಮನಮೋಹಕವಾದ ಗುಳಿಗಳು ಬಿದ್ದುವು.

ವಿದ್ಯಾರ್ಥಿನಿಯರ ದಳ ಚಾರ್ಟಿನ ಕಡೆಗೆ ಕಣ್ಣು ಹಾಯಿಸಿತು. ಇಂದು ಕೆಂಪುರೇಖೆ ಏರಿರಲಿಲ್ಲ. ರೋಗಿಯ ಮುಖವೂ ಪ್ರಸನ್ನವಾಗಿದೆ. ಶುಭಕರ ಸುದ್ದಿ ಎಲ್ಲರ ಮುಖದಮೇಲೂ ಸಮಾಧಾನದ ತೆರೆ ಹರಡಿತು. ಜುಬೇದಾ ಬೇಗಂ ಹೊತ್ತಾಗಿ ಬಂದುದಕ್ಕೆ ಕಾರಣವನ್ನು ಮುಂದಿಟ್ಟಳು- "ನಾವೊಂದು ಪೇಷಂಟನ್ನು ನೋಡಬೇಕಾಗಿತ್ತು. ಆರನೆಯ ಜನರಲ್ ವಾರ್ಡಿಗೆ ಹೋಗಿ ಬಂದೆವು. ನಮ್ಮ ನೆರೆಮನೆಯ ವಸಂತ ಬಿ. ಎ. ವಿದ್ಯಾರ್ಥಿನಿ. ಅವಳು ಮೊದಲಿನಿಂದಲೂ ಸಣ್ಣಗೆ ನಿಶ್ಶಕ್ತಿಯಾದ ಹುಡುಗಿ. ಮೇಲಾಗಿ ಈಚೆಗೆ ಆರೋಗ್ಯ ಚೆನ್ನಾಗಿರಲಿಲ್ಲ. ಪರೀಕ್ಷೆಯ ಕಾಲಕ್ಕೆ ತೊಂದರೆಯಾದೀತೆಂದು ಡಾಕ್ಟರ ಬಳಿಗೆ ಹೋದರೆ ಅವರು ನೀನು ಮೂರು ತಿಂಗಳ ಗರ್ಭಿಣಿ ಎಂದು ಬಿಡುವುದೆ ?....ಅವಳಿಗಾದ ಅವಮಾನ ಸಿಟ್ಟು ದುಃಖಗಳಿಗೆ ಎಣೆಯೇ ಇಲ್ಲ. ಹುಡುಗಿ ಬುದ್ಧಿವಂತೆಯಾದುದರಿಂದ ನೀವದನ್ನು ಸಿದ್ಧಪಡಿಸಿಯೇ ತೀರಬೇಕೆಂದು ಮನೆಗೆ ಹೋಗದೆ ಪಟ್ಟು ಹಿಡಿದಳು. ಅವರು ಅಷ್ಟಕ್ಕೂ ಬಿಡದೆ ನೀನು ಗರ್ಭಿಣಿಯಲ್ಲದಿದ್ದರೆ "ನಾನು ಕೆಲಸ ಬಿಟ್ಟುಬಿಡುವೆ" ಎಂದೂ ಮರು ಸವಾಲು ಹಾಕಿದರಂತೆ ! ವಸಂತಾ ಹಿರಿಯ ವೈದ್ಯರ ಬಳಿಗೆ ಹೋಗಿ ಪರಿಸ್ಥಿತಿಯನ್ನು ಮುಂದಿಟ್ಟು ನಾನು ಮಾನನಷ್ಟ ಮೊಕದ್ದಮೆ ಹೂಡುವೆ" ಎಂದಳಂತೆ. ಅನಂತರ ಪರೀಕ್ಷಿಸಿದ ಡಾಕ್ಟರು ಗರ್ಭಿಣಿಯಲ್ಲವೆಂದಿದ್ದಾರೆ ಇನ್ನು ಮುಂದೇನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಕಾದು ನೋಡಬೇಕು....ಹೇಗಿದೆ ನೋಡು !"

"ಡಾಕ್ಟರಾದವರು ವಿವೇಚನೆ ಇಲ್ಲದೆ ಕೆಲಸ ಮಾಡಿದರೆ ಆಗುವುದೇ ಹೀಗೆ."

ಆಶ್ಚರ್ಯ ಪರಮಾಶ್ಚರ್ಯ !

ಮೌನವಾಗಿ ವಿಷಯವನ್ನು ಕೇಳುತಿದ್ದ ಸ್ವರ್ಣಮಾಲಿನಿ "ಛೀ ಃ! ಹೀಗೂ ಉಂಟೇ ?" ಎಂದಳು.

ಅನಂತರ,

ಗೆಳತಿಯರ ತಂಡ ಕಮಲೇಶಳಿಗೆ ಬೇಗನೆ ಉತ್ತಮ ಗೊಳ್ಳುವಂತೆ ಹಾರೈಸಿ ಕುಲು ಕುಲು ನಗೆಯೊಡನೆ ನಿರ್ಗಮಿಸಿತು.

ಸುರೇಶ ದಲ್ಲಾಲಿ ಕೋರ್ಟಿನಿಂದ ಆಸ್ಪತ್ರೆಗೆ ಬಂದಾಗ ಸ್ವಭಾವ ಭೂಷಣವಾದ ಅರ್ಥಹೀನ ಕಿರುನಗೆ ತುಟಿಗಳಲ್ಲಿತ್ತು. ಕಪ್ಪು ಉಡುಪಿನಸಹಿತ ಒಳ ಹೆಜ್ಜೆಯಿಟ್ಟಾಗ ಕಮಲೇಶ್ ಟ್ರಾನ್ಸಿಸ್ಟರ್ ಇಟ್ಟುಕೊಂಡು ಸಂಗೀತದ ಸವಿಯಲ್ಲಿ ಸಂಪೂರ್ಣ ಮುಳುಗಿದ್ದಳು. ಕನಕಲಕ್ಷ್ಮಿಯಂತೆ ಕಳಕಳಿಸುತಿದ್ದ ಮುಗಳು ರಕ್ತ ಹೀನತೆಯಿಂದ ಬೆಂಡಿನ ಬೊಂಬೆಯಂತಾಗಿದ್ದುದು ಮಾತ್ರವ ಲ್ಲದೆ ಸೊರಗಿ ಸಣ್ಣಗೆ ಹಂಚಿ ಕಡ್ಡಿಯಾಗಿದ್ದುದು ಮನಸ್ಸಿಗೆ ಕಿನಿಸಿಗೆ ಊಡಿ ಸಿತು. ಚಾರ್ಟನ್ನೂ ಅಂದಿನ ಸ್ಥಿತಿಗತಿಯ ರಿಕಾರ್ಡನ್ನೂ ಗಮನಿಸಿದ ನಂತರ ಸಮಾಧಾನದ ಉಸಿರನ್ನು ಬಿಟ್ಟರು ವಕೀಲ ಮಹಾಶಯ.

"ನೀನು ಚೆನ್ನಾಗಿದ್ದಿದ್ದರೆ........" ಮಾತನ್ನು ಅಷ್ಟಕ್ಕೆ ತುಂಡುಗಡಿದು ಏನೋ ಯೋಚಿಸುತ್ತಾ ಸುಮ್ಮನಾದರು. ಅವರು ವಾಕ್ಯವನ್ನು ಪೂರ್ತಿಗೊಳಿ ಸದಿದ್ದರೂ ಅದೇನೆಂಬುದು ಕಮಲೇಶಳಿಗೆ ಚೆನ್ನಾಗಿ ಗೊತ್ತು........ಇತ್ತೀಚಿಗೆ ಕನ್ಯಾರ್ಥಿಯಾಗಿ ಬಂದಿದ್ದ ವರಶ್ರೇಷ್ಠನೊಬ್ಬ ಇದುವರೆವಿಗೂ ಕಾದು, ಇನ್ನು ಸಾಧ್ಯವಿಲ್ಲವೆಂದು ಮತ್ತೊಬ್ಬ ಕನ್ಯೆಯನ್ನು ಒಪ್ಪಿಕೊಂಡನಂತೆ!

ಕಮಲೇಶ್ ತಂದೆಯ ಕಡೆ ಮಾತಾಡದೆ ನಿಟ್ಟಿಸಿ ನೋಡಿದಳು. ಜ್ಯೋತಿರ್ಮಯವಾದ ಕಣ್ಣುಗಳಲ್ಲಿ ಒಂದು ಘಳಿಗೆ ಶೋಕವ್ಯಾಕುಲ ಛಾಯೆ ಮೂಡಿ ಮಾಯವಾದಂತೆ ತೋರಿತು.

"ಪೂರ್ಣ ಚೇತರಿಸಿಕೊಳ್ಳಲು ಒಂದೆರಡು ತಿಂಗಳಾದರೂ ಬೇಕು ಕಮಲೇಶ್."

ಕಮಲೇಶ್ ಮಾತನಾಡದೆ ತಲೆಯಾಡಿಸಿ 'ಹೌದು' ಎಂಬಂತೆ ಸೂಚಿ ಸಿದಳು.

ಸುರೇಶ ದಲ್ಲಾಲಿಯ ಶರೀರ ಕರಿಯ ಕೋಟು ಜರಿಯ ಪೇಟಗಳೊ ಳಗೆ ಹುಗಿದುಹೋಗಿತ್ತು. ಹಲವಾರು ಬಗೆಯ ಮೊಕದ್ದಮೆಗಳ ವಿಚಾರ ಮಂಥನದಲ್ಲಿ ಬಗೆ ಕದಡಿ ಬಗ್ಗಡವಾಗಿದೆ. ನಿಶ್ಚಲವಾಗಿ ಬೆಳಗುವ ಕಣ್ಣುಗ ಳಲ್ಲಿ ಭಾವುಕತೆ ತುಂಬಿದ್ದರೂ ರಂಗು ಮೂಡಿದೆ........ಭಾವಾವಿಷ್ಟತೆ ದೃಷ

ಸಂಕಲ್ಪ ಮನದಲ್ಲಿ ತುಂಬಿರುವುದರಿಂದ ಅವರದು ಬಹಳ ಗಂಭೀರ ಮನೋ ವೃತ್ತಿ. ಮಿತ ಭಾಷಿಯಾದರೂ ಸಮಯ ಸಂದರ್ಭಗಳಲ್ಲಿ ವ್ಯಾಗ್ಯುದ್ಧಕ್ಕೂ ಸಿದ್ಧನಾಗುವ ವ್ಯಕ್ತಿ. ಆ ಸಜೀವ ಗಾಂಭೀರ್ಯದ ಎದುರು ಶೈಲೋಪಶೈಲ ಗಳು ಕಳಾಹೀನವಾಗಿ ತೋರುವುವು, ಎಂದರೆ ಅತ್ಯುಕ್ತಿಯಲ್ಲ ವೇನೊ....

"ಅಪ್ಪಾಜಿ........ನೀವು ಮನೆಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ ನಾನು ಸುಖವಾಗಿರುವೆ. ನನಗೀಗ ಯಾವ ತೊಂದರೆಯೂ ಇಲ್ಲ." ಶ್ರಾಂತ ಕ್ಷೀಣಕಂಠ ಮೊಳಗಿತು.

ಯಾವುದೋ ಮೊಕದ್ದಮೆಯ ಅಂತರಾಳದಲ್ಲಿ ಮುಳುಗಿ ಅಂತರ್ಗತ ವಾಗಿದ್ದ ಅವರ ಚಿತ್ತ ವಾಸ್ತವ್ಯ ಜಗತ್ತಿಗೆ ಹರಿದುಬಂತು. "ಹಾಗಿದ್ದರೆ ನಾನು ಹೋಗಲೇ ?" ಎನ್ನುತ್ತಾ ಎದ್ದು ನಿಂತು ಉತ್ತರಕ್ಕಾಗಿ ನಿರೀಕ್ಷಿಸಿದರು.

ಸಮಾಧಾನಪೂರ್ಣ ದನಿಯಲ್ಲಿ "ಆಗಲಿ" ಎಂದಳು, ಅವಳು.

ಸುರೇಶ ದಲ್ವಾಲಿ ಮಗಳ ತಲೆಯಮೇಲೆ ಕೈಯಿಟ್ಟು ನಲ್ಮೆಯಿಂದ ನೇವರಿಸಿ "ಬೇಗನೆ ಚೇತರಿಸಿಕೊ ...ಕಮಲೇಶ್" ಎಂದರು. ಪ್ರೇಮಸ್ನಿಗ್ಧ ಹಸ್ತ ಕದಲದೆ ಹಣೆಯಮೇಲಿತ್ತು.

"ದೇವರಿದ್ದಾನೆ ಯೋಚಿಸಬೇಡ."

ಅವಳ ಕಣ್ಣುಗಳಲ್ಲಿ ಹೊಳೆಹೊಳೆವ ತರುಣ ಕೋಮಲ ಸ್ಥಿರಭಾವ ವನ್ನು ನಿಟ್ಟಿಸುತ್ತಾ ತಣ್ಣನೆಯ ಹಸ್ತಗಳಿಂದ ತಲೆಯನ್ನು ಇನ್ನೊಮ್ಮೆ ಮೃದು ವಾಗಿ ನೇವರಿಸಿ ಸಾಂತ್ವನಗೈಯ್ಯುವಂತೆ ಪ್ರೇಮಪೂರಿತ ದಿಟ್ಟಿಯಿಂದ ನೋಡಿ "ಮಲಗಿ ಬೇಸರವಾಗಿದೆ........ಪಾಪ."

ಸುರೇಶ ದಲ್ವಾಲಿ ನಿಷ್ಕ್ರಮಿಸಿದಾಗ ಅವಳ ಸಜಲ ನಯನಗಳು ಕಣ್ಮ ರೆಯಾಗುವವರೆಗೂ ನಿಟ್ಟಿಸಿದುವು.

ಸೂರ್ಯ ತಂಗಿದ. ಸಂಜೆಯ ಸೊಂಪು ತೆರೆ ತೆರೆಯಾಗಿ ಹರಡತೊಡಗಿತು.

ಕಮಲೇಶ್ ದಿಟ್ಟಿಯನ್ನು ಕಿಟಕಿಯಲ್ಲಿ ಚೆಲ್ಲಿ ಕೊಟ್ಟಳು

ಸದ್ದಿಲ್ಲದ ಶಾಂತಿಯನ್ನು ಬೇಧಿಸಿಕೊಂಡು ಬಂದ ಪಾದರಕ್ಷೆಗಳ ಪಟಪಟ ಸದ್ದು ಗಮನವನ್ನು ಸೆಳೆಯಿತು. ಸಕ್ಕು ಸಪ್ಪೆಮೋರೆಯಿಂದ ಒಳಹೆಜ್ಜೆ ಇಟ್ಟಳು.

"ಏನಮ್ಮಾ ಸಕ್ಕು ? ಅನಿರೀಕ್ಷಿತವಾಗಿ ಈ ಹೊತ್ತಿನಲ್ಲಿ ಬಂದೆ ?"

"ಇಂದು ಮಧ್ಯಾಹ್ನ ಮನೆಯಲ್ಲಿ ಇದ್ದಕ್ಕಿದ್ದಂತೆ ಒಂದು ಅನಾಹುತ."

"ಏನು ?"

"ಅಮ್ಮ ಕಾಳು ಕೇರುತ್ತಿದ್ದಾಗ ಎದುರುಗಡೆಯಿಂದ ಬಿರುಗಾಳಿ ಬೀಸಿ, ಕಾಳಿನ ಧೂಳು ಕಣ್ಣು ಮೂಗುಗಳಲ್ಲಿ ಸೇರಿ ಉಸಿರು ಕಟ್ಟಿ, ಉರುಳಿ ಬಿದ್ದು ಒದ್ದಾಡತೊಡಗಿದರು. ಅವರಿಗೆ ಶೈತ್ಯೋಪಚಾರ ಮಾಡಿದರೂ ಸಂಕಟ ಹರಿಯಲಿಲ್ಲ. ಭಯಂಕರ ಕೆಮ್ಮುಲು ಹತ್ತಿದೆ. ಇಲ್ಲಿಗೆ ಕರೆತಂದಿದ್ದೇನೆ. ಆಗಿನಿಂದಲೂ ಡಾಕ್ಟರುಗಳು ನೋಡುತ್ತಿದ್ದಾರೆ. ಇದುವರೆವಿಗೂ ಕೆಮ್ಮುಲು ನಿಲ್ಲಿಸಲಾಗಲಿಲ್ಲ. ಅವರು ಕಷ್ಟಪಡುವುದನ್ನು ನೋಡುವುದೇ ಸಂಕಟ. ನಮ್ಮ ತಂದೆ ಅಲ್ಲಿರುವುದರಿಂದ ನಿನ್ನನ್ನಿಷ್ಟು ನೋಡಿ ಹೋಗೋಣವೆಂದು ಬಂದೆ."

ಸಕ್ಕೂ ಮುಖಕಪ್ಪು ಕೆಂಪು ಬಣ್ಣಗಳ ಮಿಶ್ರಣವಾಗಿತ್ತು.

"ನಿನ್ನಂಥ ಧೈರ್ಯಗಾತಿ ಇಷ್ಟೊಂದು ಎದೆಗೆಟ್ಟರೆ ಹೇಗೆ ಹೇಳು ?"

"ನಾನು ಹೆದರಲಿಲ್ಲ. ಅವರ ಕಷ್ಟ ನೋಡುವುದಕ್ಕಾಗುವುದಿಲ್ಲ."

"ಸ್ವಲ್ಪ ಹೊತ್ತು ತೊಂದರೆಯಾದೀತು, ಅನಂತರ ಸರಿಹೋದಾರು."

ಸಕ್ಕು ಮಾತಾಡಲಿಲ್ಲ. ಅಷ್ಟಾದರೆ ಸಾಕು ಎಂದು ಚಿಂತಿಸಿತು ಮನಸ್ಸು.

ಸಕ್ಕು ಅಲ್ಲಿ ಹೆಚ್ಚು ಹೊತ್ತಿರದೆ ಹೊರಟಳು. ಸಹ ವಿದ್ಯಾರ್ಥಿನಿಯರ ತಂಡದಲ್ಲಿ ಅವಳಂತಹ ಧೈರ್ಯಗಾತಿಯೇ ಇನ್ನಿರಲಿಲ್ಲ ಆದರೂ ಆ ಪೌರುಷೇಯ ಪ್ರಕೃತಿಯ ಅಂತರಾಳದಲ್ಲಿ ಹುದುಗಿರುವ ಮಾರ್ದವ ಭಾವನೆಯನ್ನು ಕಂಡು ಕಮಲೇಶ್ ಆಶ್ಚರ್ಯ ಚಕಿತಳಾದಳು.

ದೈನಂದಿನ ಪತ್ರಿಕಯ ತಲೆಬರಹಗಳ ಮೇಲೆ ಕಣ್ಣಾಡಿಸುವಾಗ ರಸ್ತೆ ಅಪಘಾತದ ಸುದ್ದಿಯೊಂದು ಕಣ್ಮನಗಳನ್ನು ಸೆಳೆಯಿತು........ಟ್ರ್ಯಾಕ್ಟರ್ ರಸ್ತೆಯ ಏರುಮುಖವಾಗಿ ಓಡುವಾಗ ಅದರ ಟ್ರೈಲರ್ ಆಕಸ್ಮಿಕವಾಗಿ ಕೊಂಡಿ ಕಳಚಿ, ಹಿಂದುಗಡೆ ಬರುತಿದ್ದ ಪಾದಚಾರಿಯ ಮೇಲೆ ಹಿಮ್ಮೊಗವಾಗಿ ನುಗ್ಗಿ ಆ ನತದೃಷ್ಟ ವ್ಯಕ್ತಿಗೆ ಮಾರಕವಾಗಿದೆ........ದುರ್ವಿಧಿ ಯಾವ ಮಾಯ ಕತೆಯಿಂದ ಹೊಂಚು ಹಾಕಿತ್ತೋ........

ಮರುದಿನ ಮುಂಬೆಳಕು ಮೂಡಿದಾಗ ಜ್ವರವಿಲ್ಲದೆ ಮೈ ಹಗುರವಾಗಿತ್ತು.

ಬಾಗಿಲಲ್ಲಿ ಕಟಕಟ ಸದ್ದುಮಾಡಿ ಶ್ವೇತವಸನಧಾರಿಣಿ ಒಳ ಬಂದಳು ಕೈಯಲ್ಲಿ ಥರ್ಮಾಮಿಟರ್ ಇತ್ತು. ಅವಳು ತನ್ನ ಕರ್ತವ್ಯವನ್ನು ಮುಗಿಸಿ ನಿರ್ಗಮಿಸುತ್ತಲೂ ಸಕ್ಕೂ ಆಗಮಿಸಿದಳು.

"ಹೇಗಿದ್ದಾರೆ ನಿಮ್ಮ ತಾಯಿ ?"

"ಭಯಂಕರ ಆಸ್ತಮಾ ಶುರುವಾಗಿಬಿಟ್ಟದೆ, ಅದೇ ಅಲ್ಪಕಾರಣದಿಂದ."

"ಪಾಪ........"

"ಬಾ........ಒಂದಿಷ್ಟು ವರಾಂಡದಲ್ಲಿ ಅಡ್ಡಾಡುವೆಯಂತೆ.... ..."

ಇಬ್ಬರೂ ಹೊರಬಂದು ಹೂ ಬಿಸಿಲಿಗೆ ಮೈಗೊಟ್ಟು ಸ್ವಲ್ಪ ಹೊತ್ತು ನಿಂತರು.

"ವಸಂತ ಗೆದ್ದು ಬಿಟ್ಟಳು! ಅವಳನ್ನು ಪರೀಕ್ಷಿಸಿ ಗರ್ಭಿಣಿ ಎಂದು ತಪ್ಪು ವರದಿ ಮಾಡಿದ ಡಾಕ್ಟರು ಎರಡು ಸಾವಿರ ರೂಪಾಯಿಗಳು ದಂಡರೂಪದಲ್ಲಿ ತೆತ್ತಿದ್ದಾರೆ." ಸಕ್ಕು ನುಡಿದಳು.

"ಒಳ್ಳೆಯದಾಯಿತು. ಕಲಿತವರ್ಗವೂ ಪಾಠ ಕಲಿಯಬೇಕಾದುದು ನ್ಯಾಯವೇ........ಇಲ್ಲದಿದ್ದಲ್ಲಿ ಈ ದುಡುಕು ದುರಾಗ್ರಹಗಳನ್ನು ಇನ್ನಷ್ಟು ಬಲಿತುಕೊಳ್ಳುತ್ತವೆ."

ಅದೇ ದಾರಿಯಲ್ಲಿ ಸ್ಟ್ರೆಚರಿನ ಮೇಲೆ ವ್ಯಕ್ತಿಯೊಂವನ್ನು ಹೊತ್ತು ತರುತ್ತಿದ್ದಾರೆ. ನೋಡೆ, ನೋಡೆ ರೀಡರ್ ನಾರಾಯಣಯ್ಯಂಗಾರ್! ಇನ್ನೇನು ಎರಡೂ ಕೈಗಳನ್ನು ಜೋಡಿಸಬೇಕು ಅಷ್ಟರೊಳಗಾಗಿ ಹೊತ್ತು ತರುತಿದ್ದ ಜವಾನ ಅಂದ "ಇವರೇ....ಟ್ರ್ಯಾಕ್ಟರಿನ ಟ್ರೈಲರಿಗೆ ಬಲಿಯಾದವರು !"

"ನಿಜವಾಗಿ ?" ಭಯ ವಿಹ್ವಲೆಯಾಗಿ ಕೇಳಿದಳು ಕಮಲೇಶ್.

"ಹೌದು....ಯಾರೆಂಬುದು ಇನ್ನೂ ತಿಳಿದು ಬಂದಿಲ್ಲ."

"ಓ ...ಇವರು ರೀಡರ್ ನಾರಾಯಣಯ್ಯಂಗಾರ್....!" ಉದ್ವೇಗ-ಮನಃಕ್ಷೋಭೆಗಳಿಂದ ಧ್ವನಿ ಕಂಪಿಸಿತು.

ಎದುರುಗಡೆಯಿಂದ ಬರುತಿದ್ದ ಡಾ|| ರಘುರಾಂರವರ ತಂಡ ಅಲ್ಲೇ ನಿಂತಿತು.

ಡಾ|| ರಘುರಾಂ ತವಕದಿಂದ ಕೇಳಿದರು "ನಿಜವಾಗಿ ?"

"ಹೌದು....! ನಮ್ಮಣ್ಣನ ಸ್ನೇಹಿತ. ನಮ್ಮ ಮನೆಯ ಬಳಿಯಲ್ಲೇ

ಕೊರಡಿ ಹಿಡಿದಿದ್ದಾರೆ."

"ಇವರ ಮನೆಯವರು ಇಲ್ಲಿದ್ದಾರೆಯೆ ?"

"ಇಲ್ಲ ಸರ್....ಒಬ್ಬರೇ ಇದ್ದರು." ಅನುಕಂಪಿತ ಸ್ವರದಲ್ಲಿ ನುಡಿದಳು ಕಮಲೇಶ್.

"ಪಾಪ........"

ಡಾ|| ರಘುರಾಂ ಶವವನ್ನು 'ಕೋಲ್ಡ್‌ಸ್ಟೋರೇಜ್' ನಲ್ಲಿ ಇಡಲು ಏರ್ಪಾಡು ಮಾಡಿದರು. ಹುಡುಗಿಯರಿಬ್ಬರೂ ಅಲ್ಲಿಂದ ವಾರ್ಡಿಗೆ ಹಿಂದಿರುಗಿದರು. ಹೃದಯ ಸಂಕಟದ ಬೀಡಾಗಿತ್ತು.

"ಇವರ ಸಾವು ನಿರ್ಲಕ್ಷ್ಯದಿಂದಾದುದು. ಹಾದಿಗರಾರೋ ತಕ್ಷಣ ಕರೆ ತಂದಿದ್ದರೂ ಎಮರ್ಜೆನ್ಸಿ ವಾರ್ಡಿನಲ್ಲಿದ್ದ ಡಾಕ್ಟರು ತಕ್ಷಣ ತುರ್ತು ಚಿಕಿತ್ಸೆ ಕೈಕೊಳ್ಳದ ಕಾರಣ ವಿಪರೀತ ರಕ್ತಸ್ರಾವವಾಗಿ ಮರಣ ಸಂಭವಿಸಿದೆಯಂತೆ. ಮುಂದೇನಾಗುವುದೋ ದೇವರೇ ಬಲ್ಲ." ಸಕ್ಕೂ ನಿಟ್ಟುಸಿರು ಬಿಟ್ಟಳು.

"ಇಂಥ ವಿಚಾರಗಳಲ್ಲಿ ನಿರ್ಲಕ್ಷ್ಯ ಕೂಡದು. ಆ ಹೃದಯರಹಿತ ಡಾಕ್ಟರ ಮೇಲೆ ಕ್ರಮ ಕೈಗೊಂಡಲ್ಲಿ ಮುಂದಿನವರು ಎಚ್ಚತ್ತುಕೊಳ್ಳುತ್ತಾರೆ."

"ನಿಜ........ಕಮಲೇಶ್."

ಅಧ್ಯಾಯ

೬

........ಒಲಿದ ಜೀವಗಳೆರಡು ರಾಗಭಾವಾವೇಶದಿಂದ ತುಂಬಿ ತುಯ್ಯ ಲಾಡಿದರೂ ಕೂಡಿ ಬೆರೆಯಲಾರವೆಂದಮೇಲೆ ಎಂತಹ ದೌರ್ಭಾಗ್ಯ ಕಮಲೇಶ್. ನಾವಿರುವುದು ನೆರೆಹೊರೆಯ ರಾಜ್ಯಗಳಲ್ಲಾದರೂ ಸಾರಿಗೆ ಸೌಕರ್ಯಗಳಿರುವ ಈ ನಾಗರಿಕ ದಿನಗಳಲ್ಲಿಯೂ ನಾವು ಎಷ್ಟೊಂದು ಅಸಹಾ ಯಕರಾಗಿದ್ದೇವೆ?....ಕಲಿಕೆಯೊಂದಿಗೆ ಗಳಿಕೆಯ ಹಾದಿಯನ್ನು ನಾವು ಕಂಡು ಕೊಂಡಿದ್ದಿದ್ದರೆ........ಹೋಗಲಿ ಬಿಡು. ನೊಂದಾಗ ಮನಸ್ಸು ದಿಕ್ಕೆಟ್ಟ ಕುದುರೆಯಂತಾಗುತ್ತದೆ. ಗಳಿಕೆಯ ಕತೆ ಒತ್ತಟ್ಟಿಗಿರಲಿ ವೈಯಕ್ತಿಕ ಸ್ವಾತಂತ್ರ್ಯವನ್ನಾದರೂ ಎಲ್ಲಿಂದ ತರೋಣ?

ಕಮಲೇಶಳ ಸ್ನೇಹಾನಂತರ ಈ ಚೇತನ ನಿಶ್ಚೇತನಳೇ ಆಗಿಬಿಟ್ಟಿದ್ದಾಳೆ ಎಂದರೆ ತಪ್ಪಲ್ಲ....ಇದಂತೂ ಎಲ್ಲಿಲ್ಲದ ಆಶ್ಚರ್ಯ. ಕನಸು ಮನಸ್ಸುಗಳಲ್ಲೂ ನೀನೆ! ರಾಗ ಭಾವಗಳಲ್ಲೂ ನೀನೆ! ನನ್ನನ್ನು ಹೇಗೆ ಆಕ್ರಮಿಸಿದೆ, ಅಲ್ಲ ಅತಿ ಕ್ರಮಿಸಿದೆ? ಮೇಜಿನ ಮೇಲಿರುವ ನಿನ್ನ ಸನ್ಮೋಹನ ಚಿತ್ರವನ್ನು ನೋಡಿ ನೋಡಿ ಕಣ್ಮನಗಳಿಗೆ ಆನಂದ ತುಂಬಿಕೊಳ್ಳುವುದನ್ನು ನೋಡುವಾಗ ಅಮ್ಮ ನಗುತ್ತ ಅಂದುದುಂಟು "ಒಂದು ವೇಳೆ ಕಮಲೇಶ್ ಹತ್ತಿರವಿದ್ದಿದ್ದರೆ ಓದಿ ಗಿಷ್ಟು ಕಿಚ್ಚು ಹಚ್ಚಿ ಇಬ್ಬರೂ ಮಾತುಕತೆಗಳಲ್ಲಿ ತೊಡಗುತಿದ್ದಿರೇನೋ! ದೂರ ಇರುವುದೇಷ್ಟು ಒಳ್ಳೆಯದು....?"

ನಿಜವಾಗಿಯೂ ಹೇಳು ನಿನಗೇನೆನಿಸುತ್ತೆ ಕಮಲೇಶ್?

ಯಾಕೋ ಲೇಖನಿ ಓಡುವುದಿಲ್ಲ. ಏನೋ ಯೋಚಿಸಿದ್ದೆ....ವಿಷಯ ಹಾಗೇ ಹುದುಗಿಹೋಯಿತು. ತನುಮನಗಳನ್ನೆಲ್ಲಾ ನೀನೇ ಆವರಿಸಿಬಿಟ್ಟಿದ್ದಿ. ಇನ್ನು ವಿಷಯಗಳಿಗೆ ಸ್ಥಳವೆಲ್ಲಿ? ನೀನಂತೂ ಮಹಾ ಮಾಯಾವಿ ಎಂದು ಹೇಳದೇ ವಿಧಿಯಿಲ್ಲ....ಹೋಗಲಿಬಿಡು. ನಿನ್ನ ಔಷಧಿಗಳನ್ನೊಂದಿಷ್ಟು ಬೆದಕಿ ಈ ಹುಚ್ಚಿಗೊಂದು ಮದ್ದನ್ನು ಕಂಡುಹಿಡಿಯ ಬಲ್ಲೆಯಾ, ಡಾಕ್ಟರಾಣಿ!....

ಕಾಗದವನ್ನೋದಿ ಕಮಲೇಶಳ ಹೃದಯ ಹೂವಿನಂತರಳಿತು. ಅವಳ

ಷ್ಟೇ ಅಲ್ಲ ; ತನ್ನ ಸ್ಥಿತಿಯೂ ಹಾಗೆಯೇ ಆಗಿದೆ. ಹೃನ್ಮಂದಿರದಲ್ಲಿ ಎಂದೆಂದೂ ಮರೆಯಲಾಗದಷ್ಟು ಘನೀಭೂತಳಾಗಿದ್ದಾಳೆ ಚೇತನಾ. ಹಾ....ಅದೆಷ್ಟು ಜನ್ಮಗಳ ಬಂಧನವೋ....ಒಮ್ಮೆಲೇ ಗತಕಾಲಕ್ಕೆ ಚಿಮ್ಮಿ ಅವಳೊಂದಿಗೆ ನಲಿಂದ ಕಳೆದ ಕಾಲವನ್ನು ಸ್ಮರಿಸಿತು ಮನಸ್ಸು. ಕೊನೆಯ ದಿನ ರೈಲು ನಿಲ್ದಾಣದಲ್ಲಿ ಆತ್ಮೀಯತೆಯಿಂದ ಬೀಳ್ಕೊಟ್ಟ ಹೃದಯಂಗಮ ದೃಶ್ಯ ಚಿತ್ತಭಿತ್ತಿಯಲ್ಲಿ ಸುಳಿಸುಳಿದಳಿಯಿತು.

ತನುಮನಗಳು ಪುಳಕಿತವಾದರೂ ಕಣ್ಣುಗಳು ತೇವವಾದುವು.

"ಕಮಲೇಶ್ !"

ತಾಯಿಯ ದನಿ ಕಿವಿಗೆ ತಾಗುತ್ತಲೂ ಅಲ್ಲಿಂದಲೇ ಓಗೊಟ್ಟಳು 'ಬಂದೆ ಮಾ !"

"ಕಾಗದ ನೋಡಿದೊಡನೆ ಎಲ್ಲವೂ ಮರೆತುಹೋಯಿತು ಅಲ್ಲವೆ ?"

"ನಿಮಗೂ ಹಾಗೆಯೇ, ಹೇಮ ರತಿ ಮಾಮಿ ಇದ್ದರೆ ನನ್ನನ್ನೂ ಮರೆತುಬಿಡುತ್ತೀರಿ !"

ಹಾಸ್ಯದ ಚಟಾಕಿ ಹಾರಿಸಿದಳು ಕಮಲೇಶ್.

ಹೊರ ಬಾಗಿಲ ಕರೆಗಂಟೆ ಕಿರುಚಿ ಕರೆ ನೀಡಿತು. ಸ್ವರ್ಣಮಾಲಿನಿ ನಗುತ್ತ ಕದ ತೆರೆದಳು, ಬಂದವರು ವನಮಾಲಿ ಮತ್ತು ಚಂಪ. ಪರಸ್ಪರ ದರ್ಶನ ಲಾಭದಿಂದ ಮುಖಗಳು ಅರಳಿ ಹೂವಾದುವು. ಕಮಲೇಶ್ ಒಳಗಡೆ ಇರುವುದನ್ನರಿತು ಇಬ್ಬರೂ ಅಲ್ಲಿಗೇನೇ ಧಾಳಿಯಿಟ್ಟರು. ಗೆಳತಿಯರನ್ನು ನೋಡಿ ಒಮ್ಮೆಲೇ ಹೃದಯ ಬಿರಿಯುವಂತಾಯಿತು. ಇಬ್ಬರನ್ನೂ ಅತ್ಯಂತ ಆತ್ಮೀಯತೆಯಿಂದ ಬರಮಾಡಿಕೊಂಡಳು. ಸ್ನೇಹಧಾರೆ ನವೀನ ಶಕ್ತಿಯಿಂದ ನರನರಗಳಲ್ಲಿ ಪ್ರವಹಿಸಿ ರಕ್ತದ ಕಣಕಣವೂ ಉತ್ತೇಜಿತವಾದುವು.

"ಇದೇನೇ ಪುನಃ ಸಂಪಾದಿಸಿದ್ದಿ ?" ಕಮಲೇಶಳ ಧ್ವನಿ ಹಾಸ್ಯ ಭರಿತವಾಗಿ ಹೊರಬೀಳುತ್ತಲೂ ವನಮಾಲಳ ಚಂಗೆನ್ನೆಗಳು ಲಜ್ಜೆಯಿಂದ ಕೆಂಪು ತಳೆದುವು.

"ಪಾಪ, ಹೆಣ್ಣು"

ಸಾಂತ್ವನ ಗೈಯುವ ಧ್ವನಿಯಲ್ಲಿ ನುಡಿದಳು ಸ್ವರ್ಣಮಾಲಿನಿ.

"ಅವಳ ಔರಸ ಪುತ್ರಿಗಂತೂ ಪ್ರತಿಯೊಂದಕ್ಕೂ 'ಅಮ್ಮಾ'ನೇ ಬೇಕು.

ಇನ್ನು ಇನ್ನೊಂದು ಮಗು ಬಂದರೆ ಹೇಗೆ ಸುಧಾರಿಸುತ್ತಾಳೋ ದೇವರಿಗೇ ಗೊತ್ತು." ಚಂಪಕಮಾಲಿನಿ ದನಿಗೂಡಿಸಿದಳು.

"ಹೋಗಲಿ ಬಿಡು, ಮೊದಲ ಅಂಕ ಒಂದೇ ಬಾರಿಗೆ ಮುಗಿಸಿಕೊಂಡರೆ ಅನಂತರ ಸುಖವಾಗಿರಬಹುದು. ಆದಾದ ಮೇಲೆ ಭರತನಾಟ್ಯ ಮರೆಯಬೇಡ ..."

ವನಮಾಲಿಯು ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಅವಳಲ್ಲಿದ್ದ ರಸೋಲ್ಲಾಸಗಳು ಗಂಭೀರ ಸ್ಥಿತಿಗೆ ಅಳವಟ್ಟಿದ್ದುವೇನೋ....ಮುಖದಲ್ಲಿ ಹಸನಾದ ನಗೆ ಮಿಂಚಿ ಮಾಯವಾಯಿತು....ಮಗೂ, ಜೀವನ ಎಂದರೆ ಎಂದೂ ಆಟದ ಬಯಲಲ್ಲ. ಅದರಲ್ಲಿ ತೊಡಗಿದವರೆಲ್ಲ ಒಂದಲ್ಲ ಒಂದು ದಿನ ಹೀಗೆಯೆ! ಎಂದು ಯಾರೋ ಕೂಗಿ ಹೇಳಿದಂತಾಯಿತು.

ಹಾ....!

"ಏನಮ್ಮಾ....? ಬಹಳ ಗಂಭೀರವಾಗಿಬಿಟ್ಟೆ ?"

"ಸ್ವಲ್ಪ ತಾಳು....ಅವಳು ನಡೆದುಬಂದು ಆಯಾಸಗೊಂಡಿರಬಹುದು." ಎನ್ನುತ್ತಾ ಸ್ವರ್ಣಮಾಲಿನಿ ಅತಿಥಿಗಳಿಗೆ ಆತಿಥ್ಯ ನೀಡಲು ಮುಂದಾದಳು.

"ಚಂಪಾ, ಕಳೆದವಾರ ನಿನ್ನ ರೇಡಿಯೋ ಸಂಗೀತ ಬಲು ಚೆನ್ನಾಗಿತ್ತು....ಬಹಳ ಅಭಿನಂದನೆಗಳು !"

ಅವಳ ಕೈಗಳನ್ನು ಹಿಡಿದು ಆತ್ಮೀಯತೆಯಿಂದ ಕುಲುಕಿದಳು ಕಮಲೇಶ್.

"ವಂದನೆಗಳು" ಮೆಲು ನುಡಿ ಮೃದು ಮಧುರವಾಗಿ ವೀಣಾ ಧ್ವನಿಯಂತೆ ಹೊರಬಿತ್ತು. ಈಗೀಗ ಕಾಲೇಜಿನಲ್ಲಿ ನನ್ನ ಸಂಗೀತವಿಲ್ಲದೆ ಯಾವ ಸಮಾರಂಭವೂ ನಡೆಯುವುದಿಲ್ಲ. ಹೊರಗಿನ ಕಾಲೇಜುಗಳಿಂದಲೂ ಕರೆ ಬರುತ್ತವೆ. ಸದಾ ಸಂಗೀತಾಭ್ಯಾಸವಿಲ್ಲದಿದ್ದರೆ ನಡೆಯುವಂತೆಯೆ ಇಲ್ಲ."

"ಇನ್ನು ಸ್ವಲ್ಪ ಕಷ್ಟಪಟ್ಟರೆ ಭಾರತ ರತ್ನ !"

"ನೀನು ಕಷ್ಟಪಡದಿದ್ದರೂ ಪದ್ಮಶ್ರೀ !"

ಮೂವರ ಮುಖದಲ್ಲೂ ನಗೆ ಮಲ್ಲಿಗೆಯರಳಿತು.

"ಈಗ ರಾಣೀ ಭವತಾರಿಣೀ ಆಸ್ಪತ್ರೆಯಲ್ಲಿ ತುರ್ತು ಶಾಸನ ಜಾರಿಗೆ ಬಂದಿದೆ. ರೀಡರ್ ನಾರಾಯಣಯ್ಯಂಗಾರರ ಬಲಿ ಬಹುಮಟ್ಟಿಗೆ ಸುಧಾರಣೆಗೆ ಕಾರಣವಾಯಿತು. ಈಗ ತಕ್ಷಣ ಡಾಕ್ಟರ ಅವಶ್ಯಕತೆ ಬಿದ್ದರೆ ಆಫೀಸಿಗೆ ಸುದ್ದಿ

ಕೊಡುತ್ತಾರೆ, ಅಲ್ಲಿ ಗಂಟೆ ಬಾರಿಸಿ ಕೆಂಪು ದೀಪಗಳನ್ನು ಹತ್ತಿಸಿ ಎಲ್ಲೆಡೆಗೂ ಅಪಾಯದ ಸುದ್ದಿಯನ್ನು ಸಾರಿ ವಾರ್ಡ್ ನಂಬರನ್ನು ತಿಳಿಸುತ್ತದೆ. ತುಸು ಕೈಬಿಡುವು ಇರುವ ಡಾಕ್ಟರುಗಳು ಎಲ್ಲಿದ್ದರೂ ಅಲ್ಲಿಗೆ ಧಾವಿಸುತ್ತಾರೆ. ಔಷಧಿಯ ಟ್ರೇ ಓಡಿಬರುತ್ತೆ. ಸಹಾಯ ಹಸ್ತಗಳು ಒಟ್ಟುಗೂಡಿ ನೆರವು ನೀಡಿ ಪ್ರಾಣಾಂತಕ ಸ್ಥಿತಿಯಲ್ಲಿರುವ ರೋಗಿಗಳನ್ನುಳಿಸಲು ಸರ್ವಸಹಸಾ ಹೆಣಗುತ್ತಾರೆ....ಇದು ಕೋಡ್ ನಂಬರ್ ಎಂಟರ ತುರ್ತು ಶಾಸನ. ಇದಕ್ಕೆ ಎಲ್ಲರೂ ಹಣೆ ಮಣಿಯಲೇಬೇಕು....ಲೆಕ್ಚರರ್ ನಾರಾಯಣಯ್ಯಂಗಾರರಿಗೆ ತುರ್ತು ಚಿಕಿತ್ಸೆ ನೀಡದೆ ಅವರ ಮರಣಕ್ಕೆ ಕಾರಣರಾದವರಿಗೆ ಎಂದೂ ಕ್ಷಮಿಸಲಾಗದಂತಹ ಉಗ್ರ ದಂಡ ಬಿದ್ದಿದೆ.” ದೀಪ್ತಕಂಠದಿಂದ ನವೋನವವಾಗಿ ಸ್ಫುರಿಸಿತು ವಿಷಯ ಸಂಪತ್ತಿ.

“ನಮ್ಮ ದೇಶದಲ್ಲಿ ಇಂತಹ ಸುಧಾರಣೆಗಳು ಅಗತ್ಯವಾಗಿಯೂ ಆಗಲೇಬೇಕಿತ್ತು.” ತಲೆದೂಗಿದಳು ಚಂಪಾ.

“ಈ ಹಠಾತ್ಪರಿಣಾಮದಿಂದ ಜಡಮತಿಗಳೂ ಜಾಗೃತರಾಗುತ್ತಾರೆ.... ನಿರ್ಲಕ್ಷ್ಯ, ಅಸಡ್ಡೆ, ಅನ್ಯಾಯ, ಅನೀತಿ, ಅತ್ಯಾಚಾರಗಳ ಪರಂಪರೆಯಲ್ಲಿ ಕುಶಾಗ್ರಮತಿಗಳೂ ಸಹ ಬೆಪ್ಪಾಗಿ ಕೈಕಟ್ಟಿ ಕುಳಿತುಕೊಳ್ಳಬಹುದಾದಂತಹ ಇಂದಿನ ಪರಿಸ್ಥಿತಿಯಲ್ಲಿ ಉಗ್ರ ಸುಧಾರಣೆಗಳಾಗುವುದರೊಂದಿಗೆ ಯಮದಂಡಗಳೂ ಹುಟ್ಟಿಕೊಂಡರೆ ಈ ಜಗತ್ತು ಜಾಗೃತಗೊಳ್ಳುತ್ತದೆ” ಎಂದಳು ಕಮಲೇಶ್, ದನಿ ಸಂಕಲ್ಪಭರಿತವಾಗಿದ್ದರೂ ಕಕ್ಕುಲತೆಯಿಂದ ಕೂಡಿತ್ತು.

ಸ್ವರ್ಣಮಾಲಿನಿ ನಡುವೆ ಬಾಯಿ ಹಾಕಿದಳು “ನೀವು ತಪ್ಪಾಗಿ ಭಾವಿಸುತ್ತಿರುವಿರಿ. ಈ ಕಾನೂನು ಕಟ್ಟಳೆಗಳು, ಉಗ್ರ ಸುಧಾರಣೆಗಳು, ಯಮದಂಡಗಳು ಈ ಜನತೆಯ ಮೇಲೆ ಯಾವ ಮಹತ್ಪರಿಣಾಮವನ್ನೂ ಮಾಡಲಾರವೇನೋ ಎಂಬಷ್ಟು ಅನುಮಾನ ನನ್ನಲ್ಲಿ. ಗಲ್ಲು ಶಿಕ್ಷೆಗಳಿಂದ ಕೊಲೆ ದರೋಡೆ ಕಡಿಮೆಯಾಗಿವೆಯೆ? ಹೊಲೆಗೆಟ್ಟಮತಿ ಸುಧಾರಣೆಯಾಗುವುದರೊಳಗಾಗಿ ಬಾಳುಬದುಕು ಪುಟ ನೆಗೆದು ಹಾರುತ್ತದೆ.” ನುಡಿಮುತ್ತು ಅನುಭಾವ ಸಂಪುಟದಿಂದ ಛಂದೋಮಯವಾಗಿ ಹೊರಬಿದ್ದಾಗ ಮುಖದಲ್ಲಿ ಶ್ರೀಮದ್ಗಾಂಭೀರ್ಯ ನೆಲೆಗೊಂಡಿತ್ತು.

ಆ ಕಠೋರ ವಿಡಂಬನೆಯನು ಕೇಳಿ ಲಲನೆಯರು ಸ್ತಬ್ಧರಾದರು.

ಗೆಳತಿಯರಿಬ್ಬರೂ ಸಂಜೆಯ ಮಸುಕು ಆವರಿಸುವವರೆಗೂ ಇದ್ದು ಮನೆಯ ಕಡೆ ಹೊರಟಳು.

ಅದೇ ತಾನೆ ದಿನಚರಿ ಆರಂಭವಾಗಿದೆ. ಬೆಳಗಿನ ಹೊಂಬಿಸಿಲಿಗೆ ಮೈ ಗೊಟ್ಟು ಕಮಲೇಶ್ ಸುಧಾರಾಣಿ ಜುಬೇದಾರವರು ಸಾಲಾಗಿ ಹೆಜ್ಜೆ ಹಾಕುತಿದ್ದಾರೆ. ಬಸ್ಸು ನಿಲ್ದಾಣದಿಂದ ರಾಣೀ ಭವತಾರಿಣೀ ಆಸ್ಪತ್ರೆಗೆ ಏನಿಲ್ಲವೆಂದರೂ ಇನ್ನೂರು ಮಾರು ಅಂತರ. ನೂರು ಹೆಜ್ಜೆ ಕಳೆಯುವಷ್ಟರಲ್ಲಿ ಪಕ್ಕದ ಹಾದಿಯಿಂದ ಹೆದ್ದಾರಿಗೆ ಜಿಗಿದ ಪದ್ಮಾ ಕಮಲಾನಿ ಗೆಳತಿಯರನ್ನು ಕೂಡಿಕೊಂಡಳು. ಒಡನೆ ಹುಡುಗಿಯರ ದಳ ಇನ್ನಷ್ಟು ಚಕಮುಕಿಯಾಯಿತು.

"ಸಕ್ಕು ಕತೆ ಗೊತ್ತಾ ?" ಪದ್ಮಾ ಆತಂಕದಿಂದ ಕಣ್ಣುಗಳನ್ನರಳಿಸಿದಳು.

"ಏನು....?"

ಎಲ್ಲರ ಕಿವಿಗಳೂ ಉತ್ತರಕ್ಕಾಗಿ ನಿಮಿರಿದುವು.

"ಪಾಪ, ಗ್ರಹಚಾರ....ನಿನ್ನೆ ರಾತ್ರಿ ಅವಳ ಮನೆಯ ಮಗ್ಗುಲಿನ ಮರಕ್ಕೆ ಯಾರೋ ನೇಣು ಹಾಕಿಕೊಂಡು ಜೀವಬಿಟ್ಟಿದ್ದಾನೆ. ಅವಳ ಕಿಟಕಿಗೂ ಮರಕ್ಕೂ ಕೆಲವು ಮಾರು ಅಂತರ, ಅಷ್ಟೆ. ಬೆಳಗ್ಗೆ ಎದ್ದವಳೇ ಆ ಭಯಂಕರ ದೃಶ್ಯವನ್ನು ನೋಡಿ ಹೆದರಿದ್ದಾಳೆ....!"

"ಸಕ್ಕೂ ಹೆದರುವುದೆ ?" ಆಶ್ಚರ್ಯ ಮಿಶ್ರಿತ ಕಂಠದಿಂದ ಪ್ರಶ್ನಿಸಿದಳು ಕಮಲೇಶ್.

"ಅದೇ ಆಶ್ಚರ್ಯ! ಅವಳ ಯಮಧೈರ್ಯವೆಲ್ಲಾ ಈಗ ಎಲ್ಲಿ ಹೋಗಿದೆಯೋ! ದೇವರಿಗೇ ಗೊತ್ತು. ಒಮ್ಮೆ ಅಳುತ್ತಾಳೆ, ಒಮ್ಮೆ ಬೆಪ್ಪರಂತೆ ಸುಮ್ಮನೆ ಕುಳಿತಿರುತ್ತಾಳೆ. ಅವಳ ಸ್ಥಿತಿಯನ್ನು ನೋಡಿದರೆ ಸಂಕಟವಾಗುತ್ತೆ...."

"ಛೆ: ! ಛೆ: ! ಸಕ್ಕೂ ಹೆದರುವುದೆಂದರೆ ನಿಜವಾಗಿಯೂ ಆಶ್ಚರ್ಯ."

ಒಂದು ಘಳಿಗೆ ಎಲ್ಲರ ಮುಖದ ಮೇಲೂ ವ್ಯಸನದ ಕಪ್ಪು ಛಾಯೆ ಆವರಿಸಿತು.

ಸರಸ ಸಂಭಾಷಣೆಯ ಮಹಾ ಧೈರ್ಯಗಾತಿ....ಡಿಸೆಕ್ಷನ್ ಥಿಯೇಟರಿ

ನಲ್ಲಿ ತಮಾಷೆಯಾಗಿ ಕತೆಗಿತೆ ಹೇಳುತ್ತಾ ಹೆಣ ಕೊಯ್ಯುತ್ತಿದ್ದ ಹುಡುಗಿ. ಅದನ್ನೆಲ್ಲಾ ಯೋಚಿಸಿಕೊಂಡರೆ ಈಗ ನಂಬುವುದೂ ಸಹ ಕಷ್ಟ ...ಕಮಲೇಶ್ ತನ್ನೊಳಗೇ ತರ್ಕಿಸಿಕೊಳ್ಳತೊಡಗಿದಳು.

ಹಾದಿಯುದ್ದಕ್ಕೂ ಅದೇ ವಿಷಯ ಚರ್ವಣಚರ್ವಿತವಾಯಿತು. ಇಷ್ಟು ಹೊತ್ತಿನೊಳಗಾಗಿ ಎಲ್ಲರೂ ರಾಣೀ ಭವತಾರಿಣೀ ಆಸ್ಪತ್ರೆಯ ಒಳ ಆವರಣಕ್ಕೆ ಕಾಲಿಟ್ಟರು. ಸುತ್ತಮುತ್ತ ಹಲವಾರು ದೊಡ್ಡದೊಡ್ಡ ಮರಗಳೂ ಸುಂದರವಾದ ಉದ್ಯಾನವೂ ಇದ್ದು ತಣ್ಣನೆಯ ವಾತಾವರಣವನ್ನು ಸೃಜಿಸಿತ್ತು. ಆ ತೋಟವನ್ನು ಹಾಯ್ದು ವಿದ್ಯಾರ್ಥಿನಿಯರ ದಳ ಆಸ್ಪತ್ರೆಯನ್ನು ಹೊಕ್ಕಿದಾಗ ರಾತ್ರಿಯ ಡ್ಯೂಟಿಯನ್ನು ಮುಗಿಸಿ ಹೊರ ಹೋಗಲಿದ್ದ ಡಾಕ್ಟರುಗಳ ದಳ ಕಾರಿಡಾರಿನಲ್ಲಿ ಎದುರಾಯಿತು.

"ಪ್ರಣಾಮ್ ಸರ್!"

ಡಾಕ್ಟರುಗಳ ದನಿಯೂ ಪ್ರತಿಧ್ವನಿಸಿತು "ಪ್ರಣಾಮ್!

ಇಷ್ಟು ಮುಂದೆ ಹೋಗುವುದರೊಳಗಾಗಿ ರಾತ್ರಿಯ ಡ್ಯೂಟಿಯನ್ನು ಮುಗಿಸಿ ಹೊರಟಿದ್ದ ಶ್ವೇತವಸನಧಾರಿಣಿಯರು ಮಂಜಿನ ಬೊಂಬೆಗಳಂತೆ ಬುದು ಬುದು ಹೊರಬಿದ್ದರು. ತನುಮನತುಂಬಿ ಜೀವನದ ಹೆದ್ದಾರಿಗೆ ಜಿಗಿಯಲಿರುವ ಎಳೆ ಜೀವಗಳು ವಸಂತ ವೈಖರಿಯಲ್ಲಿ ನವೋನವವಾಗಿ ನಳನಳಿಸುತ್ತಿವೆ.

ಮೃದು ಮಂದ ಮಾತುಕತೆ-ಪಾದರಕ್ಷೆಗಳ ಮೆಲು ಸದ್ದು ಜೊತೆಗೂಡಿ ಸಣ್ಣ ಶೃತಿಯಂತೆ ಸಾಲುದ್ದಕ್ಕೂ ಮರ್ಮರಿಸಿತು.

ಕಾರಿಡಾರಿನ ತುತ್ತತುದಿಯಲ್ಲಿ ಭವಾನಿಶಂಕರ್ ಬರುತ್ತಿದ್ದುದು ಕಾಣಬಂತು. ಅವರೆಡೆಗೆ ನೋಟವನ್ನಟ್ಟ "ಓ...! ಸಖ್ಯೂ ತಂದೆ ಬರುತ್ತಿದ್ದಾರೆ, ಬಹುಶಃ ಅವಳನ್ನು ಅಡ್ಮಿಟ್ ಮಾಡಿರಬಹುದೇನೋ."

"ಓ....! ಇರಬಹುದು."

ಎಲ್ಲರೂ ಅವರು ಹತ್ತಿರವಾಗುವುದನ್ನು ಆತುರದಿಂದ ನಿರೀಕ್ಷಿಸುತ್ತಿದ್ದಂತೆಯೇ ಹೆಜ್ಜೆ ಹೆಜ್ಜೆಗೂ ವಕೀಲ ಮಹಾಶಯ ಹತ್ತಿರಹತ್ತಿರ ಐತಂದರು. ವಕೀಲಿಯ ಕೌಟಿಲ್ಯ, ಚಾಣಾಕ್ಷತೆಯ ಚಾತುರ್ಯ, ಬುದ್ಧಿವಂತಿಕೆಯ ಹುರುಪು, ಅವರ ಗಂಭೀರ ಮುಖದ ಮೇಲೆ ಅಚ್ಚೊತ್ತಿವೆ. ಹಳೆಯ ಪರಿಚಯ ಮುಖದ

ಮೇಲೆ ಎಳೆನಗುವನ್ನು ಮೂಡಿಸಿತು.

"ಸಕ್ಕೂ ಇಲ್ಲಿ ಅಡ್ಮಿಟ್ಟಾಗಿದ್ದಾಳೆ. ಹೆದರಿ ವಿಪರೀತ ಜ್ವರ ಬಂದಿದೆ. ನೀವು ಅವಳಿಗೆ ಧೈರ್ಯ ಹೇಳಿ ಸರಿಪಡಿಸಿರಿ. ಅಷ್ಟೊಂದು ಧೈರ್ಯವಂತ ಹುಡುಗಿ ಹೀಗಾದುದು ತುಂಬ ವ್ಯಸನಕರ." ದುಗುಡದಿಂದ ಹೇಳಿದರು ವಕೀಲ ಮಹಾಶಯ. ಮುಖದ ಮೇಲಿನ ಅಸಂಖ್ಯಾತ ರೇಖೆಗಳ ಮಧ್ಯೆ ಮನಃ ಕ್ಷೋಭೆಯ ಛಾಯೆ ಕಾಣಿಸುತಿತ್ತು.

ಕಮಲೇಶ್ ಅವರಿಂದ ವಾರ್ಡ್ ನಂಬರನ್ನು ತಿಳಿದುಕೊಂಡು ತನ್ನ ದಳ ದೊಂದಿಗೆ ಆರನೆಯ ಯೂನಿಟ್ ಕಡೆ ಹೆಜ್ಜೆ ಹಾಕಿದಳು....ಬಿಳಿಯ ಹೊದ್ದಿಕೆ ಯಡಿ ಕೆಂಡದಂತೆ ಕೆಂಪಗೆ ಕಾದು ಮಲಗಿದ್ದ ಅವಳ ತಲೆಯಮೇಲೆ ಐಸ್ ಬ್ಯಾಗ್ ಇಡಲಾಗಿತ್ತು. ಮೇಜಿನ ಮೇಲಿಟ್ಟಿದ್ದ ಔಷಧಿ ಇಂಜಕ್ಷನ್‌ಗಳು ಅವಳ ಸ್ಥಿತಿಗತಿಯನ್ನು ಸಾರಿ ಹೇಳುತಿದ್ದುವು. ಸಕ್ಕೂತಾಯಿ ಪಕ್ಕಾ ಆಸ್ತಮಾ ದಿಂದ ನರಳುತ್ತಾ ಸಪ್ಪೆಮೋರೆ ತಳೆದು ಕುಳಿತಿದ್ದಳು. ಹಠಾತ್ತಾಗಿ ಸಂಭವಿ ಸಿದ ಕಷ್ಟಕಾರ್ಪಣ್ಯಗಳಿಂದ ಮೈಗೆ ತಣ್ಣೀರೆರಚಿದಂತೆ ಕಳವಳಗೊಂಡ ವೃದ್ಧ ಜನನಿಯನ್ನು ನೋಡುತ್ತಲೂ ಮನಸ್ಸು ಕ್ಷೋಭೆಯಿಂದ ಕದಡಿತು.

"ಸಕ್ಕೂ........!"

ಎಲ್ಲರೂ ಹಾಸಿಗೆಯನ್ನು ಸುತ್ತುವರಿದರು. ನಲ್ಮೆಯ ದನಿಗಳು ಕಿವಿ ಯನ್ನು ತಾಗುತ್ತಲೂ ಅರೆ ಮುಚ್ಚಿದ ಕಣ್ಣುಗಳು ತೆರೆದುವು. ನಸು ಕಂಪಿ ಸುವ ಸ್ವರದಿಂದ ನುಡಿದಳು ಸಕ್ಕೂ "ನಾನು ಅಷ್ಟಾಗಿ ಹೆದರಲಿಲ್ಲ. ಆದರೂ....."

ಸುತ್ತು ಮುತ್ತು ಕೋಟೆಗಟ್ಟಿ ನಿಂತ ಹುಡುಗಿಯರ ಸ್ನೇಹ ಹಸ್ತಗಳು ಮೈ ಕೈ ನೇವರಿಸಿದುವು. ತಣ್ಣನೆಯ ಹಸ್ತಗಳಿಗೆ ಮೈ ಕಾವು ಸುಡುವಷ್ಟು ಅಟ್ಟುತಿತ್ತು. ಅವಳ ಕೈಯನ್ನು ಅದುಮಿ ಹಿಡಿದುಕೊಂಡು "ಹೆದರಲಿಲ್ಲ ಅನ್ನುತ್ತಿ. ಆದರೂ ಹೀಗಿದ್ದಿ, ನಿನ್ನಂತಹ ಹುಡುಗಿ ಹೀಗಾದರೆ....?" ಎಂದಳು ಕಮಲೇಶ್, ದುಃಖದಿಂದಲೂ ವಿಸ್ಮಯದಿಂದಲೂ ಆಕೆಯ ಕಂಠ ವ್ಯತ್ಯಸ್ತ ವಾಯಿತು. ಮಿಕಿಮಿಕಿ ನೋಡುತಿದ್ದ ಗೆಳತಿಯರು ವಿಸ್ಮಯ ಮೂಕರಾದರು.

"ಹೆದರಿ ಚಿಟ್ಟನೆ ಚೀರಿಕೊಂಡೆಯಂತೆ....?" ಕೇಳಿದಳು ಕಮಲೇಶ್.

"ಹೌದಮ್ಮಾ" ಎಂದಳು. ಸಕ್ಕೂ ತಾಯಿ....ಭಯ ಭೀತಿಗಳಿಂದ ಧ್ವನಿ

ನಸು ಕಂಪಿಸಿತು.

"ಧೈರ್ಯವಾಗಿರು ಸಕ್ಕೂ. ಸಾಯಂಕಾಲ ಮನೆಗೆ ಹೋಗುವಾಗ ಹೀಗೆ ಬಂದು ಹೋಗುವೆ." ಎಂದಳು ಪದ್ಮಾ ಕಮಲಾನಿ.

"ಖಂಡಿತವಾಗಿಯೂ....?" ಆತಂಕದಿಂದ ಕೇಳಿದಳು ಸಕ್ಕೂ. ಆಶಾಪೂರ್ಣ ಲೋಚನಗಳು ಆವಳನ್ನೇ ನಿಟ್ಟಿಸಿದುವು.

"ಹೌದು, ಖಂಡಿತವಾಗಿಯೂ ಬರುವೆ."

ಸಕ್ಕೂ ಎಲ್ಲರೆಡೆಗೂ ಪಿಳಿಪಿಳಿ ನೋಡಿ "ಹ್ಞೂ" ಎಂದಳು. ದನಿ ಭಾರವಾಗಿತ್ತು.

ಶೋಕವ್ಯಾಕುಲಳಾದ ವೃದ್ಧಜನನಿಯು ಪರಿತಾಪದಿಂದ ನಿಡುಸುಯ್ದಳು.

ಗೆಳತಿಗೆ ಹೇಳುವಷ್ಟು ಹೇಳಿ ತಮ್ಮ ಹಾದಿ ಹಿಡಿಯಿತು ರಮಣೀವೃಂದ.

ಹತ್ತು ವರ್ಷದ ಹುಡುಗಿಯ ಶವ ಪೋಸ್ಟ್‌ಮಾರ್ಟಂ-ಗಾಗಿ ಬಂದಿದ್ದರಿಂದ ವಿದ್ಯಾರ್ಥಿನಿಯರ ದಳ ಆ ಕಡೆಯ ಹಾದಿ ಹಿಡಿಯಿತು. ತುಸು ದೂರದಲ್ಲಿ ಸಹ ವಿದ್ಯಾರ್ಥಿಗಳೂ ಅದೇ ಹಾದಿ ತುಳಿದಿದ್ದರು. ಬಲರಾಂ ಮಿತ್ರ, ಚಂದ್ರಕಾಂತ್, ಹೇಮಲಾಲ್ ಚಂದಾನಿ ಮತ್ತು ಇನ್ನೂ ನಾಲ್ಕಾರು ಮಂದಿ ಇದ್ದ ಅವರ ದಳ ಚಕಮಕಿಯರಾಗಿತ್ತು. ಹುಡುಗರು ಸಣ್ಣಗೆ ಸಿಳ್ಳು ಹಾಕಿ, ಕೆನ್ನೆ ಕಣ್ಣು ಮುಖಗಳಲ್ಲಿ ತುಂಟತನವನ್ನು ಹರಿಹಾಯಿಸಿ ಮುಂದುವರಿದರು. ಔಷಧಿ ಲೋಷನ್‌ಗಳ ಕಟುವಾಸನೆ, ನರಳುವವರ ನರಳುವಿಕೆ, ಕೂಗುವವರ ಆರ್ತಧ್ವನಿ ಅಳುವವರ ಅಳುದನಿ ಇಂದ್ರಿಯಗಳಿಗೆ ಕಸಿವಿಸಿಯನ್ನೂಡಿಸುವಂತಿವೆ. ಬಗೆಯಲ್ಲಿ ಸಂಕಷ್ಟದ ಪರಿತಾಪವನ್ನು ತುಂಬಿಕೊಂಡು ಹುಡುಗಿಯರು ಒಳಗಡೆ ಪದಾರ್ಪಣೆ ಮಾಡಿದರು. ಮೃತ್ಯುವಶಳಾದ ಹುಡುಗಿಯ ತಂದೆ ತನ್ನ ಸಂಗಡಿಗರೊಂದಿಗೆ ಹೊರಗಡೆ ಕಾದಿದ್ದ.

ತಂದೆಯ ವರದಿಯ ಪ್ರಕಾರ....ಹಿಂದಿನದಿನ ಶಾಲೆ ಬಿಟ್ಟನಂತರ ಹೊರಗಡೆ ಆಡಲು ಹೋದ ಹುಡುಗಿ ಮನೆಗೆ ಹಿಂದಿರುಗಿರಲಿಲ್ಲ. ಅವಳೊಂದಿಗೆ ಆಡಲು ಹೋದ ನೆರೆಮನೆಯ ಹುಡುಗಿ ಚಿಕ್ಕಪ್ಪನಲ್ಲಿ ಉಳಿದಿದ್ದಾಳೆಂದು ಸುದ್ದಿ ತಂದಿದ್ದಳು. ಬೆಳಗಾಗೆದ್ದು ನೋಡಿದಾಗ ಹುಡುಗಿಯ ಶವ ಅಂಗಳದಲ್ಲಿ ಬಿದ್ದಿತ್ತು. ಹಳೆಯ ದ್ವೇಷದಿಂದ ಒಳಜಗಳವಿದ್ದುದರಿಂದ ಉದ್ದೇಶಪೂರ್ವಕ

ವಾಗಿ ತನ್ನ ತಮ್ಮ ಮಗಳನ್ನು ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ.....

ಡಾ|| ವಿಠ್ಠೊ ಆದ್ಯಂತವಾಗಿ ತಮ್ಮ ಪರಿಶೀಲನೆಗೆ ಕೈ ಹಚ್ಚಿ, ಭಾಗ ವಿಭಾಗಗಳನ್ನು ಒಂದೊಂದಾಗಿ ಪರಿಶೀಲನೆ ಮಾಡುತ್ತಾ ಕರುಳಿಗೆ ಕೈ ಹಾಕಿ ದೊಡನೆ ಅವರ ಬಗೆ ಇನ್ನಷ್ಟು ಚುರುಕಾಯಿತು. ದುಂಡಗೆ ಉಬ್ಬಿಕೊಂಡಿದ್ದ ಕರುಳನ್ನು ಕತ್ತರಿಸಿ ನೋಡಿದರೆ ಜಂತು ಹುಳುಗಳ ದಂಡು ದುಂಡಗೆ ಉಂಡೆ ಕಟ್ಟಿಕೊಂಡಿವೆ ಒಂದೇ? ಎರಡೇ? ನೂರೇ? ಸಾವಿರಾರು!

ಡಾ|| ವಿಠ್ಠೊ ವಿದ್ಯಾರ್ಥಿಗಳನ್ನುದ್ದೇಶಿಸಿ–"ಹುಳುಗಳೆಲ್ಲ ಕೂಡಿ ಒಂದೆಡೆ ಜಮಾಯಿಸಿವೆಯಾದುದರಿಂದ ಮಲವು ಮುಂದುವರಿಯದೆ ಮಗುವಿಗೆ ಮಾರಕವಾಗಿದೆ. ಹುಡುಗಿಯ ಪ್ರಾಣ ಹೋಗಿ ಕೇವಲ ನಾಲ್ಕು ಗಂಟೆಗಳಾಗಿವೆ. ತಂದೆಯು ವರದಿ ಶುದ್ಧ ಸುಳ್ಳಿನ ಕಂತೆ. ಯಾವುದೋ ಕೊನೆಗಾಣದ ದ್ವೇಷದ ಕಿಡಿ ಈ ಅನಿರೀಕ್ಷಿತ ಸಾವನ್ನು ತಮ್ಮನ ಮೇಲೆ ಸೇಡು ತೀರಿಸಿಕೊಳ್ಳಲು ಪ್ರೇರೇಪಿಸಿರಬಹುದು. ಏಕೆಂದರೆ ಮಗು ಸತ್ತನಂತರ ಕತ್ತು ಹಿಸುಕಿದಂತಿದೆ."

ಅಬ್ಬಾ.....!

ಆ ಕಠೋರ ಕೃತ್ಯ ಭವ್ಯ ಬ್ರಹ್ಮಾಂಡವನ್ನೇ 'ಜುಂ' ಎನ್ನಿಸುವಂತಿತ್ತು.

ಕಮಲೇಶಳ ಮೈಯಲ್ಲಿ ನಸು ಕಂಪನದ ಅಲೆ ಅರಿದಾಡಿ ಹೋಯಿತು. ಕಣ್ಣುಮುಂದಿನ ವಸ್ತು ಸಮಸ್ತವೂ ಗಿರಗಿರ ಸುತ್ತಿದಂತಾಗಿ ಅಲ್ಲಿ ನಿಲ್ಲಲಾರದೆ ಹೊರಬಿದ್ದಳು. ನರನಾಡಿಗಳಲ್ಲಿ ರಕ್ತ ಸಂಚಾರ ಇಮ್ಮಡಿ ಮುಮ್ಮಡಿ ನಾಲ್ಮಡಿ ಯಾಗಿ ಎಳೆಮೈಯಲ್ಲಿ ತೆಕ್ಕನೆ ಬಿಸಿ ಮೂಡಿತು. ನಾಗರಿಕ ಜಗತ್ತಿನ ನಾಗರಿಕ ವ್ಯವಹಾರ ಮೈವೆತ್ತು ಗರಿ ತಳೆದು ಮನಃಪಟಲದ ಮೇಲೆ ಹುಚ್ಚೆದ್ದು ನರ್ತಿಸಿತು........ಆಲೋಚನಾರಹಿತರಾದ ಈ ನರಜಂತುಗಳು ತಮ್ಮತಮ್ಮ ಅವಶ್ಯಕತೆಗಳನ್ನು ದ್ವೇಷಾಸೂಯೆಗಳಿಂದ ರಾಗಭಾವಗಳಿಂದ ತುಂಬಿಕೊಳ್ಳುವುದರಲ್ಲೇ ತಮ್ಮ ಆಯಸ್ಸನ್ನು ಕಳೆದು ಬಿಡುತ್ತವೆ. ಜೀವನಕ್ಕೊಂದು ಉದ್ದೇಶವಿಲ್ಲ. ಬದುಕಿಗೊಂದು ಮಹತ್ವವೂ ಇಲ್ಲ....ಎಂದು ನಿಡು ಸುಯ್ಯಿತು ಅಂತರ್ವಾಣಿ. ತೀವ್ರ ಮಾನಸ ಸಂತಾಪದಿಂದ ಶರೀರ ಉರಿಯತೊಡಗಿತು.

ಇದು ಜಗತ್ತು....

ಕಾರಿಡಾರಿನ ತುತ್ತತುದಿಯಲ್ಲಿ ಹಿರಿಯ ಡಾಕ್ಟರುಗಳು ಇತ್ತಲೇ ಬರುತಿದ್ದುದು ಕಾಣಬಂತು. ಬಿಳಿಯ ಮೇಲಂಗಿಯನ್ನು ಧರಿಸಿ ತಮ್ಮತಮ್ಮೊಳಗೇ

ನಡೆಯುತ್ತಿದ್ದ ತರ್ಕವಿತರ್ಕಗಳ ಮೋಡಿಯಲ್ಲಿ. ಮೈಮರೆತು ನಸು ತಲೆಬಾಗಿ ನಡೆಯುತ್ತಿದ್ದ ಅವರ ರೀತಿ ಗೌರವ ಪೂರ್ಣವಾಗಿ ತೋರಿತು. ಅವರು ಸಮೀಪಕ್ಕೈದುತ್ತಲೂ ಕಿರಿಯರ ಶ್ರೀದನಿ ಹೊರಬಿತ್ತು "ಪ್ರಣಾಮ್ ಸರ್!"

ಆ ವಳದ ಅಧಿಪತಿ ಡಾ|| ನಿರಂಜನ್ "ಎಲ್ಲರೂ ಯಾವ ಕಡೆಗೆ ಹೊರಟಿದ್ದೀರಿ ?" ಎಂದರು.

"ಡಾ|| ಥಾಮಸ್‌ರವರ ಕ್ಲಿನಿಕ್ಸ್ ಕಡೆ...."

"ಅವರು ಭಾಷಣ ಆರಂಭಿಸಿದರು ಎಂದರೆ ನೀವು ತೂಕಡಿಸಲಿಕ್ಕೂ ಸಾಕು."

ಎಲ್ಲರ ಮುಖದಲ್ಲೂ ಮಂದಹಾಸ ನಲಿಯಿತು. "ಇಲ್ಲ, ಸರ್."

"ನೀವು ಸಾವು ಬದುಕಿನ ಹೋರಾಟದಲ್ಲಿ ವ್ಯವಹರಿಸಲಿದ್ದೀರಿ....ನಿಮ್ಮ ಒಂದು ಕ್ಷಣವೂ ವ್ಯರ್ಥವಾಗಬಾರದು. ಅವರು ಹೇಳುವ ಅಕ್ಷರ ಅಕ್ಷರವನ್ನೂ ಪೂರ್ಣ ಗಮನವಿಟ್ಟು ಕೇಳಿ."

"ಆಗಲಿ ಸರ್!"

ಡಾ|| ನಿರಂಜನ್ ಸರ್ಜರಿಯಲ್ಲಿ ಹೆಸರಾಂತ ಡಾಕ್ಟರು. ಅವರು ಶಸ್ತ್ರ ಹಿಡಿದರೆಂದರೆ ಪುಕ್ಕಲು ಎದೆಯವರಿಗೂ ಕಟು ಧೈರ್ಯ ಮೂಡಿಸುವಂತಹ ಸಿದ್ಧಹಸ್ತ. ಸಮಸ್ತ ಮಾನವ ಜಾತಿಯ ಅಂತರ್ಗತವಾದ ರೋಗಾದಿರೋಗಗಳ ಉಚ್ಚಾಟನೆಯೇ ಅವರ ಪರಮ ಲಕ್ಷ್ಯ. ರೋಗದ ಸ್ವರೂಪ, ಸ್ವಭಾವಗಳ ಗ್ರಹಿಕೆ ಹತ್ತದವರಿಗೂ ಗ್ರಹಿಕೆ ಮೂಡಿಸುವಂತಹ ಕುಶಾಗ್ರಮತಿ. ಮೇಲಾಗಿ ಮಿದು ಸ್ವಭಾವದ ಮಹನೀಯ. ಅವರೆಂದರೆ ವಿದ್ಯಾರ್ಥಿವೃಂದದಲ್ಲಿ ಎಲ್ಲಿಲ್ಲದ ಗೌರವ.

ಹುಡುಗಿಯರು ಹಿರಿಯರಿಗೆ ಅಭಿವಾದನ ಸಲ್ಲಿಸಿ ಹೊರಟರು.

ಕಾರಿಡಾರಿನಲ್ಲಿ ಸಾಗುತಿತ್ತು ಹಾದಿ. ಹತ್ತು ಮಾರು ಕಳೆಯುವಷ್ಟರಲ್ಲಿ ಎಂಟನೆಯ ವಾರ್ಡಿನಿಂದ ಡಾ|| ಶುದ್ಧೋಧನ ಹಾದಿಗೆ ಜಿಗಿದರು. ಅವರಿಗೆ ವಂದನೆ ಸಲ್ಲಿಸಿ ಹುಡುಗಿಯರ ದಳ ಮುಂದುವರಿಯಿತು. ಕಮಲೇಶ್ ಜುಬೇದಳ ಭುಜದ ಮೇಲೆ ಕೈಯಿಟ್ಟು ಅದುಮಿ ಮೆಲು ದನಿಯಲ್ಲಿ-"ಇಂದು ಡಾ|| ಶುದ್ಧೋಧನ ಬಹಳ ಗೆಲುವಾಗಿದ್ದಂತಿದೆ!"

"ಅವರ ಬಲೆಗೆ ಯಾವುದೋ ಹಿರಿಯ ಮೀನು ಬಿದ್ದಿರಬೇಕು." ಹುಬ್ಬೇ

ರಿಸಿದಳು ಶುಭ್ರಧವಳ ವಸ್ತ್ರಧಾರಿಣಿ."

"ಶ್! ದುಡ್ಡು ಎಂದರೆ ಜೀವ ಬಿಡುತ್ತೆ, ಪಶು!"

"ಶುದ್ಧೋಧನ ಎನ್ನುವುದಕ್ಕಿಂತ 'ದುರ್ಯೋಧನ' ಎಂದರೆ ಹೆಚ್ಚು ಒಪ್ಪುತ್ತೆ!"

"ನಿಜ."

"ಇವರನ್ನು ದ್ವೀಪಾಂತರಕ್ಕೆ ಕಳುಹಿಸುವುದು ಪರಮಸುಖ."

"ಅಲ್ಲಿಯೂ ಇಂದ್ರಪದವಿಯನ್ನು ಗಳಿಸುವುದರಲ್ಲಿ ಅನುಮಾನವಿಲ್ಲ!"

ಎಲ್ಲರ ಮುಖದ ಮೇಲೂ ಮಂದಹಾಸ ನಲಿಯಿತು.

ಅರೆ!

ಮರು ನಿಮಿಷದಲ್ಲಿ ಎದುರುಗಡೆಯಿಂದ ಬರುತಿದ್ದಾರೆ ಡಾ|| ಶುದ್ಧೋಧನ! ಒಡನೆ ಕುತೂಹಲಭರಿತ ನಿಶ್ಚಲನಯನಗಳು ಅವರೆಡೆಗೆ ಹರಿದುವು. ಇದೇನು? ಹೀಗೆ ಹೋಗಿ ಹಾಗೆ ಬಂದುದಾದರೂ ಏಕೆ? ಎನಿಸಿ ಎಲ್ಲರಿಗೊಮ್ಮೆ ಮುಳ್ಳು ತುಳಿದಂತಾಯಿತು.

ಅವರ ಹಿಂದೆ ಇನ್ನಿಬ್ಬರು ಬರುತ್ತಿರುವುದನ್ನು ನೋಡಿ ಮೆಲುದನಿಯೊಂದು ಪಿಸುಗುಟ್ಟಿತು.... "ಓ ಹಿರಿಯ ವಿಮಾನೊಂದು ಅವರ ಬಲೆಗೆ ಬಿದ್ದಿದೆ!"

"ಓ....ಹೋ! ತಮ್ಮ ನೇತೃತ್ವದಲ್ಲಿ ಎಲ್ಲರೂ ಹೊರಟಿದ್ದಾರೆಯೆ ಕಮಲೇಶ್?" ತಿಳಿ ಹಾಸ್ಯದ ಧಾಟಿಯಲ್ಲಿ ಪ್ರಶ್ನಿಸಿವರು ಡಾ|| ಶುದ್ಧೋಧನ. ಶುಷ್ಕ ಅಧರದಲ್ಲಿ ಎಳೆ ನಗು ಮಿನುಗಿತು.

"ಹಾಗೇನಿಲ್ಲ....ನಾವೆಲ್ಲರೂ ಒಂದೇ."

ಅನಂತರ,

ಸ್ವಭಾವ ಜನ್ಯವಾದ ಉತ್ಕೃತ್ತವೇಗದಲ್ಲಿ ನೇರ ಹಾದಿ ಹಿಡಿದು ಅವರು ಹೊರಟರು.

"ಹೆಣ್ಣು ಹೊನ್ನುಗಳೆಂದರೆ ಬಾಯಿಬಿಡುತ್ತೆ ಪ್ರಾಣಿ!" ಸುನೀಲವಸನೆ ತಿರಸ್ಕಾರದಿಂದ ನುಡಿದಳು.

ಫರ್! ಫಣಾರ್! ಫರ್! ಫಣಾರ್! ಫರ್! ಫಣಾರ್!

ಕೋಡ್ ನಂಬರ್ ಎಂಟರ ಘಂಟಾ ನಿನಾದ ಕಿವಿಗಳು ಕಿವುಡಾಗುವಂತೆ

ವೊಳಗಿ ಬುದ್ಧಿಜೀವಿಗಳ ಶರೀರಪ್ರಕೃತಿ 'ಜುಂ'ನೆ ಜುಮು ಜುಮುಗುಟ್ಟಿ, ಸುಪ್ತವಾಗಿದ್ದ ಚೇತನವು ತಟ್ಟನೆ ಬಡಿದೆಬ್ಬಿಸಿದಪಣಿಯಂತೆ ಎಚ್ಚರಗೊಂಡಿತು.

ರಾಣೀ ಭವತಾರಿಣಿಯ ತುರ್ತು ಕರೆ!

ಏನಿರಬಹುದು?

ಕಾರಿಡಾರಿನುದ್ದಕ್ಕೂ ಅಲ್ಲಲ್ಲಿ ಕೆಂಪು ದೀಪಗಳು ಹೊತ್ತಿ ಮೂರನೆಯ ವಾರ್ಡನ್ನು ತೋರಿ ಅಪಾಯದ ಸುದ್ದಿಯನ್ನು ಸಾರಿ ಹೇಳಿದುವು.

ಲಲನೆಯರು ದಾರಿಯಿಂದ ಸರಿದು ನಿಂತರು. ತುರ್ತುಕರೆಗೆ ಓಗೊಟ್ಟ ಡಾ|| ಥಾಮಸ್ ಮಾರುಗಾಲು ಹಾಕುತ್ತಾ ಓಡುವುದನ್ನು ನೋಡಿದ ವಿದ್ಯಾರ್ಥಿವೃಂದ ಕಾರಿಡಾರಿನಲ್ಲಿ ಅಲ್ಲಲ್ಲಿ ಗುಂಪುಗೂಡಿ ತಮ್ಮತಮ್ಮೊಳಗೆ ತರ್ಕ ವಿತರ್ಕದಲ್ಲಿ ನಿಮಗ್ನವಾಯಿತು.

ಹಿರಿಯ ಡಾಕ್ಟರುಗಳನೇಕರು ತುರ್ತುಕರೆಗೆ ಓಗೊಟ್ಟಿದ್ದಾರೆ. ಸಂದಿ ಗೊಂದಿಗಳಿಂದ ಹಲವಾರು ಸೇವಿಕೆ(Nurse)ಯರು ಜಿಗಿದು ಬಂದು ಮೂರನೆಯ ವಾರ್ಡಿನ ಕಡೆಗೆ ಓಡಿದರು. ಪಾದರಕ್ಷೆಗಳ ಸದ್ದು ಮಾಡು ಮುಟ್ಟಿದಂತೆ ಮೊಳಗಿತು. ಪಟ. ಪಟ. ಪಟ. ಪಟ.

ಡಾ|| ಥಾಮಸ್‌ರವರು ತುರ್ತುಕರೆಗೆ ಓಗೊಟ್ಟುದುದರಿಂದ ಅವರಿಗಾಗಿ ಕಾಯುವುದೇ? ಅಥವಾ ಹೋಗುವುದೇ? ಎಂಬ ಪ್ರಶ್ನೆ ಎಲ್ಲರ ಮನದಲ್ಲೂ ಮೂಡಿತು. ಹೊತ್ತು ಆಗಲೇ ಹನ್ನೊಂದರ ಅಂಚನ್ನು ದಾಟಿದ್ದರೂ ಅವರ ವೈದುಷ್ಯಪೂರ್ಣ ಪಾಠವನ್ನು ತಪ್ಪಿಸಿಕೊಳ್ಳುವುದು ಯಾರಿಗೂ ಇಷ್ಟವಿಲ್ಲ. ಉದ್ದುದ್ದವಾಗಿ ಹೇಳಿದರೂ ಅತ್ಯಂತ ವಿವರಾತ್ಮಕವಾಗಿ ಮನದಟ್ಟಾಗುವಂತೆ ವಿವರಿಸಿ ಹೇಳುವುದು ಅವರ ಸ್ವಭಾವ ಜನ್ಯ....ಅಂತಲೇ ಉತ್ಸುಕ ವಿದ್ಯಾರ್ಥಿವೃಂದ ಅವರಿಗಾಗಿ ಪ್ರತೀಕ್ಷಿಸುತ್ತಾ ಅಲ್ಲೇ ನಿಂತಿತು.

ಮೂರನೆಯ ವಾರ್ಡಿನಲ್ಲಿ ಮೂರು ವರ್ಷದ ಮಗುವೊಂದು ವಿಚಿತ್ರ ಜ್ವರದಿಂದ ನರಳುತಿತ್ತು. ಕಾರಣವನ್ನು ಗೊತ್ತುಹಚ್ಚುವುದರಲ್ಲಿಯೇ ದಿನಗಳು ಉರುಳಿದ್ದುವು. ಕಳೆದ ಎರಡು ಮೂರು ದಿನಗಳಿಂದ ಮಗುವಿಗೆ ಜ್ವರ ಬಂದಿರಲಿಲ್ಲ....ಇಂದು ಒಮ್ಮಿಂದೊಮ್ಮೆಲೇ ಉಲ್ಬಣವಾಗಲು ಕಾರಣವೇನು?

ಮರುಗಳಿಗೆಯಲ್ಲಿ ವಿಷಯದಿಂದ ವಿಷಯಕ್ಕೆ ಜಾರಿತು ಚಿತ್ತ.

ವಿದ್ಯಾರ್ಥಿ ಪ್ರಮುಖ ಚಂದ್ರಕಾಂತ್ ಬಿಡುವಿನವೇಳೆಯಲ್ಲಿ ಕುತೂ

ಹಲಕರ ವಿಷಯವೊಂದನ್ನು ತಂಡದ ಮುಂದೆ ಅತ್ಯಂತ ಮೆಹನತ್ತಿನಿಂದ ಇಟ್ಟ "ನಿನ್ನೆ ರಾತ್ರಿ ನಮ್ಮ ಬೀದಿಯಲ್ಲಿ ಮನೆಯೊಡತಿ ಗಂಡ ಮತ್ತು ಮಕ್ಕಳಿಗೆ ಕೈಯಾರ ವಿಷವೂಡಿಸಿದ್ದಾಳೆ !"

ಅಚ್ಚರಿಯ ವಿಷಯ ಗಮನವನ್ನು ಸೆಳೆಯಿತು. ಇತ್ತಕಡೆ ಬೆನ್ನು ಮಾಡಿ ನಿಂತ ಹುಡುಗಿಯರು ಎದುರುಮುಖವಾಗಿ ನಿಂತು ಕಿವಿಯನ್ನು ನಿಮಿರಿಸಿದರು. ಚಂದ್ರಕಾಂತ್ ಹೆಮ್ಮೆಯ ಧಾಟಿಯಲ್ಲಿ ಮುಂದುವರಿದ "ಆಕೆಗೆ ಕೆಟ್ಟ ಹವ್ಯಾಸವಿದ್ದುದೇ ಈ ಅನಾಹುತಕ್ಕೆ ಕಾರಣ. ಏನೇ ಇರಲಿ, ಹೆತ್ತ ಮಕ್ಕಳಿಗೂ ವಿಷವೂಡಿಸುವುದೆಂದರೆ ಸಾಮಾನ್ಯವಲ್ಲ. ಇದೆಲ್ಲಾ ಕಾಲ ಪರಿಜ್ಞಾನ....ಕಲಿತವರ ಕಾರ್ಯ ಸಂವಿಧಾನ."

"ಒಲಿದರೆ ನಾರಿ; ಮುನಿದರೆ ಮಾರಿ." ಬಲರಾಂ ತುಂಟ ನಗೆ ಬೀರಿದ.

"ನಾನಂತೂ ನಂಬಲಾರೆ. ಇದು ಸುಳ್ಳಾಗಿದ್ದರೂ ಇರಬಹುದು ಬಹುಶಃ" ಹುಡುಗಿಯರ ಗುಂಪಿನಿಂದ ದನಿಯೊಂದು ಹೊರಬಿತ್ತು.

"ಓ....ಹೋ! ನೀವೆಲ್ಲಿದ್ದೀರಿ? ಜಗತ್ತು ನಾಗಾಲೋಟದಿಂದ ಓಡುತ್ತಿದೆ....!"

ಹುಡುಗರು ಮುಸು ಮುಸು ನಕ್ಕರು. ಹುಡುಗಿಯರ ಮುಖ ತುಸು ಕಪ್ಪಿಟ್ಟಿತು.

ಕೆಲವೇ ಕೆಲವು ಘಳಿಗೆಯೊಳಗಾಗಿ ಅದೇ ದಾರಿಯಲ್ಲಿ ಸ್ಟ್ರೆಚರಿನಮೇಲೆ ಹೆಣ್ಣೊಂದನ್ನು ಹೊತ್ತು ತಂದರು. ಅವಳ ಹಿಂದೆ ಸಂಕಟ ತುಂಬಿದ ಕುಟುಂಬಿಗರು ಬರುತಿದ್ದುದು ಕಾಣಬಂತು. ದುಃಖೋದ್ವೇಗದಿಂದ ಕುಟುಂಬಿಗರು ತತ್ತರಿಸುತಿದ್ದಾರೆ. ಎಲ್ಲರ ನೋಟವೂ ಅತ್ತ ಹೊರಳಿತು. ಚಂದ್ರಕಾಂತ್ ಅವಳ ಕುಟುಂಬಿಗರನ್ನು ಬಲ್ಲವನಾದುದರಿಂದ ಸ್ಟ್ರೆಚರಿನ ಹಿಂದೆ ಬರುತಿದ್ದ ತರುಣನನ್ನು ಸಮೀಪಿಸಿ ವಿಷಯವೇನೆಂಬುದನ್ನು ವಿಚಾರಿಸಿದ. ಅವನಿಂದ ತಿಳಿದು ಬಂದ ಸಂಕ್ಷಿಪ್ತ ವಿವರ ಈ ರೀತಿ ಇತ್ತು....ವಿಷ ಮಿಶ್ರಣ ಆಹಾರದಿಂದ ದುರಂತಕ್ಕೊಳಗಾದ ಕುಟುಂಬದ ನತದೃಷ್ಟ ಸತಿ ಇವಳು. ಯಜಮಾನ ತನ್ನೆರಡು ಮಕ್ಕಳೊಡನೆ ಹೊರಗಡೆ ತಿಂಡಿ ತಿಂದು ಬಂದಿದ್ದ. ಸರಿರಾತ್ರಿಯಲ್ಲಿ ಮೂವರೂ ಅಸ್ವಸ್ಥಗೊಂಡರು. ಡಾಕ್ಟರನ್ನು ಕರೆತಂದು ಚಿಕಿತ್ಸೆ

ಕೈಕೊಂಡರೂ ಆವರನ್ನು ಉಳಿಸಿಕೊಳ್ಳಲಾಗಲಿಲ್ಲ. ಇಡೀ ಕುಟುಂಬದ ದುರಂತ ಆವಳ ಧೃತಿಗೆಡಿಸಿತು. ಕೂಡಲೆ ಪಾಷಾಣ ತಿಂದ ಈ ನತದೃಷ್ಟೆಯ ಸ್ಥಿತಿಯೂ ಈಗ ಚಿಂತಾಜನಕ....

ದುಃಖಾಂತವೆನಿಸಿದರೂ ಹುಡುಗಿಯರು ಹಾಯಾಗಿ ಉಸಿರಾಡಿದರು.

"ಓ....ಹಾಗೋ! ನನಗೆ ತಿಳಿಸಿದವರು ತಪ್ಪು ತಿಳಿದಿದ್ದರೆಂದು ಕಾಣುತ್ತದೆ." ಎಂದೆನ್ನುತ್ತಾ ಚಂದ್ರಕಾಂತ್ ಹೊರಟ. ದನಿವಿಜಾತೀಯವಾಗಿತ್ತು.

ಆ ಕರ್ಣಕಠೋರ ಮಿಥ್ಯಾಪಾದನೆಯಿಂದ ಪ್ರಕೃತಿ ಸ್ತಬ್ಧಗೊಂಡಿತು.

ಅನಿಲ ಮಹಾಶಯ ಸುಯ್ಯನೆ ಸುಯ್ದು ತೀಡಿದ.

ಅಧ್ಯಾಯ

೭

ಮುರಳೀಧರ ಒಂದೆರಡುಬಾರಿ ಮುಗ್ಗರಿಸಿದ ನಂತರ ಲಾ ಮುಗಿಸಿ ತಂದೆಯೊಂದಿಗೆ ಪ್ರಾಕ್ಟೀಸ್ ಆರಂಭಿಸಿದ. ಬಿ.ಎಸ್.ಸಿ., ಮುಗಿಸಿದ ಶ್ರೀಧರ ದಲ್ವಾಡಿ ಎಂ ಎಸ್.ಸಿ., ಹಂತವನ್ನೇರಿದ. ಕಮಲೇಶ್ ಎರಡನೆಯ ಹಂತವನ್ನು ದಾಟಿ ಮೂರನೆಯ ಹಂತದಲ್ಲಿ ವಿರಾಜಿಸಿದಳು.

ಜೀವನದ ಹೆದ್ದಾರಿಯಲ್ಲಿ ಕಲ್ಲು ಮುಳ್ಳುಗಳ ಎಡರು ತೊಡರುಗಳನ್ನು ಹರಿಹಾಯ್ದು ಜೀವನರಥ ಅನೇಕಬಾರಿ ಮುಗ್ಗರಿಸಿ ಮತ್ತೆ ಚೇತರಿಸಿಕೊಂಡಿತು. ಒಮ್ಮೆ ಹಣದ ಮುಗ್ಗಟ್ಟಾದರೆ ಇನ್ನೊಮ್ಮೆ ಅನಾರೋಗ್ಯದ ಮುಗ್ಗಟ್ಟು.

ಏತನ್ಮಧ್ಯೆ, ಮುರಳೀಧರ ದಲ್ವಾಡಿಯ ಲಗ್ನ ಫಲವೂ ಕೂಡಿ ಬಂತು. ಕ್ರಿಸ್‌ಮಸ್ ರಜೆಯನ್ನು ಕಳೆಯಲು ಚಂದ್ರಮುಖಿಯ ಮನೆಗೆ ಬಂದಾಗ, ಅವಳ ಅತ್ತಿಗೆಯ ಮಗಳನ್ನು ಆಕಸ್ಮಿಕವಾಗಿ ಭೇಟಿ ಮಾಡಿ ಮೊದಲ ನೋಟಕ್ಕೆ ಮನಸೋತು ಅಕ್ಕನಿಗೆ ಹೆಣ್ಣು ಕೊಡಿಸೆಂದು ದುಂಬಾಲ ಬಿದ್ದೂ ಆಯಿತು.

ಇದೀಗಷ್ಟೆ ಲಾ ಮುಗಿಸಿದ್ದುದರಿಂದ ಇನ್ನೂ ಒಂದೆರಡು ವರ್ಷ ಹೋಗಲಿ ಎಂಬುದು ಮನೆಯವರ ಅಭಿಮತ. ಆದರೆ ಅಷ್ಟು ದಿನಗಳು ಕಾಯಲು ಕನ್ಯಾಪಿತ ಸಿದ್ಧನಿರಲಿಲ್ಲವಾದುದರಿಂದ ಮುರಳೀಧರ ದಲ್ವಾಡಿ ವ್ಯೆಯೆಲ್ಲಾ ಮವಸ್ಸಾಗಿ ಊರ್ಮಿಳೆಯ ಧ್ಯಾನದಲ್ಲಿ ಮುಳುಗಿದ. ಹಾಲುಂಡ ಮಗು ಬೆಳ್ಳಗಿರುವುದೆಲ್ಲಾ ಹಾಲೆಂದು ಭ್ರಮಿಸುವಂತಾಯಿತು ಅವನ ಸ್ಥಿತಿ.

ದಿನೇ ದಿನೇ ಮನೆ ಅಶಾಂತಿಯ ಬೀಡಾಗಹತ್ತಿದುದರಿಂದ ಸುರೇಶ ದಲ್ವಾಡಿ ಕುಟುಂಬವು ಇನ್ನೂ ಹದಿನಾರರ ಮುಗುದೆಯನ್ನು ಧಾರಾಪೂರ್ವಕವಾಗಿ ಭೂವ್ಯಾಕಾಶಗಳ ಸಾಕ್ಷಿಯಾಗಿ, ಚೊಚ್ಚಲ ಸೊಸೆಯನ್ನಾಗಿ ಸ್ವೀಕರಿಸಿತು. ಆಗ ಮುರಳೀಧರ ದಲ್ವಾಡಿಗೂ ಸ್ವರ್ಗಕ್ಕೂ ಮೂರು ಗೇಣಾದರೆ ಊರ್ಮಿಳೆಗೂ ಸಗ್ಗಕ್ಕೂ ಒಂದೇ ಗೇಣು! ಹಳ್ಳಿಯ ವಾತಾವರಣದಲ್ಲಿ ಬೆಳೆದ ಅರಗಿಣಿಗೆ ಪೇಟೆ ಪಟ್ಟಣಗಳ ಸವಿ ಲೋಕೋತ್ತರವಾಗಿ ತೋರಿದರೆ, ದಲ್ವಾಡಿ

ಮನೆತನದ ಹಣಕಾಸಿನ ಮುಗ್ಗಟ್ಟು ಅವಳ ಆಶೋತ್ತರಗಳಿಗೆ ಅಡ್ಡಗಟ್ಟಿ ಹಾಕುತ್ತಲೇ ನಡೆದಿದೆ. ಪರಿಸ್ಥಿತಿಯ ಪ್ರಕೋಪಕ್ಕೆ ಸಿಕ್ಕಿ ತನುಮನಗಳು ಅಶಾಂತಿಯ ಬೀಡಾದುವು. ಊರ್ಮಿಳೆಯ ಮಾನಸಸರೋವರದಲ್ಲಿ ತಿಳಿನೀರು ದಿನೇ ದಿನೇ ಬತ್ತತೊಡಗಿ ಕಳ್ಳಿಯ ಮುಳ್ಳು ಹೇರಳವಾಗಿ ಬೆಳೆಯತೊಡಗಿತು.

ಅಂದು,

ಕಮಲೇಶ್ ಊರ್ಮಿಳೆಯನ್ನು ಅರಳುಗಳಿಂದ ಸ್ವಾಗತಿಸಿದಾಗ ಇನ್ನಾಗಲೂ ಮಾ-ಗೆ ಅರ್ಧಹೊರೆ ಇಳಿದರೆ ಸಾಕು ಎಂದುಕೊಂಡಿದ್ದಳು. ಆದರೂ ಸ್ವರ್ಣಮಾಲಿನಿಯ ರೀತಿಯೇ ಬೇರೆ. ಸೊಸೆಯಾಗಮನದಿಂದ ಸಂತಸವೂ ಇಲ್ಲದೆ ಬೇಸರವೂ ಇಲ್ಲದೆ ಕೆಲಸ ಕಾರ್ಯಗಳ ಹಣಾಹಣಿಯಲ್ಲಿ ಎಂದಿನಂತೆಯೇ ಮೈಮರೆಯುತಿದ್ದುದರಿಂದ 'ತುಂಬಿದ ಕೊಡ ತುಳುಕದು' ಎಂಬ ನಾಣ್ಣುಡಿಗೆ ತಾನೇ ಸಾಕ್ಷಿಯಾದಳು.

ಆದರೆ ಮುರಳೀಧರ ದಲ್ಲಾಲಿಯ ಪರಿಸ್ಥಿತಿಯೇ ಬೇರೆ, ಮನಮೆಚ್ಚಿ ತಾನೇ ಪ್ರಯತ್ನಪೂರ್ವಕವಾಗಿ ಪಡೆದುಕೊಂಡ ಶ್ರೀನಿಧಿಯನ್ನು ಹೃದಯ ಬನದಲ್ಲಿಟ್ಟು ಪರಿಪೋಷಿಸಿ ಮನಃಪೂರ್ತಿ ಸಂತಸದ ಹಾಲೋಗರವನ್ನುಂಡರೂ ಉಂಡಮೇಲೆ ಅಜೀರ್ಣಭಾದೆಯನ್ನು ಅನುಭವಿಸುವಂತಾಯಿತು ಜೀವನ ಪರಿಸ್ಥಿತಿ. ಅಜೀರ್ಣಬಾಧೆಯ ನಿವಾರಣೆಗೆ ದುಡಿಯುವುದೊಂದೇ ದಾರಿಯೆಂಬುದನ್ನರಿತು ತಂದೆಯೊಂದಿಗೆ ವಕೀಲಿ ವ್ಯವಸಾಯಕ್ಕೆ ತಾನೇ ತಾನಾಗಿ ಇಳಿದ ಕುಲಪುತ್ರ. ಆದರೇನು ಸಾಧನೆ ಸುಲಭವೇ ?

ಸಂಸಾರದ ಬಗೆ ಹದಗೆಟ್ಟು ಮಿಲಿಮಿಲಿಗೊಂಡರೂ ದಿನದ ಗಾಲಿಯು ಸರಾಗವಾಗಿ ಉರುಳುತಿತ್ತು. ಏಕಾಂತಲೋಕದಲ್ಲಿ ಸುಖದುಃಖಗಳ ನದಿ ಎಣೆಯಿಲ್ಲದೆ ಹರಿಯುವಂತೆ.

ಕಮಲೇಶ್ ಮನೆಯ ಹಾದಿಯನ್ನು ತುಳಿದಾಗ ಟಾರು ಬಳಿದ ಕರಿಯ ರಸ್ತೆ ಜನ ಶೂನ್ಯವಾಗಿತ್ತು. ನಡುನೆತ್ತಿಯ ಮೇಲೆ ಉರಿವ ಬಿಸಿಲ ಬೇಗೆಯನ್ನು ತಾಳಲಾಗದೆ ಅಖಿಲ ಪಕ್ಷಿ ಜಾತಿಯು ಮರಗಳ ತಂಪನ್ನಾಶ್ರಯಿಸಿ ಚಿಲಿಪಿಲಿರಾಗ ಹಾಡುತಿತ್ತು.

ಬೆಳಗಿನಿಂದ ಹಸಿವು ಬಾಯಾರಿಕೆಗಳನ್ನು ಕಲಿಕೆಯಭರದಲ್ಲಿ ಕಡೆಗಣಿಸಿದ್ದ ಕಮಲೇಶಳಿಗೆ ಒಮ್ಮೆಲೇ ಭುಗಿಲೆಂದು ಎದ್ದಿತು. ವರಾಂಡದಲ್ಲಿ ಕುಳಿತು

ಮಗಳಿಗಾಗಿ ಕಾದಿದ್ದ ಸ್ವರ್ಣಮಾಲಿನಿ ಕೈಯಲ್ಲಿದ್ದ ಪುಸ್ತಕವನ್ನು ಮುಚ್ಚಿ ಕದ ತೆರೆದಳು. ಮನೆಯಲ್ಲಿ ಎಳ್ಳು ಬೀರಿದರೂ ಸಾರಿ ಹೇಳುವಂತಹ ನಿಶ್ಶಬ್ದ.

"ನೀವು ವಿಶ್ರಾಂತಿ ತೆಗೆದುಕೊಳ್ಳಿ. ನಾನು ಊಟ ಮಾಡುವೆ." ಎಂದಳು ವಿನಯ ಶೀಲಳಾದ ಕಮಲೇಶ್.

ಅವಳು ಹಾಗೆಂದು ಹೇಳಿದರೂ ಮುಖ ಮಜ್ಜನ ಮಾಡಿ ಒಳ ಬರುವಷ್ಟರಲ್ಲಿ ಮೇಜಿನ ಮೇಲೆ ಊಟ ಅಣಿಯಾಗಿತ್ತು. ಕಮಲೇಶ್ ಊಟ ಮುಗಿಸಿ ಬಸಿ ಬಟ್ಟಲನ್ನು ತೊಳೆದಿಟ್ಟು ತುಸು ವಿಶ್ರಾಂತಿಗಾಗಿ ತನ್ನ ಕೊಠಡಿಯನ್ನು ಸೇರಿಕೊಂಡಳು. ಹಾಸಿಗೆಯ ಮೇಲೆ ತಣ್ಣಗೆ ಮಲಗಿದಾಗ ಅನುದಿನದ ಆಸ್ಪತ್ರೆಯ ವ್ಯವಹಾರ ಮನವಲೆಯಲ್ಲಿ ತೇಲಿ ನಲಿಯಿತು ರೋಗಿಗಳು, ಡಾಕ್ಟರುಗಳು, ಸಹವಿದ್ಯಾರ್ಥಿಗಳು, ಚಿತ್ತಭಿತ್ತಿಯಲ್ಲಿ ಸುಳಿದಳಿದರು. ಸಕ್ಕೂ ಜ್ವರ ಬಿಟ್ಟು ಮನೆಗೆ ಮರಳಿದರೂ ಮನಸ್ಸು ಸ್ಥಿಮಿತಕ್ಕೆ ಬಾರದೆ ಅಂಜುಕುಳಿಯಾಗಿ ಮನೆಯಲ್ಲಿದ್ದುಬಿಟ್ಟಿದ್ದಾಳೆ. ಸಹವಿದ್ಯಾರ್ಥಿನಿಯರಲ್ಲಿ ಅವಳು ಉತ್ತಮ ವಿದ್ಯಾರ್ಥಿನಿ. ಈಗ ನೋಡಿದರೆ ಎಲ್ಲದರಲ್ಲೂ ನಿರಾಸಕ್ತಿ. ಸಕ್ಕೂ ಹೀಗಾಗುವುದೆಂದರೆ ಎಂತಹ ಆಶ್ಚರ್ಯ....?

ಗ್ರಹಚಾರ!

ಯೋಚನೆಯಲೆಗಳು ಅಲ್ಲಿಂದಲ್ಲೇ ತಟಸ್ಥವಾದುವು. ಭಾರವಾದ ಹೃದಯದಾಳದಲ್ಲಿ ಅಂತರ್ವಾಣಿ ಅವಳಿಗಾಗಿ ದೇವರಲ್ಲಿ ಮೊರೆಯಿಟ್ಟಿತು. ಒಡನೆ ಎರಡೂ ಕೈಗಳನ್ನು ಭಕ್ತಿಪೂರ್ವಕವಾಗಿ ಜೋಡಿಸಿದಳು ಕಮಲೇಶ್.

ತಟ್ಟನೆ ಬಾಗಿಲಬಳಿ ಕಿಲಕಿಲ ನಗುವಿನ ಸದ್ದು ಕೇಳಿಬಂತು.

ಮೇಘ ಘರ್ಜನೆಯನ್ನಾಲೈಸಿದ ಮಗುವಿನಂತೆ ಬೆಚ್ಚಿ ಬಿದ್ದು ಅತ್ತ ದಿಟ್ಟಿ ಹೊರಳಿಸಿದರೆ ಬಾಗಿಲ ಪರದೆಯನ್ನು ಸರಿಸಿ ಸಂದಿಯಿಂದ ಹಣಿಕಿ ನೋಡುತ್ತ ಊರ್ಮಿಳೆ ಕಿಲಕಿಲನೆ ನಗುತಿದ್ದಾಳೆ.

"ಹುಚ್ಚು ಹುಚ್ಚಾಗಿ ಗೊಣಗಿಕೊಂಡು ಕೈಮುಗಿಯುತಿದ್ದೀಯಲ್ಲಾ, ಅದೇಕೆ?"

"ರೋಗಿಯೊಬ್ಬಳ ಬಗ್ಗೆ ಪ್ರಾರ್ಥಿಸಿಕೊಂಡೆ. ಮತ್ತೇನಿಲ್ಲ." ನೀರಸ ಭರಿತ ಉತ್ತರ ಹೊರಬಿತ್ತು.

"ಓಹೋ...." ಒಂದು ಗಳಿಗೆ ತಡೆದು "ಇಂದು ನೀನು ಹೇಗೂ ಬಿಡು

ವಾಗಿದ್ದಿ ಸಿನಿಮಾಕ್ಕೆ ಹೋಗಿಬರೋಣವೇ ?" ಎಂದು ಅತ್ಯಂತ ಆಸಕ್ತಿಯಿಂದ ಕೇಳಿದಳು ಊರ್ಮಿಳೆ.

"ಇಲ್ಲಮ್ಮಾ, ಓದುವುದು ಬಹಳವಿದೆ." ಎಂದೆನ್ನುತ್ತ ಕಣ್ಣುಗಳನ್ನು ಗಡಿಯಾರದ ಕಡೆ ಹೊರಳಿಸಿದಳು ಕಮಲೇಶ್. ಹೊತ್ತು ಒಂದರ ಅಂಚನ್ನು ದಾಟುವುದರಲ್ಲಿತ್ತು. "ಈಗಲೇ ಏಕಷ್ಟು ಅವಸರ ?"

"ಇನ್ನು ಅಲಂಕಾರ ಮಾಡಿಕೊಂಡು ಬಸ್ಸು ಹಿಡಿದು ಹೋಗುವಷ್ಟರಲ್ಲಿ ಸರಿಹೋಗುತ್ತೆ." ಅರಳಿದ ಕಣ್ಣುಗಳಲ್ಲಿ ಆಸೆಯ ಬೆಳಕು ಮಿನುಗಿತು. ಕೊರಳು ಕೊಂಕಿಸಿ ಉತ್ತರವನ್ನು ನಿರೀಕ್ಷಿಸುತ್ತ ಒಂದು ಘಳಿಗೆ ನಿಂತಳು ಕಮಲ ಲೋಚನೆ.

"ಸ್ವಲ್ಪಹೊತ್ತು ಕಾದು ನೋಡು. ಅಷ್ಟರೊಳಗಾಗಿ ಮುರುಳಿ ಮನೆಗೆ ಬಂದಾನು."

"ಸರಿ, ಅವರು ಬರುವುದು ಇನ್ನೆಂದಿಗೋ ? ಅನಂತರ 'ಬೇಡ' ಎಂದರೂ ಸರಿಯೆ."

ಊರ್ಮಿಳೆಯ ಮುಖದಲ್ಲಿನ ಅಸಮಾಧಾನವನ್ನು ನೋಡುತ್ತಲೂ ಕಮಲೇಶಳಿಗೆ ತುಸು ಕಸಿವಿಸಿಯುಂಟಾಯಿತು. ಏನು ಹೇಳಬೇಕೋ ಹೊಳೆ ಯಲಿಲ್ಲ. ಆಲೋಚನಾಸುಳಿಯಲ್ಲಿ ಸಿಕ್ಕಿ ಸುಮ್ಮನಾದಳು. ಮರುಕ್ಷಣದಲ್ಲಿ ಅವಳ ದನಿ ಮತ್ತೆ ಕಿವಿಯನ್ನು ತಾಗಿತು. "ಅದಕ್ಕೂ ಯೋಚಿಸಬೇಕೆ ಕಮಲೇಶ್ ?"

"ಪ್ರತಿಯೊಂದಕ್ಕೂ ಯೋಚಿಸಬೇಕು. ಆಲೋಚನಾರಹಿತರಾಗಿ ಬಾಳು ವುದೇನು ಚೆನ್ನ ?....ಇಷ್ಟಕ್ಕೂ ನನಗೆ ಓದುವುದು ಬಹಳವಿದೆ ಸ್ವಲ್ಪವೂ ಬಿಡುವಿಲ್ಲ."

ಊರ್ಮಿಳೆಯ ಮುಖ ಅಸಮಾಧಾನದ ಮುದ್ರೆ ತಳೆಯಿತು. ಅಲ್ಲಿ ನಿಲ್ಲದೆ ಆ ಕ್ಷಣ ಹೊರಟಳು. ಅವಳ ರೀತಿಯನ್ನು ನೋಡಿ ಕಮಲೇಶಳಿಗೆ ಎಲ್ಲಿಲ್ಲದ ಅಚ್ಚರಿ ಮೂಡಿತು....ಈ ಜೀವನದಲ್ಲಿ ಅದೃಷ್ಟಾದೃಷ್ಟಗಳು ಎಂದೂ ಶಾಶ್ವತ ವಲ್ಲ. ಜೀವನ ಎಂದು, ಯಾವುದನ್ನು ಪ್ರಾಸಾದಿಸಿದರೂ ಅದನ್ನು ಪಡೆದು ಸಮಾಧಾನದಿಂದ ಅನುಭವಿಸುವುದು ಲೇಸು....ಎಂದು ಉಪದೇಶಿಸಿತು ಯಾವುದೋ ತೂರ್ಯವಾಣಿ.

ರಾತ್ರಿ ತಾನೊಬ್ಬಳೇ ಹಿಂದಿರುಗಬೇಕಾದ ತೊಂದರೆಯನ್ನೂ ಅವಳು ಗಮನಿಸಿದಂತೆ ತೋರಲಿಲ್ಲ. ಆಶ್ಚರ್ಯಚಕಿತ ನಯನದ್ವಯಗಳೆರಡೂ ಅವಳನ್ನು ಹಿಂಬಾಲಿಸಿದುವು ಗೋಡೆಯ ಮೇಲಿನ ಗಡಿಯಾರ ಗಂಭೀರದನಿಯಲ್ಲಿ ಘೋಷಿಸಿತು. ಢನ್! ಢನ್! ಢನ್! ಢನ್! ಢನ್!

....ಇನ್ನೂ ಐದು ಗಂಟೆಯಷ್ಟೆ?

ಹೃದಯ ಸಮುದ್ರದಲೆಗಳು ಮೆಲ್ಲಮೆಲ್ಲಗೆ ಏರುಪೇರಾದುವು. ಯೋಚಿಸಿದಷ್ಟೂ ಮಾನಸ ಸರೋವರವು ಕದಡಿ ಬಗ್ಗಡವಾಗಹತ್ತಿದೆ. ಏಳಲು ಮನಸ್ಸೇ ಆಗುತ್ತಿಲ್ಲ. ಚಹದ ಹೊತ್ತು ಮೀರಿದರೂ ಆಕರವು ಮೂಡಿದರೂ ಅದರ ಪರಿವೆ ಮೂಡಲಿಲ್ಲ. ಸ್ವಲ್ಪ ಹೊತ್ತಿನೊಳಗಾಗಿ ಬಾಗಿಲ ಪರದೆಯನ್ನು ಸರಿಸಿ ಮಾ ತಲೆ ಹಾಕಿದಳು. "ಊರ್ಮಿಳಾ ಎಲ್ಲಿ ಕಮಲೇಶ್?"

"ಸಿನಿಮಾಕ್ಕೆ ಹೋಗಬೇಕೆನ್ನುತಿದ್ದಳು; ನಿಮಗೆ ಹೇಳಲಿಲ್ಲವೆ?"

"ಇಲ್ಲವಲ್ಲಾ, ತಿಂಡಿಗೂ ಒಳಗೆ ಬರಲಿಲ್ಲ."

ಕಮಲೇಶ್ ಎದ್ದು ನಿಂತಳು. ಮನಸ್ಸು ಒಮ್ಮೆಲೇ ನೀರಿನಿಂದ ತೆಗೆದ ಮೀನಿನಂತಾಯಿತು.

"ನೋಡು ಮಗೂ, ಅವಳು ಲಂಗುಲಗಾಮಿಲ್ಲದ ಹುಡುಗಿ. ನರನರಗಳಲ್ಲೂ ಹುಚ್ಚು ಆಸೆ ಹರಿದರೆ ಹೇಗೆ ಹೇಳು? ಈಗೇನೋ ಹೊಸತು, ಮುಂದೆಯೂ ಹೀಗಾದರೆ ಕಷ್ಟ."

"ಮುರುಳಿ ಕೇಳಿದರೆ ಏನೆನ್ನುವುದು?"

"ಯಾರೋ ಗುರುತಿನವರ ಮನೆಗೆ ಹೋಗಿರಬಹುದೆಂದು ಹೇಳು.... ಇನ್ನೇನು ಮಾಡೋಣ?"

ಸ್ವರ್ಣಮಾಲಿನಿಯ ದನಿಯಲ್ಲಿ ಆತಂಕವಿತ್ತು. ಬಂದ ಹಾಗೇ ಹಿಂದಿರುಗಿದಳು. ಕಮಲೇಶಳ ಗಮನ ಭವಿಷ್ಯದ ಮಹಾವೇದಿಕೆಯನ್ನೇರಿ ಅಂಡಲೆಯತೊಡಗಿತು. ಚಾಂದ್ರಮಾನ ವರ್ಷಮಾನ ದಶಮಾನಗಳೆಲ್ಲಾ ಚಿತ್ತಭಿತ್ತಿಯಲ್ಲಿ ಸಮಸ್ಯೆಯ ತೆರೆಯನ್ನು ಹರಡಿದುವು....ತನುಮನಗಳು ಸಮಸ್ಯೆಯ ನಂಜನ್ನೀಂಟಿ ವೀತರಾಗದಿಂದ ಮಿಡಿದುವು.

ಕಮಲೇಶ್ ಒಳಹೋಗಿ ಸಂಜೆಯಡುಗೆಯಲ್ಲಿ ತಾಯಿಗೆ ಸಹಾಯ ಮಾಡಿ ತನ್ನ ಕೊಠಡಿಗೆ ಪದಾರ್ಪಣೆ ಮಾಡಿದಾಗ ಹೊರ ಜಗತ್ತನ್ನು

ಬೈಗುಗಪ್ಪು ತೆರೆತೆರೆಯಾಗಿ ಆವರಿಸುತಿತ್ತು. ಅದೇ ಸಮಯದಲ್ಲಿ ಸ್ವರ್ಣ ಮಾಲಿನಿಯು ದೇವರಮನೆಯ ಕದ ಮುಚ್ಚಿಕೊಂಡುದುದು ಕೇಳಿ ಬಂತು. ಕಮಲೇಶ್ ಅಲ್ಪ ವಿಚಾರಗಳನ್ನು ಬದಿಗೊತ್ತಿ ಪುಸ್ತಕಗಳನ್ನು ಮೇಜಿನ ಮೇಲೆ ಹರಡಿಕೊಂಡು ನಿರ್ಮಲಚಿತ್ತದಿಂದ ಓದಿನಲ್ಲಿ ನಿಮಗ್ನಳಾದಳು. ಮನೋಮಂದಿರವನ್ನು ಶಾರೀರಿಕ ವಿಜ್ಞಾನ ಆವರಿಸಿತು. ತುಸು ಹೊತ್ತು ಉರುಳಿರಲಿಕ್ಕಿಲ್ಲ ಬಾಗಿಲಲ್ಲಿ ಪಾದರಕ್ಷೆಗಳ ಪಟ ಪಟ ಸದ್ದು ಕೇಳಿಬಂದು ಕಣ್ಣುಗಳು ಸಹಜವಾಗಿ ಅತ್ತ ಹೊರಳಿದುವು. ಬಾಗಿಲಲ್ಲಿ ನಿಂತ ಮುರುಳಿ ಆತಂಕದಿಂದ ಕೇಳಿದ "ಊರ್ಮಿಳಾ ಎಲ್ಲಿ ಕಮಲೇಶ್!"

"ಇಲ್ಲೇ ಎಲ್ಲೋ ಹೋಗಿರಬೇಕು. ಇಷ್ಟರಲ್ಲೆ ಬಂದಾಳು."

ಅವನ ಕಣ್ಣು ಕೆನ್ನೆಗಳಲ್ಲಿ ಮೂಡಿದ ಸಿಟ್ಟಿನ ರಂಗು ಮನವನ್ನು ಈಟಿ ಯಂತೆ ಇರಿಯಿತು.

"ಅಂಥ ಅವಸರವೇನಿತ್ತು? ಹೋದುದಾದರೂ ಎಲ್ಲಿಗೆ?"

"........"

"ಹೋಗಿ ಎಷ್ಟೊತ್ತಾಯಿತು? ಏನೂ ಹೇಳಲಿಲ್ಲವೆ?"

"ಈಗಷ್ಟೆ ಹೋಗಿದ್ದಾಳೆ...."

ಮುರುಳಿ ಮುಖದಲ್ಲಿ ಅಸಮಾಧಾನ ತಾಂಡವವಾಡುತಿತ್ತು. ಸಿಟ್ಟಿಗೆ ತನ್ನ ಕೊಠಡಿಗೆ ಹೋಗಿ ಬಟ್ಟೆ ಬದಲಾಯಿಸುವುದರೊಳಗಾಗಿ ನೆಚ್ಚಿನ ಗೆಳೆಯ ಹಾಜರಾದ. ಇನ್ನು ಅವನೊಂದಿಗೆ ಹೊರಡದೆ ವಿಧಿಯಿರಲಿಲ್ಲ. ಕೋಪತಾಪ ಗಳ ವಶೀಭೂತನಾಗಿ ಹೊರಟ. ಅವನು ಹಿಂದಿರುಗುವುದರೊಳಗಾಗಿ ಊರ್ಮಿಳಾ ಮನೆ ಸೇರಿಕೊಂಡರೆ ಸಾಕು ಎಂದುಕೊಂಡಳು ಕಮಲೇಶ್. ಓದುವುದು ಬಹಳವಿದ್ದರೂ ಮನಸ್ಸನ್ನು ಅದರಲ್ಲಿ ತೊಡಗಿಸಲಾಗಲಿಲ್ಲ. ಮುರಳಿಯ ಸಿಟ್ಟಿನ ಮುಖ ಅಕ್ಷಿಪಟಲದ ಮೇಲೆ ಮತ್ತೆಮತ್ತೆ ಮೂಡುತಿತ್ತು. ಬಗೆಯಲ್ಲಿ ಕಹಿಯನ್ನು ಕದಡಿದ ಆ ಘಟನೆಯ ಭವಿಷ್ಯತ್ತನ್ನು ಪುನಃಪುನಃ ಚಿಂತಿಸಿತು ಮನಸ್ಸು. ಎದೆಯಾಳದಲ್ಲಿ ತಳಮಳವನ್ನು ತುಂಬಿಕೊಂಡು ತಾಯಿಯ ಬಳಿಗೆ ಹೋಗಿ ವಿಷಯವನ್ನು ಮುಂದಿಟ್ಟಳು "ಮುರುಳಿಗೆ ಬಹಳ ಸಿಟ್ಟು ಬಂದಿದೆ. ಏನು ಮಾಡುವುದಮ್ಮಾ?"

"ಮುರುಳಿ ಸಿಟ್ಟು ಐದು ನಿಮಿಷದ್ದು. ಯೋಚಿಸಬೇಕಾಗಿಲ್ಲ ಸುಮ್ಮ

ನಿರು."

"ಆದರೂ, ಬಹಳ ಅಸಮಾಧಾನಗೊಂಡಿದ್ದಾನೆ."

"ಕುಸಂಸ್ಕಾರದಲ್ಲಿ ಬೆಳೆದ ಹುಡುಗಿ. ಇವೊಂದೂ ಅವಳಿಗೆ ಅರ್ಥವೇ ಆಗುವುದಿಲ್ಲ." ಸ್ವಲ್ಪ ಹೊತ್ತು ತಡೆದು "ಮುರುಳಿ ಮನೆಗೆ ಮರಳುವುದರೊಳಗಾಗಿ ಇವಳು ಹಿಂದಿರುಗಿದರೆ ಎಲ್ಲಾ ಸರಿಹೋಗುತ್ತೆ" ಎಂದಳು ಸಾವಧಾನದಿಂದ.

ಹೊತ್ತು ಉರುಳಿತು.

ಟಿಕ್ ಟಾಕ್ ಟಿಕ್ ಟಾಕ್ ಸದ್ದು ಗೈಯ್ಯುತ್ತಾ ಗಡಿಯಾರದ ಮುಳ್ಳು ಒಂಬತ್ತೂವರೆಯಂಚನ್ನು ದಾಟಿ ಮುಂದುವರಿದಾಗ ಕಮಲೇಶಳ ಹೃದಯ ತುಸು ವ್ಯಾಪ್ತಿಗೆ ಮೀರಿ ಮಿಡಿಯಿತು. ಮುರುಳಿ ಬರುವುದರೊಳಗಾಗಿ ಅವಳು ಬಂದು ಬಿಟ್ಟರೆ....ಅಥವಾ ಮುರುಳಿ ಅರ್ಧಗಂಟೆ ತಡವಾಗಿ ಬಂದರೆ....

ತಲೆ ಬಾಗಿಲ ಕಿರುಗಂಟೆ ಕಿರು ಸದ್ದುಗೈಯಿತು.

ಕದ ತೆಗೆದೊಡನೆ ತಿಳಿಗಾಳಿ ಮೊದಲು ನುಗ್ಗಿ ಬಂತು. ಹಿಂದೆಯೇ ಊರ್ಮಿಳಾ ಚಿಗುರಿಯಂತೆ ಒಳಬಂದಳು. ತುಟಿಗಳಲ್ಲಿ ಮಂದಹಾಸ ನಲಿಯುತಿತ್ತು. ಸಿನಿಮಾ ಗೀತ ಮನಸನ್ನು ಹುಚ್ಚುಚ್ಚಾಗಿ ಅರಳಿಸಿ ಬಿಟ್ಟಿದೆ. ನಿಗಿನಿಗಿ ನಲಿಯುವ ಅವಳ ಮುಂದೆ ಮುರುಳಿಯ ಸಿಟ್ಟನ್ನು ಹೇಳುವುದೂ ಸಹ ಬೇಡವೆನಿಸಿತು ಕಮಲೇಶಳಿಗೆ. ಚಿಂತೆಯೇ ಮೈವೆತ್ತು ಬಂದಂತೆ ಕೇಳಿದಳು,

"ಹೇಗೆ ಹೋಗಿ ಬಂದೆ?"

"ನೆರೆಮನೆಯ ಸೀತೂ ಜೊತೆ ಹೋಗಿದ್ದೆ. ನಡೆದುಕೊಂಡೇ ಬಂದೆವು."

"ಇನ್ನೆಂದೂ ಹೀಗೆ ಹೇಳದೆ ಕೇಳದೆ ಎಲ್ಲಿಗೂ ಹೋಗಬೇಡ ಊರ್ಮಿಳಾ. ಮುರುಳಿ ಕಿಡಿಕಿಡಿಯಾಗಿದ್ದ."

"ಅವರು ಬಂದಿದ್ದಾರೆಯೆ?"

"ನಿನ್ನ ಪುಣ್ಯ. ಹೊರಹೋದವನಿನ್ನೂ ಬರಲಿಲ್ಲ."

"ಹೋಗಲಿ ಬಿಡು, ಆಗಲೇ ಬಂದೆ ಎನ್ನುವೆ. ನೀನೇನೂ ಹೇಳಲೇ ಬೇಡ."

ಮುಖದಲ್ಲಿ ಸಣ್ಣನಗುವೊಂದು ಅರಳಿತು. ಕಮಲೇಶ್ ಮಾತಾಡಲಿಲ್ಲ. ಸ್ವರ್ಣಮಾಲಿನಿಯು ಅದನ್ನು ಅಷ್ಟಾಗಿ ಮನಸ್ಸಿಗೆ ಹಾಕಿಕೊಳ್ಳಲಿಲ್ಲ.

ಆಗ ಕಿಟಿಕಿಯಾಚೆಯ ಹೊರಜಗತ್ತಿನಲ್ಲಿ ಕಾಳಗವು ಹೆಪ್ಪುಗಟ್ಟಿತ್ತು. ತನ್ನ ಕೊಠಡಿಯ ವಿನಾ ಮತ್ತೆಲ್ಲ ದೀಪಗಳೂ ನಂದಿವೆ. ಪುಸ್ತಕ ಪ್ರಪಂಚ ವನ್ನು ಸ್ವಲ್ಪ ಹೊತ್ತು ಬದಿಗಿಟ್ಟು ನಕ್ಷತ್ರಲೋಕದಲ್ಲಿ ಮನನೆಟ್ಟು ನ್ನಿಮರೆ ತಳು ಕಮಲೇಶ್. ಮಿನು ಮಿನುಗುವ ತಾರಾಗಣ ತನ್ನನ್ನೇ ನಿಟ್ಟಿಸುತ್ತಿವೆ. ತಂಗಾಳಿ ತಣ್ಣಗೆ ತೀಡಿ ಅರಳುವ ಸುಮಗಳ ನಲ್ಗಂಪು "ಘಂ"ನೆ ಒಳ ನುಗ್ಗಿ ಬರುತ್ತಿದೆ.

ಗಡಿಯಾರದ ಟಿಕ್ ಟಾಕ್ ಟಿಕ್ ಟಾಕ್ ಸದ್ದಿನೊಡನೆ ಹೊತ್ತು ಸ್ವಚ್ಛಂದವಾಗಿ ಉರುಳುತಿತ್ತು.

....ಮೆಡಿಕಲ್ ಕಾಲೇಜಿನ ಮೂರನೆಯ ಹಂತವನ್ನು ಏರಿ ನಿಂತರೂ.... ಬದುಕಿನ ಧ್ಯೇಯೋದ್ಧೇಶ, ಜೀವನದ ಮೌಲ್ಯ, ಸಾಮಾಜಿಕ ಬಂಧಗಳ ತಾಕ ಲಾಟ ನಡೆದೇ ಇದೆ........ಸ್ಕಾಲರ್ ಷಿಪ್ ಬಂದರೂ ಊರ್ಮಿಳಾ ಏಕೆ ಇದರ ಲ್ಲೆಲ್ಲಾ ತಲೆ ಹಾಕುತ್ತಾಳೆಂಬುದು ಅರ್ಥವಾಗದ ವಿಷಯ....ಶ್ರೀಧರ ದಲ್ಲಾಲಿ ಒಲ್ಲದ ಮನಸ್ಸಿನಿಂದ ಬೆಂಬಲ ನೀಡಿದರೂ ಮುರಳೀಧರ ದಲ್ಲಾಲಿ ಏನೋ ಒಂದು ಬಗೆ, ಏನೋ ಒಂದು ರೀತಿ....ಅತ್ಯಂತ ಪ್ರೀತಿ ವಾತ್ಸಲ್ಯಗಳು ತುಂಬಿ ತುಳುಕುತಿದ್ದ ತಮ್ಮಗಳ ನಡುವೆ ಆದೊಂದು ಬಗೆಯ ಸಣ್ಣ ತಾತ್ಸಾರ ಬೆಳೆಯಲು ಕಾರಣವಾದರೂ ಏನು?....ಬಹುಶಃ ಮುರುಳಿಯ ಕಾರ್ಯದಕ್ಷತೆಯ ದಾರಿದ್ರ್ಯ ಅವನ ಮನೋವೇದಿಕೆಗೆ ಸಣ್ಣ ಎಲ್ಲೆ ಕಟ್ಟನ್ನು ನಿರ್ಮಿಸಿರಬ ಹುದು ; ಹೃದ್ದೇಶದಲ್ಲಿ ಕಸಿವಿಸಿಯ ಕಳ್ಳಿಯನ್ನು ಬೆಳೆಸಿರಬಹುದು....ಆದರೆ.... ಶ್ರೀಧರ?....ಈತನೇಕೆ ಹೀಗಾದ?....ಏಕೆ ಇಷ್ಟೊಂದು ಅಸಡ್ಡೆ?....ಈ ಅಶಾಂತಿಯ ಬೆಂಕಿ ಎಲ್ಲಿಯವರೆಗೆ ವ್ಯಾಪಿಸುವುದೋ....

ವಿಚಾರಸರಣಿ ಮನದಲೆಯಲ್ಲಿ ಅವ್ಯಾಹತವಾಗಿ ದಾಂಧಲೆ ನಡೆಸುವಾಗ ಯೋಚನೆಯ ಮಂಪರದಲ್ಲಿ ಹೊತ್ತು ಉರುಳಿದುದರ ಪರಿವೆಯೇ ಇರುತ್ತಿರ ಲಿಲ್ಲ. ಬಾಳಿನ ಝುಂಝಾವಾತಾವರಣವನ್ನು ಎದುರಿಸಲಾಗದೆ ಎಷ್ಟೋ ಬಾರಿ ಕಂಬನಿ ಕರೆದುದುಂಟು. ನಿರಾಸಕ್ತಿ ತಳೆದು ಓದನ್ನು ಬದಿಗೊತ್ತಿದುದೂ ಉಂಟು. ಆದರೂ ಯಾವುದೋ ಅಗೋಚರವಾದ ಅದಮ್ಯ ಶಕ್ತಿಯೊಂದು ತನ್ನನ್ನು ಸುಲಲಿತವಾಗಿ ನಡೆಸುತ್ತಿದೆಯೆಂಬುದನ್ನು ಆತ್ಮಶಃ ಒಪ್ಪಿಕೊಳ್ಳಲೇ ಬೇಕು.

ದೂರದಿಗಂತದಲ್ಲಿ ಪ್ರಜ್ವಲಿಸುತಿದ್ದ ನಕ್ಷತ್ರವೊಂದು ಜಾರಿ ಕೆಳಗೆ ಬಿತ್ತು.

ಪ್ರಾಯಶಃ....ಧರ್ಮ, ಮಾನವತೆ ಕೊರಳೆತ್ತಿ ಕೂಗಿದಾಗ ಸಾಂತ್ವನ ಗೈಯಲು ಜಾರಿ ಬಂತೋ ಏನೋ.

ಅದೇ ದಿನ ಬಂದಿದ್ದ ಸತ್ಯಭಾಮೆಯ ಕಾಗದ ಮೇಜಿನ ಮೇಲಿತ್ತು,

....ಈ ಜೀವನ ಮಾಯಾಮಿಥ್ಯೆಯಿಂದ ಕೂಡಿದೆ ಕಮಲೇಶ್. ಅಧಿಕಾರ ಎಂಬುದು ತಮ್ಮ ಜೀವನದಲ್ಲಿ ಅತ್ಯಂತ ಉತ್ತಮ ಅಸ್ತ್ರ ಎಂಬ ಮಿಥ್ಯಾದೃಷ್ಟಿಯಿಂದ ಎಲ್ಲರೂ ಬಹಳ ಮಟ್ಟಿಗೆ ಮೈಮರೆಯುತ್ತಾರೆ. ಆದರೆ ಅದು ಹೊರ ಪ್ರಪಂಚಕ್ಕೆ ಎಷ್ಟು ಘನವಾಗಿ ಕಾಣುವುದೋ, ಎಷ್ಟು ಸಮಂಜಸವಾಗಿ ತೋರುವುದೋ, ಅದರಂತೆ ಅಂತರಂಗದಲ್ಲಿರುವುದಿಲ್ಲ....ಆದರೂ ಈ ಬಾಳುಬದುಕುಗಳ ಘನೋದ್ದೇಶವನ್ನು ಅರಿತುಕೊಂಡವರೆಷ್ಟು ಮಂದಿ ಬಾಳ್ಮಂಟಪದಲ್ಲಿ ದೊರೆತಾರು? ಯೋಚಿಸಿ ನೋಡು ಕಮಲೇಶ್, ಕಳ್ಳಿಯ ಬನದಲ್ಲಿ ಗುಲಾಬಿ ಹೂ ಎಂದೂ ಅರಳುವುದಿಲ್ಲ. ನಾಗರಿಕ ಜಗತ್ತಿನ ನಾಗರಿಕ ಮಾನವನ ಅಂತರಂಗದ ಲೀಲಾವಿಲಾಸವನ್ನು ಸವಿದು ವಿಮರ್ಶಿಸಬಲ್ಲ ಪೂರ್ಣದೃಷ್ಟಿಯ ಮಹಾವಿಮರ್ಶಕ ಈ ಭೂಮಿಯ ಮೇಲೆ ಜನಿಸಿದ್ದಾನೆಯೆ? ಅಥವಾ ಜನಿಸಲಿದ್ದಾನೆಯೆ ?

ಇನ್ನಷ್ಟು ಬಹಳಷ್ಟು ಯೋಚಿಸಿನೋಡು ಕಮಲೇಶ್. ಕುರಿಗಳನ್ನು ಸಾಕುವುದರಿಂದ ಕುರುಬನಿಗೆಷ್ಟು ಲಾಭವೋ ಆಲೋಚನಾರಹಿತರಾದ ಈ ಹೆಣ್ಣುಗಳನ್ನು ಸಾಕುವುದರಿಂದ ನಮ್ಮವರಿಗೆ ಅಷ್ಟೇ ಲಾಭ....ಅಂತಲೇ ಈ ಜೀವನ ಕಲ್ಮಶಪೂರಿತವಾಗಿದೆ. ಭಾವಾತ್ಮಕವಾದ ಶ್ರದ್ಧೆ ಇಲ್ಲದವರಿಗೆ ಯುಗಧರ್ಮವಾದರೂ ಏನು ಬೋಧಿಸೀತು? ಹಳತು ಹೊಸತುಗಳ ಅನಾತ್ಮೀಯ ಸಂಘರ್ಷಣೆಯಲ್ಲಿ ಸಂಭವಿಸುವ ತುಮುಲ ಚೀತ್ಕಾರ ಅಡವಿ ಪಾಲಾಗುತ್ತಿದೆ. ಎಷ್ಟೆಷ್ಟೋ ಬಗೆಗಳಲ್ಲಿ ಯಾವ ಯಾವುದೋ ಕ್ಷೇತ್ರಗಳಲ್ಲಿ ಸುಧಾರಿಸುತ್ತಿರುವ ರಾಷ್ಟ್ರ ಈ ಸ್ಥಿರ ಗಂಭೀರ ಚೀತ್ಕಾರವನ್ನೇಕೆ ಗಮನಿಸುತ್ತಿಲ್ಲ ?

ಸ್ತ್ರೀ ಜಾತಿ........

ಬಿಡು, ಯಾಕೋ ಲೇಖನಿ ಓಡುವುದೂ ಇಲ್ಲ.

ಅಧ್ಯಾಯ

೮

"ಸುಮಾರು ಏಳೆಂಟು ದಶಕಗಳ ಹಿಂದೆ ನಂಜು ಜೀವಾಣುಗಳ (VIRUSES) ವಿಷಯ ಸಾಮಾನ್ಯವಾಗಿ ಯಾರಿಗೂ ತಿಳಿದಿರಲಿಲ್ಲ. ಸೂಕ್ಷ್ಮದರ್ಶಕ ಯಂತ್ರಕ್ಕೂ ಕಾಣಸಿಗದ ರೋಗಕಾರಕ ಸೂಕ್ಷ್ಮಾತಿಸೂಕ್ಷ್ಮ ಜೀವಾಣು (MICROBE) ಗಳಿಂದ ಹೊಗೆಸೊಪ್ಪಿನ ಮಚ್ಚೆ (MOSAIC) ರೋಗವುಂಟಾಗುತ್ತದೆಂದು ರಷ್ಯದ ಸಸ್ಯವಿಜ್ಞಾನಿ ಇವನೋವಾಸ್ಕಿಯವರು ಕಂಡುಹಿಡಿದ ದಿನದಿಂದಲೇ ವೈರಾಲಜಿ (VIROLGY) ಇತಿಹಾಸವು ಆರಂಭವಾಯಿತು. ತದನಂತರ ಪ್ರಾಣಿಗಳ ಕಾಲು ಬಾಯಿ ರೋಗಕ್ಕೆ ಕಾರಣವಾಗುವ ನಂಜು ಜೀವಾಣುಗಳು ಕಂಡುಹಿಡಿಯಲ್ಪಟ್ಟುವು. ಕಳೆದ ಕೆಲವು ದಶಕಗಳ ಹಿಂದೆ ವಿಜ್ಞಾನ ಜಗತ್ತಿನಲ್ಲಿ ಅತ್ಯಂತ ಕುತೂಹಲಕರವಾದ ವಿಷಯವೊಂದು ಕಂಡು ಹಿಡಿಯಲ್ಪಟ್ಟಿತು. ಅದೇ ಏಕಾಣು ಜೀವಿ (BACTERIA) ಗಳನ್ನು ನಾಶಗೊಳಿಸುವ "ಬ್ಯಾಕ್ಟೆರಿಯೋ ಪೇಜಸ್" (BACTERIO PHAGES)

"ನಂಜು ಜೀವಾಣು ವಸ್ತುತಃ ಹೇಗಿರುತ್ತದೆ? ಅದರ ಸಂಖ್ಯಾಭಿವೃದ್ಧಿ ಹೇಗಾಗುತ್ತದೆ? ಜೀವಕೋಶಗಳೊಂದಿಗೆ ಅದರ ಸಂಬಂಧಗಳೇನು? ಎಂಬೀ ವಿಷಯುಗಳು ಕೇವಲ ಕೆಲವು ದಶಕಗಳ ಹಿಂದೆ ಯಾರಿಗೂ ತಿಳಿದಿರಲಿಲ್ಲ. ಕೆಲವು ವರ್ಷಗಳ ಹಿಂದೆ ನಂಜು ಜೀವಾಣುಗಳನ್ನೂ ಮತ್ತು ಅವುಗಳ ಅಂಶಗಳನ್ನೊಳಗೊಂಡ ಶುದ್ಧ ವ್ಯಾಕ್ಸೀನ್ (VACCINE) ಉತ್ಪನ್ನಕ್ಕಾಗಿ ವೈಜ್ಞಾನಿಕ ವಿಧಾನಗಳನ್ನು ವಿನೂತನಗೊಳಿಸಲಾಗಿದೆ.

"ಮನುಷ್ಯನಿಗೆ ಬರುವ ನಂಜಿನ ರೋಗಗಳು ಉಗ್ರವಾಗಿಯೂ ಅಪಾಯುಕರವಾಗಿಯೂ ಇರುತ್ತವೆ. ಅವುಗಳ ನಿಯಂತ್ರಣವು ಆಧುನಿಕ ಜಗತ್ತಿನ ಆಧುನಿಕ ವಿಜ್ಞಾನದ ಪ್ರಮುಖ ಕಾರ್ಯಕ್ಷೇತ್ರವಾಗಿದೆ. ಅದು ಈಗಾಗಲೇ ಗಣನೀಯ ಪ್ರಗತಿಯನ್ನು ಸಾಧಿಸಿದೆ. ದಾಕು (VACCINATION) ಹಾಕುವುದರ ಮೂಲಕ ಸಿಡುಬು ಮತ್ತು ಮಕ್ಕಳ ಪಾರ್ಶ್ವವಾಯು

(POLIO) ಗಳಂತಹ ಮಾನವ ಕುಲದ ಭಯಂಕರ ಶತ್ರುಗಳನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಸಾಧ್ಯವಾಗಿದೆ. ನಂಜು ಸಾಂಕ್ರಾಮಿಕಗಳ ರಾಸಾಯನಿಕ ಚಿಕಿತ್ಸಾ ವಿಜ್ಞಾನ ಕ್ಷಣೇ ಕ್ಷಣೇ ಮುಂದುವರಿಯುತ್ತಿದೆ. ಆದರೂ ಈ ಹೊಸ ಔಷಧಿಯು ಯಾವುದಾದರೂ ನಿರ್ದಿಷ್ಟ ನಂಜಿನ ವಿರುದ್ಧವಾಗಿ ವಿಶಿಷ್ಟ ಚಟುವಟಿಕೆಯನ್ನು ಹೊಂದಿರಬಹುದೇ ಹೊರತು ಸಾಮಾನ್ಯವಾಗಿ ಅದು ಎಲ್ಲಾ ನಂಜುಗಳಿಗೂ ಅನ್ವಯಿಸುವುದಿಲ್ಲ. ನಂಜು ಜೀವಕೋಶವನ್ನು ಪ್ರವೇಶಿಸುವುದನ್ನು ತಪ್ಪಿಸಲು ಮೊದಲೇ ವ್ಯಾಕ್ಸೀನ್ ಮೂಲಕ ಇವು ಪ್ರವೇಶಿಸಿದಲ್ಲಿ ನೂತನ ನಂಜು ಕಣಗಳು ಬೆಳೆಯದಂತೆ ಅವುಗಳ ಪ್ರಕ್ರಿಯೆಯನ್ನು ತಡೆಗಟ್ಟಲು ಸಮರ್ಥವಾಗುತ್ತವೆ.

"ನಂಜು ಜೀವಾಣು ರಭಸದಿಂದ ಪುನರುತ್ಪತ್ತಿಗೊಳಿಸುವ ಜೀವಿ. ಕೇವಲ ಇಪ್ಪತ್ತು ನಿಮಿಷಗಳಿಗೊಮ್ಮೆ ನಂಜಿನ ಹೊಸ ಸಂತಾನ ಉತ್ಪತ್ತಿಯಾಗುತ್ತದೆ. ನಂಜು ಸೂಕ್ಷ್ಮಾತಿಸೂಕ್ಷ್ಮವಾದ ಸೋಂಕು ಹುಟ್ಟಿಸುವ ಜೀವಿ. ಪ್ರಬಲವಾದ ಸೂಕ್ಷ್ಮದರ್ಶಕ ಯಂತ್ರದಿಂದಲೂ ನಂಜಿನ ಜೀವಾಣುಗಳನ್ನು ನೋಡಲಾಗುವುದಿಲ್ಲ. ಅವುಗಳ ಛಾಯಾಗ್ರಹಣ ಮಾತ್ರ ಸಾಧ್ಯ. ಜೀವಕೋಶಗಳಲ್ಲಿ (LIVING TISSUE) ಮಾತ್ರ ಇವು ಬದುಕಬಲ್ಲುವು. ಮಾನವನ ಅನೇಕಾನೇಕ ಸೋಂಕು ರೋಗಗಳಿಗೆ ನಂಜಿನ ಜೀವಾಣುಗಳೇ ಕಾರಣ.

"ನಂಜಿಗೆ ಸಂಬಂಧಪಟ್ಟ ವಿಜ್ಞಾನದ ಸಂಶೋಧನೆಯು ಸಾಮಾನ್ಯವಲ್ಲ. ಅದು ಭವಿಷ್ಯತ್ತಿಗೂ ಆಶಾದಾಯಕವಾಗಿದೆ. ಮನುಷ್ಯನ ಯೌವನ ಕಾಲವನ್ನು ಊರ್ಜಿತಗೊಳಿಸಲು ಜೀವಕೋಶಗಳಿಂದ ನಂಜಿನಂಶಗಳನ್ನು ಹೊರದೂಡಿ ಜೀವಕೋಶಗಳ ಶುದ್ಧೀಕರಣ ನಡೆಸುವುದರ ಪತ್ತೆಗೆ ಕೈಹಚ್ಚಿದ್ದಾನೆ—ಆಧುನಿಕ ವಿಜ್ಞಾನಿ.

"ಭವಿಷ್ಯತ್ತಿನ ನಂಜುಶಾಸ್ತ್ರ ದೀರ್ಘ ಯೌವನಾವಸ್ಥೆಯ ಕನಸನ್ನೂ ನನಸು ಗೊಳಿಸುವುದರಲ್ಲಿ ಆಶ್ಚರ್ಯವಿಲ್ಲ. ನಿಜವಾಗಿಯೂ ಶಾಶ್ವತ ಯೌವನವುಂಟಾಗದಿದ್ದರೂ ಕಾಲಕ್ಕೆ ಮೊದಲೇ ಮುಪ್ಪಿಗೆ ಶರಣಾಗುವ ಭಯವು ದೂರವಾದೀತು. ವಯೋಧರ್ಮಕ್ಕನುಗುಣವಾಗಿ ದೇಹ ಪರಿವರ್ತನೆಯಾಗುವುದು ಸಹಜವಾದರೂ ಶೀಘ್ರ ಮುಪ್ಪಿಗೆ ಜೀವಕೋಶಗಳ ಸರಾಸರಿ ತಪ್ಪುತಳಿಯೇ ಕಾರಣವೆಂಬುದರಲ್ಲಿ ನಮಗೆ ಪೂರ್ಣ ವಿಶ್ವಾಸವುಂಟು. ನಂಜುಕಣಗಳ ಸಂಸರ್ಗ ದೋಷಗಳ ಪರಂಪರೆಗಳು ಬೆಳೆದು, ತತ್ಪರಿಣಾಮವಾಗಿ ಮುಖ್ಯ

ವಾದ ಪ್ರಕ್ರಿಯೆಗಳ ಮೇಲೆ ದುಷ್ಪರಿಣಾಮವಾಗುವುದರಿಂದ ಮನುಷ್ಯನಿಗೆ ಮುಪ್ಪುಂಟಾಗುತ್ತದೆ.

"ನಾಗರಿಕ ಜಗತ್ತಿನಲ್ಲಿ ವಿಜ್ಞಾನಧಾರೆ ಕ್ಷಣೇ ಕ್ಷಣೇ ಮುಂದುವರಿಯುತ್ತಿದೆ. ಅದಕ್ಕನುಸಾರವಾಗಿ ಆಧುನಿಕ ಮಾನವ ದಿನೇ ದಿನೇ ಸಿದ್ಧಹಸ್ತನಾಗಿ ಉತ್ತುಂಗಕ್ಕೇರುತಿದ್ದಾನೆ. ಭೌತವಿಜ್ಞಾನಿ ಭವಿತವ್ಯದಲ್ಲಿ ಭೌತಶಾಸ್ತ್ರ ಸಂಶೋಧನೆಯಲ್ಲಿ ಮುನ್ನುಗ್ಗಿ ಮಾನವ ಕೋಟಿಯನ್ನು ದೀರ್ಘಾಯುಷ್ಮಂತರನ್ನಾಗಿಸುವುದರಲ್ಲಿ ಸಂದೇಹವಿಲ್ಲ...."

ಡಾ|| ರಘುರಾಂರವರ ವಿಚಾರಧಾರೆ ನಿರರ್ಗಳವಾಗಿ ಜಲಧಾರೆಯಂತೆ ಪ್ರವಹಿಸುತಿತ್ತು. ವಿದ್ಯಾರ್ಥಿವೃಂದ ತುಟಿಸಿಟಕ್ಕೆನ್ನದೆ ಆಲೈಸುತಿದ್ದರು. ಕೂಲಂಕಶವಾಗಿ ವಿವರಾತ್ಮಕವಾಗಿ ಇನ್ನೂ ಅನೇಕ ವಿವರಗಳೊಡನೆ ತಮ್ಮ ಭಾಷಣವನ್ನು ಅವರು ಮುಗಿಸಿದಾಗಲೇ ಇತ್ತ ಗಮನ. ಎಲ್ಲರೂ ಹಿರಿಯ ವೈದ್ಯ ವಾಚಸ್ಪತಿಗೆ ಅಭಿವಾದನ ಸಲ್ಲಿಸಿ ಹೊರಬಿದ್ದರು. ಹುಡುಗರ ದಳ ಮುಂದೆ ಸಾಗಿತು. ಕಮಲೇಶಳ ಭುಜವನ್ನು ಅದುಮಿ ಹಿಡಿದು ಪದ್ಮ ಕಮಲಾನಿ ಕೇಳಿದಳು "ಈಚೆಗೆ ನೀನು ಸಕ್ಕುವನ್ನು ನೋಡಿದೆಯಾ?"

"ಇಲ್ಲ ಪದ್ಮಾ, ನೀನು ನೋಡಿರಬೇಕಲ್ಲ ಹೇಗಿದ್ದಾಳೆ?"

"ಅವಳಿಗೆ ಆ ಭಯ ಹಾಗೇ ಉಳಿದುಬಿಟ್ಟಿದೆ, ಕಾಯಿಲೆಯೇನಿಲ್ಲದಿದ್ದರೂ ಅವಳು ಮೊದಲಿನ ಚಟುವಟಿಕೆಯನ್ನು ಪಡೆದುಕೊಂಡಿಲ್ಲ. ಒಮ್ಮೊಮ್ಮೆ ಹೇಳಿದ್ದನ್ನೇ ಹೇಳುವುದುಂಟು, ನೋಡಿದರೆ ವ್ಯಸನವಾಗುತ್ತದೆ."

"ಛೆಃ!....ಅವಳನ್ನು ಸೈಕಾಲಜಿಸ್ಟ್ ಬಳಿಗೆ ಕರೆದುಕೊಂಡು ಹೋಗುವುದು ಲೇಸು. ಏಕೆ ಇನ್ನೂ ಸುಮ್ಮನಿದ್ದಾರೆ?"

"ತಂದೆ ತಾಯಿಗಳು ಹಳೇ ಸಂಪ್ರದಾಯಸ್ಥರು....ಅವರಿಗೆ ಏನೋ ಒಂದು ಬಗೆಯ ಸಾಮಾಜಿಕ ಭಯ. ಸೈಕಾಲಜಿಸ್ಟ್ ಬಳಿಗೆ ಹೋದರೆ ಬುದ್ಧಿಸ್ವಾಸ್ಥ್ಯವಿಲ್ಲವೆಂಬ ಪ್ರತೀತಿಗೆ ಕಾರಣವಾಗಿ ಅವಳ ಭವಿಷ್ಯಕ್ಕೆ ತೊಂದರೆಯಾಗಬಹುದು ಎಂಬ ಭಾವನೆ. ಒಟ್ಟಿನಲ್ಲಿ ಅವರೇ ಅವಳ ಅವನತಿಗೆ ಕಾರಣವಾಗುತ್ತಾರೆ ಎಂದರೆ ತಪ್ಪಲ್ಲ."

"ಛೆಃ! ಛೆಃ! ಎಂತಹ ಅನ್ಯಾಯ...." ಸಖೇದಾಶ್ಚರ್ಯದಿಂದ ನುಡಿದಳು ಕಮಲೇಶ್.

"ಕಲಿತವರಾಗಿ ತಿಳಿದವರಾಗಿ ಹೀಗಾದರೆ ಹೇಗೆ?.... ಈಗಲೇ ತುರ್ತು ಚಿಕಿತ್ಸೆ ಕೈಗೊಳ್ಳದಿದ್ದಲ್ಲಿ ಮುಂದೆ ಅವಳ ಗತಿಯೇನು ?"

"ದೇವರೇ ಗತಿ."

ತನುಮನಗಳು ಬೆಣ್ಣೆಯಂತೆ ಕರಗಿದುವು. ತಲೆಯಲ್ಲಿ ಅದೇ ವಿಚಾರವನ್ನು ತುಂಬಿಕೊಂಡು ಹೆಜ್ಜೆ ಹಾಕಿದಳು ಕಮಲೇಶ್. ಎಡಭಾಗದ ವಾರ್ಡುಗಳ ಕಡೆಯಿಂದ ಬಂದ ಹುಡುಗಿಯರೂ ಕೂಡಿ ದಳ ಹಿರಿಯ ತಂಡವಾಯಿತು. ಎಲ್ಲರೂ ಕೂಡಿ ದೈನಂದಿನ ವಿಚಾರ ಕುರಿತು ಚರ್ಚಿಸುವಾಗ ಹಳೆಯ ವಿಚಾರ ಹಿಂದೆ ಉಳಿಯಿತು.

ಕಮಲೇಶ್ ಮನೆ ಮುಟ್ಟಿದಾಗ ಮೇಜಿನ ಮೇಲಿದ್ದ ಕಾಗದ ಕಣ್ಮನಗಳನ್ನು ತಟ್ಟನೆ ಸೆಳೆಯಿತು. ಚಿರಪರಿಚಿತ ಹಸ್ತಾಕ್ಷರ, ನೋಡಿದೊಡನೆಯೇ ಮುಖಮಂಡಲ ಪ್ರಫುಲ್ಲವಾಯಿತು.

........ಕಮಲೇಶ್ ! ಭಗವಂತ ಭಕ್ತ ಪರಾಧೀನ ಎನ್ನುತ್ತಾರೆ. ಅದು ಪುರಾಣ ಪ್ರಸಿದ್ಧಮಾತ್ರವಲ್ಲ. ಸರ್ವತ್ರ ಸದಾ ಅಕ್ಷರಶಃ ಸತ್ಯ........ಕೇಳು, ನನ್ನ ಬಿ.ಎ., ಮುಗಿದಿದ್ದೇ ತಡ ಮದುವೆಯ ತಯಾರಿ ನಡೆಸಲು ಅಪ್ಪ ಮುಂದಾದರು. ಎಂ.ಎ., ಓದುವುದಾಗಿ ಎಷ್ಟು ಬೇಡಿಕೊಂಡರೂ ಒಪ್ಪಲಿಲ್ಲ. ನಮ್ಮವರ ಹಳೆಯ ವಾದ ನಿನಗೆ ಗೊತ್ತೇ ಇದೆಯಲ್ಲ, ಮತ್ತೇಕೆ ಅದನ್ನು ವಿಸ್ತರಿಸಲಿ? ಆದರೆ ದೈವವಶಾತ್ ಅವರು ಕೃತಕೃತ್ಯರಾಗಲಿಲ್ಲ. ಎಂ.ಎ., ಓದುವುದಕ್ಕೆ ಕಾಲಾವಕಾಶ ಒದಗಿಸಿ ಕೊಟ್ಟ ಭಗವಂತನಿಗೆ ನೂರು ನಮಸ್ಕಾರ ಹಾಕಿದೆ. ಮದುವೆಯಾಗಲಿದ್ದ ಮಹಾನುಭಾವರೆಲ್ಲಾ ಸಾಲುಗಟ್ಟಿ ಕೈತಪ್ಪಿ ಹೋದಂದು ಸಂತಸದ ಮೂಟೆಯಾಗಿ ಹುಚ್ಚಳಂತೆ ಕುಣಿದಾಡಿದ್ದೇನೆ. ಏನೆನ್ನುತ್ತಿ ? ಭಗವಂತ ಭಕ್ತ ಪರಾಧೀನನಲ್ಲವೇ ? ಅವನು ನಿಜವಾಗಿಯೂ ನನ್ನ ಮೊರೆಗೆ ಕಿವಿಗೊಟ್ಟಿದ್ದಾನೆ, ಎಂದರೆ ಮನಃಪೂರ್ವಕವಾಗಿ ಒಪ್ಪಿಕೊಳ್ಳುವೆಯಷ್ಟೇ ?

ಕಮಲೇಶ್, ಎಂದಿಗೆ ನಿನ್ನನ್ನು ನೋಡುವೆನೋ ಎಂಬಷ್ಟು ಕಾತರ ಮನವನ್ನು ತುಂಬಿಕೊಂಡಿದೆ. ನಿನಗೆ ಬಿಡುವು ದೊರೆತಾಗ ಈ ಕಡೆ ಬಂದು ಹೋಗು. ನಿನಗಾದರೆ ಇಲ್ಲಿ ಅಕ್ಕ ಇದ್ದಾರೆ. ಆ ನೆವದಿಂದಲಾದರೂ ಬರಬಹುದು. ನನಗೆ ಅಂತಹ ಕಾರಣಗಳಾವುವೂ ಇಲ್ಲ. ಏನೇ ಇರಲಿ, ನಿನ್ನ

ಕಲಿಕೆಯ ನೆವದಲ್ಲಿ ನಿನ್ನ ಬಡ ಗೆಳತಿಯನ್ನು ಮರೆಯಬೇಡ ಕಂಡೆಯಾ........ ಅಪ್ಪ ಅಮ್ಮ ನನಗಾಗಿ ವರಾನ್ವೇಷಣೆ ಮಾಡುವಾಗಲೆಲ್ಲಾ "ಕಮಲೇಶ್ ಗಂಡಾಗಿದ್ದಿದ್ದರೆ" ಎಂದು ಎಷ್ಟು ಬಾರಿ ಚಿಂತಿಸಿಲ್ಲ? ಎಷ್ಟು ಬಾರಿ ಯೋಚಿಸಿಲ್ಲ?........

ಚೇತನಳ ಲೆಕ್ಕಣಿಕೆಯಲ್ಲಿ ಹರಿದು ಬಂದ ಒಕ್ಕಣೆಯನ್ನು ನೋಡಿ ಕಿಲಕಿಲ ನಕ್ಕಳು ಕಮಲೇಶ್. ಮನಸ್ಸು ಒಮ್ಮೆಲೇ ಅವಳ ಸುತ್ತಮುತ್ತ ಸುತ್ತಾಡಿ ಹಳೆಯ ನೆನಹುಗಳನ್ನು ಬೆದಕಿ ಸವಿಯ ಹತ್ತಿತು....ಅವಳು ಒಂದು ವೇಳೆ ಇಲ್ಲೇ ನೆಲಸುವಂತಾದರೆ ಎಷ್ಟು ಸ್ವಚ್ಛಂದವಾಗಿ ತನುಮನಗಳು ಬೆರೆಯುತಿದ್ದುವೋ........ಯೋಚಿಸುತ್ತಾ ಭಾವೋನ್ಮಾದದಿಂದ ಪುಳಕಿತಳಾದಳು ಕಮಲೇಶ್.

ಉಂಡು ಮುಗಿಸಿ ತುಸು ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಅಡ್ಡಾಗಿ ಕೈಗೊಂದು ಪುಸ್ತಕ ತೆಗೆದುಕೊಂಡಾಗ ಹೊತ್ತು ಮೂರರ ಅಂಚನ್ನು ತಬ್ಬಿತ್ತು. ಕಾಲ ಎಷ್ಟೊಂದು ವೇಗವೋ ನಾವು ಅಷ್ಟೇ ನಿಧಾನ ಎಂದುಕೊಂಡು ಕಾಲಗತಿಯನ್ನೂ ಕಾರ್ಯಗತಿಯನ್ನೂ ಮನದಲ್ಲೇ ತಾಳೆ ಹಾಕತೊಡಗಿದಳು.

ಬಾಗಿಲಲ್ಲಿ ಪಟಪಟ ಪಾದ ಸಪ್ಪಳದೊಂದಿಗೆ ತಂದೆಯ ಉಚ್ಚಸ್ವರವೂ ಕೇಳಿಬಂತು........ಕಮಲೇಶ್!

ಬಾಗಿಲ ಪರದೆಯಿಂದ ಹೊರಗೆ ತಲೆ ಹಾಕಿದಳು ಕಮಲೇಶ್. ಕರಿಯ ಕೋಟು ಜರಿಯ ಪೇಟ ವಕೀಲ ಮಹಾಶಯರನ್ನು ಅಲಂಕರಿಸಿತ್ತು. ಕಣ್ಣು ಕೆನ್ನೆ ಮುಖಗಳಲ್ಲಿ ತೀಕ್ಷ್ಣತೆ-ಪಟುತ್ವಗಳು ಲಾಸ್ಯವಾಡುತ್ತಿದ್ದುವು. ಹಲವಾರು ಒಗೆಯ ಹೊಲಸು ಮೊಕದ್ದಮೆಗಳ ವಿಚಾರ ಸರಣಿಯಿಂದ ಮನಸ್ಸು ಕೊಳಕು ಮಂಡಲವಾಗಿತ್ತೋ ಏನೋ....ನಶ್ಯವನ್ನು ಬಾರಿಬಾರಿಗೂ ಮೂಗಿಗೇರಿಸುತ್ತಲೇ ಅಂದರು "ಮಾಲಿನಿ ತಲೆ ನೋವಿನಿಂದ ಮಲಗಿ ಬಿಟ್ಟಿದ್ದಾಳೆ. ಚಹ ತಯಾರಿಸು ಕಮಲೇಶ್!"

"ಸಿಗರೇಟು ನಸ್ಯಗಳ ಸೇವನೆ ದಿನೇ ದಿನೇ ಮಿತಿ ಮೀರುತ್ತಿದೆ. ಹೀಗಾದರೆ ನಿಮ್ಮ ದೇಹಸ್ಥಿತಿ ಕೆಟ್ಟೀತು ಅಪ್ಪಾಜಿ."

"ಹಾಳು ಚಟ ಕಲಿತಿದ್ದಾಯ್ತು. ಹೋಗಲಿ ಬಿಡು."

"ಅದಷ್ಟು ಕಡಿಮೆ ಮಾಡಿರಿ."

"ಸರಿ; ಇನ್ನೆಷ್ಟು ದಿನ ನಮ್ಮ ಕಾಲ?"

"ಚೆನ್ನಾಗಿದೆ!"

ವಕೀಲ ಮಹಾಶಯರ ಗಮನ ಯಾವುದೋ ಚಿಂತನೆಯ ಕಾಂತಾರ ದಲ್ಲಿ ಅಂಡಲೆಯುತಿತ್ತು. ಎಂದಿನಂತೆ ತುಟಿಯಂಚಿನಲ್ಲಿ ಸಣ್ಣ ನಗೆಯನ್ನು ತೇಲಿಸಿ ಹೊರಟರು. ಆ ಅರ್ಥರಹಿತವಾದ ಶುಷ್ಕ ಕಿರುನಗೆ ಹೇಗೆ ಅವರಿಗೆ ಸ್ವಭಾವ ಜನ್ಯವಾದುದೋ ಹಾಗೆಯೇ ಸಿಗರೇಟು ನಸ್ಯಗಳು ಮನಃಪೂರ್ವಕ ವಾದ ಶುಷ್ಕ ಆನಂದವಾಗಿ ಬಿಟ್ಟವೆ. ಅವು ಶರೀರ ಬಿದ್ದು ಹೋಗುವವರೆಗೂ ಬಿಟ್ಟುಹೋಗುವಂತಿಲ್ಲವೆಂಬುದನ್ನು ಅರಿಯಲಾರದಷ್ಟು ಮೂರ್ಖಳಲ್ಲ ಕಮ ಲೇಶ್. ಆದರೂ ಅವು ಶರೀರಪ್ರಕೃತಿಗೆ ಹೆಚ್ಚುಹೆಚ್ಚು ಕೆಡುಕನ್ನುಂಟುಮಾಡು ತ್ತವೆಯೆಂಬುದು ಮನಸ್ಸಿಗೆ ಆತಂಕ....ಅಂತಲೇ ಬೆಸಸಿಕೊಂಡಿದ್ದಳಾ ಯೋಚ ನಾಶೀಲೆ.

ಸ್ಟವ್ ಹೊತ್ತಿಸಿ ಚಹಕ್ಕೆ ನೀರಿಟ್ಟು ತಾಯಿಯ ಕೊಠಡಿಗೆ ಹೋಗಿ– "ಬಹಳ ತಲೆನೋಯುತ್ತಿದೆಯೆ? ಯಾವುದಾದರೂ ಮಾತ್ರೆ ತೆಗೆದುಕೊಳ್ಳು ವಿರಾ?"

"ಈಗೇನೂ ಬೇಡ; ಇನ್ನಷ್ಟು ಹೊತ್ತು ನೋಡುವೆ."

"ಮಲಗಿರಿ, ಚಹ ತರುವೆ."

ಕಮಲೇಶ್ ತಾಯಿಯ ಉತ್ತರಕ್ಕೂ ನಿರೀಕ್ಷಿಸದೆ ಹೊರಟಳು. ನೀರು ಮರಳಿತು. ಚಹ ತಯಾರಿಸಿ ಕೊಂಡೊಯ್ದು ಕೊಡುವಾಗ ನೋಟವನ್ನು ಆಫೀಸಿನ ಅವ್ಯವಸ್ಥೆ ಸೆರೆ ಹಿಡಿಯಿತು. ದಿನವೂ ಎಷ್ಟೇ ವ್ಯವಸ್ಥೆಗೊಳಿಸು ತಿದ್ದರೂ ಇನ್ನಷ್ಟು ಹೊತ್ತಿನೊಳಗಾಗಿ ಅವ್ಯವಸ್ಥೆಯ ಸಾಮ್ರಾಜ್ಯವೇ ಅಲ್ಲಿರು ತ್ತದೆ. ತಾಯಿಯೊಂದಿಗೆ ಚಹ ಮುಗಿಸಿದನಂತರ ಅವ್ಯವಸ್ಥೆಯನ್ನು ವ್ಯವಸ್ಥೆ ಗೊಳಿಸಿ ದಿನವಹಿ ಕೆಲಸಕಾರ್ಯಗಳನ್ನು ಗಮನಿಸುವುದರಲ್ಲಿ ಸ್ವರ್ಣಮಾಲಿನಿ ಎದ್ದು ಬಂದಳು.

"ನೀವು ಇನ್ನಷ್ಟುಹೊತ್ತು ವಿಶ್ರಾಂತಿ ತೆಗೆದುಕೊಳ್ಳಿರಿ. ಸಂಜೆಯ ಅಡುಗೆ ನಾನೇ ಮಾಡಿ ಬಿಡುವೆ."

"ಈಗ ತಲೆ ನೋವು ಅರ್ಧ ಕಡಿಮೆಯಾಗಿದೆ, ಇನ್ನು ಪರವಾಯಿಲ್ಲ."

ಎನ್ನುತ್ತ ಸಂಜೆಯುಡುಗೆಗೆ ಕೈ ಹಚ್ಚಿದಳು ಸ್ವರ್ಣಮಾಲಿನಿ. ಬೇಡವೆಂದರೂ ಕೇಳಲಿಲ್ಲ.

ಬಸಿ ಬಟ್ಟಲುಗಳನ್ನು ತೊಳೆಯುತ್ತಿದ್ದ ಕಮಲೇಶ್–"ಇಂದು ಒಂದು ವಿಚಿತ್ರ ರೀತಿಯಲ್ಲಿ ಮಗು ಬದುಕಿತು" ಎಂದು ವಿಷಯವನ್ನು ನಗುಮುಖ ದಿಂದ ಮುಂದಿಟ್ಟಳು "ಇಲ್ಲಿ ಕೇಳಿ, ಒಂಬತ್ತು ವರ್ಷದ ಒಬ್ಬ ಹುಡುಗಿ ಹಿತ್ತಿಲು ಗಿಡದಲ್ಲಿದ್ದ ಸೀಬೆಯ ಹಣ್ಣನ್ನು ಅವಸರವಾಗಿ ನುಂಗಿ....ಗಂಟಲಲ್ಲಿ ಸಿಕ್ಕಿ ಉಸಿರು ಕಟ್ಟಿ ಸಾಯುವ ಸ್ಥಿತಿಗೆ ಬಂದಿದ್ದಾಳೆ. ಹತ್ತಿರದ ಡಾಕ್ಟರನ್ನು ಕರೆತಂದರೂ ಪ್ರಯೋಜನವಾಗಲಿಲ್ಲ. ಹುಡುಗಿ ಈಗಲೋ ಆಗಲೋ ಎಂಬ ಸ್ಥಿತಿಗೆ ಬಂದಳಂತೆ. ತಕ್ಷಣ ಡಾಕ್ಟರೊಂದಿಗೆ ಹುಡುಗಿಯನ್ನು ಕರೆದುಕೊಂಡು ನಮ್ಮ ಆಸ್ಪತ್ರೆಯ ಕಡೆ ಹೊರಟಿದ್ದಾರೆ. ಗಾಬರಿಯಿಂದ ತಬ್ಬಿಬ್ಬಾದ ತಂದೆ ಕಾರು ನಡೆಸುವಾಗ ಆಯತಪ್ಪಿ, ಹಾದಿಯಂಚಿನಲ್ಲಿದ್ದ ಲೈಟ್‌ಕಂಬಕ್ಕೆ ಡಿಕ್ಕಿ ಹೊಡೆಸಿದರು. ಮಲಗಿಸಿಕೊಂಡಿದ್ದ ಹುಡುಗಿ ಚಿಮ್ಮಿ ಮುಂದಿನ ಸೀಟಿನ ಬೆನ್ನಿಗೆ ಡಿಕ್ಕಿ ಹೊಡೆದಳು. ಅದೇ ಕ್ಷಣದಲ್ಲಿ ಗಂಟಲಲ್ಲಿ ಸಿಕ್ಕಿಕೊಂಡಿದ್ದ ಸೀಬೆ ಹಣ್ಣಿನ ತುಂಡು ಮಂಗಳವಾಯ !

"ಅವರು ಭಯ ಭೀತಿಯಿಂದ ಹುಡುಗಿಯನ್ನು ಹಿಡಿದೆತ್ತಿದರೆ, ಆದ ಸಂತೋಷ ಅಷ್ಟಿಷ್ಟಲ್ಲ. ಕಾರಿಗೆ ಪೆಟ್ಟಾಗಿದೆ ಹೋದರೆ ಹೋಗಲಿ ಎನ್ನುತ್ತಾರೆ. ಅವರೊಂದಿಗೆ ಪಯಣಿಸಿದ ಡಾಕ್ಟರು ಹೇಳುವ ಪ್ರಕಾರ ಮಗು ಈ ಅಪಘಾತ ಕ್ಕೀಡಾಗದಿದ್ದಲ್ಲಿ ಆಸ್ಪತ್ರೆ ಮುಟ್ಟುವಷ್ಟರಲ್ಲಿ ಅಸುನೀಗುತಿತ್ತಂತೆ. ನೋಡಿ! ನಮಗೆ ಅದೃಷ್ಟವಿದ್ದರೆ ಅಪಘಾತಗಳು ಸಹ ಕಾಪಾಡುತ್ತವೆ."

"ನಿಜ, ಕಮಲೇಶ್." ನಗುಮುಖದಿಂದ ನುಡಿದಳು ಸ್ವರ್ಣಮಾಲಿನಿ.

ಸುರೇಶ ದಲ್ವಾಲಿ ಒಳಬಂದು ಸ್ವರ್ಣಮಾಲಿನಿಯ ಕೈಗೆ ಕಾಗದವ ನ್ನಿಟ್ಟು- "ಊರ್ಮಿಳೆಗೆ ಹೆಣ್ಣುಮಗುವಂತೆ !"

ಮೂವರ ಮುಖದಲ್ಲೂ ಸಂತಸದ ಕಿರುನಗೆ ಅರಳಿತು.

"ಸುಖ ಪ್ರಸವವಾಯಿತಲ್ಲಾ ಸಾಕು."

ಸುರೇಶ ದಲ್ವಾಲಿ ಆನಂದೋನ್ಮತ್ತನಾಗಿ ನಿಟ್ಟುಸಿರು ಬಿಟ್ಟರು.

ಕಮಲೇಶ್ ಕಣ್ಣುಗಳನ್ನರಳಿಸಿ ತಮಾಷೆಯ ಧಾಟಿಯಲ್ಲಿ–"ಮುರುಳಿ ಇಷ್ಟು ದಿನ ಗೋಳು ಹುಯ್ದುದನ್ನೆಲ್ಲಾ ಕಕ್ಕಿಸಿಬಿಡುವೆ. ಈ ಸಲ ಅವನು

ಒಳ್ಳೆಯ ಪಾರ್ಟಿ ಕೊಡಲೇಬೇಕು!" ಎಂದಳು, ಮುಖದಲ್ಲಿ ಬೆಳುದಿಂಗಳಂತಹ ಎಳೆನಗು ಮೂಡಿತು.

"ನಿನಗೆ ಪಾರ್ಟಿ ಕೊಡುವುದಿರಲಿ, ಹೆಂಡತಿ ಮಕ್ಕಳಿಗೆ ದುಡಿದು ಹಾಕಿದರೆ ಸಾಕು."

"ಕಮಲೇಶ್ !"

ದನಿ ಕಿವಿಯನ್ನು ತಾಗುತ್ತಲೂ ಹಿಂದಿರುಗಿ ನೋಡಿದಳು ಕಮಲೇಶ್. ಮುರಳೀಧರ ದಲ್ವಾಡಿ ಮೈಯೆಲ್ಲಾ ಹರ್ಷಮಯವಾಗಿ ನಿಂತಿದ್ದ.

"ಬರಿಯ ನಗುವಿನಲ್ಲೇ ಮುಗಿಸಿಬಿಡಬೇಡಪ್ಪಾ, ನಮಗೆಲ್ಲಾ ಸಿಹಿ ಹಂಚಬೇಕು."

"ಮಗ ಹುಟ್ಟಿದ್ದಿದ್ದರೆ ಸಿಹಿ!"

"ಓಹೋ! ಮಗನಾದರೇನು? ಮಗಳಾದರೇನು ?"

"ಮಗಳೆಂದರೆ ಶಿರೋಭಾರ! ನಿನ್ನೊಂದಿಗೆ ಇನ್ನೊಬ್ಬಳು ಸೇರಿಕೊಂಡಂತಾಯಿತು!"

"ಹೊ....ಹೋ....ಹೋ....! ನಾನೇಕೆ ಹೊರೆ? ನಾನು ಓದುತ್ತಿರುವುದು ಸ್ಕಾಲರ್‌ಶಿಪ್‌ನಿಂದ. ಆದರೂ ಕಷ್ಟವೇ ನಿನಗೆ....?"

"ಈಗಲೇ ಹೌಹಾರಬೇಡ; ಇಷ್ಟಕ್ಕೆ ನಿನ್ನದು ಮುಗಿಯಲಿಲ್ಲ. ಈಗಾಗಲೇ ಶ್ರೀಪತಿ ಇನ್ನೂ ಹತ್ತು ಸಾವಿರ ಕೊಡಿ ಎಂದು ಬೆನ್ನು ಹತ್ತಿದ್ದಾನೆ.... ಹುಡುಗಿಯರು ಶಿರೋಭಾರವಲ್ಲದೆ ಮತ್ತೇನು ?"

ತಾಯಿ ಮಗಳು ಮಾತಾಡಲಿಲ್ಲ. ಮುಖ ನಸುಗಪ್ಪು ತಳೆಯಿತು.

"ನನಗಂತೂ ಆಶ್ಚರ್ಯ! ಮೊದಮೊದಲು ಸಾಲಕೊಡಿ ಎಂದೇ ಬರೆಯುತಿದ್ದ. ಈಗದರ ಸೊಲ್ಲೇ ಇಲ್ಲ...."

ನಡುವೆ ಬಾಯಿ ಹಾಕಿದಳು ಕಮಲೇಶ್ "ಮೆಲ್ಲನೆ ಮಾತು ಜಾರಿಸಿಬಿಟ್ಟೆ. ಸಿಹಿಗೆ ಚಕ್ರ ಹಾಕುವ ಉಪಾಯ!"

ಶ್ರೀಧರ ದಲ್ವಾಡಿ ಅದೇ ಕ್ಷಣದಲ್ಲಿ ಪ್ರತ್ಯಕ್ಷನಾದ.

"ಮುರಳಿಗೆ ಮಗಳು ಹುಟ್ಟಿದ್ದಾಳೆ ಶ್ರೀ!! ಅವನಿಂದ ಸಿಹಿ ದಕ್ಕಿಸಿಕೊಳ್ಳದೆ ಬಿಡಬೇಡ. ಇದುವರೆವಿಗೂ ಕಾಸು ಬಿಚ್ಚಲಿಲ್ಲ. ಈಗಲಾದರೂ ಸ್ವಲ್ಪ ಬಿಚ್ಚಲಿ."

"ಓಹೋ! ಹೊರಡು ಹಾಗಾದರೆ! ಗ್ರಾಂಡ್ ಗೋಪಿ ಹೋಟಲಿಗೆ ಹೋದರೆ ಸರಿ."

"ನಿನ್ನ ಪರ್ಸೂ ತೆಗೆದುಕೊ." ಎಂದ ಮುರುಳಿ.

"ನೀವಾರೂ ಕೊಡದಿದ್ದರೆ ಚಿಂತಿಲ್ಲ. ನಾನೇ ಸಿಹಿ ತಯಾರಿಸುವೆ." ಎಂದಳು ಸ್ವರ್ಣಮಾಲಿನಿ. ಎಲ್ಲರ ಮುಖಮುದ್ರೆಯೂ ಮಂಗಳಮಯವಾಯಿತು, ಪೂರ್ವದಿಗಂತದಲ್ಲಿ ಚಂದ್ರೋದಯವಾದಂತೆ.

ಶರತ್ಕಾಲದ ಸ್ಥಿರಗಂಭೀರ ಮಧ್ಯಾಹ್ನ.

ಸುರೇಶ ದಲ್ವಾಲಿ ಮನೆ ಮುಟ್ಟಿದಾಗ ಎಡಗಾಲಿನ ತುದಿ ಬೆರಳಲ್ಲಿ ಒಂದು ಸಣ್ಣ ಬ್ಯಾಂಡೇಜಿತ್ತು. ಅದು ಕಣ್ಣಿಗೆ ಬೀಳುತ್ತಲೂ ಕಮಲೇಶ್ ಕೇಳಿದಳು "ATS ಇಂಜಕ್ಷನ್ ತೆಗೆದುಕೊಂಡಿರಾ ಅಪ್ಪಾಜಿ?"

"ಸಣ್ಣ ಗಾಯವಾಗಿದೆ. ಅದಕ್ಕೇಕೆ ಇಂಜಕ್ಷನ್" ಸುರೇಶದಲ್ವಾಲಿ ನಗುತ್ತಾ "ನಿನ್ನ ಡಾಕ್ಟರಿಕೆ ಈಗಲೇ ಶುರುವಾಯಿತೇನು?"

"ಹಾಗಲ್ಲ....ಬೀದಿಯಲ್ಲಿ ಆದ ಗಾಯಗಳಿಗೆ ಕ್ರಿಮಿಗಳು ಸೇರಿಕೊಳ್ಳುವ ಸಂಭವವುಂಟು...."

"ಅಂತಾದ್ದೇನಿಲ್ಲ. ಕಾಲುಎಡವಿದಾಗಲೇ ವೈದ್ಯರಲ್ಲಿಗೆ ಹೋದೆ. ಆ ಕ್ಷಣ ಮದ್ದು ಕಟ್ಟಿದ್ದಾರೆ....ಅದೇನು ಮಹಾ?" ಅಸಡ್ಡೆಯಿಂದ ನುಡಿದರು ಸುರೇಶದಲ್ವಾಲಿ.

ಅವಳು ಹಿಂದಿರುಗುವುದರೊಳಗಾಗಿ ತಂದೆಯ ದನಿ ಪುನಃ ಹೊರಬಿತ್ತು. "ಕಮಲೇಶ್! ನಾವು ಅಷ್ಟೊಂದು ಸೂಕ್ಷ್ಮವಾಗಬಾರದು. ಗಟ್ಟಿಮುಟ್ಟಾಗಿದ್ದರೆ ರೋಗಗಳೆಲ್ಲಾ ನೂರು ಗಾವುದ ಓಡಿಹೋಗುತ್ತವೆ. ನಮ್ಮ ಅತೀ ಸೂಕ್ಷ್ಮ ವ್ಯವಹಾರಗಳೇ ರೋಗವೃದ್ಧಿಗೆ ಮೂಲ ಕಾರಣ ಎಂದರೆ ತಪ್ಪಲ್ಲ."

ತಂದೆಯಾದ ಸುರೇಶ ದಲ್ವಾಲಿ ಒಳ್ಳೆಯ ಕಟ್ಟುಮಸ್ತಾದ ವ್ಯಕ್ತಿ. ಅವರೆಂದೂ ಕಾಹಿಲೆ ಕಸಾಲೆಗಳಿಗೆ ಒಳಗಾದವರಲ್ಲ. ನೋವೂ ಪಟ್ಟವರಲ್ಲ ಬೆರಳಿನ ಒಂದು ಸಣ್ಣ ಗಾಯಕ್ಕಾಗಿ ಎಚ್ಚರಿಕೆ ಹೇಳಿದುದು ನಿಜವಾಗಿಯೂ ಹಾಸ್ಯಾಸ್ಪದವೆನಿಸಿತು. ಕಮಲೇಶ್ ಮಾತಾಡದೆ ಮಂದಸ್ಮಿತಳಾದಳು.

ಬೆಳಗಿನ ತಂಗಾಳಿಗೆ ಮೈಗೊಟ್ಟು ಅಂಗಳವನ್ನು ದಾಟುವುದರೊಳಗಾಗಿ ಟಪ್ಪಾಲಿನ ಪೇದೆ ಎದುರಾದ. ಕಮಲೇಶ್ ಕಾಗದಗಳನ್ನು ತೆಗೆದುಕೊಂಡಳು. ಅವುಗಳಲ್ಲೊಂದು ಶ್ರೀಪತಿಯ ಕಾಗದ. ಸತ್ಯಭಾಮೆ ಅವಳಿ ಹೆಣ್ಣು ಮಕ್ಕಳಿಗೆ ಜನ್ಮವಿತ್ತ ವಿಷಯ ಒಂದೇ ಪಂಕ್ತಿಯಲ್ಲಿ ಹೊರಬಿದ್ದಿತ್ತು. ಕಮಲೇಶ್ ಆನಂದಾಶ್ಚರ್ಯಗಳಿಂದ ಒಂದು ಘಳಿಗೆ ಡಂಗಾದಳು. ಸ್ವರ್ಣಮಾಲಿನಿ ವಿಷಯ ತಿಳಿದು ಯೋಚನೆಗೀಡಾದಳು....ದೂರದ ಹಾದಿ. ಅಲ್ಲಿಗೆ ಹೋಗಿ ನಿಂತು ಸಹಾಯ ಮಾಡುವವರೂ ಇಲ್ಲ. ಹೇಗೆ ಮಾಡಿಕೊಳ್ಳುವಳೋ.... ಏನು ಕತೆಯೋ. ದೇವರೇ ಸಹಾಯ ಮಾಡಬೇಕು, ಎಂದು ಸುಯ್ಯಿತು ಮಾತೃಹೃದಯ.

ಕಮಲೇಶ್ ರಾಣೀ ಭವತಾರಿಣೀ ಆಸ್ಪತ್ರೆಯ ಹಾದಿ ತುಳಿದಳು. ಆಸ್ಪತ್ರೆಗೆ ಹೊಂದಿಕೊಂಡಂತೆ ಕಾಲೇಜು....ಆಸ್ಪತ್ರೆಯ ಅಂಗಳವನ್ನು ದಾಟಿ ಬಲಕ್ಕೆ ತಿರುಗಿದರೆ ವಿಶಾಲವಾದ ಉದ್ಯಾನವನ. ಅದರಾಚೆ ಕಾಲೇಜು–ಉಜ್ವಲ ಭವಿತವ್ಯಕ್ಕೆ ಜ್ಞಾನ ನಿಧಿಯ ಅಡಿಗಲ್ಲನ್ನಿಟ್ಟ ಭವ್ಯದೇಗುಲ.

ಆಕೆಯ ದುಗ್ಧಮುಗ್ಧ ಅಭಿಶಸ್ತ ಹೆಜ್ಜೆಗಳ ಬಂಧುರ ಧ್ವನಿ ಕರ್ಣ ಪಟಲಗಳಿಗೆ ತಾಗಿದಾಗ ಎತ್ತಲೋ ನೋಡುತ್ತಾ ಹೋಗುತ್ತಿದ್ದ ಜುಬೇದಾ ಬೇಗಂ ಸುಧಾರಾಣಿಯರು ಹಿಂತಿರುಗಿ ನೋಡಿ ಆನಂದದಿಂದ ಜೊತೆಗೂಡಿ ಕೊಂಡರು. ಪರಸ್ಪರ ಸಂದರ್ಶನದಿಂದ ಅಧರಗಳಲ್ಲಿ ಹಸನಾದ ಎಳೆನಗು ಮೂಡಿತು ಅಮೃತಾಂಶುವಿನ ಹೊದಿಂಗಳಂತೆ.

"ಕಾಲೇಜಿಗೆ ಹೋಗುವ ಮೊದಲು ಆಸ್ಪತ್ರೆಯಲ್ಲಿ ನನ್ನ ಗೆಳತಿಯನ್ನು ನೋಡುವುದಿದೆ. ಅವಳು ಗರ್ಭಸ್ರಾವಗಾಗಿ ಆಸ್ಪತ್ರೆಗೆ ಸೇರಿದ್ದಾಳಂತೆ. ಮೊದಲಿನ ಮೂವರೂ ಹೆಣ್ಣುಮಕ್ಕಳಾದುದರಿಂದ ಗಂಡುಮಗುವಿಗಾಗಿ ಕಾದಿದ್ದಳು....ಹೆಣ್ಣಾದರೇನು? ಗಂಡಾದರೇನು? ಈ ಕಷ್ಟವನ್ನು ಏಕೆ ಬರ ಮಾಡಿಕೊಂಡಳೋ ಆ ದೇವರೇ ಬಲ್ಲ. ಮೇಲಾಗಿ ಕಲಿತ ಹೆಣ್ಣು; ಭರತ ನಾಟ್ಯ ಪ್ರವೀಣೆ; ಮೈಕಟ್ಟು ಎಂದರೆ ಬೆಳ್ಳಿಯ ಬೊಂಬೆಯಂತಿತ್ತು. ಈಗ ನೋಡಿದರೆ ಬೊಜ್ಜು ಬೊಜ್ಜಾಗಿ ಹೊಟ್ಟೆನ ಮೂಟೆಯಂತಾಗಿದ್ದಾಳೆ."

"ಗಂಡು ಮಕ್ಕಳಿಲ್ಲದಿದ್ದರೆ ಮೋಕ್ಷವಿಲ್ಲವೆಂಬ ಘನವಾದ ನಂಬಿಕೆ ಈಗಲೂ ಉಂಟಲ್ಲ."

....ಕುವರಂ ವಂಶಕೆ ಭೂಷಣಂ....

"ನಿನ್ನ ಅಕ್ಕ ಸತ್ಯಭಾಮೆಗೆ ಹೆರಿಗೆಯಾಯಿತೆ?"

"ಅದೂ ಸಹ ಇಂತಹದೇ ಕತೆಯಾಗಿ ಬಿಟ್ಟಿದೆ. ಈ ಸಲ ಅವಳಿ ಹೆಣ್ಣು ಮಕ್ಕಳಿಗೆ ಜನ್ಮವಿತ್ತಿದ್ದಾಳೆ. ಮುಂಬೈ ಜೀವನಕ್ಕೆ ಎರಡು ಮಕ್ಕಳು ಸಹ ಹೆಚ್ಚು. ಮುಂದೆ ಹೇಗೆ ಸಾಕುತ್ತಾಳೋ ದೇವರಿಗೆ ಗೊತ್ತು." ವಿಶಾದವಾಣಿಯಲ್ಲಿ ನುಡಿದಳು ಕಮಲೇಶ್.

"ಪಾಪ....!"

ಹಾದಿ ಕಳೆದು ಕಾಲೇಜಿನ ಮೆಟ್ಟಿಲು ಹತ್ತುತಿದ್ದಂತೆ ಡಾ|| ಯಶಪಾಲ್ ಎದುರಾದರು. ಅವರ ಹೊಳೆಹೊಳೆಯುವ ಕಣ್ಣುಗಳಲ್ಲಿ ತೀಕ್ಷ್ಣತೆಯಿತ್ತು.... ಎದೆಯ ಕಲ್ಮಶ ಹಿರಿಯ ನಗೆಯಲ್ಲಿ ಹೊರಹೊಮ್ಮಿತು ಹುಡುಗಿಯರು ಬಾಗಿದ ತಲೆಯೆತ್ತದೆ–"ಪ್ರಣಾಮ್ ಸರ್!"

ಯಾವುದೋ ಅಪೂರ್ವ ರಸ ಸಂಯೋಜನೆಯಿಂದ ತರಂಗಿತವಾದ ನಗೆಯ ಮಾಧುರ್ಯವನ್ನು ಹೊರಸೂಸಿ ಅವರು ಹೊರಟರು.

ಸಾಂಪ್ರದಾಯಿಕವಾಗಿ ಕರಗಳನ್ನು ಜೋಡಿಸಿದ್ದರೂ ಮನಸ್ಸು ಥೂತ್ಕರಿಸಿತು. ಮೂವರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಎಷ್ಟು ಮಂದಿ ಮಹಿಳೆಯರಿಗೆ ಮಾರಕವಾಗಿದ್ದಾನೋ ಶಿಶುಪಾಲ!"

"ಛೀ! ಛೀ! ಇಂಥ ಹೀನ ಮನೋವೃತ್ತಿಯವರು ಡಾಕ್ಟರಾದರೆ ಹೇಗಿರಬೇಡ? ಕುರಿಸಾಕಿ ತೋಳವನ್ನು ಕಾವಲಿಟ್ಟಂತೆ...."

ಕಾರಿಡಾರಿನಲ್ಲಿ ಹುಡುಗರೂ ಹುಡುಗಿಯರೂ ಅಲ್ಲಲ್ಲಿ ಗುಂಪು ಕೂಡಿದ್ದರು. ತರಗತಿಗಳು ಆರಂಭವಾಗಲು ಇನ್ನೂ ಕೆಲವು ನಿಮಿಷಗಳ ಅವಧಿ ಇತ್ತು. ಕೈಯ್ಯಲ್ಲಿನ ನೋಟ್ಸಿನ ಮೇಲೆ ಕಣ್ಣು ಹಾಯಿಸಿದ ಕಮಲೇಶಳ ಭುಜದ ಮೇಲೆ ತುಸು ಭಾರವಾದಂತಾಯಿತು ಹಾ! ಅದಾರು? ಯಶಪಾಲರೇ?....ಒಮ್ಮೆಲೇ ಮೈ ಚಿಲ್ಲನೆ ನಡುಗಿ ಸರಕ್ಕನೆ ಹಿಂತಿರುಗಿದಳು. ನೋಡಿದೆ, ನೋಡಿದೆ ವೇಶ ಭೂಷಣರಹಿತ ಸಕ್ಕೂ!....ಅಯ್ಯೋ, ಅವಳು ಇಲ್ಲಿಗೆ ಬಂದದ್ದಾದರೂ ಏಕೆ?

"ಸಕ್ಕೂ....!"

ಸಕ್ಕೂ ಮಾತಾಡದೆ ಗಿಳಿಯಂತೆ ಪಿಳಿಪಿಳಿ ನೋಡಿದಳು.

"ನೀನೇಕೆ ಬಂದೆ? ಮನೆಯಲ್ಲಿ ಹೇಳಿ ಬಂದೆಯಾ?"

"........"

ಹುಡುಗಿಯರೆಲ್ಲಾ ಅವಳ ಸುತ್ತುವರಿದು ನಿಂತು ಪ್ರಶ್ನೆ ಹಾಕಿದರು, "ಹೇಗಿದ್ದಿ ಸಕ್ಕೂ?"

ಜ್ಯೋತಿರ್ವಿಹೀನವಾದ ಕಣ್ಣುಗಳಲ್ಲಿ ತಟ್ಟನೆ ಭಯದ ಛಾಯೆ ಮೂಡಿತು. ಸಕ್ಕೂ ಮಾತಾಡದೆ ಎಲ್ಲರೆಡೆಗೂ ಕಣ್ಣಾಲಿಗಳನ್ನು ಹೊರಳಿಸಿದಳು. ಒಮ್ಮಿಂದೊಮ್ಮೆಲೇ ಮುಖ ಬಿಳಿಯ ಬಟ್ಟೆಯಂತೆ ಬಿಳಿಚಿಕೊಂಡಿತು. ತಕ್ಷಣ ಸುತ್ತಮುತ್ತಿನ ಹಲವಾರು ನಳಿದೋಳುಗಳು ಕುಸಿದು ಬೀಳದಂತೆ ಅವಳಿಗೆ ಆಶ್ರಯ ನೀಡಿದುವು.

ಅಧ್ಯಾಯ

೬

ಮಕ್ಕಳ ಶಸ್ತ್ರ ಚಿಕಿತ್ಸಾತಜ್ಞ ಡಾ|| ಯಶಪಾಲ್ ಮಕ್ಕಳ ವಾರ್ಡಿಗೆ ಭೇಟಿ ನೀಡಿದರು. ವಿದ್ಯಾರ್ಥಿಗಳ ತಂಡ ಅವರನ್ನು ಹಿಂಬಾಲಿಸಿತು. ಚಂದ್ರಕಾಂತ್, ಬಲರಾಂ ಮತ್ತು ಇನ್ನೂ ಅನೇಕ ವಿದ್ಯಾರ್ಥಿಗಳ ದಳವೊಂದಾದರೆ ಕಮಲೇಶ್, ಸುಧಾರಾಣಿ, ಜುಬೇದಾಬೇಗಂ ಮತ್ತು ಇನ್ನೂ ಕೆಲವು ವಿದ್ಯಾರ್ಥಿನಿಯರ ದಳ ಇನ್ನೊಂದು. ನಾಲ್ಕು ಮಂಚಗಳಿರುವ ದೊಡ್ಡ ಕೊಠಡಿ: ನಾಲ್ಕರಲ್ಲೂ ನಾಲ್ಕು ಎಳೆಯ ಮಕ್ಕಳು. ಆ ಮಕ್ಕಳನ್ನು ಪರೀಕ್ಷಿಸುತಿದ್ದ ಡಾ|| ಯಶಪಾಲರು ತಮ್ಮ ಅನುಭವಧಾರೆಯನ್ನು ಹರಿಯ ಬಿಟ್ಟರು,

"ಮಕ್ಕಳಿಗೆ ಹೃದಯರೋಗ ಮತ್ತು ರಕ್ತನಾಳಗಳ ರೋಗ ಬಾಲ್ಯದಿಂದಲೇ ಅಂದರೆ ಹುಟ್ಟಿನಿಂದಲೇ ಇರುತ್ತದೆ. ಆಧುನಿಕ ಜಗತ್ತು ಈ ರೋಗಗಳ ಪರಿಶೀಲನೆಗೆ ಅನೇಕ ವಿಶಿಷ್ಟ ವೈಜ್ಞಾನಿಕ-ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿದೆ. ಮಕ್ಕಳ ಶರೀರದಲ್ಲಿ ವಯಸ್ಕರಿಗಿಂತಲೂ ಭಿನ್ನವಾದ ಅನೇಕ ಲಕ್ಷಣಗಳಿರುತ್ತವೆ. ಮಕ್ಕಳ ತೀವ್ರ ಬೆಳವಣಿಗೆಗನುಗುಣವಾಗಿ ಪೋಷಕ ವಸ್ತುಗಳನ್ನು ಒದಗಿಸುತ್ತಿರಬೇಕು, ಮತ್ತು ಕಾಲಕಾಲಕ್ಕೆ ಜಲಮಲಗಳು ವಿಸರ್ಜನೆಯಾಗುವಂತೆ ನೋಡಿಕೊಳ್ಳಲೇಬೇಕು. ಇಲ್ಲದಿದ್ದಲ್ಲಿ ಇದರಿಂದ ಮಗುವಿನ ಹೃದಯವು ಹೆಚ್ಚು ಹೆಚ್ಚು ಶ್ರಮವಹಿಸಿ ದುಡಿಯಬೇಕಾಗುತ್ತದೆ.

"ಮೊದಲನೆಯ ವರ್ಷದಲ್ಲಿ ಮಗುವಿನ ಹೃದಯವು ಅತ್ಯಂತ ಶೀಘ್ರವಾಗಿ ಬೆಳೆಯುತ್ತದೆ. ನವಜಾತ ಶಿಶುವಿನ ಹೃದಯವು ವರ್ಷಾಂತ್ಯದೊಳಗಾಗಿ ಮುಮ್ಮಡಿ ಗಾತ್ರದಷ್ಟು ಬೆಳೆಯುತ್ತದೆ. ಅದರ ಹೃನ್ನಾಳವು ಬೆಳೆಯುತ್ತಿರುವ ವ್ಯವಸ್ಥೆಯ ಅವಶ್ಯಕತೆಗಳಿಗೆ ಹೊಂದಿಕೊಳ್ಳುತ್ತದೆ. ಆದರೆ ನರತಂತುಗಳ ವ್ಯವಸ್ಥೆಯು ಈ ಜಟಿಲ ಕಾರ್ಯವನ್ನು ಅಷ್ಟು ಚೆನ್ನಾಗಿ ನಿಯಂತ್ರಿಸದು. ಮಗುವಿನ ನರಗಳ ಯಾಂತ್ರಿಕ ವ್ಯವಸ್ಥೆಯ ವಿಕಾಸವು ಮಗುವಿಗೆ ಏಳು ವರ್ಷ ವಯಸ್ಸಾದಾಗ ಪೂರ್ತಿಯಾಗುತ್ತದೆ. ಈ ಕಾರಣಗಳಿಂದಾಗಿ ಮಗುವಿನ ಹೃದಯ ಸುಲಭವಾಗಿ ಉದ್ರೇಕಗೊಳ್ಳುತ್ತದೆ. ದೈಹಿಕಶ್ರಮ, ಕ್ಷೋಭೆ,

ಭೀತಿ, ಸಂತಸ ಅತ್ಯಲ್ಪ ಪ್ರಮಾಣದಲ್ಲಾದರೂ ಅದರಿಂದ ಮಗುವಿನ ಹೃದಯದ ಮಿಡಿತ ಹೆಚ್ಚುತ್ತದೆ.

"ಸಹಜಾತ ಹೃದಯ ವಿಕಾರಗಳು ಬಾಲ್ಯದಲ್ಲಿ ಸಂಭವಿಸಬಹುದಾದ ಹೃನ್ನಾಳ ರೋಗಗಳಿಗೆ ಸಂಬಂಧಪಟ್ಟಿರುತ್ತವೆ. ಗರ್ಭಾವಸ್ಥೆಯ ಮಗು ಬೆಳೆಯುವ ಪ್ರಾರಂಭದಲ್ಲಿಯೇ ಹೃದಯದ ಪೊರೆಗಳಲ್ಲಿ ಬದಲಾವಣೆಯುಂಟು ಮಾಡುವ ತಂತು-ಸ್ಥಿತಿ ಸ್ಥಾಪಕತ್ವ-ವಿಕಾರವೂ (FIBRO-ELASTOSIN) ಸಹ ಅವುಗಳಲ್ಲೊಂದಾಗಿದೆ. ಈ ರೋಗ ಪೀಡಿತ ಮಕ್ಕಳ ತುಟಿಗಳೂ ಉಗುರುಗಳೂ ನೀಲಿಯಾಗಿರುತ್ತವೆ. ತೀವ್ರ ಕಾಂತಿಹೀನತೆ ಶ್ವಾಸಾವರೋಧವೂ ಕಂಡುಬಂದು ಮಗುವಿನ ಬೆಳವಣಿಗೆ ಕುಂಠಿತವಾಗುತ್ತದೆ. ಆಮ್ಲಜನಕ ಕಾರ್ಯಶಕ್ತಿಯನ್ನು ಬಳಸಿಕೊಳ್ಳಲು ಮಗು ಹೆಚ್ಚಾಗಿ ಕುಳಿತಿರಲು ಇಷ್ಟಪಡುತ್ತದೆ. ಈ "ನೀಲಿ" ಬಗೆಯ ಸಹಜಾತ ವಿಕಾರಗಳೊಡನೆ "ಬಿಳಿಚಿಕೊಂಡ" ವಿಕಾರಗಳೂ ಸಹ ಉಂಟಾಗುತ್ತವೆ. ಇವು ಖಂಡಿತವಾಗಿಯೂ ಮಕ್ಕಳ ಆರೋಗ್ಯಕ್ಕೆ ಹಾನಿಕರ........

ಇನ್ನೂ ಅನೇಕ ವಿವರಣೆಗಳನ್ನು ಚಿಕಿತ್ಸಾ ವಿಧಾನದೊಂದಿಗೆ ಹೇಳಿ ಮುಗಿಸುವಾಗ ಹೊತ್ತು ಹತ್ತರ ಸಂಖ್ಯೆಯ ಅಂಚನ್ನು ದಾಟಿತ್ತು.

ಪಿಸುದನಿಯಲ್ಲಿ ನುಡಿಯೊಂದು ಹೊರಬಿತ್ತು "ರಾಹುಕಾಲ ಕಳೆಯಿತು !"

ನುಡಿ ವಾಸ್ತವವಾಗಿದ್ದರೂ ಅರ್ಥಗರ್ಭಿತವಾಗಿ ತೋರಿದುದರಿಂದ ಎಲ್ಲರ ಮುಖಗಳಲ್ಲೂ ತುಂಟನಗೆ ನಲಿಯಿತು. ಡಾ|| ಯಶಪಾಲರ ದೀರ್ಘದೇಹ ಕಾರಿಡಾರಿನ ತುತ್ತ ತುದಿಯಲ್ಲಿ ಕಿರಿಕಿರಿದಾಗುತ್ತಾ ಕಣ್ಮರೆಯಾಯಿತು. ಹುಡುಗರೂ ಹುಡುಗಿಯರೂ ತಮ್ಮತಮ್ಮ ಹಾದಿ ಹಿಡಿದು ಹೊರಟರು.

ಕಮಲೇಶ್‌ದಲ್ವಾಲಿ, ಪದ್ಮಾಕಮಲಾನಿ, ಜುಬೇದಾಬೇಗಂ, ಸುಧಾರಾಣಿಯರೂ ಸಾಲಾಗಿ ಹೊರಟರು. ಮನಸ್ಸೆಲ್ಲಾ ಡಾ|| ಯಶಪಾಲರ ಹೀನ ಮನೋವೃತ್ತಿಗೂ ಅವರ ಯಶಸ್ವೀ ಕಾರ್ಯಕ್ಷೇತ್ರಕ್ಕೂ ತಾಳೆ ಹಾಕುತಿತ್ತು. ಮಕ್ಕಳ ಹೃದ್ರೋಗ ಚಿಕಿತ್ಸಾ ವಿಜ್ಞಾನದಲ್ಲಿ ಅವರನ್ನು ಮೀರಿಸಿದವರಿಲ್ಲ. ಬುದ್ಧಿಯುಷ್ಣೀ ಮೈಯೂ ಚುರುಕು. ಚಟಪಟ ಹೆಜ್ಜೆ ಹಾಕುತ್ತಾ ಸಾಗಿದರೆಂದರೆ ಹಿಂದಿನವರೆಲ್ಲಾ ಓಡಿ ಬರಬೇಕು.

ಆದರೆ....!

ಲಲನೆಯರ ಅಧರೋಷ್ಠಗಳ ಮೇಲೆ ಲಘುಹಾಸ ತೇಲಿತು.

ಗುಟುಕು ಚಹಕ್ಕಾಗಿ ಎಲ್ಲರೂ ಕ್ಯಾಂಟೀನಿನೊಳಗೆ ಪದಾರ್ಪಣೆ ಮಾಡಿದಾಗ ನೋಟದ ನೇರಕ್ಕೆ ಚಹಕ್ಕಾಗಿ ಎದುರು ನೋಡುತ್ತಾ ಕುಳಿತಿದ್ದ ಸ್ತ್ರೀಮೂರ್ತಿಯೊಂದು ಎಲ್ಲರ ಕಣ್ಮನಗಳನ್ನು ಸೂಜಿಗಲ್ಲಿನಂತೆ ಸೆಳೆಯಿತು....

ಯಾರಿರಬಹುದು ?

ಬಿಳಿಯ ಮೇಲಂಗಿಗಳ ಹುಡುಗಿಯರನ್ನು ನೋಡುತ್ತಲೂ ಅಪರಿಚಿತ ಮುಖ ಅರಳಿತು. ಅವಳು ಇನಿತೂ ಅಪ್ರತಿಭಳಾಗದೆ ಚಿರಪರಿಚಿತಳಂತೆ ಎಲ್ಲರಿಗೂ ವಂದನೆಗಳನ್ನರ್ಪಿಸಿದಳು "ಪ್ರಣಾಮ್....ಪ್ರಣಾಮ್....ಪ್ರಣಾಮ್....
....ಪ್ರಣಾಮ್

ನಾಲ್ವರ ಇನಿದನಿಗಳೂ ಚಟಪಟನೆ ಸಿಡಿದು ಬಂದುವು. ಪ್ರಣಾಮ್.... ಪ್ರಣಾಮ್....ಪ್ರಣಾಮ್....ಪ್ರಣಾಮ್....!

ನಾದ ಮನೋಹರವಾಗಿ ಮರುದನಿ ಕೊಟ್ಟಿತು.

ತರುಣಿ ಆದರದಿಂದ ಆಸನ ಬಿಟ್ಟೆದ್ದು ಪರಿಚಿತಳಂತೆ ವಂದಿಸಿದ ರೀತಿ ಸ್ನೇಹಾದರಗಳನ್ನು ಮೂಡಿಸಿತು. ಅವಳು ತಾನಾಗಿಯೇ ತನ್ನ ಪರಿಚಯ ಹೇಳಿಕೊಂಡಳು. "ನನ್ನ ಹೆಸರು ವಿಜಯ. ಮಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿ ಓದುತಿದ್ದೆ. ಅಲ್ಲಿಂದ ನಮ್ಮ ತಂದೆಗೆ ಇಲ್ಲಿಗೆ ವರ್ಗವಾಗಿದೆ. ನಾನು ಇಲ್ಲಿಯ ಮೆಡಿಕಲ್ ಕಾಲೇಜಿಗೆ ವರ್ಗಮಾಡಿಸಿಕೊಳ್ಳಲು ಪ್ರಿನ್ಸಿಪಾಲರನ್ನು ನೋಡಿಬಂದೆ. ಇಲ್ಲಿರುವ ಡಾ|| ಚಂದ್ರಿಕಾ ಹೆಗ್ಗಡೆ ನನ್ನ ದೊಡ್ಡಪ್ಪನ ಮಗಳು."

"ಮಂಗಳೂರು ನಿನ್ನ ಸ್ವಸ್ಥಳವೇ ?"

"ಅಲ್ಲ, ಮದನಾಪುರ. ಕಾಲೇಜಿನ ರಿಜಿಸ್ಟರಿನಲ್ಲಿರುವುದು ಮದನಾಪುರ್ ವಿಜಯಾ ಎಂತಲೇ."

"ನಿನ್ನನ್ನು ನೋಡಿದೊಡನೆ ಮದರ್ ವರ್ಜಿನಿಯಾ ನೆನಪು ಬಂತು, ಅವರಿದ್ದುದು ನಿನ್ನ ಹಾಗೆಯೇ. ಇಬ್ಬರ ಹೆಸರೂ ಸಹ ಒಂದೇ ರೀತಿ, ಮದರ್ ವರ್ಜಿನಿಯಾ....ಮದನಾಪುರ್ ವಿಜಯಾ....!"

ಕಮಲೇಶಳ ವ್ಯಾಖ್ಯಾನ ನೋಡಿ ಎಲ್ಲರ ಮುಖಗಳಲ್ಲೂ ಹೂನಗೆ ಅರಳಿತು.

ತಮ್ಮ ಬಳಗಕ್ಕೆ ಮತ್ತೊಬ್ಬ ಗೆಳತಿಯನ್ನು ಪಡೆದುಕೊಂಡ ಹುಡುಗಿಯರ ಉತ್ಸಾಹ ಗರಿಗೂಡಿಕೊಂಡಿತು. ಐವರೂ ಕೂಡಿ ಚಹಪಾನ ಮಾಡಿದರು.

ಮರುದಿನ ಕಾಲೇಜಿಗೆ ಹೊರಡಲು ಹೊಸ್ತಿಲು ದಾಟಿ ನಿಂತ ಕಮಲೇಶಳ ಕಿವಿಗೆ ತಂದೆ ಕೂಗಿದ ದನಿ ತಾಗಿತು. ಅಲ್ಲಿಂದಲೇ ಕೇಳಿದಳು "ಏನಪ್ಪಾಜಿ?"

"ಇಲ್ಲಿ ಬಾ, ಮಗೂ."

ಅವಳು ಬಳಿಗೆ ಬರುತ್ತಲೂ ಕಾಗದವನ್ನು ಮುಂದಿಟ್ಟು-"ಶ್ರೀಪತಿಯ ಕಾಗದ ನೋಡಿದೆಯಾ?"

"ನೋಡಿದೆ, ಅವರು ಸಾಮಾನ್ಯಕ್ಕೆ ಬಗ್ಗುವಂತೆ ತೋರುವುದಿಲ್ಲ. ಇನ್ನು ಸತ್ಯಭಾಮೆಗೆ ಏನೇನು ಕಿರುಕುಳವಿದೆಯೋ....ನಾಲ್ಕು ಮಕ್ಕಳನ್ನು ಸಾಕುವುದೂ ಸಹ ಬಹಳ ಕಷ್ಟ, ಮೇಲಾಗಿ ಮುಂಚೈ ಜೀವನ. ಅವಳು ನಾನಾ ತರದ ತೊಂದರೆಯಲ್ಲಿದ್ದಾಳೆ....ನನಗಾಗಿ ಇಟ್ಟಿರುವ ಹತ್ತು ಸಾವಿರ ರೂಪಾಯಿಗಳನ್ನು ಅವರಿಗೆ ಕೊಟ್ಟು ಬಿಡಿ; ನನಗೆ ಹೇಗೂ ಸ್ಕಾಲರ್‌ಷಿಪ್ ಬರುತ್ತಿದೆ. ನನ್ನದೇನೂ ಭಯವಿಲ್ಲ."

"ಅದು ಕೊಟ್ಟರೆ ಹೇಗೆ?....ಅಷ್ಟಲ್ಲದೆ ಈ ಮೊದಲೂ ಕೊಟ್ಟದ್ದಾಗಿದೆ. ಇನ್ನೂ ಕೇಳುವುದೆಂದರೆ ಎಂತಹ ಕೀಳ್ತನ? ಅದನ್ನೂ ಸ್ವಲ್ಪ ಯೋಚಿಸು ಕಮಲೇಶ್...."ಕೋಪತಾಪಗಳ ಮಿಶ್ರಿತ ದನಿ ವಿಜಾತೀಯವಾಗಿತ್ತು.

"........"

"ಅವನು ಹೀಗಾದಾನೆಂದು ನಾನು ಊಹಿಸಿರಲಿಲ್ಲ. ಹೆಣ್ಣುಮಕ್ಕಳು ಹುಟ್ಟಿದುದನ್ನೇ ನೆವವಾಗಿಟ್ಟುಕೊಂಡು ಕಾಡಿದರೆ ಹೇಗೆ? ಹೆಣ್ಣಾದ್ದಾಕ್ಷಣ ಏನು ತೊಂದರೆ? ವಿದ್ಯೆಕಲಿಸಿದರೆ ಮುಂದೆ ಅವರೇ ದುಡಿದುಕೊಳ್ಳುತ್ತಾರೆ. ಅದಕ್ಕೇಕೆ ಪರಿತಾಪ?"

"ಹೌದು, ಅಪ್ಪಾಜಿ."

"ನಿನ್ನ ಹಣವನ್ನು ಸಾಲರೂಪದಲ್ಲಿ ಕೊಡುವೆ; ಆನಂತರ ತೀರಿಸಲಿ."

"ಅವರೆಂದಾದರೂ ತೀರಿಸುವುದುಂಟೇ?"

"ಹತ್ತು ಸಾವಿರವೆಂದರೆ ಸಾಮಾನ್ಯವೆ? ಮುಂಬರುವ ದಿನಗಳು ನಾವು ಯೋಚಿಸುವಷ್ಟು ಸುಲಭವಾಗಿ ಓಡುವುದಿಲ್ಲ....ಮಗೂ, ಶ್ರೀ-ಮುರುಳಿಯು ರಂತೂ ಒಪ್ಪುವುದೇ ಇಲ್ಲ."

"ನೀವಿಟ್ಟಿರುವುದು ನನಗಾಗಿ, ನಾನೇ 'ಕೊಡಿ' ಎನ್ನುತಿದ್ದೇನಲ್ಲ. ನನ್ನ ವಿಚಾರ ನನಗೆ ಬಿಟ್ಟುಬಿಡಿ."

"ಛೀ! ಛೀ! ಎಲ್ಲಿಯಾದರುಂಟೇ? ಈಗ ಕೊಟ್ಟರೆ....ನಿನ್ನ ಗತಿ?"

"ದೇವರಿದ್ದಾನೆ." ಹೃದಯಕಾಂತಾರದಿಂದ ಹೊಮ್ಮಿದ ಧ್ವನಿ ನಿಶ್ಚಲ ವಾಗಿತ್ತು.

ಒಡನೆ ಚಿತ್ತವೆಲ್ಲ ಮೈಸೂರಿಗೆ ಹಕ್ಕಿಯಂತೆ ಹಾರಿ ಚಂದ್ರಮುಖಿಯ ಬಳಿ ಸುಳಿದಾಡಿತು. ಭಾವ ವಕೀಲರಷ್ಟೇ ಅಲ್ಲ. ಜಮಿನ್ದಾರರೂ ಕೂಡ. ಎರಡು ಕೈಗಳಿಂದ ಉಂಡರೂ ಮುಗಿಯದಷ್ಟು ಸುಖ ಸಂಪತ್ತು. ಅವರಿಗೂ ಇವರಿಗೂ ಹಗಲೂ ರಾತ್ರಿಯ ಅಂತರ. ಶ್ರೀಪತಿಯ ಗಳಿಕೆಯೆಲ್ಲಾ ಮುಂಬೈ ಯಿಯ ವೈಭವದಲ್ಲಿ ಹೇಳ ಹೆಸರಿಲ್ಲದೆ ಕರಗಿಹೋಗುತ್ತವೆ. ತಿಂಗಳಾಂತ್ಯದಲ್ಲಿ ಕಾಳು ಕಡ್ಡಿಗಳಿಗಾಗಿ ಗೋಳಿಡುವುದೂ ಉಂಟು....ಪಾಪ, ಸತ್ಯಭಾಮ.

ಮನದ ತುಂಬೆಲ್ಲಾ ಅದೇ ವಿಚಾರವನ್ನು ತುಂಬಿಕೊಂಡು ಕಾಲೇಜಿನ ಹಾದಿ ತುಳಿದಳು ಕಮಲೇಶ್. ಪಾಠ ಪ್ರವಚನಗಳನ್ನು ಮುಗಿಸಿ ಆಸ್ಪತ್ರೆಯ ಭೇಟಿಯನ್ನು ಮುಗಿಸಿ ಮನೆಗೆ ಹಿಂದಿರುಗಿದಾಗ ಸೂರ್ಯ ಪಡುವಣ ಮಟ್ಟಿಗೆ ಇಳಿಯುತಿದ್ದ. ಚೈತ್ರಾನಿಲ ತಣ್ಣಗೆ ತೀಡಿ ಚಾಮರವಿಕ್ಕಿ ದಣಿದ ಮೈಗೆ ತುಸು ಉಲ್ಲಾಸವೂಡಿಸಿದ. ಒಳ ಬರುತ್ತಲೂ ಸ್ವರ್ಣಮಾಲಿನಿ ದುಗುಡದಿಂದ ನುಡಿದಳು "ಗಂಟಲು ನೋವಿನಿಂದ ನಿನ್ನ ತಂದೆ ಉಣ್ಣಲಿಲ್ಲ."

ಕಮಲೇಶ್ ನೇರವಾಗಿ ತಂದೆಯ ಕೊಠಡಿಗೆ ಹೋದಳು.

"ನಿನ್ನ ತಾಯಿ ಆಗಲೇ ವಿಷಯವನ್ನು ನಿನ್ನ ತಲೆಗೆ ತುಂಬಿದ್ದಾಳೇನು?" ನಸು ನಗೆ ಬೀರಿದರು ಸುರೇಶ ದಲ್ದಾಲಿ ಮಹಾಶಯ.

"ನಿಮಗೆ ಗಂಟಲುನೋವು ಎಂದರು ಮಾ."

"ಅದೇನು ಮಾಡುತ್ತೆ? ಬರುತ್ತೆ....ಹೋಗುತ್ತೆ. ಇಂದು ಶ್ರೀಪತಿಗೆ ಕಮಲೇಶಳ ಹಣ ವಿನಾ ನನ್ನ ಬಳಿ ಇನ್ನೇನಿಲ್ಲ, ಸ್ವಲ್ಪ ಕಾಲಾವಕಾಶ ಕೊಡು ಅಂತ ಬರೆದೆ. ಆದರೆ ಇಲ್ಲಿ ನೋಡು, ಇಂದು ಮತ್ತೊಂದು!" ಎನ್ನುವಾಗ

ದಲ್ಹಾಲಿ ಮಹಾಶಯರ ಮುಖ ಕೆಂಪು ತಳೆಯಿತು.

ಕಮಲೇಶಳ ನೋಟ ಅತ್ತ ಹರಿಯಿತು. ಉದ್ದವಾಗಿದ್ದ ಅದನ್ನು ಓದಲೂ ಸಹ ಮನಸ್ಸು ಬರಲಿಲ್ಲ. ಒಂದೇ ನಿರ್ಧಾರದಿಂದ ನುಡಿದಳು ಕಮಲೇಶ್ "ಕೊಟ್ಟುಬಿಡಿ, ಅಪ್ಪಾಜಿ."

ವೃದ್ಧ ಪಿತೃವರ್ಯನ ಮುಖದ ಮೇಲಿನ ಅಸಂಖ್ಯಾತ ನೆರಿಗೆಗಳ ನಡುವೆ ಯೋಚನೆಯ ಅಲೆ ತೆರೆತೆರೆಯಾಗಿ ಹರಿದಾಡುತ್ತಿತ್ತು. ಗಂಭೀರ ಮುದ್ರೆಯಿಂದ ಕುಳಿತ ಚಿಂತಾಜನಕಸ್ಥಿತಿ ಮನವನ್ನು ಮುಳ್ಳಿನಂತೆ ಚುಚ್ಚಿತು. ಅತ್ಯಂತ ಕಕ್ಕುಲತೆಯಿಂದ ಕೇಳಿದಳು,

"ಈಗ ಹೇಗಿದೆ ಗಂಟಲು ನೋವು? ಸ್ವಲ್ಪವೂ ಊಟ ಮಾಡಲಾಗಲಿಲ್ಲವೆ ಅಪ್ಪಾಜಿ?"

"ಕತ್ತಿನ ಸುತ್ತ ಏನೋ ಒತ್ತಿದಂತಾಗುತ್ತದೆ. ತುತ್ತು ನುಂಗಲಾಗಲಿಲ್ಲ. ಬಂದು ಬಿಸಿ ಹಾಲು ತೆಗೆದುಕೊಂಡೆ." ಎಂದರು ಮುಖವನ್ನು ಹಿಂಡುತ್ತ.

"ಆಸ್ಪತ್ರೆಗೆ ಹೋಗೋಣವೆ? ಅಥವಾ ಡಾಕ್ಟರನ್ನು ಇಲ್ಲಿಗೆ ಕರೆತರೋಣವೆ?"

"ಈಗಲೇ ಅಂತಹ ಅವಸರವೇನಿಲ್ಲ. ಇನ್ನೂ ಸ್ವಲ್ಪಹೊತ್ತು ನೋಡೋಣ ಮಧ್ಯಾಹ್ನ ಮಾತ್ರೆ ತೆಗೆದುಕೊಂಡಿದ್ದೇನೆ."

ಕಮಲೇಶ್ ಒಳಹೋದಳು. ಬೆಳಗಿನಿಂದ ಬಿಡುವಿಲ್ಲದೆ ಓಡಾಡಿದ ಕಾಲುಗಳಿಗೆ ಸ್ವಲ್ಪ ವಿಶ್ರಾಂತಿಯ ಅಗತ್ಯವಿತ್ತು. ಹಾಸಿಗೆಯ ಮೇಲೆ ಹಾಗೇ ಅಡ್ಡಾದಳು. ಸ್ವಲ್ಪ ಹೊತ್ತು ಉರುಳುವುದರೊಳಗಾಗಿ ಸುರೇಶ ದಲ್ಹಾಲಿ ಒಳಬಂದು "ಗಂಟಲು ನೋವು ಕ್ಷಣೇ ಕ್ಷಣೇ ಹೆಚ್ಚುತ್ತಲೇ ಇದೆ. ಇವು ರಾತ್ರಿ ಹೊತ್ತು ತೊಂದರೆ ಕೊಡಬಹುದು. ಈಗಲೇ ಆಸ್ಪತ್ರೆಗೆ ಹೋಗಿ ಬರೋಣ."

ಕಮಲೇಶ್ ತಂದೆಯೊಂದಿಗೆ ಆಸ್ಪತ್ರೆಗೆ ಹೊರಡಲು ಅಣಿಯಾದಳು.

ನಾಲ್ಕಾರು ದಿನಗಳ ಹಿಂದೆ ಕಾಲಿಗೆ ಸಣ್ಣ ಪೆಟ್ಟು ತಾಗಿದಾಗ ಅದೇ ಮಾರಕವಾಗಲಿದೆಯೆಂದು ಕಮಲೇಶಳಾಗಲೀ, ಸುರೇಶ ದಲ್ಹಾಲಿಯಾಗಲೀ ಅಥವಾ ಸ್ವರ್ಣಮಾಲಿನಿಯಾಗಲೀ ಭಾವಿಸಿರಲಿಲ್ಲ. ಚಿಕಿತ್ಸೆ ನಡೆಯುತ್ತಿರುವಂತೆಯೇ ಧನುರ್ವಾಯು ತಗಲಿ ಸುರೇಶ ದಲ್ಹಾಲಿ ಆಸ್ಪತ್ರೆಗೆ ಸೇರಿಸಲ್ಪಟ್ಟಾಗ ಕಮಲೇಶಳ ಜೀವ ಹೌಹಾರಿತು. ಕಾಯಿಲೆಯ ಭೀಕರ ಸ್ವರೂಪವನ್ನು

ರಿಯುದ ಸುರೇಶ ದಲ್ಲಾಲಿ ಶಾಂತ ಚಿತ್ತರಾಗಿರುವಂತೆಯೇ ಪ್ರಜ್ಞೆ ತಪ್ಪಿತು. ಅನಂತರ ಆ ಜೀವ ಪಟ್ಟ ಪಾಡು ಸ್ವತಃ ಡಾಕ್ಟರುಗಳಿಗೂ ನೋಡಲಾಗ ದಷ್ಟು ಸಂಕಟಪ್ರದ ಎಂದರೂ ತಪ್ಪಲ್ಲ. ದೇಹ ಧನುಸ್ಸಿನಂತೆ ಬಾಗಿ ವಾಯು ವಿನ ಸೆಳೆತದಿಂದ ಒದ್ದಾಡಿ ಸಾವಿನ ದವಡೆಯಲ್ಲಿ ಸಿಲುಕಿ ಸಾಯಲಾರದೆ ಸಾವನ್ನಪ್ಪಿದ ಬಗೆ ಎಲ್ಲರನ್ನೂ ಶೋಕಸಾಗರದಲ್ಲಿ ಮುಳುಗಿಸಿತು.

ಚಂದ್ರಮುಖಿ ಸುದ್ದಿ ಮುಟ್ಟಿದೊಡನೆಯೇ ಓಡಿಬಂದಳು. ಶವಸಂಸ್ಕಾರ ತಿಥಿ ಶ್ರಾದ್ಧಾದಿ ಕರ್ಮಗಳು ನಡೆದುವು. ಎಂದೂ ಯಾರೂ ನಿರೀಕ್ಷಿಸದ ಘೋರ ಅಂತ್ಯ ಎಲ್ಲರನ್ನೂ ದಂಗುಬಡಿಸಿತು. ಸ್ವರ್ಣಮಾಲಿನಿ ಕಂಗೆಟ್ಟಳು. ದಿನನಿತ್ಯದ ವ್ಯವಹಾರವು ಅಸ್ತವ್ಯಸ್ತವಾಯಿತು. ಚಂದ್ರಮುಖಿ ತಾಯಿಗಾಸರೆ ಯಾಗಿ ಕೆಲವು ದಿನ ಅಲ್ಲೇ ನಿಂತಳು. ಒಂದು ತಿಂಗಳು ಕಳೆದನಂತರ ಬರುವು ದಾಗಿ ಸತ್ಯಭಾಮ ಕಾಗದ ಬರೆದು ದುಃಖವನ್ನು ತೋಡಿಕೊಂಡಿದ್ದಳು. ಅದ ರಂತೆಯೇ ಒಂದು ತಿಂಗಳಾನಂತರ ತನ್ನ ನಾಲ್ವರು ಹೆಣ್ಣು ಮಕ್ಕಳೊಡನೆ ಅವಳು ಆಗಮಿಸಿದಳು. ಶ್ರೀಪತಿ ಅಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು ಅಂದೇ ರಾತ್ರಿಯ ರೈಲಿಗೆ ಹೊರಟ. ಹಣದ ಸುದ್ದಿ ಅವನ ಬಾಯಿಯಿಂದ ಹೊರಡ ಲಿಲ್ಲವಾದರೂ ಹೆಂಡತಿಗೆ ಹಣದ ಥೈಲಿ ಇಲ್ಲದೆ ತನ್ನ ಮನೆ ಮೆಟ್ಟಿಲು ಹತ್ತ ಕೂಡದೆಂದು ಕಟ್ಟಪ್ಪಣೆ ಮಾಡಿದ್ದುದು ಶುದ್ಧಾಂಗವಾಗಿ ಯಾರಿಗೂ ತಿಳಿ ಯದು. ಸತ್ಯಭಾಮೆ ಸಣ್ಣಪುಟ್ಟ ಮಕ್ಕಳ ಸಹಿತ ಬಂದಿದ್ದುದರಿಂದ ಒಂದೆ ರಡು ತಿಂಗಳು ಎಲ್ಲರೊಂದಿಗೆ ಸುಖವಾಗಿದ್ದು ಹೋಗಲಿ ಎಂಬ ಹಾರೈಕೆ ಸ್ವರ್ಣ ಮಾಲಿನಿಗೆ. ಆದರೆ ತಿಂಗಳುಗಳ ಯಾತ್ರೆ ನಿರಂತರ ನಡೆದರೂ ಶ್ರೀಪತಿಯ ಸುಳಿವಿಲ್ಲ. ವಿಧಿಯಿಲ್ಲದೆ ತಾನೇ ಬಿಟ್ಟುಬರುವೆನೆಂದು ಶ್ರೀಧರ ಮುಂದಾದಾಗ ಸತ್ಯಭಾಮೆ ಕಂಗಾಲಾಗಿ ವಿಷಯವನ್ನು ಹೃದಯ ಬಿರಿಯುವಂತೆ ತೋಡಿ ಕೊಂಡಳು. ಸ್ವರ್ಣಮಾಲಿನಿಯ ದಗ್ಧ ಹೃದಯಕ್ಕೆ ಎರಡನೆಯ ಬಾರಿ ಬರ ಸಿಡಿಲು ಬಡಿದು ಕಣ್ಣುಗಳಲ್ಲಿ ಕಂಬನಿಯ ಕಾಲುವೆ ಕೋಡಿಗಟ್ಟಿ ಹರಿಯಿತು. ತಂದೆ ಗತಿಸಿದ ಕಾಲದಲ್ಲಿ, ತಾಯಿಯ ದುಃಖದ ದಿನಗಳಲ್ಲಿ ಹಣವನ್ನು ಕೇಳ ಬಾರದೆಂದು ಸತಿ ಸಾವಿರ ಬಾರಿ ಹೇಳಿಕೊಂಡಿದ್ದರೂ ಸುರೇಶ ದಲ್ಲಾಲಿಯ ಕೊನೆಯ ಕಾಗದದ ಆಶ್ವಾಸನೆ ಆತನನ್ನು ಅಂಬರಕೇರಿಸಿತ್ತು. ನಿರ್ದಯದಿಂದ ನಿರ್ದಾಕ್ಷಿಣ್ಯದಿಂದ ಸತ್ಯಭಾಮೆಗೆ ಕಟ್ಟಪ್ಪಣೆ ಮಾಡಿದ್ದ. ದುಃಖಿತಳಾದ ಸತ್ಯ

ಭಾಮ ತಲೆಯಮೇಲೆ ಕೈ ಹೊತ್ತು ಕುಳಿತಳು. ಸ್ವರ್ಣಮಾಲಿನಿ ದಗ್ಧಹೃದಯಳಾಗಿ ಶೋಕಾಕುಲಳಾಗಿ ಉಭಯ ಸಂಕಟದಲ್ಲಿ ಮುಳುಗಿದಳು.

ಮುರುಳೀಧರ ಶ್ರೀಧರರು ಕಿಡಿಕಿಡಿಯಾದರು. ಮನೆ ನರಕದ ಕುಂಡವಾಗಿ ಕೋಳಿ ಅಂಕದ ಕಣವಾಗಿ ಒಂದೊಂದು ಕ್ಷಣವನ್ನು ಕಳೆಯುವುದೂ ಸಹ ದುರ್ಗಮ ಎನಿಸಿತು ಸತ್ಯಭಾಮೆ ಮತ್ತು ಕಮಲೇಶಳಿಗೆ.

ದಿನಗಳುರುಳಿದರೂ ಸಮಸ್ಯೆ ಬಗೆಹರಿಯಲಿಲ್ಲ.

“ಹೇಗೂ ಹಣ ಕೊಡಲು ಒಪ್ಪಿ ಅಪ್ಪ ಕಾಗದ ಬರೆದಿದ್ದಾರೆಂದಮೇಲೆ ಶ್ರೀಪತಿ ಒಪ್ಪುವುದೇ ಇಲ್ಲ. ನನ್ನ ಹಣವನ್ನು ಅವಳಿಗೆ ಕೊಡಿರಿ. ನಾಲ್ಕು ಮಂದಿ ಹೆಣ್ಣು ಮಕ್ಕಳು ಹಾದಿ ಪಾಲಾಗುವುದು ಬೇಡ.”

ಅಣ್ಣಂದಿರ ಮುಂದೆ ತನ್ನ ಸಲಹೆಯನ್ನು ಅನುಕಂಪದಿಂದ ಮುಂದಿಟ್ಟಳು ಕಮಲೇಶ್.

“ಇದೇನು ಹುಡುಗಾಟವೇ ?” ಒಂದೇ ಬಾರಿಗೆ ಹೌಹಾರಿದ ಮುರುಳಿ.

“ಏನಾದರಾಗಲಿ ಇದೊಂದು ಸಮಸ್ಯೆಯನ್ನು ಬಗೆಹರಿಸಿಬಿಡು ಮುರುಳಿ. ಈ ಕಾಲದಲ್ಲಿ ಮುಂಬೈ ಜೀವನ ಕಷ್ಟ........ನಿನಗೆ ಗೊತ್ತೇ ಇದೆ ನಾನೇನೂ ಹೇಳಬೇಕಾಗಿಲ್ಲ.”

“ಅದು ಸಾಧ್ಯವಿಲ್ಲ ಕಮಲೇಶ್. ಈಗ ಹತ್ತು ಕೇಳುವವನು ಮುಂದೆ ಇಪ್ಪತ್ತು ಕೇಳಬಾರದೇಕೆ ?”

ಮುರುಳಿ ಕಿಡಿಗಣ್ಣಾದ. ಅದೇ ಸಮಯಕ್ಕೆ ಆಗಮಿಸಿದ ಶ್ರೀಧರ ದಲ್ಲಾಲಿಯೂ ಅಖಾಡಕ್ಕಿಳಿದ. ಸತ್ಯಭಾಮ ಹೊರಹೋಗಿ ಹಿತ್ತಿಲ ಗಿಡದ ಬಳಿ ಮುಖ ಮಡಿಯಾಗಿ ಕುಳಿತಳು. ಒಂದಲ್ಲ, ಹತ್ತಲ್ಲ, ನೂರಲ್ಲ ಇತಿಮಿತಿ ಇಲ್ಲದ ಅವಾಚ್ಯ ಶಬ್ದಗಳು ಹೊರ ಬಿದ್ದುವು. ಕಿವಿಗಳು ಕಿವುಡಾಗುವಷ್ಟು ವಾದ ವಿವಾದಗಳು ನಡೆದುವು. ಆದರೂ ಅಣ್ಣಂದಿರು ಹಿಡಿದ ಪಟ್ಟು ಬಿಡಲಿಲ್ಲ.

“ಒಂದು ವೇಳೆ ನೀವು ಹಣ ಕೊಡದೆ ಅವಳು ಇಲ್ಲೇ ಉಳಿಯುವಂತಾದರೂ ಅದೇನು ಸಾಮಾನ್ಯ ಹೊರೆಯಲ್ಲ.” ಶೋಕವ್ಯಾಕುಲಿತಳಾಗಿ ನುಡಿದಳು ಸ್ವರ್ಣಮಾಲಿನಿ. ಕಾತರ ಕಂಠ ದೀರ್ಣವಿದೀರ್ಣವಾಗಿತ್ತು. ಅಗಾಧವಾದ ದುಃಖಾಂಬುಧಿಯಲ್ಲಿ ಮುಳುಗಿ ನಿಶ್ಚಲವಾಗಿ ಕುಳಿತುಕೊಂಡಳು.

ಅಪ್ಪ ಸತ್ತು ಕೆಲವೇ ದಿನಗಳಲ್ಲಿ ಮನೆ ಬೆಂಗಾಡಾದೀತೆಂದು ಕಮಲೇಶ್

ಭಾವಿಸಿರಲಿಲ್ಲ. ಈ ಕುಲಪುತ್ರರು ಇಷ್ಟು ನಿಷ್ಠುರರಾದಾರೆಂದು ಸ್ವರ್ಣ ಮಾಲಿನಿ ಯೋಚಿಸಿಯೂ ಇರಲಿಲ್ಲ. ವಾಸದ ಮನೆ ತನ್ನದೇ ಆದರೂ ಹಣ ತಮ್ಮ ದುಡಿಮೆಯೇ ಆದರೂ ಕೈಯೆತ್ತಿ ಒಂದು ಕಾಸನ್ನು ನೀಡುವ ಸ್ವಾತಂತ್ರ್ಯ ತನಗಿಲ್ಲ. ಮನೆಯಲ್ಲಿ ಚಿರಸೊತ್ತು ಸಾಕಷ್ಟಿದೆ. ಅದನ್ನು ಮಾರಿದರೂ ಹಣ ಹೊಂದಿಸಬಹುದು. ಆದರೆ ಈ ವಂಶೋದ್ಧಾರಕರ ಮುಂದೆ ಸೊಲ್ಲೆತ್ತುವವ ರಾರು ? ಸತ್ಯಭಾಮ ಸಹ ಈ ವಂಶದ ಕುಡಿ ಅವಳು ನಲುಗದಂತೆ ನೋಡಿ ಕೊಳ್ಳಬೇಕಾದುದು ತಮ್ಮ ಧರ್ಮ. ತನ್ನ ಜೀವಮಾನವನ್ನೆಲ್ಲಾ ಈ ವಂಶಕ್ಕಾಗಿ ತೇದರೂ ತನ್ನದಾಗಿ ಏನೂ ಇಲ್ಲ.... ...ಅಗಾಧವಾದ ಯೋಚನೆಯ ಸುಳಿ ಯಲ್ಲಿ ಸಿಕ್ಕಿ ಸ್ವರ್ಣಮಾಲಿನಿಯ ಕಣ್ಣುಗಳು ತಿಳಿನೀರಿನಿಂದ ತುಂಬಿಬಂದುವು.

"ನನಗಾಗಿ ಅಪ್ಪ ತೆಗೆದಿಟ್ಟ ಹಣವನ್ನು ನಾನಂತೂ ಕೊಡುವವಳೇ !" ಒಂದೇ ದೃಢ ನಿರ್ಧಾರದಿಂದ ನುಡಿದಳು ಕಮಲೇಶ್. ಸತ್ಯಭಾಮ ಮತ್ತು ತಾಯಿಯ ಕಷ್ಟ ಪರಿಹಾರವಾದರೆ ತಾನು ಗುರಿ ಮುಟ್ಟಿದಂತೆಯೇ....ಅದ ರಿಂದಾಗಿ ತಾನು ಡಾಕ್ಟರಾಗದಿದ್ದರೂ ಚಿಂತಿಲ್ಲ ಎಂದುಕೊಂಡಳು. ವಿಚಾರ ಮಥನದಿಂದ ಮುಖಮುದ್ರೆ ಗಂಭೀರವಾಯಿತು.

ಕುಲಪುತ್ರರಿಬ್ಬರೂ ವಿರೋಧಿಸಿದರು. ಪುನಃ ವಾದವಿವಾದಗಳಾದುವು. ಕಮಲೇಶ್ ಹಿಡಿದ ಪಟ್ಟು ಬಿಡಲಿಲ್ಲ.

"ಇದ್ದ ಹಣ ದಾನ ಕೊಟ್ಟು ನೀನೂ ನಮಗೆ ಹೊರೆಯಾಗುವುದು ಬೇಡ!" ದನಿ ಮಾಡು ಮುಟ್ಟುವಂತೆ ಮೊಳಗಿತು.

"ಏನೇ ಬರಲಿ, ದೇವರು ನನಗೆ ಕೊಟ್ಟ ಶಕ್ತಿಯನ್ನು ವ್ಯಯಮಾಡಿ ಬದುಕುವೆ. ನಿಮಗೆ ತಲೆ ಹೊರೆಯಾಗಿ ಅಲ್ಲ!"

"ನಿನ್ನಂತೆ ಜಂಬ ಹೊಡೆಯುವವರು ಬಹಳ ಮಂದಿ ಇದ್ದಾರೆ" ನಡು ಮನೆಯಿಂದ ಜಿಗಿದು ಬಂತು ದನಿ. ಎಲ್ಲರ ಕಣ್ಣುಗಳೂ ದನಿ ಕೇಳಿ ಬಂದೆಡೆಗೆ ಸಹಜವಾಗಿ ಹೊರಳಿದುವು. ಎದೆಯಮೇಲೆ ಮಗುವನ್ನೆತ್ತಿಕೊಂಡು ನಿಂತಿದ್ದ ಊರ್ಮಿಳಾ ಬಣ್ಣಗೆದರಿದ್ದಾಳೆ!

ಅವಳ ರೀತಿ ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರ ಸ್ಥಾಯಿಗೆ ತಂದಿತು. ಒಂದೆರಡು ಘಳಿಗೆಗಳು ರುದ್ರಗಂಭೀರವಾಗಿ ನಿಷ್ಕ್ರಮಿಸಿದುವು. ತನುಮನಗಳ ಘಾಸಿ ಎಳೆಯ ಹೃದಯವನ್ನು ಬರ್ಜಿಯಂತೆ ಇರಿಯಿತು. ಈ ಕ್ಲಾಂತ-

ಶ್ರಾಂತ–ದೌರ್ಭಾಗ್ಯಯುತ ಸಂಘರ್ಷಣೆಗೆ ಮಂಗಳ ಹಾಡದ ಹೊರತು ನಿಷ್ಕೃತಿಯೂ ಇಲ್ಲ; ಮುಕ್ತಿಯೂ ಇಲ್ಲ....ಎಂಬುದು ಅಂಗೈನೆಲ್ಲಿಕಾಯಿ ಯಷ್ಟು ಸ್ಪಷ್ಟ.

ಅಶಾಂತ-ಗಂಭೀರ ಮಹಾಸಾಮ್ರಾಜ್ಯದಲ್ಲಿ ಘಳಿಗೆ ಘಳಿಗೆಗಳು ವಿಶಾದ ನೀಯವಾಗಿ ನಿಷ್ಕ್ರಮಿಸುವಾಗ ಹೃದಯದ ಹೊಂಗಡಲಿಂದ ದೃಢವಾಗಿ ಕೇಳಿಬರುವ ವಾಣಿ ಇದೇ,

"ಕಲ್ಮಶ ಭರಿತವಾದ ಈ ಸಾಮಾಜಿಕ ವಲಯದಲ್ಲಿ ಸ್ತ್ರೀಮೂರ್ತಿ ಮುಂದುವರಿಸುತ್ತಾ ಬಂದ ಈ ಕಠಿಣ ತಪಸ್ಸು ಸಾಮಾನ್ಯವಲ್ಲ. ಎಷ್ಟೇ ಕಠಿಣ ವಾದರೂ ಮುಂದಿಟ್ಟ ಹೆಜ್ಜೆ ಹಿಂತೆಗೆಯಬಾರದು. ಹೆದರದೆ ಬೆದರದೆ ಮುಂದೆ ಸಾಗು; ಅದೇ ಜೀವನ ಪ್ರಗತಿ–ಭರತ ವರ್ಷದ ಉನ್ನತಿ!"

ಶ್ರೀಧರ ದಲ್ದಾಲಿ ತಟ್ಟನೆ ಮೌನ ಮುರಿದ- "ಮನೆಯಲ್ಲಿ ದುಡಿಯು ವವರಿಲ್ಲ. ನಿನ್ನ ನನ್ನ ಓದು ಸಾಗಬೇಕು. ಒಂದು ವೇಳೆ ನಮ್ಮ ಓದು ಮುಗಿ ದಿದ್ದರೇನೋ ಒಂದು ರೀತಿ."

"ನೀನು ನಿನ್ನ ನೇರಕ್ಕೆ ನೋಡಿದರೆ ಹೇಗೆ ಶ್ರೀ? ಸತ್ಯಭಾಮೆ ಸಹ ಈ ವಂಶದ ಕುಡಿ. ನಿನ್ನಂತೆಯೆ ಅವಳಿಗೂ ಆವಶ್ಯಕತೆಗಳಿವೆ. ಅವಳಿಗೂ ನಮ್ಮಂತೆ ಉತ್ತಮ ವಿದ್ಯೆ ನೀಡಿದ್ದಲ್ಲಿ ಅವಳೇ ದುಡಿದುಕೊಳ್ಳುತಿದ್ದಳು. ಈ ಸಮಸ್ಯೆ ಏಳುತ್ತಲೇ ಇರಲಿಲ್ಲ. ಕೂಲಂಕಷವಾಗಿ ಯೋಚಿಸಿ ನೋಡು, ಮುಂಬೈ ಜೀವನ....ನಾಲ್ಕು ಮಂದಿ ಮಕ್ಕಳು....ಅವರು ಕೇಳು...." ಮುಂದೆ ಮಾತಾಡಗೊಡಿಸದೆ ಶ್ರೀಧರ ದಲ್ದಾಲಿ ರೇಜಿನಿಂದ ನುಡಿದ "ಸಾಕು ನಿನ್ನ ವಕೀಲಿ!"

"ಈ ಸಲ ಅವನಿಗೆ ಪಾಠ ಕಲಿಸಿಯೇ ತೀರಬೇಕು. ನಾವು ತೆಪ್ಪಗಿದ್ದರೆ ಅವನು ಇನ್ನೂ ಏರಿ ಹೋಗುವುದೇ ಸೈ." ಅದೇ ನೇರಕ್ಕೆ ಮುರಳೀಧರ ದಲ್ದಾಲಿಯ ದನಿಯೂ ಹೊರಬಿತ್ತು.

ಗೋಡೆಗಾಂತು ವೈಮುದುಡಿ ಕುಳಿತ ಸ್ವರ್ಣಮಾಲಿನಿ ಮಿಸುಕಾಡ ಲಿಲ್ಲ. ಕೈಗಳು ಯಾಂತ್ರಿಕವಾಗಿ ಕಂಬನಿಯನ್ನು ತೀಡಿಕೊಂಡುವು. ಹೃದಯ ಕಲ್ಲಿನ ಗೂಡಾಯಿತು. ಕಮಲೇಶ್ ಕ್ಷಣಕಾಲ ತಾಯಿಯ ಪರಿಸ್ಥಿತಿಯನ್ನು ನಿಟ್ಟಿಸಿ ನೋಡಿದಳು. ದೈನ್ಯವೇ ಮೂರ್ತಿಯೆತ್ತಿ ಬಂದಂತೆ ಕುಳಿತ ಕರುಣಾ

ಜನಕ ದೃಶ್ಯ ಎಳೆಯ ಹೃದಯವನ್ನು ಮಂಜಿನಂತೆ ಕರಗಿಸಿತು. ತನ್ನ ಶಕ್ತಿಯೆಲ್ಲವನ್ನೂ ಈ ಸಂಸಾರಕ್ಕೆ ಧಾರೆಯೆರೆದಿದ್ದರೂ ಮಾ 'ಪರಾಧೀನೆ.' ಅವಳ ಕೈಯಲ್ಲಿ ಕಾಸುಂಟೇ? ಅಥವಾ 'ಕೊಡಿ' ಎನ್ನಬಹುದಾದ ಅಧಿಕಾರವಾದರೂ ಉಂಟೇ? ಮರುಕ್ಷಣದಲ್ಲಿ ಸತ್ಯಭಾಮ ಮತ್ತು ನಾಲ್ವರು ಹೆಣ್ಣು ಮಕ್ಕಳು ಮನದಲೆಯಲ್ಲಿ ಮೂಡಿನಿಂತರು. ಹೆಣ್ಣನ್ನು ಹೇಗೆಂದರೆ ಹಾಗೆ ಚೆಂಡಾಡಬಹುದು! ಅಲ್ಲಿಂದ ಶ್ರೀಪತಿ ಒದ್ದಿದ್ದಾನೆ. ಇಲ್ಲಿಂದ ಅಣ್ಣಂದಿರು ಒದ್ದರಾಯಿತು....!

ಶಿವ....ಶಿವಾ!

"ನಿಮ್ಮಲ್ಲಿ ಯಾರು ಒಪ್ಪದಿದ್ದರೂ ಸರಿಯೆ. ನನ್ನ ಭಾಗದ ಹಣ ನಾನು ಕೊಡುವವಳೇ! ಒಂದುವೇಳೆ ನನ್ನ ಸ್ಕಾಲರ್‌ಷಿಪ್ ನಿಂತುಹೋದಲ್ಲಿ ನಾನು ನರ್ಸಾಗಿ ದುಡಿಯಲೂ ಸಿದ್ಧ! ಇದುವರೆವಿಗೆ ನನ್ನ ಓದಿಗಾಗಿ ಅಪ್ಪನ ಹಣ ಖರ್ಚು ಮಾಡಲಿಲ್ಲ. ಈ ಹಣವನ್ನು ನನ್ನ ಇಚ್ಛಾನುಸಾರ ಖರ್ಚುಮಾಡುವ ಹಕ್ಕು ನನಗುಂಟು!" ದೃಢ ಕಂಠದಿಂದ ನುಡಿ ಹೊರಬಿತ್ತು.

ಕಮಲೇಶ್ ಇಷ್ಟು ಕಠಿಣಳಾದಾಳೆಂದು ಅಣ್ಣಂದಿರು ಬಗೆದಿರಲಿಲ್ಲ. ಅತ್ತಿಗೆಯೂ ತಿಳಿದಿರಲಿಲ್ಲ. ಮಗಳ ನುಡಿ ಕೇಳಿ ಸ್ವರ್ಣಮಾಲಿನಿಯ ಎದೆ ತುಸು ಹಗುರವಾದರೂ ಹಿಂದೆಯೇ ಮುಂದೇನು? ಎಂಬ ಪ್ರಶ್ನೆಯೂ ಏಳದಿರಲಿಲ್ಲ.. ಕಮಲೇಶಳೂ ಹೆಣ್ಣಷ್ಟೆ?

ಕಮಲೇಶ್ ಚಕ್ಕಿಗೆ ಆ ಕೂಡಲೇ ಸಹಿ ಹಾಕಿದಾಗ ಅಣ್ಣಂದಿರು ತಂಗಿಯ ದಿಟ್ಟತನಕ್ಕೆ ಮೆಚ್ಚಿದರೂ ಬೆಚ್ಚಿದರು. ಅವಳ ಹೊನ್ನು ಎಂದಾದರೂ ಕೈಬಿಟ್ಟು ಹೋಗಲಿದ್ದರೂ ಇಂದೇ ಕೈಬಿಟ್ಟು ಹೋದುದು ಊರ್ಮಿಳೆಯ ಕಿಚ್ಚಿಗೆ ತುಪ್ಪ ಸುರಿದಂತಾಯಿತು.

....ಹಾಲಿದ್ದರೂ ಹಬ್ಬವಿಲ್ಲ....

ಸ್ಥಿರ ಗಂಭೀರೆಯಾದ ಕಮಲೇಶ್ ರವಿವರ್ಮನ ಚಿತ್ರಪಟದ ದೇವಿಯಂತೆ ಸುಮನೋಹರವಾದ ಶಾಂತಸಮುದ್ರದಂತೆ ಕಣ್ಗೆಸೆದಳು.

ಸ್ವರ್ಣಮಾಲಿನಿ ತನ್ನ ಮೈಮೇಲಿನ ಒಡವೆ ವಸ್ತುಗಳನ್ನು ಮಾರಿ ಬಂದ ಹಣವನ್ನು ಕಮಲೇಶಳ ಲೆಕ್ಕಕ್ಕೆ ಜಮಾ ಮಾಡಿಸಿದಳು. ವಜ್ರದೋಲೆ ತನ್ನ ಕಿವಿಯನ್ನು ಸೇರಲಿದೆಯೆಂದು ಆಶಿಸಿದ್ದ ಊರ್ಮಿಳಾ ಅತ್ಯಂತ ಬೇಗುದಿಯಲ್ಲಿ

ಬೀಯುತೊಡಗಿದಳು. ಅವು ಸ್ವರ್ಣಮಾಲಿನಿಯು ಸಿರಿವಂತ ಮನೆತನದಿಂದ ಬಂದವುಗಳಾದುದರಿಂದ ನೇರವಾಗಿ ಅವಳನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಆದರೂ....ಸುಂದರ ಉದ್ಯಾನದಲ್ಲಿ ಮುಳ್ಳುಗಿಡ ಅತ್ತಿತ್ತ ಕೈಚಾಚಿ ಪೈಶಾಚಿಕತೆಯಿಂದ ಬೆಳೆಯುತೊಡಗಿತು.

ಸಮಸ್ಯೆ ಬಗೆಹರಿದರೂ ಶಾಂತಿಯು ಲಭಿಸಲಿಲ್ಲ. ಕಾರಣವಿಲ್ಲದೆ ಕಿರಿಕಿರಿ, ಗೋಳು, ದೂರು. ಮನೆ ಹೆಜ್ಜೆಹೆಜ್ಜೆಗೂ ಸುಡುಗಾಡಾಗಿ ಮನಸ್ಸು ಚಿಂತಾಕುಲವಾಯಿತು. ಹೃದಯ ಬನದ ದೇವಿ ಯಾರೂ ಅರಿಯದಂತೆ ಮೌನವಾಗಿ ರೋದಿಸಹತ್ತಿದಳು.

ಮುಗ್ಧ ಹೃದಯದ ದಗ್ಧ ಹಕ್ಕಿ ದುರ್ನಿವಾರ ದುಃಖಾಬ್ಧಿಯಲ್ಲಿ ಏಕಾಕಿಯಾಗಿ ಕೊಚ್ಚಿಕೊಂಡು ಹೋಗುವಾಗ ನಲ್ಮೆಯ ಗೆಳತಿ ಹೇಮರತಿ ಕರ್ವೆಯನ್ನು ಬಾರಿಬಾರಿಗೂ ನೆನೆಯುತಿತ್ತು. ಇಂಥ ದುರ್ಭರ ಸನ್ನಿವೇಶದಲ್ಲಿ– ಈ ಪರಿತಾಪದ ದುರ್ದಿನಗಳಲ್ಲಿ ಅವಳೂ ಇಲ್ಲಿ ಇಲ್ಲವಾದುದು ಎಂತಹ ದೌರ್ಭಾಗ್ಯ....? ಎಷ್ಟೆಷ್ಟು ಜನ್ಮಾಂತರಗಳ ಕರ್ಮ ಒಂದೇ ಬಾರಿಗೆ ಬೆನ್ನು ಹತ್ತಿ ಬಂದಿದೆಯೋ ದೇವರಿಗೇ ಗೊತ್ತು. ದುರ್ವಿಧಿ ಎಲ್ಲಾ ರೀತಿಯಿಂದಲೂ ದಿಗ್ಬಂಧನ ಹಾಕಿತು. ಎಂತಹ ಕರ್ಮವೋ ಅಂತಹ ಫಲ. ಈ ಸ್ವಯಂ ಪಾಕಕ್ಕೆ ಯಾರು ಬಂದರೂ ಮಾಡುವುದೇನು ?

ಸ್ವರ್ಣಮಾಲಿನಿ ಯೋಚನೆಯಾಳದಲ್ಲಿ ಮುಳುಗಿ ತೀವ್ರ ಸಂತಾಪದಿಂದ ನಿಡು ಸುಯ್ಯುವಳು.

ಮನಃಪಕ್ಷಿ ಗತಕಾಲಕ್ಕೆ ಹಾರಿ ಬಾಳ್‌ಬನದ ಎಲೆಎಲೆಯನ್ನೂ ಮುಟ್ಟಿ, ಗಿರಿಕಂದರಗಳನ್ನು ಏರಿ ಇಳಿದು ರಾಗರಸಾದಿಗಳ ಅನ್ವೇಷಣೆಯಲ್ಲಿ ತೊಡಗಿ ತಾನೇ ತಾನಾಗಿ ಅಂದಿನ ಮಧುವನ್ನೀಂಟಿ ನಿಟ್ಟುಸಿರ್ಗರೆಯುವುದು.

ಸಾಕು, ಆ ಮುಹೂರ್ತದಲ್ಲಿ ಅದೆಷ್ಟೋ ಹಿತ.

ಅಧ್ಯಾಯ

೧೦

ರಾಣೀ ಭವತಾರಿಣೀ ಆಸ್ಪತ್ರೆಯ ಸ್ತ್ರೀ ವಿಭಾಗದ ಅಭಿನೇತ್ರಿಯಾದ ಡಾ|| ಜಮುನಾಬಾಯಿ ನೇತೃತ್ವದಲ್ಲಿ ಡಾ|| ಚಂದ್ರಿಕಾ ಹೆಗ್ಗಡೆ, ಕಮಲೇಶ್ ದಲ್ವಾಲಿ, ಪದ್ಮಾ ಕಮಲಾನಿಯರು ಸಾಲಾಗಿ ನಡೆದಿದ್ದಾರೆ. ಕಸಿವಿಸಿಗೊಂಡ ಕಮಲೇಶಳ ಮನದ ತುಂಬೆಲ್ಲಾ ಮನೆಯ ಆಗು–ಹೋಗುಗಳ ತರ್ಕವಿತರ್ಕ ನಡೆದಿತ್ತು. ತಂದೆಯ ಅನಿರೀಕ್ಷಿತ ಸಾವು, ಆರ್ಥಿಕ ಸ್ಥಿತಿಯ ಸ್ಥಗಿತ, ಊರ್ಮಿಳೆಯ ಪಾರುಪತ್ಯ, ತಾಯಿಯ ಬವಣೆ, ಅಣ್ಣಂದಿರ ಉದಾಸೀನ, ತನ್ನ ಇನ್ನೊಂದು ವರ್ಷದ ಓದು, ದಿನವೂ ಬದುಕು ಸಾಗುವ ಬಗೆ ಮನಃಪಟಲದ ಮೇಲೆ ತೆರೆತೆರೆಯಾಗಿ ಸುಳಿಯ ತೊಡಗಿದುವು. ಯೋಚನೆಯ ಮಂಪರದಲ್ಲಿ ಹಾದಿ ಯಾಂತ್ರಿಕವಾಗಿ ಸಾಗಿತು.

"ಕಮಲೇಶ್ !"

"........"

"ಕಮಲೇಶ್ !"

ಪಕ್ಕದಲ್ಲಿ ಹೆಜ್ಜೆ ಹಾಕುತ್ತಿದ್ದ ಡಾ|| ಚಂದ್ರಿಕಾ ಹೆಗ್ಗಡೆ ಕಮಲೇಶಳ ಬೆನ್ನಿನಮೇಲೆ ಕೈಯಿಟ್ಟು ಮೆಲುದನಿಯಲ್ಲಿ–"ಡಾ|| ಜಮುನಾ ಕರೆಯುತ್ತಿದ್ದಾರೆ ಕಮಲೇಶ್ !"

ಅನ್ಯ ಮನಸ್ಕಳಾಗಿದ್ದ ಕಮಲೇಶ್ ಡಾ|| ಜಮುನಾರವರ ಕಡೆ ನೋಟ ಬೀರಿದಳು.

"ನೀನು ಈಚೆಗೆ ಏನೋ ಒಂದು ರೀತಿ ಆಗಿದ್ದಿ, ಮೊದಲಿನ ಲವಲವಿಕೆ ಗೆಲುವು ಇಲ್ಲವೇ ಇಲ್ಲ. ತಂದೆಯ ವಿಚಾರವನ್ನು ಬಹಳ ಹಚ್ಚಿಕೊಂಡಂತೆ ತೋರುತ್ತದೆ. ಹಾಗೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬಾರದು ಮಗೂ."

ಒಂದು ಘಳಿಗೆ, ಒಂದೇ ಒಂದು ಘಳಿಗೆ ತಬ್ಬಿಬ್ಬಾದ ಕಮಲೇಶ್-"ಅಷ್ಟೇ ಇಲ್ಲ. ಅವರು ಅಂತ್ಯಕಾಲದಲ್ಲಿ ತೊಂದರೆ ಪಟ್ಟುದುದು ಒಮ್ಮೊಮ್ಮೆ ಹೃದಯವನ್ನು ಹಿಂಡುತ್ತದೆ....ನನಗೆ ಅದೇ ಸಂಕಟ."

"ಈಶ್ವರೇಚ್ಛೆ!....ಇದು ಯಾರಿಗೂ ತಪ್ಪಿದ್ದಲ್ಲ. ಇನ್ನು ಯೋಚಿಸಿ ಮಾಡುವುದೇನು ಕಮಲೇಶ್?....ಜೀವನ ಎಂದೂ ಹೂವಿನ ಹಾಸಿಗೆಯಲ್ಲ" ದನಿಯಲ್ಲಿ ಹಾಲ್ಜೇನು ಹರಿದು ಬಂತು. ಹಸ್ತಗಳು ಬೆನ್ನನ್ನು ಮೃದುವಾಗಿ ನೇವರಿಸಿದುವು.

ಕಮಲೇಶಳ ಕಣ್ಣುಗಳು ಅವಳಿಗರಿಯದಂತೆಯೇ ಅನಿರೀಕ್ಷಿತವಾಗಿ ತುಂಬಿ ಬಂದುವು. ಪ್ರಯತ್ನಪಟ್ಟರೂ ತಡೆ ಹಿಡಿಯಲಾಗಲಿಲ್ಲ. ಅವು ಕೆನ್ನೆಯ ಮೇಲುರುಳಿ ಇತರರ ದೃಷ್ಟಿಗೋಚರಿಸುವ ಮುನ್ನ ತಲೆಬಾಗಿ ನೆಲಕ್ಕುರುಳಿ ಸುವುದರಲ್ಲಿ ಕೃತಕೃತ್ಯಳಾದರೂ ಕಣ್ಣು ಕೆನ್ನೆ ಮೂಗುಗಳು ಚಂದನವೊರೆದಂತೆ ರಂಗು ತಳೆದುವು. ಹೃದಯದ ಹೊಂಗಿಂಡಿಯ ನಿತಾಂತ ವೇದನೆಯಿಂದ ತುಂಬಿ ತುಳುಕಿತು. ಸರಳವೂ ಗಂಭೀರವೂ ಆದ ಪಾದಯಾತ್ರೆಯಲ್ಲಿ ಪಾದರಕ್ಷೆಗಳ ಸದ್ದು ಧೃತಗತಿಯಲ್ಲಿ ನಡೆದರೂ ವೀತರಾಗದ ಸಣ್ಣ ಶೃತಿಯಂತೆ ಕೇಳಿ ಬರು ತಿತ್ತು, ನಿಶ್ಯಬ್ದ ಪ್ರಕೃತಿಯಲ್ಲಿ ಕೇಳಿಬರುವ ನೈರಾಶ್ಯಪೂರ್ಣ ವಾಣಿಯಂತೆ.

ಡಾ|| ಜಮುನಾ ಬಲಪಕ್ಕದ ವಾರ್ಡಿಗೆ ಪದಾರ್ಪಣೆ ಮಾಡಿದಳು. ಹಾಸಿಗೆಯ ಮೇಲೆ ಬಿಳಿ ಹೊದ್ದಿಕೆಯಡಿ ಬಳಲಿ ಬೆಂಡಾದ ಬಾಲಕ ಮಲ ಗಿದ್ದ. ನೋಡಿದ ಮೊದಲ ನೋಟಕ್ಕೆ ಮನ ಕರಗುವಂತಹ ದೃಶ್ಯ. ಶಾಲೆಯ ಲ್ಲಿರಬೇಕಾದ ಬಾಲಕ ಕಳೆದ ಎರಡು ಮೂರು ವರ್ಷಗಳಿಂದಲೂ ಮನೆಗೂ ಆಸ್ಪತ್ರೆಗೂ ಓಡಾಡಿಕೊಂಡಿದ್ದ....ಮನೆಯಲ್ಲೆಷ್ಟು ಸಿರಿತನವೋ ಮೈಯಲ್ಲಿ ಅಷ್ಟೇ ನೆತ್ತರಿನ ಬಡತನ. ವ್ಯಥೆಯಿಂದ ಎಲುಬಿನ ಹಂದರವಾಗಿದ್ದ ಬಾಲಕನ ತಾಯಿ ಒಣಗಿದ ದಬ್ಬೆಗಳಂತಹ ಕೈಗಳನ್ನು ಜೋಡಿಸಿ ವಂದಿಸಿದಳು. ಕಣ್ಣು ಗಳಲ್ಲಿ ಕಂಬನಿಗಳು ತುಂಬಿ ತುಳುಕಿದುವು. ಆ ಕರುಣಾಜನಕ ದೃಶ್ಯ ಮನ ವನ್ನು ಬಿಸಿಲು ತಾಗಿದ ಮಂಜಿನಂತೆ ಕರಗಿಸಿತು. ಬಾಲಕನ ಮುಖದಲ್ಲಾ ಗುವ ಮಾರ್ಪಾಡು ಆಂತರ್ಯದ ಅನುಭಾವವನ್ನು ಪ್ರದರ್ಶಿಸುತ್ತಿದೆ.

ಚಂದ್ರಭಾನು ಹತ್ತು ವರ್ಷದ ಬಾಲಕ. ಕಳೆದ ಮೂರು ವರ್ಷಗಳಿಂದ ಲುಕ್ಯೂಮಿಯಾ (LUKAEMIA) ದಿಂದ ನರಳುತಿದ್ದ. ಹೆಚ್ಚು ಕಾಲ ಮನೆ ಯಲ್ಲಿ ಕಳೆದಿದ್ದರೂ ಆಗಾಗ್ಗೆ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆದುಕೊಳ್ಳುತಿದ್ದ. ಅನೇಕ ಬಾರಿ ರಕ್ತ ಸಂಯೋಜನೆ ಮಾಡಲಾಗಿತ್ತು. ಆದರೂ ಬಿಳಿಯ ರಕ್ತ ಕಣಗಳ ವೃದ್ಧಿ ಮೇರೆ ಮೀರಿ ನಡೆದಿದೆ. ಹುಡುಗ ಸಾವಿನಂಚಿಗೆ ಸರಿದಿದ್ದರೂ

ಓದಿನಲ್ಲಿದ್ದ ಆಸಕ್ತಿಯನ್ನು ಕಳೆದುಕೊಂಡಿರಲಿಲ್ಲ. ಶಾಲೆಗೆ ಹೋದಲ್ಲಿ ರೋಗ ಹರಿದೀತೇನೋ ಎಂಬಷ್ಟು ದೂರ ಓಡುತಿತ್ತು ಮನಸ್ಸು. ಮಲಗೀಮಲಗಿ ರೋಗ ವೃದ್ಧಿಯಾಯಿತೇನೋ ಎಂಬಷ್ಟು ಅಸಮಾಧಾನ....ಕಿನಿಸಿಗೆ.

“ಮೈಗೆ ಹುರುಪು ಬರಬೇಕಾದರೆ ಚೆನ್ನಾಗಿ ಕೆಲಸಮಾಡಬೇಕು.” ಎಂದಿದ್ದರು ಅಸನ ಮೇಡಂ. ಕದಾಚಿತ್ ಅದೇ ನುಡಿ ಹೃದಯ ತಂತುಗಳಲ್ಲಿ ಮರ್ಮರಿಸುತ್ತದೆ. ಯೋಜನೆಯ ಮಂಪರದಲ್ಲಿ ತುಟಿಗಳು ಬಿರಿಯಲಿಲ್ಲ. ಮನಸ್ಸು ಶಾಲಾ ದಿನಗಳ ನಿರೀಕ್ಷೆಯಲ್ಲಿತ್ತು, ಶಾಂತಿಸಂಗ್ರಾಮದಲ್ಲಿ ಶಾಂತಿ ವೀರರು ಜೈಲಿನಲ್ಲಿ ಕೊಳೆಯುತ್ತಾ ಶಾಂತಿಯನ್ನು ನಿರೀಕ್ಷಿಸುವಂತೆ.

ಎದೆಯ ಮಿಡಿತವನ್ನೂ, ನಾಡಿಯ ಬಡಿತವನ್ನೂ ಪರೀಕ್ಷಿಸಿನೋಡುತ್ತಾ ಅಕ್ಕರೆಯಿಂದ ಕೇಳಿದಳು ಜಮುನಾ “ಹೇಗಿದ್ದಿ ಭಾನು?”

“ನೀವೆ ಹೇಳಿ ಡಾಕ್ಟರ್.” ಬಾಲಕ ಕಳೆದುಳಿದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಕೇಳಿದ.

ಡಾ|| ಜಮುನಳಿಗೆ ‘ಏನು ಹೇಳಲಿ?’ಎನ್ನಿಸಿ ಹೃದಯ ಭಾರವಾದರೂ ವೈದ್ಯಧರ್ಮದ ಪರಮಲಕ್ಷ್ಯದಿಂದ ನುಡಿದಳು “ನಿನ್ನ ದೇಹಸ್ಥಿತಿ ಉತ್ತಮವಾಗುತ್ತಿದೆ.”

“ನನಗಂತೂ ನಂಬಿಕೆ ಉಳಿದಿಲ್ಲ ಡಾಕ್ಟರ್. ನನಗಿನ್ನು ರಕ್ತ ಸಂಯೋಜನೆ ಬೇಡವೇಬೇಡ.” ಎಂದ ಚಂದ್ರಭಾನು. ದನಿ ನಸು ಕಂಪಿಸಿತು.

“ಏಕೆ ಮಗೂ?” ಆತಂಕ ಪರವಶಳಾಗಿ ಕೇಳಿದಳು ಡಾ|| ಜಮುನಾ.

“ಚಿಕಿತ್ಸೆಯಿಂದ ಪ್ರಯೋಜನವಾಗಿಲ್ಲ. ಈ ಆತ್ಮಹಿಂಸೆ, ದೈಹಿಕ ಬಾಧೆ ತಾಳಿಕೊಳ್ಳಲಾರೆ. ನನ್ನನ್ನು ಬಿಟ್ಟುಕೊಡಿ, ನಾನು ಮನೆಗೆ ಹೋಗುವೆ.”

“ಅವಸರ ಪಟ್ಟುಕೊಳ್ಳಬಾರದು ಮಗೂ.”

ನಾನಾ ಮೃದು ವಚನಗಳಿಂದ ಸಂತೈಸಿದಳು ಡಾ|| ಜಮುನಾ.

“ಡಾಕ್ಟರ್, ಇದುವರೆವಿಗೆ ಎಷ್ಟು ಬಾರಿ ರಕ್ತ ಸಂಯೋಜನೆ ಮಾಡಲಿಲ್ಲ? ಅದರಿಂದ ಏನಾಗಿದೆ? ಹೋಗುತ್ತೆ-ಬರುತ್ತೆ. ಮತ್ತೇಕೆ ಪರಿಶ್ರಮ?”

“ಮಗೂ....ಗಳಿಸಿದ ಚೈತನ್ಯವನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು. ನಿನ್ನಲ್ಲಿರುವ ಶಕ್ತಿಯನ್ನು ನೀನಲ್ಲದೆ ಇನ್ನಾರು ಕಾಪಾಡಲು ಸಾಧ್ಯ?”

ಗೋಡೆಯ ಬದಿಗೆ ಸರಿದು ನಿಂತಿದ್ದ ನತದೃಷ್ಟ ತಾಯಿ ಕಂಬನಿಯನ್ನು ತೀಡಿಕೊಂಡಳು. ಸುತ್ತುವರಿದು ನಿಂತಿದ್ದ ಡಾಕ್ಟರುಗಳ ಮುಖಮಂಡಲ ಮ್ಲಾನವಾಯಿತು, ಮಂಜು ಮುಸುಕಿದ ಚಂದ್ರಮನಂತೆ.

"ನನ್ನಿಂದೇನಾದೀತು ?" ಕ್ಷೀಣವಾದರೂ ಪ್ರಶಾಂತ ಸ್ವರದಲ್ಲಿ ಪ್ರಶ್ನಿಸಿದ ಬಾಲಕ.

"ದೃಢ ಮನಸ್ಸು ....!" ಒಂದು ಘಳಿಗೆ ತಡೆದು ಮುಂದುವರಿಸಿದಳು ಡಾ|| ಜಮುನಾ "ಇಂದೂ ರಕ್ತ ಸಂಯೋಜನೆ ಮಾಡುವುದಿದೆ. ಬೇಸರಿಸಬೇಡ ಮಗೂ...."

ತಾಯಿ ನಸುಕಂಪಿಸುವ ದನಿಯಲ್ಲಿ ನುಡಿದಳು "ನಾನೇ ರಕ್ತ ನೀಡುವೆ."

ಈ ಹಿಂದೆಯೂ ಅವಳೇ ನೀಡಿದ್ದಳು. ಬೇಡವೆಂದರೂ ಆ ದುಃಖಿನಿ ಕೇಳುವಂತಿಲ್ಲ, ಮಗುವಿನೊಂದಿಗೆ ಅವಳೂ ಸಹ ಹೊಸ್ತಿಲು ದಾಟುವುದೊಂದು ಬಾಕಿ. ಆ ನೊಂದ ತಾಯಿಗೆ ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ಡಾ|| ಜಮುನಾ ತನ್ನ ತಂಡದೊಂದಿಗೆ ಹಿಂದಿರುಗಿದಳು.

ಇತ್ತೀಚೆಗೆ ಮದನಾಪುರ್ ವಿಜಯಳ ಎಡಗೈ ಮಣಿಕಟ್ಟಿನ ಮೇಲೆ ಸಣ್ಣ ಗಂಟು ಬೆಳೆಯ ತೊಡಗಿತ್ತು. ತನ್ನ ಸುಂದರವಾದ ಕೈಯನ್ನು ಅಂದಗೆಡಿಸಿದ ಅದರಮೇಲೆ ಅವಳಿಗೆ ಎಲ್ಲಿಲ್ಲದ ಸೇಡು. ಅವಳು ಡಾ|| ನಿರಂಜನ್‌ರವರ ಮುಂದೆ ಕೈ ನೀಡಿ "ಅದಷ್ಟನ್ನು ಕೊಯ್ದು ತೆಗೆದುಬಿಡಿ ಸರ್" ಎಂದಳು.

"ಕೆಲವುವೇಳೆ ಅದರೊಳಗಿನ ದ್ರವವನ್ನು ಹಿರಿದು ಔಷಧ ತುಂಬಿದರೆ ಗ್ಯಾಂಗ್ಲಿಯಾನ್ (GANGLION) ಗುಣವಾಗುವುದುಂಟು. ಈಗಲೇ ಆಪ- ರೇಶನ್ ಬೇಕಿಲ್ಲ. ಯಾವಾಗಲೂ ಅವಸರದ ಕ್ರಮ ಕೈಗೊಳ್ಳಬಾರದು." ಎಂದರು ಡಾಕ್ಟರು.

ಹುಡುಗಿಯರು ಸುತ್ತುವರಿದು ನಿಂತು "ಅವಳು ಸುಮ್ಮನೆ ಹಾಗೆಂದಿದ್ದಾಳೆ ಅಷ್ಟೆ. ನೀವು ಚಾಕು ಹಿಡಿದರೆ ಸಾಕು, ಅವಳ ಗತಿ ಮುಗಿದಂತೆಯೆ ?" ಎಂದು ಹಾಸ್ಯ ಮಿಶ್ರಿತ ಧ್ವನಿಯಲ್ಲಿ ನುಡಿದರು. ವಿಜಯಳ ಶಾಲೀನಪೂರ್ಣ ಮುಖ ನಸುಕೆಂಪು ತಳೆದು ಅಂತರ್ಯದ ದೌರ್ಬಲ್ಯಕ್ಕೆ ಪುಷ್ಟಿ ನೀಡಿದರೂ ಹುಸಿಮುನಿಸು ತೋರಿದಳು. ಡಾ|| ನಿರಂಜನರ ಮುಖದ ಮೇಲೆ ಮಂದಹಾಸ ಮೂಡಿತು. "ಇಂದು ಆಪರೇಶನ್ ಬೇಡ. ಒಳಗಿನ ದ್ರವವನ್ನು ಹಿರಿದು

ನೋಡೋಣ, ಆದೀತೇ ?"

ವಿಜಯಾ ಪ್ರಸನ್ನಭಾವದಿಂದ ಒಪ್ಪಿಗೆ ಸೂಸಿದ ನಂತರ ಸುತ್ತ ಮುತ್ತ ಸಸ್ನೇಹಪೂರ್ಣವಾಗಿ ಹಂಗಿಸುವ ಗೆಳತಿಯರ ತಂಡದ ಬಗ್ಗೆ ದೂರಿತ್ತಳು "ನೋಡಿ ಡಾಕ್ಟರ್....ಎಲ್ಲರೂ....",

"ಅತ್ತೆಗೊಂದು ಕಾಲ; ಸೊಸೆಗೊಂದು ಕಾಲ! ನೀನೂ ಅವರನ್ನು ಒಂದಿನ ಹಂಗಿಸಿದರೆ ಮುಗಿಯಿತು." ಎನ್ನುತ್ತಾ ಅವಳ ಕೈಗಂಟೆನೊಳಗಿನ ದ್ರವವನ್ನು ಇಂಜಕ್ಷನ್ ನಳಿಕೆಯ ಮೂಲಕ ಹೀರಿದರು. ಅವಳು ನೋವಿನಿಂದ ಮುಖವನ್ನು ಹಿಂಡಿದಾಗ ಹುಡುಗಿಯರ ನೋಟ ಬೇರೆಡೆಗೆ ಸಿಡಿಯಿತು, ಆ ಹೃದಯಸ್ಪರ್ಶಿ ನೋಟವನ್ನು ನೋಡಲಾರದೆ.

ಡಾಕ್ಟರು ಹುಡುಗಿಯರನ್ನುದ್ದೇಶಿಸಿ ನುಡಿದರು "ವೈದ್ಯಕೀಯ ರೋಗವನ್ನು ಗುಣಪಡಿಸುವ ಮೂಲದಿಂದ ಆರಂಭವಾಗುವ ಬದಲು ರೋಗವು ಹುಟ್ಟದಂತೆ ಪರಿಹಾರ ಕಂಡುಕೊಳ್ಳುವ ಬಿಂದುವಿನಿಂದ ಆರಂಭವಾಗಬೇಕು. ಪ್ರಕೃತ, ವೈದ್ಯಕೀಯ ಶಿಕ್ಷಣ ಹಾಗೂ ಉದ್ಯೋಗ ಬಹುಮಟ್ಟಿಗೆ ರೋಗವನ್ನು ಗುಣಪಡಿಸುವ ನೆಲೆಯಿಂದ ಆರಂಭವಾಗಿದೆ. ಈ ಉದ್ದೇಶದಲ್ಲಿ ಅಮೂಲಾಗ್ರವಾಗಿ ಅವಶ್ಯ ಮಾರ್ಪಾಡಾಗಲೇಬೇಕು. ವೈದ್ಯಕೀಯ ಸಂಶೋಧನಾರಂಗವನ್ನು ಪ್ರಯೋಗ ಶಾಲೆಗೆ ಮಾತ್ರವೇ ಸೀಮಿತಗೊಳಿಸುವುದು ಸಾಧುವಲ್ಲ. ಬೃಹತ್ ಸಮಾಜವೇ ವೈದ್ಯಕೀಯ ಶಿಕ್ಷಕನ ಪ್ರಯೋಗಶಾಲೆಯಾಗಬೇಕು. ನಾನಾ ಅಂಟು ಜಾಡ್ಯಗಳ ನಿವಾರಣೆಯ ಹೊಣೆಗಾರಿಕೆಯಲ್ಲಿ ಸಂಶೋಧಕನು ಸಮಾಜದ ಬಗ್ಗೆ ನಿರ್ವಹಿಸಲೇಬೇಕಾಗಿರುವ ಕರ್ತವ್ಯ ಅಪಾರ. ಇದನ್ನರಿತುಕೊಳ್ಳದೆ ಹೋದಲ್ಲಿ ವೈದ್ಯಕೀಯ ಶಿಕ್ಷಣ ಬರಿಯ ಉದರ ಪೋಷಣೆಯ ರಂಗವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ವೈದ್ಯನಾಗುವವನ ಆದರಲ್ಲೂ ವೈದ್ಯಕೀಯ ಶಿಕ್ಷಕನಾಗುವವನ ಹೊಣೆಗೆ ಪಾರವೇ ಇಲ್ಲ.

"ಇಂದು ವೈದ್ಯಕೀಯ ಕ್ಷೇತ್ರ ವಿಶ್ವವ್ಯಾಪಿಯಾಗಿದೆ. ವೈದ್ಯಕೀಯ ಶಿಕ್ಷಕರು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡಷ್ಟೂ ಸಾಲದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ಸಮಾಜಕ್ಕೆ ಜೀವನವನ್ನೇ ಮುಡುಪಾಗಿಡುವಷ್ಟು ವಿಶಾಲ ದೃಷ್ಟಿ ಇಂದು ಸಂಶೋದಕರಲ್ಲಿ ಬೆಳೆಯಬೇಕು...."

ಡಾ|| ನಿರಂಜನರ ವಿಚಾರ ಸರಣಿ ಹರಿಯುತ್ತಿದ್ದಂತೆಯೇ ಕೈಗಳು ಕರ್ತ

ವ್ಯದಲ್ಲಿ ತೊಡಗಿದುವು. ವಿಶೇಷ ಔಷಧವೊಂದನ್ನು ನಳಿಕೆಗೆ ತುಂಬಿ ಮಣಿ ಕಟ್ಟಿನ ಗಂಟಿಗೆ ಸೂಜಿ ಮುದ್ದು ಕೊಟ್ಟು, ಅದರಮೇಲೆ ಒತ್ತಿಹಿಡಿಯುವಂತಹ ಬಿಗಿಯಾದ ಕಟ್ಟೊಂದನ್ನು ಹಾಕಿದರು. ಅನಂತರ ಹಿರಿಯ ವೈದ್ಯರಿಗೆ ಅಭಿವಾದನ ಸಲ್ಲಿಸಿ ಹೊರಬಿದ್ದಿತು ನಾರೀವೃಂದ.

ಹೊಟ್ಟೆಯಲ್ಲಿ ಹಸಿವು ಮೂಡುತ್ತಲೂ ನೋಟ ಗಡಿಯಾರದ ಕಡೆ ಹೊರಳಿತು. ಹೊತ್ತು ಆದೇ ತಾನೆ ಒಂದರ ಅಂಚನ್ನು ದಾಟಿದೆ. ನಡು ನೆತ್ತಿಯ ಮೇಲೆ ಭಗವಾನ್ ಸೂರ್ಯ ಏರಿ ಬಿಟ್ಟಿದ್ದಾನೆ.

"ಓಹೋ ! ನನಗೆ ಮರೆತೇ ಹೋಗಿತ್ತು. ಇಂದು ಡಾ|| ಕೃಷ್ಣಾ ಭಾಪಟ್ ಸಕ್ಕೂವನ್ನು ಪರೀಕ್ಷಿಸುತ್ತಾರೆ. ನಡೆಯಿರಿ ಅವಳನ್ನಿಷ್ಟು ನಾವು ನೋಡಿಯೇ ಬರೋಣ" ಎಂದಳು ಕಮಲೇಶ್.

"ನಿಜ....ನಿಜ. ನಾನೂ ಸಹ ಮರೆತು ಬಿಟ್ಟಿದ್ದೆ." ದನಿಗೂಡಿಸಿದಳು ಜುಬೇದಾಬೇಗಂ.

ವಿಜಯಾ ತನ್ನ ಕೈಗಂಟನ್ನು ನೋಡಿಕೊಳ್ಳುತ್ತಾ "ತುಂಬ ನೋಯುತ್ತಿದೆ."

"ಪಾಪ....ಕುಸುಮ ಕೋಮಲೆ !"

"ಇಂದು ವದನೆ ! ಮಂದಗಮನೆ !"

ಒಡನೆ ಎಲ್ಲರೂ ಕುಲು ಕುಲು ನಗ ತೊಡಗಿದರು. ಅವರೊಂದಿಗೆ ತನ್ನ ಇನಿದನಿಯನ್ನೂ ಹರಿಯಗೊಟ್ಟಳು-ಮದನಾಪುರ್ ವಿಜಯಾ.

ಡಾ|| ಕೃಷ್ಣಾ ಭಾಪಟ್‌ರವರ ಮುಂದೆ ಸಕ್ಕೂ ವಿನೀತಳಾಗಿ ಕುಳಿತಿದ್ದಾಳೆ. ಅವಳನ್ನು ನೋಡಿದರೆ ಸ್ವತಃ ವೈದ್ಯರಿಗೂ ಸಹ ಅವಳು 'ರೋಗಿ' ಎಂದು ಊಹಿಸಲಾರದಷ್ಟು ದೇಹ ಪ್ರಕೃತಿ ಸೊಂಪಾಗಿದೆ, ನಳನಳಿಸುವ ಕದಳೀ ಸಸಿಯಂತೆ. ಮೇಜಿನ ಮೇಲೆ ತನ್ನೆರಡು ಕೈಗಳನ್ನು ಊರಿ ಅವುಗಳ ಮೇಲೆ ಶಿರೋಭಾರವನ್ನಿಳುಹಿ ದೈನವೇ ಮೈವೆತ್ತು ಬಂದಂತೆ ಸೌಮ್ಯ ರೂಪಿಣಿಯಾಗಿದ್ದಾಳೆ. ಅವಳು ಕುಳಿತ ಕೊಠಡಿಗೂ ಹೊರ ಕೊಠಡಿಗೂ ಮಧ್ಯೆ ವಿಶಾಲವಾದ ಕಿಟಕಿಯಿದೆ. ಅದರ ಮೂಲಕ ರೋಗಿಯನ್ನು ವಿದ್ಯಾರ್ಥಿಗಳು ಗಮನಿಸಬಹುದು. ಇವರು ಕೊಠಡಿಗೆ ಕಾಲಿಡುವ ಮುನ್ನ ವಿದ್ಯಾರ್ಥಿಗಳ ಒಂದು ತಂಡ ಅಲ್ಲಿ ಆಗಲೇ ಕಾದಿತ್ತು.

"ನೀನು ಯಾವ ಬಗೆಯ ಜೀವನವನ್ನು ಬಯಸುತ್ತಿ? ಓದನ್ನು ನಿಲ್ಲಿಸಿದುದಾದರೂ ಏಕೆ?" ಕೇಳಿದರು ಡಾ|| ಕೃಷ್ಣಾಭಾಪಟ್. ದನಿ ಸಕ್ಕರೆಯ ಸವಿಯನ್ನು ಪೂಸಿಕೊಂಡಿತ್ತು.

"ಯಾಕೋ ಮನಸ್ಸಿಲ್ಲ." ನಿರಾಸಕ್ತಿಯಿಂದ ಉತ್ತರಿಸಿದಳು ಸಕ್ಕೂ.

"ಈ ಮೊದಲು ನಿನ್ನಲ್ಲಿ ಎಷ್ಟೊಂದು ಉತ್ಸಾಹವಿತ್ತು?.... ಈ ಉತ್ಸಾಹವನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು. ನಿನಗೆ ಯಾವ ಬಗೆಯ ವಿದ್ಯೆ ಹಿಡಿಸುತ್ತದೆಯೋ ಅದನ್ನೇ ಆರಿಸಿಕೊಳ್ಳಬಹುದು. ಯಾವುದು ಹಿತವೆನ್ನಿಸುತ್ತದೆ?"

"........"

"ಮೆಡಿಸನ್ ಆಸಕ್ತಿಯನ್ನು ಅರಳಿಸುತ್ತದೆ. ಕೆಲವು ದಿನ ಓದಿ ನೋಡುವೆಯಾ?"

ಸಕ್ಕೂ ಮಾತಾಡದೆ ತಲೆಯಲುಗಿಸಿದಳು.

ಚಿತ್ರವೊಂದನ್ನು ಮುಂದಿಟ್ಟು "ಇದೇನು ಮಗೂ? ಇದರಿಂದ ನಿನಗೇನೆನ್ನಿಸುತ್ತದೆ?"

ಅವಳು ಅದರಲ್ಲಿ ಇನಿತೂ ಆಸಕ್ತಿಯನ್ನು ತೋರಲಿಲ್ಲ.

"ಇದನ್ನು ಓದು ಮಗೂ." ಕವನಸಂಗ್ರಹವನ್ನು ಮುಂದಿಟ್ಟರು ಅವರು.

ಅದರಲ್ಲೂ ಆಸಕ್ತಿ ಮೊಳೆಯಲಿಲ್ಲ. ಡಾ|| ಕೃಷ್ಣಾಭಾಪಟ್ ಇನ್ನೊಂದು ಚಿತ್ರವನ್ನು ಮುಂದಿಟ್ಟರು. ಒಂದೆರಡು ಕ್ಷಣ ಅದನ್ನೇ ನಿಟ್ಟಿಸಿ ನೋಡಿದಳು. ಒಡನೆ ಚಿತ್ತ ಫಲಕದ ಮೇಲೆ ಹಳೆಯ ದಿನಗಳು ಸುಳಿದು ಅಳಿದುವು. ಒಂದು ಘಳಿಗೆ ಕಣ್ಮುಚ್ಚಿ ಸುಮ್ಮನೆ ಕುಳಿತಳು. ಮುಖಮಂಡಲ ಕೆಂಪಗೆ ಕೆಂಪು ತಳಿಯಿತು, ಮುಸ್ಸಂಜೆಯ ಚಂದನರಾಗದಂತೆ.

"ಸಕ್ಕೂ...."

"ನನಗೀಗ ಯಾವುದರಲ್ಲೂ ಆಸಕ್ತಿಯಿಲ್ಲ."

"ಏಕೆ?"

"ಎಷ್ಟು ಕಲಿತರೂ...." ಚಿತ್ತಕ್ಷೋಭೆಯಿಂದ ಮಾತು ಅಷ್ಟಕ್ಕೇನೆ ತುಂಡುಗಡಿಯಿತು.

"ವಾಕ್ಯವನು ಪೂರ್ತಿಗೊಳಿಸು ಮಗೂ."

"ಎಷ್ಟೆಂದರೂ ಈ ಬದುಕು...."

"ಹೂಂ, ಹೇಳು....ಹೇಳು. ಮುಚ್ಚುಮರೆ ಬೇಡವೇಬೇಡ."

ಅವಳು ಮಾತಾಡದೆ ತಲೆಯಲ್ಲಾಡಿಸುತ್ತಾ ಎದ್ದುನಿಂತಳು. ಮುಖದಲ್ಲಿ ಅಪೂರ್ವ ಬದಲಾವಣೆ ತೋರಿತು. ಹುಬ್ಬುಗಳೆರಡೂ ಗಂಟಾದುವು. ಯಾವುದೋ ಎಲ್ಲಿಯದೋ ಅನಿರೀಕ್ಷಿತವಾದ ಹೊಳಪು ಉಕ್ಕೇರಿ ಬಂದಂತೆ ಕೆನ್ನೆ ಕಣ್ಣುಗಳಿಗೆ ರಂಗು ಮೂಡಿಸಿತು. ಒಂದೇ ಉಸುರಿಗೆ ಕೇಳಿದಳು "ಮಾ-ಎಲ್ಲಿ?"

"ಇದ್ದಾರೆ ಕುಳಿತುಕೊ."

"ಉಹೂ." ನೋಟ ಬಾಗಿಲ ಕಡೆ ಹೊರಳಿತು.

"ನಿನ್ನ ತಾಯಿಯನ್ನು ಕರೆಸಲೇ?"

"ಉಹೂ...."

"ಕಣ್ಣುಗಳಂಚಿನಲ್ಲಿ ಕಂಬನಿ ಮೂಡಿತು. ಸಕ್ಕು ಮಾತಾಡದೆ ಮುಸುಮುಸು ಅಳತೊಡಗಿದಳು. ರಾಗಭಾವೋದ್ವೇಗಗಳ ಸೆಳೆತಕ್ಕೆ ಸಿಕ್ಕಿ ತನು ತತ್ತರಿಸಿತು. ಡಾ|| ಕೃಷ್ಣಾಭಾಪಟರು ಅವಳನ್ನು ಉದ್ರೇಕಿಸಿದ ಆ ಚಿತ್ರಕ್ಕೂ ಅವಳ ಮನೋಭಾವಕ್ಕೂ ತಾಳೆ ಹಾಕುತಿದ್ದರು. ಒಂದು ಘಳಿಗೆಯ ನಂತರ ದುಃಖದಾವೇಗವು ಕಡಿಮೆಯಾಗುತ್ತಲೂ ಕಂಬನಿಯನ್ನು ತೀಡಿಕೊಂಡು ಅವಳೆಂದಳು "ನಾನು ಹೋಗುವೆ." ಕಂಠಸ್ವರ ಉದ್ವೇಗಪೂರ್ಣವಾಗಿತ್ತು.

"ಅಷ್ಟೇಕೆ ಆತುರ?"

"ಇಲ್ಲೇನು ಮಾಡಲಿ?"

"ಮನೆಗೆಲಸದಲ್ಲಿ ನಿನಗೆ ಆಸಕ್ತಿಯುಂಟೇ?"

"........"

"ಹೇಳು ಮಗೂ."

"ಜೀವನ........ಕ್ಷಣಿಕ."

"ಇರಬಹುದು...."

"ಏಕೆ? ನೀವು ಹಾಗೆಂದು ಒಪ್ಪಿಕೊಳ್ಳಲಾರಿರಾ?" ಕಣ್ಣುಗಳಲ್ಲಿ ವಿಶೇಷ ತೀಕ್ಷ್ಣತೆ ಮೂಡಿತು.

"ಆದರೂ...."

ಮಾತು ಮುಂದುವರಿಯುವುದರೊಳಗಾಗಿ ಸಕ್ಕೂ ದಡಕ್ಕನೆ ಎದ್ದು ನಿಂತು ಹೊರಗಡೆ ಓಡಿದಳು. ಡಾಕ್ಟರು ಬಾಗಿಲವರೆಗೂ ಹೋಗಿ ನೋಡಿದರು. ಅವಳು ಬಾಗಿಲಾಚೆ ಕಾಯುತ್ತಿದ್ದ ತಾಯಿ ತಂದೆಗಳ ಬಳಿಗೆ ಹೋಗಿದ್ದಳು. ಅವರಿಗೆ ಇನ್ನೊಮ್ಮೆ ಅವಳನ್ನು ಕರೆತರಲು ಹೇಳಿದನಂತರ ವಿದ್ಯಾರ್ಥಿಗಳನ್ನುದ್ದೇಶಿಸಿ ಡಾಕ್ಟರು ತಮ್ಮ ವಿಚಾರಧಾರೆಯನ್ನು ಹರಿಯ ಬಿಟ್ಟರು,

"....ಸೈನ್ಸ್ ಮುಂದೆ ಮುಂದೆ ಹೋಗುತಿದ್ದಂತೆ ಸಂಶೋಧನೆಗಳು ನಡೆದು ಅನೇಕಾನೇಕ ವಿಷಯಗಳು ಹೊರ ಹೊಮ್ಮಿ ಸಿದ್ಧವಾಗಿ ಪ್ರಸಿದ್ಧವಾಗುತ್ತವೆ. ಸ್ಮೃತಿಗಳ ಬಗ್ಗೆ ನೀವೇನು ತಿಳಿದಿದ್ದೀರಿ? ಅವು ತಲೆಯ ಯಾವ ಭಾಗದಲ್ಲಿ ಇರುತ್ತವೆ? ನೆನೆದೊಡನೆ ಹೇಗೆ ನೆನಪು ಮೂಡುತ್ತದೆ? ಹಳೆಯ ನೆನಹುಗಳನ್ನು ಸುರಕ್ಷಿತವಾಗಿ ಇಡಬಲ್ಲ ಯಾವ ಶಕ್ತಿಯು ತಲೆಯಲ್ಲುಂಟು? ಪ್ರಕೃತಿಯು ಸ್ಮರಣದ ಈ ಪ್ರಕ್ರಿಯೆಗಳನ್ನು ಕರಿಯ ಬಣ್ಣದ ಎರಡು ಪೆಟ್ಟಿಗೆಗಳಲ್ಲಿ ಇರುವಂತೆ ಮಾಡಿದೆ. ಇದು ಒಂದು ಇಂಚಿನ ಭಾಗದಷ್ಟು ಗಾತ್ರ ಇರುವುದಲ್ಲದೆ ತಲೆಯ ಸುತ್ತಲೂ ಸುತ್ತಿಕೊಂಡು ತಲೆಯ ಎಲ್ಲಾ ಭಾಗಗಳಲ್ಲೂ ಕಿವಿಯ ಮೇಲ್ಭದಿಯಲ್ಲಿ ವ್ಯಾಪಿಸಿಕೊಂಡಿರುತ್ತದೆ. ಇದಕ್ಕೆ "ಟೆಂಪೋರಲ್ ಕಾರಟೆಕ್ಸ್" (TEMPORAL CORTEX) ಎಂದೆನ್ನುತ್ತಾರೆ.

"ಟೆಂಪೋರಲ್ ಕಾರಟೆಕ್ಸ್"ನ ಕೆಲವು ಅಂಶಗಳಲ್ಲಿ ಶಬ್ದಜ್ಞಾನದ ನೆನಪು ಸಹ ಇರುತ್ತದೆಂಬ ಇನ್ನೊಂದು ಅಂಶವೂ ಸಹ ಈಗೀಗ ಬೆಳಕಿಗೆ ಬಂದಿದೆ. ನೀವು ಓದಿದ ಕೇಳಿದ ಶಬ್ದಗಳ ಅಂಕಿತ ಅಲ್ಲಿರುತ್ತದೆ. ನಿಮ್ಮನ್ನು ಬಹಳ ಹಿಂದೆ ನೋಡಿದ್ದ ಯಾರಾದರೊಬ್ಬ ಕೇಳುತ್ತಾನೆ "ನಿಮಗೆ ನನ್ನ ನೆನಪಿದೆಯೆ?" ಎಂದು. ಆಗ ಒಂದೆರಡು ಕ್ಷಣ ಯೋಚಿಸಿದನಂತರ ನೀವು ಹೌದು ಅಥವಾ ಇಲ್ಲ ಎನ್ನುವಿರಿ. ಹಾಗಾದರೆ, ಯಾವ ಆಧಾರದ ಮೇಲೆ ಹಾಗೆ ಹೇಳಿದಿರೆಂಬುದನ್ನು ವಿಚಾರ ಮಾಡಿರಿ. ಇದೆಲ್ಲಾ "ಟೆಂಪೋರಲ್ ಕಾರಟೆಕ್ಸ್"ನ ಚಮತ್ಕಾರ. ಇದರಿಂದ ತಲೆಯಲ್ಲಿ ಇಂಡೆಕ್ಸ್ ಸಿಸ್ಟಮ್ (INDEX SYSTEM) ನಂತೆ ಕಾರ್ಯ ನಡೆಯುತ್ತದೆಂಬುದು ತಿಳಿದು ಬರುತ್ತದೆ.

"ಅರ್ಥಾತ್ ನೀವು ಕೇಳಿದ ಶಬ್ದವನ್ನು ಶೋಧಿಸುತ್ತೀರಿ. ಆಗ ಓರ್ವ ವ್ಯಕ್ತಿ ಒಂದು ವಿಶಿಷ್ಟ ವಸ್ತುವನ್ನು ಹುಡುಕಿದಂತೆ ಸ್ನಾಯುಗಳಲ್ಲಿಯ ವಿದ್ಯುತ್ ಧಾರೆಯು ತಮ್ಮ "ಟೆಂಪೋರಲ್ ಕಾರಟೆಕ್ಸ್"ನ ಪ್ರತಿಯೊಂದು ಭಾಗದ

ಲ್ಲಿಯೂ ಪ್ರವಹಿಸಿ ಪ್ರತಿಯೊಂದು ಅಂಶವನ್ನೂ ಮುಟ್ಟುತ್ತಾ ಹೋಗುತ್ತದೆ. ಆಗ ನಿಮ್ಮ ಅಪೇಕ್ಷೆಯು ನಿಮಗೆ ನಿಚ್ಚಳವಾಗಿ ಹೊಳೆಯುತ್ತದೆ.

"ಅಷ್ಟೇ ಅಲ್ಲ; ಈ "ಟೆಂಪೋರಲ್ ಕಾರಟೆಕ್ಸ್"ನಲ್ಲಿ ಭೂತಕಾಲದ ವಿಷಯವನ್ನು ವರ್ತಮಾನ ಕಾಲಕ್ಕೆ ಹೋಲಿಸಿ ನಿರ್ಣಯ ಕೊಡುವ ಕ್ಷಮತೆಯೂ ಸಹ ವಿದ್ಯಮಾನವಾಗಿದೆ. ನೀವು ಹಳೆಯ ಪರಿಚಿತನನ್ನು ಬಹು ಕಾಲದ ನಂತರ ಭೇಟಿ ಮಾಡುವಿರೆಂದು ಭಾವಿಸಿರಿ. ಆಗ ನಿಮ್ಮ ತಲೆಯಲ್ಲಿನ ತುಲನಾತ್ಮಕ ಶಕ್ತಿಯು ಕೂಡಲೆ ನಿಮ್ಮ ಸಹಾಯಕ್ಕೆ ಬರುತ್ತದೆ. ಕೂಡಲೇ ನೀವು ನಿಮ್ಮ ಪರಿಚಿತನಲ್ಲಿ ಕಾಲಾಂತರದಲ್ಲಿ ಆದ ಬದಲಾವಣೆಗಳನ್ನು ಕಂಡು ಕೊಳ್ಳುವಿರಿ........ಬಣ್ಣ ಕಪ್ಪಾಗಿದೆ. ಕೂದಲು ಬಿಳುಪಾಗಿದೆ. ಮೈ ಬೊಜ್ಜಾಗಿದೆ. ಇತ್ಯಾದಿ ಇತ್ಯಾದಿ.

ಈ ಅಂತರವನ್ನು ತೋರುವ ಕ್ಷಮತೆಯ ಪ್ರಧಾನ ಅಂಶವನ್ನು ಗಮನಿಸಿರಿ.

ಒಂದು ಸಲ ಸ್ಮರಣವಾದ ಘಟನೆ ಸ್ಥಾಯೀ ಸ್ವರೂಪವನ್ನು ಹೊಂದುತ್ತದೆ. ಆ ಕಾರಣದಿಂದಾಗಿ ಸ್ಮೃತಿಭಂಗವೆಂಬ ರೋಗದ ಅಸ್ತಿತ್ವವನ್ನು ಮಾನ್ಯ ಮಾಡಲು ಬರಲಾಗದು. ಸ್ಮೃತಿಗಳು ನಷ್ಟವಾಗುವುದಿಲ್ಲ. ಆದರೆ ಸ್ನಾಯುಗಳಲ್ಲಿ ಹರಿದಾಡುವ ವಿದ್ಯುತ್ ಶಕ್ತಿಯು ಕಡಿಮೆಯಾಗಬಹುದು. ತಲೆಗೆ ಏನಾದರೂ ಹೊಡೆತ ಬಿದ್ದರೆ ಮುಂದಿನ ಘಟನೆಗಳನ್ನು ರಿಕಾರ್ಡ್ ಮಾಡುವ ಕ್ಷಮತೆಯನ್ನು ಕಳೆದುಕೊಳ್ಳಬಹುದು ಮತ್ತು ಹಿಂದಿನ ಘಟನೆಯು ಸ್ಮರಣೆಯಿಂದ ಅಳಿಸಿ ಹೋಗಲೂಬಹುದು. "ಟೆಂಪೋರಲ್ ಕಾರಟೆಕ್ಸ್"ನಲ್ಲಿಯ ಯಾವ ಭಾಗದಲ್ಲಿ ಆ ಸ್ಮೃತಿಯು ಮೂಡಲ್ಪಟ್ಟಿರುವುದೋ ಆ ಅಂಶವನ್ನು ಕತ್ತರಿಸಿ ತೆಗೆದು ಹಾಕುವವರೆಗೂ ಅದು ಅಸ್ತಿತ್ವದಲ್ಲಿರುವುದು.

"ಟೆಂಪೋರಲ್ ಕಾರಟೆಕ್ಸ್" ಮತ್ತು ಅವುಗಳ ಸಹಾಯಕ ಸ್ನಾಯುಗಳಲ್ಲಿ ಸ್ಮರಣ ಶಕ್ತಿಯ ರಹಸ್ಯವು ಅಡಗಿರುತ್ತದೆ. ಭವಿಷ್ಯತ್ತಿನಲ್ಲಿ ಮಿದುಳಿನ ಇನ್ನೂ ಎಷ್ಟೊಂದು ಚಮತ್ಕಾರಗಳು ಹೊರ ಬೀಳಲಿವೆಯೋ ಯಾರಿಗೆ ಗೊತ್ತು ?....

ಅಧ್ಯಾಯ

೧೧

....ಜಿಣ್....ಜಿಣ್....ಜಿಣ್....ಜಿಣ್....

ಕತ್ತು ಆನಿಸಿ ನೋಡಿದರೂ ಹಾಸಿಗೆಯಮೇಲೆ ಮಲಗಿದ ಹೆಣ್ಣು ಕಣ್ಗೋಚರಿಸದು....ಶೌಚದಮನೆಗೆ ಹೋಗಿರಬಹುದೇನೊ ಎನಿಸಿತೊಮ್ಮೆ. ನೋಟ ಬಾಗಿಲಕಡೆ ಹೊರಳಿತು. ಉಹೂ, ಅಲ್ಲಿಯೂ ಇಲ್ಲ. ಹೊರಗಡೆಯಿಂದ ಅಗಣಿ ಹಾಕಿದೆ. ಅಂದಮೇಲೆ........ಹುಡುಗಿಯರು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಮನದಲ್ಲಿನ ಸಮಸ್ಯೆ ಮುಖಮುದ್ರೆಯಲ್ಲಿ ತಕ್ಷಣ ಲಾಸ್ಯವಾಡಿತು....ಎಲ್ಲಿದ್ದಿರಬಹುದು? ನೂಪುರದ ಸದ್ದು ಕೇಳಿದುದಾದರೂ ಎಲ್ಲಿಂದ ?

ಅರೆ! ಹಾಸಿಗೆಯುದ್ದಕ್ಕೂ ಮುದುಡಿ ಬಿದ್ದಿದ್ದ ಹೊದ್ದಿಕೆಯಲುಗಿತು. ಹೊದ್ದಿಕೆಯಡಿಯಿಂದ ಕ್ಷೀಣಿತ ಕೈಗಳೆರಡು ಹೊರಚಾಚಿ ಹೊದಿಕೆಯ ತೆರೆಯನ್ನು ಮೆಲ್ಲನೆ ಸರಿಸಿದುವು. ರಕ್ತರಹಿತ ಮುಖದಮೇಲೆ ಬೆವರಿನ ಸಣ್ಣ ತುಂತುರು ಮೂಡಿವೆ. ಬಾಚದ ಕೂದಲು ಅತ್ತಿತ್ತ ಅಸ್ತವ್ಯಸ್ತವಾಗಿ ಹರಡಿದೆ. ಬೆರಗುಗಣ್ಣುಗಳಿಂದ ಇತ್ತಲೇ ನೋಡಿತು, ಮುಪ್ಪಿನ ಹಾದಿ ಅಡರಿದ ಹೆಣ್ಣು.

"ಓ!....ಇಲ್ಲೇ ಇದ್ದೀರಾ? ನೀವು ಮಲಗಿದ್ದುದು ಸಹ ತಿಳಿಯುವಂತಿರಲಿಲ್ಲ. ಬರೀ ಹೊದ್ದಿಕೆ ಮುದ್ದೆಯಾಗಿ ಬಿದ್ದಂತಿತ್ತು?

ವಿದ್ಯಾರ್ಥಿನಿಯರು ಎಳೆನಗು ಹರಿಸಿದರು.

ಕಮಲೇಶ್ ದಲ್ವಾಲಿ, ಸುಧಾರಾಣಿ, ಪದ್ಮಾಕಮಲಾನಿ, ಜುಬೇದಾ ಬೇಗಂ ಮತ್ತು ಮದನಾಪುರ್ ವಿಜಯಾ ಪಂಚಶೀಲಗಳಂತೆ ಕಣ್ಗೆಸೆದರೋ ಏನೋ....ಹಾಸಿಗೆಯ ಮೇಲಿನ ಹೆಣ್ಣು ಅವರನ್ನು ಭಾವಪೂರ್ಣಲೋಚನಗಳಿಂದ ನಿಟ್ಟಿಸಿತು.

"ಇದೇನು ಮಂಚ ಹಳ್ಳ ಬಿದ್ದಿತೇ ಹೇಗೆ?" ಕಮಲೇಶ್ ಕೇಳಿದಳು.

........ಹೂ ಹೆಣ್ಣಿನ ಭಾರಕ್ಕೆ........?

ಎಲ್ಲರ ಆಶ್ಚರ್ಯ ಚಕಿತ ನೋಟಅವಳನ್ನೇ ನಿಟ್ಟಿಸಿದುವು.

ಹೊದ್ದಿಕೆಯಡಿ ಮುದುಡಿ ಮಲಗಿದ ಹೆಣ್ಣು ನಸುನಕ್ಕು ನುಡಿಯಿತು, "ನಿನ್ನೆ ನಮ್ಮವರು ಮಂಚದ ಮೇಲೆ ಕುಳಿತಿದ್ದರು ಆಗ ಕುಸಿಯಿತೇನೋ...."

ಐವರೂ ಕುಲುಕುಲು ನಕ್ಕರು.

ಹಿಂದಿನ ಸಂಜೆ ಆಸ್ಪತ್ರೆ ಸೇರಿದ ಅವಳ ದೈಹಿಕ ಬಾಧೆಗಳನ್ನು ಕೇಳಿ ಬರೆದುಕೊಳ್ಳಲೋಸುಗ ಬಂದ ಹುಡುಗಿಯರು ಕಾಗದ ಪೆನ್ನುಗಳೊಡನೆ ಅಣಿಯಾದರು. ಎಲ್ಲರೂ ಒಂದೊಂದು ವಾರ್ಡಿಗೆ ಹೋಗಲಿದ್ದು ಮೊದಲವಾರ್ಡಿಗೆ ಐವರೂ ಕಾಲಿಟ್ಟಿದ್ದರು.

ಹೆಣ್ಣು ಹೊರಳಿತು. ಕಿರುಗೆಜ್ಜೆಗಳು ಅಲುಗಿದುವು. ಜಿಣ್....ಜಿಣ್.... ಜಿಣ್....ಜಿಣ್....

ಅಡಿಯಿಂದ ಮುಡಿಯವರೆಗೂ ಒಡವೆ ವಸ್ತುಗಳಿಂದಲಂಕೃತವಾದ ಮರಾಟಿ ಹೆಣ್ಣು ಹೊದ್ದಿಕೆಯನ್ನು ಸರಿಸಿ ಕುಳಿತುಕೊಳ್ಳಲು ಪ್ರಯತ್ನಿಸಿದಾಗ ಮಂಚದ ಸ್ಪ್ರಿಂಗುಗಳು ಲರಕ್ ಲರಕ್ ಸದ್ದುಗೈದುವು. ಅವಳಿಗೆ ಕೈಯಾಸರೆ ಕೊಟ್ಟು ಎಬ್ಬಿಸುತಿದ್ದಂತೆ ಮುಖದ ಮೇಲೆ ಮುಸುಗೆಳೆದುಕೊಂಡುದುದನ್ನು ನೋಡಿ "ಇಲ್ಲೇಕೆ ಮುಸುಕು ? ಗಾಳಿ ಬೆಳಕು ಬರಲಿ, ತೆಗೆದುಬಿಡಿ" ಎಂದಳು ಕಮಲೇಶ್. ಆ ಹೆಣ್ಣಿನ ಮುಗ್ಧತೆ, ವಿಶಿಷ್ಟ ನಡವಳಿಕೆ, ಸಾಮಾಜಿಕ ಬಂಧ ಇವು 'ಜೀವನ' ಎನ್ನುವುದಕ್ಕಿಂತ 'ನರಕ' ಎನ್ನುವುದಕ್ಕೆ ಯೋಗ್ಯವಾಗಿದ್ದುವು.

"ಇರಲಿ, ಅಮ್ಮ. ಇಷ್ಟಕ್ಕೂ ನಮಗದು ಅಭ್ಯಾಸವಾಗಿದೆ. ಈಗ ತೆಗೆಯುವುದೆಂದರೆ ಒಗ್ಗುವುದಿಲ್ಲ" ಎನ್ನುತ್ತ ಆ ಅಜ್ಞಳು ಮುಸುಕನ್ನು ಸರಿಪಡಿಸಿಕೊಂಡಳು.

ಮಾತು ಮುಗಿಯುವುದರೊಳಗಾಗಿ ಅವಳ ಪತಿ ಒಳಬಂದ. ಅಪ್ಪಟ ಮರಾಠ ದೇಶಸ್ಥ. ಸ್ಥೂಲ ಕಾಯ. ತೀಕ್ಷ್ಣವಾದ ಕಣ್ಣುಗಳು. ಹುರಿಮೀಸೆ ವೈರೋಮ ರೋಮಗಳಲ್ಲೂ ಹೊರ ಹೊಮ್ಮುವ ಹಳೆಯ ಸಂಪ್ರದಾಯ.... ಗಂಟಲಲ್ಲಿ ಗರಗರ ಸದ್ದು ಮಾಡುತ್ತಾ ಗಜಗತಿಯಲ್ಲಿ ನಡೆದು ಬಂದ ರೀತಿ ಹಿರಿಯ ಹೇರು ಹೊತ್ತಂತಿತ್ತು.

ಗೆಳತಿಯರು ಪಕ್ಕದ ವಾರ್ಡುಗಳಿಗೆ ಹೊರಟರು. "ನಿನ್ನದಾಗುತ್ತಲೂ ಅಲ್ಲಿಗೆ ಬಂದುಬಿಡು ಕಮಲೇಶ್" ಕರೆ ನೀಡಿದಳು ಜುಬೇದಾ ಬೇಗಂ.

"ನಿಮ್ಮ ತೊಂದರೆಗಳೇನೆಂಬುದನ್ನು ಹೇಳಿರಿ."

ಯಜಮಾನ ತಾನೇ ಮಾತಾಡಲು ಮುಂದಾದ.

"ದಯಮಾಡಿ ಅವರಿಗೆ ಮಾತಾಡಲು ಅವಕಾಶ ನೀಡಿರಿ." ಎನ್ನುತ್ತ ರೋಗಿಯ ಬಳಿಯಲ್ಲಿ ಕುಳಿತುಕೊಂಡಳು, ಕಮಲೇಶ್.

ಜೀವನಾರಣ್ಯದ ದಿಟ್ಟ ಗುರುದೇವ ನಿರ್ಗಮಿಸಿದ.

ಈ ಜಡ ದೇಹಕ್ಕೆ ಒಡವೆ ವಸ್ತುಗಳ ಅಲಂಕಾರಕ್ಕಿಂತ ಆತ್ಮ ಸಾಕ್ಷಾತ್ಕಾರ ಹೊಂದುವಂತಹ ಜ್ಞಾನ ಪ್ರಧಾನ ಮಾಡಿಸಿದ್ದರೆ........ಲೇಖನಿಯನ್ನು ತೆರೆಯುತ್ತ ನಿಟ್ಟುಸಿರು ಬಿಟ್ಟಳು ಕಮಲೇಶ್.

"ನಿಮಗೆ ಮೊದಲನೆಯ ಮಗು ಜನಿಸಿದಾಗ ನಿಮ್ಮ ವಯಸ್ಸೆಷ್ಟು ?"

"ಹದಿನೈದು." ಸ್ವಲ್ಪ ಯೋಚಿಸಿ ನುಡಿದಳು ರೋಗಿ.

"ನೀವು ಒಟ್ಟು ಎಷ್ಟು ಬಾರಿ ಗರ್ಭವತಿಯಾದಿರಿ ?"

"ಹದಿನೈದು ಬಾರಿ."

"ಈಗ ಎಷ್ಟು ಮಂದಿ ಮಕ್ಕಳಿದ್ದಾರೆ ?

"ಆರು ಮಂದಿ."

"ಮೊದಲನೆಯ ಮಗು ಬದುಕಿದೆಯೆ ?"

"ಹೌದು........"

"ಎರಡನೆಯದು ?"

"ಇಲ್ಲ."

"ಮಕ್ಕಳು ತೀರಿಕೊಂಡುದುದು ಹೇಗೆ? ಎಳೆಯ ಮಕ್ಕಳಿರುವಾಗಲೇ ತೀರಿಕೊಂಡರೇ ? ಅಥವಾ ದೊಡ್ಡವರಾದ ಮೇಲೆ ತೀರಿಕೊಂಡರೇ ?"

"ನಾಲ್ಕು ಮಂದಿ ದೊಡ್ಡವರಾದ ಮೇಲೆ ತೀರಿಕೊಂಡರು. ನಾಲ್ಕು ಮಂದಿ ಚಿಕ್ಕ ಮಕ್ಕಳಿರುವಾಗ ತೀರಿಕೊಂಡರು. ಮೂರು ಭಾರಿ ಗರ್ಭಪಾತವಾಗಿದೆ. ಒಂದೆರಡು ಬಾರಿ ಮಕ್ಕಳು ಹುಟ್ಟುವಾಗಲೇ ತೀರಿಕೊಂಡುವು. ಒಬ್ಬ ಎಲ್ಲೋ ದೇಶಾಂತರ ಹೋದ....ಮದುವೆಯಾಗಬೇಕಾಗಿದ್ದ ಮಗಳು ಕೆರೆಗೆ ಬಿದ್ದು ಪ್ರಾಣ ಬಿಟ್ಟಳು........ಏನೋ ತಾಯಿ! ಯಾವಯಾವ ಜನ್ಮದ ಕರ್ಮಗಳನ್ನೋ ಈಗ ತೀರಿಸುತಿದ್ದೇವೆ........ಯಾರಾದರೂ ಸರಿ ಮಾಡಿದ್ದನ್ನು ಉಣ್ಣಲೇಬೇಕಲ್ಲ........"

"ನಿಮ್ಮ ಲೆಖ್ಖ ಸರಿ ಹೋಗಲಿಲ್ಲ. ಹೆತ್ತುದು ಹದಿನೈದು ಅಂದಿರಿ. ನೀವು

ಹೇಳಿದ ಲೆಖ್ಖ ಆದಕ್ಕಿಂತಲೂ ತುಂಬ ಹೆಚ್ಚಾಯಿತಲ್ಲ?" ಕೊರಳೆತ್ತಿ ಕೇಳಿದಳು ಕಮಲೇಶ್.

"ನಾವು ಓದಲಿಲ್ಲ ಕಲಿಯಲಿಲ್ಲ. ನೋಡಿ, ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು...."

"ಈಗ ನಿಮ್ಮ ದೈಹಿಕ ಬಾಧೆಗಳೇನು ?"

ಕೆಮ್ಮು, ನೆಗಡಿ, ಜ್ವರ, ಅಜೀರ್ಣ, ವಾತ, ಪಿತ್ತ ಇತ್ಯಾದಿ ಇತ್ಯಾದಿ ....ಕಿವಿಬರಡಾಗುವಷ್ಟು ವಿಷಯಗಳು ಬಳಬಳ ಹೊರಬಿದ್ದುವು. ಬರೆದು ಮುಗಿಸುವಷ್ಟರಲ್ಲಿ "ನನಗೆ ಆಗಾಗ್ಗೆ ಹೊಟ್ಟೆ ನೋವು. ಹಾಗೆ ನೋವು ಬಂದಾಗ ವಾಂತಿಯೂ ಆಗುತ್ತೆ." ಎಂದಳು.

ಪಟ....ಪಟ....ಪಟ....ಪಟ.

ಬಾಗಿಲ ಕಡೆ ನೋಟ ಹೊರಳುವುದರೊಳಗಾಗಿ ಅತ್ತರಿನ ನಲ್ಗಂಪು ಒಳನುಗ್ಗಿ ಬಂತು....ಘಮ....ಘಮ....ಘಮ....ಘಮ.

ಹಿಂದೆಯೇ ಡಾ|| ಜಮುನಾ ವಾರ್ಡಿಗೆ ಪದಾರ್ಪಣೆ ಮಾಡಿದಾಗ ದಿಟ್ಟಿ ಕಮಲೇಶಳು ಬರೆದುಕೊಂಡ ವರದಿಯ ಕಡೆ ಹರಿಯಿತು. ಅನಂತರ ಅವಳ ದೇಹಸ್ಥಿತಿಯನ್ನು ಪರೀಕ್ಷಿಸಿದಳು.

"ನಿಮ್ಮ ಆರೋಗ್ಯ ಉತ್ತಮಗೊಳ್ಳುವ ತನಕ ನೀವು ಇಲ್ಲಿರಲೇಬೇಕು. ಅನಂತರ ಆಪರೇಷನ್ನಿನ ಅಗತ್ಯವಿದ್ದರೆ ಮಾಡೋಣ."

ಹೆಣ್ಣು ಒಮ್ಮೆಲೆ ಹೌಹಾರಿತು. "ನಿನ್ನೆ ಪರೀಕ್ಷೆಗಾಗಿ ಮೂರು ದಿನ ಇರಲು ಹೇಳಿದಿರಿ. ಅದರಿಂದಾಗಿ ಉಳಿದುಕೊಂಡೆ. ನನ್ನಿಂದ ಇಲ್ಲಿರಲು ಸಾಧ್ಯವೇ ಇಲ್ಲ........"

"ನಿಮ್ಮ ದೇಹಸ್ಥಿತಿ ಉತ್ತಮವಾಗದೆ ಆಪರೇಷನ್ ಮಾಡುವಂತಿಲ್ಲ."

"ನಮ್ಮಪ್ಪಾ....! ಆಪರೇಷನ್ ಬೇಡ....ಏನೂ ಬೇಡ. ನನಗೆ ಹೊಟ್ಟೆ ನೋವು ಇಲ್ಲವೇ ಇಲ್ಲ....!" ಎಂದಳು ಅವಳು ಭಯ ಭೀತಿಗಳ ವಶೀಭೂತಳಾಗಿ.

"ಛೀಃ! ಛೀಃ! ಇಷ್ಟಕ್ಕೆ ಹೆದರಿಕೊಳ್ಳುವುದೇ? ಆಪರೇಷನ್ ಮಾಡಿಸಿಕೊಂಡರೆ ನಿಮ್ಮ ಆರೋಗ್ಯ ಖಂಡಿತ ಸುಧಾರಿಸುತ್ತದೆ. ನಿಮ್ಮ ಆರು ಮಂದಿ ಮಕ್ಕಳಿಗೆ ಸ್ವಂತ ತಾಯಿ ಬೇಕೆಂದರೆ ನೀವು ನಿಮ್ಮ ಆರೋಗ್ಯದ ಕಡೆ ಹೆಚ್ಚು

ಗಮನ ಕೊಡಲೇಬೇಕು."

"ನಾನು ಹೀಗೆಯೇ ನರಳಿದರೂ ಚಿಂತೆಯಿಲ್ಲ- ಖಂಡಿತ ಇಲ್ಲಿರಲಾರೆ." ಎಂದಳು ಅವಳು. ಮುಖದಲ್ಲಿ ಭಯ ಉದ್ವೇಗಗಳು ತಾಂಡವಾಡಿದುವು. ಕ್ಷೀಣಿತ ಮೈ ಸಿಡಿದೊಡೆಯುವಷ್ಟು ಎದೆ ಏರಿ ಇಳಿಯಹತ್ತಿತು....ರೋಗ ಪೀಡಿತವಾದಾಗ ಅಂಜದ ಹೆಣ್ಣು ರೋಗ ವಿಮುಕ್ತವಾಗಲು ಎಷ್ಟು ಹೆದರು ತ್ತಿದೆ? ಇಂತಹವರಿಗೆ ತಿಳಿಯ ಹೇಳುವುದೂ ಸಹ ಕಷ್ಟ....ಎಂದುಕೊಂಡಳು, ಡಾ|| ಜಮುನಾ.

ಹೆಣ್ಣನ್ನು ಸಾಮಾಜಿಕ ಬಂಧದೊಳಗೆ ಕೂಡಿ, ಅಂತಃಶ್ಚೇತನವನ್ನು ಜಡಸ್ಥಿತಿಯಲ್ಲಿಟ್ಟು ಪಶುಗಳನ್ನು ಸಾಕುವಂತೆ ಸಾಕುವುದರಿಂದ ಗಂಡಸಿಗೆ ಯಾವ ಆನಂದವೋ....ಉಜ್ವಲವಾದ ಮಾನವ ಜೀವನ ಸ್ವಾರ್ಥಪರತೆಯ ಪರ ಮಾವಧಿಯಲ್ಲಿ ಸಿಕ್ಕಿ ಗೋಳಿಡುತ್ತಿದೆ. ದೂರ ಭವಿಷ್ಯತ್ತಿನಲ್ಲಿ ಒಂದಲ್ಲ ಒಂದು ದಿನ ಸ್ತ್ರೀ ಧೀಮಂತಳಾಗಿ ಪುರುಷ ಸರಿಸಮಾನತೆಯನ್ನು ದೊರಕಿಸಿಕೊಳ್ಳು ವುದು ಅಸಂಭವವೇನಲ್ಲ....ಕೋಟಿ ಕೋಟಿ ಕೋಟಿ ಕೋಟಿ ಹೆಂಗಳೆಯರ ರುದ್ಧ ಕಂಠದ ಆರ್ತನಾದ ಭಾರತ ಭೂಮಿಯ ನಿಃಶ್ಚೇತನವಾದ ಚೇತನವನ್ನು ಬಡಿದೆಬ್ಬಿಸಿ, ಅತೀತಯುಗದ ಗಾಢಾಂಧಕಾರದ ಸತ್ವರಹಿತ ಒಣ ಆದರ್ಶ ಗಳನ್ನು ಕಿತ್ತೊಗೆದು, ದಿಟ್ಟಮಾರ್ಗ ಯೋಗದಿಂದ ದೂರಗಮ್ಯವನ್ನು ಸೇರುವು ದರಲ್ಲಿ ಅನುಮಾನವೂ ಇಲ್ಲ. ಆದರೂ ಆ ಸುದಿನ ಬರುವವರೆಗೆ ಇನ್ನೆಷ್ಟು ಕೋಟಿ ಕೋಟಿ ಅಬಲೆಯರ ಬಲಿದಾನವಾಗಬೇಕೋ........ಕಮುಲೇಶ್ ಯೋಚನಾಕ್ರಾಂತಳಾಗಿ ನಡೆಯುತ್ತ ನಿಟ್ಟುಸಿರು ಬಿಟ್ಟಳು.

ಪಕ್ಕದ ವಾರ್ಡಿನಲ್ಲಿ ಸಾಲಾಗಿನ ಮಂಚಗಳಲ್ಲಿ ನಾನಾ ಬಗೆಯ ರೋಗಿ ಗಳು ಮೈ ಸೊಟ್ಟಮಾಡಿ ಮಲಗಿದ್ದಾರೆ. ಉಟ್ಟ ಉಡುಪು ಅಸ್ತವ್ಯಸ್ತವಾ ಗಿದ್ದು ತಲೆದಿಂಬಿನ ಮೇಲೆ ಕೂದಲ ರಾಶಿಯು ತುಂಬಿ ಹರಡಿದೆ. ಸುಕ್ಕು ಗಟ್ಟಿದ ಚರ್ಮ, ಕಾಂತಿಯಳಿದ ಕಣ್ಣುಗಳು, ನೆತ್ತರಾರಿ ಬತ್ತಿ ಬಾಡಿದ ಮೈ ಒಟ್ಟಿನಲ್ಲಿ ಬಿಳಿ ಹೊದಿಕೆಯಡಿ ಜೀವಚ್ಛವಗಳಂತೆ ಒರಗಿದ್ದಾರೆ ಎಂದರೆ ತಪ್ಪಲ್ಲ.

ಕಳೆದ ಎರಡು ದಿನಗಳಿಂದ ಪ್ರಜ್ಞಾವಿಹೀನ (COMA) ಸ್ಥಿತಿಯಲ್ಲಿದ್ದ ತುಂಬು ಪ್ರಾಯದ ತರುಣಿಯ ಮುಖದಲ್ಲಿ ಬೆವರಿನ ಕಣಗಳು ಮೂಡಿವೆ.

ಕೈ ಕಾಲುಗಳನ್ನು ಮುಟ್ಟಿದರೆ, ಚಿವುಟಿದರೆ ತಿಳಿದುಕೊಳ್ಳುವಷ್ಟು ಪ್ರಜ್ಞೆ ಮರಳಿ ಬಂದಿದೆ. ಅವಳ ಸ್ಥಿತಿಗತಿ ಕ್ಷಣೇ ಕ್ಷಣೇ ಆಶಾದಾಯಕವಾಗುತ್ತಿರುವುದನ್ನು ನೋಡಿ ಡಾಕ್ಟರು ಸಮಾಧಾನದಿಂದ ನುಡಿದರು- "ಇನ್ನು ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಅವಳಿಗೆ ಪೂರ್ಣ ಪ್ರಜ್ಞೆ ಬರಲಿದೆ."

ಅವಳ ಪತಿ ಊರಿನಲ್ಲಿಲ್ಲದಿದ್ದಾಗ ಪ್ರಜ್ಞೆ ತಪ್ಪಿ ಬಿದ್ದಿದ್ದ ಅವಳನ್ನು ನೆರೆಮನೆಯವರು ಕರೆತಂದು ಆಸ್ಪತ್ರೆಗೆ ಸೇರಿಸಿದ್ದರು. ಉಡಿಗೆ ತೊಡಿಗೆಗಳಲ್ಲಿ ಗಾಂಪತನವನ್ನು ಸ್ವಚ್ಛಂದವಾಗಿ ಪ್ರದರ್ಶಿಸಿದ ಹಳ್ಳಿಯ ಮುಗ್ಧೆ, ಯಾವ ಕಾರಣವೋ ವಿಷ ತೆಗೆದುಕೊಂಡಿದ್ದು ಪರಿಸ್ಥಿತಿ ತೀರ ಹದಗೆಡುವ ಮುನ್ನ ಆಸ್ಪತ್ರೆಗೆ ಸೇರಿಸಲ್ಪಟ್ಟು ಸಾವು ಬದುಕುಗಳಂಚಿನಲ್ಲಿ ಎಳೆ ಜೀವ ಹೋರಾಡುತಿತ್ತು.

ಹಾಸಿಗೆಯಿಂದ ಹಾಸಿಗೆಗೆ ಚಲಿಸಿ ರೋಗಿಗಳ ಕಷ್ಟ ಸುಖಗಳನ್ನು ಕೇಳಿ ಚಿಕಿತ್ಸೆಯ ವಿವರವನ್ನು ಬರೆದಿಟ್ಟು 'ರೌಂಡು' ಮುಗಿಸುತ್ತಿದ್ದ ಡಾ|| ಜಮುನಳ ಬೆಂಬಿಡಿದು ನಡೆಯುತಿತ್ತು ಹುಡುಗಿಯರ ದಳ. ವಾರ್ಡಿಂದ ವಾರ್ಡಿಗೆ ದಾಳಿಯಿಟ್ಟು ಕೆಲಸ ಕಾರ್ಯ ಮುಗಿಸಿ ಹೆಗಲ ಭಾರ ಇಳಿಸುವಾಗ ಹೊತ್ತು ನೆತ್ತಿಗೇರುತಿತ್ತು. ದೂರ ನೋಟಕ್ಕೆ ಸೂಜಿಯಂತೆ ಚೂಪಗೆ ಹರಿದ ಕಾರಿಡಾರಿನಲ್ಲಿ ನಡೆಯುತಿದ್ದ ಡಾ|| ಜಮುನಳನ್ನು ತಡೆದು ಹಿರಿಯ ಸೇವಿಕೆ (NURSE) "ಆ ಹೆಣ್ಣಿಗೆ ಪ್ರಜ್ಞೆ ಬಂದಿದೆ, ನೋಡಿ ಡಾಕ್ಟರ್!" ಎಂದು ಅತ್ಯಂತ ಉತ್ಸಾಹದಿಂದ ನುಡಿದಳು. ತುಷ್ಟ ತುಟಿಗಳಲ್ಲಿ ನಸುನಗು ಮೂಡಿತು. "ಓ!" ಎನ್ನುತ್ತ ಡಾ|| ಜಮುನಾ ನಡಿಗೆಯನ್ನು ಚುರುಕುಗೊಳಿಸಿದಳು.

ಅದೇ ದಾರಿಯಲ್ಲಿ ಹಿಂದಿರುಗುತಿದ್ದ ಎಲ್ಲರೂ ಪುನಃ ಅದೇ ವಾರ್ಡಿಗೆ ಹೋದರು. ಸುಪ್ರೀತ ಭಾವದಿಂದ ಅವಳ ಹಣೆಯ ಮೇಲೆ ಕೈಯಿಟ್ಟು "ನಿನ್ನ ಹೆಸರೇನಮ್ಮಾ ?" ಎಂದಳು ಡಾ|| ಜಮುನಾ.

ಸುತ್ತುಮುತ್ತಿನ ಹೊಸ ಮುಖಗಳನ್ನು ನೋಡಿ ಹುಡುಗಿ ಕಂಗಾಲಾಗಿ ನಿರಿನಿರಿ ನಿಟ್ಟಿಸಿದಳು, ಮುಗ್ಧ ಶಿಶುವಿನಂತೆ.

"ನಿನ್ನ ಹೆಸರೇನಮ್ಮಾ ?" ಅದೇ ಪ್ರಶ್ನೆ ಪುನಃ ಮೊಳಗಿತು.

ಒಂದೇ ಉಸುರಿಗೆ ಅವಳೆಂದಳು "ನಾಗಮಣಿ"

"ನಾಗಮಣೀ! ಹೇಗಿದ್ದಿ ಈಗ ?"

ಹುಡುಗಿಗೆ ಆಕ್ಷಣ ಏನು ಹೇಳಬೇಕೋ ಹೊಳೆಯದು. ತಾನೆಲ್ಲಿದ್ದೇನೆ ಎಂಬುದು ಸಹ ಒಂದು ಸಮಸ್ಯೆ. ತನ್ನವರಾರೂ ಇಲ್ಲದ ಅಪರಿಚಿತ ವಲಯದಲ್ಲಿ ಸುತ್ತಮುತ್ತ ಹಲವು ಮಂದಿ ಇದ್ದರೂ ತಾನು ಏಕಾಕಿ....ತನುಮನಗಳನ್ನು ಹಲವು ಚಿಂತೆಗಳು ಮುಸುಗಿ ಆಕೆಯನ್ನು ಮೂಕಿಯನ್ನಾಗಿಸಿದುವು.

"ಇದು ಆಸ್ಪತ್ರೆ. ನಾನು ಇಲ್ಲಿಯ ಡಾಕ್ಟರು. ನಿನಗೆ ಯಾವ ಭಯವೂ ಇಲ್ಲ. ಯೋಚಿಸಬೇಡ ಮಗೂ." ಎಂದು ಅಭಯ ಪ್ರಧಾನ ಮಾಡಿದಳು ಡಾ|| ಜಮುನಾ."

"ನನಗೆ ಬದುಕು ಬೇಡವೇ ಬೇಡ. ಒಂದು ಗುಟುಕು ವಿಷ ಕೊಟ್ಟುಬಿಡಿ, ತಾಯಿ!"

"ಹಾ! ಹಾಗೆನ್ನಬಾರದು....ನಿನ್ನ ಯಜಮಾನರೆಲ್ಲಿದ್ದಾರೆ?"

ನುಡಿ ಕಿವಿಯಮೇಲೆ ಬೀಳುತ್ತಲೂ ಮುಖ ನಸುಕಪ್ಪು ತಳೆಯಿತು. ಹುಡುಗಿ ಮಾತಾಡದೆ ಕಂಗೆಟ್ಟವಳಂತೆ ಸುಮ್ಮನಾದಳು. ಅದೇ ಸಮಯದಲ್ಲಿ ದಟ್ಟ ಪುಷ್ಟವಾದ ವ್ಯಕ್ತಿಯೊಂದು ಒಳಗಡೆ ಬಂದಿತು. ಆ ಕಾಳವರ್ಣದ ರುದ್ರಕಾಯವನ್ನು ನೋಡುತ್ತಲೂ ಮುಖದ ಮೇಲೆ ಹೊದಿಕೆಯನ್ನೆಳೆದುಕೊಂಡಳು ನಾಗಮಣಿ. ಅವನು ಅವಳನ್ನು ಕರೆತಂದವನಲ್ಲವಾದುದರಿಂದ ಅವನಾರೆಂಬುದು ಯಾರಿಗೂ ತಿಳಿಯದು. ಅಪರಿಚಿತನನ್ನು ನಿಟ್ಟಿಸಿ ನೋಡಿ "ನೀವು ಯಾರು?" ಎಂದಳು ಡಾ|| ಜಮುನಾ.

"ನಾನು ನಾಗಮಣಿಯ ಪತಿ ತ್ರಿಲೋಕ ಸುಂದರ್ ಜೋಷಿ, ಇಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರ್."

"ನಾಗಮಣಿಗೆ ಪ್ರಜ್ಞೆ ತಪ್ಪಿದುದು ಹೇಗೆ?"

"ಏನಾಯಿತೆಂಬುದು ನನಗೆ ತಿಳಿಯದು. ಕಳ್ಳನನ್ನು ಬೆನ್ನಟ್ಟಿ ಹೋಗುವ ಪ್ರಸಂಗ ಬಂದುದರಿಂದ ನಾನು ಹೊರ ಹೋಗಿದ್ದೆ. ಮನೆಗೆ ಬಂದನಂತರ ವಿಷಯ ತಿಳಿಯಿತು....ನಾಗಮಣಿ ವಿನಾಕಾರಣ ಹೆದರಿಕೊಳ್ಳುತ್ತಾಳೆ."

"ಬಹುಶಃ ನಿಮ್ಮನ್ನು ನೋಡಿಯೇ ಹೆದರಿರಬೇಕು."

ಎಲ್ಲರ ಮುಖದ ಮೇಲೂ ನಸುನಗೆ ಅರಳಿತು.

ಅವನೂ ನಗುತ್ತಾ ಅಂದ "ಶುದ್ಧ ಹಳ್ಳಿಗಾಡಿನ ಹುಡುಗಿ. ಇನ್ನು ಹೊಸದಾಗಿ ಇಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಬೇಕು."

"ನಿಮ್ಮ ಕಾಕಿಯ ಕವಚದೊಳಗೆ ಮಾನವ ಹೃದಯವಿದೆ ಎಂಬುದನ್ನು ದಯಮಾಡಿ ತೋರಿರಿ. ಅದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ" ಎಂದಳು ಡಾ|| ಜಮುನಾ. ದನಿ ಎದೆಯಾಳದಿಂದ ಹರಿದು ಬಂತು.

ತ್ರಿಲೋಕ ಸುಂದರ ಜೋಷಿ ಮಾತಾಡಲಿಲ್ಲ. ಮುಖಭಾವ ಗಂಭೀರ ವಾಯಿತು. ನಸು ತಲೆ ಬಾಗಿದ.

"ನಾಗಮಣಿ ಇನ್ನೂ ಎಳೆ ವಯಸ್ಸಿನ ಹುಡುಗಿ. ಅವಳನ್ನು ಮಗುವಿನಂತೆ ಕಾಪಾಡಿಕೊಳ್ಳಬೇಕಾದುದು ನಿಮ್ಮ ಧರ್ಮ...."

ಭಯ ಭೀತಿಯ ಪಾಲಾಗಿದ್ದ ಹುಡುಗಿ ಮಿಸುಕಾಡಲಿಲ್ಲ. ಡಾ||ಜಮುನಾ ನಾಗಮಣಿಯ ಹೊದಿಕೆಯನ್ನು ಸರಿಸಲು ಪ್ರಯತ್ನಿಸಿದರೆ ಅವಳು ಅದನ್ನು ಬಿಡದೆ ಇನ್ನಷ್ಟು ಬಿಗಿಯಾಗಿ ಹಿಡಿದುಕೊಂಡಳು.

ಜೋಷಿ ಗೊಗ್ಗರದನಿಯಲ್ಲಿ ಅಂದ "ನಿಮ್ಮ ಮಾತಿನ ಧಾಟಿಯನ್ನು ನೋಡಿದರೆ ನಾನೇ ಕಾರಣ ಎಂಬಂತಿದೆ."

"ಎಷ್ಟೆಂದರೂ ನೀವು ಪೋಲಿಸ್ ಗರಡಿಯಲ್ಲಿ ತಯಾರಾದ ವ್ಯಕ್ತಿ. ನಿಮ್ಮನ್ನು ನಾಗಮಣಿಯಂತಹ ಮುಗ್ಧೆ ಅರ್ಥ ಮಾಡಿಕೊಳ್ಳುವುದು ಸಹ ಕಷ್ಟವೇ. ಅಂದಮೇಲೆ ನೀವು ನಿಮ್ಮ ಹೃದಯವನ್ನು ಬಿಚ್ಚಿ, ನಿಮ್ಮ ಹೃದಯದಲ್ಲೂ ಕನಿಕರವಿದೆ ಎಂಬುದನ್ನು ತೋರದ ಹೊರತು ಗತ್ಯಂತರವಿಲ್ಲ, ಅದೃಷ್ಟವಶಾತ್ ವೇಳೆ ಮೀರುವ ಮುನ್ನ ಔಷಧೋಪಚಾರ ದೊರಕಿ ಬದುಕಿಕೊಂಡಿದ್ದಾಳೆ. ಇಲ್ಲದಿದ್ದಲ್ಲಿ ಮೃತ್ಯುವಿನ ಪಾಲಾಗುತ್ತಿದ್ದಳು. ಇನ್ನು ಕಾಪಾಡಿಕೊಳ್ಳುವ ಭಾರ ನಿಮ್ಮದು."

ಕಾಳಮೇಘದಲ್ಲಿ ಸೆಳೆಮಿಂಚು ಸುಳಿದಂತೆ ಅವನ ಮುಖದಲ್ಲಿ ಪ್ರಸನ್ನತೆ ಒಡೆದು ಮೂಡಿತು. ಒಡನೆ ಅವನೆಂದ "THANK YOU DOCTOR."

ಅವರ ಸಂಭಾಷಣೆಯನ್ನು ಕೇಳುತಿದ್ದ ಎಳೆಯರ ಹೃದಯ ಕುಂಡಲಿನಿಗೆ ಕಾಳೋರಗ ಹೊಕ್ಕಂತಾಯಿತು.

'ರೌಂಡ್' ಮುಗಿಸಿದ ನಂತರ ಡಾಕ್ಟರುಗಳ ದಳ ದಿಕ್ಕಾಪಾಲಾಗಿ ತಮ್ಮ ತಮ್ಮ ಆಫೀಸಿನ ಕಡೆಗೆ ತೆರಳಿದ ಮೇಲೆ ನಾರೀಮಣಿಯರ ದಳ ಕ್ಯಾಂಟೀನಿನ ಹಾದಿ ತುಳಿಯಿತು. ಕಾರಿಡಾರು ಹತ್ತುಮಾರು ಸವೆಯುವುದರೊಳಗಾಗಿ ಬಲಭಾಗದಿಂದ ಹಾದಿಗೆ ಜಿಗಿದ ಸುಧಾರಾಣಿ, ಜುಬೇದಾಬೇಗಂ ನಗುಮುಖ

ಿಂದ ನಿಂತರು. ಕೊರಳಲ್ಲಿ ಸ್ಟೆತಸ್ಕೋಪಿನ ಹಾರ ಜೋಲಾಡುತಿತ್ತು.

"ನೀವು ಯಾವ ಕಡೆಗೆ ಹೊರಟಿದ್ದೀರೆಂಬುದು ಗೊತ್ತು." ಜುಬೇದಾ ಹುಬ್ಬೇರಿಸಿದಳು.

ಕ್ಷುದ್‌ಬಾಧೆಯು ಕೆಚ್ಚಿನಂತೆ ಜ್ವಲಿಸುವಾಗ ವಯೋಮಾನವಾಗಲೀ ಕಾಲಮಾನವಾಗಲೀ ಅಡ್ಡಿಯಾಗದು........ಅಂತರಂಗದ ಭಾವತರಂಗಿಣಿಯು ಮೃದುಮಧುರ ನೂಪುರದ ಟಿಂಟಿಣಿಯು ಶುಷ್ಕ ನಗೆಯಾಗಿ ಉತ್ತರ ನೀಡಿತು.

"ಕ್ಯಾಂಟೀನ್ ನೆನೆಸಿಕೊಂಡರೆ ಹಸಿವು ಒಂದೇ ಬಾರಿಗೆ ಅಡಗಿ ಹೋಗುತ್ತೆ." ವಿಜಯಾ ಬಾಯಿ ಸೊಟ್ಟ ಮಾಡಿದಳು. ಮನಸ್ಸು ಮುಜುಗರ ವನ್ನುಂಡಿತು ಹಳೆಯ ನೆನಪಿನಿಂದ.

ಐವರೂ ಕೂಡಿ ಮುಂದೆ ಹೊರಟರು. ಅಂಗಳವನ್ನು ದಾಟಿ ಹಾದಿಗೆಹೆಜ್ಜೆ ಹಾಕುವಷ್ಟರಲ್ಲಿ ಎದುರುಗಡೆಯಿಂದ ಡಾ|| ಕೃಷ್ಣಾಭಾಪಟ್ ಡಾ|| ರಘುರಾಂ ಡಾ|| ಗಣೇಶ್ ನಂದಾರವರು ಸಾಲಾಗಿ ಎದುರಾದರು.

ಹುಡುಗಿಯರು ನಗುಮುಖದಿಂದ "ಪ್ರಣಾಮ್ ಸರ್!"

"ಎಲ್ಲಾ ಕ್ಯಾಂಟೀನಿನ ಕಡೆ ಹೊರಟಿರೋ?"

"ಬಿಸಿ ಬಿಸಿ ಮಸಾಲೆ ದೋಸೆ ಕರೆ ನೀಡಿರಬಹುದು!"

ಎಲ್ಲರ ಮುಖಗಳಲ್ಲೂ ನಸು ಲಜ್ಜೆಯ ರಂಗೊರೆಯಿತು.

"ಹ್ಞೂ........ನಮ್ಮಿಂದೇಕೆ ತಡೆ? ಹೋಗಿ, ಹೋಗಿ!" ಎಂದರು ತಿಳಿ ಹಾಸ್ಯವಾಣಿಯಲ್ಲಿ ಡಾ|| ರಘುರಾಂ.

ಎಳೆನಗು ಎಲ್ಲೆಡೆಯೂ ಮರ್ಮರಿಸಿತು.

ಹಿರಿಯ ವೈದ್ಯರಿಗೆ ವಂದನೆ ಸಲ್ಲಿಸಿ ಹುಡುಗಿಯರ ದಳ ಮುಂದೆ ಸಾಗಿತು. ಕ್ಯಾಂಟೀನಿನ ಮೆಟ್ಟಿಲು ಹತ್ತುವ ಮುನ್ನ ಕಣ್ಣುಗಳು ಬಲಗಡೆ ಮೇಜುಗಳ ನ್ನಾಕ್ರಮಿಸಿದ ಹುಡುಗರೆಡೆಗೆ ಹರಿದು ಬೇರೆಡೆಗೆ ಜಿಗಿದುವು. ಶುಭ್ರ ವಸ್ತ್ರ ಧಾರಿಣಿಯರು ಸಾಲುಸಿರಿಯನ್ನು ಉಂಗುಷ್ಟದಿಂದ ಚಿಮ್ಮುತ್ತಾ ಒಳಬರು ತ್ತಲೂ ಕೊಂಕು ನಗೆ ಬೀರಿದರು ಹುಡುಗರು.

"ನಿಮಗೇನು ಬೇಕು, ಇಡ್ಲಿಯೋ ದೋಸೆಯೋ?" ಕೇಳಿದ ಬಲರಾಂ ಮಿತ್ರ.

"ಕಾಫಿಯೋ ಚಹವೋ?" ದನಿಗೂಡಿಸಿದ ಚಂದ್ರಕಾಂತ್.

"ಹೇಮಲಾಲ್ ಚಂದಾನಿ ಪಾರ್ಟಿ ಕೊಡುವುದಾದರೆ ಎಲ್ಲಾ ಬೇಕು." ಗಂಭೀರವಾಗಿ ನುಡಿದಳು ಕಮಲೇಶ್. ಜೊತೆಗಾರರೂ ಹಾಗೆಂದೇ ನುಡಿದರು.

"ಪಾರ್ಟಿ ಕೊಡುವುದು ಮದುವೆಯಾಗುವವರಲ್ಲ, ಗೆಳೆಯರು !"

ಮೇಜನ್ನು ಕುಟ್ಟಿ ಅಜಂತಾ ಜೈರ್ಟ ಅಂದ "ಹೇಮಲಾಲ್ ಪಾರ್ಟಿ ಕೊಡದಿದ್ದರೆ ಬಿಡುವವರ್ಯ್ಯಾರು... ? ಪಾರ್ಟಿ ಕೊಟ್ಟರೆ ಮದುವೆಗೆ ಅಟೆಂಡೆನ್ಸ್! ಇಲ್ಲದಿದ್ದರೆ ಇಲ್ಲವೇ ಇಲ್ಲ!"

"ನಿಜ.....ನಿಜ !" ಅನೇಕ ದನಿಗಳು ಮೊಳಗಿದುವು.

ಹೇಮಲಾಲ್ ಚಂದಾನಿ ಒಂದು ಕ್ಷಣ ಯೋಚಿಸಿ ಅಂದ "ಈ ವಾರದ ಕೊನೆಯಲ್ಲಿ ಒಂದು ಸಣ್ಣ ಪಾರ್ಟಿ. ನೀವೈದು ಮಂದಿ. ನಾವೈದು ಮಂದಿ. ಸ್ಥಳ ಎಲ್ಲಿ ಎಂಬುದನ್ನು ಯೋಚಿಸಿ ಹೇಳುವೆ." ಮುಖದಲ್ಲಿ ಮೂಡಿದ ಹಸನಾದ ನಗೆ ಸಂತಸದ ಸುಗ್ಗಿಯನ್ನು ಹೊರಚೆಲ್ಲಿತು.

ಒಮ್ಮೆಲೇ ಹರ್ಷೋದ್ಗಾರವಾಯಿತು. ಹುಡುಗಿಯರು ನಗುಮುಖದಿಂದ ಇಡ್ಲಿಗೆ ಕೈಹಚ್ಚಿದರು. ಇಂದು ಮನೆಗೆ ಹೋಗಲು ಬಿಡುವಿರಲಿಲ್ಲವಾದುದರಿಂದ ಕಾಫಿ ಮನೆಯ ಇಡ್ಲಿಭೋಜನ ಮುಗಿಸುವ ಹಂಚಿಕೆ ಎಲ್ಲರದು. ಒಂದೇ ಸಮನೆ ಹಾಸ್ಯದ ಚಟಾಕಿ ಹಾರಿಸುತಿದ್ದ ಹುಡುಗರು ರುಚಿ ಅರುಚಿಯನ್ನೂ ಕಂಡುಕೊಳ್ಳದೆ ನುಂಗಿದರು.

"ಹೇಮಲಾಲ್ ಈ ವರ್ಷ ಪುಸ್ತಕ ಮುಟ್ಟಿಯೇ ಇಲ್ಲ. ಆಸ್ತಿವಂತ ಮಾವ; ಒಬ್ಬಳೇ ಮಗಳು. ಇನ್ನು ಡಾಕ್ಟರಾದಂತೆಯೆ.....!"

"ಮಾವನ ಮನೆಯ ಕಸವಾಗದಿದ್ದರೆ ಕೇಳು !"

"ಅಂತೂ ಅದೃಷ್ಟವಂತ ಕಣಯ್ಯಾ."

ಸಹ ವಿದ್ಯಾರ್ಥಿಗಳ ನಗೆ ಮಾತುಗಳನ್ನು ಆಲೈಸುತ್ತಾ ದೋಸೆ ಮೆಲ್ಲುತಿದ್ದ ಹೇಮಲಾಲ್ ಚಂದಾನಿ. "ಇನ್ನು ಮೇಲೆ ನಮ್ಮ ಮಾವನಿಗೆ ನಾನೇ ಡಾಕ್ಟರ್.... ನೋಡುತ್ತಿರಿ!"

"ನೀನು ಡಾಕ್ಟರಾಗುವುದರೊಳಗೆ ಎರಡು ಮಕ್ಕಳ ತಂದೆಯಾಗಿರುತ್ತಿ .. ! ಆದಂತೂ ನಿಜ."

ಒಡನೆ ನಗುವಿನ ಗುಲ್ಲೆದ್ದಿತು. ಅವರ ಮಾತುಗಳಲ್ಲಿ ಹುಡುಗಿಯರು ಪಾಲುಗೊಳ್ಳದಿದ್ದರೂ ನಗೆಯಲ್ಲಿ ಪಾಲ್ಗೊಂಡರು.

ಅಧ್ಯಾಯ

೧೨

ಊರ್ಮಿಳಾ ನಗುವ ನಂದನೊಡನೆ ಆಗಮಿಸಿದಾಗ ಸಂತಸದ ಅಲೆ ತುಂಬಿ ಬಂದರೂ ಉಕ್ಕಿ ಹರಿಯದಾಯಿತು. ಆರ್ಥಿಕ ಸ್ಥಗಿತ ಆನಂದಲಹರಿಗೆ ಅಲ್ಲಿಂದಲ್ಲೆ ಅಡ್ಡಗಟ್ಟಿ ಹಾಕಿತು. ಕೈಯಲ್ಲಿ ಕೆಲಸ ಸಾಗದ ಮುರಳೀಧರ ದಲ್ಭಾಲಿ ಪೃತ್ತಿಯಲ್ಲಿ ತತ್ತರಿಸಿ ಬೆಂದ ಹೊಲವಲ್ಲಿ ಅಲೆಯುವ ಹೊಲಮೊಡೆಯನಂತಾದ. ಶ್ರೀಧರ ದಲ್ಭಾಲಿ ಮಾಸ್ಟರ್ ಡಿಗ್ರಿ ಪಡೆದರೂ ಪ್ರಥಮ ಶ್ರೇಣಿಯಲ್ಲಿ ನಿಲ್ಲಲಾಗದುದರಿಂದ ಕೆಲಸದ ಬೇಟೆಯಲ್ಲಿ ಸೋಲೊಪ್ಪಿ, ತನ್ನ ಗುಮಾಸ್ತಗಿರಿಯನ್ನೇ ಮುಂದುವರಿಸಿಕೊಂಡು ಉದ್ಯೋಗದೊಂದಿಗೆ ಕೆಲಸವನ್ನೂ ಅರಸತೊಡಗಿದ. ಸಿರಿಯ ಔನ್ನತ್ಯವಿಲ್ಲದಿದ್ದರೂ ಕಾಸಿಗಾಗಿ ಕೈಯೊಡ್ಡುವ ಔಚಿತ್ಯ ಬೀಳಲಿಲ್ಲ.

ನಾನಾ ಕಷ್ಟಕಾರ್ಪಣ್ಯಗಳು ಬಲೆಯೊಡ್ಡಿದರೂ ಕೊನೆಯ ಹಂತವನ್ನು ಸರಾಗವಾಗಿ ಏರಿ ಪ್ರಥಮ ಶ್ರೇಣಿಯಲ್ಲಿ "ಡಾಕ್ಟರ್" ಎಂಬ ಅಭಿಧಾನವನ್ನು ಪಡೆದಳು ಕಮಲೇಶ್. ಸುತ್ತಮುತ್ತ ಹಲವಾರು ದನಿಗಳು ಒಂದೇ ಬಾರಿಗೆ ಅಭಿನಂದನೆಗಳನ್ನು ಸಲ್ಲಿಸಿದಾಗ ಸಂಕಷ್ಟಗಳು ಒಮ್ಮೆಲೇ ಮರೆತು ಹೋದುವು. ಆ ಸುಮುಹೂರ್ತದಲ್ಲಿ ಆನಂದಾತಿಶಯದಿಂದ ಎಲ್ಲರಿಗೂ ಪ್ರತಿವಂದನೆ ಸಲ್ಲಿಸಿದಳು. ಓರಗೆಯ ಹುಡುಗರೂ ಹುಡುಗಿಯರೂ ಅದೇ ವರ್ಷ ಕೊಂಚ ಹಿಂಚುಮುಂಚಾಗಿ "ಡಾಕ್ಟರ್" ಎಂಬ ಅಭಿಧಾನವನ್ನು ಪಡೆದು ಜಯಭೇರಿ ಹೊಡೆದರು.

ಕಮಲೇಶ್ ತನ್ನ ಭಾಗದ ಹಣವನ್ನು ಮನೆಗಾಗಿ ಉಳಿಸಿಕೊಂಡಿದ್ದರೆ ಇಷ್ಟೊಂದು ಆರ್ಥಿಕ ಮುಗ್ಗಟ್ಟು ಬರುತ್ತಿರಲಿಲ್ಲ. ಯಾರ ಮಾತೂ ಕೇಳದೆ ಪರರಿಗೆ ನೀಡಿದುದು ಅಕ್ಷಮ್ಯ ಅಪರಾಧ ಎಂಬ ತರ್ಕಕ್ಕೆ ಶರಣಾದ ಊರ್ಮಿಳಾ ತನಗೆ ತಾನೇ ಸಂಸಾರ ರಥದ ಸಾರಥ್ಯವನ್ನು ಕೈಕೊಂಡಳು. ಒಡಲ ಸಂಕಟವೆಲ್ಲಾ ಕಂಬನಿಯಾಗಿ ವಾಗ್ಬಾಣಗಳಾಗಿ ಹರಿಯತೊಡಗಿದುವು. ಸ್ವರ್ಣ

ಮಾಲಿನಿ ಎಲ್ಲಕ್ಕೂ ಒಂದೇ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸುವಳು.... ಎಲ್ಲಾ ಈಶ್ವರೇಚ್ಛೆ!

ಕಮಲೇಶ್ ಅಂದಿನ ಟಪ್ಪಾಲಿನಲ್ಲಿ ಕೈಯಾಡಿದಾಗ ಕಣ್ಣಿಗೆ ಬಿದ್ದ ಕಾಗದ,

....ನೀನು ಡಾಕ್ಟರಾದುದನ್ನು ತಿಳಿದು ಎಷ್ಟು ಸಂತಸವೋ ಹೇಳಿ ಪೂರೈಸಲಾರೆ. ಒಂದಲ್ಲ ನೂರು ಬಾರಿ ನಿನ್ನನ್ನು ಅಭಿನಂದಿಸಿದರೂ ಸಾಲದು. ಇನ್ನಾದರೂ ನಿನ್ನ ಎಲ್ಲಾ ಸಂಕಷ್ಟಗಳೂ ಕಳೆಯಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವೆ. ದೇವರು ದಯಾಮಯ....ಅವನು ನಿನ್ನನ್ನು ಖಂಡಿತ ಅನುಗ್ರಹಿಸುತ್ತಾನೆ. ನಿನ್ನಂತಹ ಹೆಣ್ಣಿಗೆ....ಮಾ-ನಂತಹ ತಾಯಿಗೆ ಇನ್ನೆಂದೂ ಕಷ್ಟಕೊಡಲಾರ ಎಂದೇ ನನ್ನ ದೃಢವಾದ ಭಾವನೆ. ಲೀಲ ಶೀಲ ನಿನ್ನನ್ನು ಸದಾ ಜ್ಞಾಪಿಸಿಕೊಳ್ಳುತ್ತಾರೆ. ಚಿಕ್ಕವರಿಬ್ಬರೂ ಮನೆಯೆಲ್ಲಾ ಓಡಾಡುತ್ತಾರೆ. ಕಮಲೇಶ್, ನನ್ನಿಂದ ನೀನು ತೊಂದರೆಗೊಳಗಾಗಬೇಕಾಯಿತಲ್ಲಾ ಎಂಬುದು ಒಡಲ ಸಂಕಟ. ಏನು ಮಾಡಲಿ ಹೇಳು? ಭಗವಂತ ನನ್ನನ್ನು ಗಂಡಾಗಿ ಹುಟ್ಟಿಸಿದ್ದರೆ ನನ್ನಿಂದ ನಿನಗೆ ಖಂಡಿತವಾಗಿಯೂ ತೊಂದರೆಯಾಗುತ್ತಿರಲಿಲ್ಲ. ಎಲ್ಲಾ ನನ್ನ ಕರ್ಮ....

ಕಮಲೇಶಳ ಉಜ್ವಲ ನಯನಗಳು ನಿಶ್ಚಲವಾಗಿ ಬೆಳಗಿದುವು.... ದುಃಖಿಗಳಾದ ಅಜ್ಞಾನಿಗಳಾದ ಮುಗ್ಧರಾದ ಹೆಣ್ಣುಗಳು ಸತ್ವರಹಿತ ಜೀವನದಿಂದ ರೋಗ-ದಾರಿದ್ರ್ಯಗಳ ವಶರಾಗುತಿದಾರೆ. ಈ ದುಃಖಭರಿತ ಜೀವನವನು ಉದ್ಧರಿಸುವುದರಲ್ಲಿರುವ ಸಂತೃಪ್ತಿ ಇನ್ನಾವ ಮಹಾಕಾರ್ಯದಲ್ಲಿಯೂ ಇರುವುದಿಲ್ಲ ಎಂದುಕೊಂಡಳು.

ಧೋ ಧೋ ಎಂದು ಒಂದೇಸಮನೆ ಸುರಿಯುತಿತ್ತು ಕಾರ್ಗಾಲದ ಘೋರ್ಗರೆಯುವ ಕಾರ್ಮಳೆ. ಗುಡುಗು ಮಿಂಚು ಸಿಡಿಲುಗಳ ಅವ್ಯಾಹತ ದಾಳಿಯೂ ನಡೆದಿತ್ತು. ಅಂಬರದ ನೀಲಿಯನ್ನು ಕಾರ್ಗಾಲದ ಕಗ್ಗಪ್ಪು ಕರಿಯ ನಾಲಿಗೆಗಳನ್ನು ಚಾಚಿ ಚಾಚಿ ಕಬಳಿಸುತ್ತಿದೆ. ಹೆಮ್ಮರಗಳು ಭೀಕರ ಸದ್ದಿನೊಡನೆ ಧರೆಗುರುಳಿದುವು. ಆಸ್ಪತ್ರೆಗೆ ಹೋದ ಕಮಲೇಶಳಿನ್ನೂ ಹಿಂದಿ

ರುಗಿರಲಿಲ್ಲ. ಗೋಡೆಯ ಮೇಲಿನ ಗಡಿಯಾರಕ್ಕೂ ಆತಂಕ ತುಂಬಿದ ಮಾತೃ ಮನಕ್ಕೂ ತೀವ್ರ ಸ್ಪರ್ಧೆ ನಡೆಯುತಿತ್ತು. ಈಗ....ಒಂದೆರಡು ಘಳಿಗೆಯೊಳಗಾಗಿ ಇನ್ನೊಂದು ಅರ್ಧ ಗಂಟೆಯೊಳಗಾಗಿ ಹಿಂದಿರುಗಿಯಾಳು ಎಂದು ಮನಸ್ಸು ಚಿಂತಿಸಿದರೆ ಆಕ್ಷಣ ಘಳಿಗೆ ಗಂಟೆಗಳನ್ನು ಹಿಂದೆ ಬಿಟ್ಟು ಮುಂದೋಡುತಿತ್ತು ಗಡಿಯಾರ. ಸ್ಪರ್ಧೆಯಲ್ಲಿ ಸೋತು ಮನಸ್ಸು ಮುದುಡಿದಾಗ ಎದೆಯಾಳದಿಂದ ನಿಟ್ಟುಸಿರು ಹೊರಹೊಮ್ಮುವುದು....ಎದೆಯ ಮಿಡಿತ ತೀವ್ರ ಗತಿಯಲ್ಲಿ ನಡೆಯುವುದು. ಹಾದಿಯೆಡೆಗೆ ದಿಟ್ಟಿಯನ್ನಟ್ಟ ಕಿಟಕಿಗಾಂತು ನಿಂತ ಸ್ವರ್ಣಮಾಲಿನಿ ಕದಲಲಿಲ್ಲ....ಹಗಲೆಲ್ಲ ಸುರಿದ ಮಳೆ ಈಗಲಾದರೂ ಒಂದಿಷ್ಟು ಬಿಡುವು ಕೊಡಬಾರದೇ....

ಹಲವು ಹನಿಗಳೊಂದುಗೂಡಿ ಮಗೆಯೆತ್ತಿ ಸುರಿದಂತೆ ಭೋರನೆ ಸುರಿಯುತ್ತಿದೆ ಕುಂಭದ್ರೋಣಮಳೆ. ಹೊತ್ತು ಮುಳುಗುವ ಮುನ್ನವೇ ಕತ್ತಲಾವರಿಸಿತು. ಸ್ವರ್ಣಮಾಲಿನಿಯ ಮನದಾಗಸದಲ್ಲೂ ಕತ್ತಲಾವರಿಸಿತು. ಮನೆಯಲ್ಲಿ ಹಾಯಾಗಿದ್ದ ಮುರಳೀಧರ ಒಮ್ಮೆಯೂ ತಾಯಿಯ ಬಳಿಗೆ ಬಂದು ತಂಗಿಯ ಬಗ್ಗೆ ಪ್ರಸ್ತಾಪಿಸಲಿಲ್ಲ. ಸ್ವರ್ಣಮಾಲಿನಿಯ ಮುಖ ಪ್ರೀತ ಕಳೆಯನ್ನು ತಳೆಯತೊಡಗಿತು. ಸಂದಿಗ್ಧಾವಸ್ಥೆಯಲ್ಲಿ ಸಿಕ್ಕಿ ಕೇಳಿದಳು "ಏನು ಮಾಡೋಣ ಮುರುಳೀ ?"

"ಓ....! ಅದೇನು ಕಷ್ಟ? ಟ್ಯಾಕ್ಸಿಗಳಿಗೇನು ಬಡತನವೇ ಇಲ್ಲಿ?" ಅಷ್ಟೇ ಉದಾಸೀನದಿಂದ ನುಡಿದು ಕ್ಷಣಶಃ ಅಲ್ಲಿ ನಿಲ್ಲದೆ ತನ್ನ ಕೊಠಡಿಗೆ ತೆರಳಿದ, ಮುರುಳಿ.

ಹೊತ್ತು ಏಳರ ಅಂಚನ್ನು ನಿರಾತಂಕವಾಗಿ ದಾಟಿತು.

ನೆರೆಮನೆಯ ಬಾಲಕ ಛತ್ರಿ ಸೂಡಿಕೊಂಡು ಒಳಬಂದ. "ಏನು ಯೋಚಿಸುತಿದ್ದೀರಿ....ಮಾಯಿ ?"

ಯೋಚನೆಯಿಂದ ವಿಮುಖಳಾಗಿ ವಾಸ್ತವ ಜಗತ್ತಿಗೆ ಬಂದು "ಏನಪ್ಪಾ ?" ಎಂದಳು ಸ್ವರ್ಣಮಾಲಿನಿ ಒಲ್ಲದ ಮನಸ್ಸಿನಿಂದ.

"ಮಾ ! ಡಾಕ್ಟರು ಟೆಲಿಫೋನಿನಲ್ಲಿ ಮಾತಾಡಿದರು. ಅವರಿಂದು ಸಕ್ಕೂ ಮನೆಯಲ್ಲಿ ಉಳಿದು ಬೆಳಗ್ಗೆ ಬರುತ್ತಾರಂತೆ. ನಿಮಗೆ ತಿಳಿಸಲು ಹೇಳಿದ್ದಾರೆ."

"ದೇವರೇ ಅಷ್ಟಾದರೂ ರಕ್ಷಣೆ ನೀಡಿದೆಯಲ್ಲಾ....ಅದೇ ಸಾಕು."

ಎಂದುಕೊಂಡಳು ತಾಯಿ.

"ಹೆಣ್ಣಾಗಿ ಹುಟ್ಟಿಯೂ ಮಾನ ಮರ್ಯಾದೆಯಿಲ್ಲ" ಊರ್ಮಿಳೆಯ ಉದ್ಗಾರದೊಂದಿಗೆ ಮುರಳೀಧರ ದಲ್ಡಾಲಿಯ ಶೀತಲಮೌನ ಮಾತೃಹೃದಯವನ್ನು ಬರ್ಜಿಯಂತೆ ಇರಿಯಿತು.

ಕಲಿಕತ್ತೆಯ ಕಾರ್ಖಾನೆಯೊಂದರ ರಾಸಾಯನಿಕ ವಿಭಾಗದಲ್ಲಿ ಕೆಲಸ ದೊರೆತು ಶ್ರೀಧರ ದಲ್ಡಾಲಿ ಹರ್ಷೋನ್ಮತ್ತನಾದ. ದಿನಗಳುರುಳಿ ಹೊರಡುವ ದಿನವೂ ಬಳಿಸಾರಿ ಬಂತು. ಕಮಲೇಶ್ ಹುಬ್ಬೇರಿಸಿ–"ನಿನಗೆ ನಮ್ಮ ನೆನಪು ಇನ್ನೆಷ್ಟು ದಿನವೋ.....ಶ್ರೀ ?"

"ಮರೆತರೂ ನಿನಗೇನು ನಷ್ಟವಿಲ್ಲ. ನೀನು ಹೇಗಿದ್ದರೂ ಡಾಕ್ಟರಾಗಿದ್ದಿ !" ಶ್ರೀಧರ ದಲ್ಡಾಲಿ ತಮಾಷೆಗೆಂಬಂತೆ ನುಡಿದರೂ ದೃಢ ಕಂಠದಿಂದ ಹೇಳಿದ.

ಅದೇ ಮುಹೂರ್ತಕ್ಕೆ ಸರಿಯಾಗಿ ಹಲ್ಲಿ ಲೊಚ ಲೊಚ ನುಡಿಯಿತು.

ಕಮಲೇಶ್ ತುಟಿಯ ಮೇಲೆ ಬೆರಳಿಟ್ಟಳು. ಶ್ರೀ ನಕ್ಕುಬಿಟ್ಟ. ಇಬ್ಬರೂ ಸೋಫಾದ ಮೇಲೆ ಮೈ ಚೆಲ್ಲಿದರು. ಸ್ನಾನದ ಮನೆಯಲ್ಲಿ ಜಳಕದ ಸದ್ದು ಕೇಳಿಬರುತ್ತಿದೆ. ಅಡುಗೆಯ ಮನೆಯಲ್ಲಿ 'ಚೊಯ್'ನೆ ಒಗ್ಗರಣೆ ಹಾಕಿದ ಸದ್ದೂ, ಎಣ್ಣೆಯ ಕಟುವಾಸನೆಯೂ ಕಿವಿ ಮೂಗುಗಳನ್ನಾವರಿಸಿದುವು. ಹೊದ್ದ ಉತ್ತರೀಯದ ತುದಿಯನ್ನು ತುದಿಬೆರಳಿಗೆ ಸುತ್ತುತ್ತ ಮಾತಿಲ್ಲದೆ ಕುಳಿತಳು ಕಮಲೇಶ್ ಹಠಾತ್ತಾಗಿ ಅನಿರೀಕ್ಷಿತವಾಗಿ 'ಯಾರಿಗೆ ಯಾರೂ ಅಲ್ಲ' ಎಂದು ಅಂತರ್ಗತವಾಣಿ ಕೂಗಿ ಹೇಳಿತು.

"ಕಮಲೇಶ್" ಎನ್ನುತ್ತಾ ತುಟಿ ಕಚ್ಚಿದ ಶ್ರೀಧರ.

"ಜಗತ್ತೇ ಹಾಗೆ. ತಾನುಂಟೋ ಮೂರು ಲೋಕವುಂಟೊ ?"

"ಹೋಗಲಿ, ಅದೆಲ್ಲಾ ಈಗ ಏಕೆ? ಅಲ್ಲಿಯ ಸ್ಥಿತಿಗತಿ ಅರಿತು ಕಾಗದ ಬರೆಯುವೆ. ಅನಂತರ ತರ್ಕವಿತರ್ಕ" ಮೆಲು ನಗೆ ಬೀರಿದ ಶ್ರೀಧರ.

ಕಲಿಕತ್ತೆಗೆ ಹೊರಡುವ ದಿನವು ಪುಟನೆಗೆದು ಬಂತು. ಶ್ರೀಧರ ದಲ್ಡಾಲಿ ನಿಲ್ದಾಣಕ್ಕಭಿಮುಖವಾಗಿ ಹೊರಟು ನಿಂತ. ಕಮಲೇಶ್ ತನ್ನ ಕುತೂಹಲ

ತೃಷಿತನೇತ್ರಗಳನ್ನು ಅಗಲವಾಗಿ ಅರಳಿಸಿ, ಅಕಲ್ಪಿತವೂ ದುರ್ಗಮವೂ ಆದ ಜೀವನಾರಣ್ಯದ ಮಹಾಯಾತ್ರಿಯನ್ನು ನಿಟ್ಟಿಸಿದಳು. ರಾತ್ರಿಯ ಕಗ್ಗತ್ತಲನ್ನು ಭೇದಿಸಿ ವಿದ್ಯುದೀಪಗಳು ಬೆಳಗುತಿದ್ದರೂ ಅವುಗಳ ದಿವ್ಯಪ್ರಭೆಯಲ್ಲಿ ಅವನ ಮುಖ ಶೋಭಾಯಮಾನವಾಗಿದ್ದರೂ ಆ ರಾತ್ರಿಯ ಕಾಳಿಕೆ ಅವನಲ್ಲಿ ಆವಾಹನೆಯಾಗಿದೆಯೇನೋ ಎಂದೆನಿಸಿತು, ಅವಳಿಗೆ. ವ್ಯಾಕುಲಭಾವದಿಂದ ಯೋಚನಾಕ್ರಾಂತಳಾಗಿ ತಾಯಿಯ ಕಡೆ ನೋಡಿದಾಗ ಆ ಪೂಜ್ಯ ಜನನಿಯ ಮುಖಕಮಲ, ವಾತ್ಸಲ್ಯಪೂರಿತ ಹೃದಯ, ದೈನ್ಯ ತುಂಬಿದ ನೋಟ ವಾಯುಮಂಡಲಕ್ಕೆ ತೆರಳಲಿರುವ ಗಗನಯಾತ್ರಿಯನ್ನು ಬೀಳ್ಕೊಡಲಿರುವ ಲೋಕಮಾತೆಯಂತೆ ತೋರಿ ಬಂದಳು. ಮೆಲ್ಲನೆ ಭುಜದ ಮೇಲೆ ಕೈಹಾಕಿ, ಹೃದಯದ ಹೊಂಗಡಲಿನ ಪ್ರೇಮವಾರಿಯನ್ನು ಸಂಪ್ರೋಕ್ಷಿಸಿ "ಮಾ!" ಎಂದಳು ಮನಮೋಹಕ ದನಿಯಲ್ಲಿ.

ಮರುದಿನ ಆಸ್ಪತ್ರೆಗೆ ಅಣಿಯಾಗುವುದರೊಳಗಾಗಿ ತಲೆ ಬಾಗಿಲ ಕರೆಗಂಟೆ ಸದ್ದುಮಾಡಿ ಕರೆ ನೀಡಿತು. ಕದ ತೆರೆದು ನೋಡಿದರೆ ಅಲ್ಲಿ ಯಾರೂ ಇರಲಿಲ್ಲ; ಕಮಲೇಶಳಿಗೆ ಅಚ್ಚರಿ ಮೂಡಿತು. ಇನ್ನೇನು ಕದ ಮುಚ್ಚಿ ಒಳಬರಬೇಕು. ಆದರೂ ಹೃದಯ ಒಲ್ಲದು....ಮನಸ್ಸು ಒಪ್ಪದು. ಹೃದಯತಂತುಗಳಲ್ಲಿ ಮಿಡಿದ ಭಾವಗೀತೆಯ ವಿಚಿತ್ರ ಪರಿಮಳ ಮನವನ್ನು ಸೆರೆ ಹಿಡಿಯಿತು. ಹೊರಹೋಗಿ ಅಂಗಳದೆಡೆ ಕಣ್ಣು ಹಾಯಿಸಿದರೆ ಗುಂಪುಗೂಡಿ ನಿಂತಿದೆ ಗೆಳತಿಯರ ವೃಂದ! ಕಮಲೇಶ್ ಪುಳಕಿತಳಾದಳು. ಅವರೆಲ್ಲರೂ ಬೆಳಗಿನ ಹೊತ್ತು ನೇರವಾಗಿ ಇಲ್ಲಿಗೆ ಬಂದುದು ತುಸು ಆಶ್ಚರ್ಯವೆನಿಸಿತು. ಅದರಲ್ಲೂ ಎಲ್ಲೆಲ್ಲೋ ವಾಸಿಸುವ ಗೆಳತಿಯರು ಒಂದು ಗೂಡಿ ಬಂದುದೂ ಸಹ ವಿಶೇಷವೇ.

ಎಲ್ಲರೂ ಒಮ್ಮೆಲೇ ನಗುವಿನ ಗುಲ್ಲೆಬ್ಬಿಸಿದರು.

"ನಾಲ್ವರೂ ಎಲ್ಲಿ ಒಟ್ಟುಗೂಡಿ ಬಂದಿರಿ?" ವಿಶಾಲವಾದ ಸುನೀಲ ನೇತ್ರದ್ವಯಗಳನ್ನು ಇನ್ನಷ್ಟು ಅರಳಿಸಿ "ಅದರಲ್ಲೂ ಈ ಬೆಳಗಿನ ಹೊತ್ತು?" ಎಂದಳು ಕಮಲೇಶ್ ಹುಬ್ಬೇರಿಸಿ.

"ಮದರ್ ವರ್ಜಿನಿಯಾಗೆ ಮಗಳು ಹುಟ್ಟಿದ್ದಾಳೆ!" ಹಾಸ್ಯದ ಧಾಟಿಯಲ್ಲಿ ಬಿತ್ತರಿಸಿದಳು ಸುಧಾರಾಣಿ.

"ಹೂ....ಕಣೆ!" ಸಮರ್ಥಿಸಿದಳು ವಿಜಯಾ.

"ಎಲ್ಲಾ ಅಲ್ಲೇ ಪೂರೈಸಬೇಡಿ, ಒಳಗಡೆ ಬನ್ನಿರಿ."

ನಾಲ್ವರೂ ಒಳಗಡೆ ಬಂದರು.

"ಡಾ|| ಚಂದ್ರಿಕಾ ಹೆಗ್ಗಡೆ ಹತ್ತಿರಬಹುದು." ಎಂದಳು ಕಮಲೇಶ್.

"ಅವರನ್ನು ನೋಡಲೆಂದು ಈ ಕಡೆ ಬಂದೆವು. ಹಾಗೆಯೇ ಗಜಗೌರಿಯನ್ನೂ ನೋಡುವ ಮನಸ್ಸಾಯಿತು."

ಕಮಲೇಶ್ ನಕ್ಕುಬಿಟ್ಟಳು.

ಹಿಂದಿನ ದಿನ ಶ್ರೀಧರ ದಲ್ಲಾಲಿ ಬಹಳಷ್ಟು ಸಿಹಿಕಾರಗಳನ್ನು ತಂದಿಟ್ಟಿದ್ದ. ಅವನ್ನೇ ಮುಂದಿಟ್ಟಳು ಕಮಲೇಶ್. ಸ್ವರ್ಣಮಾಲಿನಿ ನೀರಿನ ಲೋಟಿಯನ್ನು ತಂದು ಮುಂದಿಟ್ಟು ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡಳು. ಗೆಳತಿಯರಿಗೆ ತಾಯಿಯನ್ನು ಪರಿಚಯ ಮಾಡಿಕೊಡುವುದೆಂದರೆ ಅದೆಷ್ಟು ಸಂತಸವೋ....ಆದರೆ ಹೆಚ್ಚು ಸಮಯ ಕಳೆಯುವಷ್ಟು ಹೊತ್ತಿರಲಿಲ್ಲವಾದುದರಿಂದ ತಾಯಿ ಮಗಳು ಸ್ವಲ್ಪ ಹೊತ್ತಿನಲ್ಲೇ ಆತಿಥ್ಯವನ್ನು ಮುಗಿಸಿದರು. ಊರ್ಮಿಳಾ ಒಲ್ಲದ ಮನಸ್ಸಿನಿಂದ ಹೊರಗೆ ತಲೆ ಹಾಕಿ ಒಳಹೋದಳು. ಕಮಲೇಶ್ ಹಣೆಗೆ ತಿಲಕವಿಡುತ್ತಾ ಯೋಚಿಸಿದಳು....ನಮ್ಮ ಸಂಸಾರವೆಲ್ಲಿ? ಈ ಗೆಳತಿಯರ ಕೂಟವೆಲ್ಲಿ....? ಇಷ್ಟು ದಿನಗಳಂತೂ ಕಳೆಯಿತು. ಮುಂದೇಕೆ ಈ ಕಷ್ಟ? ಮುಂದಿನ ಅಭ್ಯಾಸಕ್ಕೆ ಕಾಲಿಟ್ಟರೇನೊ ಒಂದು ರೀತಿ. ಇಲ್ಲದಿದ್ದಲ್ಲಿ ಮನೆ ಬದಲಿಸುವುದು ಲೇಸಲ್ಲವೇ....ಈ ಅನಿವಾರ್ಯವಾದ ರೂಪಕದ ಅಂತ್ಯಕ್ಕೆ ಯಾರು ಹೊಣೆ ?

"ಹೊತ್ತಾಯಿತು ಕಮಲೇಶ್" ಜುಬೇದಾ ಅವಸರಿಸಿದಳು.

ಅವಳೆಂದಂತೆ ನಿಜಕ್ಕೂ ಹೊತ್ತು ಓಡುತಿತ್ತು. ಕಮಲೇಶ್ ಆತುರವಾಗಿ ತಯಾರಾದಳು. ಸ್ವರ್ಣಮಾಲಿನಿಯಿಂದ ಬೀಳ್ಕೊಂಡು ಐವರೂ ಹೊರಟು ಆಸ್ಪತ್ರೆ ಮುಟ್ಟಿದರು. ರೋಗಿಗಳ ಅಂತರಂಗದಿಂದ ಹೊರಹೊಮ್ಮುವ ವಿಚಿತ್ರ ಪರಿಮಳ, ಕಾರಿಡಾರಿನ ಎಡಬಲಗಳಲ್ಲಿ ಕಿಕ್ಕಿರಿ ತುಂಬಿದ ವಾರ್ಡುಗಳು, ಹಾದಿಯಲ್ಲಿ ಅವಸರವಸರದಿಂದ ಹೆಜ್ಜೆ ಹಾಕುವ ಶ್ವೇತವಸನಧಾರಿಣಿ

ಯರು, ನರಳುವವರ ನರಳುದನಿ, ಅಳುವವರ ಅಳುದನಿ, ನಗುವವರ ಇನಿದನಿ ಒಟ್ಟಿನಲ್ಲಿ ನಾನಾ ಬಗೆಯ ಮಿಶ್ರಮೇಳ....ನಾನಾ ಭಾವನೆಗಳನ್ನು ಮೂಡಿಸುವಂತಹ ವಾತಾವರಣ.

ಹೆಬ್ಬಾವಿನಂತೆ ಹರಿದ ಹಾದಿಯನ್ನು ಕಳೆದು,

ಚಂದ್ರಭಾನು ವಾರ್ಡಿಗೆ ಕಾಲಿಟ್ಟಾಗ ಬಾಲಕನಿಗೆ ರಕ್ತ ಸಂಯೋಜನೆ ನಡೆಯುತ್ತಿತ್ತು. ಬೇಡವೆಂದರೂ ಕೇಳದೆ ಅಂದೂ ಸಹ ಸ್ವತಃ ತಾಯಿಯೇ ರಕ್ತದಾನ ಮಾಡಿದ್ದಳು. ಹೆಸರಾಂತ ಹಿರಿಯ ಫಿಜಿಸಿಯನ್ ಬಳಿಯಲ್ಲಿ ಮೈಬಾಗಿ ನಿಂತು ಬಾಲಕನ ಸ್ಥಿತಿಗತಿಯನ್ನು ಗಮನಿಸುತ್ತಿದ್ದರು. ಅವರ ಒಡನಾಡಿಗಳಾದ ಕಿರಿಯ ಡಾಕ್ಟರುಗಳು ಹಾಸಿಗೆಯನ್ನು ಸುತ್ತುವರಿದಿದ್ದಾರೆ. ಯಾರ ಮುಖದಲ್ಲೂ ಪ್ರಸನ್ನತೆಯುಳಿದಿರಲಿಲ್ಲ. ತಾಯಿಯ ಎದೆ ಅತೀವ ದುಃಖದುಬ್ಬರದಿಂದ ಏರಿ ಇಳಿಯುತ್ತಿತ್ತು. ಆ ನಿರ್ಭಾಗ್ಯಳಿಗಾಗಿ ಎಲ್ಲರ ಹೃದಯತಂತುಗಳಲ್ಲಿ ಹೊಮ್ಮುವ ವಿಶಾದಗೀತೆ ಸಂಧ್ಯಾಕಾಳಿಕೆಯಂತೆ ಮುಖಬಿಂಬಗಳಲ್ಲಿ ಪಸರಿಸಿದೆ.

ಆ ಸಾವು ಬದುಕಿನ ಹೋರಾಟವನ್ನು ನೋಡಲಾರದೆ ಹೊರಬಂದಳು ಕಮಲೇಶ್. ಒಳಗಡೆ ಹಿರಿಯ ವೈದ್ಯರಿಬ್ಬರೂ ಬಾಲಕನ ಭವಿಷ್ಯದ ಬಗ್ಗೆ ಮಾತುಕತೆ ನಡೆಸಿದ್ದರು. ಅವರು ಹೊರ ಬರುವತನಕ ಇಲ್ಲಿ ಕಾದಿರುವುದೇ ಲೇಸೆಂದುಕೊಂಡು ಅಲ್ಲೇ ನಿಂತಳು. ಕಾರಿಡಾರಿನಲ್ಲಿ ಹಾದು ಹೋಗುತ್ತಿದ್ದ ಚಂದ್ರಕಾಂತ್ ಬಲರಾಂ ಮಿತ್ರ ಹೇಮುಲಾಲ್ ಚಂದಾನಿಯರ ಕಣ್ಣುಗಳು ಒಂಟಿಯಾಗಿ ನಿಂತಿದ್ದ ಕಮಲೇಶಳ ಮೇಲೆ ಸಹಜವಾಗಿ ಹರಿದುವು.

"ಇದೇನು....ಇಲ್ಲಿ?" ಎಂದ ಹೇಮುಲಾಲ್ ಚಂದಾನಿ.

"ಹಿಂಡು ಹಾನಿಕರವಲ್ಲ; ಒಂಟಿ ನಂಬುವಂತಿಲ್ಲ ...!"

"ಒಂಟಿತನ ಬೇಸರ ತಂದಿದ್ದರೆ ಕೇಸರಿಯನ್ನು ಆರಿಸಿಕೊಳ್ಳಬಹುದು!"

ಕಮಲೇಶಳಿಗೆ ನಗು ಮೂಡಿದರೂ ಅದುಮಿ ಹಿಡಿದಳು.

"ಪ್ರಣಾಮ್ ಜೀ!"

ಹುಡುಗರು ನಗುವಿನ ಲಹರಿಯನ್ನು ಹರಿಯ ಬಿಟ್ಟು ಹೊರಟರು.

ಛಣ್! ಛಣಾರ್! ಛಣ್! ಛಣಾರ್! ಛಣ್! ಛಣಾರ್!

ರಾಣೀ ಭವತಾರಿಣಿಯ ಝರ್ಝರ ಕರೆ!

ಸ್ವಸ್ಥವಾಗಿದ್ದ ಚೇತನಕೇಸರಿಯನ್ನು ಬಡಿದೆಬ್ಬಿಸುವಂತೆ ಪುನಃ ಪುನಃ ಮೊಳಗಿತು ಘಂಟಾನಿನಾದ. ಕಾರಿಡಾರಿನುದ್ದಕ್ಕೂ ಅಲ್ಲಲ್ಲಿ ಕೆಂಪುದೀಪಗಳು ಹತ್ತಿ ಅಪಾಯದ ಸುದ್ದಿಯನ್ನು ಬಿತ್ತರಿಸಿದುವು. ಕತ್ತೆತ್ತಿ ನೋಡಿದಳು ಕಮಲೇಶ್. ಒಂದರ ಸಂಖ್ಯೆ ವಿರಾಜಮಾನವಾಗಿತ್ತು!

ಒಳಗಡೆ ಚರ್ಚೆಯಲ್ಲಿ ಮುಳುಗಿದ್ದ ಡಾಕ್ಟರುಗಳು ಹೊರಬಿದ್ದರು. ಎಲ್ಲರ ದಿಟ್ಟಿಯೂ ನಂಬರಿನ ಕಡೆ ಹರಿಯಿತು. ಒಂದರ ಸಂಖ್ಯೆ ಆಸ್ಪತ್ರೆಯ ಡೀನ್ ಡಾ|| ರಘುರಾಮರದು. ಆಸ್ಪತ್ರೆಗಾಗಿ ಬಹಳವಾಗಿ ಶ್ರಮಿಸಿದ ವ್ಯಕ್ತಿ. ಅವರಿಗೆ ಏನೂ ಆಗದಿದ್ದರೆ ಸಾಕು....

ಮಾನವತೆಯ ಪ್ರತೀಕ!

ಹಿರಿಯ ವೈದ್ಯರುಗಳು ಮಾರುಗಾಲು ಹಾಕುತ್ತಾ ಅತ್ತ ಓಡಿದರು. ಹುಡುಗಿಯರು ಅವರನ್ನು ಹಿಂಬಾಲಿಸಿದರು. ಸಂದಿಗೊಂದಿಯಿಂದ ಹಿರಿಯ ಸೇವಿಕೆಯರು ಹೊರಬಿದ್ದು ಅತ್ತಲೆ ಧಾವಿಸಿದರು. ಎಲ್ಲರ ಪಾದಾಘಾತಗಳೂ ಸಮ್ಮಿಳನವಾಗಿ ಸದ್ದು ಧೃತಗತಿಯಲ್ಲಿ ಹೊರಬಿತ್ತು. ನಿಶ್ಶಬ್ದತೆಯ ತಲೆಯ ಮೇಲೆ ಅವ್ಯಾಹತವಾಗಿ ಬೀಳುವ ಕೊಡತಿಯ ಪೆಟ್ಟಿನಂತೆ.

ಹದಿನೈದು ನಿಮಿಷಗಳ ಹಾದಿ ಏಳೆಂಟು ನಿಮಿಷಗಳಲ್ಲಿ ಕರಗಿತು. ಹಿರಿಯ ಡಾಕ್ಟರುಗಳು ಒಳಹೋದರು. ಹಿಂದೆಯೇ ಕದ ಮುಚ್ಚಿಕೊಂಡಿತು. ಬಾಗಿಲಲ್ಲಿ ಕಾದಿದ್ದ ಜವಾನ ತಡೆಗಟ್ಟಿದ "ನೀವಾರೂ ಒಳ ಹೋಗುವಂತಿಲ್ಲ. ಡೀನ್ ರವರಿಗೆ ಹೃದಯಾಘಾತ!"

"ಅಯ್ಯೋ"ಗರ ಬಡಿದವಳಂತೆ ನಿಂತು ಕಂಡರಿಯದ ದೇವರನ್ನು ಮನಸಾ ಬೇಡಿಕೊಂಡಳು. ಮುಚ್ಚಿದ ಬಾಗಿಲೊಳಗೆ ಸಾವು ಬದುಕಿನ ಹೋರಾಟ ನಡೆಯುತಿತ್ತು. ಇನ್ನಷ್ಟು ಹೊತ್ತಿನೊಳಗಾಗಿ ಮೆಲ್ಲನೆ ಒಳಗಿನಿಂದ ಹೊರಬಿದ್ದ ಡಾ||ನಿರಂಜನ್ "ಈಗಲೇ ಯಾವುದು ಹೇಳುವಂತಿಲ್ಲ. ಅವರು ಇನ್ನೂ ಅಪಾಯದಿಂದ ಪಾರಾಗಿಲ್ಲ" ಎಂದರು ಗಂಭೀರವಾಗಿ.

ಎಲ್ಲರ ಬಾಯಿಯಲ್ಲೂ ಅದೇ ಸುದ್ದಿ....ಹಾಹಾಕಾರ. ತುಸು ಕೈ ಬಿಡುವಿರುವವರೆಲ್ಲಾ ಬಂದು ಸುದ್ದಿಯನ್ನು ಕೇಳಿ ನೊಂದು ಕ್ಷಿಪ್ರ ಸುಧಾರಣೆಯನ್ನು ಹಾರೈಸಿ ಹೋಗುತ್ತಿದ್ದರು. ಇಪ್ಪತ್ತು ನಿಮಿಷಗಳನಂತರ ಹೊರಬಂದ ಡಾ|| ಥಾಮಸ್ ಅದೇ ಪಲ್ಲವಿಯನ್ನು ಪುನರುಚ್ಚರಿಸಿದರು. "ಡೀನ್ ಇನೂ

ಅಪಾಯದಿಂದ ಪಾರಾಗಿಲ್ಲ."

ಡೀನ್ ಕುಟುಂಬದವರಲ್ಲಿ ಅನೇಕರು ಹೊರಗಡೆ ಉಳಿದಿದ್ದರು. ಮುಚ್ಚಿದ ಬಾಗಿಲೊಳಗೆ ಇನ್ನೂ ಜೀವನ್ಮರಣ ಹೋರಾಟ ನಡೆಯುತ್ತಲೇ ಇತ್ತು. ಅನೇಕರು ಹನಿಗಣ್ಣಾದರು. ಕೆಲವರು ಮುಸು ಮುಸು ಅತ್ತರು. ಆ ದುಃಖಭರಿತ ದೃಶ್ಯವನ್ನು ನೋಡಲಾಗದೆ ಬೇರೆಡೆಗೆ ಮೊಗತಿರುವಿದಳು ಕಮಲೇಶ್. ಭಯ ಉದ್ವೇಗಗಳ ಗಣಿಯಾಗಿದ್ದ ಕಾತರಯುತ ಕರ್ಣಪಟಲಗಳಿಗೆ ಸ್ವಲ್ಪ ಹೊತ್ತಿನನಂತರ ಒಳಗಿನಿಂದ ಶುಭಕರ ಸುದ್ದಿ ಕೇಳಿಸಿತು....ಡೀನ್ ಅಪಾಯದಿಂದ ಪಾರಾಗಿದ್ದಾರೆ....!

ಇತರೆಯರೊಂದಿಗೆ ಕಾದಿದ್ದ ಡೀನ್‌ರವರ ಕುಟುಂಬ ವರ್ಗದವರು ಹಿಡಿದಿಟ್ಟಿದ್ದ ಉಸಿರೆಲ್ಲಾ ಒಂದೇ ಬಾರಿಗೆ ಹೊರಬಿಟ್ಟರು.

ದೇವರು ದಯಾಘನ....!

ಅಧ್ಯಾಯ

೧೩

....ನಿನ್ನಿಂದ ಈಚೆಗೆ ಕಾಗದವಿಲ್ಲ ಏನು ಕಾರಣವೋ ಊಹಿಸಲಾರೆ ಕಮಲೇಶ್. ಇದಕ್ಕಾದರೂ ಖಂಡಿತಾ ಉತ್ತರ ಬರೆ. ನಾನು ಎಂ.ಎ., ಮುಗಿಸಿದೆ. ಈಗ ನನ್ನ ಮುಂದೆ ಎಲ್ಲಿಲ್ಲದ ಸಮಸ್ಯೆಯೊಂದು ಮೂಡಿದೆ; ನಮ್ಮ ಕಾಲೇಜಿನ ವಿಜ್ಞಾನ ವಿಭಾಗದಲ್ಲಿರುವ ಡಾ|| ಹರೀಶ್ ನನ್ನನ್ನು ಕೈ ಹಿಡಿಯಲು ಮುಂದೆ ಬಂದಿದ್ದಾರೆ. ಏತನ್ಮಧ್ಯೆ, ಜಾತಿ ಸಮಸ್ಯೆ ಅಡ್ಡ ಬಂದಿದೆ. ನಮ್ಮವರು ತೀರ ವ್ಯತಿರಿಕ್ತವಾಗಿದ್ದಾರೆ. ಡಾ|| ಹರೀಶರನ್ನು ಕೈಹಿಡಿಯುವು ದೆಂದರೆ ನಮ್ಮವರನ್ನು ಮರೆತು ಬಿಡುವುದೊಂದೇ ಉಳಿದಿರುವ ಮಾರ್ಗ. ಈಗ ನನ್ನ ಕೊನೆಯ ಸಾಧನೆಯಾಗಿ ಅವರನ್ನೊಪ್ಪಿಸುವ ಮಹಾಕಾರ್ಯದಲ್ಲಿ ತೊಡಗಿದ್ದೇನೆ. ಆದರೆ ಅವರೊಪ್ಪುವಂತೆ ತೋರುವುದಿಲ್ಲ. ಅದೇನೇ ಇರಲಿ, ನಿನಗೆ ಇನ್ನೊಮ್ಮೆ ಪತ್ರ ಬರೆಯುವಾಗ ಚೇತನಾಹರೀಶ್ ಎಂದೇ ಸಹಿ ಮಾಡುವೆ. ನನಗೆ ಶುಭ ಕೋರು ಕಮಲೇಶ್....ಪೂರ್ಣ ಶುಭ ಕೋರು ಕಮಲೇಶ್....

ಕಮಲೇಶ್ ಪತ್ರವನ್ನು ಓದಿ ಮುಗಿಸುವುದರೊಳಗಾಗಿ ಸ್ವರ್ಣಮಾಲಿನಿ ಬಂದು-"ಹೇಮರತಿ ಬಂದಿದ್ದಾಳೆ. ನಾನು ಹೋಗಿ ಬರಲೇ ಕಮಲೇಶ್?"

"ಹೋಗಿ" ಎನ್ನುತ್ತ ಹಿಂದೆಯೇ ಬಂದಳು ಕಮಲೇಶ್.

ಕಾರು ಹೊರಗಡೆ ನಿಂತಿತ್ತು. ಹೇಮರತಿ ಕರ್ವೆ ಒಳಗಡೆ ಬರುವುದರಲ್ಲಿ ದ್ದಳು.

"ಪ್ರಣಾಮ್ ಮಾಮಿ!"

"ಆಸ್ಪತ್ರೆಯಿಂದ ಈಗಷ್ಟೆ ಬಂದಂತಿದೆ?"

"ಹೌದು."

"ಇನ್ನು ಹೊತ್ತಾಯಿತು. ನಿಲ್ಲುವಂತಿಲ್ಲ" ಎನ್ನುತ್ತ ಸ್ವರ್ಣಮಾಲಿನಿ ಯೊಡನೆ ಹೊರಟಳು ಹೇಮರತಿ ಕರ್ವೆ.

ತಂದೆಯ ಮರಣಾನಂತರ ಮಾ ಸದಾ ಸಂತೋಷಭರಿತಳಾಗಿದ್ದು ದೆಂದರೆ ಹೇಮರತಿ ಮಾವಿ ಬೆಂಗಳೂರಿಗೆ ಬಂದಮೇಲೆಯೇ. ಪಾಶ್ಚಾತ್ಯ ಪ್ರವಾಸ ಮುಗಿಸಿ ದೆಹಲಿಗೆ ಹಿಂದಿರುಗಿದ ಹೇಮರತಿ ಗೆಳತಿಗಾಗಿ ಅಲ್ಲಿಂದ ಓಡಿ ಬಂದ ಬಗೆ ಮನವನ್ನು ಅರಳಿಸಿತು. ಕಮಲೇಶ್ ಅವಳ ಹಿರಿತನವನ್ನು ಮೆಲುಕು ಹಾಕುತ್ತಾ ಭಾವಪರವಶಳಾದಳು. ಸುಂದರ ವನ ಪ್ರದೇಶಗಳಿಗಿರುವಂತೆಯೇ ಸ್ನೇಹಕ್ಕೂ ಸಹ ಒಂದು ಪ್ರತ್ಯೇಕ ಸ್ವರೂಪವಿರುವುದು ಸಹಜ.

ಪರಂತು,

ಹೃದಯ ಸಾಮ್ರಾಜ್ಯದಲ್ಲಿ ಪ್ರಜ್ವಲಿಸುವ ರಾಗಜ್ಯೋತಿಯ ಕುಡಿಯನ್ನು ಶ್ರದ್ಧೆಯಿಂದ ನೂಂಕಿ ಸರ್ವತ್ರ ಜಾಜ್ವಲ್ಯಮಾನವಾಗಿ ಮಾಡುವ ಇತರವು ಲಕ್ಷ್ಯವೂ ಇಲ್ಲ. ನಿಜ....ಕೇದಿಗೆಯ ಬನದಲ್ಲಿ ಕೇದಿಗೆ ತಂತಾನೆ ಅರಳುತ್ತದೆ. ಅದು ಇನ್ನಾರ ಲಕ್ಷ್ಯದಿಂದಲೂ ಅಲ್ಲ.

ಅದೇ ಸಮಯದಲ್ಲಿ,

ಪ್ರಾಕಾರದ ಬಾಗಿಲು "ಖಣಿಲ್" ಎಂದು ಸದ್ದುಗೈದು ಗಮನವನ್ನು ಸೆಳೆದುಕೊಂಡಿತು. ಬಾಗಿಲನ್ನು ತಳ್ಳಿ ಒಳಬಂದವಳು ಚಂಪಾ. ಅವಳು ಹೌದೋ ಅಲ್ಲವೋ ಎಂಬಷ್ಟು ಸೊರಗಿದ್ದಾಳೆ. ಇತ್ತೀಚೆಗೆ ಗೃಹಿಣಿಯಾದ ಅವಳು ಹೀಗಾದುದೇಕೆ? ಜನ್ಮ ಸಾರ್ಥಕತೆಗಾಗಿ ವಯೋಧರ್ಮಕ್ಕಾಗಿ ಸೃಷ್ಟಿ ರಕ್ಷಣೆಗಾಗಿ ವಿವಾಹ ತಪ್ಪುವಂತಿಲ್ಲ. ಆದರೂ ಕಲಿತ ಜೋಡಿಗಳಾಗಿ ಹೀಗಾದುದೆಂದರೆ ಆಶ್ಚರ್ಯ.

"ಬಾ ಚಂಪಾ! ಮದುವೆಯಾದವರು ಸಂತಸದಿಂದ ಮೈತುಂಬಿಕೊಳ್ಳುತ್ತಾರೆ. ನೀನೇಕೆ ಹೀಗಾಗಿದ್ದಿ?"

ಗೆಳತಿಯನ್ನು ಅತ್ಯಂತ ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಾ ಕೇಳಿದಳು ಕಮಲೇಶ್.

"ನಾವು ಸೊರಗದಿದ್ದರೆ ಡಾಕ್ಟರ ಹೊಟ್ಟೆ ತುಂಬುವುದು ಹೇಗೆ?" ತುಟಿಗಳಲ್ಲಿ ತಿಳಿಹಾಸ್ಯಭರಿತ ನಗುವನ್ನು ಬೀರಿ ನುಡಿದಳು ಅವಳು.

ವಿಷಾದವಾಣಿಯಲ್ಲಿ,

"ಚಂಪಾ!....ತಮಾಷೆ ಇರಲಿ, ಏಕೆ ಹೀಗಾದೆ? ಏನು ತೊಂದರೆ?"

"ಡಾಕ್ಟರ್!...." ಮಧುರವಾಣಿ ಅಷ್ಟಕ್ಕೇ ತುಂಡುಗಡಿಯಿತು. ಪ್ರಿಯ

ತ್ನಿಸಿದರೂ ಮಾತು ಹೊರಡಲಿಲ್ಲ.

"ಇಷ್ಟಾಗುವವರೆಗೂ ಏಕೆ ಸುಮ್ಮನಿದ್ದೆ ಹೇಳು ?"

"ಸುಮ್ಮನೆ ಕೂಡಲಿಲ್ಲ. ನನ್ನ ಪ್ರಯತ್ನ ಸಫಲವಾಗಲಿಲ್ಲ ಅಷ್ಟೆ... ಈಗಲೂ ಮಾತ್ರೆ ಔಷಧ ನುಂಗುತ್ತಲೇ ಇರುವೆ. ಇಂದು ನಿನ್ನ ಸಲಹೆಗಾಗಿ ಬಂದೆ."

ಕಮಲೇಶ್ ಅವಳನ್ನು ಸೆಳೆದು ಬಳಿಯಲ್ಲಿ ಕುಳ್ಳಿರಿಸಿಕೊಂಡು "ಸಂತೋಷವಾಗಿದ್ದೀಯಾ ?"

"ಇದ್ದೇನೆ, ಎಲ್ಲರೂ ಇದ್ದ ಹಾಗೆ."

"ನೋಡಮ್ಮಾ ಹಿಂದಿನ ಕಾಲದವರು ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುತ್ತಿರಲಿಲ್ಲ. ಜೀವನದಲ್ಲಿ ಬರಬಹುದಾದ ಕಹಿಸಿಹಿಗಳನ್ನು ಹೇಗೋ ಹಾಗೆ ಜೀರ್ಣಿಸಿಕೊಳ್ಳುತಿದ್ದರು. ಈಗಿನವರು ವಿದ್ಯೆ ಕಲಿತು ಕಲ್ಪನಾ ಲೋಕದಲ್ಲಿ ವಿಹರಿಸಿ, ಮಾನಸ ಗಂಗೋತ್ರಿಯಲ್ಲಿ ಮಿಂದು, ಆತ್ಮಜ್ಯೋತಿಯನ್ನು ಜಾಜ್ವಲ್ಯಮಾನವಾಗಿ ಬೆಳಗಿಸಿ, ಸೂಕ್ಷ್ಮಜೀವಿಗಳೂ ಭಾವಜೀವಿಗಳೂ ಬುದ್ಧಿಜೀವಿಗಳೂ ಆಗಿರುತ್ತಾರೆ. ಚಂಪಾ, ಹಿಂದೂಸ್ತಾನದಲ್ಲಿ ಹೆಣ್ಣು ಎಷ್ಟು ಕಲಿತರೂ ಹೆಣ್ಣು ಹೆಣ್ಣೇ. ಕಲಿತ ವಿದ್ಯೆ ಮನೋವಿಕಾಸಗೊಳಿಸಿದರೂ ಸಂಪ್ರದಾಯ ತೇಜೋವಧೆಗೈಯುತ್ತದೆ. ಹಳೆಯದೆಲ್ಲಾ ಹುಳಿತು ಜೀವನಕ್ಕೆ ಹೊಸರೂಪು ಬರಬೇಕಾದರೆ ಶತಶತಮಾನಗಳು ಉರುಳಬೇಕು. ಅಲ್ಲಿಯವರೆಗೆ ವಿದ್ಯೆ ಕಲಿತು ಕಲ್ಪನಾಲೋಕದಲ್ಲಿ ವಿಹರಿಸಿದವರ ಗತಿಯೇನು ಎಂಬುದನ್ನು ಯೋಚಿಸಿದರೆ ಮೈ ನಡುಗುತ್ತದೆ. ಏನೇ ಇರಲಿ, ಅಂತರಿಕ್ಷಕ್ಕಡರಿ ಪಾತಾಳಕ್ಕೆ ಕುಸಿದು ಮಾನಸಿಕ ಹಿಂಸೆಗೆ ಒಳಗಾದರೆ ಹುಚ್ಚಾಸ್ಪತ್ರೆಯೇ ಗತಿ ಚಂಪಾ!"

"ಹೋಗಲಿ ಬಿಡು, ಕೊನೆಯ ಪಕ್ಷ ಆ ನೆಲೆಯಾದರೂ ಉಂಟಲ್ಲ."

ಇಬ್ಬರ ಮುಖದಲ್ಲೂ ನಗು ಒಡೆದು ಮೂಡಿತು.

"ಸಂಗೀತ ಮನೋವಿಕಾಸಕ್ಕೂ ಆತ್ಮವಿಶ್ವಾಸಕ್ಕೂ ಅನುಕೂಲ ಸಿಂಧು. ಸಂಗೀತವನ್ನೇ ಆಗಲಿ ನಿನ್ನ ಶಾರೀರವನ್ನೇ ಆಗಲಿ ಯಾರೂ ಕದ್ದು ಒಯ್ಯುವಂತಿಲ್ಲ. ಒಂದಲ್ಲ ಒಂದು ದಿನ ನೀನು ಕೀರ್ತಿಪತಾಕೆಯನ್ನು ಹಾರಿಸುತ್ತಿ. ಆವಸರ ಪಟ್ಟು ಮಾನಸಿಕ ಹಿಂಸೆಗೆ ಒಳಗಾಗಿ ನಿನ್ನ ಆತ್ಮ ವಿನಾಶವನ್ನು ನೀನೇ ಕೈಗೊಳ್ಳಬೇಡ ಚಂಪಾ."

ಧ್ವನಿ ಹಾಲ್ಗಡಲ ಕೋಡಿಯಂತೆ ಹರಿದು ಬರುತ್ತಲೂ ಚಂಪಳ ಕಣ್ಣು ಗಳಲ್ಲಿ ಕಂಬನಿ ಬಳಬಳ ಸುರಿಯಿತು. ಕಮಲೇಶ್ ಯೋಚನಾಕ್ರಾಂತಳಾದಳು. ಮನದಾಗಸವನ್ನು ಆವರಿಸಿದ್ದ ಸಮಸ್ತ ಭಾವನೆಗಳು ಮಿಂಚಿನಂತೆ ಮಾಯವಾಗಿ ಚಿಂತೆಯ ಮಹಾಜ್ವಾಲೆ ಧಗ ಧಗ ಉರಿಯಹತ್ತಿತು. ಏನಾದರೂ ಹೇಳಬೇಕೆಂದು ಪ್ರಯತ್ನಿಸಿದರೆ ತುಟಿಗಳು ಬಿರಿಯಲಿಲ್ಲ.

ಈ ತಥ್ಯಹೀನ ಧರ್ಮಹೀನ ಸಾಮಾಜಿಕ ನೆಲೆಯಲ್ಲಿ ಶೃಂಖಲೆಯಾದರೂ ಮನಃಕ್ಷೋಭೆಯಿಂದ ಸ್ವಯಂಸ್ಫೂರ್ತಿಯನ್ನು ಕಳೆದುಕೊಳ್ಳುವಷ್ಟು ಪರನು ಮೂರ್ಖಳಲ್ಲ ಚಂಪಾ. ಮತ್ತೇಕೆ ಹೀಗೆ? ಕಷ್ಟ ಸುಖ ರೋಗಾದಿ ಬಾಧೆಗಳು ಯಾರಿಗಿಲ್ಲ? ಈಗಾಗಲೇ ಇಷ್ಟೊಂದು ಕಳವಳ ತುಂಬಿಕೊಂಡು ದುದಾದರೂ ಏಕೆ? ಅವಳ ವ್ಯಥೆಯ ಕಾರಣ ತಿಳಿಯದಿದ್ದರೂ ಅದರ ಗಂಭೀರ ಸ್ವರೂಪ ಕಣ್ಣೆದುರಿಗೆ ಪ್ರತ್ಯಕ್ಷವಾಗಿದೆ. ಕೇವಲ ವರ್ತಮಾನದ ಹಿಂದೆ ಯಾವ ರಾಗಜ್ಯೋತಿಯನ್ನು ತನ್ನಂತರಂಗದಲ್ಲಿ ಪ್ರತಿಷ್ಠಿಸಲು ಹೃದಯದೇಗುಲದ ಹೆಬ್ಬಾಗಿಲನ್ನು ತೆರೆದಳೋ ಆ ರಾಗಜ್ಯೋತಿಯ ಕುಡಿ ಈಗಾಗಲೇ ಕಂಪಿಸುತ್ತಿದೆ ಏಕೆ? ಅಂದು ತನ್ನ ಭವ್ಯ ಭವಿತವ್ಯದ ಬಗ್ಗೆ ಸ್ವಲ್ಪವಾದರೂ ಅಪನಂಬಿಕೆ ಇದ್ದಿದ್ದರೆ ಇಂದು ಇಷ್ಟು ಮನಃಕ್ಷೋಭೆಯಿಂದ ಜರ್ಜರಿತಳಾಗುತ್ತಿರಲಿಲ್ಲವೇನೋ....

ಅವಳ ಮೈಯನ್ನು ಮೃದುವಾಗಿ ಒಳಸಿ ಹಿಡಿದು ವಿಷಯ ಮರೆಸಲು ಬೇರೆ ಮಾತು ತೆಗೆದಳು ಕಮಲೇಶ್ "ವನಮಾಲಿ ಬಂದಿದ್ದಾಳೆ. ನಿನಗೆ ಸಿಕ್ಕಿದಳೇ ?"

"ಹೌದು. ಮೂವರು ಹೆಣ್ಣುಮಕ್ಕಳಿವೆ, ಅವಳ ಯಜಮಾನರಿಗೆ ಗಂಡು ಮಗು ಬೇಕಂತೆ."

"ಮೂವರು ಅಳಿಯಂದಿರು ಬರುತ್ತಾರೆ. ಅಷ್ಟು ಸಾಲದೆ ?"

"ಛೆಃ!........ಅವಳ ಗತಿ ಗಂಗಮ್ಮನ ಪಾಲು. ಈಗ ಅವಳ ಭರತನಾಟ್ಯ ಕೇಳುವವರಾರು ?"

"ಪಾಪ, ಕೈಗೆ ಬಂದ ತುತ್ತು........"

"ಧರ್ಮಾಧರ್ಮಗಳನ್ನು ಕುರಿತು ಯೋಚಿಸುವಷ್ಟು ಸಹನೆಯಾಗಲೀ ಸಮಯವಾಗಲೀ ನಮ್ಮವರಿಗಿಲ್ಲ."

ಈಗಲೇ ಅಷ್ಟೊಂದು ತಾಳ್ಮೆಗೆಡುವ ಕಾರಣವಿಲ್ಲ....ಇಷ್ಟಕ್ಕೂ ಕಾಲ ಮುಗಿಯಲಿಲ್ಲವಲ್ಲಾ."

"ಗೋರ್ಕಲ್ಲಮೇಲೆ ನೀರ್ಕರೆದಂತೆ ಸರ್ವಜ್ಞ! ಎಂದು ಸರ್ವಜ್ಞಮೂರ್ತಿ ಹಾಡಿದಾಗ ಅವನಿಗೆ ಬುದ್ಧಿ ಕೆಟ್ಟಿರಲಿಲ್ಲ ಕಮಲೇಶ್!"

"ಇರಲಿ, ಇದು ವಿಜ್ಞಾನಯುಗ. ಕಷ್ಟಪಟ್ಟರೆ ಗೋರ್ಕಲ್ಲೂ ನೀರಾಗುವ ಸಂಭವ ಉಂಟು; ಯೋಚಿಸಿನೋಡು ಚಂಪಾ."

ದನಿ ಎದೆಯಾಳದಿಂದ ಹೊರಬಿತ್ತು.

"ಕೋಕಿಲಗಾಲ ಚಂಪಾ ನಾಟ್ಯವಿಶಾರದೆ ವನಮಾಲರು ಸಹ ಅದನ್ನು ಅನುಮೋದಿಸುತ್ತಾರೆ!"

ಇಬ್ಬರ ತುಟಿಗಳಲ್ಲೂ ಸರಳ ಸ್ನಿಗ್ಧ ಹಾಸ ಮಿನುಗಿ ಮಾಯವಾಯಿತು.

"ಆಶಾಭಗ್ನವೇ ಅನಾರೋಗ್ಯಕ್ಕೆ ಮೂಲ. ಏನಿದ್ದರೂ ಮನಸ್ಸಿಗೆ ಹಚ್ಚಿಕೊಳ್ಳದೆ ಇಂದಿನ ಆಗು-ಹೋಗುಗಳನ್ನು ಬದಿಗಿಟ್ಟು ಮುಂದೆ ಉತ್ತಮ ಭವಿಷ್ಯವಿದೆ ಎಂಬ ದೃಢವಾದ ನೆಚ್ಚಿನಲ್ಲಿ ನಿನ್ನ ಪ್ರಯತ್ನವನ್ನು ಸಾಗಿಸು. ಭಗವಂತ ನಿನಗೆ ಖಂಡಿತವಾಗಿಯೂ ಸಹಾಯ ಮಾಡುತ್ತಾನೆ."

ಮೈಗೆ ಮೈ ಹಚ್ಚಿ ಕುಳಿತ ಚಂಪಾ ಸ್ವಲ್ಪ ಹೊತ್ತು ಮಾತಾಡಲಿಲ್ಲ.

ನಿತಾಂತ ಮೌನ ಮನೆಯನ್ನೆಲ್ಲಾ ವ್ಯಾಪಿಸಿ ಮೆಲ್ಲುಸಿರು ಸ್ಪಷ್ಟವಾಗಿ ಕೇಳಿಸುವಷ್ಟು ನಿಃಶಬ್ದ ಮನೆ ಮಾಡಿತು. ಚಂಪಳ ನೋಟ ಸುತ್ತಮುತ್ತ ಹರಿದಾಡಿ ಮನೆಯಲ್ಲಿ ಯಾರೂ ಇಲ್ಲವೆಂಬುದನ್ನು ಗ್ರಹಿಸಿತೇನೋ....ಕುತೂಹಲಭರಿತಳಾಗಿ "ಎಲ್ಲಿ, ಮಾಯಿ ಕಾಣಿಸುವುದೇ ಇಲ್ಲವಲ್ಲಾ?" ಎಂದಳು.

"ಮಾ ಹೇಮರತಿ ಮಾಮಿಯೊಂದಿಗೆ ಹೊರಗಡೆ ಹೋಗಿದ್ದಾರೆ.... ಅವರು ಐದು ವರ್ಷಗಳಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿದ್ದು ಇತ್ತೀಚೆಗಷ್ಟೆ ಡೆಹಲಿಗೆ ಹಿಂದಿರುಗಿದರು. ಅಲ್ಲಿಂದ ತಮ್ಮ ಆತ್ಮೀಯ ಗೆಳತಿಯನ್ನು ನೋಡಲು ಇಲ್ಲಿಗೆ ಓಡಿ ಬಂದಿದ್ದಾರೆ. ನೋಡು! ಸ್ನೇಹ ಅಂದರೆ ಇದು!"

ಆ ನೇಹಮೇದುರ ವೃತ್ತಾಂತದಿಂದ ಚಂಪಕಮಾಲಿನಿಯ ಅಂತರಂಗ ಪುಲಕಗೊಂಡಿತು.

"ಅವರಿಗೂ ಮಾಯಿಗೂ ಇರುವ ಅಪಾರವಾದ ಭಾವಾತ್ಮಕ ಅನುಬಂಧ ಅಂಥಾದ್ದು."

"ನಿಜ....ಚಂಪಾ." ತಲೆದೂಗಿದಳು ಕಮಲೇಶ್.

"ಒಬ್ಬರೇ ಬಂದಿದ್ದಾರೋ? ಮಕ್ಕಳೂ ಬಂದಿದ್ದಾರೋ?"

"ದೊಡ್ಡವರಿಬ್ಬರೂ ಅಮೆರಿಕೆಯಲ್ಲಿಯೇ ಉಳಿದಿದ್ದಾರೆ. ಚಿಕ್ಕವನಾದ ಬಸಂತಸೇನ ಇವರೊಂದಿಗಿದ್ದಾನೆ....ಎಷ್ಟು ಮುದ್ದೋ ಅಷ್ಟೇ ಚೂಟಿ!"

ಸಂತಸದ ಸುದ್ದಿಯನ್ನು ಬಿತ್ತರಿಸುವಾಗ ಕಮಲೇಶಳ ಮುಖ ಹೂವಿನಂತರಳಿತು.

"ವಂಶಬಲ....ಮಲ್ಲಿಗೆಯ ಬಳ್ಳಿಯಲ್ಲಿ ಮಲ್ಲಿಗೆ ತಾನೇ ಅರಳಬೇಕು?"

"ನಿಜ" ಎಂಬಂತೆ ತಲೆದೂಗಿದಳು ಕಮಲೇಶ್.

"ಊರ್ಮಿಳಾ ಎಲ್ಲಿ?"

"ಮಕ್ಕಳೊಂದಿಗೆ ತಾಯಿ ಮನೆಗೆ ಹೋಗಿದ್ದಾಳೆ....ನೀನೇಕೆ ಸೊರಗಿದ್ದಿ ಹೇಳು ಚಂಪಾ....ನಿನಗೆ ಗರ್ಭಪಾತವಾದುದು ಇತ್ತೀಚೆಗಷ್ಟೆ?" ಕ್ಷಮೆ ದಯೆ ಕಾತರತೆಗಳಿಂದ ಕೂಡಿದ ಧ್ವನಿಯಲ್ಲಿ ಕೇಳಿದಳು.

"ಹೌದು....ನನ್ನ ಗ್ರಹಚಾರ...." ಪಶ್ಚಾತ್ತಾಪದಿಂದ ಮುಂದೆ ಮಾತು ಹೊರಡಲಿಲ್ಲ.

ಕಮಲೇಶ್ ಅವಳ ಸ್ಥಿತಿಗತಿಯನ್ನು ಪರೀಕ್ಷಿಸಿ ಔಷಧಿ ಇಂಜಕ್ಷನ್‌ಗಳನ್ನು ಬರೆದುಕೊಟ್ಟು "ನೀನು ಉದಾಸೀನ ಮಾಡಬಾರದು ಚಂಪಾ. ಆಸ್ಪತ್ರೆಗೆ ಬಾ, ಡಾ|| ಜಮುನಾ ಇದ್ದಾರೆ. ದೇಹಸ್ಥಿತಿಯನ್ನು ಆದ್ಯಂತವಾಗಿ ಪರೀಕ್ಷಿಸಿದನಂತರ ಚಿಕಿತ್ಸೆ ತೆಗೆದುಕೊಳ್ಳುವುದೊಳ್ಳಿತು."

ಅವಳ ಶುಷ್ಕ ವದನಾರವಿಂದ ಮಾನಸಿಕ ಸಂಘರ್ಷಣೆಯಿಂದ ಗಂಭೀರ ಮುದ್ರೆ ಪಡೆದಿದೆ. ಈ ಘಳಿಗೆಯಲ್ಲಿ ಅವಳಿಗೆ ಯಾರಮೇಲೂ ದ್ವೇಷವಿಲ್ಲ.... ಶಂಕೆಯಿಲ್ಲ. ಆದರೆ ತನ್ನ ಬಾಳ್ಬಟ್ಟೆಯ ಹಾಸುಹೊಕ್ಕಿನ ತಂತು ತಂತುಗಳನ್ನೂ ಮೆಲ್ಲಮೆಲ್ಲನೆ ಕತ್ತರಿಸುತ್ತಿರುವ ದುರ್ವಿಧಿಯ ಮೇಲೆ ಕೋಪವಿದೆ, ಪರಿತಾಪವಿದೆ....ಆದರೂ ಇದುವರೆಗಿನ ತನ್ನ ಶ್ರಮವೆಲ್ಲಾ ವ್ಯರ್ಥವಾಗುವಷ್ಟು ತಾನು ಮಾಡಿದ ತಪ್ಪಾದರೂ ಏನು?....ಎಂಬುದು ಮಹಾಸಮಸ್ಯೆ. ವೈಚಾರಿಕವಾಗಿ ಬೌದ್ಧಿಕವಾಗಿ ಉತ್ತುಂಗಕ್ಕೇರಿದರೂ ದುರ್ವಿಧಿಯ ಪದಾಘಾತ ಸುತ್ತಿಗೆಯ ಪೆಟ್ಟಿನಂತೆ ಮೇಲಿಂದ ಮೇಲೆ ಬೀಳುತ್ತಲೇ ಇದೆ. ಈ

ಪ್ರಪಂಚದಲ್ಲಿ ಸಂಭವಿಸುವ ಪ್ರತಿಯೊಂದಕ್ಕೂ ಸಕಾರಣವಿದ್ದರೂ ಅದನ್ನು ವಿಮರ್ಶಿಸುವಷ್ಟು ಸಹನೆಯಂತೂ ಈಗ ಇಲ್ಲವೇ ಇಲ್ಲ.

ಡಾ|| ಜಮುನಾ ಡಾ|| ನಿರಂಜನ್‌ರವರೊಂದಿಗೆ ಡಾ|| ಕಮಲೇಶ್‌ದಲ್ಲಾದಲಿ ಡಾ|| ಜುಬೇದಾಬೇಗಂ ನಡೆದಿದ್ದಾರೆ. ಸೆಂಟ್ರಲ್ ಹಾಲ್ ದಾಟ ಕಾರಿಡಾರಿನಲ್ಲಿ ಹತ್ತು ಮಾರು ಕಳೆಯುವುದರೊಳಗಾಗಿ ಎದುರುಗಡೆಯಿಂದ ಬಂದ ಡಾ|| ಯಶಪಾಲ್ ಸಪ್ಪೆಮೋರೆಯಿಂದ ಬಿತ್ತರಿಸಿದರು. “ನಿಮಗೆ ಗೊತ್ತೆ? ಡಾ|| ರಘುರಾಂ ಮನೆಯಲ್ಲಿ ಕುಸಿದು ಬಿದ್ದು ಪ್ರಾಣಬಿಟ್ಟರಂತೆ! ಬಹಳ ದುಃಖಕರವಾದ ವಾರ್ತೆ....” ಅನುಕಂಪಿತ ಸ್ವರ ವಿಜಾತೀಯವಾಗಿತ್ತು.

ಹಾ....!

ಅಂದೆಂದೋ ನಿರ್ಣೀತವಾದುದಾದರೂ ಕ್ಲೇಶಮಯ ವಿಚಾರ ಮನಸ್ಸಾಗರವನ್ನು ಒಮ್ಮೆಲೇ ಸ್ತಬ್ಧಗೊಳಿಸಿತು.

“ಇದು ಎಂದಾದರೂ ಸಂಭವನೀಯವಾದದ್ದೆ. ಆದರೆ....ಇಂದೇ ಆದದ್ದು ತುಂಬ ಅನ್ಯಾಯ.”

ಈ ಜೀವನ ಲೀಲೆ ಎಷ್ಟು ಅದ್ಭುತವಾದುದೋ ಅಷ್ಟೇ ವಿಚಿತ್ರವಾದುದು ಎಂದುಕೊಂಡಳು ಕಮಲೇಶ್.

ಮುಖದಲ್ಲಿ ವ್ಯಸನದ ಕಪ್ಪು ಛಾಯೆ ದಟ್ಟವಾಗಿ ಮುಸುಗಿತು.

ಎಲ್ಲರ ದನಿಗಳೂ ಮರ್ಮರಿಸಿದುವು “ಅಯ್ಯೋ ಪಾಪ....ಅಯ್ಯೋ ಪಾಪ.”

ಅದೇ ವಿಷಯ ಚರ್ವಣಚರ್ವಿತವಾಗುತಿದ್ದಂತೆಯೇ ಹಿಂದಿನಿಂದ ವ್ಯಕ್ತಿಯೊಂದು ದುಡುದುಡುದುಡು ಓಡಿ ಬಂದು ಒಂದೇಉಸುರಿಗೆ ಬಿತ್ತರಿಸಿತು. “ಚಂದ್ರಭಾನು ಸ್ಥಿತಿ ತೀರ ಹದಗೆಟ್ಟಿದೆ ಡಾಕ್ಟರ್.” ದುಃಖಗರ್ಭಿತ ಹೃದಯ ಸಿಡಿದೊಡೆಯುವಂತಿದೆ. ಕಣ್ಣುಗಳಲ್ಲಿ ಉಕ್ಕಿ ಬಂದ ಕಂಬನಿಯನ್ನು ತೀಡಿಕೊಳ್ಳುತ್ತ ಕಂಪಿತ ದನಿಯಲ್ಲಿ ಏನನ್ನೋ ಹೇಳಲು ತೊದಲಿ ಸುಮ್ಮನಾದರೂ ಅತ್ಯಂತ ಸಂಕಟ ಭರಿತ ಹೃದಯ ಸಹಸ್ರ ಸ್ರೋತವಾಗಿ ಹರಿಯುತ್ತಿದೆ.

“ಅಲ್ಲಿ ಡಾ|| ಮಹಮದ್ ಇದ್ದಾರಷ್ಟೆ?”

"ಇದ್ದಾರೆ...."

"ನೀವು ಹೋಗಿರಿ ನಾವು ಬರುತ್ತೇವೆ."

ಮಾತು ಹೊರಬಿತ್ತೋ ಇಲ್ಲವೋ ಅವನು ಓಡುತ್ತಲೇ ಹಿಂದಿರುಗಿದ. ಡಾ|| ನಿರಂಜನ್ ಡಾ|| ಜಮುನಾರವರ ಕಡೆ ಕಣ್ಣು ಹೊರಳಿಸಿ "ನಾವಿನ್ನು ಮಾಡುವುದೇನಿದೆ ಡಾಕ್ಟರ್ ?"

"ಏನೂ ಉಳಿದಿಲ್ಲ." ಗೋಣು ಆಡಿಸಿದಳು ಜಮುನಾ.

"ಅಂತ್ಯಕಾಲದಲ್ಲಿ ಸ್ವಜನರು ಬಳಿಯಲ್ಲಿರಲು ಅವಕಾಶವಾದರೂ ಇರಲಿ."

ಮರುಘಳಿಗೆಯಲ್ಲಿ ಆಕಡೆಯಿಂದ ಕರ್ಣಕಠೋರ ರೋದನ ಕೇಳಿ ಬಂದಿತು, ಹೃದಯದ ನೆತ್ತರು ಹೆಪ್ಪುಗಟ್ಟುವಂತೆ. ಡಾಕ್ಟರುಗಳು ಹೋಗಿ ನೋಡುವ ವಿಚಾರವನ್ನು ಬದಿಗೊತ್ತಿ ತಮ್ಮ ತಮ್ಮ ಹಾದಿ ಹಿಡಿದರು.

ಧವಳಕಾಂತಿಯುಕ್ತವಾದ ಮೇಲಂಗಿಯ ಜೇಬಿನೊಳಗೆ ಕೈ ಹಸ್ತವನ್ನು ಇಳಿಬಿಟ್ಟು ನಸು ತಲೆಬಾಗಿ ಹೆಜ್ಜೆ ಹಾಕುತಿದ್ದ ಕಮಲೇಶಳ ಭುಜವನ್ನು ಅದುಮಿ ಹಿಡಿದು ಪ್ರಾಸಂಗಿಕವಾಗಿ ನುಡಿದಳು ವಿಜಯಾ- "ಎಷ್ಟೆಂದರೂ ನಮ್ಮದು ಹಿಂದುಳಿದ ದೇಶ...."

"ಹಾಗೆಂದುಕೊಂಡೇ ನಮ್ಮದೇಶ ಹಿಂದುಳಿಯಿತು." ಆಶ್ಚರ್ಯತೃಷಿತ ಲೋಚನಗಳನ್ನು ವಿಸ್ತೃತಗೊಳಿಸಿ "ನಮ್ಮ ಉದ್ಧಾರ ನಮ್ಮಿಂದಲೇ ಆಗ ಬೇಕು ವಿಜಯಾ." ಎಂದಳು ಕಮಲೇಶ್.

....ಉದ್ಧರೇತ್ ಆತ್ಮಾನಾತ್ಮಂ....

ಪುರಾತನವಾದರೂ ಚಿರನೂತನವಾಗಿ ಸುಭಾಷಿತ ಕರ್ಣಪಟಲಗಳ ಮೇಲೆ ಝೇಂಕರಿಸಿದಾಗ ಅದೇ ಪದಸಂಪತ್ತಿಯನ್ನು ಎದೆಯ ಮಿಡಿತ ನರ ನರದಲ್ಲೂ ಮರುಪ್ರಸಾರ ಮಾಡಿತು. ಒಡನೆ ಕಮಲೇಶ್ ಪುಳಕಿತಳಾದಳು. ಡಾಕ್ಟರ ಅಂತ್ಯದರ್ಶನ ತೆಗೆದುಕೊಳ್ಳುವುದಿದೆ. ಒಂದಿಷ್ಟು ಬೇಗನೆ ಹೋಗಿ ದ್ದರೆ ಒಳ್ಳೆಯದಿತ್ತು ಎಂದುಕೊಂಡರೂ ಅಂದಿನ ಡ್ಯೂಟಿ ತಮ್ಮ ಪಾಲಿನದಾ ದುದರಿಂದ ತಕ್ಷಣ ಹೋಗುವಂತಿಲ್ಲ, ಡಾ||ನಿರಂಜನ್ ಮತ್ತು ಡಾ||ಜಮುನಾ ಆಗಲೇ ಹೋಗಿಬಿಟ್ಟಿದ್ದಾರೆ.

ರಸ್ತೆಯ ಅಪಘಾತಕ್ಕೆ ಒಳಗಾಗಿ ತಲೆಗೆ ಪೆಟ್ಟು ಬಿದ್ದ ಹೆಣ್ಣೊಂದನ್ನು ಹೊತ್ತು ತರುತಿದ್ದುದು ಕಾಣಬಂತು. ನೋಡೆ, ಹದಿನಾರು ಹದಿನೇಳರ

ಗ್ರಾಮ್ಯವೆಣ್ಣು. ರಸವೂಡಿಕೊಂಡು ಕಿತ್ತಳೆಯಂತಿದೆ ದೇಹಸಂಪತ್ತು. ಬಾಹ್ಯ ಪ್ರಜ್ಞೆ ಇಲ್ಲದೆ ನಿದ್ದೆಹೋದಂತೆ ಮಲಗಿದ ಕರುಣಾಜನಕ ದೃಶ್ಯ ಅತ್ಯಂತ ಪಾಷಾಣ ಹೃದಯಿಗಳಿಗೂ ಸಹ ಸಂಕಟವನ್ನೂಡಿಸುವಂತಿದೆ. ಆಕ್ಷಣ ಅವಳು ಮೂರ್ಛಿತಳಾದುದರಿಂದ ಕುಟುಂಬದವರಾರೆಂಬುದು ಸಹ ತಿಳಿದು ಬಂದಿರಲಿಲ್ಲ. ಅವಳಿಗೆ ಡಿಕ್ಕಿ ಹೊಡೆದು ಹೇಯಕೃತ್ಯವೆಸಗಿದ ವಾಹನ ಹೇಳದೆ ಕೇಳದೆ ಪಲಾಯನ ಬೆಳೆಸಿದಾಗ ಹಾದಿಗರಾರೋ ಅವಳನ್ನು ಕರೆತಂದು ಆಸ್ಪತ್ರೆಗೆ ಸೇರಿಸಿ ಉಪಕಾರ ಮಾಡಿದ್ದಾರೆ. ಉಟ್ಟ ಉಡಿಗೆತೊಡಿಗೆಯು ಅವಳು ಬಡ ಕುಟುಂಬಿನಿ ಎಂಬುದನ್ನು ಸಾರಿ ಹೇಳುತಿತ್ತು....

ಆಪರೇಶನ್ ಥಿಯೇಟರು ದಿನಕ್ಕೊಬ್ಬ ಸರ್ಜನ್ನರ ಒಡೆತನಕ್ಕೆ ಒಳಪಡುತ್ತದೆ. ಅಂದು ಆಗಲೇ ಹತ್ತು ಆಪರೇಷನ್‌ಗಳು ಪಟ್ಟಿಯಲ್ಲಿದ್ದುವು. ಇದು ಹನ್ನೊಂದನೆಯದು. ಬೆಳಗಿನಿಂದ ಬಿಡುವಿಲ್ಲದೆ ಒಂದಾದಮೇಲೊಂದರಂತೆ ಆಪರೇಷನ್ ಮಾಡುತಿದ್ದ ಅವರ ಪಟ್ಟಿಯಲ್ಲಿ ಇದು ಸಹ ಸೇರಲಿತ್ತು. ಅವರು ಹೊಸ ಕೇಸಿನ ವಿದ್ಯಮಾನಗಳನ್ನು ಕೂಲಂಕಶವಾಗಿ ತಿಳಿದುಕೊಂಡು ಮಿದುಳಿನ ಆಪರೇಷನ್ನಿನಲ್ಲಿ ಸಿದ್ಧಹಸ್ತರಾದ ಡಾ|| ಥಾಮಸ್‌ರವರಿಗೆ ಟೆಲಿಫೋನಿನಲ್ಲಿ ಕರೆಯಿತ್ತರು. ತುರ್ತು ಆಪರೇಶನ್ನಿನ ತಯಾರಿ ನಡೆಸುವಷ್ಟರಲ್ಲಿ ಡಾ||ಥಾಮಸ್ ಆಗಮಿಸಿದರು. ತಲೆಯಲ್ಲಾದ ಗಾಯವನ್ನು ಪರೀಕ್ಷಿಸಿ ಕೇಸ್ ಶೀಟನ್ನು ನೋಡಿ ತುರ್ತು ಆಪರೇಶನ್ನಿಗೆ ಅಣಿಯಾಗಿ ಪೆಟ್ಟುತಾಗಿದ ಚಿಪ್ಪನ್ನು ತೆಗೆದು ಒಳಗಡೆ ಜಜ್ಜಿಹೋಗಿರುವ ಮಿದುಳಿನ ಭಾಗವನ್ನು ಸರಿಪಡಿಸುವ ಮಹಾಕಾರ್ಯವನ್ನು ಕೈಗೊಂಡರು. ಕಲಿಕೆಯ ಎಳಸು ಡಾಕ್ಟರುಗಳೂ ವಿದ್ಯಾರ್ಥಿಗಳೂ ಅತ್ಯಂತ ಆಸಕ್ತಿಯಿಂದ ವೀಕ್ಷಿಸಿದರು. ಡಾ|| ಥಾಮಸ್ ಬಹಳ ಗಂಭೀರ ಸ್ವಭಾವದ ವ್ಯಕ್ತಿ. ತಮ್ಮ ಬಾಯಿಂದ ಹೊರಬೀಳುವ ಯಾವುದೇ ಅಕ್ಷರವೂ ಅನುಚಿತವಾಗದಷ್ಟು ಎಚ್ಚರಿಕೆ ವಹಿಸುವುದು ಅವರ ಸ್ವಭಾವ. ನಡೆನುಡಿಗಳಲ್ಲಿ ಎಲ್ಲಿಲ್ಲದ ಬಿಗಿ. ಎಂತಹವರೂ ಅವರೊಂದಿಗೆ ಸಲಿಗೆಯಿಂದ ಮಾತಾಡುವುದೆಂದರೆ ಕಷ್ಟದ ಮಾತು. ಒಂದೆರಡು ಮಾತುಗಳಲ್ಲಿ ವಿಷಯವನ್ನು ಮುಗಿಸಿ ಬಿಡುವರು. ಆಪರೇಷನ್ ಮಾಡುತ್ತಾ ತಲೆಯ ಕಾರ್ಯಶಕ್ತಿಯನ್ನು ವಿದ್ಯಾರ್ಥಿಗಳಿಗೆ ಹೀಗೆ ವಿವರಿಸಿದರು,

....ಜಾಗೃತ ಅವಸ್ಥೆಯಲ್ಲಿ ಮಾನವ ಎಷ್ಟೊಂದು ಘಟನೆಗಳನ್ನು

ನೋಡುತ್ತಾನೋ ಕೇಳುತ್ತಾನೋ ಅವೆಲ್ಲವೂ ಬೇಕಾಗಿರಲಿ ಅಥವಾ ಬೇಡವಾಗಿರಲಿ ಅವನಿಗೆ ಪೂರ್ಣ ವಿವರ ಸಹಿತವಾಗಿ ನೆನಪಿನಲ್ಲಿ ಉಳಿಯುತ್ತವೆ; ಎಲ್ಲವೂ ತಲೆಯ ಬೀರುವಿನಲ್ಲಿ ಮುಚ್ಚಿಕೊಂಡಿರುತ್ತವೆ; ಅತೀ ಕ್ಷುಲ್ಲಕ ವಿಷಯಗಳೂ ಸಹ ಮೂಡದಿರುವುದಿಲ್ಲ, ಅದು ಹೇಗೆ?

ಅದೇ ಕಾರಣವಾಗಿ ಹಳೆಯ ಘಟನೆಗಳು ನೆನಪಾಗುವ ಸಮಯದಲ್ಲಿ ಅತೀ ಕ್ಷುಲ್ಲಕ ವಸ್ತುಗಳು ಸಹ ನಿಮ್ಮ ಲಕ್ಷ್ಯದಲ್ಲಿ ಬರುತ್ತವೆ. ವಾಸ್ತವವಾಗಿ ಅವುಗಳಿಗೆ ಯಾವ ಮಹತ್ವವೂ ಇರುವುದಿಲ್ಲ. ನೀವು ನಿಮ್ಮ ಬಾಲ್ಯದ ಅಥವಾ ಕಳೆದ ಕಾಲವನ್ನು ನೆನೆದುಕೊಂಡಾಕ್ಷಣವೇ "ಇಂಥ ಒಂದು ದಿನ ಆ ಮನೆಯನ್ನು ಪ್ರವೇಶಿಸುವಾಗ ಹೊರಗೆ ಬಾಗಿಲ ಬಳಿ ಒಬ್ಬ ಐಸ್‌ಕ್ರೀಂ ಮಾರುವವ ನಿಂತಿದ್ದ." ಎಂದು ಮುಂತಾಗಿ ನೆನಪಾಗುತ್ತದೆ, ಅದು ನಿಮಗೆ ಬೇಕಿರುವುದಿಲ್ಲ. ಆದರೆ ಅದೂ ಸಹ ಮೂಡಿಬಿಡುತ್ತದೆ. ವಿಷಯಗಳು ಬೇಕಿರಲಿ, ಅಥವಾ ಬೇಡವಾಗಿರಲಿ ತಲೆಯೊಳಗಿನ ಟೆಂಪೋರಲ್ ಕಾರಟೆಕ್ಸ್ "TEMPORAL CORTEX" ಟೇಪ್ ರಿಕಾರ್ಡರಿನ ಮೇಲೆ ನೀವು ನೋಡಲ್ಪಟ್ಟ ಕೇಳಲ್ಪಟ್ಟ ವಿಷಯಗಳು ಮೂಡಿ ಬಿಡುತ್ತವೆಯೆಂದು ಡಾ|| ಪೆನ್‌ಫೀಲ್ಡರು ಶೋಧ ನಡೆಸಿದ್ದಾರೆ. ಇದೇ ಕೊನೆಯಲ್ಲ. ಶೋಧ ನಡೆಯುತ್ತಾ ಹೋದಂತೆಲ್ಲಾ ಹೊಸ ಹೊಸ ಸಿದ್ಧಾಂತಗಳು ಹುಟ್ಟಿಕೊಂಡು ಪ್ರಸಿದ್ಧವಾಗುತ್ತವೆ. ಕಾಲಕಾಲಾಂತರದಲ್ಲಿ ತಲೆಯಲ್ಲಿನ ಇನ್ನೂ ಯಾವ ಯಾವ ವಿಷಯಗಳು ಬೆಳಕಿಗೆ ಬರಲಿವೆಯೋ........

ಅಧ್ಯಾಯ

೧೪

ಸಾಯಂಸಮಯ........ಹೊನ್ನುಡಿಗೆಯುಟ್ಟು ಹೊಂಗಿಂಡಿಯನ್ನು ಹೊತ್ತಿಂತಿದ್ದಾಳೆ ಪಶ್ಚಿಮಾಂಗನೆ.

ಮಾಮರದ ಕೆಂದಳಿರ ಹೊದರಿನಲ್ಲಿ ಹುದುಗಿ ಕುಳಿತ ಮತ್ತ ಕೋಗಿಲೆ ಸಾನಂದದಿಂದ ಹಾಡಿತು ಕುಹೂೂೂ! ಕುಹೂೂೂ!

ತಣ್ಣನೆಯ ತಂಗಾಳಿಗೆ ಮೈಗೊಟ್ಟು ಮಂದಸ್ಮಿತವದನಾರವಿಂದಳಾಗಿ ಆತ್ಮೀಯ ಗೆಳತಿ ಆಗಮಿಸಿದಾಗ ಸ್ವರ್ಣಮಾಲಿನಿಯ ಮುಖ ಅರಳಿ ಪ್ರಸನ್ನ ವಾಯಿತು. ಹೇಮರತಿ ಕರ್ವೆ ಒಳ ಬಂದವಳೇ ಸ್ವರ್ಣಮಾಲಿನಿಯನ್ನು ನಳಿ ದೋಳುಗಳಿಂದಪ್ಪಿಕೊಂಡು "ಸ್ವರ್ಣಮಾಲಿನೀ, ನಾವಿನ್ನು ಬೆಂಗಳೂರಿನಲ್ಲೇ ನೆಲಸಲಿದ್ದೇವೆ....!" ಎಂದಳು. ಆ ಒಂದೊಂದು ಅಕ್ಷರವೂ ಅಮೃತೋಪಮ ವಾಗಿ ತೋರಿತು ಸ್ವರ್ಣಮಾಲಿನಿಗೆ. ಆನಂದೋನ್ಮತ್ತಳಾಗಿ ನುಡಿದಳು,

"ದೇವರು ದೊಡ್ಡವನು!"

ಆ ಆತ್ಮೀಯ ಗೆಳತಿಯರ ಆನಂದ ಬಂಧುರ ಮುಗ್ಧತೆಯನ್ನು ಸ್ನೇಹ ಭಾವದಿಂದ ನೋಡುತ್ತಾ ನಿಂತರು ಕರ್ವೆ. ಆ ಸುಂದರ ಸನ್ನಿವೇಶದಲ್ಲಿ ಮುಖ ಬಿಂಬ ಅರಳಿ, ಕಣ್ಣುಗಳಲ್ಲಿ ದಿವ್ಯಾನಂದ ಜ್ಯೋತಿ ಮಿನುಗಿತು. ಸ್ವರ್ಣಮಾ ಲಿನಿ ನಗುನಗುತ್ತಾ ಕಣ್ಣು ಕೆನ್ನೆ ತುಟಿಗಳಲ್ಲಿ ಸಂತಸದ ಕಳೆ ಚೆಲ್ಲಿ ಹೇಳಿದಳು "ಸದ್ಯ, ಇದಕ್ಕಿಂತ ಹೆಚ್ಚಿನ ಸಂತಸ ಇನ್ನೆಂದೂ ಪಡೆಯಲಾರೆ, ಏನೆನ್ನಬೇಕೋ ಹೊಳೆಯುವುದಿಲ್ಲ ನನಗೆ."

ಮುಸ್ಸಂಜೆಯ ಮಬ್ಬುಬೆಳಕಿನಲ್ಲಿ ಸ್ವರ್ಣಮಾಲಿನಿಯು ಅತಿಥಿಗಳಿಗೆ ಎರಡೂ ಕೈಗಳಿಂದ ಆತ್ಮೀಯ ಸ್ವಾಗತ ನೀಡಿದಳು. ದೆಹಲಿಯಿಂದ ತಂದ ತಿಂಡಿ-ತಿನಿಸುಗಳನ್ನು ಮೇಜಿನ ಮೇಲಿಟ್ಟು ಹೇಮರತಿ ಸ್ವರ್ಣಮಾಲಿನಿಯೊಂ ದಿಗೆ ಕುಳಿತಳು. ತದೇಕ ಭಾವದಿಂದ ಇಬ್ಬರ ಆತ್ಮಪ್ರಭೆಗಳು ಸಂಮಿಳನ ಗೊಂಡುವು.

ಆತ್ಮಾರಾಂ ಕರ್ವೆ ಕೇಳಿದರು "ಕಮಲೇಶ್ ಕಾಣುವುದಿಲ್ಲವಲ್ಲಾ,

ಇನ್ನೂ ಮನೆಗೆ ಬಂದಿಲ್ಲವೇ ದೀದೀ....?"

"ಇಲ್ಲ....ಇಷ್ಟರಲ್ಲೇ ಬರಬಹುದೇನೋ....ಮುಂದಿನ ಅಭ್ಯಾಸದಿಂದ ಬರುವುದು ಸ್ವಲ್ಪ ತಡವಾಗುತ್ತೆ."

ಕ್ಷೇಮ ಸಮಾಚಾರಗಳು ಕರಗುವಷ್ಟರೊಳಗಾಗಿ ಕಮಲೇಶ್ ದಲ್ಲಾದಲಿ ಆಗಮಿಸಿದಳು. ಪರಸ್ಪರ ಸಂದರ್ಶನಲಾಭದಿಂದ ಎಲ್ಲರ ಮುಖ ಮಂಡಲಗಳೂ ಪ್ರಸನ್ನವಾದುವು. ಕಮಲೇಶ್ ಒಳ ಹೆಜ್ಜೆ ಹಾಕುತ್ತಲೇ ಕೇಳಿದಳು "ಓ.... ಯಾವಾಗ ಬಂದಿರಿ ಮಾಮ ?"

"ಮೊನ್ನೆ....ನಿನ್ನೆಯೆಲ್ಲಾ ಮನೆ ಶುದ್ಧಿಗೊಳಿಸುವುದರಲ್ಲೇ ಕಳೆಯಿತು."

"ಐದಾರು ವರ್ಷಗಳಿಂದ ಮುಚ್ಚಿದ ಮನೆ. ಶುದ್ಧಿಗೊಳಿಸಿದಷ್ಟೂ ಮುಗಿಯದೇನೋ...."

ಅತ್ಮಾರಾಂ ಕರ್ವೆ ಇನ್ನು ಮುಂದೆ ತಾವು ಇಲ್ಲೇ ನೆಲಸಲಿರುವ ವಿಷಯುವನ್ನು ಮುಂದಿಟ್ಟೊಡನೆ ಕಮಲೇಶ್ ಆನಂದಿತಳಾಗಿ "ಓ! ಬಿಡಿ....ಮಾ ಇನ್ನು ನನ್ನನ್ನು ಮರೆತು ಬಿಡುತ್ತಾರೆ!" ಎಂದಳು. ಅರಳಿದ ಕಣ್ಣುಗಳು ಇನ್ನಷ್ಟು ವಿಸ್ತೃತವಾದುವು.

ಒಡನೆ ನಗುವಿನ ಹೊನಲು ಉಕ್ಕಿ ಹರಿಯಿತು.

"ಮಾಲಿನಿ ಮರೆತರೂ ಪರವಾಯಿಲ್ಲ. ನಾನು ನೋಡಿಕೊಳ್ಳುವೆ!" ಹುಬ್ಬೇರಿಸಿದಳು ಹೇಮರತಿ. ಆತ್ಮಾರಾಂ ಕರ್ವೆ ತಲೆಯಲುಗಿಸುತ್ತಾ ಸಮ್ಮತಿ ಸೂಚಿಸಿದರು.

ಎಲ್ಲರ ಮುಖದಲ್ಲೂ ಮೆಲುನಗೆಯುರಳಿತು. ಕಮಲೇಶ್ ಒಂದು ಘಳಿಗೆ ನಿಂತು ಒಳ ಹೋದಳು. ಮೇಜಿನ ಮೇಲಿನ ತಿಂಡಿ-ತಿನಿಸು ನೋಟಕ್ಕೆ ಬಿತ್ತು. ಅವರು ಅಷ್ಟೊಂದು ತಂದಿರುವಾಗ ನಾನೇನು ಕೊಡಲಿ ? ಎಂಬ ಯೋಚನೆಯೂ ಮೂಡದಿರಲಿಲ್ಲ. ಕೈಕಾಲು ಮುಖ ತೊಳೆದುಕೊಂಡು ನೇರವಾಗಿ ಅಡುಗೆಯ ಮನೆಗೆ ಹೋಗಿ ನೋಡಿದರೆ ಹಾಲಿನ ಪಾತ್ರೆಯೂ ಖಾಲಿ. ತಿಂಡಿ ತಿನಿಸುಗಳೂ ಖಾಲಿ. ಸರ್ಣಮಾಲಿನಿಯೊಮ್ಮೆ ಹೇಳಿದ್ದಳು "ನಿನಗೊಂದಿಷ್ಟು ಹಾಲು ಎತ್ತಿಟ್ಟುಕೊಳ್ಳದಿದ್ದಲ್ಲಿ ಅದೂ ಸಹ ಉಳಿಯುವುದಿಲ್ಲ ಕಮಲೇಶ್."

ಈಚೀಚೆಗೆ ಮನೆಯ ಬಹುಭಾಗ ಖರ್ಚೆಲ್ಲಾ ಅವಳದೇ ಆಗಿತ್ತು. ಆದರೂ ತನಗಾಗಿ ಏನೂ ಉಳಿಯುವುದಿಲ್ಲ. ಇಷ್ಟವಿಲ್ಲದಿದ್ದರೂ ಊರ್ಮಿಳೆಯ

ಕೊಠಡಿಗೆ ಹೋದಳು ಕಮಲೇಶ್. ಹೊತ್ತು ಐದರ ಅಂಚನ್ನು ದಾಟಿದ ಮೇಲೂ ಸೊಗಸಾದ ನಿದ್ದೆಯಲ್ಲಿದ್ದುದು ಅಚ್ಚರಿ ಮೂಡಿಸಿತು. ಮೆಲ್ಲನೆ ಎಬ್ಬಿಸಿದಳು.

"ಮಧ್ಯಾಹ್ನ ಮಕ್ಕಳು ಗಲಾಟೆಯೆಬ್ಬಿಸಿದುದರಿಂದ ಈಗಷ್ಟೆ ಬಂದು ಮಲಗಿದೆ....ನನಗೆ ಬಹಳ ನಿದ್ದೆ ಕಮಲೇಶ್."

"ಆತ್ಮಾರಾಂ ಮಾಮ ಬಂದಿದ್ದಾರೆ ಬಂದು ಒಂದು ನಿಮಿಷ ಕುಳಿತುಕೊ."

"ಹ್ಞೂ...."ಎಂದವಳೇ ಅತ್ತ ಹೊರಳಿ ಮಲಗಿದಳು.

ಕಮಲೇಶ್ ಹಿತ್ತಿಲ ಬಾಗಿಲಿಂದ ಹೊರಬಿದ್ದು ಹತ್ತು ಮಾರು ದೂರ ದಾಚೆ ಇದ್ದ ಅಂಗಡಿಯಲ್ಲಿ ಸಿಹಿಕಾರಗಳನ್ನೂ ಐಸ್‌ಕ್ರೀಂ ಬಸಿಗಳನ್ನೂ ಕೊಂಡು ಹಿತ್ತಿಲಿನ ಬಾಗಿಲಿನಲ್ಲೇ ಒಳಹೊಕ್ಕು ಎಲ್ಲವನ್ನೂ ತಟ್ಟೆಯಲ್ಲಿ ಜೋಡಿಸಿಟ್ಟು ಊರ್ಮಿಳೆಯ ಕೊಠಡಿಗೆಹೋಗಿ ನೋಡಿದರೆ ಅವಳಿನ್ನೂ ಎದ್ದೇ ಇರಲಿಲ್ಲ. ಬಂದ ಹಾಗೆಯೇ ಹಿಂತಿರುಗಿ ತಿಂಡಿಯನ್ನು ತಾನೇ ಒಯ್ದು ಮುಂದಿಟ್ಟಳು.

"ಈಗೇಕಮ್ಮಾ ತೊಂದರೆ ತೆಗೆದುಕೊಂಡೆ ?" ಎಂದರು ದಂಪತಿಗಳು.

"ಮುಖ್ಯವಾಗಿ ನನಗೇ ಹಸಿವೆಯಾಗಿತ್ತು."

"ನಮ್ಮ ಮನೆಯಲ್ಲಿ ಹೆಣ್ಣು ಮಕ್ಕಳಿಲ್ಲದೆ ಕಳೆಯೇ ಇಲ್ಲ. ನನಗೆ ಒಬ್ಬಳೇ ಕಾಲಹರಣ ಮಾಡುವುದೂ ಸಹ ಕಷ್ಟ." ಹೇಮರತಿ ಪ್ರಶಾಂತ ಭಾವದಿಂದ ನುಡಿದಿದ್ದರೂ ದನಿ ವೇದನಾಭರಿತವಾಗಿದ್ದಂತಿತ್ತು. ಕಮಲೇಶ್ ಸ್ನೇಹ ಮಧುರ ಭಾವದಿಂದ ಅವಳನ್ನು ನಿಟ್ಟಿಸಿ ನೋಡಿ ತಿಳಿ ಹಾಸ್ಯವಾಣಿಯಲ್ಲಿ ನುಡಿದಳು "ಸೊಸೆ ತಂದುಕೊಳ್ಳಿ ಮಾಮಿ."

ನುಡಿಯೇನೋ ತುಟಿ ಮೀರಿತು. ಮರುಕ್ಷಣದಲ್ಲೇ ನಾನೇಕೆ ಹಾಗೆ ಹೇಳಿದೆ ಎಂದು ತುಟಿ ಕಚ್ಚಿಕೊಳ್ಳುವಂತಾಗಿ ನಸುಲಜ್ಜೆಯ ರಂಗು ನುಣ್ಣನೆಯ ಕದಪುಗಳಲ್ಲಿ ಮೂಡಿತು.

"ಹೌದು ಕಮಲೇಶ್, ಅದೊಂದೇ ಪರಿಹಾರ ಮಾರ್ಗ. ನಿನ್ನನ್ನೇ ತಂದುಕೊಂಡರೆ ಹಳೆಯ ಸ್ನೇಹಕ್ಕೆ ಹೊಸ ಬೆಸುಗೆ ಬಿದ್ದಂತಾಗುತ್ತದೆ."

ಆ ಸಂದರ್ಭಕ್ಕಾಗಿಯೇ ಕಾದಿದ್ದಂತೆ ತಟ್ಟನೆ ನುಡಿದಳು ಹೇಮರತಿ. ದನಿ ಹಾಸ್ಯಪೂರ್ಣವಾಗಿದ್ದರೂ ಕಟು ಸತ್ಯದ ಸಕ್ಕರೆಯನ್ನು ಪೂಸಿಕೊಂ

ಡಿದ್ದು ಅವಳ ಅಂತರಂಗವನ್ನು ಕೊಕ್ಕೆಯಂತೆ ಎಳೆದು ಜಗ್ಗಿತು. ಪಕ್ಕನೆ ಓಕುಳಿ ಚೆಲ್ಲಿದಂತೆ ಕೆಂಪು ಕೆಂಪಾದಳು ಕಮಲೇಶ್. ಹಿಂದೆಯೇ ನಗುವಿನಲೆ ಯೆದ್ದಿತು....ಆ ತಿಳಿ ಹಾಸ್ಯದಿಂದ ಸ್ವರ್ಣಮಾಲಿನಿಯ ಶರೀರ ಮತ್ತು ಅಂತ ರಂಗ ರಾಗ ಭಾವೋನ್ಮಾದಗಳಿಂದ ಪುಲಕಗೊಂಡುವು. ಅನಿರೀಕ್ಷಿತವಾದ ಅವ್ಯಾ ಯಕ ಪದಪುಂಜಗಳು ಅಂತರಂಗದಲ್ಲಿ ಪುನಃಪುನಃ ಕಲಕಲ ರವಗೈಯತೊಡ ಗಿವೆ....ಒಂದುವೇಳೆ ಕೈಗೂಡಿ ಬಂದರೆ ತನ್ನ ಆಶೋತ್ತರಗಳು ಈಡೇರಿ ದಂತೆಯೇ. ಅನಂತರ ಹಾಯಾಗಿ ಕಣ್ಣು ಮುಚ್ಚಬಹುದು ಎಂದು ಕೊಳ್ಳು ವಷ್ಟು ಆನಂದ ಪರವಶಳಾದಳು:ವೃದ್ಧ ಜನನಿ.

ಹೊತ್ತು ಉರುಳಿ ಕತ್ತಲಾವರಿಸಿದುದಾಗಲೀ ನೀಲಗಗನ ನಕ್ಷತ್ರಗಳ ಮಾಲಿಕೆಯನ್ನು ಧರಿಸಿದುದಾಗಲೀ ಸುಧಾಂಶು ಮೂಡಿ ಬಂದುದಾಗಲೀ ಶೀತಲಗಾಳಿ ಬೀಸಿದುದಾಗಲೀ ಯಾರೂ ಅರಿಯರು. ಹೊರಡಲೆಂದು ಹೊರ ಬಂದಾಗಲೇ ಹೊತ್ತು ಉರುಳಿದುದರ ಗಮನ.

ಅತಿಥಿಗಳನ್ನು ಬೀಳ್ಕೊಟ್ಟು ಒಳ ಬಂದಾಗ ಊರ್ಮಿಳಾ ಹಾಸಿಗೆ ಬಿಟ್ಟು ಹೊರಬಂದಳು. ಹೊರಗಡೆ ಆಡಲು ತೆರಳಿದ್ದ ಮಕ್ಕಳೂ ಸಹ ಅದೇ ಸಮ ಯಕ್ಕೆ ಒಳಬಂದರು. ಮೇಜಿನ ಮೇಲಿನ ತಿಂಡಿ ಪೊಟ್ಟಣ ಮಕ್ಕಳನ್ನು ಆಕರ್ಷಿಸಿತು. ಸ್ವರ್ಣಮಾಲಿನಿ ಬಿಚ್ಚುವುದರೊಳಗಾಗಿ ಮಕ್ಕಳು ಅವಸರಿಸಿ ಗಲಾಟೆಯೆಬ್ಬಿಸಿದುದನ್ನು ನೋಡಿ ಅವಮಾನಿತಳಾದಂತೆ ಊರ್ಮಿಳಾ ಕಿಡಿಕಿಡಿ ಯಾದಳು. ಯಾವುದೋ ಯಾರದೋ ಅಪಲಾಪ ಒಡಕು ಘಟದ ಶೃತಿ ಯಂತೆ ವಾಚಾಮಗೋಚರವಾಗಿ ಹೊರಹೊಮ್ಮಿ ಸಂತಸದ ಸಾರವನ್ನೆಲ್ಲ ಒಮ್ಮೆಲೇ ಹೀರಿಕೊಂಡಿತು.

ಅನುದಿನದ ಕಿರಿಕಿರಿಯನ್ನು ತಾಳಲಾಗದ ಮನಸ್ಸು ಇನ್ನಾದರೂ ಸ್ವಾತಂತ್ರ್ಯ ಜೀವನವನ್ನು ನಡೆಸಬಾರದೇಕೆ ಎಂಬ ಆಲೋಚನೆಯನ್ನು ಮುಂದೂಡುವುದು. ಇದುವರೆವಿಗೂ ಹೇಗೋ ಹಾಗೆ ಕಾಲಹರಣ ಮಾಡಿ ದ್ದಾಗಿದೆ. ಇನ್ನೇಕೆ ಈ ಗೋಳು ? ಅರ್ಥರಹಿತವೂ ವಿಚಾರಹೀನವೂ ಆದ ಈ ಶೀಕ್ಷ್ಣ ಜ್ವಾಲೆಯಲ್ಲಿ ಬೆಂದು ಮಾತೃಸಂಪದ ನಲುಗುವುದಾದರೂ ಏಕೆ ?

ಕಮಲೇಶ್ ಯೋಚಿಸುತ್ತಲೇ ಅಂದಿನ ಟಪ್ಪಾಲಿಗೆ ಕೈ ಹಾಕಿದಳು. ಸತ್ಯಭಾಮೆಯ ಹಸ್ತಾಕ್ಷರ ಮನವನ್ನು ಆಕರ್ಷಿಸಿ ಹಾಳು ಚಿಂತೆಗಳನ್ನು

ಗಾವುದ ದೂರ ಅಟ್ಟಿತು.

........ಏನೇ ಇರಲಿ, ಕಮಲೇಶ್! ಮನಸ್ಸು ಹೊಂದುವುದಿಲ್ಲವೆಂದ ಮೇಲೆ ಇನ್ನೇಕೆ ಜಿಹಾಸೆ? ನಿಮಗೆ ಅನುಕೂಲವಾದ ಮನೆ ದೊರಕಿದೊಡನೆ ಬದಲಿಸಿಕೊಳ್ಳುವುದು ಲೇಸು.

ನಾರೀಶ್ರೀಹೃದಯದಲ್ಲಿ ಪವಿತ್ರತೆಯನ್ನೂ ಪರಿಜ್ಞಾನವನ್ನೂ ಪಡೆಯದ ಯಾವ ಜೀವನವೂ ಪರಿಪೂರ್ಣವೂ ಸಫಲವೂ ಆಗದು. ಆ ಮಹಾನುಭೂತಿಗೆ ಅತ್ಯಗತ್ಯವಾದ ಜ್ಞಾನನಿಧಿಯನ್ನು ನೀಡದೆ ಹೆಂಗಳೆಯರನ್ನು ನಾಲ್ಕು ಗೋಡೆಯೊಳಗೆ ಕೂಡಿಟ್ಟಿರುವುದೇ ಸಕಲ ಕ್ಲೇಶಕ್ಕೂ ಕಾರಣ. ಆಕೆಯ ಆತ್ಮ ಪ್ರತಿಭೆಯನ್ನು ದೇಹ ಪಂಜರದೊಳಗೆ ಹುಗಿದುದು ನಿಜವಾಗಿಯೂ-ಖಂಡಿತವಾಗಿಯೂ ಪರಮ ಅನ್ಯಾಯ ...ಕಮಲೇಶ್. ಯಾವ ನೀತಿಯನ್ನು ಸ್ತ್ರೀ ಜೀವನದ ಪರಮ ಲಕ್ಷ್ಯವೆಂದು ಪರಿಭಾವಿಸುವರೋ ಅದನ್ನು ನಾನೆಂದೂ ತಿರಸ್ಕರಿಸಲಾರೆ. ಆದರೆ ಆರ್ಥಿಕ ವೈಯಕ್ತಿಕ ಸ್ವಾತಂತ್ರ್ಯಗಳನ್ನು ಕಸಿದು ಸಾಮಾಜಿಕ ಬಂಧದೊಳಗೆ ನೂಂಕಿ ಖಡ್ಡಾಯ ಮಾಘಸ್ನಾನ ಮಾಡಿಸಿದಲ್ಲಿ ಬರುವ ಸಂಸ್ಕಾರವಾದರೂ ಎಂತಾದ್ದು....?

ಹಾ! ಎಂದು ಸುಯ್ದಳು ಕಮಲೇಶ್.

ಸ್ತ್ರೀ ಸಮಾಜದ ಸತ್ಯ ಸ್ವರೂಪ ಅಕ್ಷಿಪಟಲದ ಮೇಲೆ ಸುಳಿಸುಳಿದಳಿಯಿತು....ಅಜ್ಞಾನಪೂರಿತ ದುಃಖ ಜೀವಿಗಳ ಉದ್ಧಾರವನ್ನು ಕುರಿತು ಆಲೋಚಿಸುವಾಗ ಹೃದಯ ಭಾರವಾಯಿತು....... ದಿನಚರಿ ಧ್ಯಾನವನ್ನು ಮುಗಿಸಿ ಸ್ವರ್ಣಮಾಲಿನಿ ಒಳಬಂದಾಗಲೂ ಕಮಲೇಶ್ ಯೋಚನೆಯಲ್ಲೇ ತಲ್ಲೀನಳಾಗಿದ್ದಳು.

"ನಾವು ಬೇರೆ ಮನೆಮಾಡಿಕೊಳ್ಳುವುದು ಪರಮ ಸುಖ....ಮಾ."

"ಮದುವೆಯಾದರೆ ಹೇಗೂ ಮನೆ ಬದಲಾಗುತ್ತೆ. ಮತ್ತೇಕೆ ಬದಲಿಸುವ ಯೋಚನೆ?"

ಆ ಮಾತು ಹೊರಬೀಳುತ್ತಲೂ ಚಿತ್ರಸೇನ್ ಚಿತ್ತಭಿತ್ತಿಯಲ್ಲಿ ಮೂಡಿನಿಂತ. ತಾಯಿಯ ಮತ್ತು ಕರ್ವೆ ಮನೆತನದವರ ಹಾರೈಕೆ ಅದು. ಆದರೆ ತನ್ನ ಧ್ಯೇಯೋದ್ದೇಶಗಳೇ ಬೇರೆ. ಆಸೆ ಆಕಾಂಕ್ಷೆಗಳೇ ಬೇರೆ. ಆಲೋಚನಾರಹಿತ ಸ್ತ್ರೀಜಾತಿಯ ಕೈ ದೀವಿಗೆಯಾಗದ ಮೇಲೆ ಇಷ್ಟು ವಿದ್ಯೆ ಕಲಿತದ್ದಾದರೂ

ಏಕೆ? ಗೈನಕಾಲಜಿ ಹೆಣ್ಣಿಗಾಗಿ ಮೀಸಲು. ಹತ್ತಾರು ಹೆಣ್ಣುಗಳಿಗೆ ತನ್ನ ಸೇವೆ ಸಲ್ಲಿದರೆ ಅಷ್ಟೇ ಸಾಕು....

ಸಂಧ್ಯಾದೀಪದ ಬೆಳಕಿನಲ್ಲಿ ಮಗಳ ಮುಖದ ಮೇಲೆ ಹರಿದಾಡುವ ಯೋಚನೆಯ ತೆರೆಗಳನ್ನು ಗಮನಿಸಿ ಸ್ವರ್ಣಮಾಲಿನಿಯ ಮನಸ್ಸು ತೂಗು ಯ್ಯಾಲೆಯನ್ನೇರಿತು. ಮೊದಲು ಅವಳೊಂದು ನಿರ್ಧಾರಕ್ಕೆ ಬರಲಿ ಎಂಬ ಅಭಿಲಾಷೆಯಿಂದ ಅಷ್ಟಕ್ಕೆ ಸುಮ್ಮನಾದಳು........ಮೇಲಾಗಿ ಅವಳಿಗೆ ಸದ್ಯದಲ್ಲಿ ಪರೀಕ್ಷೆ ಬೇರೆ ಇದೆ. ಅದಾದನಂತರವೇ ಯೋಚಿಸಿದರಾಯಿತು ಎಂದೆನಿಸಿದರೂ ಮಗಳ ಭವ್ಯಭವಿತವ್ಯ ತನುಮನಗಳಿಗೆ ಉತ್ಸುಕತೆಯನ್ನು ನೀಡುವುದು. ಅದೇ ಚಿಂತನೆಯಲ್ಲಿ ಆನಂದ ತಂದಿಲಳಾಗಿ ಹೃದಯ ಮಂದಿರದಲ್ಲಿ ಉರಿಯುವ ಆಶಾಜ್ಯೋತಿಯನ್ನು ಕೈ ಮರೆಮಾಡಿ ಪ್ರಶಾಂತಗೊಳಿಸಿ ಬರಲಿರುವ ಆ ಸುದಿನಗಳಿಗಾಗಿ ಎದುರುನೋಡತೊಡಗಿದಳು, ಮಳೆ ನೀರಿಗಾಗಿ ಕಾಯುವ ಜಾತಕ ಪಕ್ಷಿಯಂತೆ.

ಕಮಲೇಶ್ ಎಷ್ಟೋ ಹೊತ್ತು ಯೋಚಿಸಿದರೂ ತಾಯಿಗೆ ಉತ್ತರ ಹೇಳಲಾಗಲಿಲ್ಲ. ಭಗವಂತ ಸಾಕಷ್ಟು ತಿಳಿವಳಿಕೆಯನ್ನು ಪ್ರಸಾದಿಸಿದ್ದರೂ ದುಡಿಯುವ ಶಕ್ತಿಯನ್ನು ನೀಡಿದ್ದರೂ ಈ ಸಮಸ್ಯೆ ಬಹಳ ಜಟಿಲವಾದುದಾಗಿ ಮಾಡಿದ್ದಾನೆ. ಕಣ್ಣನೋಟ ಕಿಟಕಿಯಲ್ಲಿ ತೂರಿ ಹೊರ ಜಗತ್ತನ್ನು ದಿಟ್ಟಿಸಿ ಭವ್ಯ ಭವಿತವ್ಯದ ಉಪಾಧಿಯನ್ನು ಅರಸತೊಡಗಿತು. ಮಿಣುಕು ನಕ್ಷತ್ರಗಳ ಮಾಲೆಸೂಡಿ ಕಾಳಗಪ್ಪಿನ ಸೀರೆಯುಟ್ಟ ಆ ನಿಶಿ ಅದೇನೆಂದು ಹರಸಿದಳೋ....

ಮರುದಿನ ಆಸ್ಪತ್ರೆಯಿಂದ ಬಂದಾಗ ಚಂದ್ರಮುಖಿಯ ಕಾಗದ ಮೇಜಿನ ಮೇಲೆ ತನಗಾಗಿ ಕಾದಿತ್ತು.

....ನೀನು ಇನ್ನೂ ಯಾವ ನಿರ್ಧಾರಕ್ಕೂ ಬರಲಿಲ್ಲವೆಂದರೆ ಆಶ್ಚರ್ಯವೇ ಸರಿ. ಯಾವುದನ್ನೇ ಆಗಲಿ ಇಷ್ಟೊಂದು ನಿರ್ಲಕ್ಷ್ಯದಿಂದ ಕಾಣಬಾರದು. ಇಷ್ಟಕ್ಕೂ ನೀನು ಒಪ್ಪಿಕೊಳ್ಳುವುದಾದರೆ ಕರ್ವೆಕುಟುಂಬ ನಿನ್ನ ಪರೀಕ್ಷೆ ಮುಗಿಯುವವರೆಗೂ ಸಂತಸದಿಂದ ಕಾಯಬಹುದು. ಅಲ್ಲದೆ ಅವರು ತಲಾ

ತುರಿಯಲ್ಲಿರುವಾಗ ನೀನು ಡೋಲಾಯಮಾನ ಸ್ಥಿತಿಯಲ್ಲಿದ್ದರೆ ಅವರು ಕಾಯುವುದಾದರೂ ಹೇಗೆ? ಚಿತ್ರಸೇನ ಸರ್ವವಿಧದಲ್ಲೂ ಅನುರೂಪನಾದ ವರ. ಅಪ್ಪ ಇಲ್ಲದ ಈ ದುರ್ದಿನಗಳಲ್ಲಿ ತಾನಾಗಿ ಒದಗಿ ಬಂದ ಮಹಾ ಸೌಭಾಗ್ಯವನ್ನು ತಳ್ಳಿಹಾಕಬೇಡ. ಒಂದಲ್ಲ ಹತ್ತು ಬಾರಿ ಯೋಚಿಸಿ ನೋಡು....

ಚಿತ್ರಸೇನ ಪಾಶ್ಚಾತ್ಯ ಭೂಮಿಯಿಂದ ಪ್ರಾಚ್ಯಭೂಮಿಗೆ ಆಗಲೇ ಒಂದು ಕಾಲು ಇಟ್ಟಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಬೆಂಗಳೂರಿಗೆ ಬರಲಿದ್ದಾನೆ. ಅಮೇರಿಕೆಯಲ್ಲಿ ಮಾಸ್ಟರ್ ಡಿಗ್ರಿ ಕೈಗೊಂಡ ಅವನನ್ನು ಯಾವ ಕಾರಣಕ್ಕೂ ಬಿಟ್ಟುಕೊಡುವಂತಿಲ್ಲ ಅವನು ಡಾಕ್ಟರಲ್ಲ ಎಂಬುದೊಂದೇ ತನ್ನ ಮುಂದಿರುವ ಕೊರತೆ. ಡಾಕ್ಟರಾಗಿದ್ದಿದ್ದರೆ ಇಬ್ಬರೂ ಒಂದುಗೂಡಿ ದುಡಿಯಬಹುದಾಗಿತ್ತು. ಒಂದು ಮನಸ್ಸಿನಿಂದ ಹೊಂದಿಕೊಳ್ಳಬಹುದಾಗಿತ್ತು. ಆ ಒಂದು ಕೊರತೆಗಾಗಿ ಯೋಚಿಸುವುದಾಗಿದೆ....ಎಂದು ಹಲವು ಬಾರಿ ತನ್ನಲ್ಲಿ ತಾನೇ ಹೇಳಿಕೊಂಡಳು ಕಮಲೇಶ್.

ಅವರ ಶ್ರೀಮಂತಿಕೆಯ ವೈಭವದಲ್ಲಿ ತನ್ನ ವ್ಯಕ್ತಿತ್ವ ಎಲ್ಲಿ ಹೇಳ ಹೆಸರಿಲ್ಲದೆ ಅಳಿಸಿ ಹೋಗುವುದೋ ಎಂಬ ಅಳುಕು ಎದೆಯನ್ನು ಕೊರೆಯುವಾಗ ಅಂಥ ಅಮೂಲ್ಯ ಬಾಂಧವ್ಯ ಇನ್ನೆಲ್ಲೂ ದೊರೆಯದು ಎಂಬ ಉತ್ತೇಜನವು ಹುರಿದುಂಬಿಸುತ್ತದೆ. ಸುಖ-ದುಃಖಗಳುಬ್ಬರದಲ್ಲಿ ಹೃದಯ ದಣಿಯಿತು. ಇನ್ನುಳಿದ ಕಾಗದಗಳನ್ನು ನೋಡಿಯೇ ಇರಲಿಲ್ಲ. ಆ ಕಡೆ ಗಮನ ಹರಿಸಿದರೆ ಒಂದು ಗಳಿಗೆಯಾದರೂ ತಣ್ಣಗಿರಬಹುದೆಂದು ಯೋಚನೆಯಿಂದ ಅವುಗಳಲ್ಲಿ ಕೈಯಾಡಿಸಿದಳು ಕಮಲೇಶ್. ಅವುಗಳಡಿಯಲ್ಲಿ ಚೇತನಳ ಕಾಗದವಿದ್ದುದು ದಿಟ್ಟಿಗೆ ಬಿತ್ತು.

....ತಂದೆ ತಾಯಿ ಬಂದು ಬಳಗದವರನ್ನೆಲ್ಲಾ ಬಿಟ್ಟು ಡಾ|| ಹರೀಶರನ್ನು ಕೈಹಿಡಿದು ಸಂಸಾರಕ್ಕೆ ಕಾಲಿಟ್ಟಿದ್ದಾಯಿತು. ಭಗವಂತನೇ ನನ್ನ ಪಾಲಿಗೆ ಹರೀಶರನ್ನು ದಯಪಾಲಿಸಿದ್ದಾನೆಂದರೆ ತಪ್ಪಾಗಲಾರದು. ಅದಕ್ಕಾಗಿ ಭಗವಂತನಿಗೆ ನಾನು ಚಿರಋಣಿ. ಸಕಲ ಸದ್ಗುಣನಿಧಿಯಾದ ಹರೀಶರನ್ನು ಪಡೆಯಲು ನಾನೆಷ್ಟು ಪುಣ್ಯ ಮಾಡಿರಬೇಕು ? ಯಾವುದೋ ಪೂರ್ವಜನ್ಮದ ಸುಕೃತ ಫಲ ನನ್ನ ಪಾಲಿಗೆ ಈ ಅಪೂರ್ವ ನಿಧಿಯನ್ನು ನೀಡಿರಬಹುದು ಬಹುಶಃ. ಇನ್ನು ಭಗವಂತ ಕಾಪಾಡಿದರೆ ಸಾಕು....ನಮ್ಮವರಂತೆ ಹರೀಶರ ಮನೆಯವರು

ಒಪ್ಪದೇ ಹೋದುದರಿಂದ ಸ್ವಜನರಿಲ್ಲದೆ ಮದುವೆಯಾದುದೊಂದು ದುರ್ದೈವ. ಅದೊಂದನ್ನುಳಿದರೆ ನಾನು ಸ್ವರ್ಗಸುಖಿ ...ನೀನೇಕೆ ಮದುವೆಯಾಗಲು ಇಷ್ಟಪಡುವುದಿಲ್ಲ? ಬೇರೆ ಮನೆಗೆ ಹೋದರೆ ತಾಯಿ ಮಗಳಿಬ್ಬರೆ ಎಷ್ಟುದಿನ ಇರಲಿಕ್ಕೆ ಸಾಧ್ಯ? ನೀನೆಷ್ಟೇ ಗಳಿಸಿದರೂ ಪುರುಷೋತ್ತಮನ ನೆಲೆಯಿಲ್ಲದಿದ್ದರೆ ಹೇಗೆ? ಯೋಚಿಸಿ ನೋಡು ಕಮಲೇಶ್....ನಿನಗೆ ಹರೀಶರಂತಹ ಸದ್ಗುಣಿ ದೊರೆಯಲೆಂದು ಹಾರೈಸಿ ಹೃತ್ಪೂರ್ವಕವಾಗಿ ಪ್ರಾರ್ಥಿಸುವೆ....ನನ್ನ ಒಳ್ಳಿತಕ್ಕಾಗಿ ನೀನೂ ಪ್ರಾರ್ಥಿಸು ಕಮಲೇಶ್....

ಒಡನೆ ಪ್ರಾಂಜಲೀಬದ್ಧಳಾಗಿ ಪ್ರಾರ್ಥಿಸಿಕೊಂಡಳು ಕಮಲೇಶ್.

ಕೆಲಸ-ಕಲಿಕೆಗಳ ಹಣಾಹಣಿಯಲ್ಲಿ ಸುಖದುಃಖಗಳ ಚಿಂತನೆಯಲ್ಲಿ ದಿನಗಳು ಯೋಚಿಸಲು ಅವಕಾಶವಿಲ್ಲದಷ್ಟು ತೀವ್ರಗತಿಯಲ್ಲಿ ಉರುಳಿದುವು.

ರಾಣೀ ಭವತಾರಣೀ ಆಸ್ಪತ್ರೆಯ ಪರೀಕ್ಷಾ ಕೊಠಡಿಯ ಮುಂದೆ ಆಗಲೇ ರೋಗಿಗಳು ಜಮಾಯಿಸಿದ್ದಾರೆ. ಸಾಲಾಗಿನ ನಾಲ್ಕು ಮಂಚಗಳ ಬಳಿ ನಾಲ್ಕು ಮಂದಿ ಡಾಕ್ಟರುಗಳು ಕಾರ್ಯನಿರತರಾಗಿದ್ದರೂ ಜನಸಂದಣಿ ಕರಗದು. ಕಮಲೇಶ್ ತಾನು ಬರಮಾಡಿಕೊಂಡ ರೋಗಿಯ ವಿವರವನ್ನು ಕೇಳಿದಳು. ವಿಪರೀತ ಚಳಿ ಜ್ವರದಿಂದ ನರಳುತಿದ್ದ ಅಂಗನೆ ವಿಕಂಪಿತ ದನಿಯಲ್ಲಿ ನುಡಿದಳು- "ನಾಲ್ಕಾರು ದಿನಗಳಿಂದ ವಿಪರೀತ ಚಳಿ ಜ್ವರ....ಕಳೆದ ತಿಂಗಳು ನಾನು ಆಪರೇಷನ್ ಮಾಡಿಸಿಕೊಳ್ಳಬೇಕಾಯಿತು, ಮಾಡಿಸಿಕೊಂಡೆ. ಆಗಿನಿಂದಲೂ ಆರೋಗ್ಯವಿಲ್ಲ."

ಕಮಲೇಶ್ ಹಿಂದಿನ ಆಪರೇಷನ್ನಿನ ಭಾಗವನ್ನು ಪರೀಕ್ಷಿಸುತ್ತಾ- "ನಿಮಗೆ ಆಪರೇಷನ್ ಆದುದೇಕೆ?"

"ನಾನು ಕಳೆದ ತಿಂಗಳು ಬೊಂಬಾಯಿಗೆ ಹೋಗಿದ್ದೆ. ಆಗ ಆರು ತಿಂಗಳ ಗರ್ಭಿಣಿ. ಅಲ್ಲಿಗೆ ಹೋದೊಡನೆ ಇದ್ದಕ್ಕಿದ್ದಂತೆ ಆರೋಗ್ಯ ಕೆಟ್ಟು ಬಾಯಿಯಲ್ಲಿ ದುರ್ವಾಸನೆ ಬರಹತ್ತಿತು. ಡಾಕ್ಟರ ಬಳಿ ಹೋದೆ. ಅವರು ಮೊದಲ ದಿನ ಗೊತ್ತು ಹಚ್ಚಲಿಲ್ಲ. ಮರುದಿನ ಹೊಟ್ಟೆಯೊಳಗೆ ಮಗು ತೀರಿಕೊಂಡುದುದು ತಿಳಿದು ಬಂತು. ಆಪರೇಶನ್ ಮಾಡಿ ಮಗು ತೆಗೆದರು. ಅಲ್ಲಿ ಎರಡು

ವಾರ ಕಳೆದು ಹಿಂದಿರುಗಿದೆ. ಬಂದಲ್ಲಿಂದ ವಿಪರೀತ ಚಳಿ ಜ್ವರ."

ಪರೀಕ್ಷಿಸಿದನಂತರ ಗರ್ಭಕೋಶದಲ್ಲಿ ಹತ್ತಿ ಅಥವಾ ಬಟ್ಟೆಯ ಚೂರು ಉಳಿದಿರಬಹುದೆಂಬ ಅನುಮಾನ ತೋರಿತು. ಈಗ ಅಗತ್ಯವಾಗಿ ಇನ್ನೊಂದು ಆಪರೇಶನ್ನು ಆಗಲೇ ಬೇಕೆಂಬುದು ಮನವರಿಕೆಯಾದಾಗ ಹೆಣ್ಣು ಗಳಗಳ ಅಳ ಹತ್ತಿತು. ಅವಳಿಗೆ ಸಮಾಧಾನ ಹೇಳಿ ಒಪ್ಪಿಸಿ ಹಿರಿಯ ವೈದ್ಯರ ಸಹಕಾರ ದಿಂದ ಆಪರೇಶನ್ ಕೈಗೊಂಡು ಒಳಗಡೆ ಕೈ ಹಾಕಿದರೆ ಹತ್ತಿಯ ತುಣುಕು ರಕ್ತಸಿಕ್ತವಾಗಿ ಮಾಂಸದ ತುಣುಕಿನಂತೆ ಕೆಂಪಗೆ ಸೇರಿಕೊಂಡಿರುವುದು ಗೋಚ ರಿಸಿತು. ಅದನ್ನು ತೆಗೆದು ಆಪರೇಶನ್ ಮುಗಿಸಿ ಉತ್ತರಾರ್ಧವನ್ನು ಕಿರಿಯ ಡಾಕ್ಟರುಗಳಿಗೆ ವಹಿಸಿ ಕೈತೊಳೆದುಕೊಂಡು ಹೊರಬರುವಷ್ಟರಲ್ಲಿ ಬೆಂಚಿನ ಮೇಲೆ ಚಂಪಾ ಸಪ್ಪೆ ಮೋರೆಯಿಂದ ಕುಳಿತುಕೊಂಡಿದ್ದಳು. ಮುಖದ ಮೇಲೆ ಅನಾರೋಗ್ಯದ ಮುದ್ರೆಯೊತ್ತಿತ್ತು. ಕಮಲೇಶಳನ್ನು ನೋಡುತ್ತಲೂ ತುಟಿ ಗಳಲ್ಲಿ ನೀರಸ ನಗು ಮಿನುಗಿ ಮಾಯವಾಯಿತು. ಅರಳಿದ ಕಮಲನಯನ ಗಳು ನಿಸ್ಸಹಾಯಕತೆಯನ್ನು ಮೌನವಾಗಿ ಸೂಸುತ್ತಿವೆ....ಶೃಂಖಲಾಬದ್ಧ ರಾದವರ ದುಸ್ಸಹವಾದ ನಿಸ್ಸಹಾಯಕ ಸ್ಥಿತಿಯಂತೆ.

ಕಮಲೇಶ್ ಅವಳ ಕೈಯನ್ನು ಅದುಮಿ ಹಿಡಿದುಕೊಂಡು ನಲ್ಮೆಯಿಂದ ಕೇಳಿದಳು "ನೀನು ಊಟ ಮಾಡುವಂತೆಯೇ ತೋರುವುದಿಲ್ಲ. ಇನ್ನು ಮಗು ಹೆರುವುದಾದರೂ ಹೇಗೆ?"....ಒಂದು ಕಾಲದಲ್ಲಿ ಸುವರ್ಣ ಪುತ್ಥಳಿಯಂತಿದ್ದ ಹೆಣ್ಣು, ಕಲೋಪಾಸಕರ ನಿಧಿಯಾಗಿ ಮೆರೆದ ಅಂಗನೆ, ತನ್ನತನವನ್ನು ಕಳೆ ದುಕೊಂಡಿದ್ದಾದರೂ ಹೇಗೆ?....ಯೋಚನೆಯ ಸುಳಿಯಲ್ಲಿ ಸಿಕ್ಕಿ ಮೈಮರ ವಟ್ಟಿತು.

ವೇದನಾಭರಿತವಾದ ಅವಳ ಅಂತರಂಗದಿಂದ ಕ್ಷೀಣಿತ ದನಿ ಹೊರಬಿತ್ತು,

"ಏನು ಮಾಡಲಿ?"

"ನೀನು ಕಲಿತವಳು, ನಿನಗೆ ಹೇಳುವುದೇನಿದೆ ಚಂಪಾ?"

ಮನಸ್ಸಿನೊಳಗೆ ಬಾಧೆ ಪಟ್ಟುಕೊಳ್ಳುತ್ತಾ ವಿದೀರ್ಣವಾದ ಕಂಠದಿಂದ ನುಡಿದಳು ಕಮಲೇಶ್. ಸ್ನೇಹ ಪ್ರೀತಿ ವಿಶ್ವಾಸಗಳ ನೆಲೆಯಲ್ಲಿ ಯಾವುದೋ ಅನಿರ್ವಚನೀಯವಾದ ಪ್ರಯತ್ನಿಸಿದರೂ ತಿಳಿಯಲಾಗದ ಅನುಭೂತಿ ಹಠಾ ತ್ತಾಗಿ ತಲೆಯೆತ್ತಿತು. ವ್ಯಥಿತಳಾಗಿ ವಿಜಾತೀಯವಾದ ದನಿಯಲ್ಲಿ ನುಡಿದಳು,

ನೀನು ಆರೋಗ್ಯವನ್ನು ಸರಿಪಡಿಸಿಕೊಳ್ಳುವ ಮುನ್ನ ತಾಯಿಯಾಗುವ ಹವ್ಯಾಸ ಕೈಗೊಳ್ಳಬಾರದಿತ್ತು. ಹಿಂದೆ ಎರಡು ಬಾರಿ ಗರ್ಭಪಾತವಾಗಿ ನಿನಗೆ ಸಂಪೂರ್ಣ ಅನುಭವವಾಗಿದೆ. ಆದರೂ ಪುನಃ ತಪ್ಪು ಹೆಜ್ಜೆ ಇಟ್ಟಿದ್ದಿ. ಈಗ ಕನಿಷ್ಠ ಪಕ್ಷ ನೀನು ಹದಿನೈದು ಪೌಂಡಾದರೂ ಮೈ ತುಂಬಿಕೊಳ್ಳಲೇಬೇಕು. ಏನೇ ಇರಲಿ, ಪ್ರಯತ್ನ ನಿನ್ನದು."

"ಔಷಧಿ ಮಾತ್ರೆಗಳನ್ನು ಚಾಚೂ ತಪ್ಪದಂತೆ ತೆಗೆದುಕೊಳ್ಳುತ್ತಿರುವೆ. ಜಟ್ಟನಲ್ಲಿ ನನ್ನ ಗ್ರಹಚಾರ...." ಕಿಂಚಿತ್ ಕಂಠ ಗದ್ಗದವಾದರೂ ಮರುಘಳಿಗೆಯಲ್ಲಿ ತನ್ನನ್ನು ತಾನೇ ಸುಧಾರಿಸಿಕೊಂಡಳು ಚಂಪಾ. ಕಣ್ಣು ಕೆನ್ನೆಗಳಲ್ಲಿ ಚಂದನವೊರೆದಂತೆ ರಂಗು ಮೂಡಿ, ಅಂತರಂಗದಿಂದ ನೀಳವಾದ ನಿಟ್ಟುಸಿರೊಂದು ಹೊರಹೊಮ್ಮಿತು. ಬಳಿಯಲ್ಲಿ ಶಿಲಾಮೂರ್ತಿಯಂತೆ ಅಲುಗದೆ ಯೋಚಿಸುತ್ತಾ ನಿಂತ ಕಮಲೇಶ್ ಒಂದು ಘಳಿಗೆ ಅವಾಕ್ಕಾದಳು. ನೆಟ್ಟ ನೋಟ ದಣಿಯಿತು. ಅಪಾರವಾದ ಮಮತೆ ವ್ಯಸನ ಯೋಚನೆಗಳ ತಾನ ವಿತಾನದಲ್ಲಿ ಕಿಂಕುರ್ವಾಣತೆ ತುಂಬಿ ಚಿದಾಕಾಶವು ಮೇಘಾವೃತವಾದರೂ 'ಮುಂದೇನು' ಎಂಬ ಪ್ರಶ್ನೆ ದೃಢವಾಗಿ ಹೆಡೆಯೆತ್ತಿದೆ. ಸಹಾನುಭೂತಿಯುತ ಅಸಮಾಧಾನದಿಂದ ನುಡಿ ಹೊರಬಿತ್ತು "ವನಮಾಲಿ ಗತಿ ನೋಡಿದರೆ ಹಾಗೆ, ನಿನ್ನ ಗತಿ ನೋಡಿದರೆ ಹೀಗೆ. ಛೆಃ! ಛೆಃ! ಇಬ್ಬರೂ ಶ್ರೇಷ್ಠ ಕಲೆಗಾತಿಯರು. ಇಬ್ಬರೂ ಕಲಿತವರು. ನನಗಂತೂ ಅರ್ಥವೇ ಆಗುತ್ತಿಲ್ಲ."

"ನೀನೊಮ್ಮೆ ಸಂಸಾರ ಹೊಕ್ಕಿನೋಡು!"

ಆ ಪರಿಹಾಸ್ಯಯುತ ಅಣಕವಾಣಿಯೊಂದಿಗೆ ಮುಗುಳು ನಗೆಯೂ ಅರಳಿತು.

ಕಮಲೇಶ್ ನಸುನಕ್ಕು ಅವಳ ದೇಹಪರೀಕ್ಷೆ ಮಾಡಿ ಪಥ್ಯಪಾನಾದಿಗಳ ಉದ್ದ ಪಟ್ಟಿಯನ್ನು ಬರೆದುಕೊಟ್ಟು ಬೀಳ್ಕೊಟ್ಟಳು. ಖಿನ್ನವಾದ ಮುಖವನ್ನು ಇನ್ನಷ್ಟು ಕಿರಿದು ಮಾಡಿಕೊಂಡು ಕಾಲೆಳೆದುಕೊಳ್ಳುತ್ತಾ ಹೋಗುತಿದ್ದ ಅವಳನ್ನು ಕಣ್ಮರೆಯಾಗುವವರೆಗೂ ನಿಮೀಲಿತ ನೇತ್ರದ್ವಯಗಳು ಎವೆಯಿಕ್ಕದೆ ನಿಟ್ಟಿಸಿದುವು.

ಕಮಲೇಶ್ ಕೆಲಸ ಮುಗಿಸಿ ವಿಜಯಳೊಂದಿಗೆ ಹೆಜ್ಜೆ ಹಾಕಿದಾಗ ಹೊತ್ತು ಎರಡರ ಅಂಚನ್ನು ದಾಟಿತ್ತು. ನೆತ್ತಿಯ ಮೇಲೆ ಸುಡುಬಿಸಿಲು....

ಕೆಳಗೆ ಕಾದ ನೆಲ. ಮೇಲೆ ಕೆಳಗೆ ನೋಡುತ್ತಲೇ ರಸ್ತೆಗಿಳಿದಳು ಕಮಲೇಶ್. ಆಸ್ಪತ್ರೆಯ ಆವರಣವನ್ನು ದಾಟುತಿದ್ದಂತೆಯೇ ವಿಜಯಾ ತನ್ನ ಕೈ ಮಣಿ ಕಟ್ಟನ್ನು ಮುಂದೆ ಮಾಡಿ "ನನ್ನ ಕೈಯಲ್ಲಿ ಪುನಃ ಗ್ಯಾಂಗ್ಲಿಯಾನ್ ಬರುತ್ತಿದೆ. ಈ ಸಲ ಆಪರೇಶನ್ ಮಾಡಿಸಿಕೊಳ್ಳುವುದೇ ಲೇಸು ಎನಿಸುತ್ತೆ ಡಾಕ್ಟರ್."

"ನಮ್ಮ ತಾಯಿ ಇದಕ್ಕೊಂದು ಮದ್ದು ಮಾಡುತ್ತಾರೆ. ಕೈಯನ್ನು ಮೇಜಿನ ಮೇಲಿಟ್ಟು ಸ್ವಲ್ಪ ಬೆಚ್ಚಗೆ ಮಾಡಿರುವ ಕಬ್ಬಿಣದ ಪಟ್ಟಿಯಿಂದ ದಿನವೂ ಒತ್ತುತ್ತಾರೆ. ಅದು ಹಾಗೇ ಕರಗಿ ಹೋಗುತ್ತದೆ."

"ಓ....! ನೀನು ಅಂದೇ ಹೇಳಬಹುದಿತ್ತಲ್ಲ?"

"ಮೊದಲು ನಾವು ಕಲಿತ ವಿದ್ಯೆಗೆ ಪ್ರಾಶಸ್ತ್ಯ...."

ಇಬ್ಬರ ಮುಖದಲ್ಲೂ ಎಳೆನಗು ಮೂಡಿತು.

"ಮನೆಗೆ ಬಂದು ನಮ್ಮ ತಾಯಿಯನ್ನು ಕೇಳಿಕೊಂಡು ಹೋಗು."

"ಈಗ ತುಂಬ ಹಸಿವು. ಸಾಯಂಕಾಲ ನಿಮ್ಮಲ್ಲಿಗೆ ಬರುವೆ. ಅಲ್ಲಿಂದ ಒಟ್ಟಿಗೆ ಆಸ್ಪತ್ರೆಗೆ ಹೋಗೋಣ, ಆದೀತೇ ?"

"ಮಧ್ಯಾಹ್ನ ಬೇರೆ ಮನೆಗೆ ಹೋಗುತ್ತೇವೆ. ಸಕಲ ಸೌಕರ್ಯಗಳೂ ಇರುವ ಮನೆ ಸಿಕ್ಕಿದೆ. ಇನ್ನು ನಮ್ಮ ಬಟ್ಟೆ ಬರೆ ತೆಗೆದುಕೊಂಡು ಹೋಗುವು ದೊಂದು ಬಾಕಿ." ಎಂದ ಕಮಲೇಶ್ ಅವಳಿಗೆ ಹೊಸ ವಿಳಾಸವನ್ನು ಕೊಟ್ಟಳು.

"ಆಗಲಿ, ಖಂಡಿತ ಬರುವೆ."

ಕಮಲೇಶ್ ಅವಳನ್ನು ಬೀಳ್ಕೊಟ್ಟು ಮನೆ ಮುಟ್ಟಿದಾಗ ಮುರುಳೀಧರ ದಲ್ಲಾಲಿ ಮನೆಯಲ್ಲಿಯೇ ಇದ್ದ. ಎಲ್ಲರೂ ಒಂದೆಡೆ ಕುಳಿತುಕೊಂಡರೂ ಔಪ ಚಾರಿಕವಾಗಿ ಒಂದೆರಡು ಮಾತುಕತೆಗಳಾದುವು. ವಾಸದಮನೆ ತಾಯಿಯ ದಾದರೂ ಅವಳು ಹೊಂದಿಸಿಕೊಂಡ ಪಾತ್ರೆ ಪಗಡಿಗಳಾದರೂ ಮುರುಳೀಧರ "ಏನಾದರೂ ನಿಮಗೆ ಬೇಕಿದ್ದರೆ ತೆಗೆದುಕೊಂಡು ಹೋಗಿ." ಎಂದೆನ್ನುವಷ್ಟು ಉದಾರತೆ ತೋರಲಿಲ್ಲ. ಊಟ ಮುಗಿಯುವಷ್ಟರೊಳಗಾಗಿ ಟ್ಯಾಕ್ಸಿ ಬಂದಿತು. ಸ್ವರ್ಣಮಾಲಿನಿ ಬಟ್ಟೆಬರೆಗಳನ್ನು ಮಾತ್ರ ತೆಗೆದುಕೊಂಡು ಮಗಳೊಂದಿಗೆ ಹೊರಟಳು. ಎಳೆ ವಯಸ್ಸಿನಲ್ಲಿ ಬಾಳುವೆ ಹೂಡಿದಾಗಿನಿಂದ ನೆರಳು ನೀಡಿ ತನ್ನ ಶಕ್ತಿಯ ಸಾರವನ್ನು ಧಾರೆಯೆರೆಸಿಕೊಂಡ ಮನೆಯನ್ನು ಬಿಟ್ಟು ಹೊರ ಡುವಾಗ ಎಷ್ಟೇ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಂಡರೂ ಕಣ್ಣುಗಳು

ೀವವಾದುವು. ಮಕ್ಕಳ ಕೆನ್ನೆಗೆ ಹೂಮುತ್ತನೊತ್ತಿ "ಬಿಡುವಾದಾಗ ಬಾಪ್ಪ." ಂದಳು ಮುರುಳಿಗೆ....ಅದೇ ಧ್ವನಿ ಅದೇ ನುಡಿಯನ್ನು ಪುನರುಚ್ಚರಿಸಿತು ಊರ್ಮಿಳಾದೇವಿಗೆ.

ವೃದ್ಧ ಜನನಿ ಭಾವೋನ್ಮಾದದಿಂದ ನೀಡಿದ ಅನಾಯಕ ಕರೆ ಎದೆಯಾ ಕ್ಕೆ ಇಳಿದು ಅಂತರಂಗದ ಕಲ್ಮಶವನ್ನು ಕದಡಿ ಬಗ್ಗಡಗೊಳಿಸಿತು. ಏನ್ನು ೇಳಬೇಕೋ ಹೊಳೆಯದೆ ಮುರುಳಿ ತುಸು ಶತ್ತರಿಸಿದ. ಕಮಲೇಶ್ ೊರಟೇ ಹೊರಡುತ್ತಾಳೆಂಬುದು ಖಚಿತವಾದ ಮೇಲೆ ಇಲ್ಲೇ ಇರಲು ಒಮ್ಮ ೇಳಿಕೊಂಡಿದ್ದ ಸಹ. ಆದರೂ ಹೊರಟಳಲ್ಲಾ, ಎಂಬುದು ಎಲ್ಲಿಲ್ಲದ ಅಸಮಾ ಧಾನ....ಮುಂದೇನು ಗತಿ ? ಎಂಬ ಹಿರಿಯ ಚಿಂತೆ....ತಾನು ತಪ್ಪಿತಸ್ಥನಾ ದೆನೇ ಎಂಬ ದುಗುಡ. ಕೋಪ ತಾಪ ಸಂತಾಪಗಳಿಂದ ಹೃದಯ ದಣಿಯಿತು. ತನುಮನಗಳು ಜಡೀಭೂತವಾದುವು. ನೈಮರೆತು ನಿಂತ ಮುರುಳಿ.

ಕಮಲೇಶ್ ತನ್ನ ಮನದಲ್ಲಿ ಯಾವ ಕ್ಲೇಶವೂ ಇಲ್ಲವೇನೋ ಎಂಬಂತೆ ಟಾಟಾ' ಹೇಳಿ ತಾಯಿಯೊಂದಿಗೆ ಟ್ಯಾಕ್ಸಿ ಹತ್ತಿದಾಗ ಹೃದಯ ಹಗುರ ವಾಯಿತು. ಮನೆಗೆ ಹೋಗಿ ಸಾಮಾನು ಸರಂಜಾಮುಗಳಲ್ಲಿ ಕೈಯಾಡಿಸು ವಷ್ಟರಲ್ಲಿ ಹೇಮರತಿ ಕರ್ವೆ ಆಗಮಿಸಿದಳು. ಜೊತೆಯಲ್ಲಿ ಅಡುಗೆಗೆ ಸೀತಮ್ಮ ನನ್ನೂ ಪರಿಚಾರಿಕೆಗೆ ಗಂಗಮ್ಮನನ್ನೂ ಕರೆ ತಂದಿದ್ದಳು. ಫರ್ನಿಚರುಗಳಿದ್ದ ಮನೆಯಾದುದರಿಂದ ಯಾವ ಶ್ರಮವೂ ತೋರಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಮನೆ ಅನುಕೂಲ ಹೊಂದಿತು. ಹೇಮರತಿ ಕರ್ವೆ ಹೊರಟುಹೋದ ಸ್ವಲ್ಪ ಹೊತ್ತಿನ ಮೇಲೆ ವಿಜಯಾ ಆಗಮಿಸಿದಳು. ತಿಳಿ ನೀಲಿಯ ಸೀರೆಯನ್ನುಟ್ಟು ಸಾಲು ಸಿರಿಗಳನ್ನು ಚಿಮ್ಮುತ್ತಾ ಒಳಬಂದ ಅವಳನ್ನು ಅತ್ಯಂತ ಆತ್ಮೀಯತೆ ಯಿಂದ ಸ್ವಾಗತಿಸಿದಳು ಕಮಲೇಶ್....ಈ ಜನ್ಮದಲ್ಲಿ ಒದಗಿದ ಮೊದಲನೆಯ ಬಾರಿ ಸ್ವತಂತ್ರವಾಗಿ ಸ್ವಾಗತಿಸುವ ಸುಯೋಗ ತನುಮನಗಳನ್ನು ಅಂಬರ ಕ್ಕೇರಿಸಿ ವದನಮಂಡಲ ಪ್ರಭಾವರ್ಣಗೈಯಿತು. ವಿನೂತನ ಸಂಭ್ರಮ ಸಂಪತ್ತಿಯ ಕಲಕಲ ತರಂಗಾಯಮಾನ ಜನುಮಜನುಮವನ್ನೂ ಶೋಭಾ ಯಮಾನಗೊಳಿಸುವಂತಿತ್ತು, ತನ್ನಲ್ಲಿ ತಾನೇ "ಇಂದು ನನ್ನ ಅಹೋಭಾಗ್ಯದ ದಿನ!" ಎಂದುಕೊಂಡಳು ಕಮಲೇಶ್. ಹೃದಯಗಡಲಿನ ಹೊನ್ನೀರು ಉಕ್ಕಿ ದರೂ ಪ್ರಶಾಂತವಾಗಿಯೇ ಇತ್ತು.

ವಾರ್ಡುಗಳ ಭೇಟಿಯನ್ನು ಮುಗಿಸಿ ಮೆಟ್ಟಿಲಿಳಿದಾಗ ಇಳೆಯ ಮೇಲೆ ಕತ್ತಲೆಯ ಕಾಳಿಕೆ ಕಪ್ಪು ಸೆರಗನ್ನು ಹಾಸಿ ಬಿಟ್ಟಿದ್ದಾಳೆ. ಯಾರಾದರೂ ಜೊತೆಗಾತಿಯರು ಸಿಕ್ಕಿಯಾರೆಂದು ಅತ್ತಿತ್ತ ಕಣ್ಣು ಹೊರಳಿಸಿದರೆ ಯಾರೂ ಕಾಣಿಸಲಿಲ್ಲ. ಎಲ್ಲರೂ ಆಗಲೇ ಹೋಗಿ ಬಿಟ್ಟಿದ್ದಾರೆ. ವಿಜಯಾ ಸಹ ಕಾಣಿಸಲಿಲ್ಲ. ಹೊಸಮನೆ ಆಸ್ಪತ್ರೆಗೆ ಬಹಳ ಹತ್ತಿರವಾದರೂ ಆ ಹಾದಿ ಪರಿಚಿತವಾದುದಲ್ಲ....ಏನು ಮಾಡಲಿ ಎಂದು ಯೋಚಿಸುತ್ತಿರುವಾಗ ಹಿಂದುಗಡೆಯಿಂದ ಪಾದ ಸಪ್ಪಳ ಕೇಳಿ ಬಂತು. ಅದೇ ಘಳಿಗೆಯಲ್ಲಿ ಸನಿಹಕ್ಕೈತಂದ ಹೇಮಲಾಲ್ ಚಂದಾನಿ-"ನನಗಿಂದು ರಾತ್ರಿ ಡ್ಯೂಟಿಯಿದೆ. ಮನೆಗೆ ಹೋಗಿ ಊಟಮಾಡಿ ಬರಬೇಕಾಗಿದೆ. ಹೊರಡುವುದೂ ಸಹ ಹೊತ್ತಾಯಿತು.

"ಓ....! ಇಂದು ನನ್ನ ವೇಳೆಯೂ ಮೀರಿದೆ." ಸುತ್ತಮುತ್ತ ಕವಿದ ಕತ್ತಲೆಯನ್ನು ಸಂವೇದನಾಶೂನ್ಯಳಂತೆ ನಿಟ್ಟಿಸುತ್ತಾ ನುಡಿದಳು ಕಮಲೇಶ್. ಅಪರಿಚಿತಹಾದಿಯಲ್ಲಿ ಒಬ್ಬಳೇ ಹೋಗಬೇಕಲ್ಲ ಎಂಬ ಚಿಂತೆ ಮನಸ್ಸಿಗಿದೆ. ಎಲ್ಲಿಂದಲೋ ಅದೇ ಸಮಯಕ್ಕೆ ಹಿರಿಯ ಗಡಿಯಾರ ಏಳುಗಂಟೆ ಬಡಿಯಿತು.

"ನಿಮ್ಮ ಜೊತೆಯವರಾರೂ ಇಲ್ಲವೇ ?"

"ಎಲ್ಲಿಯೂ ಕಾಣ ಸಿಗಲಿಲ್ಲ. ಹೋಗಿರಬಹುದು ಬಹುಶಃ."

"ನಡೆಯಿರಿ, ಒಂದಿಗೆ ಹೋಗೋಣ."

ಕಮಲೇಶ್ ತನ್ನ ಹೊಸಮನೆಯ ಹಾದಿ ತಿಳಿಸಿ ಆ ಕಡೆಯ ಹಾದಿ ಹಿಡಿದಳು. ಹೇಮಲಾಲ್ ಚಂದಾನಿ ಒಂದುಗೂಡಿ ನಡೆಯುತ್ತಾ ಹೇಳಿದ- "ಡಾ|| ಕೃಷ್ಣಾ ಭಾಪಟ್‌ರ ಪತ್ನಿಗೆ ಲಘು ಹೃದಯಾಘಾತವಾಗಿ ಆಸ್ಪತ್ರೆಗೆ ಕರೆತಂದಿದ್ದಾರೆ ನಿಮಗೆ ಗೊತ್ತೆ ಡಾಕ್ಟರ್ ?"

"ಇಲ್ಲವಲ್ಲಾ...."ವಿಸ್ಮಯ ಚಕಿತಳಾದಳು ಕಮಲೇಶ್.

"ಪಾಪ ...ಅವರು ಒಂದು ನಿಮಿಷವೂ ಮಡದಿಯನ್ನು ಬಿಡದೆ ಕಾದಿದ್ದಾರೆ." ಕರುಣಾಪೂರಿತ ಕಂಠದಿಂದ ನುಡಿದ, ಚಂದಾನಿ.

"ದಂಪತಿಗಳಲ್ಲಿ ಯಾರು ಹೋಗಿಬಿಟ್ಟರೂ ಜೀವನ ಕಷ್ಟ, ಡಾಕ್ಟರ್ !"

"ನಿಮಗದರ ಅನುಭವ ಸ್ವಲ್ಪವೂ ಇಲ್ಲದೆ ನುಡಿಯುತಿದ್ದೀರಿ !" ತಿಳಿಹಾಸ್ಯ ಭರಿತ ಧ್ವನಿಯಲ್ಲಿ ನುಡಿದ ಚಂದಾನಿ. ತುಟಿಗಳಲ್ಲಿ ಮಂದಹಾಸ ನಲಿಯಿತು. ಜನಭರಿತವಾದ ರಸ್ತೆಯಲ್ಲಿನ ಅಂಗಡಿಯ ಸಾಲಿನ ಕಡೆ ದಿಟ್ಟಿ ಹರಿಸಿದ ಕಮ

ಲೇಶಳು ಪ್ರತಿಹಾಸ ತೋರದಿದ್ದರೂ ಸ್ಥಿರ ಗಂಭೀರ ಧ್ವನಿಯಲ್ಲಿ ನುಡಿದಳು. "ಇಲ್ಲದೇ ಏನು ?....ನಮ್ಮ ತಂದೆ ತೀರಿಕೊಂಡು ನಾ ಒಂಟಿಯಾದ ಅನುಭವ ಸಾಲದೆ?"

ಸ್ವಲ್ಪ ಹೊತ್ತು ಗಂಭೀರ ಮೌನ ರಾಜ್ಯಭಾರ ನಡೆಸಿತು.

"ಡಾಕ್ಟರ್, ನೀವು ಅನುಮತಿ ನೀಡಿದರೆ ನಾನೊಂದು ಸಿಗರೇಟು ಹತ್ತಿಸುವೆ." ಅತ್ಯಂತ ವಿನಯಪೂರ್ವಕವಾಗಿ ಕೇಳಿದ ಹೇಮುಲಾಲ್ ಚಂದಾನಿ.

"ಹಚ್ಚಿರಿ, ಅದಕ್ಕೇಕೆ ನನ್ನ ಅನುಮತಿ ?"

"ಜೊತೆಗೂಡಿ ಬಂದಮೇಲೆ ಅನುಮತಿ ಪಡೆಯದಿರುವುದು ಸಭ್ಯತೆಯಲ್ಲ." ಒಂದು ಘಳಿಗೆ ಯೋಚಿಸಿ "ಕೆಲವರಿಗೆ ಸಿಗರೇಟಿನ ವಾಸನೆ ಹಿಡಿಸುವುದಿಲ್ಲ. ನಿಮಗೆ ಹೇಗೋ...."

"ನನಗದು ಸೇರುವುದಿಲ್ಲ. ಆದರೆ ಇಲ್ಲಿ, ಈ ವಿಶಾಲ ಜಗತ್ತಿನಲ್ಲಿ ಅದು ಎಲ್ಲೋ ತೇಲಿ ಹೋಗಬಹುದು. ಆದರಿಂದೇನೂ ಭಾದಕವಿಲ್ಲ."

ಶಾಂತ ಸುಂದರ ಘಟಿಯೊಂದು ನಿಶ್ಶಬ್ದವಾಗಿ ಉರುಳಿತು. ಆಕಡೆಯಿಂದ ಈ ಕಡೆಗೆ ಗಾಳಿ ಬೀಸುತ್ತಿದ್ದುದರಿಂದ ಸಿಗರೇಟಿನ ಕಟುವಾಸನೆ ಗಂಟಲು ಮೂಗುಗಳಲ್ಲಿ ತೂರಿ ಅವಳು ಕೆಮ್ಮತೊಡಗಿದಳು. ಹೇಮುಲಾಲ್ ತಕ್ಷಣ ಸಿಗರೇಟನ್ನು ಬಿಸುಟು "ಕ್ಷಮಿಸಿ ಡಾಕ್ಟರ್, ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂಬಂತಾಯಿತು, ನನ್ನ ಗತಿ."

"ನಾವು ಏನೋ ಬಯಸುತ್ತೇವೆ. ಅದು ಇನ್ನೇನೋ ಆಗುತ್ತದೆ."

"ವಿಧಿ ನಮ್ಮ ಅದೃಷ್ಟದ ಎಳೆಯನ್ನು ನಮಗರಿಯದಂತೆಯೇ ಜಗ್ಗಿ ಬಿಡುತ್ತಾನೆ."

"ವಿಧಿಯ ಕೈವಾಡ ಏನೇ ಇರಲಿ, ನಮ್ಮ ಚಿತ್‌ಶಕ್ತಿ ದೃಢವಾಗಿದ್ದರೆ ವಿಧಿಯೂ ಒಮ್ಮೊಮ್ಮೆ ತಲ್ಲಣಿಸಿಯಾನು....!"

"ಡಾಕ್ಟರ್ ಚಿತ್‌ಶಕ್ತಿ ಮೇಲೊ ? ಆತ್ಮ ಶಕ್ತಿ ಮೇಲೊ ?"

"ಚಿತ್‌ಶಕ್ತಿ ಮೇಲು ಎಂಬುದು ನನ್ನ ಅಭಿಮತ."

"ಆತ್ಮಶಕ್ತಿ ಇಲ್ಲದಿದ್ದಲ್ಲಿ ಚಿತ್‌ಶಕ್ತಿ ಬೆಳೆಯುವುದು ಹೇಗೆ ಡಾಕ್ಟರ್ ? ಮರಕ್ಕೆ ಬುಡವಿಲ್ಲದಿದ್ದರೆ ರೆಂಬೆ ಚಿಗುರೀತೇ ?"

"ಡಾಕ್ಟರ್....ರೆಂಬೆಗೆ ಬುಡವೇ ಆಧಾರವಾದರೂ ಚಿಗುರೊಡೆಯು

ವುದು ರೆಂಬೆಯಲ್ಲಿ ವಿನಾ ಬುಡದಲ್ಲಲ್ಲ. ಮರಕ್ಕೆ ಬುಡ ಆಧಾರವಾದರೂ ರೆಂಬೆ ಚಿಗುರುಗಳಿಂದಲೇ ಶೋಭೆ.”

ತನ್ನ ಅಭಿಪ್ರಾಯವನ್ನು ಮುಂದಿಟ್ಟ ಯುವತಿ ನೇರ ಕಟಾಕ್ಷವನ್ನು ಬೀರಿ ಮೃದು ಮಧುರವಾಣಿಯಲ್ಲಿ ಕೇಳಿದಳು “ಏನು ಹೇಳುತ್ತೀರಿ ಡಾಕ್ಟರ್?”

ಹೇಮಲಾಲ್ ಹಸನಾದ ಮುಗುಳು ನಗೆ ಬೀರಿದ.

“ನಿಜ....ಡಾಕ್ಟರ್. ನನಗೀಗ ಮೂರು ಮಂದಿ ಗಂಡುಮಕ್ಕಳಿದ್ದಾರೆ. ನನ್ನ ಪತ್ನಿ ಒಂದು ಹೆಣ್ಣುಮಗು ಬೇಕು ಎನ್ನುತ್ತಾಳೆ. ಹಾಗೊಂದು ವೇಳೆ ಹೆಣ್ಣುಮಗು ಬಂದರೆ ಚಿತ್‌ಶಕ್ತಿ ಬಂದ ಹಾಗೆ!”

ಕತ್ತಲೆಯ 'ಕಗ್ಗಪ್ಪನ್ನು ಭೇದಿಸಿ ಬೆಳಗುವ ವಿದ್ಯುದ್ದೀಪಗಳ ಪ್ರಕಾಶ ಮ್ಲಾನವಾದ ಬೆಳಕೂ ಸಹ ನಾಚುವಂತಹ ಸುರಮ್ಯವಾದ ನಗುವಿನ ಲಹರಿ ಇಬ್ಬರ ಮುಖದಲ್ಲೂ ಉಕ್ಕಿಹರಿಯಿತು.

ಎಳೆ ಬೆಳಕು ಬೀರುವ ಅರ್ಧಚಂದ್ರನು ಪ್ರತಿಹಾಸ ಬೀರಿದ.

ಅಧ್ಯಾಯ

೧೫

"ಹಾರ್ಟೀ ಕಂಗ್ರಾಟ್ಸ್....ಡಾಕ್ಟರ್!"

ಆ ಆನಂದೋನ್ಮಾದದಿಂದ ಕೂಡಿದ ಅಭಿನಂದನೆಗಳಿಗೆ ಪ್ರತಿವಂದನೆಗಳನ್ನು ಸಲ್ಲಿಸುವಾಗ ಪುಟ್ಟ ಹೃದಯ ಬಿರಿಯುವಂತಾಗುವುದು. ಈ ಮಾನವ ಜಗತ್ತಿನ ವ್ಯರ್ಥವೂ, ಅರ್ಥರಹಿತವೂ, ಕ್ರಮವಿಹೀನವೂ, ಧರ್ಮಬಾಹಿರವೂ ಆದ ರೂಪಕ ಕಾರ್ಯಕ್ರಮಗಳಲ್ಲಿ ನರನಾರಿಯರ ಅಶಾಶ್ವತ ಶರೀರವಲಯಯವನ್ನು ಆಶ್ರಯಿಸಿಕೊಂಡ ಜಯಾಪಜಯಗಳಿಗೆ ಕಾರ್ಯಾಕಾರ್ಯಗಳಿಗೆ ಸೌಂದರ್ಯಾಸೌಂದರ್ಯಗಳಿಗೆ ಎಷ್ಟೊಂದು ಬೆಲೆಯಿದೆ! ಎಷ್ಟೊಂದು ನೆಲೆಯಿದೆ! ಎಷ್ಟೊಂದು ಅರ್ಥವಿದೆ!

ಗೈನಕಾಲಜಿಯ ಡಿಗ್ರಿಯಲ್ಲಿ ಜಯಭೇರಿ ಹೊಡೆದು ಪ್ರಥಮ ಶ್ರೇಣಿಯಲ್ಲಿ ಫಣಿಯಂತೆ ಹೆಡೆಯೆತ್ತಿ ನಿಂತಾಗ ಸುತ್ತ ಮುತ್ತಿನ ಹಲವಾರು ದನಿಗಳು ಅಭಿನಂದನೆಗಳ ಸುರಿಮಳೆಯನ್ನು ಕರೆದುವು. ಮುಂದಿನ ಅಭ್ಯಾಸವನ್ನು ಅನಾಯಾಸವಾಗಿ ಕಳೆದ ಕಮಲೇಶಳ ಮುಂದೆ ಇನ್ನೊಂದು ಹಿರಿಯ ಸಮಸ್ಯೆ ಧುತ್ತೆಂದು ಬಂದು ನಿಂತಿತು. ಒಂದೆಡೆ ಆತ್ಮಾರಾಂ ಕರ್ವೆಯ ಹಿರಿಯ ವ್ಯಕ್ತಿತ್ವ. ಇನ್ನೊಂದೆಡೆ ತರುಣ ಡಾಕ್ಟರುಗಳ ತೀವ್ರ ಸ್ಪರ್ಧೆ.... ತನುಮನಗಳ ಆವೇಗದಲ್ಲಿ ಕ್ಷಣಿಕ ಸುಖಕ್ಕೆ ಮರುಳಾಗಿ ಆತುರದ ಕ್ರಮ ಕೈಗೊಂಡು ಮುಳ್ಳಿನ ಜೇಲಿಯಲ್ಲಿ ಸಿಕ್ಕಿಕೊಳ್ಳಬಾರದು ಎಂಬ ವಿವೇಚನೆಯ ದಂಗೆ. ಇನಿತೂ ಬಿಡುವಿಲ್ಲದೆ ಕೆಲಸ ಮಾಡಿ ಮೈದಣಿದರೆ ಹಲವಾರು ಹಾಳು ಚಿಂತನೆಗಳಿಗೆ ಇಂಬುಕೊಟ್ಟು ಮನಸ್ಸು ದಣಿಯುತಿತ್ತು. ಇದುವರೆವಿಗೂ ಅವಿಶ್ರಾಂತವಾಗಿ ದುಡಿದಿದ್ದಾಯ್ತು. ಇನ್ನಾದರೂ ಕೆಲವು ಕಾಲ ಯಾವ ಹವ್ಯಾಸವೂ ಇಲ್ಲದೆ ಹಾಯಾಗಿರೋಣ ಎಂದರೆ ಸುತ್ತಮುತ್ತಿನ ಚಟುವಟಿಕೆಗಳು ಸುಮ್ಮನಿರಗೊಡಿಸಬೇಕಷ್ಟೆ? ಬಾಳಿಗಾಸರೆಯಾಗಿ ಮಾ ಇದ್ದಾರೆ. ಮತ್ತೇಕೆ ಕಾಲ್ತೊಡಕು? ಮದುವೆಯಾವರೆ ಜೀವನ ಆದರ್ಶಪ್ರಾಯವಾಗಿರ

ಬೇಕು....ಎಲ್ಲಾ ಹೆಣ್ಣು ಗಂಡುಗಳೂ ಮಕ್ಕಳು ಮರಿ ಹೆತ್ತು ಸಂಸಾರ ಮಾಡಿ ಕೊಳ್ಳುತ್ತವೆ. ಅದರಲ್ಲೇನು ವಿಶೇಷ....?

ಆದರ್ಶ....ಜೀವನ. ಜೀವನ....ಆದರ್ಶ.

ಆದರ್ಶದ ಹುರುಳೇನು? ಶ್ರೀರಾಮ ಸೀತೆಯನ್ನು ಆಕೆಗೆ ತಿಳಿಯ ದಂತೆಯೇ ಕಾಡಿಗಟ್ಟಿದುದು ಪರಮಾದರ್ಶವೆ? ಹೋಗಲಿ, ಅದು ಪ್ರಾಚೀನ ಎನಿಸಿದರೂ ಈ ಅತೀತಯುಗದ ಆದರ್ಶಗಳೇನು?....ಹಿಂದೂಸ್ಥಾನದಲ್ಲಿ ಅಂದಿನಿಂದ ಇಂದಿನವರೆಗೆ ಸಾರೋದ್ಧಾರವಾಗಿ ಶೃಂಖಲಾಬದ್ಧಳಾದ ಹೆಣ್ಣಿನ ಜೀವನ ಚಿತ್ರ ಮನದಲೆಯಲ್ಲಿ ಫೇರಿ ನಡೆಸಿತು. ಈಗಲೂ ಈ ಅತೀತಯುಗ ದಲ್ಲೂ ಪ್ರಚಲಿತ ಸ್ತ್ರೀ ಸಮಾಜದ ಬವಣೆ ಅನೂಚಾನವಾಗಿ ನಡೆದು ಬಂದ ರೂಢಮೂಲವಾದುದು. ಭಾರತ ಇತಿಹಾಸದ ಪುಟಗಳಲ್ಲಿ ಅಂದಿಂದಿಗೂ ಅಚ್ಚಳಿಯದೆ ನಿಂದಿರುವ ಸತೀಮಣಿಯರ ಆದರ್ಶವನ್ನೂ ಸತೀತ್ವವನ್ನೂ ಮಾತೃಪದವನ್ನೂ ಅಲ್ಲಗಳೆಯುವಂತಿಲ್ಲ; ಆದರೆ ಅದನ್ನೇ ಸ್ತ್ರೀಜೀವನದ ಮಹೋದ್ದೇಶವೆಂದೂ ಪರಮ ಶ್ರೇಷ್ಠವೆಂದೂ ಅನುಪಮ ಲಕ್ಷ್ಯವೆಂದೂ ಇಂದು ಪರಿಭಾವಿಸುವುದು ಸಾಧ್ಯವೂ ಇಲ್ಲ; ನ್ಯಾಯವೂ ಅಲ್ಲ....ಅಂದಮೇಲೆ ಇಂದಿನ ಆದರ್ಶವೇನು? ಉದಾಹರಣೆಗಾಗಿ ಯಾವುದಾದರೊಂದು ಸಂಸಾರ ವನ್ನು ತೆಗೆದುಕೊಳ್ಳಬಹುದೆ?....ಇಂದು ಕಲಿತವರೂ ಕಲಿಯದವರೂ ಕಣ್ಣು ಕಟ್ಟಿದ ಕುದುರೆಗಳಂತೆ ಒಂದೇಹಾದಿಯ ನೇರಕ್ಕೆ ಓಡುತಿದ್ದಾರೆ. ಏರಿಲ್ಲ; ಪೇರಿಲ್ಲ. ಮತ್ತೇಕೆ ಆದರ್ಶದ ಗೀಳು? ಮುಖ್ಯವಾಗಿ ನೆಮ್ಮದಿಯ ಬಾಳಿದ್ದರೆ ಅದೇ ಹಿರಿತನ; ಕಲಿತ ವಿದ್ಯೆ ವ್ಯರ್ಥವಾಗದಿದ್ದರೆ ಅದೇ ಆದರ್ಶ.

ಮರುಘಳಿಗೆಯಲ್ಲಿ ಡಾ|| ಕೃಷ್ಣಾಭಾಪಟ್ ಮನದಲೆಯಲ್ಲಿ ಮೂಡಿ ನಿಂತರು. ಅವರ ಜೀವನ ನಿಜವಾಗಿಯೂ ಹಾಲ್ಜೇನಿನ ಹೊಳೆಯಂತೆ. ಅವರು ಪತ್ನಿಯಲ್ಲಿಟ್ಟ ಪ್ರೇಮಾದರಕ್ಕೆ ಸೀಮೆಯೇ ಇಲ್ಲ. ಆಕೆ ಹಾರ್ಟ್ ಪೇಷಂಟಾದು ದರಿಂದ ಬಾಳಿನ ಕುಡಿ ಒಡೆಯಲಿಲ್ಲ. ಇನ್ನು ಒಡೆಯುವಂತೆಯೂ ಇಲ್ಲ. ಅವರಿಬ್ಬರಲ್ಲೂ ಇರುವ ಅಜಗಜಾಂತರ ವ್ಯತ್ಯಾಸವನ್ನು ನೋಡಿದರೆ ಎಂತಹ ವರೂ ಮೂಗಿನ ಮೇಲೆ ಬೆರಳಿಟ್ಟಾರು. ಓಹ್! ಭಾಪಟ್ ಉತ್ತರಧೃವ.... ಸತೀ ಭಾಪಟ್ ದಕ್ಷಿಣಧೃವ! ಆ ಇಂದ ಕ್ಷ ವರೆಗೆ ಮುಗಿಲೆತ್ತರಕ್ಕೆ ಏರಿ ನಿಲ್ಲುವ ವ್ಯಕ್ತಿ ಭಾಪಟ್. ಅದೇ ಅವರ ಪಕ್ಕದಲ್ಲಿ ನೋಡಿದರೆ ಆಕೆ ಸರ್ವೇ

ಸಾಮಾನ್ಯ ಹೆಣ್ಣು. ಮನೆಯಲ್ಲಿದ್ದರೆ ಸತಿ ಅವಿಶ್ರಾಂತಳಾಗುವಳೆಂದು ಇನ್ನೂ ಆಸ್ಪತ್ರೆಯಲ್ಲಿಯೇ ಇಟ್ಟುಕೊಂಡಿದ್ದಾರೆ. ಅವರು ನೋಡಿಕೊಳ್ಳುವ ರೀತಿ ತೆಗೆದುಕೊಳ್ಳುವ ಆಸ್ಥೆ ಇನ್ನಾವ ಗಂಡಸಿಗೂ ಆಗುವುದಿಲ್ಲವೇನೋ ಎನ್ನಿಸುವಂತಿದೆ. ಎದೆಯ ಹಕ್ಕಿ ಮೆಲ್ಲನೆ ತಾನೇ ತಾನಾಗಿ ಮೊರೆಯಿಟ್ಟಿತು....ನನ್ನ ಪಾಲಿಗೆ ಅಂತಹ ವ್ಯಕ್ತಿ ಬಂದರೆ ಸಾಕು.

ಮನಸ್ಸು ಅದನ್ನೇ ಮತ್ತೆ ಮತ್ತೆ ಮೆಲುಕು ಹಾಕಿತು....ಇದ್ದರೆ ಜೀವನ ಹಾಗಿರಬೇಕು. ಇಲ್ಲದಮೇಲೆ ಏನಿದ್ದರೂ ವ್ಯರ್ಥ.

ಒಡನೆ ಚಿತ್ತಭಿತ್ತಿಯಲ್ಲಿ ತರುಣ ಡಾಕ್ಟರುಗಳು ಸಾಲುಗಟ್ಟಿ ಫೇರಿ ನಡೆಸಿದರು. ಬಲರಾಂ ಮಿತ್ರ, ಚಂದ್ರಕಾಂತ್, ಅಜಿತ್‌ಪ್ರಸಾದ್, ತಾರಾಶರಣ್, ಸಾಕು....ಸಾಕು ಇನ್ನು ಯಾರೂ ಬೇಡವೇಬೇಡ. ಈ ಎಲ್ಲರ ಸಾಲಿಗೆ ನಿಲ್ಲಿಸಿದರೆ ಚಿತ್ರಸೇನ್ ಕರ್ವೆ ನೂರಕ್ಕೆ ನೂರರಷ್ಟು ಮೇಲು. ಆದರೂ ಅವನೊಂದಿಗೆ ಬಾಳುವೆ ನಡೆಸುವುದೆಂದರೆ ಅವನ ಸತಿಯಾಗಿ, ಬಣ್ಣದ ಬೊಂಬೆಯಾಗಿ, ಮೋಹದ ಗಣಿಯಾಗಿ, ಇಸ್ಸಿಸ್ಸೀ! ಸಾಕಪ್ಪಾ ಸಾಕು. ಭಗವಂತ ನನಗೆ ಸಾಕಷ್ಟು ವ್ಯಕ್ತಿತ್ವ ಕೊಟ್ಟಿದ್ದಾನೆ. ಸ್ವಶಕ್ತಿಯಿಂದ ಆತ್ಮಪ್ರತಿಭೆಯಿಂದ ಆದರ್ಶ ಜೀವನ ನಡೆಸುವೆ....

ಬಲರಾಮನ ಕ್ಯಾರೆಕ್ಟರ್ ಸರಿಯಾಗಿದ್ದಿದ್ದರೆ ತರುಣ ಡಾಕ್ಟರುಗಳಲ್ಲಿ ಆತನಿಗೆ ಪ್ರಥಮ ಸ್ಥಾನ ನೀಡಬಹುದಾಗಿತ್ತು. ಈಗ ಅವನ ಹೆಸರೆತ್ತುವುದೂ ಸಹ ಅಸಹ್ಯ. ಅವನನ್ನು ಬಿಟ್ಟರೆ ಚಂದ್ರಕಾಂತ್....ಹಾಳೂರಿಗೆ ಉಳಿದವನೇ ಗೌಡ. ಇನ್ನಾರಿಗೂ ವರಸಾಮ್ಯವಿಲ್ಲ. ಚಂದ್ರಕಾಂತ್ ಹಂತ ಹಂತದಲ್ಲೂ ಸರಿಸಮಾನವಾಗಿ ನಿಂತ ವ್ಯಕ್ತಿ ಅನಸ್ತೇಶಿಯಾ ಪ್ರೊಫೆಸರ್. ಒಂದು ವೇಳೆ ಅವನನ್ನು ಒಪ್ಪಿದರೂ ಒಪ್ಪಬಹುದು. ರೂಪ ಧನ ಮುಖ್ಯವಲ್ಲ.

"ನೀವು ಇನ್ನೂ ಜೀವನರಂಗಕ್ಕೆ ಕಾಲಿಡದಿರುವುದನ್ನು ನೋಡಿದರೆ ಹಿಮಾಲಯದತ್ತ ಹೆಜ್ಜೆ ಹಾಕುವಂತಿದೆ." ಡಾ|| ಹೇಮಲಾಲನ ಹಾಸ್ಯ ಸರಣಿ.

"ನೀವು ಪಂಜಾಬಿ ಉಡುಗೆಯಲ್ಲಿ ಬಲು ಅಂದವಾಗಿ ಕಾಣಿಸುತ್ತೀರಿ."

–ಯಾರ ಧ್ವನಿ ಅದು?

"ನೀಲಿಯ ಬಣ್ಣ ನಿಮಗೆ ಅನುಪಮ ಸೌಂದರ್ಯವನ್ನು ನೀಡುತ್ತದೆ."

–ಯಾರು ಹಾಗೆಂದದ್ದು ?

"ನಿಮ್ಮ ದೇಹಪ್ರಕೃತಿ ಬಲು ಸೂಕ್ಷ್ಮ. ನೀವು ಹೆಚ್ಚು ದಣಿಯಬಾರದು. ಏನಿದ್ದರೂ ಹೇಳಿರಿ, ನಾನು ಸಹಾಯ ಮಾಡುವೆ!"

–ಯಾರ ನುಡಿ ಅದು ?

"ನಿಜವಾಗಿಯೂ ನೀವು ಹೃದಯ ರಹಿತರು."

–ಎಂದಿದ್ದಾರು ?

ಈ ಎಲ್ಲಾ ಟೀಕೆ ಟಿಪ್ಪಣಿ ಅನುಸಂಧಾನಗಳ ಹಾವಳಿಯಿಂದ ತಪ್ಪಿಸಿಕೊಳ್ಳಲಿಕ್ಕಾದರೂ ಗೃಹಿಣಿಯಾಗುವುದು ಕ್ಷೇಮ. ಸಾಂಘಿಕವಾಗಿದ್ದಾಗ ಹಾಳು ಯೋಚನೆಗಳ ಸೊಲ್ಲೇ ಇರುವುದಿಲ್ಲ. ಒಬ್ಬಳೇ ಇದ್ದರೆ ಅದರ ರೀತಿಯೇ ಬೇರೆ....

ವನವನಾಂತರಗಳಮೇಲೆ ತೀಡಿ ಬಂದ ತಂಗಾಳಿ ಸುಮ ಸಮುಚ್ಚಯಗಳ ಕಂಪನ್ನು ತರುಬಿ ತಂದು ಬೊಗಸೆ ಬೊಗಸೆಯಾಗಿ ಸಿಂಪಡಿಸುತ್ತಿದೆ. ಯೋಚನೆಯ ಸಿರಿಯಲ್ಲಿ ಮೈಮರೆತರೂ ಹೃದಯ ವಿಕಸನಗೊಂಡಿತು. ನಿಶ್ಶಬ್ದವಾಗಿದ್ದ ಆ ಹಾದಿಯಲ್ಲಿ ಮನದಾಂದೋಳನದ ಮಹಾಪೂರದೊಡನೆ ಏಕಾಕಿಯಾಗಿ ಹೆಜ್ಜೆ ಹಾಕುತಿದ್ದ ಕಮಲೇಶಳ ನೋಟ ಸಸ್ಯಶ್ಯಾಮಲಳಾದ ಮಾತೃಭೂಮಿಯ ವೈಭವವನ್ನೂ ಕಾಲಡಿಯ ಗರಿಕೆ ಹುಲ್ಲು ಅಡಿದಾವರೆಗಳಿಗೊತ್ತುವ ಮೃದುಸ್ಪರ್ಶವನ್ನೂ ಅಭಿಮಾನಪೂರ್ವಕವಾಗಿ ನಿಟ್ಟಿಸಿತು....ಆಸ್ಪತ್ರೆಯ ಹೊರವಲಯದಲ್ಲಿ ಹಾದು ಆರನೆಯ ಯೂನಿಟ್ಟಿಗೆ ಕಾಲಿಡುವುದಕ್ಕೂ ಡಾ|| ಬಲರಾಂ ಎದುರಾಗುವುದಕ್ಕೂ ಸರಿಹೋಯಿತು. ಹಸನಾದ ನಗೆಬೀರಿ ಅಭಿವಾದನ ಸಲ್ಲಿಸಿದ ಬಲರಾಂ "ಪ್ರಣಾಮ್ ಡಾಕ್ಟರ್!"

"ಐದು ನಿಮಿಷ ಬಿಡುವು ಮಾಡಿಕೊಳ್ಳಬಲ್ಲಿರಾ ?"

ಅವನ ರೀತಿ ವಿಚಿತ್ರವೆನಿಸಿತು. ಒಂದು ಘಳಿಗೆ ಯೋಚಿಸಿ "ಏಕೆ ಹೇಳಿ?"

"ನಮ್ಮಲ್ಲಿ ಒಂದು ಕೇಸಿದೆ, ನೀವು ನೋಡುವುದು ಒಳ್ಳೆಯದಿತ್ತು."

ಕಮಲೇಶ್ ಮರು ಮಾತಾಡದೆ ಅವನ ಹಿಂದೆ ಹೊರಟಳು.

"ಇಲ್ಲೇ....ನನ್ನ ಆಫೀಸಿನಲ್ಲಿ."

ಬಲರಾಂ ಮಿತ್ರ ಗೈನಕಾಲಜಿಯಲ್ಲಿ ಕಮಲೇಶಳೊಂದಿಗೆ ಜಯಬೇರಿ ಹೊಡೆದ ವ್ಯಕ್ತಿ. ಅನೇಕ ವೇಳೆ ಇಬ್ಬರೂ ಒಂದುಗೂಡಿ ಕೆಲಸ ಮಾಡುವ

ಆಗತ್ಯ ಬೀಳುವುದುಂಟು. ಅವನ ಕರೆಯಲ್ಲಿ ಯಾವ ವಿಶೇಷವನ್ನೂ ಕಾಣದೆ ಹೆಜ್ಜೆ ಹಾಕಿದಳು ಕಮಲೇಶ್. ಆಫೀಸಿನ ಒಳಕೊಠಡಿಯಲ್ಲಿ ಬೆಂಚಿನಮೇಲೆ ಮುಖಮುಡಿಯಾಗಿ ಕುಳಿತ ತರುಣಿಗೆ ಆಣತಿಯೀಯುವ ದನಿಯಲ್ಲಿ ನುಡಿದ ಬಲರಾಂ "ಏಳು, ಮೇಜಿನಮೇಲೆ ಮಲಗು."

ಆ ಅನಿರೀಕ್ಷಿತ ಧೀರಪೌರುಷ ದೇಹಪ್ರಕೃತಿಯನ್ನು ಒಂದು ಘಳಿಗೆ ಸ್ತಬ್ಧಗೊಳಿಸಿತು. ಕಮಲೇಶ್ ಕೆಲವು ಕ್ಷಣ ನಿಶ್ಚಲನಯನಗಳಿಂದ ನಿಟ್ಟಿಸಿದಳು.

ಹುಡುಗಿ ಮಾತನಾಡಲೂ ಇಲ್ಲ; ಬಾಗಿದ ತಲೆಯನ್ನು ಎತ್ತಲೂ ಇಲ್ಲ.

ಬಲರಾಮನ ಸಹನೆ ಅಲ್ಲಿಗೆ ಮೀರಿತು. ಏರಿದ ದನಿಯಲ್ಲಿ ಪುನಃ ಅಪ್ಪಣೆ ಮಾಡಿದ. ಆ ಮುಹೂರ್ತದಲ್ಲಿ ಕಮಲೇಶಳಿಗೆ ಹುಡುಗಿಯ ದೀನಸ್ಥಿತಿ ಮನವನ್ನು ಮಂಜಿನಂತೆ ಕರಗಿಸಿತು. ಅರ್ಥರಹಿತವಾದ ಅವನ ದರ್ಪವನ್ನು ಕಂಡು ಏನೆನ್ನಬೇಕೋ ಹೊಳೆಯಲಿಲ್ಲ; ಒಂದು ಘಳಿಗೆ ಅವಾಕ್ಕಾದಳು ಕಮಲೇಶ್. ಆಗ ಆ ಮುಗ್ಧೆಯ ಬಳಿಯಲ್ಲಿದ್ದ ಹಿರಿಯ ಹೆಂಗಸು ರೋಷಭೀಷಣಳಾಗಿ ಅವಳನ್ನು ಮಲಗಲು ಹೇಳಿದಳು. ವಿಷಯ ನುಂಗಲಾರದ ತುತ್ತಿನಂತಾಗಿ ಕಮಲೇಶ್ ಮಿಕಿ ಮಿಕಿ ನೋಡಿದಳು.

ಖಿನ್ನಮುಖಿಯಾದ ತರುಣಿ ಮಲಗಿಕೊಳ್ಳುತ್ತಲೂ ಬಲರಾಂ ಕಮಲೇಶಳನ್ನು ಪರೀಕ್ಷಿಸಲು ಕೇಳಿಕೊಂಡ. ಕಮಲೇಶ್ ಪರೀಕ್ಷಿಸುತ್ತಾ "ಗರ್ಭಿಣಿ. ಐದು ತಿಂಗಳಾಗಿದೆ." ಎಂದಳು. ತರುಣಿಯ ಮುಖ ನೆತ್ತರು ಹೆಪ್ಪುಗಟ್ಟಿದಂತೆ ಕಪ್ಪು ತಳೆಯಿತು. ಹಣೆಯ ಮೇಲೆ ಬೆವರಿನ ಕಣಗಳು ತುಂತುರು ತುಂತುರಾಗಿ ಮೂಡಿ ಅಂತಃಸ್ಥಿತಿಯನ್ನು ಸಾರಿ ಹೇಳಿದುವು. ಆಶ್ಚರ್ಯತೃಷಿತ ನೋಟವನ್ನು ಹುಡುಗಿಯ ಮೈಮೇಲೆ ಹರಿಸಿ ಅವಳು ವಿವಾಹಿತೆ ಎಂಬುದನ್ನು ಖಚಿತ ಮಾಡಿಕೊಂಡನಂತರ ಕಮಲೇಶ್ ಸ್ವಲ್ಪ ಆಲೋಚನೆಗೊಳಗಾದಳು. ಕೊರಳಲ್ಲಿ ಕರಿಮಣಿ ಸಾಕ್ಷಿಯಾಗಿದೆ....ಮತ್ತೇಕೆ?

ಬಲರಾಂ ನಗುಮುಖದಿಂದ ವಿಷಯವನ್ನು ಮುಂದಿಟ್ಟ, "ಡಾಕ್ಟರ್, ಅವಳಿಗೆ ಮದುವೆಯಾಗಿ ಕೇವಲ ಒಂದು ತಿಂಗಳಾಗಿದೆ. ಗಂಡನ ಕಡೆಯವರಿಗೆ ಅನುಮಾನ ತೋರಿ ವೈದ್ಯಪರೀಕ್ಷೆಗೆ ಕರೆತಂದಿದ್ದಾರೆ."

ಸರಿ, ಪ್ರೌಢೆ ಅವಾಚ್ಯ ಶಬ್ದಗಳ ಸುರಿಮಳೆಯನ್ನೇ ಕರೆದಳು-ಅಲ್ಲಿ.

ಬಲರಾಂ ವಿಜಯೋತ್ಸಾಹದಿಂದ ನುಡಿದ "ಹುಡುಗಿ ಸಾಮಾನ್ಯೆಯಲ್ಲ. ನಾನು ಪರೀಕ್ಷೆಗೆ ಕೈ ಹಚ್ಚುವ ಮೊದಲೇ ತಾನು ಮಲೇರಿಯಾ ರೋಗಿಯೆಂದೂ ತನಗೆ ಬಹಳ ದಿನಗಳಿಂದ ಜ್ವರಗಡ್ಡೆಯಿದೆಯೆಂದೂ ಹೇಳಿಕೊಂಡಿದ್ದಾಳೆ. ನನ್ನ ವರದಿ ಹೊರಬಿದ್ದಮೇಲೆ ನಾನು ಅನ್ಯಥಾ ಆಪಾದಿಸಿದುದಾಗಿ ಪ್ರತಿಭಟಿಸಿದ್ದಾಳೆ. ಅದಕ್ಕೆಂದೇ ನಾನು ನಿಮ್ಮನ್ನು ನೋಡಹೇಳಿದ್ದು.

ಕಮಲೇಶ್ ಗಾಢವಾದ ಚಿಂತೆಗೊಳಗಾದಳು. ಮನಸ್ಸು ಬೆಣ್ಣೆಯಂತೆ ಕರಗಿತು.

ಪ್ರೌಢೆ ದನಿಯನ್ನು ಹರಿಯಬಿಟ್ಟಳು "ನಾವು ತಿಳಿಯದೆಲೆ ತಮ್ಮನಿಗೆ ತಂದುಕೊಂಡೆವು. ತೌರುಮನೆಗೆ ಕರೆದುಕೊಂಡು ಹೋದನಂತರ ನಮಗೆ ತಿಳಿಯದಂತೆ ವೈ ಕಳೆಸುವ ಯೋಚನೆಯಿಂದ ಧಾರೆಯೆರೆದಿದ್ದಾರೆ....ಎಂಥಾ ಹೀನ ಜನ...."

"ಅರಿತೋ ಅರಿಯದೆಯೋ ಅನೇಕರು ತಪ್ಪು ಮಾಡುತ್ತಾರೆ. ಹೆಣ್ಣು ನೈತಿಕಪತನ ಹೊಂದಿದಾಗ ಸಾಮಾಜಿಕ ದೂಷಣೆಗೆ ಒಳಗಾಗುವುದು ಸಹಜ ಹಾಗೆಂದು ಯಾವ ಅಕೃತ್ಯವನ್ನೂ ಕೈಗೊಳ್ಳಬಾರದು.' ಒಂದುವೇಳೆ ನಿನಗೆ ಸಾಮಾಜಿಕ ಭೀತಿ ಇರುವುದಾದಲ್ಲಿ ಇಲ್ಲೇ ಇದ್ದು ಸಮಸ್ಯೆಯನ್ನು ಬಗೆಹರಿಸಿಕೊ. ಅನಂತರ ಯಾವುದಾದರೊಂದು ವ್ಯವಸ್ಥೆ ಮಾಡಿಕೊಳ್ಳಬಹುದು.... ನೀನು ಇನ್ನೆಂದೂ ತಪ್ಪುಹೆಜ್ಜೆ ಇಡಬೇಡ."

ಕಮಲೇಶ್ ಅವಳ ಬೆನ್ನಿನ ಮೇಲೆ ಸ್ನೇಹಭಾವದಿಂದ ಕೈಯಿಟ್ಟು ಅತ್ಯಂತ ಆತ್ಮೀಯತೆಯಿಂದ ನುಡಿದಳು, ಕಗ್ಗಲ್ಲಿನ ನೆಲೆಯಲ್ಲಿ ಜುಳುಜುಳು ಹರಿದು ಬರುವ ಸಿಹಿನೀರಿನ ಬುಗ್ಗೆಯಂತೆ ಹರಿದು ಬಂತು ದನಿ. ಕಾರುಣ್ಯ ಪೂರ್ಣವಾದ ಹಿತನುಡಿ ಹುಡುಗಿಯ ಎದೆಯಲ್ಲಿ ಹುದುಗಿದ್ದ ದುಃಖವನ್ನು ಸೂಜಿಗಲ್ಲಿನಂತೆ ಸೆರೆಹಿಡಿಯಿತು. ಆ ದುರ್ದಮ್ಯವಾದ ದುಃಖದ ಮಹಾಪೂರವನ್ನು ತಡೆಯಲಾರದೆ ಬಳಬಳ ಅಳತೊಡಗಿದಳು.

ಯಾವುದೋ ಯಾರದೋ ಅಮಾನವೀಯ ಕಾಮುಜ್ವಾಲೆಗೆ ಸಿಲುಕಿ ಕಲ್ಯಾಣಪುಷ್ಪ ದಹಿಸಿ ಹೋಗಿದೆ. ಇರಲಿ....ತಪ್ಪಿಗೆ ಶಿಕ್ಷೆಯೊಂದೇ ಅಲ್ಲ; ಕ್ಷಮೆ ದಯೆಗಳೂ ಇವೆ....

ಯೋಚಿಸುತ್ತಾ ಕೇಳಿದಳು ಕಮಲೇಶ್, "ನೀನು ಇಲ್ಲೇ ಇರುವೆಯಾ?"

"ನನಗೆ ತಾಯಿ ಇದ್ದಾರೆ. ನಾನು ಅವರಲ್ಲಿಗೆ ಹೋಗುವೆ."

"ಒಂದು ವೇಳೆ ನಿನಗೆ ಮಗುವನ್ನು ಸಾಕುವುದಕ್ಕಾಗದಿದ್ದರೆ ಆಸ್ಪತ್ರೆಗೆ ೦ಟ್ಟುಬಿಡು. ನಾವು ನೋಡಿಕೊಳ್ಳುತ್ತೇವೆ."

ಅವರು ಹೊರಟರು. ಕಮಲೇಶ್ ಹೊಸ್ತಿಲು ದಾಟಿ ವರಾಂಡಕ್ಕೆ ಕಾಲಿ ುತ್ತಲೂ ಎದೆಯ ನೆಲೆಯಿಂದ ಅಸಹನೀಯವಾದ ದುಗುಡಭರಿತ ಸ್ವರ ೂರಬಿತ್ತು "ಅವಳಿನ್ನೂ ಹದಿನಾರು ಹದಿನೇಳರ ಹುಡುಗಿ....ಮೇಲಾಗಿ ಳ್ಳಿಯ ಮುಗುದೆ. ಅಜ್ಞಾನದಿಂದಲೋ ಹಣದ ಕೊರತೆಯಿಂದಲೊ ಅಥವಾ ಣಿಕ ಸುಖಾಭಿಲಾಷೆಯಿಂದಲೋ ಏನೋ ಒಂದು ತಪ್ಪು ಮಾಡಿರಬಹುದು. ದರಲ್ಲಿ ಗಂಡಸು ಪೂರ್ಣಭಾಗಿಯಾದರೂ ಅವನಿಗೆ ಶಿಕ್ಷೆಯಿಲ್ಲ. ಹೆಣ್ಣು ತನ್ನ ಪ್ಪು ಮನವರಿಕೆಯಾದೊಡನೆಯೇ ಸತ್ಪ್ರವರ್ತನೆ ಹೊಂದುತ್ತಾಳೆ. ಆದರೆ ಮಾಜ ಆಕೆಗೆ ಸ್ವಾಗತ ನೀಡುವುದೇ ?....ಹೊಸ್ತಿಲಿನಾಚೆ ಇಟ್ಟು ಎಲ್ಲಾ ಾಗಿಲುಗಳನ್ನೂ ಮುಚ್ಚಿ ಅದನ್ನೆ ಆಜನ್ಮಪರ್ಯಂತ ಅನುಭವಿಸಬೇಕೆನ್ನುವ ಠಿಣಮಯ ಕಟ್ಟಳೆ ನೀಡುತ್ತದೆ....ಇದು ಯಾವ ಧರ್ಮ? ಈ ಜಗದ್ವ್ಯಾ ಾರದಲ್ಲಿ ನೀವುಗಳು ಹೊಂದಿಸಿಕೊಂಡ ಸ್ವಸುಖಕ್ಕೆ ಲೀಲಾವಿಲಾಸಕ್ಕೆ ಇತಿ ುತಿಯೇ ಇಲ್ಲ, ತನ್ನಂತೆಯೇ ಉಸಿರಾಡುವ ಇನ್ನೊಂದು ಜೀವದ ತೇಜೋ ಧೆಗೈದು 'ಪಾಪಕಾರಿಣಿ' ಎಂದು ಹೆಸರಿಸುವುದು ನಿಮಗೆ ಅನ್ಯಾಯವೆನಿ ದೇ ? ಕಸಾಯಿಖಾನೆಯ ಕ್ರೌರ್ಯಕ್ಕಿಂತಲೂ ಮಿಗಿಲು ನಿಮ್ಮ ನೀತಿ!"

ಬಲರಾಮನ ವಿಜಯೋತ್ಸಾಹಕ್ಕೆ ತಣ್ಣೀರೆರೆಚಿದಂತಾಯಿತು. ಏನೋ ೇಳಲು ತೊದಲಿದರೂ ತುಟಿಗಳು ಬಿರಿಯಲಿಲ್ಲ. ಒಂದುಗೂಡಿ ಹೆಜ್ಜೆ ಾಕಿದ. ಕಣ್ಣು ನೇರಕ್ಕೆ ಕಿರಿಕಿರಿದಾಗಿ ಸಣ್ಣ ಹಾದಿಯಂತೆ ಕಾಣಿಸುವವರೆಗೂ ಂರಿದು ಅನಂತರ ಬಲಗಡೆಗೆ ತಿರುಗಿದೆ ಕಾರಿಡಾರು.

"ಹಿಂದೂಸ್ಥಾನದಲ್ಲಿ ಹೆಣ್ಣಿನ ಶ್ರೇಯೋಭಿಲಾಷೆ ಯಾರಿಗೂ ಇಲ್ಲ. ಹೆಣ್ಣು ಕೇವಲ ತನ್ನ ಸ್ವತ್ತಾಗಿರಬೇಕೆಂಬುದು ಪ್ರತಿಯೊಬ್ಬರ ಭಾವ. ಈ ದುರ್ಬುದ್ಧಿಯೇ ಅವಳನ್ನು ಪಾತಾಳಕ್ಕೆ ತಳ್ಳುತ್ತಿರುತ್ತದೆ. ಹತ್ತಿ ಮೇಲೆ ಬರ ಲ್ಲ ಸಾಹಸಿಗರು ಮಾತ್ರ ದಡ ಕಾಣುತ್ತಾರೆ. ಮಿಕ್ಕವರೆಲ್ಲ ಎಲ್ಲೆಂದರಲ್ಲಿ ಸಮಾಧಿ ಹೊಂದುತ್ತಾರೆ." ವಿಶಾದಪೂರ್ವಕವಾಗಿ ಹೊಮ್ಮಿತು ಹೆಣ್ದನಿ.

"ನಿಜ ಡಾಕ್ಟರ್...." ಯಾವುದೋ ಭಾವನಾಲೋಕದಲ್ಲಿ ಮುಳುಗಿದ್ದು

ಪ್ರಾಸಂಗಿಕವಾಗಿ ಉತ್ತರ ನೀಡಿದಂತೆ ನುಡಿದ ಬಲರಾಂ. ತುಟಿಗಳಲ್ಲಿ ನೀರಸ ನಗೆ ಹರಿದಾಡಿತು.

"ಈ ಪುಣ್ಯಜೀವಿಗಳ ಪುಣ್ಯಬಲವಿಲ್ಲದಿದ್ದಲ್ಲಿ ಈ ವಿಶಾಲಭಾರತದ ಕತೆ ಏನಾಗುತಿತ್ತೊ....!"

ಬಲರಾಂ ಫಕ್ಕನೆ ನಕ್ಕುಬಿಟ್ಟ.

"ಜೀವನಜ್ಯೋತಿ ಸ್ತ್ರೀಯೊಬ್ಬಳಿಂದಲೇ ಉರಿಯುವುದಿಲ್ಲ ಅಂದರೆ ಒಪ್ಪಿ ಕೊಳ್ಳುತ್ತೀರಷ್ಟೆ ?"

"ಗೊತ್ತು....ನಿಮ್ಮ ಅರ್ಧಾಂಶವನ್ನು ಕಳೆದುನೋಡಿದರೆ ನಿಮ್ಮ ಬೆಲೆ ನಿಮಗೆ ತಿಳಿಯುತ್ತದೆ. ಮೇಲಾಗಿ ನೈತಿಕಬಲವೂ ಪುಣ್ಯಬಲವೂ ಅವಳಕಡೆ ಯಿಂದಲೇ ಬರಬೇಕು...."

ಬಲರಾಂ ಎರಡೂ ಕೈಗಳನ್ನು ವಿಶಾಲವಾದ ವಕ್ಷದ ಮೇಲೆ ಕಟ್ಟಿ– "ಹಾಗಾದರೆ, ನಮ್ಮಲ್ಲಿ ಏನೇನೂ ಸತ್ವವಿಲ್ಲವೆಂದು ನಿಮ್ಮ ಅಭಿಪ್ರಾ ಯವೇ ?"

ಆ ಸವಾಲಿಗುತ್ತರವಾಗಿ ಇನಿದನಿ ಹೊರಬಿತ್ತು "ನನ್ನದು ಕೇವಲ ಅಂದಾಭಿಮಾನನಲ್ಲ. ಯುಗಯುಗಾಂತರಗಳಿಂದ ನಡೆದು ಬಂದ ಈ ಮಾನವ ಇತಿಹಾಸವನ್ನು ಒರೆಗೆ ಹಚ್ಚಿ ನೋಡಿದರೆ ಕಂಡುಬರುವ ಉದ್ದಂಡ ರಹಸ್ಯ ಸ್ತ್ರೀ ತಪೋಬಲ...."

"ಹಾಂ....! ಅಷ್ಟೇ ಆತ್ಮವಂಚನೆಯೂ ಇದೆ!" ತುಂಟನಗೆ ಬೀರಿದ.

ಅದೇ ಮುಹೂರ್ತದಲ್ಲಿ ತಪ್ಪು ಹೆಜ್ಜೆಯಿಟ್ಟು ಮುಗ್ಗರಿಸಿದ ಅವಳ ನಳಿದೋಳನ್ನು ಅದುಮಿ ಹಿಡಿದ ಬಲರಾಂ. ಹಾದಿಯುದ್ದಕ್ಕೂ ಓಡಾಡುವ ಜನ ಜಾಪತ್ತುಗಳಿಂದ ಘಳಿಗೆ ಘಳಿಗೆಗೂ ಹಾದಿಕಟ್ಟುತಿತ್ತು. ಔಷಧಿಗಾಡಿ ಗಳು, ರೊಟ್ಟಿಗಾಡಿಗಳು, ಗಾಲಿಕುರ್ಚಿಗಳು, ಗಾಲಿಮಂಚಗಳು ಕಿವಿ ಗಡ ಚಿಕ್ಕುವಂತೆ ಸದ್ದುಗೈಯುತ್ತಾ ಹರಿದಾಡುತ್ತಿವೆ. ರೋಗಿಗಳಿಗೆ ಬೆಳಗಿನ ಉಪ ಹಾರ ತಂದ ಮಂದಿಯೂ ಹಿಂದೆ ಮುಂದೆ ಓಡಾಡುತಿದ್ದು ಕಾರಿಡಾರು ಗದ್ದ ಲದಿಂದ ಕೂಡಿತ್ತು. ರೊಟ್ಟಿಗಾಡಿಗೆ ಹಾದಿ ಬಿಡುವ ಗೊಂದಲದಲ್ಲಿ ತಪ್ಪು ಹೆಜ್ಜೆ ಇಟ್ಟು ಎಡವಿದಾಗಲೇ ಬಲರಾಂ ತೋಳು ಹಿಡಿದದ್ದು. ಆಕಸ್ಮಿಕವಾ ದುದರಿಂದ ಲೆಕ್ಕಿಸದೆ ಹೆಜ್ಜೆ ಹಾಕಿದರೂ ಆತನ ರೀತಿ ನೀತಿಗಳನ್ನು ಚೆನ್ನಾಗಿ

ಮನನ ಮಾಡಿದ್ದ ಅವಳಿಗೆ ಅದು ಮನವನ್ನು ಮುಳ್ಳಿನಂತೆ ಕುಕ್ಕಿತು. ಆಕ ಸ್ಮಿಕವಾಗಿ ಒದಗಿದ ಸಂದರ್ಭವನ್ನು ಬೇಕಾಗಿಯೇ ಉಪಯೋಗಿಸಿಕೊಂಡ ನೆಂಬುದು ಹೃದ್ಗತವಾಗಿ ಕೋಪಪರವಶಳಾದುದರಿಂದ ಅವನ ಟೀಕೆಗೆ ಉತ್ತರ ಹೇಳುವುದೂ ಸಹ ಮರೆತು ಹೋಯಿತು.

"ನಾನು ಹಿಡಿದುಕೊಳ್ಳದಿದ್ದಲ್ಲಿ ನೀವು ಬೀಳುತಿದ್ದಿರಿ!" ವಿಜಯದ ಧಾಟಿಯಲ್ಲಿ ನುಡಿದ ಬಲರಾಂ.

"ಏನಿಲ್ಲ." ಎಂದಷ್ಟೇ ನುಡಿದು ಉಳಿದ ಹತ್ತು ಹೆಜ್ಜೆ ದಾಟಿ ವಾರ್ಡಿಗೆ ಪದಾರ್ಪಣೆ ಮಾಡಿದಳು. ಬಲರಾಂ ತನ್ನ ಹಾದಿ ಹಿಡಿದ.

ಒಂದೆರಡು ವಾರಗಳ ಹಿಂದೆ ತಲೆಗೆ ಪೆಟ್ಟುತಾಗಿ ಮೂರ್ಛಾವಸ್ಥೆ (COMA) ಯಲ್ಲಿದ್ದ ಹೆಣ್ಣು ಇನ್ನೂ ಪ್ರಜ್ಞೆ ಬಾರದೆ ಹಾಗೇ ಇದ್ದಾಳೆ. ಅವ ಳನ್ನು ಪರೀಕ್ಷಿಸುತಿದ್ದ ಡಾ|| ಜಮುನಾ ಮೈ ಕೈ ಮುಟ್ಟಿ, ಚಿವುಟಿ ಅವಳಿಗೆ ತಿಳಿಯುತ್ತದೆಯೇ ಇಲ್ಲವೇ ಎಂಬುದನ್ನು ಗಮನಿಸಿದಾಗ ಅವಳು ಕೈಯನ್ನು ಹಿಂದಕ್ಕೆಳೆದುಕೊಂಡಳು. ಡಾಕ್ಟರ ಮುಖ ಅರಳಿತು. "ಪರವಾಯಿಲ್ಲ, ಇನ್ನು ಬೇಗನೆ ಚೇತರಿಸಿಕೊಳ್ಳುತ್ತಾಳೆ."

ಕಮಲೇಶ್ ಅವಳ ಪ್ರಗತಿಯನ್ನು ಸಂತಸದಿಂದ ವೀಕ್ಷಿಸಿದಳು. ಇವರು ಕೆಲಸ ಮುಗಿಸಿ ಹೊರಬೀಳುವ ಮುನ್ನ ಡಾ|| ಕೃಷ್ಣಾಭಾಪಟ್ ತನ್ನ ಸಹ ಪಾಟಿಗಳೊಡನೆ ಆಗಮಿಸಿದರು. ವಂದನೆಗಳ ವಿನಿಯೋಗ ಅನುನಯದಿಂದ ನಡೆದ ಬಳಿಕ ಕೇಳಿದರು ಡಾ|| ಭಾಪಟ್ "ಹೇಗಿದ್ದಾಳೆ ನಿಮ್ಮ ಪೇಷಂಟ್?"

"ಓ....ಈಗೀಗ ಮೈ ತಿಳಿವು ಮೂಡುತ್ತಿದೆ; ಇಷ್ಟರಲ್ಲೇ ಚೇತರಿಸಿಕೊ ಳ್ಳುತ್ತಾಳೆ." ಎಂದ ಡಾ|| ಜಮುನಾ ಪುನಃ ಕೇಳಿದಳು "ಹೇಗಿದ್ದಾರೆ ಶ್ರೀಮತಿ ಭಾಪಟ್?"

"ತುಂಬ ವಂದನೆಗಳು....ದೇವರು ದಯಾಮಯ"

ಡಾ|| ಕೃಷ್ಣಾಭಾಪಟ್ ಕೋಮಾ ಪೇಷಂಟಿನ ಚಾರ್ಟಿನ ಕಡೆಗೆ ಕಣ್ಣಾ ಲಿಗಳನ್ನು ಹೊರಳಿಸಿದರು. ಅಂದಿನಿಂದ ಇಂದಿನವರೆಗೆ ಸ್ಥಿತಿಗತಿ ಪ್ರಗತಿಪರ ವಾಗಿರುವುದನ್ನು ಅಂಕಿ ಅಂಶಗಳು ಸಾರಿ ಹೇಳುತ್ತಿವೆ. ರೋಗಿಯ ಹೆಸರು ಬರೆಯಬೇಕಾದ ಕಡೆ "ತಿಳಿಯದು" ಎಂದು ಬರೆಯಲಾಗಿತ್ತು. ಅಪಘಾತಕ್ಕೀ ಡಾದಾಗಿನಿಂದ ಪ್ರಜ್ಞೆ ಬಂದಿಲ್ಲವಾದುದರಿಂದ ಅವಳ ಹೆಸರು ತಿಳಿದುಕೊಳ್ಳ

ಲಾಗಿರಲಿಲ್ಲ. ಮನೆ ಮಠ ಕುಟುಂಬವರ್ಗದವರನ್ನು ಸಹ ತಿಳಿಯುವಂತಿಲ್ಲ. ಪತ್ರಿಕೆಗಳಲ್ಲಿ ಪ್ರಕಟಿಸಿದರೂ ಯಾರೂ ಅವಳನ್ನು ಹುಡುಕಿಕೊಂಡು ಬರಲಿಲ್ಲ. ಅವಳನ್ನು 'ಕೋಮಾ ಪೇಷಂಟ್' ಎಂದು ಕರೆಯಲಾಗುತಿತ್ತು.

"ಡಾಕ್ಟರ್, ಅವಳನ್ನು ನಾವು'ಕೋಮಾ ಪೇಷಂಟ್' ಎನ್ನುವುದಕ್ಕಿಂತ 'ಕಾಮಾಕ್ಷಿ' ಎನ್ನೋಣ" ಎಂದರು ಡಾ|| ಕೃಷ್ಣಾ ಭಾಪಟ್.

"ಆಗಬಹುದು. 'ಕೋಮಾ ಪೇಷಂಟ್' ಮತ್ತು 'ಕಾಮಾಕ್ಷಿ' ಎರಡೂ ಹೊಂದುತ್ತೆ. ನೀವು ಒಳ್ಳೆ ಹೆಸರಿಟ್ಟದ್ದೀರಿ." ಎಂದಳು ಡಾ|| ಜಮುನಾ. ಮುಖದಲ್ಲಿ ಸಂತಸದ ಮುದ್ರೆಯೊತ್ತಿತು. ಅಲ್ಲಿಂದ ಕಮಲೇಶ್ ಪರೀಕ್ಷಾ ಕೊಠಡಿಗೆ ಬಂದಾಗ ರೋಗಿಗಳು ಸಾಲಾಗಿ ಕುಳಿತಿದ್ದರು. ಸುಧಾರಾಣಿ ಜುಬೇದಾಬೇಗಂ ಆಗಲೇ ಅಲ್ಲಿದ್ದರು. ಒಬ್ಬೊಬ್ಬರನ್ನಾಗಿ ಪರೀಕ್ಷಿಸಿ ಔಷಧಿಯ ಚೀಟಿ ಬರೆದು ಕೊಟ್ಟು ಕಳುಹಿಸುವ ಕಾರ್ಯಾಗಾರ ಅದು. ಈ ಸಲ ಹೆಣ್ತನಕ್ಕೆ ಮೀರಿ ಬೃಹದಾಕಾರವಾಗಿ ಬೆಳೆದ ಹೆಣ್ಣೊಂದು ಒಳ ಬಂದಿತು. ಆಕಾರರಹಿತ ವಾದ ಮೈಯಲ್ಲಿ ಕತ್ತು, ತಲೆಯನ್ನು ಹುಗಿದಿಟ್ಟಂತೆ ತೋರುವ ಹೆಣ್ಣನ್ನು ನೋಡುತ್ತಲೂ 'ಪಾಪ' ಎನ್ನಿಸುವಂತಿತ್ತು. ಹೆಬ್ಬಂಡೆಯೊಂದು ನಡೆದು ಬಂದಂತೆ ನಡೆದು ಬಂದ ಅವಳು ಸಣ್ಣಗೆ ಮೇಲುಸಿರುಬಿಡುತ್ತಾ ಕುಳಿತು ಕೊಂಡಳು. ಮುಖ ಮುದ್ರೆಯಲ್ಲಿ ಯೋಚನೆಯ ತೆರೆ ಲಾಸ್ಯವಾಡುತಿತ್ತು. ಸಂಕಟ ಭರಿತ ದನಿಯಲ್ಲಿ ನುಡಿದಳು "ಈ ಮೈ ಇಳಿಸಲು ಏನಾದರೂ ಸಹಾಯ ಮಾಡಿ ಡಾಕ್ಟರ್."

ಎದುರಿಗಿದ್ದ ಕುರ್ಚಿ ಸಾಲದುದರಿಂದ ಪಲ್ಲಂಕದ ಮೇಲೆ ಕುಳಿತು ಕೊಂಡಳು, ಅವಳು.

"ನಿಮ್ಮ ತೂಕ ಯಾವಾಗಿನಿಂದ ಹೆಚ್ಚಿತು ?"

ಚಿಕ್ಕಂದಿನಿಂದಲೂ ನನ್ನ ಶರೀರಪ್ರಕೃತಿ ಸ್ಥೂಲ. ದಿನಗಳು ಕಳೆದಷ್ಟೂ ನಿಲುಗಡೆಯಿಲ್ಲದಂತೆ ಬೆಳೆಯುತ್ತಲೇ ಇದೆ. ಪುರಾಣ ಕಾಲದ ರಾಕ್ಷಸ ಜನ್ಮಕ್ಕೆ ಜಾರುತಿದ್ದೇನೆಯೇ ಎಂಬಷ್ಟು ಯೋಚನೆ ಈಗ ಬರುತ್ತಿದೆ." ಅವಳು ನಗುತ್ತಾ ಹೇಳಿದಳು.

"ಮೈ ರಾಕ್ಷಸಾಕಾರಕ್ಕೆ ಬೆಳೆದರೂ ಬುದ್ಧಿ ಮಾನವಸಹಜವಾಗಿರುವುದ ರಿಂದ ಭಯವೇನೂ ಇಲ್ಲ." ಕಮಲೇಶ್ ಹಾಸ್ಯಭರಿತವಾಗಿ ನುಡಿದಳು.

"ಯಾರಿಗೆ ಗೊತ್ತು ?" ಸುಧಾರಾಣಿ ದನಿಗೂಡಿಸಿದಳು.

ಎಲ್ಲರ ಮುಖದಲ್ಲೂ ಮಂದಹಾಸ ನಲಿದಾಡಿತು.

ಮಾಂಸಖಂಡಗಳು ಅಸ್ತವ್ಯಸ್ತವಾಗಿ ಬೆಳೆದ ದೈತ್ಯ ಶರೀರವನ್ನ ೋಡುತ್ತಾ ಕಮಲೇಶ್ ಹೇಳಿದಳು,

"ಹೆಚ್ಚು ಆಹಾರ ಸೇವನೆ, ಆಲಸ್ಯ, ದೈಹಿಕ ಶ್ರಮವಿಲ್ಲದಿರುವಿಕೆ, ವಂಶ ಾರಂಪರ್ಯ ಕೊಬ್ಬು, ಜೀನ್ಸ್ (GENES)ಗಳ ಅತಿ ಬೆಳವಣಿಗೆ ಇವುಗಳಿಂದ ರೀರ ಅಸ್ವಾಭಾವಿಕವಾಗಿ ಬೆಳೆಯುತ್ತದೆ. ಆಹಾರದಲ್ಲಿ ಕಠಿಣ ವ್ರತಧಾರಿ ಳಾಗದ ಹೊರತು ನಿಮ್ಮ ಕೊಬ್ಬು ಕರಗುವಂತಿಲ್ಲ."

ಕಮಲೇಶ್ ಔಷಧಿ ಪಥ್ಯ ಪಾನಾದಿಗಳ ವಿವರವನ್ನು ಬರೆದುಕೊಟ್ಟು ಳುಹಿಸಿದಳು. ಅವಳು ನಿರ್ಗಮಿಸುತ್ತಲೂ ಆಗಮಿಸಿದವಳು ಚಂಪಾ. ಎಲು ಿನ ಹಂದರದಲ್ಲಿ ಹೊಟ್ಟೆಡೊಳ್ಳಾಗಿದ್ದ ಅವಳನ್ನು ನೋಡುತ್ತಲೂ ಅಂತಃ ರಣ ಮಂಜಿನಂತೆ ಕರಗಿತು. ಕಣ್ಣುಗಳು ನೋಡಲಾರದೆ ನೋಡಿದುವು. ುಖದ ಮೇಲೆ ವ್ಯಸನದ ಕಪ್ಪು ಛಾಯೆ ಸುಳಿಸುಳಿದಳಿಯಿತು. ದುಗುಡ ರಿತ ದನಿಯಲ್ಲಿ ನುಡಿದಳು ಕಮಲೇಶ್ "ಬಾ, ಚಂಪಾ."

ಮುಖ ರಕ್ತಹೀನತೆಯಿಂದ ಬಿಳಿಚಿಕೊಂಡು ಹಳದಿಯ ವರ್ಣಕ್ಕೆ ತಿರು ದೆ. ಮೈ ಕೈಗಳು ಊದಿ, ಜೋಲು ಬಿದ್ದ ಮುಖದಲ್ಲಿ ಅನಾರೋಗ್ಯವು ಚ್ಚೊತ್ತಿದೆ. ಸಣ್ಣಗೆ ಮೇಲುಸಿರು ಬಿಡುತ್ತಾ ಒಳಬಂದು ಕುಳಿತುಕೊಂಡಳು. ಅವಳನ್ನು ಒಳಗಿನ ಪರೀಕ್ಷಾ ಕೊಠಡಿಗೆ ಕರೆದೊಯ್ದು ವ್ಯಥಿತ ದನಿಯಲ್ಲಿ ಕೇಳಿ ಳು ಕಮಲೇಶ್. "ಏಕಮ್ಮಾ ಹೀಗಾಗಿದ್ದಿ ?"

ಸಂತಾಪಭರಿತ ಹೃದಯ ಏರಿ ಇಳಿಯುತ್ತಿದೆ. ಪ್ರಯತ್ನಿಸಿದರೂ ಮಾತು ೊರಡದು.

"ಚಂಪಾ" ಅನಾಯಕ ಕರೆ ಹೊರ ಬಿದ್ದಾಗ ಯಾವುದೋ ಅಮಲು ತಲೆಯನ್ನು ತುಂಬಿದಂತಾಯಿತು.

"ಏನೋ ನನ್ನ ಗ್ರಹಚಾರ. ನಾನು ಸುಖವಾಗಿರುವುದು ಭಗವಂತನಿಗೆ ಇಷ್ಟವಿಲ್ಲ."

"ಹಾಗೆಂದರೆ ಹೇಗೆ ಚಂಪಾ ? ಮುಖ್ಯವಾಗಿ ನೀನೇ ನಿನ್ನನ್ನು ನೋಡಿ ಕೊಳ್ಳಬೇಕು. ಭಗವಂತನಿಗೆ ನಿಜವಾಗಿಯೂ ನೀನು ಸುಖವಾಗಿರುವುದು

ಇಷ್ಟವಿದೆ. ಆತ ಎಂದೂ ನಿನ್ನ ಬಗೆಗೆ ನಿರ್ದಯನಾಗಲಾರ" ವಿಧೀರ್ಣ ಕಂಠದಿಂದ ಪ್ರತಿ ನುಡಿದಳು ಕಮಲೇಶ್.

"ಹೋಗಲಿ ಬಿಡು, ನನ್ನನ್ನು ನಿನಗೆ ಒಪ್ಪಿಸಿಕೊಂಡಿದ್ದೇನೆ. ಏನಾದರೂ ಮಾಡು ಕಮಲೇಶ್." ಕಂಠ ವಿಕಂಪಿಸಿತು. ಉಕ್ಕಿ ಬಂದ ದುಃಖಕ್ಕೆ ತುಟಿ ಕಚ್ಚಿ ಹಿಡಿದು ತಡೆಹಾಕಿದಳು ಚಂಪಕಮಾಲಿನಿ, ಯಾವುದೋ ಒಡಕು ಘಟದ ಶೃತಿಯಂತೆ ಕೇಳಿ ಬರುವ ಅಂತರ್ಗತ ಆಲಾಪವನ್ನು ಬಿಗಿಹಿಡಿದು.

"ಆಗಲೇ ಎಷ್ಟು ಬಾರಿ ಗರ್ಭಿಣಿಯಾಗಿದ್ದಿ? ಪುನಃ ಇದೇನು? ನೀನು ನಿನ್ನನ್ನು ಕಾಪಾಡಿಕೊಳ್ಳದಿದ್ದಲ್ಲಿ ನಾನಾದರೂ ಏನು ಮಾಡಬಲ್ಲೆ?"

ಚಂಪಕಮಾಲಿನಿ ಏನನ್ನೋ ಹೇಳಲು ತೊದಲಿ ಸುಮ್ಮನಾದಳು.

"ನೀನು ಗರ್ಭಿಣಿಯಾಗುವುದನ್ನು ಕೆಲಕಾಲ ನಿಲ್ಲಿಸಬೇಕು ಚಂಪಾ."

"ನಿನ್ನ ಹಿತವಚನ ನನ್ನ ಅಂತರಾತ್ಮಕ್ಕೆ ಮುಟ್ಟುತ್ತದೆ. ನಿಜ.... ಆದರೆ...."

ಅವಳ ಮಾತನ್ನು ಮುಂದುವರಿಸಗೊಡದೆ ನಡುವೆ ಬಾಯಿ ಹಾಕಿದಳು ಕಮಲೇಶ್, "ಈ ಆದರೆ–ಗೀದರೆ ವ್ಯವಹಾರವನ್ನೆಲ್ಲ ಕೆಲವುದಿನ ಕಟ್ಟಿಡಲೇಬೇಕು ಚಂಪಾ. ದೃಢ ಮನಸ್ಸು ಮಾಡಿ ಕೆಲವು ದಿನ ನನ್ನಲ್ಲಿಗೆ ಬಾ. ಆರೋಗ್ಯ ಸರಿಯಾಗಿ ತಾಯಿಯಾಗುವ ಅರ್ಹತೆ ಪಡೆಯುವವರೆಗೂ ಇದ್ದುಬಿಡು!"

"ಚೆನ್ನಾಗಿದೆ....!"

"ಯೋಚಿಸಿನೋಡು! ಇದು ಮನುಷ್ಯ ಪ್ರಯತ್ನಕ್ಕೆ ಮೀರಿದ್ದಲ್ಲ."

"ನನಗೊತ್ತು ಕಮಲೇಶ್.... ನನ್ನ ನರನರಗಳೂ ಅದನ್ನು ಸಾರಿ ಹೇಳುತ್ತವೆ.... ಆದರೂ ಸಹ ನಾನು ನಿಸ್ಸಹಾಯಕಳು ಎಂದು ಹೇಳದೆ ವಿಧಿ ಇಲ್ಲ. ಅಂತಲೇ ನನ್ನ ಸಂಗೀತವನ್ನು ಮುಂದಾಗಿ ಯಮಸದನಕ್ಕೆ ಅಟ್ಟಿದ್ದೇನೆ. ನನಗಾಗಿ ಅಲ್ಲಿ ಕಾದಿರುತ್ತಾಳೆ, ಕಲಾದೇವಿ. ನನಗಿನ್ನು ಹಾದಿ ಹುಡುಕಿಕೊಳ್ಳುವುದು ಅಷ್ಟು ಕಷ್ಟವಾಗಲಾರದು. ಸಗ್ಗಕ್ಕಡರುವ ಮುನ್ನ ನಿನ್ನನ್ನು ನೋಡಿ ಹೋಗುವ ಮನಸ್ಸಾಯಿತು, ಬಂದೆ." ದನಿ ಭಾರವಾಗಿತ್ತು. ಕಣ್ಣುಗಳಲ್ಲಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು. ದುಃಖ ದುಗುಡಗಳ ಒತ್ತಡದಿಂದ ನಸು ತಲೆಬಾಗಿ ಕುಳಿತಳು. ಮುಖಮಂಡಲ ಕಳಾಹೀನವಾಯಿತು.

ಕಮಲೇಶ್ ಅವಳನ್ನು ಬಿಗಿದಪ್ಪಿ ಹಿಡಿದಳು. ಭಾವೋದ್ವೇಗದಿಂದ ದನಿ

ವಿಕಂಪಿಸಿತು "ಧೃತಿಗೆಡಬಾರದು ಚಂಪಾ."

"ಧೃತಿಗೆಡುವ ಪ್ರಶ್ನೆಯೇ ಇಲ್ಲ. ತಿಳಿದೂ ತಿಳಿದೂ ಮುಳ್ಳಿನ ಹಾದಿಗೆ ಕಾಲಿಟ್ಟದ್ದೊಂದೇ ದುಃಖ ಕಮಲೇಶ್."

"ಇರಲಿ ಚಂಪಾ, ಕಳೆದ ದಿನಗಳನ್ನು ಬದಿಗೊತ್ತಿ ಮುಂಬರುವ ದಿನಗಳನ್ನು ಎದುರಿಸಲು ಸಿದ್ಧವಾಗುವುದೇ ಜೀವನ. ನೀವಿಬ್ಬರೂ ಚಿಕಿತ್ಸೆ ಮಾಡಿಸಿಕೊಳ್ಳದ ಹೊರತು ನಿನಗೆ ಮಕ್ಕಳ ಭಾಗ್ಯ ಬರುವುದಿಲ್ಲ. ನಿನ್ನ ಯಜಮಾನರನ್ನೊಮ್ಮೆ ಕರೆ ತಾ. ನಾನವರಿಗೆ ತಿಳಿಯ ಹೇಳುವೆ. ಅಷ್ಟಾಗದ ಹೊರತು ಬದುಕು ಸುಖವಿಲ್ಲ. ಹಣವಿದ್ದೆಡೆ ಹಲವು ಹಾದಿಗಳಿರುವುದು ಸರ್ವೇಸಾಮಾನ್ಯ. ಹಣ....ಕೇವಲ ಹಣಕ್ಕಾಗಿ ನಿನ್ನನ್ನೇಕೆ ಬಲಿಗೊಡುತ್ತಿ? ನೀನು ಚೇತರಿಸಿಕೊಳ್ಳುವುದು ನಿನ್ನ ಕೈಯಲ್ಲುಂಟು. ನೀನು ಚೇತರಿಸಿಕೊಂಡಲ್ಲಿ ನಿನ್ನ ಕಲೆ ಚೇತರಿಸಿಕೊಳ್ಳುತ್ತದೆ. ಮುಖ್ಯವಾಗಿ ದೃಢಮನಸ್ಸು ಮಾಡು. ಭಗವಂತ ನಿನ್ನನ್ನು ಆಶೀರ್ವದಿಸುತ್ತಾನೆ. ಅಂದು ಮಹಾರಾಣಿ ಕಾಲೇಜಿನಲ್ಲಿ ಪ್ರಮಾಣ ವಚನ ತೆಗೆದುಕೊಂಡುದುದನ್ನು ಮರೆಯುಲಿಲ್ಲವಷ್ಟೆ?"

"ಆ ಒಂದು ಕಾರಣಕ್ಕಾಗಿ ಇಂದು ಹೆಣಗುತಿದ್ದೇನೆ. ಮುಂದೂ ಹೆಣಗುವೆ." ಒಂದು ಘಳಿಗೆ ತಡೆದು ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ "ಕಮಲೇಶ್, ಕಲಾಭಿಮಾನಿಯಾದವಳು ಮದುವೆಯಾಗಲೇ ಬಾರದಿತ್ತು. ಪಂಜರದ ಪಕ್ಷಿಯಾಗಿ ಕಲಾದೇವಿಯನ್ನು ಆರಾಧಿಸುವುದು ಸಾಧ್ಯವಿಲ್ಲ ಎಂಬುದು ಈಗ ಮನವರಿಕೆಯಾಗಿದೆ. ಆದರೆ....IT IS TOO LATE."

ಕರ್ಣಕಠೋರ ವಿಡಂಬನೆಯನ್ನು ಕೇಳಿ ಪ್ರಕೃತಿ ಸ್ತಬ್ಧವಾಯಿತು.

ಜೀವನ ಯಾತ್ರೆ ಯಾವ ಪರಮೋದ್ದೇಶಕ್ಕಾಗಿ ಇದೆಯೋ ಅದನ್ನು ತಿಳಿದುಕೊಳ್ಳುವ ಶಕ್ತಿ ಮನುಷ್ಯನಿಗೆ ಇಲ್ಲವೇ ಇಲ್ಲವೆ? ಜೀವನಯಾತ್ರೆಯ ಮಹಾಯಾತ್ರಿಗಳೆಲ್ಲಾ ಒಂದಲ್ಲ ಒಂದು ವಿಧದಿಂದ ನರಳುವುದರಲ್ಲೇ ಕಳೆಯಬೇಕೆ? ಯಾವ ಅಜ್ಞಾನ ಪ್ರೇರಣೆಯಿಂದ ಹೃದಯದಲ್ಲಿ ಅನುಭೂತಿಗೆ ಸ್ವಲ್ಪವೂ ಸ್ಥಾನವಿಲ್ಲವೋ ಅಲ್ಲಿ ಸ್ವಾರ್ಥವೇ ಪರಮಾರ್ಥ....ಜೀವನ ವಾತ್ಸಲ್ಯ ಕೇವಲ ತೃಷೆ....ಒಡನೆ ಅಂತಃಸ್ಥಲದ ಮೇಲೆ ಮಿಡಿಯಿತು ಚಿಂತನಧಾರೆ.

"ನಿನಗೆ ಮಗು ಬೇಕೇಬೇಕೆ? ಹೇಳು ಚಂಪಾ." ದನಿ ಎದೆಯಾಳದಿಂದ

ಹರಿದು ಬಂತು, ಸಂಕಟದ ಝರಿಯಾಗಿ.

"ಈಗಲೇ ಮನೆಯವರೆಲ್ಲಾ ಥಾಳಿಯೆಬ್ಬಿಸಿದ್ದಾರೆ. ಗರ್ಭಪಾತಗಳಿಗೆ ನನ್ನದೇ ಲೋಪದೋಷವೆಂದು ಅವರ ಕೂಗು. ಮಗನಿಗೆ ಇನ್ನೊಂದು ಮದುವೆಯಾಗಲು ಒತ್ತಾಯವೂ ನಡೆದಿದೆ. ಹೆಣ್ಣಿನ ಚಟವಿದ್ದವರಿಗೆ ಹಾಗೆಂದರೆ ಸಾಕಲ್ಲ?....ಇದು ಜೀವನ ಕಮಲೇಶ್."

"ಚಂಪಾ....!"

"ಕಮಲೇಶ್....!" ನುಡಿಯಲಾರದೆ ನುಡಿದಳು ಚಂಪಾ "ನೀನು ಮೆಡಿಸಿನ್ ತೆಗೆದುಕೊಂಡು ಬದುಕಿದೆ. ಹಾಗೆಂದು ಅದೇ ನೇರಕ್ಕೆ ನಮ್ಮನ್ನೂ ನೋಡಿದರೆ ಆಗುತ್ತದೆಯೆ? ಹಿಂದೂಸ್ಥಾನ ಇನ್ನೊಂದು ಶತಮಾನಕ್ಕೂ ಹೆಣ್ಣಿನ ಸಂಕೋಲೆಯನ್ನು ಕಳಚಲಾರದು....ನೂರಕ್ಕೋ ಸಾವಿರಕ್ಕೋ ಒಬ್ಬಿಬ್ಬರು ಕಣ್ತೆರೆದರೆ ಸಾಕೆ ಕಮಲೇಶ್?"

ಆರ್ತಳಾಗಿ ಕೇಳಿದಳು ಚಂಪಾ.

ಬಾನಂಗಣದಲ್ಲಿ ಶೀಡಿಬಂದ ತಂಗಾಳಿ ಮರುದನಿಗೈಯಿತು....ನೂರಕ್ಕೋ ಸಾವಿರಕ್ಕೋ ಒಬ್ಬಿಬ್ಬರು ಕಣ್ತೆರೆದರೆ ಸಾಕೆ ಕಮಲೇಶ್?

ಆತ್ಮಾನುಭೂತಿಯಿಂದ ಹೆಣ್ಣು ನಿಸರ್ಗದೆತ್ತರಕ್ಕೇರಿ ನಿಂದರೂ ಭವಿಷ್ಯತ್ತು ಒಂದಲ್ಲ ಒಂದುದಿನ ಪ್ರೀತಿ-ವಾತ್ಸಲ್ಯ-ಅನುಕಂಪಗಳ ಮೂಸೆಯಲ್ಲಿ ಕರಗಿಸಿ ಮುನ್ಸೂಚನೆಯಿಲ್ಲದೆ ಕೆಳಗೆಳೆದು ಬಿಡುವುದರಲ್ಲಿ ಸಂಶಯವಿಲ್ಲ.... ಆಕೆಯ ಆಶಾಶ್ವತ ಶರೀರದಲ್ಲಿ ಅಬಲತೆ-ಅಮಾಯಕತೆ ತುಂಬಿಹೋಗಿದೆ.... ಸರ್ವಾಂಗ ಸೌಂದರ್ಯ ಮಾಧುರ್ಯವಷ್ಟೇ ಅಲ್ಲ....

ಕಮಲೇಶಳ ದಿಟ್ಟಿ ಕಿಟಕಿಯಲ್ಲಿ ತೂರಿ ದೂರದಿಗಂತದಲ್ಲಿ ನೆಟ್ಟು, ಗಂಭೀರ ಮುಖಮುದ್ರೆ ಭಾವಪರವಶವಾಯಿತು. ಒಂದು ಘಳಿಗೆ, ಒಂದೇ ಒಂದು ಘಳಿಗೆ ದೇಶದ ಭಗಿನಿಯರೆಲ್ಲಾ ಸ್ಮರಣೆಯ ಹಾದಿಯಲ್ಲಿ ಸಾಗಿಹೋದರು–ಸೀರೆ ಸೀಕಲಾಗಿ, ಬೊಜ್ಜು ಬೊಜ್ಜಾಗಿ, ಫ್ಯಾಷನ್ನಿನ ಪೆಡಂ-ಭೂತಗಳಾಗಿ, ವಿಕಲ್ಪಮತಿಗಳಾಗಿ, ಅಜ್ಞಾನಿಗಳಾಗಿ, ಆಶಾಸೌಧಗಳಾಗಿ, ಭಗ್ನ ಮನೋರಥರಾಗಿ, ಕ್ರಿಮಿಕೀಟಗಳಾಗಿ, ಸೊತ್ತಾಗಿ, ತೊತ್ತಾಗಿ, ಬಣ್ಣಬಣ್ಣದುಡಿಗೆಯುಟ್ಟು, ಚಿನ್ನದೊಡವೆಗಳನ್ನಿಟ್ಟು, ಕಿಲಕಿಲ ನಕ್ಕು, ತುಂಬುಲ ಮೆತ್ತಿ ಸಾಲು ಹಲ್ಲುಗಳ ಕೆಂಪು ಕಂಪು ಬೀರಿ!

ಅಧ್ಯಾಯ

೧೬

ಬ್ರೈನ್ ಆಪರೇಶನ್ನಿನಲ್ಲಿ ಸಿದ್ಧಹಸ್ತರಾದ ಡಾ|| ಗಣೇಶ್‌ನಂದಾ ಇಂದು ಆಪರೇಶನ್ ಥಿಯೇಟರಿನ ಒಡೆಯರು. ಅವರಿಗೆ ಸಹಕಾರ ಹಸ್ತ ನೀಡಲು ಡಾ||ನಂಜನ್‌ದೇವ್ ಡಾ|| ವಿಠ್ಠೊರವರು ಮುಂದಾಗಿದ್ದರೆ ಇನ್ನೂ ಕೆಲವು ಕಿರಿಯ ಡಾಕ್ಟರುಗಳೂ ಕಲಿಕೆಯ ವಿದ್ಯಾರ್ಥಿಗಳೂ ಕಾದಿದ್ದರು.

ಹರೆಯದ ವ್ಯಕ್ತಿಯೊಬ್ಬ ಕೊಲೆಯಾದ ಸ್ತ್ರೀಯೊಬ್ಬಳನ್ನು ಹಿಂದೆಂದೋ ಕಂಡಿದ್ದ. ರಕ್ತದ ಕೋಡಿಯಲ್ಲಿದ್ದಿದ ಹೆಣ್ಣಿನ ಭಯಾನಕ ದೃಶ್ಯ ಅವನ ಧೃತಿಗೆಡಿಸಿತು. ಅಂದಿನಿಂದ ಅವನು ಆಗಾಗ ರಾತ್ರಿಕಾಲದಲ್ಲಿ ದುಸ್ವಪ್ನ ಕಾಣುವುದರೊಂದಿಗೆ ಚೀರಿ ಮೂರ್ಛೆ ಹೋಗುತಿದ್ದ. ಡಾಕ್ಟರು ಅವನ ತಲೆಯನ್ನು ಪರೀಕ್ಷಿಸಿದರು. ಕಡಿಮೆ ಶಕ್ತಿಯುಳ್ಳ ವಿದ್ಯುತ್ ತಂತಿಯನ್ನು ಟೆಂಪೋರಲ್ ಕಾರಟೆಕ್ಸ್‌ನ(TEMPORAL CORTEX) ಎಲ್ಲಾ ಭಾಗದಲ್ಲಿಯೂ ತಗುಲಿಸಿ ನೋಡಿದರು. ಒಂದು ಸ್ಥಳದಲ್ಲಿ ತಾಗಿಸಿದೊಡನೆ ರೋಗಿಯ ಮುಖ ಬಿಳಿಚಿಕೊಂಡು ಭೀತಿಗ್ರಸ್ತವಾಯಿತು. ಅವನು ಗಡಗಡ ನಡುಗುತ್ತಾ ಚೀರಿಕೊಂಡ. ತಂತಿಯನ್ನು ತೆಗೆದೊಡನೆ ಅವನು ನೈಜಸ್ಥಿತಿಗೆ ಬಂದ. ಪುನಃ ಮುಟ್ಟಿಸಿದರೆ ಅದೇ ಪಾಡು. ಡಾಕ್ಟರುಗಳು ಆ ಭಾಗದಲ್ಲಿ ಭಯಂಕರ ನೆನಪಿದೆ ಎಂಬುದನ್ನು ಗ್ರಹಿಸಿದರು.

ಅನಂತರ ಚಿಕಿತ್ಸೆ ಆರಂಭವಾಯಿತು. ಆ ಘಟನೆಯ ನೆನಪು ಯಾವ ಭಾಗದಲ್ಲಿದೆಯೋ ಆ ಅಂಶವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದು ಹಾಕಿದರು. ನಮಗೆ ಬೇಡವಾದ ಒಂದು ವಿಶಿಷ್ಟ ವಸ್ತುವನ್ನು ಕತ್ತರಿಸಿ ಹಾಕಿ ಕಾಯಿಪಲ್ಲೆಗಳನ್ನು ನಾವು ಶುದ್ಧಿಗೊಳಿಸುವ ರೀತಿಯಲ್ಲಿ ಆಪರೇಷನ್ ನಡೆಯಿತು.... ಆ ಅದ್ಭುತವಾದ ಕಾರ್ಯಕುಶಲತೆ ಎಳೆಯರನ್ನು ಮಂತ್ರಮುಗ್ಧರನ್ನಾಗಿ ಮಾಡಿತು.

ಮುಂದೆ ಒಂದೆರಡು ವಾರಗಳನಂತರ ಅವನು ಪೂರ್ಣ ಚೇತರಿಸಿಕೊಂಡ.

ಅಂದಿಂದಿಗೂ ಅಶ್ರುಪೂರ್ಣಲೋಚನನಾಗಿ ಉತ್ಸಾಹಹೀನತೆ ಉದಾಸೀನತೆ ಧೈರ್ಯದಾರಿದ್ರ್ಯಗಳಿಂದ ಕುಸಿಯುತ್ತಿದ್ದ ಭಯಗ್ರಸ್ತ ತರುಣ ಭಯವಿಮುಕ್ತನಾದುದು ಎಲ್ಲರ ಮನವನ್ನೂ ವಿಕಸನಗೊಳಿಸಿತು.

ಕಮಲೇಶ್ ಪದ್ಮಾಕಮಲಾನಿಯ ಭುಜದಮೇಲೆ ಕೈಯಿಟ್ಟು-"ಪದ್ಮಾ ನಾವು ಸಕ್ಕೂವನ್ನೇಕೆ ಈ ಆಪರೇಶನ್ನಿಗೆ ಒಳಪಡಿಸಬಾರದು ?"

"ಅವಳ ತಂದೆ ತಾಯಿ ಒಪ್ಪಿದರೆ ಆಗಬಹದು."

"ನಾನು ಅವರಿಗೆ ಹೇಳಿ ನೋಡುವೆ."

"ನಿನಗೆ ಯಶಸ್ಸನ್ನು ಕೋರುವೆ!" ತಮಾಷೆಯ ದಾಟಿಯಲ್ಲಿ ಬಿತ್ತರಿಸಿದಳು ಪದ್ಮಾಕಮಲಾನಿ.

ಇಬ್ಬರ ಮುಖದಲ್ಲೂ ನಗುವಿನಲೆಯೆದ್ದಿತು

ಮಳೆ....ಮಳೆ....ಮಳೆ.

ಬೆಳಗಿನಿಂದಲೂ ಎಡೆಬಿಡದೆ ಘೋ ಘೋ ಎಂದು ಒಂದೇ ಸಮನೆ ಸುರಿಯುತ್ತಿತ್ತು ಕುಂಭದ್ರೋಣ ಮಳೆ. ಮಳೆಗಾಗಿಯಾದರೂ ಒಂದು ಬಸಿ ಚಹವನ್ನು ಹೀರೋಣವೆಂದು ಮನಸ್ಸು. ಆದರೆ ಹೊರವಲಯಕ್ಕೆ ಕಾಲಿಡುವಂತೆಯೇ ಇಲ್ಲ. ಕಮಲೇಶ್ ದಲ್ವಾಲಿ ಜುಬೇದಾಬೇಗಂ ಮದನಾಪುರ್ ವಿಜಯಾರವರು ನಿಂತಲ್ಲೇ ನಿಂತು ಏನು ಮಾಡುವುದೆಂದು ಯೋಚಿಸಿದರು.

ಬಾಗಿಲಿನಲ್ಲಿ ನಿಂತಿದ್ದ ಬಿಳಿಯುಡುಪಿನ ಜವಾನ ಅಂದ "ಬಿಡಿ, ನಾನೇ ತಂದುಕೊಡುವೆ."

ಚಹ ತರಲು ಹೋದಾಗಲೆಲ್ಲ ತನಗೊಂದು ಬಸಿ ಸಿಕ್ಕುತಿತ್ತಾದ ಕಾರಣ, ಅವನಿಗೂ ತರಲು ಹಿತ. ಅಂತಲೇ ಅವನು ಕೊಡೆಯನ್ನು ಸೂಡಿ ಜಡಿಮಳೆಯಲ್ಲಿಯೇ ಹೊರಟ. ಬಿಡುವಿನ ಕೋಣೆಯಲ್ಲಿ ಇನ್ನಾರು ತುಂಬಿರಲಿಲ್ಲವಾದ್ದರಿಂದ ಶಾಂತಿ ಜನಿಸಿತ್ತು. ಜುಬೇದಾಬೇಗಂ ಕನ್ನಡಿಯ ಮುಂದೆ ನಿಂತು ಕೂದಲು ತಿದ್ದಿಕೊಳ್ಳುತ್ತಾ "ಕಮಲೇಶ್....!"

"ಏನು?" ಎಂಬಂತೆ ಅವಳನ್ನು ಕತ್ತೆತ್ತಿ ಸಿಟ್ಟಿಸಿ ನೋಡಿದಳು ಕಮಲೇಶ್.

"ನಿನ್ನ ಕೃಪಾದೃಷ್ಟಿಗಾಗಿ ಹಲವು ಮಂದಿ ತರುಣ ಡಾಕ್ಟರುಗಳು

ಕಾಯುತಿದ್ದಾರೆ. ಆದರೆ ನೀನೊಳ್ಳೆ ಶಿಲಾಬಾಲಿಕೆಯಂತಿದ್ದಿ....ಏನು ಸಮಾಚಾರ ?" ತುಂಟನಗೆ ಬೀರಿದಳು ಜುಬೇದಾಬೇಗಂ.

"ಸರಿ, ಸರಿ. ಅವರಿಗೇನು ? ನನ್ನ ಕಷ್ಟ ನನಗೆ."

"ನಿನ್ನ ಕಷ್ಟ ಪರಿಹಾರಾರ್ಥವಾಗಿಯೇ ಅವರು ಬರುವುದು !"

ಮೂವರೂ ಕಿಲಕಿಲ ನಕ್ಕರು.

"ಎಷ್ಟೊಂದು ಮಂದಿ ನಿನಗಾಗಿ ಕಾದಿದ್ದಾರೆ....? ಅದರಲ್ಲೂ, ಬಲರಾಂ ಮಿತ್ರ ಚಂದ್ರಕಾಂತರಂತೂ ಪೈಪೋಟಿಗೆ ಇಳಿದುಬಿಟ್ಟಿದ್ದಾರೆ. ನೋಡಬೇಕು, ಯಾರಿಗೆ ದಕ್ಕುತ್ತೋ ಶ್ರೀನಿಧಿ !"

"ನನಗೊತ್ತು ನಿನ್ನ ಒಲವು ಬಲರಾಮನೆಡೆಗೆ !" ಹುಬ್ಬೇರಿಸಿದಳು, ವಿಜಯಾ.

"ಶ್ಯ್....!"

"ಸುಧಾರಾಣಿ ಅವನಿಗಾಗಿ ಹಗಲೂ ರಾತ್ರಿ ಕಾಯುತಿದ್ದಾಳೆ. ನಿನ್ನಿಂದಾಗಿಯೇ ಅವನಿನ್ನೂ ಮನಸ್ಸು ಮಾಡಲಿಲ್ಲವೆನ್ನುವುದು ಅವಳಿಗೂ ಗೊತ್ತು."

"ಸದ್ಯ, ಅವನು ಮದುವೆಯಾದರೆ ನಾನು ಹಾಯಾಗಿ ಉಸಿರಾಡಬಹುದು. ದಿನವೂ ಇವರೊಡನೆ ಕೆಲಸ ಮಾಡುವುದು ಕಷ್ಟಕ್ಕೆ ಬಂದಿದೆ."

"ಎಡಕ್ಕೊಬ್ಬ....ಬಲಕ್ಕೊಬ್ಬ." ಮುಗುಳು ನಕ್ಕಳು ಜುಬೇದಾ.

"ನಾನು ಅನೇಕ ಬಾರಿ ಯೋಚಿಸುವೆ ಸ್ವಂತವಾಗಿ ಚಿಕಿತ್ಸಾಲಯ ತೆರೆದರೆ ಸ್ವತಂತ್ರವಾರಗಿಬಹುದು ಅಂತ."

"ದಾರಿ ಸುಗಮ ! ಚಿತ್ರಸೇನ್ ಕರ್ವೆ !" ದೀಪ್ತಕಂಠ ಮೊಳಗಿತು.

ಒಮ್ಮೆಲೆ ನಗುವಿನಲೆ ಉಕ್ಕಿ ಹರಿಯಿತು.

ಬಂಗಾರದ ಸಂಪುಟ....

ಬಾಗಿಲ ಬಳಿ ಪಾದ ಸಪ್ಪಳ ಕೇಳಿ ಬರುತ್ತಲೂ ಗಮನ ಅತ್ತ ಹೊರಳಿತು.

ಬಿಸಿ ಬಿಸಿ ಚಹ ಆಗಮಿಸಿತು. ಹಚ್ಚಿದ ಕೊಡೆಯನ್ನು ಮಡಿಚಿ ತಲೆ ಕೆಳಗಾಗಿ ಮೂಲೆಯಲ್ಲಿಟ್ಟು ಚಹವನ್ನು ಮುಂದಿಟ್ಟ ಜವಾನ. ಮಂದಹಾಸ ಸ್ವಾಗತ ನೀಡಿತು–"ತುಂಬ ಥ್ಯಾಂಕ್ಸ್ ಕಣಪ್ಪಾ !"

ಕೆಲಸ ಮುಗಿಸಿ ಮನೆಗೆ ಹೊರಟಾಗ ಮಳೆ ನಿಂತು ವಾತಾವರಣ ಅತ್ಯಂತ ಪ್ರಶಾಂತವಾಗಿತ್ತು. ಹಾದಿ ಕಳೆದು ಮನೆ ಮುಟ್ಟಿದಾಗ ಹೊತ್ತು

ಇನ್ನೂ ಎರಡರ ಸಮಯ. ಮೇಜಿನ ಮೇಲೆ ಊಟ ಅಣಿಯಾಗಿತ್ತು. ಕಮಲೇಶ್ ಮುಖ ಮಜ್ಜನ ಮಾಡಿ ಊಟಕ್ಕೆ ಕುಳಿತುಕೊಳ್ಳುತ್ತಲೂ ಸ್ವರ್ಣಮಾಲಿನಿ ಎದುರಿನ ಕುರ್ಚಿಯ ಮೇಲೆ ಕುಳಿತುಕೊಂಡಳು. ಮುಖದ ಮೇಲೆ ಅಪೂರ್ವ ಕಳೆ ತಾಂಡವವಾಡುತ್ತಿದೆ. ಯಾವುದೋ ಭಾವಜ್ವಾಲೆ ಯಾವುದೋ ಅನಿರ್ವಚನೀಯವಾದ ಆನಂದ ಮನವನ್ನು ಅರಳಿಸಿ ಜೀವಕ್ಕೆ ಪುಟಗೊಟ್ಟಿದೆ....ಅದೇನೆಂಬುದು ಹೊಳೆಯದಾದರೂ ಸಮಾಧಾನವುಂಟಾಯಿತು ಕಮಲೇಶಳಿಗೆ.

ಊಟ ಮುಗಿಸಿ ಕೊಠಡಿಗೆ ಬರುವುದನ್ನೇ ಕಾದಿದ್ದ ಸ್ವರ್ಣಮಾಲಿನಿ ಬಾಯ್ದೆರೆದಳು. "ಬೆಳಗ್ಗೆ ಆತ್ಮಾರಾಂ ಕರ್ವೆ ಬಂದಿದ್ದರು ಕಮಲೇಶ್!"

ಅವರೇನು ದಿನಾ ಬರುವವರೇ ಎನಿಸಿದರೂ ನುಡಿ ತುಟಿ ಮೀರಲಿಲ್ಲ. 'ಓಹೋ!' ಎಂದಳು. ಅರೆಬಿರಿದ ಅಧರಗಳಲ್ಲಿ ಹಸನಾದ ಮಂದ ಸ್ಮಿತಧಾರೆ ಪಸರಿಸಿತು.

"ಅವರ ಒತ್ತಾಯ ದಿನೇ ದಿನೇ ಹೆಚ್ಚುತ್ತಿದೆ. ನೀನಾದರೋ ಬಾಯಿಯೆ ಬಿಡುವುದಿಲ್ಲ. ಬಹಳ ಒಳ್ಳೆಯ ಸಂಬಂಧ. ಯೋಚನೆ ಮಾಡು ಕಮಲೇಶ್. ಇನ್ನೂ ಎಷ್ಟು ಕಾಲ ಹೀಗೆ....?"

ಕಮಲೇಶ್ ಯೋಚನಾಕ್ರಾಂತಳಾದಳು. ಮಾತುಗಳು ಹೊರಡಲಿಲ್ಲ.

"ನಿನ್ನ ಒಂದು ರೋಮವೂ ನೋಯದಂತೆ ನೋಡಿಕೊಳ್ಳುವುದಾಗಿ ಹೇಳುತ್ತಾರೆ ಅವರು. ಅಂತಹವರು ಯಾರಿದ್ದಾರೆ ಕಮಲೇಶ್?" ಎದೆಯ ಹಂಬಲ ಒತ್ತಾಸೆಯ ಝರಿಯಾಗಿ ಹರಿದು ಬಂತು.

ಜೀವನಮಾರ್ಗಯೋಗದಲ್ಲಿ ಸುರೇಶದಲ್ವಾಲಿಯ ಭೌತಿಕ ಶರೀರ ಮಾರ್ಗಮಧ್ಯದಲ್ಲಿ ಬಿದ್ದು ಹೋದಮೇಲೆ ಜೀವನಾರಣ್ಯದಲ್ಲಿ ಕವಿದ ಗಾಢಾಂಧಕಾರದಿಂದ ತಬ್ಬಿಬ್ಬಾದರೂ ಕಮಲೇಶಳಿಗಾಗಿ ದೂರಗಮ್ಯದೆಡೆಗೆ ಮಾರ್ಗಾನುಕ್ರಮಣವನ್ನು ಪ್ರಯತ್ನಪೂರ್ವಕವಾಗಿ ಕೈಕೊಂಡ ಸ್ವರ್ಣಮಾಲಿನಿ ಅದುವರೆಗೆ ಎಷ್ಟೋ ಕನ್ಯಾರ್ಥಿಗಳು ಬಂದಿದ್ದರೂ ಮಗಳ ಮದುವೆಯನ್ನು ಕುರಿತು ಚಿಂತಿಸುತ್ತಿರಲಿಲ್ಲ. ಅವಳನ್ನುಳಿದು ನಾನಾದರೂ ಹೇಗಿರಲಿ ಎಂಬ ಸ್ವಾರ್ಥಮೂಲವಾದ ಚಿಂತೆಯೊಂದಾದರೆ ವರಸಾಮ್ಯವೂ ಇಲ್ಲ ಕಂಡು ಕೇಳಿದ ಜನರೂ ಅಲ್ಲ ಎಂಬುದು ಇನ್ನೊಂದು. ಪಾಶ್ಚಾತ್ಯಭೂಮಿಯಿಂದ ಹೇಮರತಿ

ಕರ್ವೆ ಆಗಮಿಸಿದ ಮೇಲೆ ಆವಳ ದೃಷ್ಟಿಕೋನವೆಲ್ಲಾ ಆವಳಲ್ಲೇ ಕೇಂದ್ರೀಕೃತ ವಾಗಿ ಚಿತ್ರಸೇನನ ಹೊರತು ಮಗಳ ಜೀವನ ತುಂಬುವುದಿಲ್ಲ ಎಂಬ ನಿರ್ಧಾರಕ್ಕೆ ಶರಣಾಗಿದ್ದರೂ ಅರ್ಥರಹಿತವಾದ ಮಗಳ ಘನ ಗಾಂಭೀರ್ಯ ನುಂಗಲಾರದ ತುತ್ತಿನಂತಾಗಿದೆ....ವಿನಯ ವಿಧೇಯತೆಗಳ ಗಣಿಯಾದರೂ ಮಹೋದ್ದೇಶಗಳ ವಶೀಭೂತಳಾದರೂ ಉದ್ದೇಶರಹಿತಳಂತೆ ನಿರ್ಲಕ್ಷ್ಯವೇಕೆ.... ಎಂಬುದೂ ಸಹ ಅರ್ಥವಾಗದು.

ಒಮ್ಮೆಲೆ ಆ ತೇಜಪೂರ್ಣ ನಯನಗಳನ್ನು ಆವರಿಸಿದ ನಸು ದುಃಖದ ಛಾಯೆಯನ್ನೂ ಅಸಹಾಯಕತೆಯನ್ನೂ ಕಮಲೇಶ್ ಗ್ರಹಿಸಿದಳು. ಹೃದಯದಾಳದಲ್ಲಿ ಕಸಿವಿಸಿ ಮೂಡಿತು. ಒಂದು ಘಳಿಗೆ ಯೋಚಿಸುತ್ತಾ ಕಿಟಕಿಯಲ್ಲಿ ನೋಟವನ್ನು ಚೆಲ್ಲಿಕೊಟ್ಟಳು. ಕಣ್ಣನೇರಕ್ಕೆ ಕಿಟಕಿ. ಅದರಾಚೆ ಹೊರ ಜಗತ್ತು. ಗಿಡದಿಂದ ಗಿಡಕ್ಕೆ ಹಾರಿ ನಲಿದಾಡುವ ಪಕ್ಷಿಗಳು....ಮನಸ್ಸು ಹಕ್ಕಿಯಂತೆ ಹಾರುವ ಆ ಸ್ವಾತಂತ್ರ್ಯವನ್ನು ಬಯಸಿತು. ಇಬ್ಬರೂ ಒಂದು ಮನಸ್ಸಿನವರಾದರೆ ಒಂದೇ ವೃತ್ತಿಯವರಾದರೆ ಎಷ್ಟು ಚೆನ್ನ ? ಜೀವನ ಎಷ್ಟು ಮಧುರ ? ಹೃದಯಗಳೊಂದಾಗದ ಹೊರತು ಬದುಕು ಸುಖವಿಲ್ಲ. ಅಂತಹ ಬಾಳು ಇದ್ದರೂ ಒಂದೇ. ಇಲ್ಲದಿದ್ದರೂ ಒಂದೇ....ಎಂದು ಹಿಂದಿನ ದಾಟಿಯನ್ನೇ ಹಾಡುತ್ತಿದೆ ಹೃದಯಗಾನ.

"ನಿನ್ನ ವೃತ್ತಿಗೆ ಅವರೆಂದೂ ಅಡ್ಡಿಯಾಗುವುದಿಲ್ಲವಾಗಿ ಹೇಳುತ್ತಾರೆ ಕಮಲೇಶ್!" ಮತ್ತೆ ಮೊಳಗಿತು ಅದೇ ದನಿ. ಒಡನೆ ಮನದಲೆಯಲ್ಲಿ ಚಿತ್ರಸೇನ್‌ಕರ್ವೆ ಮೂಡಿನಿಂತ. ನಿಜವಾಗಿಯೂ ಯಾರಾದರೂ ಒಪ್ಪುವಂತಹ ವ್ಯಕ್ತಿಶ್ರೀ! ಅವನು ಡಾಕ್ಟರಾಗಿದ್ದಿದ್ದರೆ ಯೋಚನೆಯೇ ಇರಲಿಲ್ಲ....ನಿಟ್ಟುಸಿರು ಬಿಟ್ಟಳು ಕಮಲೇಶ್....ನಿನಗೆ ಅದೃಷ್ಟವಿಲ್ಲ ಎಂದು ಚಿಂತಿಸಿತು ಮನಸ್ಸು.

ಪಲ್ಲಂಕದ ಮೇಲೆ ಅಡ್ಡಾಗಿದ್ದ ತಾಯಿಯ ಮುಖ ಕಳೆಗುಂದಿತು. ಉತ್ತರವನ್ನು ನಿರೀಕ್ಷಿಸಿದ್ದ ಕಿವಿಗಳೂ ದಣಿದುವು. ಆಸಕ್ತಿಯಿಂದ ನಿಟ್ಟಿಸುತಿದ್ದ ಕಣ್ಣುಗಳೂ ಸೋತುವು.

ಸ್ವಲ್ಪಹೊತ್ತಿನಮೇಲೆ ನಿಧಾನವಾಗಿ ಉತ್ತರ ಹೊರಬಿತ್ತು,

"ಅಪಾರವಾದ ಸಂಪತ್ತಿನ ಒಡೆಯರ ಕೈ ಹಿಡಿದು ನಾನು ದಾಸಿಯಾಗಲಾರೆ ಮಾ."

"ಎಲ್ಲಿಯಾದರುಂಟೇ ಕಮಲೇಶ್ ? ನೀನೊಪ್ಪಿದರೆ ನಿನ್ನನ್ನು ಹೂವಿನಂತಿಟ್ಟಾರು. ನಿನಗಷ್ಟು ಅನುಮಾನವಾಗಲು ಕಾರಣವಾದರೂ ಏನು ?" ದನಿ ಉದ್ವೇಗಪೂರ್ಣವಾಗಿತ್ತು. ಯೋಚನೆಯ ಭಾರದೊಂದಿಗೆ ಭವಿಷ್ಯದ ಚಿಂತೆಯೂ ಮೂಡಿ ಶೋಕ ಪರವಶಳಾದಳು ಸ್ವರ್ಣಮಾಲಿನಿ.

"ಚಿತ್ರಸೇನ್ ಚಿನ್ನದಂತಹ ಹುಡುಗ. ನೀನವನನ್ನು ಮೊದಲಿನಿಂದ ಬಲ್ಲೆ, ಅನಾಯಾಸವಾಗಿ ಒಲಿದು ಬಂದ ಭಾಗ್ಯಶ್ರೀಯನ್ನು ತಳ್ಳಿ ಬಿಡಬೇಡ ಕಮಲೇಶ್." ಮತ್ತೆ ನುಡಿದಳು ಮಾ.

ಕಮಲೇಶಳ ಮುಖ ಗಂಭೀರ ಭಾವ ತಳೆಯಿತು. ಎಡಗೈದಳದ ಮೇಲೆ ಶಿರೋಭಾರವನ್ನಿಳುಹಿ ಯೋಚನಾಕ್ರಾಂತಳಾದಳು. ಹಲವು ಯೋಚನೆಗಳು ತಲೆಯನ್ನು ಒಂದೇ ಬಾರಿಗೆ ಮುತ್ತಿ ಮನಸ್ಸನ್ನು ಚುಚ್ಚಿ ಘಾಸಿಗೊಳಿಸಿದುವು. ಯೋಚಿಸಿ ಹೇಳುವೆ ಮಾ." ಎಂದಷ್ಟು ನುಡಿದು ಅನುದಿನದ ಟಪ್ಪಾಲಿನ ಕಡೆಗೆ ಗಮನಹರಿಸಿದಳು. ಅಪರಿಚಿತ ಅಕ್ಷರಗಳ ಪತ್ರವೊಂದು ಗಮನವನ್ನು ಸೆಳೆದುಕೊಂಡಿತು. ಅದರ ಮೇಲೆ ಕಣ್ಣಾಡಿಸಿದರೆ ಬಲರಾಮನ ಪ್ರೇಮಪತ್ರ! ಆದಿಯಿಂದ ಅಂತ್ಯದವರೆಗೆ ಪ್ರೇಮಧಾರೆಯನ್ನು ಹರಿಸಿ ಅತ್ಯಂತ ದೈನ್ಯಭಾವದಿಂದ ಪ್ರೇಮಭಿಕ್ಷೆಯನ್ನು ಬೇಡಿಕೊಂಡಿದ್ದ. ನೋಡಿದೊಡನೆಯೇ ಮೈಯಲ್ಲಿ ಭುಗಿಲ್ಲನೆ ಉರಿಯೆದ್ದು ನರನರಗಳಲ್ಲೂ ಲಾವಾರಸದಂತೆ ಹರಿದಾಡಿತು. ಆ ಕ್ಷಣ ಅದನ್ನು ಹರಿದು ಚೂರು ಚೂರು ಮಾಡಿ ಬುಟ್ಟಿಯಲ್ಲಿ ತೂರಿದಳು. ಆದರೂ ಅವನು ಚಿದಾಕಾಶದಲ್ಲಿ ಕಾಳಮೇಘದಂತೆ ಮೂಡಿ ನಿಂತ. ಅವನನ್ನು ಪ್ರಯತ್ನಪೂರ್ವಕವಾಗಿ ಬದಿಗೊತ್ತಿ ಆ ಸ್ಥಳದಲ್ಲಿ ಚಂದ್ರಕಾಂತನನ್ನು ಪ್ರತಿಷ್ಠಿಸಿ ನೋಡಿದರೆ ಅವನು ಬಲರಾಮನಷ್ಟು ರೂಪವಂತನಲ್ಲದಿದ್ದರೂ ಇತರೆ ವಿಚಾರಗಳಲ್ಲಿ ಮೇಲಾಗಿ ತೋರಿದ ಬಡಕುಟುಂಬದಿಂದ ಬಂದವನಾದುದರಿಂದ ಹೊಂದಿಕೊಳ್ಳುವ ಮನೋಭಾವ ಇದ್ದೇ ಇರಬಹುದು....ಎಂಬ ಆಶಾಭಾವನೆ.

ಶಾಂತ ಮಹಾ ಸಾಮ್ರಾಜ್ಯವನ್ನು ಭೇದಿಸಿ 'ಕಿರ್' ಎಂಬ ಮೆಲುಸದ್ದು ಕಿವಿಯನ್ನು ತಾಗಿತು. ಹಿಂದೆಯೇ ಕದವನ್ನು ತೆರೆದು ಸ್ವಾಗತ ನೀಡಿದ ಸದ್ದು. ಮರುಕ್ಷಣದಲ್ಲಿ ಬಾಗಿಲ ಪರದೆಯನ್ನು ಸರಿಸಿ ಸೀತಮ್ಮ ಒಳ ಬಂದು ಹೇಳಿದಳು "ಯಾರೋ ಬಂದಿದ್ದಾರೆ."

ಕಮಲೇಶ್ ಹೊರಹೋದಳು.

ಬಂದವಳು ರಾಣೀ ಭವತಾರಿಣೀ ಆಸ್ಪತ್ರೆಯ ನರ್ಸ್–ನಿರ್ಮಲಾ. ಹದಿನೆಂಟು ಹತ್ತೊಂಬತ್ತರ ಮುಗುದೆ, ಶುಭ್ರವಸನಧಾರಿಣಿ, ಮ್ಲಾನವಾದ ಮುಖಮುದ್ರೆ, ನೋಡಿದೊಡನೆಯೇ ಎಂಥಹವರಿಗೂ ಅಂತಃಸ್ಥಿತಿ ಅರ್ಥವಾಗಬಹುದಾದಷ್ಟು ದೇಹಸಂಪತ್ತು ಕುಗ್ಗಿಹೋಗಿದೆ, ದೈನ್ಯವೇ ಮೂರ್ತಿಯೆತ್ತಿ ಬಂದಂತೆ ನಿಂತ ಅವಳು ಕಮಲೇಶ್‌ಳನ್ನು ಕಾಣುತ್ತಲೂ ಅನುನಯದಿಂದ ಕರಗಳನ್ನು ಜೋಡಿಸಿದಳು. ಹಲವು ಚಿಂತನೆಗಳಿಂದ ಭಾವೋನ್ಮಾದಿನಿಯಾಗಿದ್ದ ಕಮಲೇಶ್ ಒಂದು ಕ್ಷಣ ಅತ್ತ ಅಚ್ಚರಿಯಿಂದ ನಿಟ್ಟಿಸಿ "ಏನಮ್ಮಾ?" ಎಂದಳು.

ತರುಣಿ ಏನನ್ನೋ ಹೇಳಲು ಪ್ರಯತ್ನಪಟ್ಟು ಸುಮ್ಮನಾದಳು. ಒಳಗಡೆ ಇನ್ನಾರಾದರೂ ಇದ್ದಾರೆಯೋ ಎಂಬುವನ್ನು ತಿಳಿಯಲೋಸುಗ ನೋಟ ಸುತ್ತಮುತ್ತಲೂ ಹರಿದಾಡಿತು. ಯಾರೂ ಕಾಣಿಸದಿರಲು ಶೋಕ ವ್ಯಾಕುಲಗಳ ವಶೀಭೂತಳಾಗಿ "ಡಾಕ್ಟರ್...." ಎಂದಳು ಕಂಠಾವರೋಧವಾಗಿ ಮುಂದೆ ಮಾತು ಹೊರಡಲಿಲ್ಲ.

"ಸಿಸ್ಟರ್....!"

ಹೇಳಲೋ ಬೇಡವೋ ಎಂಬ ಶಂಕೆಯಲ್ಲಿ ತೊಳಲಿ ದಿಕ್ಕೆಟ್ಟು ನುಡಿದಳು ನಿರ್ಮಲಾ,

"ನಾನೊಂದು ಗಂಡಾಂತರದಲ್ಲಿದ್ದೇನೆ...."

"ಏನು ಹೇಳು, ಸಂಕೋಚ ಪಡಬೇಡ."

"ಡಾ|| ಬಲರಾಂ ಮಿತ್ರ...." ಉಗುಳು ನುಂಗಿ ಒಣಗಿದ ತುಟಿಯನ್ನು ನಾಲಿಗೆಯಿಂದ ಒರಸಿಕೊಂಡು ಉಕ್ಕುಕ್ಕಿ ಬರುತಿದ್ದ ದುಃಖಕ್ಕೆ ಬಲು ಕಷ್ಟದಿಂದ ತಡೆಹಾಕಿ ಮುಂದುವರಿದಳು "ಡಾಕ್ಟರ್, ಅವರೂ ನಾವೂ ಒಂದೇ ಬೀದಿಯಲ್ಲಿ ವಾಸಿಸುತ್ತೇವೆ. ಆಸ್ಪತ್ರೆಗೆ ಎಷ್ಟೋ ಬಾರಿ ಒಟ್ಟಿಗೆ ಹಾದಿ ನಡೆದಿದ್ದೇವೆ. ಅವರಿಂದ ನನಗೆ ವಿಪತ್ತುಂಟೆಂಬುದನ್ನು ನಾನು ಕಂಡುಕೊಳ್ಳದೆ ಮೋಸಹೋದೆ. ಅವರೊಡನೆ ಅನೇಕ ಬಾರಿ ಸಂಚಾರಿ ಆಸ್ಪತ್ರೆಯಲ್ಲಿ ಹಳ್ಳಿಗಳಿಗೆ ಹೋಗಿರುವೆ. ನನ್ನನ್ನು ನಂಬಿಸಿ, ಮದುವೆಯಾಗುವುದಾಗಿ ಮಾತು ಕೊಟ್ಟು ವಶೀಕರಣ ಮಂತ್ರ ಹಾಕಿದ್ದಾರೆ. ಆದರೆ ಇದು ಶುದ್ಧ ಮೋಸ,

ವಿಷಯಲಂಪಟತನ !”

ದುಃಖಗರ್ಭಿತ ಶರೀರ ಸಿಡಿದೊಡೆಯಲಿರುವಂತೆ ನಸು ಕಂಪನಕ್ಕೊಳಗಾಯಿತು. ಕಣ್ಣುಗಳಲ್ಲಿ ಕೋಡಿ ಹರಿದ ಕಂಬನಿಯನ್ನು ನಿವಾರಿಸಿಕೊಳ್ಳಲು ಕರವಸ್ತ್ರದಿಂದ ಅದುಮಿ ಹಿಡಿದುಕೊಂಡಳು. ಹೃದಯ ಹೆಗ್ಗಲ್ಲು ಹೊತ್ತಂತೆ ಭಾರವಾಗಿ ಅಪಾದ ಮಸ್ತಕವೂ ವ್ಯೆನವಿರೆದ್ದಿತು.

ಸ್ವಲ್ಪಹೊತ್ತು ರುದ್ರಭೀಷಣ ಮೌನ ಆವರಿಸಿತು.

ಕಮಲೇಶಳ ನರನಾಡಿಗಳಲ್ಲಿ ಸಂತಾಪದ ಲಾವಾಝರಿ ಸರ್ರನೆ ಹರಿದಾಡಿತು.

ಆದರೂ....ಸಹ....

ಆಕೆ ಎಷ್ಟೆಂದರೂ ಹೆಣ್ಣು. ಈ ಜಗತ್ತಿನ ನಿಷ್ಠುರ ನ್ಯಾಯಸ್ಥಾನದಲ್ಲಿ ಗೆದ್ದು ಬರುವುದಂತೂ ಕನಸಿನ ಮಾತು. ಅಂದಮೇಲೆ ಆಕೆಯ ಉದ್ಧಾರವೇ ಇಂದಿನ ಕರ್ತವ್ಯ....

ಯೋಚನೆಯ ಸುಳಿಯಲ್ಲಿ ಸಿಕ್ಕಿ ಸ್ವಲ್ಪಹೊತ್ತು ಮಾತಿಲ್ಲದೆ ಕುಳಿತಳು ಕಮಲೇಶ್, ಕಣ್ಣಮುಂದಿನ ವಸ್ತು ವಸ್ತುವೂ ಗಿರಗಿರ ಸುತ್ತಿದಂತಾಯಿತು. ನಿರ್ಮಲಾ ಬಾಗಿದ ತಲೆಯೆತ್ತಲಿಲ್ಲ.

“ಯೋಚಿಸಬೇಡ ಸಿಸ್ಟರ್.”

“ಅವರಿಗೆ ನನ್ನನ್ನು ಮದುವೆಯಾಗಿ ಈ ಅಸಹ್ಯ ಕಳಂಕದಿಂದ ಮುಕ್ತಗೊಳಿಸುವಂತೆ ಬಹಳವಾಗಿ ಕೇಳಿಕೊಂಡೆ. ಆದರೂ ಅವರ ಮನಕರಗಲಿಲ್ಲ. ಅವರು ನಂಬಿಸದಿದ್ದರೆ ಖಂಡಿತ ನಾನು ಮೋಸಹೋಗುತ್ತಿರಲಿಲ್ಲ....ನನಗೆ ಹಳೆ ಸಂಪ್ರದಾಯದ....ತಾಯಿ–ತಂದೆಯರಿದ್ದಾರೆ.” ಬಿಕ್ಕುತ್ತಲೇ ನುಡಿದಳು ನಿರ್ಮಲಾ.

“ಇರಲಿ, ನಿನ್ನ ಉದ್ಧಾರ ನಿನ್ನ ಕೈಯಿಂದಲೇ ಆಗಬೇಕು. ನಿನ್ನ ಬಲಿದಾನದಿಂದ ಬಲರಾಮನ ಒಂದು ರೋಮವೂ ಕುಂದಲಾರದು. ಅಂದಮೇಲೆ ಯೋಚಿಸಿನೋಡು, ನಮ್ಮ ಜೀವನದ ಪರಮ ಲಕ್ಷ್ಯ ಕೇವಲ ಮದುವೆಯಲ್ಲಿ ಪರ್ಯವಸಾನವಾಗಬಾರದು....”

ದುಃಖ ದುಗುಡಗಳ ಒತ್ತಡದಿಂದ ಸಿಡಿದೊಡೆಯಲಿರುವ ಬುಡ್ಡಿಯಂತಾದಳು ಹುಡುಗಿ. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯಹತ್ತಿತು.

"ಧೃತಿಗೆಡದೆ ಕೆಲಸ ಮಾಡು. ಇದರಿಂದ ನೀನು ತೊಂದರೆಗೆ ಸಿಕ್ಕಿದರೆ ನನ್ನ ಬಳಿಗೆ ಬಾ." ಎದೆಯಾಳದಿಂದ ನಿಟ್ಟುಸಿರೊಂದು ಹರಿದು ಬಂತು. ಒಂದು ಘಳಿಗೆ ಸುಮ್ಮನಿದ್ದು "ಸಿಸ್ಟರ್, ಹೆಣ್ಣಿಗೆ ಹೆಜ್ಜೆಹೆಜ್ಜೆಯಲ್ಲೂ ಆಪತ್ತು ಕಾದಿದೆಯೆಂಬುದನ್ನು ಇನ್ನಾದರೂ ಮನಗಾಣು. ಮುಂದೆಂದೂ ಎಚ್ಚರ ತಪ್ಪಬೇಡ," ಎಂದು ಮುಂತಾಗಿ ತಿಳಿವಳಿಕೆ ನೀಡಿದಮೇಲೆ ಆ ಹುಡುಗಿ ಉಪ ದೇಶವನ್ನು ಹೊತ್ತು ಹೊರಹೋಗುತ್ತಲೂ ಕಮಲೇಶ್ ಮರವಟ್ಟು ಕುಳಿತಳು. ಯೋಚನೆ ಕಾಗದದೆಡೆಗೆ ಹರಿಯಿತು. ನನಗೆ ಕಾಗದ ಬರೆಯಲು ಸಾಹಸ ಮಾಡಿದ ವ್ಯಕ್ತಿ ಅವಳಿಗಷ್ಟು ಮಾಡಿದ್ದರೆ ಹೆಚ್ಚೇನಲ್ಲ....

ಇನ್ನು ತನ್ನ ಭಾಗಕ್ಕೆ ಉಳಿದವರಿಬ್ಬರೇ. ಚಿತ್ರಸೇನನಾದರೆ ಕೈತುಂಬ ಹಣ. ಚಂದ್ರಕಾಂತನಾದರೆ ಕೈತುಂಬ ಸಹಾಯ....ವ್ಯಕ್ತಿವ್ಯಕ್ತಿಯನ್ನು ತೂಗಿ ನೋಡಿದರೆ ಚಿತ್ರಸೇನ ಸಾವಿರ ಪಟ್ಟು ಮೇಲು....ಅಷ್ಟಕ್ಕೆ ಯೋಚನೆ ತುಂಡು ಗಡಿದು ಮನಸ್ಸು ಮಿಡುಕಿತು. ಜೀವನಾರಣ್ಯದಲ್ಲಿ ದುರ್ಗಮವಾದ ಮಾರ್ಗಾನುಕ್ರಮಣಕ್ಕೆ ದಯಾಪೂರ್ಣ ಸಂಗಡಿಗ ಬೇಕೇಬೇಕು. ಸ್ವಹಿತಕ್ಕೆ ಪ್ರಧಾನ್ಯ ನೀಡುವುದಾದರೆ ಚಿತ್ರಸೇನ ; ನಕ್ಕು ನಲಿದು ಸಾನಂದದಿಂದ ಹೊತ್ತು ಕಳೆಯ ಬಹುದು; ಪರಹಿತಕ್ಕಾದರೆ ಚಂದ್ರಕಾಂತ ; ಒಂದುಗೂಡಿ ದುಡಿದು ಪರಹಿತ ವನ್ನು ಸಾಧಿಸಿ ಧ್ಯೇಯ ಲಕ್ಷ್ಮಿಯನ್ನು ಮನಸಾ ಪೂಜಿಸಬಹುದು.

ಸಾಧನೆ....ಸಾಧನೆಗೆಂದೇ ಓದಿ ಕಲಿತು ಈಗ ಸ್ವಹಿತವನ್ನು ಬಯಸಿದರೆ ಹೇಗೆ? ಸ್ವಹಿತ ಹೇಗೂ ನನ್ನ ಕೈಯಲ್ಲುಂಟು. ಅದಕ್ಕಾಗಿ ಇನ್ನೊಬ್ಬರನ್ನು ಅವಲಂಬಿಸಬೇಕೆ? ಮುಖ್ಯವಾಗಿ ನನ್ನ ಮುಂದಿರುವುದು ಸಾಧನೆ.... ಸಾಧನೆ....ಸಾಧನೆ....

ಸನ್ನಿವೇಶ ಅದೇ ವಿಚಾರಧಾರೆಯನ್ನು ಅವಿರಳವಾಗಿ ಹರಿಸಿತು.

ಅಂದು ದಿನಚರಿ ಆರಂಭವಾದಾಗ ಇನ್ನೂ ಒಂಭತ್ತರ ಸಮಯ.

....ಜನ....ಜನ....ಜನ....ಕಿಕ್ಕಿರಿ ತುಂಬಿದ ಜನ.

....ನೆತ್ತರಾರಿ ಸೀರಿ ಸೀಕಲಾಗಿ ಸೋತು ಸುಣ್ಣವಾದ ಹೆಣ್ಣುಗಳ ಪರಿಷೆ. ಮೂವರು ಡಾಕ್ಟರುಗಳು ಕಾರ್ಯನಿರತರಾಗಿದ್ದರೂ ಮುಗಿಯದ ಕೆಲಸ.

ಪರೀಕ್ಷಾ ಕಾರ್ಯ ಅವ್ಯಾಹತವಾಗಿ ನಡೆಯುತ್ತಿದೆ. ಕಾರ್ಯಕರ್ತರು ಡಾ|| ಕಮಲೇಶ್ ವಲ್ಲಾಲಿ ಡಾ|| ಸುಧಾರಾಣಿ, ಡಾ|| ಜುಬೇದಾಬೇಗಂ. ಹೊರಗಡೆ ವರಾಂಡದಲ್ಲಿ ತಮ್ಮ ಸರದಿಗಾಗಿ ಕ್ಲಾಂತ-ಶ್ರಾಂತ-ಕಾತರ-ನೋವು-ಭಾದೆಗಳಿಂದ ಖಿನ್ನಮುಖಿಯರಾಗಿ ಮುಂಡಿಸಿದ್ದಾರೆ ಅಂಗನೆಯರು.

ಬೆಳಗಿನ ವಾತಾವರಣ ಅತ್ಯಂತ ಸುಂದರವಾಗಿತ್ತು. ಅರಳಿದ ಸುಮಸಾಮ್ರಾಜ್ಯದ ತನಿಗಂಪು ವಾತಾವರಣದಲ್ಲಿ ತುಂಬಿ ಹರಡಿ, ಬೀಸಿ ಬರುವ ತಂಗಾಳಿಯಲ್ಲಿ 'ಘಂ' ನೆ ತನುಮನಗಳನ್ನು ಆವರಿಸುತ್ತಿದೆ. ಮೆಲ್ಲ ಮೆಲ್ಲನೆ ಬಾನೇರುವ ಬಾಲರವಿಯ ಬಾಲಕೋಮಲ ಕಿರಣಗಳು ಕಿಟಕಿಯಲ್ಲಿ ಹರಿದು ಬಂದು ಮೈಗೆ ಬೆಚ್ಚನೆಯ ಮುದ್ರೆಯನ್ನೊತ್ತುತ್ತಿವೆ. ಹೆಮ್ಮರಗಳ ನೆತ್ತಿಯಲ್ಲಿ ಹುದುಗಿ ಹಾಡುವ ಕೋಗಿಲೆ ಕಾಮಳ್ಳಿಗಳ ಇನಿಗಾನ ಮೇಲಿಂದ ಮೇಲೆ ಕರ್ಣಾನಂದಕರವಾಗಿ ಕಿವಿಯ ಮೇಲೊರೆಯುತ್ತಿದೆ, ತನುನೊಂದ ಜೀವಿಗಳಿಗೆ ಸಾಂತ್ವನಗೈಯ್ಯುವಂತೆ.

ಹಾ..........!

ಅನುದಿನವೂ ರೋಗಿಗಳ ಶುಶ್ರೂಷೆ....ಅವರ ಸ್ಥಿತಿಗತಿ....ರೋಗಗಳ ರೂಪುರೇಷೆ....ಡಾಕ್ಟರುಗಳ ರೀತಿ ನೀತಿ, ಮೇಲಾಗಿ ಸಾವು, ನೋವು, ಗೆಲುವು ಉದ್ರೇಕ, ಚೀತ್ಕಾರ, ಆಕ್ರಂದನ, ಗೋಳುಗಳು ಮನದಾಗಸದಲ್ಲಿ ಕಾರ್ಮೋಡಗಳನ್ನೆಬ್ಬಿಸುವುದರೊಂದಿಗೆ ತರ್ಕವಿತರ್ಕಗಳ ದಾಳಿಯನ್ನು ಹೂಡುತ್ತವೆ. ಹುರುಪಿನಿಂದ ಕೆಲಸಮಾಡಿದರೂ ತನುಮನಗಳು ನೋವಿನ ಬೀಡಾಗಿ ಉತ್ಸಾಹವನ್ನು ಮೊಟಕು ಮಾಡುತ್ತವೆ. ಸಂಸಾರಿಗಳಾಗಿ ಭವರೋಗದಿಂದ ನರಳಿ ಹಸುಗೂಸುಗಳನ್ನು ಹೊತ್ತ ಮಾತೆಯರು ಜೀವನ ಸ್ವರೂಪವನ್ನು ಅರಿತುಕೊಳ್ಳಲಾಗದೆ ಕಿಂಕುರ್ವಾಣತೆಯಿಂದ ತೊಳಲುವ ಬಗೆ, ಅವರ ಸ್ಥಿತಿಗತಿ ಕಷ್ಟಕಾರ್ಪಣ್ಯಗಳು ಎದೆಯ ಸಂತಸವನ್ನು ಸೂರೆಗೊಳ್ಳುತ್ತವೆ. ಸಂಸಾರ ದಂಡಕಾರಣ್ಯವನ್ನು ನೆನೆಸಿಕೊಂಡರೆ ಈಗ ಮೈ 'ಜುಂ' ಎನ್ನುವಂತಾಗಿದೆ. ದೇಹದಾದ್ಯಂತ ನಸು ಕಂಪನದ ಅಲೆ ತನಗರಿಯದಂತೆಯೇ ಹರಿದಾಡಿತು. ರೂಪ ಧನ ಸಂಪತ್ತುಗಳಿಂದ ಕೂಡಿದ ಪ್ರಾಪಂಚಿಕ ಸುಖ ಭೋಗಗಳೂ ಹೇರಳವಾದ ರೋಗ ರುಜಿನಗಳೂ ಅಕ್ಷಿಪಟಲದಮೇಲೆ ಬಯುಸದಿದ್ದರೂ ಲಾಸ್ಯವಾಡುತ್ತವೆ. ಇದು ಅನುದಿನವ ಗೋಳೇ ಆಗಿದ್ದರೂ ಅಂದೇಕೊ ಮನ

್ಸಿಗೆ ಎಲ್ಲಿಲ್ಲದ ಅಸಮಾಧಾನ....ಬಾಳು ಯಾರಿಗಿಲ್ಲ? ಭವರೋಗ ಯಾರಿ
ಲ್ಲ? ಏಕೆ ಇಷ್ಟೊಂದು ಅಳುಕು?....ಆದರೂ....ಜೇಡ ಬಾಂಧವನ ತಂತು
ಕೃತಿಯ ಹೊಳಪಿಗೆ ಮನಸೋತು ಜೀವತೆರುವ ಕ್ರಿಮಿಕೀಟಾದಿಗಳಂತಾಗಿದೆ
ರೇಕೆ ಈ ಮಾನವ ಸಮಾಜ? ಇರುಳು ಕಂಡ ಬಾವಿಗೆ ಹಗಲು ಹಾರುವ
ಈ ನಿರ್ಭಾಗ್ಯ ಮಾನವ ಏತರಿಂದ ಮಾಡಲ್ಪಟ್ಟಿದ್ದಾನೆ?

ತರ್ಕವಿತರ್ಕಗಳ ಸುಳಿಯಲ್ಲಿ ಸಿಕ್ಕಿ ಹೃದಯ ದಣಿಯಿತು. ಹೊತ್ತು
ಏತ್ತಿಗೇರುವವರೆಗೂ 'ಔಟ್ ಪೇಷೆಂಟ್' ಚಿಕಿತ್ಸೆ ನಡೆಸಿ ಮೂವರೂ ಹೊರ
ಬಿದ್ದರು. ಆಸ್ಪತ್ರೆಯ ಆವರಣವನ್ನು ದಾಟಿ ರಸ್ತೆಯಂಚಿನಲ್ಲಿ ನಡೆದು ಕವಲು
ಹಾದಿಯನ್ನು ಹಿಡಿದಾಗ ತುಟಿಗಳಲ್ಲಿ ಎಳೆನಗು ಮಿನುಗಿತು. ಮಿಂಚಿನನೋಟ
ಗಳು ಪರಸ್ಪರ ಬೀಳ್ಕೊಟ್ಟುವು. ಕಮಲೇಶ್ ಮನೆ ಮುಟ್ಟಿದಾಗ ಶ್ವೇತಾಂಬರ
ಧಾರಿಣಿ ಮಾ ಬಾಗಿಲಲ್ಲಿ ಎದುರಾದಳು.

ಶ್ರೀಧರದಲ್ಲಾದ್ದರಿ ಕಾಗದ ಬರೆದರೆ ಬರೆದ ಬಿಟ್ಟರೆ ಬಿಟ್ಟ. ಆತನಲ್ಲಿ
ಏನೋ ಒಂದು ಬಗೆಯ ಅಸಡ್ಡೆ ತುಂಬಿದೆ. ಅಲ್ಲಿಂದ ಬಂದವರೊಡನೆ ತಾನು
ಸುಖವಾಗಿರುವುದಾಗಿ ಸುದ್ದಿ ಕಳುಹಿಸಿದ್ದ. ಆದರಿಂದೀಚೆಗೆ ಅವನ ವರ್ತ
ಮಾನವೇ ಇಲ್ಲ. ಅವನು ಮೊದಲಿನಿಂದಲೂ ಹಾಗೆಯೆ....ತನ್ನ ಗೆಳೆಯರಿಂದ
ಕಾಗದ ಬಂದಾಗಲೂ ಉತ್ತರ ಬರೆಯುವ ತೊಂದರೆ ತೆಗೆದುಕೊಳ್ಳುತ್ತಿರಲಿಲ್ಲ.
ಹಾಗೆಂದು ತಾನು ಸುಮ್ಮನಾದರೂ ಪುತ್ರಶೋಕದಿಂದ ಮಾತೃಹೃದಯ ಪರಿ
ತಪಿಸುವುದು. ಏನೇ ಇರಲಿ, ತಾಯಿಗಾದರೂ ಒಂದು ಪತ್ರ ಬರೆಯದಿದ್ದರೆ....
ಎನಿಸಿ ಕೋಪವೂ ಮೂಡುವುದು. ಅದೇ ಯೋಚನೆಯಲ್ಲಿ ಮೇಜಿನಮೇಲಿನ
ಟ್ರೇ ಕಡೆ ನೋಟ ಹೊರಳಿಸಿದಾಗ ಚೇತನಳ ಕಾಗದ ಕಣ್ಣಿಗೆ ಬಿತ್ತು,

........ನನ್ನ ಮುದ್ದು ಮಗುವಿನ ಮುಖ ನಿನ್ನನ್ನು ಹೋಲುತ್ತಿದೆ
ಯೆಂದೇ ಹೇಳುವೆ, ಸದಾ ನಿನ್ನ ನೆನೆವರಿಕೆಯಲ್ಲಿದ್ದುದರಿಂದಲೋ ಏನೋ
ನನ್ನ ಮಗಳು ನಿನ್ನಷ್ಟೇ ಮುದ್ದಾಗಿದ್ದಾಳೆ. ನಿನ್ನ ಸವಿನೆನಪಿಗಾಗಿ 'ಕಮ
ಲೇಶ್' ಎಂದೇ ಹೆಸರಿಸಿರುವೆ. ಘಳಿಗೆಗೊಮ್ಮೆ ನಿನ್ನ ಹೆಸರನ್ನು ಕರೆಯುವು
ದೆಂದರೆ ಎಷ್ಟೊಂದು ಸಂತೋಷವೋ ಅದು ದೇವರಿಗೆ ಗೊತ್ತು. ನಾಳೆ ಅವಳ
ಎರಡನೇ ಹುಟ್ಟುಹಬ್ಬ. ನನ್ನವರಾಗಲೀ ಹರೀಶರ ಕಡೆಯವರಾಗಲೀ ಮಗು
ವನ್ನು ನೋಡಲು ಬರಲಿಲ್ಲವೆಂಬುದು ಮನಸ್ಸಿಗೆ ಎಲ್ಲಿಲ್ಲದ ಕೊರತೆ. ನಾಳೆ

ನಮ್ಮ ಸ್ನೇಹವರ್ಗಕ್ಕೆಲ್ಲಾ ಪಾರ್ಟಿಯಿದೆ. ಮುಖ್ಯವಾಗಿ ಅಮ್ಮ ಸಹ ಬರಲಿಲ್ಲ ವೆಂಬುದು ನನಗೆ ಬಲು ಸಂಕಟ. ನೀನು ಬರುವಂತಿದ್ದರೆ ಈ ಎಲ್ಲಾ ಕೊರತೆ ಗಳನ್ನೂ ನೀಗಿಸಿಕೊಳ್ಳಬಹುದಾಗಿತ್ತು. ನಿನ್ನ ಮಗಳನ್ನು ಅಲ್ಲಿಂದಲೇ ಆಶೀ ರ್ವದಿಸು ಕಮಲೇಶ್. ಈ ದಿನಗಳಲ್ಲಿ ನೀನು ಸ್ವಾತಂತ್ರ್ಯಜೀವಿ. ಆದರೂ ಇಲ್ಲಿಯತನಕ ಬರಲಿಲ್ಲವೇಕೆ? ನಿನ್ನ ತಾಯಿಯನ್ನೂ ಕರೆತಂದಿದ್ದರೆ ನಿಜ ವಾಗಿಯೂ ಸತ್ಯಭಾಮೆಗೆಷ್ಟು ಸಂತೋಷವಾಗುತಿತ್ತೋ ಅಷ್ಟೇ ನನಗೂ ಆಗುತಿತ್ತು.

ಕಮಲೇಶ್, ಇಲ್ಲಿ ಕೇಳು. ನಾನು ಎರಡು ಮಕ್ಕಳನ್ನು ಹೆತ್ತನಂತರ ಹರೀಶರೊಂದಿಗೆ ದುಡಿಯುವುದೆಂಬ ನಿರ್ಧಾರ ಕೈಗೊಂಡುದುವರಿಂದ ಈ ಮೊದಲ ವರ್ಷವೇ ಮಗುವನ್ನು ಬರಮಾಡಿಕೊಂಡೆ. ಮುಂದಿನವರ್ಷ ಇನ್ನೊಂದು! ಅನಂತರ ನಾನು ಹಾರುವ ಹಕ್ಕಿ! ಆನಂತರ ಎಲ್ಲಿದ್ದರೂ ಬಂದು ನಿನ್ನನ್ನು ನೋಡುವೆ. ಈ ವರ್ಷಾಂತ್ಯದಲ್ಲಿ ನಿನ್ನೊಡನೆ ಕೆಲವು ಕಾಲ ಕಳೆಯ ಬೇಕೆಂದು ಇಚ್ಛೆ ಇದೆ ಕಮಲೇಶ್. ಆದರೆ ಹರೀಶರಿಗಾಗಿ ಅದನ್ನು ಹತ್ತಿಕ್ಕು ತಿದ್ದೇನೆ. ಅವರೊಂದು ಭಾವಜೀವಿ. ಹಗಲಿರುಳೂ ವಿಜ್ಞಾನದಲ್ಲಿ ಮುಳು ಗಿರುವ ಮಹಾ ಜ್ಞಾನಿ....ಬಂಧು ಬಾಂಧವರು ನನ್ನನ್ನು ಪೂರ್ಣ ಕೈ ಬಿಟ್ಟರೂ ಹರೀಶರ ಸನ್ನಿಧಿಯಲ್ಲಿ ನಾನು ಪೂರ್ಣ ಸುಖಿ.

ಹರೀಶರಿಗೆ ಎಂದಾದರೂ ಬೆಂಗಳೂರಿನ ತಾತಾ ವಿಜ್ಞಾನ ಮಂದಿರಕ್ಕೆ ವರ್ಗವಾಗುವ ಸಂಭವ ಬರಬಹುದು. ಬಂದಲ್ಲಿ, ನಿನ್ನನ್ನು ಅನಿರೀಕ್ಷಿತವಾಗಿ ಭೇಟಿಮಾಡುವೆ. ನಿನ್ನ ಮದುವೆ ವಿಚಾರ ಏನಾಯಿತು? ಅಂತಿಮ ನಿರ್ಧಾರ ಕೈಗೊಳ್ಳುವ ಮುನ್ನ ಇನ್ನೊಮ್ಮೆ ಯೋಚನೆ ಮಾಡು. ಹತ್ತು ಬಾರಿ ಯೋಚನೆ ಮಾಡು. ಭಗವಂತ ದಯಾಮಯ. ಅವನು ಖಂಡಿತವಾಗಿಯೂ ನಿನ್ನನ್ನು ಹರಸುತ್ತಾನೆ. ಚೇತನಾ ಹರೀಶ್ ನಿನಗೆ ಹೃತ್ಪೂರ್ವಕವಾಗಿ ಶುಭ ಕೋರುತ್ತಾಳೆ....

ಕಮಲೇಶ್ ನಿನಗಾಗಿ ನಾನು ಪ್ರಾರ್ಥಿಸುವೆ. ನನಗಾಗಿ ನೀನು ಪ್ರಾರ್ಥಿಸು.

ಪತ್ರವನ್ನೋದಿ ರವಿಯಾಗಮನದಿಂದ ಬಿರಿಯುವ ಕಮಲ ಪುಷ್ಪ ದಂತಾಯಿತು ಹರ್ಷಪೂರಿತ ಹೃದಯ

ನಿಜವಾಗಿಯೂ ಹರೀಶರಿಗೆ ಇಲ್ಲಿಗೆ ವರ್ಗವಾಗಿದ್ದರೆ....

ತಲೆ ಬಾಗಿಲ ಕರೆಗಂಟೆ ಕಾತರಯುತವಾಗಿ ಕರೆ ನೀಡಿತು. ಸನಿಹವಿದ್ದ ದಾದಿ ಕದ ತೆರೆದಳು. ಒಳ ಬಂದವಳು ಚಂಪಾ. ಬೀಸುಗಾಳಿಯಲ್ಲಿ ತೇಲಿ ಹೋಗುವಳೋ ಎಂಬಷ್ಟು ಕ್ಷೀಣವಾಗಿದ್ದ ಅವಳು ಈಗ ಅಸಹ್ಯವಾಗಿ ಅಸ್ತವ್ಯಸ್ತವಾಗಿ ತುಂಬಿಕೊಂಡಿದ್ದಾಳೆ. ಮೈಬಣ್ಣ ಮುಖಭಾವ ಅನಾರೋಗ್ಯವನ್ನು ಸಾರಿ ಹೇಳುತ್ತಿವೆ. ಬಾತುಕೋಳಿಯಂತೆ ನಡೆದು ಬಂದ ಅವಳ ರೀತಿಯನ್ನು ಗಮನಿಸಿದಾಗ ಹೃದಯ ಸಂತಾಪದಿಂದ ಮಿಡಿಯಿತು. ಎರಡೂ ಕೈಗಳಿಂದ ಅವಳ ಕೈಗಳನ್ನು ಅದುಮಿ ಹಿಡಿದುಕೊಂಡಳು. ಬರಬರುತಿದ್ದಂತೆಯೇ ಅವಳ ಕಣ್ಣುಗಳಲ್ಲಿ ನೀರಾಡಿತು.

ಒಂದು ಕ್ಷಣದ ಹಿಂದೆ ಹೃದಯ ಎಷ್ಟೊಂದು ಆನಂದದ ರಸಾನ್ನವನ್ನುಂಡಿತ್ತೋ ಈಗ ಅಷ್ಟೇ ದುಃಖದ ಕದಾನ್ನವನ್ನುಂಡಿತು. ಬೆಳ್ಳನೆಯ ತುಟಿಗಳು ಬಿರಿದು ಹುಸಿನಗೆಯನ್ನು ಬೀರಲು ಪ್ರಯತ್ನಿಸಿ ಸುಮ್ಮನಾದುವು. ಕಮಲೇಶಳಿಗೆ ಏನೆನ್ನಬೇಕೊ ಹೊಳೆಯಲಿಲ್ಲ. ಸುಮ್ಮನೆ ಸಂಪ್ರದಾಯಬದ್ಧವಾಗಿ 'ಬಾಮ್ಮಾ?' ಎಂದಳು. ಹೃದಯ ದೀರ್ಣವಿದೀರ್ಣವಾಗಿತ್ತು. ಇಬ್ಬರೂ ಸೋಫಾದ ಮೇಲೆ ಕುಳಿತುಕೊಂಡರು. ಎದೆಯಾಳದಲ್ಲಿ ಬಿಸಿಯುಸಿರು ನೆಲೆಯಿಲ್ಲದೆ ಹರಿದಾಡಿತು. ಮೆಲ್ಲನೆ ಅವಳು ಮುಸು ಮುಸು ಅಳಹತ್ತಿದಳು. ಗೆಳತಿಯ ತಲೆಯ ಮೇಲೆ ನೇಹದಿಂದ ಕೈಯಿಟ್ಟು—"ಚಂಪಾ, ಸ್ವಲ್ಪ ಸೈರಿಸಿಕೊ. ಅಳುವುದರಿಂದ ಏನೇನೂ ಪ್ರಯೋಜನವಿಲ್ಲ."

ಅಂತಃಕರಣ ಕರಗಿ ನೀರಾಗಿ ಹರಿಯಿತು.

ದುಃಖದ ಆವೇಗವು ತುಸು ಕಡಿಮೆಯಾದಮೇಲೆ ಚಂಪಾ ಏದುವ ದನಿಯಲ್ಲಿ ಉದ್ವೇಗದಿಂದ ನುಡಿದಳು "ನನ್ನ ಸರ್ವ ನಾಶವಾಯಿತು ಕಮಲೇಶ್!"

"ಹಾಗೆನ್ನಬಾರದು. ನಿನ್ನ ಉದ್ಧಾರ ಈಗಲೂ ನಿನ್ನ ಕೈಯ್ಯಲ್ಲಿದೆ."

"ಹೇಗೆ ಕಮಲೇಶ್?" ಅವಳ ತೋಳನ್ನು ಭಾವೋದ್ವೇಗದಿಂದ ಹಿಡಿದು ಅಲುಗಿಸುತ್ತಾ ಕೇಳಿದಳು ಚಂಪಾ. ಕಣ್ಣುಗಳಲ್ಲಿ ಉಜ್ವಲ ಭಾವಜ್ವಾಲೆ ತಾಂಡವವಾಡಿತು.

"ಕೇಳು ಚಂಪಾ!"

ಚಂಪಾ ಮಾತನಾಡದೆ ತಲೆಯಲುಗಿಸಿದಳು. ಮ್ಲಾನವಾದ ಕೆನ್ನೆಗಳ

ಮೇಲೆ ಇಳಿದ ಕಂಬನಿಯು ಕಲೆ ಕಲ್ಲಿನಮೇಲೆ ಹರಿದ ಮಳೆ ನೀರಿನ ಕಲೆ ಯಂತೆ ಕಂಗೊಳಿಸುತಿತ್ತು.

"ಈಗಲೂ ನಿನ್ನ ಕಳೆದುಹೋದ ಚೇತನವನ್ನು ಒಂದುಗೂಡಿಸಿಕೊಳ್ಳು ವುದು ಸಾಧ್ಯವಿದೆ ಮುಖ್ಯವಾಗಿ ದೃಢ ಮನಸ್ಸು ಮಾಡು."

"ನನ್ನ ಮುಂದಿರುವ ಹಾದಿ ಒಂದೇ ಕಮಲೇಶ್!"

"ಹೇಳು ಚಂಪಾ!"

"ಸಗ್ಗದ ಹಾದಿ! ಅದನ್ನೆಂದೋ ತುಳಿದಿದ್ದೇನೆ. ಇನ್ನೆಷ್ಟು ಹಾದಿ ನಡೆ ಯಬೇಕೋ ಗೊತ್ತಾಗಿ ಹೇಳಲಾರೆ. ಎಂದಿ...."

ಮುಂದೆ ಮಾತಾಡದಂತೆ ಅವಳ ಬಾಯಿಯನ್ನು ಮುಚ್ಚಿ ಹಿಡಿದಳು ಕಮಲೇಶ್.

"ಏಕೆ ಅಷ್ಟು ನಿರಾಸೆ ಚಂಪಾ? ಕಣ್ತೆರೆದು ನೋಡು! ನಿನ್ನ ಮುಂದಿ ರುವುದೆಲ್ಲಾ ಮಾನವ ಸೃಷ್ಟಿ. ಇಷ್ಟರಮೇಲೆ ನಿನ್ನದೊಂದು ಅತೀ ಕ್ಷುಲ್ಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾರೆಯಾ? ನಿನ್ನಿಂದಾಗದೆನ್ನುವುದು ನಿನಗೇ ಅವಮಾನ ಚಂಪಾ! ಮಾಡುತ್ತೇನೆನ್ನುವ ನೆಚ್ಚುಬೇಕು; ಕೆಚ್ಚುಬೇಕು; ಮುಖ್ಯವಾಗಿ ಸ್ವಪ್ರಯತ್ನ ಬೇಕು; ದೃಢ ಸಂಕಲ್ಪಬೇಕು........"

"ನಿಜ; ನಿನ್ನ ಮಾತನ್ನು ಒಪ್ಪಿಕೊಳ್ಳುವೆ. ಆದರೆ ನನ್ನ ಬಗೆಗೆ ನಾನು ನಿಸ್ಸಹಾಯಕಳು." ವ್ಯಥಿತಳಾಗಿ ನುಡಿದ ಚಂಪಾ ನಿಟ್ಟುಸಿರೊಂದನ್ನು ಹರಿಯಬಿಟ್ಟು ಪುನಃ ಮುಂದುವರಿದಳು "ನಿನ್ನ ಚಂಪಾ ದಂಪತಿಗಳಲ್ಲಿ ಕಳೆ ದುಳಿದಿರುವ ಸತ್ವ ಇಷ್ಟೆ. ಹೇಗಾದರೂ ನಿನ್ನ ಸಕಲ ಪ್ರಯತ್ನದಿಂದ ಈ ಬಾಳಿನ ಕುಡಿ ಕವಲೊಡೆಯುವಂತೆ ಮಾಡು ಕಮಲೇಶ್. ಇಲ್ಲದಿದ್ದಲ್ಲಿ ನನ್ನ ಇದುವರೆಗಿನ ಮಹಾತ್ಯಾಗ ನೀರಿನಲ್ಲಿ ಹೋಮ ಮಾಡಿದಂತೆ ಅನ್ಯಥಾ ವ್ಯರ್ಥ ವಾಗುತ್ತದೆ. ನನಗೀಗ ನಾಲ್ಕು ತಿಂಗಳು ತುಂಬಿದೆ. ಸಾಲುದ್ದಕ್ಕೂ ಹಲವು ಮಕ್ಕಳನ್ನು ಕಳೆದುಕೊಂಡಿದ್ದೇನೆ. ಈ ಒಂದು ಮಗುವನ್ನಾದರೂ ಉಳಿಸಿ ಕೊಡುವ ಸಾಹಸ ಮಾಡು ಕಮಲೇಶ್! ಇಲ್ಲದಿದ್ದಲ್ಲಿ ನಾನು ಹುಚ್ಚಾಗ ಬಹುದು.... ಪೆಚ್ಚಾಗಬಹುದು.... ಅಥವಾ ಸಗ್ಗದ ಹಾದಿ ಹಿಡಿಯಬಹುದು."

"ಚಂಪಾ!"

"ನಿನ್ನಿಂದ ಇದೊಂದು ಉಪಕಾರವನ್ನು ಬಯಸಿ ನಾನಿಲ್ಲಿಗೆ ಬಂದಿರುವೆ." ಉಕ್ಕಿಬಂದ ದುಃಖದಿಂದ ಕಂಠ ಗದ್ಗದವಾಯಿತು. ರಕ್ತರಹಿತವಾಗಿದ್ದರೂ

ಮುಖ ನಸುಗೆಂಪು ತಳೆಯಿತು.

ತನ್ನನ್ನು ಅತ್ಯಂತ ದೀನೆಯಾಗಿ ಅಂಗಲಾಚಿದ ಕೀಚಲು ದನಿಗೆ ಏನೆಂದು ಉತ್ತರ ಹೇಳಬೇಕೋ ಹೊಳೆಯದಾಯಿತು. ಚಿತ್ತಭಿತ್ತಿಯಲ್ಲಿ ಕಾಲೇಜಿನ ದಿನಗಳು ಸುಳಿದಳಿದುವು. ಚಿಗರಿಯಂತೆ ಓಡಾಡುತಿದ್ದ ಮುಗ್ಧ ರೂಪ ಅಕ್ಷಿಪಟಲದ ಮೇಲೆ ಲಾಸ್ಯವಾಡಿತು. ಗೃಹ ವಿಜ್ಞಾನದಲ್ಲಿ ಪದವೀಧರೆ. ಶ್ರೀಮಂತ ಪತ್ನಿ. ಒಂದೇ ಒಂದು ವಂಶೋದ್ಧಾರಕ ಮಗುವಿಗಾಗಿ ತನ್ನ ಮುಂದೆ ದೀನೆಯಂತೆ ಅಂಗಲಾಚುತಿದ್ದಾಳೆ....ಏನು ಹೇಳಲಿ?....ಏನು ಹೇಳಬಲ್ಲೆ ?

ಕೋಕಿಲಗಾನ ಚಂಪಾ !

ಅಂದು ಎಲ್ಲೆಲ್ಲೂ ಕೇಳಿ ಬರುತಿದ್ದ ಕಂಠಶ್ರೀಯಲ್ಲಿ ಮೈ ಮರೆಯು ತಿದ್ದ ಚಂಪಳೆಲ್ಲಿ? ಇಂದಿನ ಈ ಮಾಂಸದ ಮುದ್ದೆಯೆಲ್ಲಿ?....ಒಡನೆ ಬಿಸಿ ರಕ್ತವೆಲ್ಲಾ ತಣ್ಣಗಾಗಿ ಹೆಪ್ಪುಗಟ್ಟಿದಂತಾಗಿ ಮೈಯಲ್ಲಿ ನಸು ಕಂಪನದ ಅಲೆ ಹರಿದಾಡಿ ಹೋಯಿತು. ಜೀವನದ ಕರಾಳರೂಪ ಹಲ್ಕಿರಿದು ಹುಚ್ಚೆದ್ದು ನರ್ತಿಸತೊಡಗಿತು. ಚಿತ್ತಭಿತ್ತಿಯಲ್ಲಿ ಚಿತ್ರಸೇನ್ ಚಂದ್ರಕಾಂತರು ಹಲ್ಕಿರಿದರು. ಒಮ್ಮೆಲೆ ದೇಹದಾದ್ಯಂತ 'ಜುಂ' ಎಂದಿತು. ಮರಪಟ್ಟು ಕುಳಿತಳು ಕಮಲೇಶ್.

ಸದ್ದಿಲ್ಲದ ಶಾಂತಿಯಲ್ಲಿ ಬೆಂದೆದೆಯ ಬಿಸುಸುಯ್ಲು ಮೆಲ್ಲನೆ ಹರಿದಾಡಿತು.

ಅಂದು,

ತಾವು ಮೂವರೂ ಕೂಡಿ ಆಡಿ ನಲಿದ ದಿನಗಳು ಸ್ಮರಣೆಯ ಹಾದಿಯಲ್ಲಿ ಸಾಗಿ ಹೋದುವು. ಪ್ರಮಾಣವಚನ ಕೈಕೊಂಡ ದೃಶ್ಯ ಚಲನಚಿತ್ರದಂತೆ ಸುಳಿಸುಳಿದಳಿಯಿತು. ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು. ಕೆಲವು ದಿನಗಳ ಹಿಂದೆ ವನಮಾಲಿ ಅಂದಿದ್ದಳು "ನಮ್ಮಿಂದಂತೂ ಕಲಾಜೀವನ ಸಾಧ್ಯವಾಗಲಿಲ್ಲ. ನೀನಾದರೂ ಡಾಕ್ಟರಾಗಿ ಉತ್ತುಂಗಕ್ಕೇರಿದ್ದೀಯಲ್ಲ ಅದೇ ಸಾಕು."

"ಈಗ ಹಾಗೆನ್ನದೆ ವಿಧಿಯಿಲ್ಲ. ಇನ್ನೇನೆನ್ನುತ್ತಿ ಹೇಳು ? ಈ ಮಾಂಸದ ಮುದ್ದೆ ಕುಣಿದರೆ ಇನ್ನು ಹೇಗಿರಬೇಡ ?"

ಒಡನೆ ಇಬ್ಬರ ಮುಖದಲ್ಲೂ ನಗುವಿನಲೆ ಉಕ್ಕಿ ಹರಿಯಿತು.

ಚಂಪಕಮಾಲಿನಿ ಕಂಬನಿಯನ್ನು ತೀಡಿಕೊಂಡು ದುಃಖ ಮಿಶ್ರಿತ ಧ್ವನಿಯಲ್ಲಿ ಕೇಳಿದಳು "ನನಗೇನು ಹೇಳುತ್ತಿ ಕಮಲೇಶ್ ?"

ಎಲ್ಲೋ ಗತಕಾಲದಂಬರದಲ್ಲಿ ಅಂಡಲೆಯುತಿದ್ದ ಮಾನಸಪಕ್ಷಿ ನುಡಿ ಕೇಳಿ ಸರ್‍ರನೆ ಹಿಂದಿರುಗಿತು. ಯಾಂತ್ರಿಕವಾಗಿ ಎದ್ದು ಬೀರುವಿನಲ್ಲಿ ತಡುಕಿ ಔಷಧಿ ಇಂಜಕ್ಷನ್‌ಗಳನ್ನು ತೆಗೆದುಕೊಟ್ಟು ಅವಳನ್ನು ಸ್ನೇಹ ವಿಶ್ವಾಸಗಳ ಆವೇಗದಿಂದ ಹೋಗಗೊಡದೆ ಸಂಜೆಯವರೆಗೂ ಉಳಿಸಿಕೊಂಡು ಬೀಳ್ಕೊಟ್ಟಳು. ಮನ ನೊಂದು ಭಾರವಾದ ಹೃದಯ ವ್ಯಾಪ್ತಿಗೆ ತುಸು ಮೀರಿ ಮಿಡಿದಂತೆ ಭಾಸವಾಯಿತು.

ಎಲ್ಲೋ ಯಾಕೋ ಶುಕ ಸಾರಿಕೆಗಳ ಇನಿದನಿ ಅವಿರಳವಾಗಿ ಕೇಳಿ ಬರುತ್ತಿದೆ, ಲೋಕಲೋಕಾಂತರಗಳ ಸಂದೇಶದಂತೆ.

ಅಧ್ಯಾಯ

೧೭

ತಲೆ ಬಾಗಿಲ ಕರೆಗಂಟೆ ಗಂಭೀರ ಸ್ವರದಲ್ಲಿ ಕರೆ ನೀಡಿತು.

ಪತ್ರಿಕಾವಲೋಕನದಲ್ಲಿದ್ದ ಕಮಲೇಶ್ ಹೋಗಿ ಕದ ತೆರೆದೊಡನೆ ದೃಗ್ಗೋಚರಿಸಿದುದು ಆತ್ಮಾರಾಂ ಕರ್ವೆಯ ಭವ್ಯ ಬಂಧುರ ಸೌಮ್ಯರೂಪ. ಪರಸ್ಪರ ದರ್ಶನಲಾಭದಿಂದ ಮುಖಮಂಡಲದಲ್ಲಿ ಹಸನಾದ ನಗು ಅರಳಿತು.

"ಪ್ರಣಾಮ್ ಮಾಮಾ!"

"ಪ್ರಪ್ರಥಮದಲ್ಲೇ ನಿನ್ನ ದರ್ಶನವಾದುದು ಶುಭ ಲಕ್ಷಣ!" ಎಂದರು ಕರ್ವೆ. ಮುಖ ಸಾನಂದದಿಂದ ಅರಳಿತು.

ಹಿಂದೆಯೇ ಹೇಮರತಿ ಕರ್ವೆ ಚಿತ್ರಸೇನ ಒಳಗಡೆ ಪದಾರ್ಪಣೆ ಮಾಡಿದರು. ಪಾಶ್ಚಾತ್ಯ ಭೂಮಿಯಿಂದ ಹಿಂದಿರುಗಿದ ಮೇಲೆ ಅವನನ್ನು ನೋಡಿರಲಿಲ್ಲ. ಇಬ್ಬರ ನೋಟಗಳು ತಟ್ಟನೆ ಸಂಧಿಸಿ ಮರುಕ್ಷಣದಲ್ಲಿ ಬೇರೆಡೆಗೆ ಜಿಗಿದುವು. ತಂದೆಯ ಪ್ರತಿರೂಪವೋ ಎಂಬಂತೆ....ಅದೇ ಎತ್ತರ, ಅದೇ ನಿಲುವು, ಅದೇ ರೂಪು....ಸ್ವತಃ ಕಮಲೇಶಳೇ ಕದ ತೆರೆದುದರಿಂದ ಚಿತ್ರಸೇನ್ ಲಜ್ಜಾಮೂರ್ತಿಯಾಗಿ ದಿಟ್ಟಿ ತಗ್ಗಿಸಿದ. ವಿನೀತ ಸ್ವರದಿಂದ ನುಡಿದಳು ಕಮಲೇಶ್ "ಮಾ ಇದ್ದಾರೆ....ಬನ್ನಿ."

ನುಡಿ ಹೊರ ಬಿದ್ದರೂ ಕೆನ್ನೆಗಳು ಚೆಂಗುಲಾಬಿಗಳಾದುವು. ಬಾಗಿಲಿನಿಂದ ಸರಿದು ನಿಂತಳು. ಎಷ್ಟೇ ಪ್ರಯತ್ನಿಸಿದರೂ ಧೈರ್ಯದ ಶಿಲೆಯೊಡೆದು ಕಳವಳದ ಮೂಸೆಯಲ್ಲಿ ಬೆಂದು ಮುಖದ ಮೇಲೆ ಬೆವರಿನ ಕಣಗಳು ತುಂತುರು ತುಂತುರಾಗಿ ಮೂಡಿದುವು. ಎಲ್ಲರೂ ಸುಖಾಸೀನರಾಗುತ್ತಲೂ ಸ್ವರ್ಣಮಾಲಿನಿಯನ್ನು ಕರೆಯಲು ಒಳಗಡೆ ಹೋದಳು ಅವಳು. ಭಾವೋದ್ವೇಗದಿಂದ ಮೈ ಪುಳಕಿತವಾಯಿತು. ಸ್ವರ್ಣಮಾಲಿನಿ ನಗುಮುಖದಿಂದ ನುಡಿದಳು "ಖಂಡಿತವಾಗಿಯೂ ತಳ್ಳಿಹಾಕಬೇಡ ಕಮಲೇಶ್. ಚಿನ್ನದಂತಾ ಹುಡುಗ."

ಮೈಯೆಲ್ಲಾ ಸಂತಸದ ಬೀಡಾಗಿ ನುಡಿಯುವಾಗ ಹೃದಯವೇ ಹೊರ

ಬಂದಂತಾಯಿತು. ಕಮಲೇಶ್ ಒಂದು ಕ್ಷಣ ಹಾಗೇ ನಿಂತಳು. ಸುಖ-ಸಂತೋಷ–ದೈನ್ಯತೆಗಳ ಮೂರ್ತಿಯಾದ ತಾಯಿಯನ್ನು ನೋಡಿದಾಗ ಹೃದಯ ಹಾಲ್ಗಡಲಾದರೂ ಅದು ತನ್ನ ಭವ್ಯ ಭವಿತವ್ಯ....

"ನೀವು ಅವರಲ್ಲಿಗೆ ಹೋಗಿ. ನಾನು ಇಷ್ಟರಲ್ಲೇ ಬರುವೆ." ಎಂದಳು ಕಮಲೇಶ್. ಯೋಚನಾಧಾರೆ ಮನಸ್ಸಿನೆಳೆಯನ್ನು ಜಗ್ಗಿತು. ಆಶಾ ಸೌಧವಾಗಿ ಹಿರಿ ಹಿರಿ ಹಿಗ್ಗುತ್ತಾ ನಿರ್ಗಮಿಸಿದ ತಾಯಿಯನ್ನು ಬಾಗಿಲಿಂದಾಚೆಗೆ ದಾಟುವವರೆಗೂ ಸಜಲ ನೇತ್ರೆಯಾಗಿ ನಿಟ್ಟಿಸಿದಳು ಕಮಲೇಶ್. ವಿಷಯ ತನುಮನಗಳಲ್ಲಿ ಗೊಂದಲವೆಬ್ಬಿಸಿತು. ಇನ್ನೂ ಯಾವ ನಿರ್ಧಾರವನ್ನೂ ಕೈಕೊಂಡಿರದ ಕಮಲೇಶಳಿಗೆ ಅನಿರೀಕ್ಷಿತವಾಗಿ ಅಂತ್ಯ ತೀರ್ಮಾನ ತೆಗೆದು ಕೊಳ್ಳುವಂತಹ ಪ್ರಸಂಗ ಬರುವುದೆಂಬ ಕಲ್ಪನೆಯೂ ಇರಲಿಲ್ಲ. ಮಾ ಆಶೋತ್ತರವಷ್ಟೇ ಅಲ್ಲ, ಆತ್ಮಾರಾಂ ಕರ್ವೆ ಮನೆತನದ ಅಪಾರವಾದ ವಾತ್ಸಲ್ಯವೂ ಇದೆ. ತಳ್ಳಿಹಾಕುವುದಾದರೂ ಹೇಗೆ? ಈ ಎಲ್ಲಕ್ಕೂ ಮೀರಿದ ಭವಿಷ್ಯತ್ತು.... ಯೋಚಿಸುತ್ತಲೇ ಟ್ರೇಯಲ್ಲಿ ಸಿಹಿ ಖಾರವನ್ನು ಜೋಡಿಸುವಾಗ ನೀರು ಮರಳಿತು. ಸೀತಮ್ಮ ಚಹ ತಯಾರಿಸಿದಳು. ಚಹದ ಬಸಿಯನ್ನು ಜೋಡಿಸಿಟ್ಟು ಕೊಂಡರೂ ಏನು ಹೇಳುವುದೆಂಬ ಹಿರಿಯ ಪ್ರಶ್ನೆ ಮನವನ್ನು ಕೀಟದಂತೆ ಕೊರೆಯುತಿತ್ತು. ಯೋಚಿಸುತ್ತಾ ಚಹದ ಟ್ರೇಯನ್ನು ತಾನೇ ತೆಗೆದು ಕೊಂಡು ಹೋದಳು. "ಈಗಷ್ಟೆ ಚಹ ಮುಗಿದಿದೆ. ಮತ್ತೇಕೆ ತೊಂದರೆ ತೆಗೆದುಕೊಂಡೆ?" ಎಂದಳು ಹೇಮರತಿ ಕರ್ವೆ. ಕಮಲೇಶ್ ಮುಗುಳು ನಗುತ್ತಾ ಚಹವನ್ನು ಮುಂದೆ ಹಿಡಿದಳು. ನಾರೀಶ್ರೀಹಸ್ತಗಳು ಪ್ರೀತಿ ಗೌರವಪೂರ್ವಕವಾಗಿ ನೀಡಿದ ಚಹ ಅಲ್ಪವಾದರೂ ಅಮೃತೋಪಮ....! ಆತ್ಮಾರಾಂ ಕರ್ವೆ ಎದ್ದುನಿಂತು ಗೌರವಪೂರ್ಣವಾಗಿ ಚಹವನ್ನು ಸ್ವೀಕರಿಸಿದರು, ಪರ್ವತವೇ ಎದ್ದುನಿಂತು ಸ್ವೀಕರಿಸಿದಂತೆ. ಅವರ ಹಿಂದೆಯೇ ಚಿತ್ರಸೇನ್ ಎದ್ದುನಿಂತು ಚಹವನ್ನು ಪ್ರಸಾದೋಪಮವಾಗಿ ಗ್ರಹಿಸಿದ. ಕಮಲೇಶ್ ತಾನೊಂದು ಬಸಿಯನ್ನು ತೆಗೆದುಕೊಂಡು ಎದುರಿನ ಸೋಫಾದ ಮೇಲೆ ಕುಳಿತುಕೊಂಡಳು. ಜನ್ಮ ಜನ್ಮಾಂತರಗಳ ತೊಡಕೆಲ್ಲಾ ತಲೆಯನ್ನು ಮುತ್ತಿದಂತಾಯಿತು. ಚಹವನ್ನು ತುಟಿಗೆ ಹಚ್ಚಿದ ಚಿತ್ರಸೇನ್ ಹನಿಹನಿಯನ್ನೂ ಪರಮ ಪವಿತ್ರವಾಗಿ ಪರಿಗ್ರಹಿಸುತಿದ್ದ. ಬಾಗಿದ ತಲೆಯೆತ್ತದೆ ಗಂಭೀರ

ಮೂರ್ತಿಯಾಗಿ ಕುಳಿತ ಅವನೆಡೆಗೆ ನೋಟ ಹೊರಳಿ ಮರುಕ್ಷಣದಲ್ಲೇ ಹಿಂದಿರುಗಿತು. ಒಂಭತ್ತು ವರ್ಷಗಳ ಕೆಳಗೆ ಬೆಂಗಳೂರು ಬಿಟ್ಟಾಗ ಹೇಗಿದ್ದನೋ ಹಾಗೆಯೇ ಈಗಲೂ ಇದ್ದಾನೆ. ಹೊಂದಾವರೆಯ ವರ್ಣಕ್ಕೆ ಚಳಿದೇಶ ಇನ್ನಷ್ಟು ಮೆರಗುಕೊಟ್ಟಿದೆ....ಮುಂದಿನ ಸಮಸ್ಯೆಯನ್ನು ನೆನೆಸಿಕೊಂಡರೆ ಯಾವ ಹಾಳು ಹವ್ಯಾಸವೂ ಬೇಡ. ಈತನನ್ನೆ ಕೈಹಿಡಿದರೆ ಒಂದು 'ನರ್ಸಿಂಗ್ ಹೋಂ' ತೆರೆದು ಹಾಯಾಗಿರಬಹುದು ಎಂಬ ಯೋಚನೆಯೂ ಬರುವುದು. ಮರುಕ್ಷಣದಲ್ಲಿ ತಂದೆ ಸತ್ತರೂ, ಭಾವನಿಗೆ ಹಣ ತೆತ್ತರೂ, ಅಣ್ಣಂದಿರು ಅಲಕ್ಷಿಸಿದರೂ ಧೃತಿಗೆಡದ ಹೆಣ್ಣು ಈಗೇಕೆ ಇನ್ನೊಬ್ಬರನ್ನು ಆಶ್ರಯಿಸಬೇಕು? ದುಡಿಯುವ ಯೋಗ್ಯತೆಯಿದ್ದಾಗ ಕೈತುಂಬ ದುಡಿಯೋಣ....ಎಂಬ ಅಭಿಮಾನಪೂರ್ಣ ಸ್ವಾಭಿಮಾನ....

ಆತ್ಮಾರಾಂ ಕರ್ವೆ ತಾವೇ ಮಾತಿಗಾರಂಭಿಸಿದರು.

"ಸುರೇಶದಲ್ವಾಲಿ ನನ್ನ ಆತ್ಮೀಯ ಗೆಳೆಯ. ಅವನಿಂದು ಇಲ್ಲವಾದರೂ ನಮ್ಮ ನಮ್ಮ ಸ್ನೇಹ ಬಾಂಧವ್ಯ ಇನಿತೂ ಕುಂದಲಿಲ್ಲ. ಏನೇ ಬರಲಿ, ಅದು ಮುಂದೆ ಕುಂದುವುದೂ ಇಲ್ಲ, ಈ ಎರಡು ಸಂಸಾರಗಳನ್ನು ಎಂದೆಂದೂ ಒಡೆಯದಂತೆ ಒಂದಾಗಿ ಕೂಡಿಸಬೇಕೆಂಬುದು ನನ್ನ ಎಲ್ಲಿಲ್ಲದ ಆಸೆ. ನೀವು ಮನಸ್ಸು ಮಾಡಿದರೆ ನಮ್ಮ ಚಿತ್ರಸೇನನನ್ನು ನಿಮಗೆ ದಾನವಾಗಿ ನೀಡುವೆ!" ದನಿಯಲ್ಲಿ ಹಾಲ್ಗಡಲೇ ಹರಿದು ಬಂತು.

ಎಲ್ಲರ ಕಣ್ಣುಗಳೂ ಕಮಲೇಶಳತ್ತ ಕೇಂದ್ರೀಕರಿಸಿ ತೀವ್ರಾಸಕ್ತಿಯಿಂದ ಪ್ರತಿಕ್ರಿಯೆಯನ್ನು ಗಮನಿಸುತಿದ್ದುವು. ಚಿತ್ರಸೇನ್ ಮೈಯೆಲ್ಲಾ ಕಿವಿಯಾಗಿ-ಆಸಕ್ತಿಯಾಗಿ ತಲೆಬಾಗಿ ಕುಳಿತ. ಅಪಾದಮಸ್ತಕವೂ ಮೈ ಜುಮು ಜುಮು ಗುಟ್ಟಿತು. ತನುಮನಗಳು ಉತ್ತರವನ್ನು ಅತ್ಯಂತ ಆಸಕ್ತಿಯಿಂದ ನಿರೀಕ್ಷಿಸಿದುವು. ಎದೆಯ ಹಕ್ಕಿ ನೂರು ದೇವರುಗಳನ್ನು ನೆನೆಯಿತು.

ಕಮಲೇಶ್ ಸಣ್ಣ ಹುಡುಗಿಯರಂತೆ ಲಜ್ಜೆಗೆ ಶರಣಾಗಿ ಕೆಂಪು ತಳೆದಳು. ದಿಟ್ಟಿ ಕೈಯ್ಯಲ್ಲಿನ ಚಹದ ಬಸಿಯಲ್ಲಿ ಕೇಂದ್ರೀಕರಿಸಿತು. ಚಿದಾಕಾಶದಲ್ಲಿ ಮೆಲ್ಲ ಮೆಲ್ಲನೆ ಕತ್ತಲಾವರಿಸುತ್ತಿದೆ. ಯೋಚನೆಯ ಸಿರಿಯಲ್ಲಿ ಬುದ್ಧಿಯು ಮಂದವಾಯಿತೋ....ಏನೋ....ಭಯ ಉದ್ವೇಗ ಸಂಕೋಚಗಳ ಹಣಾಹಣಿಯಲ್ಲಿ ಯೋಚಿಸುವಷ್ಟು ಸಮಯವಾಗಲೀ ಸಹನೆಯಾಗಲೀ ಉಳಿಯಲಿಲ್ಲ

ವೆಂದರೂ ವಿಶೇಷವಲ್ಲ. ಪ್ರಯತ್ನಪೂರ್ವಕವಾಗಿ ಮಾತಾಡಲು ಪ್ರಯತ್ನಿಸಿದರೂ ಯಾರೋ ಬಾಯಿ ಮುಚ್ಚಿ ಹಿಡಿದಂತಾಗಿದೆ....ನಿನ್ನ ಧ್ಯೇಯೋದ್ದೇಶಗಳನ್ನು ಬಲಿಗೊಡಬೇಡ ಎಂದು ಯಾರೋ ಕೂಗಿ ಹೇಳುತಿದ್ದಾರೆ....ಕಮಲೇಶ್ ಕೊನೆಗೂ ಬಾಯ್ತೆರೆದಳು.

"ನಾನೊಂದು ಉದ್ದೇಶಕ್ಕೆ ಕಟ್ಟು ಬಿದ್ದಿದ್ದೇನೆ ಮಾಮಾ. ಅದರ ಹೊರತು ನನ್ನ ಬದುಕು ಸಾಧ್ಯವಿಲ್ಲ. ಅದು ಬಹುಶಃ ನಿಮಗೂ ಗೊತ್ತು."

"ಗೊತ್ತು ಮಗೂ. ನಿನ್ನ ಧ್ಯೇಯ ಜನಸೇವೆ. ಸಂಸಾರಿಯಾದರೆ ಅದಕ್ಕೆಲ್ಲಿ ತೊಡಕು ಬರುತ್ತೋ ಎಂದು ಭಯ ಅಲ್ಲವೇ? ಅದಕ್ಕೆನಿತೂ ಕುಂದು ಬಾರದಂತೆ ನೋಡಿಕೊಳ್ಳುವ ಭಾರ ನನ್ನದು." ದನಿ ಎದೆಯಾಳದಿಂದ ಹರಿದು ಬಂತು. ಕಣ್ಣುಗಳಲ್ಲಿ ಸಾತ್ವಿಕತೆಯ ಬೆಳಕು ಫಳಫಳ ಮಿಂಚಿತು. ಸಂತಸವೇ ಮೈವೆತ್ತು ಬಂದಂತೆ ಮಂದಸ್ಮಿತ ವದನಾರವಿಂದರಾಗಿ ಅವಳನ್ನೇ ನಿಟ್ಟಿಸಿದರು.

"ನಿಮ್ಮ ಆಶ್ವಾಸನೆಗಾಗಿ ತುಂಬ ವಂದನೆಗಳು ಮಾಮಾ." ಎಂದ ಕಮಲೇಶ್ ಒಂದು ಘಳಿಗೆ ತಡೆದು ಮುಂದುವರಿದಳು – "ಮನುಷ್ಯನ ಮನಸ್ಸು ಎಂದೂ ಒಂದೇ ತೆರನಾಗಿರುವುದಿಲ್ಲ. ನಿಮ್ಮ ಐಶ್ವರ್ಯಕ್ಕೆ ಮರುಳಾಗಿ ನನ್ನ ಧ್ಯೇಯ ಗಾಳಿಯಲ್ಲಿ ತೇಲಿ ಹೋದರೂ ಹೋಗಬಹುದು. ಆದ್ದರಿಂದ ಐಶ್ವರ್ಯಕ್ಕೆ ತಲೆಬಾಗುವ ಮುನ್ನ ಧ್ಯೇಯವನ್ನು ಸಾಧಿಸಲು ನನಗೆ ದಯಮಾಡಿ ಅವಕಾಶ ನೀಡಿರಿ."

ಬಾಗಿದ ತಲೆಯೆತ್ತದೆ ಅವಳಾಡುತಿದ್ದ ಮಾತಿನ ಸರಣಿ ಮೃದು ಮಧುರವಾಗಿ ಹರಿದಿದ್ದರೂ ಕಾರ್ಗಾಲದ ಕಾರ್ಮಳೆಯಂತೆ ಕಿವಿಯ ಮೇಲೆ ಬೀಳುತಿತ್ತು; ಚಿತ್ರಸೇನ ಒಂದುಗೇಣು ಕುಗ್ಗಿ ಕೇಳುತಿದ್ದ. ಹೃದಯಬನಕ್ಕೆ ಯಾರೊ ಕಿಚ್ಚು ಹಚ್ಚಿದಂತಾಯಿತು. ಆತ್ಮಾರಾಂ ಕರ್ವೆ ಹೇಳಿದರು "ನಿನಗೆ ಸಾಕಾದಷ್ಟು ಕಾಲಾವಕಾಶ ನೀಡಲೂ ನಾವು ಸಿದ್ಧ."

"ನನ್ನಿಂದ ಯಾರಿಗೂ ತೊಂದರೆಯಾಗಬಾರದು ಮಾಮಾ. ನೀವು ಹೊರಗಡೆಯಿಂದ ಸೊಸೆಯನ್ನು ತಂದುಕೊಂಡರೆ ನಾನು ಹೃತ್ಪೂರ್ವಕವಾಗಿ ಶುಭ ಕೋರುವೆ." ಎನ್ನುತ್ತಾ ಎರಡೂ ಕೈಗಳನ್ನು ಜೋಡಿಸಿದಳು ಕಮಲೇಶ್.

"ಒಮ್ಮೆಲೇ ಹಾಗೆನ್ನುವುದಕ್ಕಿಂತ ಸಾವಕಾಶವಾಗಿ ಹೇಳುವುದು ಮೇಲು." ಎಂದರು ಕರ್ವೆ ಸೌಜನ್ಯಮೂರ್ತಿಯಾಗಿ "ಯೋಚಿಸಿ ಹೇಳು

ಬಹಳಷ್ಟು ಕಾಲಾವಕಾಶವಿದೆ, ನಿಧಾನವಾಗಿ ಯೋಚಿಸಿ ನೋಡು ಮಗೂ."

ಆತ್ಮಾರಾಂ ಕರ್ವೆ ಹೊರಡಲು ಎದ್ದು ನಿಂತೊಡನೆ ಉಳಿದವರೂ ಎದ್ದು ನಿಂತರು. ಯಾರ ಮುಖದಲ್ಲೂ ಪ್ರಸನ್ನತೆಯುಳಿದಿರಲಿಲ್ಲ. ಕಮಲೇಶಳ ಮುಖ ಮಂಡಲವೂ ಸಹ ಖಿನ್ನವಾಗಿದೆ. ಸ್ವರ್ಣಮಾಲಿನಿ ವ್ಯಾಪ್ತಿಗೆ ಮೀರಿ ಮಿಡಿಯುತಿದ್ದ ಹೃದಯವನ್ನು ಎರಡೂ ಕೈಗಳಿಂದ ಅದುಮಿ ಹಿಡಿದುಕೊಂಡಿದ್ದಳು. ತನ್ನ ಮಗಳು ಇಷ್ಟೊಂದು ನಿರ್ದಯಳಾದಾಳೆಂದು ಆವಳಿಗೆಂದೂ ಅನಿಸಿರಲಿಲ್ಲ. ತನ್ನ ಹೀನ ಅದೃಷ್ಟಕ್ಕೆ ಮನಸ್ಸು ಮೌನವಾಗಿ ರೋದಿಸಿತು. ಎರಡು ಮನೆತನಗಳ ಹಿರಿಯ ಉದ್ದೇಶವನ್ನೂ, ಜೀವನದ ಪರಮ ಲಕ್ಷ್ಯವನ್ನೂ, ಎರಡೂ ಮನೆತನದ ಹಿರಿಯರ ಮುಂದೆಯೇ ತಳ್ಳಿಹಾಕಿದ ಉದ್ದೇಶವು ಅರ್ಥವಾಗದೆ ಸ್ತಂಭೀಭೂತಳಾಗಿ ನಿಂತು ಬಿಟ್ಟಳು. ಮುಖ ಪ್ರಸನ್ನತೆಯಳಿದು ಒಮ್ಮೆಲೆ ಕಳಾಹೀನವಾಯಿತು. ಹುಬ್ಬೆತ್ತಿ ಆತ್ಮಾರಾಂ ಕರ್ವೆಯನ್ನಾಗಲಿ ಚಿತ್ರಸೇನನನ್ನಾಗಲಿ ನೋಡುವ ಧೈರ್ಯವಾಗಲಿಲ್ಲ. ಭಾರವಾದ ದೇಹವನ್ನು ಹೊರಲಾರದೆ ಹೊತ್ತ ಕಾಲುಗಳು ಬಳುಕಿದುವು.

ಚಿತ್ರಸೇನ ಅಂದೇ ಬೆಂಗಳೂರಿಗೆ ಬಂದವನು....ಅವನು ಬರುವುದನ್ನೇ ಎದುರು ನೋಡುತಿದ್ದ ತಂದೆತಾಯಿಯರು ಅವನ ಸ್ನಾನಾನಂತರ ಚಹಪಾನಾದಿಗಳನ್ನು ಮುಗಿಸಿ ಮಗನೊಡನೆ ಕಮಲೇಶಳ ಮನೆಯ ಹಾದಿ ಹಿಡಿದಿದ್ದರು. ಶುಕ್ರವಾರ ಈ ಹೊತ್ತಿನಲ್ಲಿ ಅವಳು ಮನೆಯಲ್ಲಿರುತ್ತಾಳೆಂಬುದು ಖಚಿತ. ಭಾಗ್ಯವಾರ ಭಾಗ್ಯತರುತ್ತದೆಂಬ ನಂಬಿಕೆಯೂ ಸಹ....ಬಹಳ ಉತ್ಸಾಹದಿಂದ ಬಂದವರಿಗೆ ತಣ್ಣೀರು ಎರಚಿದಂತಾಯಿತು.

ಒಂಭತ್ತು ವರ್ಷಗಳ ಹಿಂದೆ ನೋಡಿದ ಹೆಣ್ಣು....ಈಗ ಬೆಳೆದ ರೀತಿ, ತಳೆದ ರೂಪು, ಕಲಿತವಿದ್ಯೆ ಒಂದೊಂದೂ ಮಹತ್ತಾಗಿ ತೋರಿದುವು. ಹೃದಯವನ್ನು ಗಾಣಕ್ಕೆ ಕೊಟ್ಟಂತಿತ್ತು, ಅಸಹಾಯಕ ಸ್ಥಿತಿಯಲ್ಲಿರುವ ಜನಸಾಮಾನ್ಯರಂತೆ ಮೂಕ ವೇದನೆಯಿಂದ ಸ್ತಬ್ಧನಾದ ಚಿತ್ರಸೇನ್. ಕಮಲೇಶಳ ಕಡೆ ನೋಡುವ ಧೈರ್ಯ ಮೂಡದಿದ್ದರೂ ಕಣ್ಣು ವಂಚಿಸಿತು. ಅದೇ ಸಮಯಕ್ಕೆ ಅವಳ ನೋಟವೂ ಅತ್ತ ಆಕಸ್ಮಿಕವಾಗಿ ಹರಿದು ಇಬ್ಬರ ಮುಖದಲ್ಲೂ ನೀರಸ ನಗೆ ಹೊರಹೊಮ್ಮಿತು. ಮರುಕ್ಷಣದಲ್ಲಿ ನೋಟಗಳು ಬೇರೆಡೆಗೆ ಸಿಡಿದುವು.

ಕಮಲೇಶ್ ಗೌರವಪೂರ್ವಕವಾಗಿ ಕರಗಳನ್ನು ಜೋಡಿಸಿ ಅತಿಥಿಗಳನ್ನು ತಾನೇ ಬೀಳ್ಕೊಟ್ಟಳು. ಹೃದಯವನ್ನು ಹಿಂದೆಯೇ ಬಿಟ್ಟು ಹೋದಂತೆ ಚಿತ್ರ ಸೇನ ಹೋಗಲಾರದೆ ಹೋದಾಗ ಕಮಲೇಶ್ ಕಿಟಕಿಯಲ್ಲಿ ದಿಟ್ಟೆಯನ್ನಟ್ಟ ಮರವಟ್ಟಂತೆ ನಿಂತಳು. ತನ್ನ ನಿರ್ಧಾರ ಸರಿಯೆ ತಪ್ಪೆ ಎಂಬುದನ್ನು ಮೆಲುಕು ಹಾಕುತಿತ್ತು ಮನಸ್ಸು....ಜೀವನ ವಿಕಾಸಕ್ಕಾಗಿ ವಿವಾಹ ತಪ್ಪುವಂತಿಲ್ಲ.... ತಾಯಿಯ ನಿರ್ಣಯ ಆತ್ಮಾನುಭೂತಿಯಿಂದ ಹಿತವಾದರೂ ಈ ಪ್ರೀತಿ ವ್ಯಾಮೋಹಗಳ ಮಹತ್ತಿಗಿಂತ ಕರ್ತವ್ಯ ಉನ್ನತವಾದುದು. ನಾನು ನಿಜವಾ ಗಿಯೂ ತಪ್ಪು ಹೆಜ್ಜೆಯಿಟ್ಟಿಲ್ಲ ಎಂದುಕೊಂಡಳು ಕಮಲೇಶ್. ನಿಧಾನವಾಗಿ ಶಾಂತಿಯುತವಾಗಿ ಮಿಡಿಯುತ್ತಿರುವ ಹೃದಯದ ಮಿಡಿತವನ್ನು ಅತ್ಯಂತ ಜಾಗರೂಕತೆಯಿಂದ ಗಮನಿಸಿದರೂ ಸಹ, ಅವೇ ದೃಢವಾದ ಮಾತುಗಳು ಕೇಳಿ ಬರುತ್ತಿವೆ.

ಅವರನ್ನು ರಸ್ತೆಯಂಚಿನವರೆಗೂ ಬೀಳ್ಕೊಟ್ಟು ಹಿಂದಿರುಗಿದ ಸ್ವರ್ಣ ಮಾಲಿನಿಯ ಮುಖ ಖಿನ್ನವಾಗಿತ್ತು. ಅತ್ಯಂತ ಉದ್ವೇಗದಿಂದ ಅವಳೆಂದಳು "ಏನು ಮಾಡಿಬಿಟ್ಟೆ ಕಮಲೇಶ್ ?"

"ಧನಕನಕ ಭಾಗ್ಯಾದಿಗಳು ಮುಖ್ಯವಲ್ಲಮ್ಮಾ."

"ಅದು ಮಾತ್ರವೇನು ? ಬೇರೇನೂ ಇಲ್ಲವೆ ?"

"ಇದೆ....ಎಲ್ಲವೂ ಇವೆ....ಆದರೂ ನನ್ನ ಉದ್ದೇಶ ಬೇರೆ."

ಹೃದಯ ಮೌನವಾಗಿ ದುಃಖಿಸುತ್ತಿದೆ. ಅಡ್ಡಗಟ್ಟೆ ಹಾಕಿ ತಡೆಹಿಡಿದ ಕಂಬನಿಗಳು ಹೃದಯದ ಗಾಯವನ್ನು ಪ್ರಕ್ಷಾಲನೆ ಮಾಡಿವೆ. ಸ್ವಲ್ಪಹೊತ್ತು ಯೋಚನಾರಹಿತಳಾಗಿ ನಿಂತು ಬಿಟ್ಟಳು ಸ್ವರ್ಣಮಾಲಿನಿ....ತನ್ನೆದುರಿಗೆ ಮೂರ್ತಿಮತ್ತಾಗಿ ನಿಂತ ತಾಯಿಗೆ ಹೇಗೆ ಸಮಾಧಾನ ಹೇಳಬೇಕೋ ಹೊಳೆ ಯಲಿಲ್ಲ. ರಾಗಜ್ಯೋತಿ, ಭಾವಜ್ವಾಲೆಗೆ ಸಿಕ್ಕಿ ನಸುಕಂಪಿಸಿತು....ಚಿತ್ರಸೇನ ತನಗೇನೂ ಅಲ್ಲ....ಆದರೂ ಆತನೇ ಸರ್ವಸ್ವ ಎನ್ನುವುದು ಕೇವಲ ಭ್ರಮೆ. ತನ್ನ ಸಹಚರನ ಮಾರ್ಗ ಬೇರೆಯಾಗಿರುವುದಾದರೆ ಜೀವನಾರಣ್ಯದ ಮಾರ್ಗ ಯೋಗ ನಿಜವಾಗಿಯೂ ದುರ್ಗಮ. ಒಂದು ವೇಳೆ ಚಿತ್ರಸೇನ ಡಾಕ್ಟರಾಗಿ ದ್ದಿದ್ದಲ್ಲಿ ನನ್ನದೇನೂ ಅಡ್ಡಿಯಿರಲಿಲ್ಲ ಎಂದು ಕಣ್ಣುಗಳ ಮಿಂಚಿನ ಭಾವ ಕೂಗಿ ಹೇಳಿತು.

ಆದರೆ....

ಮಾತೆಯ ಮಮತೆಯ ಅಂತರಾಳಕ್ಕಿಳಿದ ಕಮಲೇಶಳ ಕಣ್ಣುಗಳಲ್ಲಿ ಹನಿಗಳು ಮೊಳೆತುವು. ಆದರೂ ತನ್ನ ಸಹಚರನನ್ನು ಮಾ ಆರಿಸುವುದು ಸಾಧ್ಯವಿಲ್ಲ; ತಾನೊಪ್ಪುವುದೂ ಸಹ ಸರಿಯಲ್ಲ. ಒಡನೆ ಚಂದ್ರಕಾಂತ್ ಮನದಲೆಯಲ್ಲಿ ಮೂಡಿನಿಂತ. ಚಿತ್ರಸೇನನಿಗೂ ಅವನಿಗೂ ಅರ್ಥಾತ್ ಸಂಬಂಧವಿಲ್ಲದಿದ್ದರೂ ಅವನು ಡಾಕ್ಟರು....ಎಂದೆಂದಿಗೂ ನಾವು ಒಂದಾಗಿ ದುಡಿಯಬಹುದು. ಇನ್ನೇನು ಬೇಕು?

ಕಮಲೇಶ್ ಒಂದೇ ನಿರ್ಧಾರದಿಂದ ನುಡಿದಳು "ನಾನು ಮದುವೆಯಾದರೆ ಡಾಕ್ಟರನ್ನು ಮದುವೆಯಾಗುವೆ ಮಾ."

ಆಶಾಲಹರಿಗೆ ಅಡ್ಡಗಟ್ಟೆ ಹಾಕಿದ ಮಗಳ ಬಗೆಗೆ ಏನೆನ್ನಬೇಕೋ ಹೊಳೆಯದಿದ್ದರೂ ತನ್ನ ಅದೃಷ್ಟಹೀನತೆಗಾಗಿ ಮರ್ಮರ ಮರುಗಿದಳು ಸ್ವರ್ಣ ಮಾಲಿನಿ. ಆತ್ಮಾರಾಂ ದಂಪತಿಗಳ ಸೌಜನ್ಯವನ್ನೂ ತಾಯಿ ತಂದೆಗಳ ಪ್ರತಿನಿಧಿಯಾದ ಚಿತ್ರಸೇನನನ್ನೂ ಪುನಃ ಪುನಃ ನೆನೆದು ಕೈಗೆ ಬಂದ ತುತ್ತು ಬಾಯಿಗೆ ಬಾರದುದಕ್ಕಾಗಿ ಸಾಸಿರಬಾರಿ ತನ್ನನ್ನು ತಾನು ಹಳಿದುಕೊಂಡಳು. ಕಂಡ ಕಂಡ ದೇವರಿಗೆಲ್ಲಾ ಮೊರೆಯಿಟ್ಟಿತು ಮನಸ್ಸು. ಕಣ್ಣುಗಳಂಚಿನಲ್ಲಿ ಫಳ ಫಳನೆ ನೀರಾಡಿತು–ಪಾಚಿ ತುಂಬಿದ ಪುಷ್ಕರಿಣಿಯಲ್ಲಿ ಮುನ್ನೀರು ಹೊಳೆಯುವಂತೆ.

ದಿಗಂತ ವ್ಯಾಪಿಯಾದ ಹೊಂಬಿಸಿಲಿನ ಹೊನ್ಮಳೆಯಲ್ಲಿ ಮಿಂದು ನಿಂತ ಅವಳ ಕುಡಿ ನೋಟ ಈಟಿಯಂತೆ ಎರಗಿದಾಗ ಮುಖಮುದ್ರೆ ಅತ್ಯಂತ ಗಡುಸಾಗಿತ್ತು. ಹಿಂದೆಂದೂ ಕಾಣದ ಆ ನಿಷ್ಠುರತೆಯಿಂದ್ಬಲರಾಂ ಗಂಭೀರನಾದರೂ ಅದು ತನ್ನ ಪ್ರೇಮ ಪತ್ರದ ಫಲ ಎಂಬುದನ್ನು ಅರಿಯಲಾರದಷ್ಟು ಮೂರ್ಖನಾಗಿರಲಿಲ್ಲ. ಅಂತರಂಗ ಕ್ಷೋಭೆಯಿಂದ ಬಳಲಿತು. ತನ್ನನ್ನು ತಾನು ಹಳಿದುಕೊಂಡು ತಪ್ಪುಮಾಡಿಬಿಟ್ಟೆ. ಮೆಲ್ಲಮೆಲ್ಲನೆ ಒಟ್ಟಿಗೆ ಜೀವಿಸಬಹುದಾಗಿತ್ತು. ಎಂದು ಕೈ ಕೈ ಹಿಸುಕಿಕೊಂಡ. ನೀನು ಇಷ್ಟೊಂದು ನಿರ್ದಯಳೆಂದು ತಿಳಿದಿರಲಿಲ್ಲ ...ಎಂದೊರಲಿತು ಹೃದಯ ಬನದ ಪಕ್ಷಿ....ಒಂದು ವಿಧವಾದ

ಗ್ಲಾನಿ....ಇನ್ನೊಂದು ವಿಧವಾದ ಕ್ಷೋಭೆ....ಮತ್ತೊಂದು ವಿಧವಾದ ಆಗ್ರಹ.... ಮಗದೊಂದು ವಿಧವಾದ ಏಕಾಂತ ದುಃಖ....ಅಸಹನೀಯ ಸ್ಥಿರ ಗಂಭೀರ ಕಾತರ ಭಾವ....ಮೃದಂಗ ಘೋಷದಂತೆ ಮತ್ತೆ ಮತ್ತೆ ಕೇಳಿಬರುವ ಆ ಆಸೆಯ ಪ್ರತಿಧ್ವನಿ....ಮಂದ ಮಂದ ಪವನದ ವಿಶ್ಲೇಷಣೆಯಲ್ಲಿ ಸ್ಥಿರವಾದರೂ ಮತ್ತೆ ಚಂಚಲವಾಗುವ ಮನಸ್ಸು....

ಎಷ್ಟೇ ಪ್ರಯತ್ನ ಪಟ್ಟರೂ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲಾಗದೆ ಬಲರಾಂ ಒಂದುವಾರ ರಜೆ ಬರೆದುಹಾಕಿ ಆಸ್ಪತ್ರೆಯಿಂದ ನಿರ್ಗಮಿಸಿದ, ಸೋಲೊಪ್ಪಿದ ಯೋಧನಂತೆ.

ಡಾ|| ಬಲರಾಂ ರಜೆ ಹೋದಾಗಿನಿಂದ ಡಾ|| ಚಂದ್ರಕಾಂತನ ಚಟುವಟಿಕೆ ಮೇಲಾಯಿತು. ಅಂದಿನ ಮೊದಲ ಹಂತದ ಆಪರೇಶನ್ ಮುಗಿದಾಗ ಹೊತ್ತು ಹನ್ನೊಂದರ ಸಮಯ. ಬೆಳಗಿನಿಂದ ಒಂದೇ ಸಮನೆ ನಿಂತು ನಿಂತು ಕಾಲುಗಳು ಜೋಮು ಹಿಡಿದಂತಾಗಿವೆ. ಒಂದು ಘಳಿಗೆ ಕುಳಿತು ಕಾಲುಗಳಿಗೆ ವಿಶ್ರಾಂತಿ ನೀಡುವ ತರಾತುರಿಯಲ್ಲಿ ಒಳಕೊಠಡಿಗೆ ಹೋದಳು ಕಮಲೇಶ್. ಶೌಚದ ಗೃಹಕ್ಕೆ ಹೋಗಿ ಕೈ ತೊಳೆದು ಬರುವಷ್ಟರಲ್ಲಿ ಚಂದ್ರಕಾಂತ್ ತಾನು ತಂದಿದ್ದ ಟಿಫಿನ್ ಕ್ಯಾರಿಯರನ್ನು ಬಿಚ್ಚಿದ್ದ. ಪ್ಲಾಸ್ಕಿನಲ್ಲಿ ಬಿಸಿ ಬಿಸಿ ಹಾಲು ಇತ್ತು. ಬಗೆ ಬಗೆಯ ತಿಂಡಿಗಳನ್ನು ಮುಂದಿಟ್ಟು—"ಇಂದು ನನ್ನ ಹುಟ್ಟು ಹಬ್ಬ ಡಾಕ್ಟರ್!" ಎಂದ ಸಂತಸಪೂರ್ಣವಾಗಿ.

"ಓ....ತುಂಬ ಶುಭಾಶಯಗಳು!"

"ಹಸ್ತಲಾಘವ ನೀಡದೆ ಶುಭಾಶಯ ಹೇಳುವುದೇ ?"

"ಇದು ಪಾಶ್ಚಾತ್ಯ ಭೂಮಿಯಲ್ಲ." ದಿಟ್ಟಿಯನ್ನು ನೆಲದ ಮೇಲೆ ಹರಿಸಿ ನುಡಿದಳು ಕಮಲೇಶ್.

"ನಾವು ಆಗಲೇ ತೊಂಭತ್ತೊಂಬತ್ತು ಭಾಗ ಪಾಶ್ಚಾತ್ಯ ಸಂಪ್ರದಾಯವನ್ನು ಜೀರ್ಣಿಸಿಕೊಂಡಿದ್ದೇವೆ......."

"ಇರಲಿ, ಉಳಿದ ಒಂದು ಭಾಗವಾದರೂ ನಾವು ಅಪ್ಪಟ ಭಾರತೀಯರಾಗಿರೋಣ." ಚಂದ್ರಕಾಂತ ಏನನ್ನೋ ಹೇಳಲು ತೊದಲಿ ಸುಮ್ಮನಾದ. ಆ ನಾರೀಮೂರ್ತಿಯ ಉಜ್ವಲ ಜ್ಯೋತಿಯ ಮುಂದೆ ನಿಶ್ಚೇತನನಂತೆ ಮಂತ್ರಮುಗ್ಧನೂ ಆನಂದ ಗದ್ಗದನೂ ಆಗಿ ನೆಟ್ಟ ದಿಟ್ಟಿಯಿಂದ ನೋಡುತ್ತಾ ನಿಂತು

ಬಿಟ್ಟ. ತಾನು ಹೇಳಬೇಕೆಂದಿದ್ದ ನುಡಿಯೂ ಸಹ ಮರೆತು ಹೋಯಿತು.... ಕಮಲೇಶ್ ತನ್ನ ಬ್ಯಾಗಿಗೆ ಕೈಹಾಕುತ್ತಲೂ "ಇಲ್ಲೇ ಯಥೇಷ್ಟವಾಗಿದೆ ಬನ್ನಿ." ಎಂದ ಆ ಕ್ಷಣ ಎಚ್ಚೆತ್ತುಕೊಳ್ಳುತ್ತ.

"ನಾನು ತಂದಿರುವೆ. ಅದೇಕೆ ಹಾಳಾಗಬೇಕು ?"

"ಇರಲಿ ಬಿಡಿ. ಇದು ನನ್ನ ಹುಟ್ಟು ಹಬ್ಬದ ಸಲುವಾಗಿ...."

ಕಮಲೇಶ್ ಒಂದು ಕ್ಷಣ ಯೋಚಿಸಿ, ಕಲಿಕೆಯ ಎಳಸು ಡಾಕ್ಟರುಗಳನ್ನು ಆಹ್ವಾನಿಸಿದಳು. ಕಾಮಿನಿ, ಕಾಂಚನಾ, ಚಂದ್ರಬಾಬುಗಳು ಒಳಬರುತ್ತಲೂ ಅವರ ಮುಂದೆ ತನ್ನ ಥರ್ಮಾಪ್ಲಾಸ್ಕನ್ನು ಇಟ್ಟು ಬೀರುವಿನಲ್ಲಿದ್ದ ಲೋಟಗಳಿಗೆ ಕೈ ಹಾಕಿದಳು. ಚಂದ್ರಕಾಂತನಿಗೆ ಇನ್ನು ಸುಮ್ಮನಿರಲಾಗಲಿಲ್ಲ. ತನ್ನ ಸಿಹಿ ಖಾರಗಳನ್ನು ಮುಂದಿಟ್ಟ. ಕಿರಿಯರಿಗೆ ಕಾರಣ ಹೊಳೆದು.... ಎಲ್ಲರೂ ಅನುನಯದಿಂದ ಶುಭಾಶಯಗಳನ್ನು ಅರ್ಪಿಸಿದರು. ಚಂದ್ರಕಾಂತನ ಮುಖ ಆನಂದೋತ್ಸಾಹದಿಂದರಳಿತು. ಕಮಲೇಶಳ ಕಡೆ ನೋಟ ಹೊರಳಿಸಿ ಅಕಾರಣವಾಗಿ ಮುಗುಳು ನಗೆ ಬೀರಿದ. ಅವನ ರೀತಿಯಲ್ಲಿ ಸಣ್ಣತನ ತೋರಿದರೂ ಸಹಿಸಿಕೊಂಡಳು. ಅದೇ ಕ್ಷಣದಲ್ಲಿ ಅಕ್ಷಿಪಟಲದ ಮೇಲೆ ಚಿತ್ರಸೇನನ ಅಕಳಂಕ ಮೂರ್ತಿ ಸಮ್ಮೋಹನಾಕಾರವಾಗಿ ಸುಳಿಸುಳಿದಳಿಯಿತು....ಆದರೆ ಒಂದು ದುರ್ಮುಹೂರ್ತದಲ್ಲಿ ಅವನಿಗೆ ಆಗುವುದಿಲ್ಲವೆಂದು ಹೇಳಿಯಾಗಿದೆ. ನನ್ನ ರೀತಿ ನೀತಿ ಸರಿಯೋ ತಪ್ಪೋ ಆ ಸರ್ವಾಂತರ್ಯಾಮಿಗೇ ಅರ್ಪಿತ....

ಮನದ ತುಯ್ದಾಟದಲ್ಲಿ ಯೋಚನಾಮಗ್ನಳಾಗಿ.... ಎಡಗೈಯನ್ನು ಮೇಜಿನ ಮೇಲೆ ಊರಿ, ನುಣುಪುಗಲ್ಲಕ್ಕೆ ಹಸ್ತದಾಶ್ರಯ ನೀಡಿ, ಕುಳಿತ ಅವಳನ್ನು ತ್ರಿಲೋಕದ ಪುಣ್ಯರಾಶಿಯೋ ಎಂಬಂತೆ ನೋಡುತ್ತ ತನ್ನ ಸೌಗಂಧ ಯುಕ್ತ ಕರವಸ್ತ್ರವನ್ನು ಅವಳ ಮುಂದಿಟ್ಟು-"ಮೇಜಿನಲ್ಲಿರುವ ಕ್ರಿಮಿಗಳು ಅಂಟಿಯಾವು! ಇದರ ಮೇಲೆ ಕೈಯೂರಿಕೊಂಡರೆ ಒಳ್ಳೆಯದು!" ಎಂದ ಚಂದ್ರಕಾಂತ್. ಅಪೂರ್ವ ಶಾಂತಿಯುಕ್ತ ಕಾಂತಿಯಿಂದ ಶೋಭಾಯಮಾನವಾದ ನಯನದ್ವಯಗಳನ್ನು ಆತನೆಡೆಗೆ ಹೊರಳಿಸಿ "ನೋ ಥ್ಯಾಂಕ್ಸ್!" ಎಂದು ಮಧುರವಾದ ದನಿಯಲ್ಲಿ ತಳ್ಳಿಹಾಕಿದಳು ಕಮಲೇಶ್.

ಮರುದಿನ ಚಂದ್ರಕಾಂತ್ ಪ್ರಾಸಂಗಿಕವಾಗಿ ತನ್ನ ಹೃದಯ ಸಂಪುಟ ವನ್ನು ತೆರೆದು ಮುಂದಿಟ್ಟು ಪ್ರೇಮಭಿಕ್ಷೆಯನ್ನು ಬೇಡಿದಾಗ ಗಾಢವಾದ ಚಿಂತೆ ಚಿದಾಕಾಶವನ್ನು ಮುಸುಗಿತು....ಎದೆಯೊಳಗೆ ತುಮುಲ ಯುದ್ಧ ಒಂದೇ ಸಮನೆ ನಡೆಯುತಿದ್ದಂತೆ ಹನಿಗಣ್ಣಾದ ತಾಯಿ....ಸ್ನೇಹ ಸಂಜೀವಿನಿ ಹೇಮ ರತಿ....ಪಿತೃ ಸ್ವರೂಪನಾದ ಆತ್ಮಾರಾಂಕರ್ವೆ....ಅನುರೂಪನಾದ ಚಿತ್ರಸೇನ ಸ್ಮರಣೆಯ ಹಾದಿಯಲ್ಲಿ ಸಾಗಿ ಹೋದರು. ಹಿಂದೆಯೇ ರಾಣೀ ಭವತಾರಿಣೀ ಆಸ್ಪತ್ರೆ, ಅದರಲ್ಲಿ ನರಳುವ ರೋಗಿಗಳು, ಅವರಿಗೆ ಮನ ಮುಟ್ಟಿ ಸಲ್ಲಿಸಬೇ ಕಾದ ಸೇವೆ, ಅನವರತ ಸಹಿಸಬೇಕಾದ ಶ್ರಮ....ತನ್ನ ಅಂತರಂಗಕ್ಕೆ ಸಂಬಂಧಿ ಸಿದ ಆ ಅದ್ಭುತವಾದ ವ್ಯವಹಾರವನ್ನು ಹಾಗೇ ಹುಗಿದಿಟ್ಟು ಬಹಿರಂಗವಾಗಿ "ಯೋಚಿಸಿ ಹೇಳುವೆ" ಎಂದಳು. ಅವಳಿಗರಿಯದಂತೆಯೇ ಹೃದಯಸಮುದ್ರ ದಲ್ಲಿ ಪ್ರಗಾಢವಾದ ಅಲೆಗಳೆದ್ದುವು.

ಬಾಗಿಲ ಬಳಿ ಪಾದರಕ್ಷೆಗಳ ಪಟಪಟ ಸದ್ದು ಕೇಳಿಬಂದು ಇಬ್ಬರ ನೋಟವೂ ಅತ್ತ ಹೊರಳಿತು. ಡಾ|| ಸುಧಾರಾಣಿ ಬಾಗಿಲಲ್ಲಿ ಹಣಿಕಿದಳು. ಅವಳ ಕಣ್ಣುಗಳು ಸುತ್ತಮುತ್ತ ಹೊರಳಿದುದನ್ನು ನೋಡಿ "ಡಾ|| ಬಲರಾಂ ರಜೆಯಲ್ಲಿದ್ದಾರೆ!" ಎಂದಳು ಕಮಲೇಶ್. ಏರಿ ಇಳಿದ ಹುಬ್ಬುಗಳಾಶ್ರಯದಲ್ಲಿ ಕಣ್ಣುಗಳು ವಿಸ್ಫಾರಿತವಾದುವು.

"ಎ....ತುಂಟಿ! ನಾನು ಬಂದದ್ದು ನಿನಗಾಗಿ!"

ಎಳೆ ನಗುವಿನಲೆ ತುಂಬಿ ಹರಿಯಿತು.

"ಇಂದು ಸಕ್ಕೂ ಆಪರೇಷನ್."

"ಓ........" ಎನ್ನುತ್ತ ಎದ್ದಳು ಕಮಲೇಶ್.

ಗೆಳತಿಯರಿಬ್ಬರೂ ಕೂಡಿ ಮೇಲ್ಗಡೆಯ ಆಪರೇಶನ್ ಥಿಯೇಟರಿಗೆ ಹೊರಟರು.

"ಈಚೀಚೆಗೆ ಅವಳು ರಾತ್ರಿಹೊತ್ತು ಹೆದರಿ ಕೂಗಿಕೊಳ್ಳುತಿದ್ದಳಂತೆ. ಅಸ್ತಮಾದಿಂದ ನರಳುವ ತಾಯಿಗೆ ಮಗಳನ್ನು ನೋಡಿಕೊಳ್ಳಲಾಗದುದರಿಂದ ಆಪರೇಶನ್ನಿಗೆ ಒಪ್ಪಿಕೊಂಡಿದ್ದಾರೆ. ಇಲ್ಲದಿದ್ದಲ್ಲಿ ಸಕ್ಕೂ ಹಾಗೇ ಉಳಿಯಬೇ ಕಾಗಿತ್ತು."

ವ್ಯಥಿತಳಾಗಿ ನುಡಿದಳು ಕಮಲೇಶ್ "ನೋಡು ಸುಧಾ ಕಲಿತವರು–

ಆಳವಾಗಿ ಯೋಚಿಸ ಬಲ್ಲವರು ಆ ಹುಡುಗಿಯನ್ನು ಮನೆಯಲ್ಲೇ ಇಟ್ಟು ಕೊಂಡು ಅವಳ ಜೀವನವನ್ನು ವ್ಯರ್ಥಗೊಳಿಸಿದರು. ಆಗಲೇ ಮಾಡಿಸಿದ್ದರೆ ಈ ಐದು ವರ್ಷಗಳ ಕಾಲ ಅವಳು ವ್ಯರ್ಥ ಕಾಲಹರಣ ಮಾಡಬೇಕಾಗಿರಲಿಲ್ಲ.... ಪಾಪ, ಮುಂದಾದರೂ ಸುಖವಾದರೆ ಸಾಕು."

"ಸಾಮಾಜಿಕ ಭಯ...."

"ಕಲಿಯದವರಾದರೆ ಒಂದು ರೀತಿ. ಕಲಿತವರಲ್ಲೂ ಈ ದುಶ್ಶಂಕೆ ವ್ಯಾಪಿಸಿದರೆ...."

ಆಪರೇಶನ್ ಥಿಯೇಟರಿಗೆ ಪದಾರ್ಪಣೆ ಮಾಡುತ್ತಲೂ ಮಾತು ಅಷ್ಟಕ್ಕೆ ತುಂಡುಗಡಿಯಿತು. ನ್ಯೂರೋ ಸರ್ಜನ್‌ಗಳಾದ ಡಾ|| ಗಣೇಶ್ ನಂದಾ ಡಾ|| ಥಾಮಸ್ ಅಣಿಯಾಗಿದ್ದರು. ಸಕ್ಕೂ ತಲೆಯ 'ಟೆಂಪೋರಲ್ ಕಾರಟೆಕ್ಸ್' (TEMPORAL CORTEX) ಮೇಲೆ ಕಡಿಮೆ ಶಕ್ತಿಯುಳ್ಳ ವಿದ್ಯುತ್ ತಂತಿಯನ್ನು ತಾಗಿಸಿದರು. ಒಂದು ಭಾಗದಲ್ಲಿ ತಾಗಿದಾಕ್ಷಣ ಅವಳು ಅಂದಿನ ಘಟನೆಯನ್ನು ಗುಣಗುಣಿಸತೊಡಗಿದಳು. ಮುಖ ಭಯ ಭೀತಿಯಿಂದ ಬಿಳಿಚಿಕೊಂಡಿತು. ಡಾಕ್ಟರು ಆ ಭಾಗದಲ್ಲಿ ಅಂದಿನ ಘಟನೆಯ ನೆನಪು ಸ್ಥಾಯೀ ಸ್ವರೂಪದಲ್ಲಿದೆಯೆಂಬುದನ್ನು ಗ್ರಹಿಸಿ, ಆ ಭಾಗವನ್ನು ಕತ್ತರಿಸಿ ತೆಗೆದು ಹಾಕಿದರು. ಸ್ವಭಾವತಃ ಪೌರುಷ ಪ್ರಕೃತಿಯುವಳಾದ ಸಕ್ಕೂ ಬಾಡಿದ ಕದಳೀಸಸಿಯಂತೆ ಸಪ್ಪೆಯಾಗಿ ಮಲಗಿದ್ದುದನ್ನೀಕ್ಷಿಸುವಾಗ ಹೃದಯ ಅನು ಕಂಪದಿಂದ ಮಿಡಿಯಿತು.

ಸಕ್ಕೂ ಜೊತೆಗೆ ಹೋಗಿದ್ದ ಪದ್ಮಾಕಮಲಾನಿಯೂ ಇವರೊಂದಿಗೆ ಹೊರಬಿದ್ದಳು. ಕಾರಿಡಾರನ್ನು ದಾಟುವುದರೊಳಗಾಗಿ ಜುಬೇದಾಬೇಗಂ ಮದನಾಪುರ್ ವಿಜಯಾರವರೂ ಎದುರಾದರು. ಅಲ್ಲಿಂದ ಐವರೂ ಕೂಡಿ ಅಂಗಳಕ್ಕಿಳಿದರು. ಕಲ್ಪನೆಗೂ ಮೀರಿದ ಸುಂದರ ಉದ್ಯಾನವನದ ನಡುವೆ ಹರಿದ ಹಾದಿಯಲ್ಲಿ ಸುಮ ಸಮುಚ್ಚಯಗಳ ನಲ್ಗಂಪನ್ನು ಆಸ್ವಾದಿಸುತ್ತಾ ಐವರೂ ಹೆಜ್ಜೆ ಹಾಕಿದರು. ಎದುರುಗಡೆಯಿಂದ ಬರುತಿದ್ದ ಡಾ|| ನಿರಂಜನ್ ಡಾ|| ನಂಜನ್‌ದೇವ್ ಡಾ|| ಹುಸೇನ್‌ರವರ ಮುಖದಲ್ಲಿ ಹಸನಾದ ಮಂದ ಹಾಸ ಮೂಡಿತು.

ಪ್ರತಿಹಾಸ ತೋರಿದ ಅಂಗನೆಯರು ಅನುನಯದಿಂದ ಕರಗಳನ್ನು

ಜೋಡಿಸಿದರು "ಪ್ರಣಾಮ್ ಸರ್!"

"ಪಂಚ ತೀರ್ಥಗಳೂ ಕೂಡಿದಂತಾಗಿದೆಯಲ್ಲಾ, ಎಲ್ಲಿಗೆ ಹೊರಟಿದ್ದೀರಿ?" ಎಂದರು ನಿರಂಜನ್.

"ತ್ರಿಮೂರ್ತಿಗಳ ದರ್ಶನಕ್ಕೆ!" ಪ್ರತಿ ಚಟಾಕಿ ಹಾರಿಸಿದಳು ಕಮಲೇಶ್.

ಎಲ್ಲರ ತುಟಿಗಳಲ್ಲೂ ಮುಗುಳು ನಗೆ ಅರಳಿತು.

"ಡಾ|| ನಿರಂಜನ್ ಇಂಗ್ಲೆಂಡಿಗೆ ಹೊರಟಿದ್ದಾರೆ ಗೊತ್ತೆ?" ಕೇಳಿದರು ಡಾ|| ಹುಸೇನ್.

"ಇಲ್ಲ....ಹೊರಡುವುದೆಂದು ಸರ್?"

"ಭಾನುವಾರ."

ಐವರೂ ಶುಭ ಹಾರೈಸಿದರು "ಸುಖವಾಗಿ ಹೋಗಿ ಬನ್ನಿ ಸರ್!".

"ತುಂಬ ಥ್ಯಾಂಕ್ಸ್!"

ಡಾ|| ರಘುರಾಮರ ಮರಣಾನಂತರ ಡಾ|| ನಿರಂಜನ್ ಡೀನ್ ಪಟ್ಟ ಏರಿದ್ದರು. ಆ ವಿಷಯವನ್ನೆ ಮಾತನಾಡುತ್ತಾ ರಮಣಿಯರ ದಳ ಮುಂದುವರಿಯಿತು.

ಅಂಗಳವನ್ನು ದಾಟಿ ಮೆಟ್ಟಿಲು ಹತ್ತಿ ಹೊಸ ವಿಭಾಗದ ಎಂಟನೆಯ ಯೂನಿಟ್ ಕಡೆ ಹೆಜ್ಜೆ ತಿರುಗಿದಾಗ ಗಂಟೆ ಮೊಳಗಿತು.

ಢಣ್! ಢಣಾರ್! ಢಣ್! ಢಣಾರ್! ಢಣ್! ಢಣಾರ್!

ಘಂಟಾರವ ಮೊಳಗುತ್ತಲೂ ಎಲ್ಲಿದ್ದವರು ಅಲ್ಲೇ ನಿಂತರು. ಎಲ್ಲರ ನೋಟವೂ ಗೋಡೆಯ ಮೇಲೆ ಹರಿಯಿತು. ಕೆಂಪು ದೀಪ ಹತ್ತಿ ಎಮರ್ಜನ್ಸಿ ವಾರ್ಡನ್ನು ತೋರಿ ಮಾಯವಾಯಿತು. ಕೋಡ್ ನಂಬರ್ ಎಂಟು ಅಪಾಯದ ಸುದ್ದಿಯನ್ನು ಸಾರಿತು.

ರಾಣೀ ಭವತಾರಿಣಿಯ ತುರ್ತು ಕರೆ!

ಹೊತ್ತು ಒಂದರ ಸಮಯ. ಆಗಲೇ ಬಹುಮಂದಿ ಡಾಕ್ಟರುಗಳೆಲ್ಲಾ ಮನೆಗೆ ಹೋಗಿದ್ದಾರೆ. ಇನ್ನೇನು ಬಿಳಿಯ ಮೇಲಂಗಿಗಳನ್ನು ಕಳಚಿ ಮನೆಯ ಕಡೆ ಹೊರಡಲಿದ್ದ ರಮಣಿಯರ ದಳ ತುರ್ತು ವಿಧಾಯಕಕ್ಕೆ ಶರಣಾಯಿತು. ಎಲ್ಲ ಕಡೆಯಿಂದಲೂ ಸಹಾಯ ಹಸ್ತ ಧಾವಿಸಿ ಬಂದಿತು. ರಸ್ತೆಯ ಅಪಘಾತಕ್ಕೆ ಒಳಗಾದವಳನ್ನು ಅದೇ ತಾನೇ ಕರೆತರಲಾಗಿದೆ. ಹೊಟ್ಟೆಗೆ ಏಟುಬಿದ್ದು

ಜಠರ ಮತ್ತು ಲಿವರ್ (LIVER)ಗಳು ಅರ್ಧ ಹರಿದಿವೆ. ನೆತ್ತರಿನ ಕೋಡಿಯಲ್ಲಿ ಮೈ ತೊಯ್ದು ಪ್ರಜ್ಞೆ ತಪ್ಪಿದ ಹೆಣ್ಣು ಮರದ ತುಂಡಿನಂತೆ ಬಿದ್ದಿದ್ದಾಳೆ. ಹರಿದ ಜಠರವನ್ನು ಹೊಲಿದು ಜಜ್ಜಿದ ಲಿವರಿನ ಭಾಗವನ್ನು ತೆಗೆದು ಹೆಪಟೆಕ್ಟಮಿ (PARTIAL HEPATECTOMY) ಆಪರೇಶನ್ ಮಾಡಿ ಮುಗಿಸುವಷ್ಟರಲ್ಲಿ ಹೊತ್ತು ಮೂರೂವರೆಯ ಅಂಚನ್ನು ದಾಟಿತು. ಎಲ್ಲರಿಗೂ ಹೊಟ್ಟೆಯಲ್ಲಿ ತಾಳವೋ ತಾಳ. ಡ್ಯೂಟಿ ಡಾಕ್ಟರಿಗೆ ಉತ್ತರಾರ್ಧವನ್ನು ವಹಿಸಿ ಮನೆಯ ಕಡೆ ಹೊರಟಾಗ ಮೈ ಅತಿಯಾಗಿ ದಣಿದಿತ್ತು.

ಕಮಲೇಶ್ ಮನೆಯನ್ನು ತಲ್ಪಿದಾಗ ಹೇಮರತಿ ಕರ್ವೆ ಸ್ವರ್ಣಮಾಲಿನಿಯೊಂದಿಗೆ ಕುಳಿತುಕೊಂಡಿದ್ದಳು. ನೋಡಿದೊಡನೆಯೇ ಯಾವುದೋ ಕಾಣದ ಕೈ ಸಾಸಿರ ಪಟ್ಟು ಹೃದಯವನ್ನು ಹಿಸುಕಿದಂತಾಯಿತು. ಏನು ಹೇಳಬೇಕೋ ಹೊಳೆಯಲಿಲ್ಲ. ಹೇಗೆ ಮಾತಾಡಿಸಬೇಕೋ ಅದೂ ಸಹ ಮರೆತುಹೋಯಿತು. ಅತ್ಯಂತ ಸಣ್ಣ ಹುಡುಗಿಯರಂತೆ ತಬ್ಬಿಬ್ಬಾಗಿ "ಪ್ರಣಾಮ್ ಮಾಮಿ !" ಎಂದಳು. ಮುಂದೆ ಮಾತು ಹೊರಡಲಿಲ್ಲ.

ಅಧ್ಯಾಯ

೧೮

ಶರಧೃತುವಿನ ಮಧ್ಯಮ ಕಾಲ.

ಕಾರ್ತೀಕಾನಿಲ ತಣ್ಣಗೆ ತೀಡುತಿದ್ದಾನೆ, ಮೈ ನೆತ್ತರು ಹೆಪ್ಪುಗಟ್ಟಿ ದಂತೆ. ಬಾನೇರುವ ಬಾಲರವಿಯ ಎಳೆ ಬಿಸಿಲು ಮೈಗಟ್ಟುವಷ್ಟು ಬೆಚ್ಚಗಾಗ ದಿದ್ದರೂ ಮೈ ಕಾಯಿಸಿಕೊಳ್ಳೋಣ ಎಂಬುವಷ್ಟು ಚಳಿ.

ಮೃತ್ಯು ತಾಂಡವ ನೃತ್ಯಗೈಯ್ಯುವ ರುದ್ರ ಮಧುರ ಪ್ರಾತಃಸಮಯ ದಲ್ಲಿ ರಾಣೀ ಭವತಾರಿಣಿಯ ಚೈತ್ಯಾಲಯದಲ್ಲಿ ಹೆಜ್ಜೆ ಹಾಕಿದಷ್ಟೂ ಮುಗಿ ಯದು. ಅಂದು ಆಪರೇಶನ್ ಥಿಯೇಟರು ಡಾ|| ಜಮುನಾಬಾಯಿಯ ಒಡೆತ ನಕ್ಕೆ ಒಳಪಟ್ಟುದುದರಿಂದ ಕಮಲೇಶಳ ಕೈಗೆ ಬಿಡುವು. ವಾರ್ಡ್‌ರೌಂಡು ಆರಂಭಿಸುವ ಮುನ್ನ ಸಕ್ಕೂ ನೋಡುವ ಆಗತ್ಯವಿತ್ತು. ಹಿಂದಿನ ದಿನ "ನನ್ನ ಬಳಿ ಸ್ವಲ್ಪ ಹೊತ್ತು ಇರುವಂತೆ ಬಾ ಕಮಲೇಶ್." ಎಂದಿದ್ದಳು ಅವಳು. ಅವ ಳಿರುವುದು ಆರನೆಯ ಯೂನಿಟ್. ಅಲ್ಲಿಗೆ ಹೋಗಿ ಪುನಃ ಮೂರನೆಯ ಯೂನಿಟ್ಟಿಗೆ ಬರುವುದೆಂದರೆ ಕೊಂಕಣ ಸುತ್ತಿ ಬಂದಷ್ಟು ಸುತ್ತು.

ಲೇಬರ್ ವಾರ್ಡುಗಳಿಂದ ಸ್ತ್ರೀಕಂಠಗಳ ಆರ್ತನಾದ ಅಂತಃಕರಣ ಕರ ಗುವಂತೆ ಕೇಳಿ ಬರುತ್ತಿದೆ. ಉಪಹಾರ ನೀಡಲು ಬಂದ ಪುರುಷರೂ ವೃದ್ಧ ಜನನಿಯರೂ ಮಕ್ಕಳೂ ಸಾಲುಗಟ್ಟಿ ದಿಟ್ಟಿಗೆ ಬೀಳುತಿದ್ದಾರೆ. ಅತೀತಯುಗದ ಅತೀತಮಾರ್ಗಯೋಗದಲ್ಲಿ ಅತೀತಮಾನವನ ದೂರಗಮ್ಯಸ್ಥಾನ ಯಾವ ದಿಕ್ಕಿನಲ್ಲಿದೆಯೋ ಆತನ ಪಯಣ ಇನ್ನೆತ್ತ ಸಾಗಿದೆಯೋ ಆ ಸರ್ವಾಂತರ್ಯಾ ಮಿಯೇ ಬಲ್ಲ. ದಿಕ್ಕನ್ನರಿತುಕೊಳ್ಳದೆ ಮಾರ್ಗಯೋಗ ಸಲ್ಲ....ಎನಿಸಿತು. ಕಾರಿ ಡಾರಿನ ಪಕ್ಕದಲ್ಲಿ ನಡೆಯುತ್ತಾ ಕಮಲೇಶ್ ನಿಟ್ಟುಸಿರು ಬಿಟ್ಟಳು. ಸಕ್ಕೂ ವಾರ್ಡ್‌ವರೆಗೆ ಹಾದಿ ಸಾಗಿದುದೂ ಸಹ ತಿಳಿಯಲಿಲ್ಲ. ಒಳಹೋಗುತ್ತಲೂ ಸಕ್ಕೂ ಮುಖ ಅರಳಿ ಪ್ರಫುಲ್ಲವಾಯಿತು. ಆತ್ಮೀಯತೆಯಿಂದ ನೀಡಿದ ಅವಳ ಕೈಯನ್ನು ಮೃದುವಾಗಿ ಅದುಮಿ ಹಿಡಿದಳು ಕಮಲೇಶ್.

ಇಬ್ಬರ ತುಟಿಗಳಲ್ಲೂ ಸಂತಸದ ತಿಳಿನಗೆ ಅರಳಿತು.

"ರಾತ್ರಿ ಸರಿಯಾಗಿ ನಿದ್ದೆ ಮಾಡಿದೆಯಾ ಸಖ್ಯೂ?"

"ಹೌದು........ಮಧ್ಯೆ ಮಧ್ಯೆ ಎಚ್ಚರವಾಗುವುದೂ ಉಂಟು. ಆದರೆ ಮೊದಲಿನ ಭಯವೇನೂ ಇಲ್ಲ."

"ಇನ್ನು ಭಯವಾಗುವಂತಿಲ್ಲ....ಯೋಚಿಸಬೇಡ ಸಖ್ಯೂ!"

ಹೊತ್ತು ಗೆಳತಿಯರ ಸಾನಿಧ್ಯದಲ್ಲಿ ಸಾನಂದದಿಂದ ಉರುಳಿತು.

ಕೆಲಸ ಆರಂಭಿಸುವವರೆಗೆ ಗೆಳತಿಯೊಂದಿಗೆ ಸ್ವಚ್ಛಂದವಾಗಿ ಕಳೆದು ಅವಳ ಮನಸವನ್ನು ಅರಳಿಸಿ ತನ್ನ ಹಾದಿ ಹಿಡಿದಳು ಕಮಲೇಶ್. ಕಾಲಡಿಯ ಸುದೀರ್ಘ ಕಾರಿಡಾರು ಊದವರ್ಣದ ಹೆಬ್ಬಾವಿನಂತೆ ಹರಿದಿದೆ. ಕಂಬ ಕಂಬಗಳೂ ಅಲ್ಲಿ ಜೀವ ತೆತ್ತ ನತದೃಷ್ಟ ಜೀವಿಗಳ ಇತಿಹಾಸವನ್ನು ಬಣ್ಣಿಸುವಂತಿವೆ. ಕಲ್ಲು ಕಲ್ಲುಗಳೂ ಕಂಬನಿ ತುಂಬಿದ ಕಣ್ಣುಗಳಂತಿವೆ. ಗೋಡೆ ಗೋಡೆಗಳೂ ಗಂಭೀರ ಸ್ಮಾರಕದಂತಿವೆ. ಕಮಲೇಶ್ ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ಹೆಜ್ಜೆ ಹಾಕಿದಳು. ಏಕೋ ಅಂದು ಎಲ್ಲಿಲ್ಲದ ಸಂಕಟ. ಎದೆಯಾಳದಲ್ಲಿ ಅನುಭವಿಸಲಾಗದ ದುಗುಡ. ಎಷ್ಟು ಯೋಚಿಸಿದರೂ ಏನೆಂಬುದು ಅರ್ಥವಾಗದು. ಯೋಚನೆಯ ಮಂಪರದಲ್ಲಿ ತಲೆಬಾಗಿ ಹೆಜ್ಜೆ ಹಾಕುತ್ತಿದ್ದಾಗ ಕಾರಿಡಾರಿನಲ್ಲಿ ಚಂದ್ರಭಾನು ತಾಯಿ ಸಪ್ಪೆಮೋರೆಯಿಂದ ನಿಂತಿದ್ದುದು ಕಾಣಬಂತು. ಕಣ್ಣುಗಳಲ್ಲಿ ನೀರಾಡುತಿತ್ತು. ಅವಳನ್ನು ನೋಡುತ್ತಲೂ ಕಮಲೇಶ್ ಆಸಕ್ತಿಯಿಂದ ಕೇಳಿದಳು "ಏಕೆ ಇಲ್ಲಿನಿಂತಿದ್ದೀರಿ........"

"ನನ್ನ ಗ್ರಹಚಾರ...." ಗಂಟಲು ಬಿಗಿದು ಮಾತುಗಳು ಹೊರಡದಾದುವು.

"ಏನು ಹೇಳಿ...."

"ಇರುವ ಒಬ್ಬ ಮಗನಿಗೂ ಸುಖವಿಲ್ಲ. ಸೂರ್ಯಭಾನುವಿನ ಕಿವಿಯಲ್ಲಿ ಏನೋ ಎದ್ದಿದೆ."

"ಎದೆಯ ಹಕ್ಕಿ ಮೆಲ್ಲನೆ ಉಲಿಯಿತು...."ಅಯ್ಯೋ, ಪಾಪ!"

"ಯಾವಾಗಿನಿಂದ ಹೀಗಾಗಿದೆ?"

"ಮೊದಲೆಲ್ಲ ಆಗಾಗ ಕಿವಿ ಸೋರುತಿತ್ತು. ಹಾಗೇ ಗುಣವಾಗುತಿತ್ತು. ಈಗ ಅದೇ ಜಾಸ್ತಿಯಾಗಿದೆ."

ಆಗಲೇ ಹೆತ್ತ ಮಕ್ಕಳನ್ನೆಲ್ಲ ಒಂದೊಂದಾಗಿ ಕಿತ್ತುಕೊಂಡಿತ್ತು ದುರ್ವಿಧಿ. ಇನ್ನು ಉಳಿದವನು ಸೂರ್ಯಭಾನು ಒಬ್ಬನೇ. ಪಾಪ, ಇವನಿಗಾದರೂ ಗುಣ ವಾದರೆ ಸಾಕು....ಹೃದಯ ಅನುಕಂಪದಿಂದ ಮಿಡಿಯಿತು. "ವಾಸಿಯಾ ಗುತ್ತೆ.... ಯೋಚಿಸಬೇಡಿ." ಎಂದಳು.

ಆದರೆ....

"ನೀವು...." ಬಿಕ್ಕಿದಳು ತಾಯಿ. ಪ್ರಯತ್ನಿಸಿದರೂ ಮಾತುಗಳು ಹೊರಡಲಿಲ್ಲ.

ಕಮಲೇಶ್ ಅವಳನ್ನು ಸಂತೈಸಿ ಧೈರ್ಯ ಹೇಳಿ ಸೂರ್ಯಭಾನುವನ್ನು ನೋಡಲೆಂದು ಒಳ ಹೋದರೆ ಅವನಿರಲಿಲ್ಲ. ಡಾ|| ಗಣೇಶ್ ನಂದಾರವರಲ್ಲಿಗೆ ಕರೆದುಕೊಂಡು ಹೋಗಲಾಗಿತ್ತು. ಇನ್ನೊಮ್ಮೆ ನೋಡುವುದಾಗಿ ಹೇಳಿ ಅಲ್ಲಿಂದ ಹೊರಟಳು. ಆ ತಾಯಿಯ ಕೊನೆಗಾಣದ ದುಃಖ ಮನದ ಕಿಂಡಿ ಯಲ್ಲಿ ವ್ಯಾಕುಲತೆಯನ್ನು ಸ್ವಲ್ಪ ಸ್ವಲ್ಪವಾಗಿ ತುಂಬುವಂತೆ ತೋರುತ್ತಿದೆ. ಯಾವುದೋ ಪಿಶಾಚಹಸ್ತ ಹೃದಯವನ್ನು ಹಿಂಡುವಂತೆ ಭಾಸವಾಗಿ ಹೆಜ್ಜೆ ಗಳನ್ನೆಳೆದುಕೊಳ್ಳುತ್ತಾ ವಾರ್ಡಿಗೆ ಕಾಲಿಟ್ಟಾಗ ದಿಟ್ಟಿಗೆ ಮೊದಲು ಬಿದ್ದ ಹೆಣ್ಣು ಮೂರ್ಛಾವಸ್ಥೆಯಲ್ಲಿದ್ದ "ಕಾಮಾಕ್ಷಿ"

ಚಾರ್ಟಿನಲ್ಲಿ ಅವಳ ಹೆಸರು 'ತಿಳಿಯದು ಎಂದು ಬರೆದಿದ್ದರೂ ಅಂದು ಡಾ|| ಕೃಷ್ಣಾ ಭಾಪಟ್ 'ಕೋಮಾ ಪೇಷಂಟ್' ಬದಲಾಗಿ 'ಕಾಮಾಕ್ಷಿ' ಎಂದು ಕರೆದುದು ಅವಳಿಗೆ ರೂಢಿಯ ಹೆಸರೇ ಆಗಿದೆ. ನಿನ್ನೆ ಮೊನ್ನೆ ಅರೆಬರೆ ಪ್ರಜ್ಞೆ ಇದ್ದುದು ಇಂದು ತಿಳಿಯಾದ ಪ್ರಜ್ಞೆ ಮೂಡಿ, ಸುತ್ತಮುತ್ತಣ ಅಪರಿ ಚಿತ ಪ್ರಪಂಚವನ್ನು ನೋಡಿ ಭಯ ಭೀತಿಗಳ ಗಣಿಯಾಗಿ ಬಿಟ್ಟಿದ್ದಾಳೆ. ಅಶಾಂತತೆ ತುಂಬಿದ ಆ ಮುಗ್ಧ ಮುಖವನ್ನು ಒಂದು ಘಳಿಗೆ ನಿಟ್ಟಿಸಿತು ಸಂತೃಪ್ತ ನೋಟ. ಮುಗುಳು ನಗೆ ಚೆಲ್ಲಿ "ಹೇಗಿದ್ದಿ ಕಾಮಾಕ್ಷಿ?" ಎಂದಳು ಸ್ವಭಾವಜನ್ಯ ಸೌಜನ್ಯತೆಯಿಂದ.

ಅವಳು ಮರುಮಾತಾಡದೆ ಮಿಕಿಮಿಕಿ ನೋಡಿದಳು. ಅಪರಿಚಿತ ಸ್ಥಳ. ಅಪರಿಚಿತ ಜನ....ಏನೆನ್ನಬೇಕೋ ಹೊಳೆಯದು. ಏನು ಮಾಡಬೇಕೋ ತಿಳಿ ಯದು. ಅರಳಿದ ಕಣ್ಣುಗಳು ಸುತ್ತ ಮುತ್ತ ಪುನಃ ಪುನಃ ಹೊರಳಿದುವು. ಮುಖ ಭಾವ ಕೂಗಿ ಕೇಳುತಿತ್ತು...."ನಾನೆಲ್ಲಿದ್ದೇನೆ?"

"ನೀನು ಆಸ್ಪತ್ರೆಯಲ್ಲಿದ್ದಿ. ನಿನಗೆ ಯಾವ ಭಯವೂ ಇಲ್ಲ."

"ಹಸಿವಾಗುತ್ತಿದೆಯೇ ?"

"ಹ್ಞೂ...."

"ಏನು ಬೇಕು ?"

"ಮಾವಿನ ಹಣ್ಣು."

"ಈ ಅಕಾಲದಲ್ಲಿ....?"

ಹುಡುಗಿ ಮತ್ತೆ ಕಣ್ಣು ಮುಚ್ಚಿದಳು. ಕರೆದರೂ ಕೂಗಿದರೂ ಓಗೊಡ ಲ್ಲ. ದೈಹಿಕ ಕಾರ್ಯಶಕ್ತಿ ಸಮರ್ಪಕವಾದುದರಿಂದ ಪ್ರಜ್ಞೆ ಬಂದೇ ಬರುತ್ತೆ ಂಬುದು ಸಮಾಧಾನ....ಕಮಲೇಶ್ ವಾರ್ಡ್ ರೌಂಡ್ ಮುಗಿಸಿ ಹೊರಬಿ ಳು. ಹೊತ್ತು ಹನ್ನೊಂದರ ಅಂಚನ್ನು ತಬ್ಬುವುದರಲ್ಲಿದೆ. ಇಂದೇಕೋ ುನಸ್ಸಿಗೆ ಸಮಾಧಾನವಿಲ್ಲ ಬೇಗನೆ ಮನೆಗೆ ಹೋಗಿ ಬಿಡುವೆ ಎಂದುಕೊಳ್ಳುತ್ತ ುನ್ನಡೆದಳು. ಆದೇಶವೀಯದಿದ್ದರೂ ಹೆಜ್ಜೆಗಳು ಚುರುಕುಗೊಂಡುವು.

ಢಣ್! ಢಣಾರ್! ಢಣ್! ಢಣಾರ್! ಢಣ್! ಢಣಾರ್!

ಘಂಟಾ ನಿನಾದ ಕರ್ಣ ಕಠೋರವಾಗಿ ಮೊಳಗಿತು. ಎಲ್ಲಿ ಯಾವೆಡೆ ುತ್ಯು ತಾಂಡವ ನೃತ್ಯಗೈಯ್ಯುತಿದ್ದಾಳೋ....ಹಾಯ್! ಅತೀತಲೋಕದ ರೆಯಾದರೂ ಯಮಧರ್ಮನ ಕಂಠಸ್ವನವೇ ಆದರೂ ಎಷ್ಟೊಂದು ಚೇತೋ ಯವಾಗಿದೆ....!

ಕಮಲೇಶ್ ಕತ್ತೆತ್ತಿ ನೋಡಿದಳು. ಕಾರಿಡಾರಿನುದ್ದಕ್ಕೂ ಅಲ್ಲಲ್ಲಿ ಂಪು ದೀಪಗಳು ಹತ್ತಿ ಅಪಾಯದ ಸುದ್ದಿಯನ್ನು ಬಿತ್ತರಿಸಿತು. ನೋಡೆ ುರ್ಜನ್ಸಿ ವಾರ್ಡ್!

ರಾಣೀ ಭವತಾರಣಿಯ ತುರ್ತು ಕರೆ!

ಮನೆಗೆ ಹೋಗುವ ಆತುರವನ್ನು ಬದಿಗೊತ್ತಿ ಎಮರ್ಜನ್ಸಿ ವಾರ್ಡಿ ತ್ತ ಅವಸರವಸರವಾಗಿ ಹೆಜ್ಜೆ ಹಾಕಿದಳು ಕಮಲೇಶ್. ಎದೆಯಾಳದಲ್ಲಿ ಂಕಟ, ತುರ್ತುಕರೆಗೆ ಓಗೊಟ್ಟರೂ ಓಡಲು ಚೈತನ್ಯವಿಲ್ಲ. ಎಂದೂ ಹೀಗಾ ರಲಿಲ್ಲ; ಇಂದೇಕೆ ಹೀಗೆ? ಏನಿರಬಹುದು?

ಎಮರ್ಜನ್ಸಿ ವಾರ್ಡಿಗೆ ಏಸಿಲ್ಲೆಂದರೂ ಸಾಲ್ಕೈದು ನಿಮಿಷಗಳ ಹಾದಿ. ಕಡೆಯಿಂದ ಈ ಕಡೆಯಿಂದ ಸಹಾಯ ಹಸ್ತಗಳೂ ಓಡೋಡಿ ಬಂದುವು.

ಔಷಧಿ ಶೀಶೆಗಳ ಟ್ರೇ ಜಿಣಿ ಜಿಣಿ ಸದ್ದು ಗೈಯುತ್ತಾ ಓಡಿಬಂದಿತು. ಕಿವಿಗಳು ಕಿವುಡಾಗುವಂತೆ ಮೇಳೈಸಿತು ಪಾದರಕ್ಷೆಗಳ ಸದ್ದು. ಪಟ. ಪಟ. ಪಟ. ಪಟ.

ಎಮರ್ಜನ್ಸಿ ವಾರ್ಡಿನೊಳಗೆ ನುಗ್ಗಿದಾಗ ಮೇಜಿನ ಸುತ್ತ ನಾಲ್ಕಾರು ಮಂದಿ ಹಿರಿಯ ಡಾಕ್ಟರುಗಳು ಸುತ್ತುವರಿದಿದ್ದರು. ಕಮಲೇಶ್ ತಲೆದೆಶೆಗೆ ಹೋದಳು. ಪೆಟ್ಟುತಾಗಿ ನಜ್ಜುಗುಜ್ಜಾದ ಹೆಣ್ಣೊಂದು ಮೇಜಿನ ಮೇಲೆ ಮಲಗಿತ್ತು. ಡುಬ್ಬಾದ ಅವಳ ಹೊಟ್ಟೆ ಗರ್ಭಿಣಿಯೆಂಬುದನ್ನು ಸಾರಿ ಹೇಳುತ್ತಿದೆ. ಹಣೆಗೆ ಪೆಟ್ಟುತಾಗಿ ನೆತ್ತರಿನ ಕೋಡಿ ಮುಖದ ಮೇಲೆ ಹರಿದು, ಮುರಿದ ತೋಳಿನ ಮೂಳೆ ಹೊರಗೆ ಇಣುಕಿಕೊಂಡಿತ್ತು.

ಅಬ್ಬಾ! ರುದ್ರ ಭಯಂಕರ....!

ತಲೆಯ ಗಾಯದಿಂದ ಚಿಮ್ಮುತ್ತಿದ್ದ ನೆತ್ತರನ್ನು ತಡೆಗಟ್ಟಲು ಹತ್ತಿಯೊಡನೆ ಹತ್ತಿರ ಬಂದಾಗ ಮುಖ ಮೈಗಳನ್ನು ಎಲ್ಲಿಯೋ ಎಂದೋ ನೋಡಿದ ನೆನಹು. ಹಣೆಯ ಮೇಲಿನಿಂದ ಚಿಮ್ಮುವ ರಕ್ತ ಮುಖದ ಮೇಲೆ ಹರಿದು ಹೆಪ್ಪುಗಟ್ಟಿದುದರಿಂದ ಗುರುತು ಹತ್ತುವಂತಿಲ್ಲ. ಹತ್ತಿಯಿಂದ ಗಾಯವನ್ನು ಒತ್ತಿ ಹಿಡಿದು ಮುಖದ ಮೇಲಿನ ನೆತ್ತರನ್ನು ಹತ್ತಿಯಿಂದ ಬಳಿಯುತ್ತಲೂ ಮುಖವನ್ನು ನೋಡಿ ಎದೆಯ ಸೆಲೆಯೊಡೆಯುವಂತಾಯಿತು. ಮೈಯ್ಯ ನೆತ್ತರು ಒಮ್ಮೆಲೇ ಹೆಪ್ಪುಗಟ್ಟಿದಂತೆ ನಡುಕ ಮೂಡಿತು. ಭಯ-ಉದ್ವೇಗಗಳಲ್ಲೂ ಮತ್ತೊಮ್ಮೆ ಮೈಬಾಗಿ ನೋಡಿದಳು ಕಮಲೇಶ್. ಸೋಡೆ, ನೋಡೆ ಆತ್ಮೀಯ ಗೆಳತಿ ಚೇತನಾ!

"ಅಯ್ಯೊ, ಚೇತನಾ!....ಚೇತನಾ!!" ಚೀರಿದಳು ಕಮಲೇಶ್.

ಎಲ್ಲರ ಆಶ್ಚರ್ಯ ತೃಷಿತ ಲೋಚನಗಳು ಕಮಲೇಶಳತ್ತ ಹೊರಳಿದುವು.

....ಯಾರಿರಬಹುದು?

"ಚೇತನಾ!....ನೀನು ಹೇಗೆ ಹೀಗಾದೆ? ಈ ..ಸ್ಥಿತಿಯಲ್ಲಿ ನೀನು ಇಲ್ಲಿಗೆ ಬರಬೇಕೆ?" ಸರ್ವೇಸಾಮಾನ್ಯ ಹೆಣ್ಣಿನಂತೆ ಚೀರುದನಿಯಲ್ಲಿ ಚೀರಿದಳು ಕಮಲೇಶ್ "ಚೇತನಾ....ಚೇತನಾ!"

ಮರುಕ್ಷಣದಲ್ಲಿ ತಲೆ ಸುತ್ತಿ ಬಂದಂತಾಗಿ ಮುಖ ಬೆಳ್ಳನೆ ಬಿಳಿಚಿಕೊಂಡಿತು. ತಕ್ಷಣ ಕೆಳಗೆ ಬೀಳದಂತೆ ಹಲವಾರು ಕೈಗಳು ಆಶ್ರಯ ನೀಡಿದುವು. ತಲೆದೆಶೆಯಲ್ಲಿದ್ದ ಡಾ|| ಥಾಮಸ್ ತಮ್ಮ ಸುಭದ್ರವಾದ ತೋಳು

ಗಳಾಶ್ರಯ ನೀಡಿ ಕುರ್ಚಿಯ ಮೇಲೆ ಕುಳ್ಳಿರಿಸಿ ಸಾಂತ್ವನ ಗೈಯುವ ದನಿಯಲ್ಲಿ ನುಡಿದರು "ಯಾರೇ ಇರಲಿ, ಇಂತಹ ಸಂದರ್ಭಗಳಲ್ಲಿ ಎದೆಗೆಡಬಾರದು. ಸ್ವಲ್ಪ ಸುಧಾರಿಸಿಕೊಳ್ಳಿ ಡಾಕ್ಟರ್."

ಕೆಚ್ಚು ನುಚ್ಚು ನೂರಾಯಿತು.

ಮುಂಬೈಯಲ್ಲಿರುವ ಚೇತನಾ ಇಲ್ಲಿ ಅಪಘಾತಕ್ಕೊಳಗಾಗುವುದಾದರೂ ಹೇಗೆ? ನಾನೇನಾದರೂ ಎಚ್ಚರ ತಪ್ಪಿದ್ದೇನೆಯೆ? ಅಥವಾ ಕನಸು ಕಂಡೆನೋ? ಅಥವಾ ಹುಚ್ಚೋ? ಇದೇನು ಭ್ರಾಂತೋ?

ಆ....ಸುತ್ತ ಮುತ್ತಿನ ಹಲವಾರು ದನಿಗಳು ಸಾಂತ್ವನಗೈದುವು. ಹಲವಾರು ನುಡಿಗಳು ಉತ್ತೇಜನ ನೀಡಿದುವು. ಹಲವಾರು ಕೈಗಳು ಮೈದಡವಿದುವು. "....ಡಾಕ್ಟರ್...." ಕಿವಿಗಳಿಗೆ ಪ್ರೇಮಸುಧಾಸಲಿಲಧಾರೆಯೊರೆದರೂ ಆ ಕ್ಷಣ ಕಣ್ಣ ಮುಂದಿನ ಸಮಸ್ತ ವಸ್ತುಗಳೂ ಗಿರಗಿರ ಸುತ್ತಿದುವು. ಕಣ್ಣುಗಳಿಗೆ ಕತ್ತಲೆ ಕವಿದು ಬಂತು, ನಭೋಮಂಡಲದಿಂದ ಮೇಘಮಾಲೆ ಕಳಚಿ ಬಿದ್ದಂತೆ. ದೈಹಿಕ ಕ್ರಿಯಾಶಕ್ತಿ ಕ್ಷಣ ಕ್ಷಣವೂ ಕುಂದುತ್ತಿರುವಂತೆ ಭಾಸವಾಗುತ್ತಿದೆ. ತನ್ನ ಆತ್ಮ ಶಕ್ತಿಯನ್ನೆಲ್ಲ ಮೂಟೆಗಟ್ಟಿದಂತೆ, ಯೋಚನಾಶಕ್ತಿ ಉಡುಗುತ್ತಿದೆ; ಆದರೂ ಎದೆಯ ಬನದ ಹಕ್ಕಿ ನರಳಿತು....ಭಗವಂತ ಎಂಬುವವನು ಇರುವುದು ನಿಜವಾಗಿಯೂ ಹೌದಾಗಿದ್ದರೆ ಚೇತನಳಿಗೆ ಈ ದುರ್ಗತಿ ಬರುವುದು ಸಾಧ್ಯವೇ?!....ಖಂಡಿತವಾಗಿಯೂ ಸಾಧ್ಯವೆ?!

"ಚೇತನಾ....ಚೇತನಾ!"

ಆ ಕರೆಗೆ ಓ ಗೊಟ್ಟಿತು ಮೇಜಿನ ಮೇಲಿನ ಹೆಣ್ಣು. ಮುಚ್ಚಿದ ಕಣ್ಣುಗಳು ತೆರೆದುವು. ಕಳೆದುಳಿದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಜ್ಞಾನ ಪ್ರಧಾನ ಮಾಡಿಕೊಂಡು ಸುತ್ತಮುತ್ತ ನಿಟ್ಟಿಸಿದಳು ಚೇತನಾ. ಡಾ|| ಜಮುನಳ ತೋಳಾಶ್ರಯ ಪಡೆದು ಬಳಿಗೆ ಬಂದ ಕಮಲೇಶ್ ಗೆಳತಿಯ ಭಯಂಕರ ಸ್ಥಿತಿಯನ್ನು ಭಯವಿಹ್ವಲೆಯಾಗಿ ನಿಟ್ಟಿಸಿದಳು.

"ಸ್ವಲ್ಪ ಸುಧಾರಿಸಿಕೋ ಕಮಲೇಶ್!" ಎಂದಳು ಡಾ|| ಜಮುನಾ.

"ಕಮಲೇಶ್....ಕಮಲೇಶ್!" ಸ್ಪಷ್ಟವಾದ ದನಿಯಲ್ಲಿ ಕರೆದಳು ಚೇತನಾ.

"ಚೇತನಾ ಹೇಗೆ ಹೀಗಾದೆ? ನಿನ್ನ ಮಗುವೆಲ್ಲಿ?" ಎದೆಯ ಮೇಲೆ

ಕೈಯಿಟ್ಟು ಕಂಪಿಸುವ ದನಿಯಲ್ಲಿ ಕೇಳಿದಳು ಕಮಲೇಶ್.

"ಅದಕ್ಕಾಗಿಯೇ ಇನ್ನೂ ಜೀವ ಉಳಿಸಿಕೊಂಡಿದ್ದೇನೆ....ಎಲ್ಲಿದ್ದಿ ಕಮಲೇಶ್? ಎದುರಿಗೆ ಬಾ....ಕಣ್ತುಂಬ ನೋಡುವೆ...."

"ಇಲ್ಲೇ....! ಇಲ್ಲೇ ಇರುವೆ." ಶ್ರೋತೃಗಳ ಅಂತಃಕರಣ ಕರಗಿ ನೀರಾಗುವಷ್ಟು ದನಿ ಗದ್ಗದವಾಗಿತ್ತು.

ಹಲವಾರು ಕೈಗಳು ಮುಟ್ಟಿ ಮುಟ್ಟಿ ತೋರಿ "ಇಲ್ಲಿದ್ದಾಳೆ ಕಮಲೇಶ್!" ಎಂದುವು.

"ಹಾ....!"ಎಂದು ಸುಯ್ದಳು ಕಮಲೇಶ್. ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿಯಿತು.

"ಬಾ, ಹತ್ತಿರ ಬಾ. ನಿನ್ನೊಂದಿಗೆ ಮಾತನಾಡುವುದಿದೆ. ನಿನ್ನ ಮುಖ ನೋಡುವುದಿದೆ. ನಿನ್ನೊಂದಿಗೆ ಹೇಳಿಕೊಳ್ಳುವುದೂ ಬಹಳವಿದೆ....ಎಲ್ಲಿದ್ದಿ ಕಮಲೇಶ್?"

"ಇಲ್ಲಿ....ಇಲ್ಲಿ!" ಅನೇಕ ಕೈಗಳು ಮತ್ತೆ ಮುಟ್ಟಿದುವು.

ಕಮಲೇಶ್ ದೃಷ್ಟಿಗೆ ಬಿದ್ದೊಡನೆಯೇ ಎಡಗೈಯಿಂದ ಅವಳನ್ನು ತಬ್ಬಿ ಹಿಡಿದುಕೊಂಡು ಉದ್ವೇಗದಿಂದ ಕೂಡಿದರೂ ದೃಢವಾದ ದನಿಯಲ್ಲಿ ನುಡಿದಳು ಚೇತನಾ—"ಕಮಲೇಶ್, ನನ್ನ ಹರೀಶರನ್ನು ಕಳೆದುಕೊಂಡೆ. ನನಗಿನ್ನು ಬದುಕು ಬೇಡ. ಮಹಡಿಯಿಂದ ಹಾರಿ ನಾನೇ ಈ ಆಪತ್ತನ್ನು ತಂದುಕೊಂಡಿದ್ದೇನೆ. ನನ್ನ ಪುಟ್ಟ ಕಮಲೇಶ್ ಈಗ ನಿರ್ಗತಿಕಳಾಗಿದ್ದಾಳೆ. ಅವಳನ್ನು ನಿನ್ನ ಕೈಗೊಪ್ಪಿಸಿ ಹೋಗುವೆ. ನೀನವಳನ್ನು ನೋಡಿಕೊಳ್ಳುವುದಾದರೆ ನಾನು ನಿಶ್ಚಿಂತೆಯಿಂದ ಪ್ರಾಣ ಬಿಡುವೆ....ಏನು ಹೇಳುತ್ತಿ ಕಮಲೇಶ್? ನಿನ್ನಿಂದ ಸಾಧ್ಯವೇ ಕಮಲೇಶ್??"

"ಖಂಡಿತವಾಗಿಯೂ ನೋಡಿಕೊಳ್ಳುವೆ ಚೇತನಾ." ದುಃಖಗರ್ಭಿತ ವಿದೀರ್ಣ ದನಿ ಹೊರಬಿತ್ತು.

"ಅಷ್ಟು ಉಪಕಾರ ಮಾಡು ಕಮಲೇಶ್!"

"ಪ್ರಮಾಣಪೂರ್ವಕವಾಗಿ ಹೇಳುವೆ. ನನ್ನ ಸ್ವಂತ ಮಗುವಿನಂತೆ ನೋಡಿಕೊಳ್ಳುವೆ."

ಕಮಲೇಶ್ ಅವಳ ಕೈಯನ್ನು ಅದುಮಿ ಹಿಡಿದು, ಮುಖ ಮೈಗಳನ್ನು

ಮುದ್ದುಗೈದು ಆತ್ಮೀಯತೆಯಿಂದ ಪ್ರಮಾಣವಚನ ನೀಡಿದಳು. ಕಣ್ಣುಗಳಲ್ಲಿ ನೀರು ಬಳಬಳ ಸುರಿಯಿತು.

“ನಾನು ದೇಹ ಬಿಡುವವರೆಗೆ ಹರೀಶರ ಶವ ಸಂಸ್ಕಾರ ನಡೆಸದೆ ಎರಡೂ ದೇಹಗಳನ್ನು ಒಂದೇ ಚಿತೆಯ ಮೇಲಿಟ್ಟು ಸಂಸ್ಕಾರ ನಡೆಸಿರಿ....ನನ್ನ ಮಗುವನ್ನು ಕರೆತಂದು ತೋರಿಸುವೆಯಾ ಕಮಲೇಶ್?”

“ಆಗಲಿ; ಚೇತನಾ!”

“ನಾನಿನ್ನು ನಿಶ್ಚಿಂತೆಯಿಂದ ಕಣ್ಣು ಮುಚ್ಚುವೆ....”ಬಿಕ್ಕಿದಳು ಚೇತನಾ.

“ಚೇತನಾ....!”

“ಕಮ....” ಮಾತು ತೊದಲಿತು.

ಬೆನ್ನ ಹಿಂದಿದ್ದ ಕೈಗಳು ಆಶ್ರಯ ನೀಡದಿದ್ದಲ್ಲಿ ಕಮಲೇಶ್ ಭೂಶಾಯಿಯಾಗುತಿದ್ದಳೇನೋ.

ಚೇತಳನ್ನು ಕರೆತಂದವರು ಹೇಳಿದರು–“ಚೇತನಾ ಹರೀಶರು ಮೊನ್ನೆಯಷ್ಟೆ ಮುಂಬೈಯಿಂದ ಮಗುವಿನೊಂದಿಗೆ ಬೆಂಗಳೂರಿಗೆ ಬಂದರು. ನಿನ್ನೆ ಇಬ್ಬರೂ ಮನೆಯ ಸಾಮಾನು ಜೋಡಿಸಿದರು. ಈ ಬೆಳಿಗ್ಗೆ ಹರೀಶ್ ತಾತಾ ವಿಜ್ಞಾನ ಮಂದಿರಕ್ಕೆ ಹೋದಾಗ ಆಸಿಡ್ ಬುಡ್ಡಿಯು ಸಿಡಿದು ಮುಖ ಮೈ ತೀವ್ರವಾಗಿ ಸುಟ್ಟು ಅಸು ನೀಗಿದರು. ಗಂಡನ ಸ್ಥಿತಿಯನ್ನು ನೋಡಿದೊಡನೆ ಮಹಡಿಯಿಂದ ಹಾರಿ ಸ್ವತಃ ಅಪಾಯ ತಂದುಕೊಂಡಿದ್ದಾರೆ. ಗರ್ಭಿಣಿ ಸ್ತ್ರೀ....ಕೈ ಮಗು ಬೇರೆ ಇದೆ....ಬಹಳ ಅನ್ಯಾಯ....ದುಡುಕಿಬಿಟ್ಟರು.”

ಕಮಲೇಶಳಿಗೆ ಯೋಚಿಸಲೂ ಅವಕಾಶವಿಲ್ಲದಷ್ಟು ಹಿರಿಯ ಜವಾಬ್ದಾರಿ ಹೆಗಲೇರಿತು. ಹಿರಿಯ ಡಾಕ್ಟರುಗಳ ಶುಶ್ರೂಷೆಯಲ್ಲಿ ಚೇತನಳಿದ್ದಾಗ, ಸಹ ಡಾಕ್ಟರ್ ವಿಜಯಾ ಸುಧಾರಾಣಿಯರೊಂದಿಗೆ ಚೇತನಳ ಮನೆಗೆ ಧಾವಿಸಿದಳು ಕಮಲೇಶ್. ಮನೆ ಸುತ್ತ ಕೂಡಿದ ನೂರಾರು ಮಂದಿಯನ್ನು ನೋಡಿ ಗಾಬರಿಗೊಂಡ ಮಗು ಕೈಯಿಂದ ಕೈಗೆ ಚಲಿಸಿ ಅತ್ತು ಕರೆದು ಹುಯ್ಲಿಡುತಿತ್ತು. ಕಮಲೇಶ್ ಮಗುವನ್ನು ಎದೆಗಪ್ಪಿಕೊಂಡು ಚೇತನಳನ್ನೇ ಎದೆಗಪ್ಪಿಕೊಂಡಂತೆ ಮರ್ಮರ ಮರುಗಿದಳು. ತೆಳುವಾದ ಮಗು ಡಾಕ್ಟರುಗಳ ಗಮನವನ್ನು ತೀವ್ರವಾಗಿ ಸೆಳೆಯಿತು. ನೋಡೆ ನೀಲಿ ಮಗು!

BLUE BABY!

ಮರುದಿನ ಚೇತನಾ ದೇಹ ಪರಿತ್ಯಾಗ ಮಾಡಿದ ಮೇಲೆ ಎರಡೂ ದೇಹಗಳು ಒಂದೇ ಚಿತೆಯನ್ನೇರಿದುವು. ಕಮಲೇಶ್ ತನ್ನ ಅಂತಿಮ ಸೇವೆಯನ್ನು ಅಲ್ಲಿ ಸಲ್ಲಿಸಿ ಬಂದಳು. ಕಮಲೇಶಳ ಮನಸ್ಥಿತಿಯನ್ನು ನೋಡುತಿದ್ದಂತೆ ಸಹ ಡಾಕ್ಟರುಗಳ ಹೃದಯ ಅನುಕಂಪದಿಂದ ಮಿಡಿದುವು.

ನಯ ವಿನಯ ಸ್ನೇಹ ಪ್ರೇಮಗಳ ವಶೀಭೂತಳಾದ ಹೆಣ್ಣು ಈ ಭಯಂಕರ ಕ್ರಮ ಕೈಗೊಂಡುದುದಾದರೂ ಹೇಗೆ? ವಿದ್ಯಾವಂತಳಾಗಿ ಗರ್ಭಿಣಿಯಾಗಿ ಕೈ ಮಗುವನ್ನು ಹೊಂದಿದ್ದು ಇನ್ನೆಂದೂ ತಿರುಗಿ ಬಾರದ ಹಾದಿಗೆ ಜಿಗಿಯಬೇಕಾದರೆ ಅವರ ಪ್ರೇಮ ಎಷ್ಟೊಂದು ಅಗಾಧವೋ ಅವಳ ದೃಢ ಸಂಕಲ್ಪವೂ ಅಷ್ಟೇ ಅಗಾಧ....ಗರ್ಭಸ್ಥ ಶಿಶು ಗಾಂಧಿಯಾಗಲಿತ್ತೋ ನೆಹರೂವಾಗಲಿತ್ತೋ ಯಾರಿಗೆ ಗೊತ್ತು? ಅದನ್ನೂ ಸಹ ತಿರುಗಿ ಬಾರದ ಹಾದಿಗೆ ಹಚ್ಚಿ ಹಾರಿ ಹೋಯಿತು ಹಕ್ಕಿ....ಹಾ!

ತಾಯಿ ತಂದೆಗಳಿಗಾಗಿ ತಡುಕುವ ಎಳೆಗಣ್ಣುಗಳಿಗೆ ಸಾಂತ್ವನ ನೀಡುವ ಸಲುವಾಗಿ ಕಮಲೇಶ್ ಒಂದು ತಿಂಗಳು ರಜೆ ಬರೆದು ಹಾಕಿ ಮನೆಯಲ್ಲುಳಿದಳು. ಚೇತನಳ ಸಮಸ್ತ ವಸ್ತುಗಳ ವ್ಯವಸ್ಥೆಯೂ ಕಮಲೇಶಳಿಗೆ ಸೇರಿತು. ನಗ ನಾಣ್ಯ ಗೃಹೋಪಕರಣವಸ್ತುಗಳನ್ನು ಮಾರಿ ಹಣವನ್ನು ಬ್ಯಾಂಕಿನಲ್ಲಿಡುವ ವ್ಯವಸ್ಥೆಯು ಅತ್ಯಗತ್ಯವಾಗಿದ್ದರೂ ಅದನ್ನು ಯೋಚಿಸಲೂ ಸಹ ಸಂಕಟ. ಸ್ವಲ್ಪ ದಿನ ಬೀಗ ಮುದ್ರೆ ಜಡಿದು ನಿಧಾನವಾಗಿ ಮಾರಿದರಾಯಿತು ಎಂದುಕೊಂಡಳು ಕಮಲೇಶ್. ಹಿರಿಯ ಜವಾಬ್ದಾರಿ ಎಷ್ಟೇ ಇದ್ದರೂ ಮಗುವನ್ನು ಎದೆಗಪ್ಪಿ ನಲಿದಾಡುವಾಗ ಹೃದಯ ಹೂವಿಗಿಂತಲೂ ಹಗುರವೆನಿಸುವುದು. ಕದಾಚಿತ್ ದುಃಖದೂಟಿಯೂ ಮೊಳೆಯುವುದು.

ಹಿರಿಯ ಕಮಲೇಶಳ ತೊಡೆಯ ಮೇಲೆ ಕಿರಿಯ ಕಮಲೇಶ್ ಕುಳಿತುಕೊಂಡು ಇನಿದನಿಯಲ್ಲಿ ಕೇಳಿದಳು "ಅಪ್ಪ ಅಮ್ಮ ಯಾವಾಗ ಬರುತ್ತಾರೆ?" ಆಸಕ್ತಿಯಿಂದ ಕಣ್ಣುಗಳು ವಿಸ್ಫಾರಿತವಾದುವು.

ಅವಳ ಮುಖದ ಮೇಲೆ ಗಾಳಿಗಡರಿ ಬಂದ ನವುರಾದ ಅಲೆಗೂದಲನ್ನು

ುದಕ್ಕೆ ತಳ್ಳಿ ಮುದ್ದಿಟ್ಟು– "ಅವರು ತಾತನ ಮನೆಗೆ ಹೋಗಿದ್ದಾರೆ. ಕೆಲವು ನಗಳ ನಂತರ ಇಲ್ಲಿಗೆ ಬರುತ್ತಾರೆ ಮಗೂ."

"ಯಾವ ತಾತ?" ಅರಳು ಕಂಗಳನ್ನು ಇನ್ನಷ್ಟು ಅರಳಿಸಿ ಕೇಳಿತು ುಗು.

"ತಾತ ಅಂದರೆ ದೇವರು. ನಾವೆಲ್ಲಾ ಅವನ ಮಕ್ಕಳು. ಅವನು ಕರೆ ಾಗ ನಾವು ಹೋಗಿಯೇ ತೀರಬೇಕು."

"ನಾನೂ ಅಲ್ಲಿಗೆ ಹೋಗುವೆ!" ಮುಖಬಿಂಬದಲ್ಲಿ ಸ್ವಚ್ಛ ಸ್ಮಿತಪ್ರಭೆ ುಂಬಿ ಹರಡಿತು.

"ತಾತನ ಊರು ಬಲು ದೂರ. ಅದಕ್ಕಾಗಿಯೇ ನಿನ್ನನ್ನು ಬಿಟ್ಟು ಹೋಗಿದ್ದಾರೆ. ಇಲ್ಲಿ ನಾನಿರುವಾಗ ನಿನಗೇಕೆ ಯೋಚನೆ? ಅವರು ಇರು ಷ್ಟು ದಿನ ಇದ್ದು ಬರಲಿ."

"ನನಗೆ ಅಪ್ಪ ಅಮ್ಮ ಬೇಕು." ಮಗು ಬಿಕ್ಕಿತು.

"ಉಹೂ, ಬಿಕ್ಕಬಾರದು. ನಾನು 'ಮಾ' ಅಲ್ಲವೇ?"

"ಹ್ಞೂ....ಹೌದು." ಗಂಭೀರಭಾವದಿಂದ ಒಪ್ಪಿಕೊಂಡಿತು ಮಗು.

ಬೆಳ್ದಾವರೆಯಂತಹ ಮುಖಮಂಡಲದಲ್ಲಿ ಮಂದಹಾಸವನ್ನು ಪಸರಿಸಿ ುನವಾರೆ ಮುದ್ದಿಟ್ಟುಕೊಂಡು ಹೇಳಿದಳು ಕಮಲೇಶ್ "ನೀನು ನನ್ನನ್ನು 'ಮಾ" ಎನ್ನಬೇಕು ತಿಳಿಯಿತೇ?"

ಅವಳು ಮುದ್ದು ಮುದ್ದಾದ ಕಣ್ಣುಗಳನ್ನರಳಿಸಿ "ಹ್ಞೂ" ಎಂದಳು.

"ನಾನು ನಿನ್ನನ್ನು 'ಚೇತನಾ' ಎನ್ನುವೆ ಆಯಿತೇ?"

"ಅದೇಕೆ?"

"ನಾನು 'ಕಮಲೇಶ್' ನೀನು 'ಚೇತನಾ' ನಿನ್ನನ್ನು ಹಾಗೆಂದು ಕರೆಯ ಬೇಕೆಂದು ನನಗೆ ಬಲು ಆಸೆ."

"ಕಮಲೇಶ್ ಚೆನ್ನೋ? ಚೇತನಾ ಚೆನ್ನೋ?"

"ಚೇತನಾ ಚೆನ್ನ!"

"ಹಾಗಾದರೆ ನಾನು ಚೇತನಾ! ನೀವು ಕಮಲೇಶ್!"

"ಹೌದು!"

"ನೀವು ಕಮಲೇಶ್....??" ಕಿಲಕಿಲ ನಕ್ಕಿತು ಮಗು.

"ಹೌದು ಮಗೂ !"

ಹಿಹ್ಹಿಹ್ಹೀ !

ಕಮಲೇಶ್ ಮಗುವನ್ನು ಕಂಬನಿತುಂಬಿದ ಕಣ್ಣುಗಳಿಂದ ಈಕ್ಷಿಸುತ್ತ ಎದೆಗಪ್ಪಿಕೊಂಡು ಮನಸಾರೆ ಮುದ್ದಾಡಿದಳು. ಸುಖ ದುಃಖಗಳುಬ್ಬರದಲ್ಲಿ ಎದೆಯು ದಣಿವನ್ನು ಹತ್ತಿಕ್ಕಿ ಅಂದಿನ ಕುಂದಿಲ್ಲದ ಸ್ನೇಹಲತೆಗೆ ಬೊಗಸೆ ತುಂಬ ಪ್ರೇಮವಾರಿಯನ್ನು ಸುರಿದಳು.

ಮಗುವಿನಾಗಮನ ಸಮಾಧಾನದ ಉಸಿರಾಡಿಸಿದರೂ ಮನಸ್ಸು ಮೌನವಾಗಿ ರೋದಿಸುವುದು.

ಅಧ್ಯಾಯ

೧೯

ಕಮಲೇಶ್ ಚಂದ್ರಕಾಂತನನ್ನು ಕೈ ಹಿಡಿದಾಗ ಯಾವ ಪ್ರತಿರೋಧವೂ ಇರಲಿಲ್ಲ. ಚಿತ್ರಸೇನನಿಂದ ಮೊದಲ್ಗೊಂಡು ಅವನ ಮನೆಯವರೆಲ್ಲರೂ ಮದುವೆಯಲ್ಲಿ ಪಾಲ್ಗೊಂಡರು. ಕಮಲೇಶ್ ಕರ್ವೆ ದಂಪತಿಗಳ ಕಾಲಿಗೆರಗುವಾಗ ಹೃದಯ ಸಂತಾಪದಿಂದ ಮಿಡಿಯಿತು. ಚಿತ್ರಸೇನ ಇಬ್ಬರಿಗೂ ಶುಭಾಶಯಗಳನ್ನರ್ಪಿಸಿ ಖಿನ್ನ ಮನಸ್ಕನಾಗಿ ಹೊರಹೋದ.

ಮದುವೆಗೆ ಪೂರ್ವಭಾವಿಯಾಗಿ ಯಾವ ಶರತ್ತುಗಳಾಗಲೀ ಮುಂದಣ ಜೀವನದ ಬಗ್ಗೆ ಯಾವುದೇ ಮಾತುಕತೆಯಾಗಲೀ ನಡೆಯದೆ ಎಲ್ಲವೂ ಸರಳ ರೂಪದಲ್ಲಿ ನಡೆಯಿತು. ಮದುವೆಯಾದೊಡನೆ ಉತ್ತರದ ಕಡೆ ಮಧುಚಂದ್ರಕ್ಕೆ ಹೊರಡಬೇಕೆಂಬ ತನ್ನ ಅತೀವ ಅಭಿಲಾಷೆಯನ್ನು ಚಂದ್ರಕಾಂತ್ ವ್ಯಕ್ತಪಡಿಸಿದಾಗ ಆನಂದಾತಿರೇಕದಿಂದ ಬಿರಿಯುವಂತಾದ. ಗಂಗೆಯಸ್ರವಾಹದಂತೆ ಉಕ್ಕುಕ್ಕಿ ಹರಿಯತೊಡಗಿತು ಎದೆಯ ಸಂತಸ. ಅಂದಿಂದಿನ ಹಸಿವೆಯನ್ನೆಲ್ಲಾ ಒಮ್ಮೆಲೇ ತೀರಿಸಿಕೊಳ್ಳಲಿರುವ ಮೃಗರಾಜನಂತೆ ತನ್ನ ಆಶಾಪೂರ್ಣ ಲೋಚನಗಳನ್ನು ಇನ್ನಷ್ಟು ಅರಳಿಸಿ-"ಏನು ಹೇಳುತ್ತೀರಿ ಡಾಕ್ಟರ್?"

ಅವನ ಮಿನುಮಿನುಗುವ ಕಣ್ಣುಗಳ ತೀಕ್ಷ್ಣನೋಟವನ್ನು ಎದುರಿಸಲಾರದೆ ನೋಟವನ್ನು ಬೇರೆಡೆಗೆ ಹರಿಸಿ ಸ್ವಲ್ಪ ಯೋಚಿಸಿದಳು. ಆ ಕ್ಷಣ ಮುಳ್ಳು ಮುರಿದಂತೆ ದೇಹದಾದ್ಯಂತ ವೈನವಿರೆದ್ದಿತು.

"ಡಾಕ್ಟರ್! ಕನಸು ಕಾಣುತಿದ್ದೀರೇನು?" ಚಂದ್ರಕಾಂತ್ ಕಿಲಕಿಲನಕ್ಕ.

"ಆಗಲೇ ನನ್ನ ರಜೆಯನ್ನೆಲ್ಲಾ ಚೇತನಾ ಮತ್ತು ಮದುವೆಗಳಿಗೆ ಉಪಯೋಗಿಸಿಕೊಂಡಾಗಿದೆ. ನಾನಿನ್ನು ರಜೆಗಾಗಿ ಬರೆದುಕೊಳ್ಳಲಾರೆ." ಎನ್ನುತ್ತ ಚಿಂತಿಸಿದಳು ಕಮಲೇಶ್. ಯೋಚನೆಯ ಸೆಲೆಯಲ್ಲಿ ಸಿಕ್ಕಿ ಮುಖ ಗಂಭೀರವಾಯಿತು.

"ಹಾಗೆಂದರಾದೀತೆ? ಸಂಬಳವಿಲ್ಲದ ರಜೆ ತೆಗೆದುಕೊಂಡರೂ ಸರಿಯೆ. ನನಗೇನೋ ಹೋಗಲೇಬೇಕೆನಿಸಿದೆ." ಅಶಾಂತ್ಯಷಿತ ಲೋಚನಗಳು ಇತ್ತಲೇ ನಿಟ್ಟಿಸಿದುವು.

"ಪದೇ ಪದೇ ರಜೆ ತೆಗೆದುಕೊಳ್ಳುವುದು ಸರಿಯಲ್ಲ, ನೀವೇ ಯೋಚಿಸಿ."

ಇಲ್ಲಿ ನೀವಾಯಿತು ಆ ಮಗುವಾಯಿತು! ಅದೆಲ್ಲಾ ನನಗಂತೂ ಸರಿ ಹೋಗುವುದಿಲ್ಲ!" ದನಿಯಲ್ಲಿ ಅಸಮಾಧಾನದ ಝರಿ ಜರ್ರನೆ ಹರಿದುಬಂತು.

ಕಮಲೇಶ್ ಒಮ್ಮೆಲೇ ಹೌಹಾರಿದಳು. ಹಿಂದೆಂದೂ ಅವನ ನುಡಿಯಲ್ಲಿ ಅಸಮಾಧಾನವನ್ನು ಕಂಡಿರಲಿಲ್ಲ. ಬಂಡೆದ್ದ ಯೋಚನೆಯಲೆಗಳು ತಟ್ಟನೆ ತಟಸ್ಥವಾದರೂ ಮೀನಿಗೆ ಕೈ ಹಚ್ಚುವುದರಿಂದ ನೀರು ಬಗ್ಗಡವಾಗುವಂತೆ ಮನಸ್ಸಾಗರವು ಕವಡಿ ಬಗ್ಗಡವಾಯಿತು. ಕ್ಷಣ ಕ್ಷಣಗಳು ಕರಗಿದುದಾಗಲೀ ನಿಮಿಷ ನಿಮಿಷಗಳು ಉರುಳಿದುದಾಗಲೀ ಗಮನಕ್ಕೆ ಬರಲಿಲ್ಲ. ಚಂದ್ರಕಾಂತ್ ಬೆನ್ನಿನಮೇಲೆ ಕೈಯಿಟ್ಟು ಸಸ್ನೇಹದಿಂದ ಅಂದ "ಚಹ ತಣ್ಣಗಾಗುತ್ತಿದೆ ಡಾಕ್ಟರ್!"

ಕಮಲೇಶ್ ಚಹವನ್ನು ಕೈಗೆ ತೆಗೆದುಕೊಂಡು ಗುಟುಕು ಗುಟುಕಾಗಿ ಹೀರತೊಡಗಿದಳು. ಮನಸ್ಸು ಭವಿಷ್ಯದ ಮಹಾಗರ್ಭವನ್ನು ಹೊಕ್ಕು ವಿಚಾರ ವೇದಿಕೆಯನ್ನೇರಿ ಅಂಡಲೆಯಹತ್ತಿತು. ಮಗುವಿನೊಡನೆ ಲಲ್ಲೆಗೈಯ್ಯುತ್ತಾ ಮಲಗಿದ್ದ ಸ್ವರ್ಣಮಾಲಿನಿ ಇನ್ನೂ ಎದ್ದಿರಲಿಲ್ಲ, ಚಹ ಹೀರುತ್ತಿದ್ದ ಕಮಲೇಶ್ ಕಣ್ಣುಗಳನ್ನು ಗಡಿಯಾರದ ಕಡೆ ಹೊರಳಿಸಿದಳು. ಹೊತ್ತು ನಾಲ್ಕರ ಅಂಚನ್ನು ತಬ್ಬುವುದರಲ್ಲಿತ್ತು. ಇನ್ನೇನು ಸಂಜೆಯ ಕಾರ್ಯಕ್ರಮ ಆರಂಭವಾಗುವ ಸಮಯ....ಇಷ್ಟರಲ್ಲೇ ಹೊರಡಬೇಕು.

ಕಿಟಕಿಯಿಂದ ನುಗ್ಗಿಬಂದ ತಂಗಾಳಿ ತಲೆಯ ಸುತ್ತ್ತೂ ಅಂಡಲೆಯುತಿದ್ದ ಅಲೆಗೂದಲನ್ನು ಮೆಲ್ಲಗೆ ಅಲುಗಿಸಿತು. ಇಳಿಬಿದ್ದ ಅಲೆಗೂದಲನ್ನು ಹಿಂದಕ್ಕೆ ತಳ್ಳುತ್ತಾ "ಹೀಗೆ ಒಮ್ಮಿಂದೊಮ್ಮೆಲೇ ಹೊರಡಬೇಕೆಂದರೆ ಹೇಗೆ? ಚೇತನಾ ನನ್ನನ್ನು ಬಿಟ್ಟು ಇರುವುದಿಲ್ಲ. ಅಲ್ಲದೆ ಊರು ಬಿಟ್ಟು ಹೋದರೆ ನನಗೆ ಹೋಟೆಲೂಟ ಸರಿ ಹೋಗುವುದಿಲ್ಲ."

ಚಂದ್ರಕಾಂತ್ ಮಾತಾಡಲಿಲ್ಲ. ಮುಖದಲ್ಲಿ ಬಿಗುಮಾನ ಎದ್ದು ತೋರಿತು....ಕಮಲೇಶ್ ಏನೂ ತಿಳಿಯದವಳಂತೆ ಬಸಿ ಬಟ್ಟಲುಗಳನ್ನು ಎತ್ತಿ

ಕೊಂಡು ಹೋಗುವ ನೆವದಲ್ಲಿ ಒಳಗಡೆ ಹೋದಳು. ಅವನ ಬಕಾಸುರ ಮನೋವೃತ್ತಿ ಹೂ ಮನಸ್ಸನ್ನು ಮುಳ್ಳಿನಂತೆ ಕುಕ್ಕುತ್ತಿದೆ. ಕಿಟಕಿಗೆದುರಾಗಿ ನಿಂತು ಎರಡೂ ಕೈಗಳಿಂದ ಕಿಟಕಿಯ ಸರಳುಗಳನ್ನು ಹಿಡಿದುಕೊಂಡು ಶೂನ್ಯ ಜಗತ್ತಿನಲ್ಲಿ ದಿಟ್ಟಿಯನ್ನು ನೆಟ್ಟು ಭಾವಾವಿಷ್ಟಳಾಗಿ ಸ್ವಲ್ಪಹೊತ್ತು ನಿಂತಳು.

ಚಂದ್ರಕಾಂತನನ್ನು ಬಹುಕಾಲದಿಂದ ಕಂಡಿದ್ದರೂ ಒಡನಾಡಿದ್ದರೂ ಅವನಲ್ಲಿ ಇಷ್ಟೊಂದು ಕಾಮುಕತೆ ಇದೆ ಎಂಬುದರ ಅರಿವಾಗಿರಲಿಲ್ಲ. ಅವನ ಹಸಿವು ಎಂದೆಂದೂ ಹಿಂಗದ ಹಸಿವಾಗಿ ತೋರಿ ಹೃದಯಾದ್ರಿಯ ಕಾಂತಾರ ದಲ್ಲಿ ಯಾವುದೋ ಅವ್ಯಕ್ತ ಭಯ ಕಿಚ್ಚಿನ ಕಿಡಿಯಂತೆ ಉದಿಸಿತು. ದೂರ ನೆಲೆಯಲ್ಲಿ ಹರಿದಾಡುತಿದ್ದ ಕಣ್ಣುಗಳು ತಾವಾಗಿ ಮುಚ್ಚಿಕೊಂಡುವು. ಒಂದು ಘಳಿಗೆ, ಒಂದೇ ಒಂದು ಘಳಿಗೆ ನಿರಾತಂಕವಾಗಿ ಉರುಳಿತು. ಮನದಲೆಯಲ್ಲಿ ಚೇತನಾ ತೇಲಿ ಬಂದಳು....ಹೆತ್ತ ಹೆಣ್ಣು ಮಗುವನ್ನು ನಿರ್ಲಕ್ಷಿಸಿ ಗರ್ಭಸ್ಥ ಶಿಶುವಿನೊಂದಿಗೆ ಪತಿಗಾಗಿ ಜೀವ ತೆತ್ತ ಅವಳ ಬಗೆಗೆ ಏನೆನ್ನಬೇಕು ? ಕೋಮ ಲವೋ ಕಾಠಿಣ್ಯವೊ ?....ತನ್ನವರೆಲ್ಲಾ ದೂರವಾಗಿದ್ದು ಮಗುವಿನ ಭಾರವನ್ನು ಹೊರುವವರಾರೂ ಇಲ್ಲದಿರುವಾಗಲೂ ಪ್ರಾಣ ಕಳೆದುಕೊಳ್ಳಲು ಮನಸ್ಸು ಬಂದುದಾದರೂ ಹೇಗೆ? ಆಳವಾಗಿ ಯೋಚಿಸದೆ ಅವಸರದ ಕ್ರಮ ಕೈಕೊಂ ಡುದುದು ತಪ್ಪಲ್ಲವೆ? ಆದರೆ....ಅವಳಿಗೆ ಪತಿಯಲ್ಲಿ ಎಂಥ ಅಗಾಧವಾದ ಪ್ರೇಮವಿತ್ತು? ಜಗತ್ತನ್ನು ಬಿಟ್ಟು ಪತಿಯನ್ನು ಹಿಂಬಾಲಿಸುವುದು ಏನೇನೂ ದೊಡ್ಡದಲ್ಲ. ಅಕಳಂಕ-ನಿರಪರಾಧಿ-ಮುಗ್ಧ-ಅಮಾಯಕ-ಶಿಶುಗಳು....?

"ಮಕ್ಕಳಿಗಿಂತ ನಿಶ್ಚಲವಾದ ಪ್ರೇಮ ಹಿರಿದಲ್ಲವೇ ಯೋಚಿಸಿ ನೋಡು ಕಮಲೇಶ್."

ಹಾ....ಹಾಗೆಂದವರಾರು ?....ದನಿ ಚೇತನಳದು. ಹಾ ! ಎಲ್ಲಿದ್ದೀ ಚೇತನಾ ?

"ಕಮಲೇಶ್ ! ...ನಾನಿರುವುದು ಇಲ್ಲೇ....ನಿನ್ನಲ್ಲೇ."

"ನಿನ್ನ ಕ್ರಮ ಸರಿಯಲ್ಲ ಚೇತನಾ !"

"ಹಾಯ್ ! ಇಂದೂ ಈಗಲೂ ನೀನು ಪ್ರೇಮವೇನೆಂಬುದನ್ನು ಅರ್ಥ ಮಾಡಿಕೊಳ್ಳದಿರುವುದು ನಿಜವಾಗಿಯೂ ಆಶ್ಚರ್ಯ ಕಮಲೇಶ್ !"

"ನೀನು ಧನ್ಯೆ !"

"ಹಿಹ್ಹಿಹ್ಹೀ!"

ಅವಳ ಕಿಲಕಿಲ ನಗುವಿನ ಲಹರಿ ಅಮೃತ ಲಹರಿಯಂತೆ ಹರಿದುಬಂತು. ದನಿಯ ಮಾಧುರ್ಯ ಮಾಯೆಯಂತೆ ಮನವನ್ನು ಮುಸುಗಿತು. ಕಮಲೇಶ್ ಮರವಟ್ಟು ನಿಂತಳು, ಭುಜದ ಮೇಲೆ ಇದ್ದಕ್ಕಿದ್ದಂತೆ ಭಾರವಾಯಿತು. ಹಾ! ಅದಾರು ಚೇತನಳೇ?....ಕಮಲೇಶ್ ತಟ್ಟನೆ ತಿರುಗಿದಳು. ನೋಡಿ, ಬಳಿಯಲ್ಲಿ ನಿಂತು ಭುಜದ ಮೇಲೆ ಕೈಯಿಟ್ಟವಳು ಚೇತನಳಲ್ಲ, ಡಾ|| ಚಂದ್ರಕಾಂತ್. ಅಧರಗಳಲ್ಲಿ ಮೃದುಹಾಸ ಬೀರಿದಳು. ಅವಳ ಭುಜವನ್ನು ಮೃದುವಾಗಿ ಅದುಮಿ ಹಿಡಿದು "ಅದೇಕೆ ಇಲ್ಲಿ ನಿಂತುಬಿಟ್ಟಿರಿ ಡಾಕ್ಟರಾಣಿ?" ಎಂದ ಹಸನಾದ ಪ್ರತಿಹಾಸ ಬೀರಿ.

"ಸುಮ್ಮನೆ."

ನಿದ್ದೆ ತಿಳಿದೆದ್ದ ಚೇತನಾ ಅಲ್ಲಿಗೆ ಬಂದು ಕಣ್ಣುಜ್ಜಿಕೊಳ್ಳುತ್ತಾ ಕಮಲೇಶಳ ನಿರಿಯನ್ನು ತಬ್ಬಿ ಹಿಡಿದುಕೊಂಡು "ಮಾ" ಎಂದಳು. ಎಳೆಯ ದನಿಯಲ್ಲಿ ಮನಮೋಹಕವಾದ ಮಾಧುರ್ಯ ಹರಿದುಬಂತು.

ಕಮಲೇಶ್ ಮಗುವನ್ನು ಎದೆಗೆತ್ತಿಕೊಂಡು–"ಏನು ಮಗೂ?"

ಆ ವೇಳೆಗೆ ಚಂದ್ರಕಾಂತ್ ಹೊರ ಹೋದ. ಕಮಲೇಶ್ ಉದ್ವಿಗ್ನತೆಯಿಂದ ಅವನು ನಿರ್ಗಮಿಸುವುದನ್ನೇ ನಿಟ್ಟಿಸಿದಳು. 'ಹಾ!' ಎಂದೊರಲಿತು ಎದೆಯ ಹಕ್ಕಿ....ಮಗು ಬಂದಾಕ್ಷಣ ಆಗುವುದೇನು? ಹಾಗೆ ಹೊರಹೋಗಬೇಕೇಕೆ? ಡಾಕ್ಟರಾಗಿಯೂ ಅನಾಥ ಮುಗ್ಧ ಮಗುವಿನ ಮೇಲೆ ಸ್ವಲ್ಪವಾದರೂ ಪ್ರೀತಿ ಇಲ್ಲವಲ್ಲಾ? ಮುಂದೇನು ಗತಿ?....ನಾನು ಭಯಸಿದ್ದು ಅಮೃತ ಕುಂಭ. ಭಗವಂತ ಏನು ನೀಡಿದ್ದಾನೋ....ವಿಧಾತ ನನ್ನ ಹಣೆಯಲ್ಲಿ ಇನ್ನೇನು ಬರೆದಿದ್ದಾನೋ....

ಎದೆಯಾಳದಿಂದ ಭಾರವಾದ ನಿಟ್ಟುಸಿರೊಂದು ಹೊರಹೊಮ್ಮಿತು. ಅದೇ ವಿಚಾರವನ್ನು ಮೆಲ್ಲುತ್ತಾ ಕಮಲೇಶ್ ಮಗುವಿನ ಮುಖವನ್ನು ತೊಳೆಸುವಷ್ಟರಲ್ಲಿ ಸ್ವರ್ಣಮಾಲಿನಿ ಅಲ್ಲಿಗೆ ಬಂದಳು. ಮಗುವಿನೊಂದಿಗೆ ಲಲ್ಲೆಗೈಯ್ಯುತ್ತಾ ತಾಯಿಯೊಂದಿಗೆ ನುಡಿದಳು ಕಮಲೇಶ್. "ಹರೀಶ್ ಚೇತನರ ಸೊತ್ತನ್ನು ಮಾರಿ ಹಣವನ್ನು ಬ್ಯಾಂಕಿನಲ್ಲಿಡುವೆ. ಮುಂದೆ ಮಗು ಆರ್ಥಿಕ ಸ್ಥಗಿತದಲ್ಲಿ ಬಳಲಬಾರದು."

"ಹಾಗೇ ಮಾಡು ಮಗೂ."

ಆತ್ಮಾರಾಂ ಕರ್ವೆ ದಂಪತಿಗಳು ಆಗಮಿಸಿದರು. ಮುಖ ಮುದ್ರೆಯಲ್ಲಿ ಸಂತಸದ ನೆಲೆಯಿತ್ತು. ತುಟಿಗಳಲ್ಲಿ ಮಂದಹಾಸವನ್ನು ಚೆಲ್ಲುತ್ತಾ ಬಂದ ಅವರನ್ನು ಕಮಲೇಶ್ ಸಂತೋಷದಿಂದ ಸ್ವಾಗತಿಸಿದಳು "ಪ್ರಣಾಮ್ ಮಾಮಾ!"

"ಬನ್ನಿ...."

ಆತ್ಮಾರಾಂ ಕರ್ವೆ ಎರಡೂ ಕೈಗಳನ್ನು ನೀಡಿ ಮಗುವನ್ನು ಎದೆಗೆತ್ತಿಕೊಂಡು ಮುದ್ದಾಡಿದರು. ಮಗು ಕೈಯಿಂದ ಕೈಗೆ ಚಲಿಸಿ ಪ್ರೇಮದ ಸವಿಯನ್ನು ಸವಿಯಿತು.

"ಚಿತ್ರಸೇನನಿಗೆ ಮದುವೆ ನಿಶ್ಚಯವಾಯಿತು!" ಮೈಯೆಲ್ಲಾ ಸಂತಸದ ಬೀಡಾಗಿ ಬಿತ್ತರಿಸಿದಳು ಹೇಮರತಿ ಕರ್ವೆ.

ಅವರು ಕನ್ಯಾರ್ಥಿಗಳಾಗಿ ಕಲಿಕತ್ತೆಗೆ ಹೋಗಿ ಒಂದು ವಾರವಾಗಿತ್ತು. ಇಷ್ಟು ಬೇಗನೆ ಅನುರೂಪಳಾದ ಹೆಣ್ಣು ದೊರಕಿಯಾಳೆಂಬುದು ಊಹೆಗೂ ನಿಲುಕದ ವಿಷಯ. ಹುಬ್ಬೆತ್ತಿ ಕೇಳಿದಳು ಸ್ವರ್ಣಮಾಲಿನಿ "ಎಲ್ಲಿಯ ಹೆಣ್ಣು....? ಹೇಗಿದ್ದಾಳೆ ಹುಡುಗಿ?"

ಸರ್ವೇಸಾಮಾನ್ಯವಾಗಿ ಎಲ್ಲಾ ಆಪ್ತರೂ ಕೇಳುವ ಪ್ರಶ್ನೆಯನ್ನೇ ಕೇಳಿದಳು ಸ್ವರ್ಣಮಾಲಿನಿ. ಅದಕ್ಕೇನುತ್ತರ ಬರುವುದೋ ಎಂದು ಕುತೂಹಲ ಭರಿತಳಾಗಿ ನಿಟ್ಟಿಸಿದಳು ಕಮಲೇಶ್....ತಾನಂತೂ ಒಲಿಯಲಾಗಲಿಲ್ಲ. ಬರುವ ಹೆಣ್ಣಾದರೂ ಅನುರೂಪಳಾಗಿರಲಿ ಎಂದು ಪೂರ್ಣಲಕ್ಷ್ಯದಿಂದ ಹಾರೈಸಿತು ಮಾನಸಪಕ್ಷಿ.

ಹೇಮರತಿ ಕರ್ವೆ ಆನಂದಭರಿತಳಾಗಿ ಉತ್ಸುಕತೆಯಿಂದ ವಿಷಯವನ್ನು ಮುಂದಿಟ್ಟಳು- "ಹುಡುಗಿ ಕಲಿಕತ್ತೆಯ ಉದ್ದಿಮೆದಾರರ ಮಗಳು. ಹೆಸರು ಮಾಲತಿ. ಮೊದಲನೆಯ ವರ್ಷದ ಎಂ.ಎಸ್‌ಸಿ.. ಪರೀಕ್ಷೆಯಲ್ಲಿ ಓದುತ್ತಿದ್ದಾಳೆ ಶ್ರಾವಣ ಮಾಸದಲ್ಲಿ ಕಲಿಕತ್ತೆಯಲ್ಲೇ ಮದುವೆ. ಅನಂತರ ಇನ್ನೊಂದು ವರ್ಷದ ಓದನ್ನು ಅಲ್ಲೇ ಮುಗಿಸಿ ಸೊಸೆ ಇಲ್ಲಿಗೆ ಬರುತ್ತಾಳೆ. ಹುಡುಗಿ ಚಿತ್ರಸೇನನಿಗೆ ಅನುರೂಪಳಾದ ಹೆಣ್ಣು. ಒಳ್ಳೆಯ ಹೆಣ್ಣು ದೊರೆಯುತ್ತೋ ಇಲ್ಲವೋ ಎಂಬ ಯೋಚನೆಯಾಗಿತ್ತು. ಈಗ ತುಂಬ ಸಮಾಧಾನ. ದೇವರು ದೊಡ್ಡವನು."

"ತುಂಬ ಸಂತೋಷ. ಚಿತ್ರಸೇನ್ ಬಂಗಾರದಂತಹ ಹುಡುಗ." ಎಂದಳು ಸ್ವರ್ಣಮಾಲಿನಿ.

ಕಮಲೇಶಳ ಎದೆಯಾಳಕ್ಕೆ ನುಡಿ ಜರ್ರನೆ ಇಳಿದು ಒಂದೆರಡು ಕ್ಷಣ ತನು ತತ್ತರಿಸಿತು. ಮರುಕ್ಷಣದಲ್ಲಿ ಸಾವರಿಸಿಕೊಂಡು ಮಾತುಕತೆಯ ಸವಿಯಲ್ಲಿ ಪಾಲ್ಗೊಂಡಳು. ಆತ್ಮೀಯತೆಯ ನೆಲೆಯಲ್ಲಿ ನಿಶ್ಚಲ ಸ್ನೇಹ ಸರಸ ಧಾರೆ ಸುಗ್ಗಿಯ ಕಣವನ್ನು ನಿರ್ಮಿಸಿದರೂ ಚಂದ್ರಕಾಂತ್ ಹೊರ ಹಣುಕಲಿಲ್ಲ. ಕಮಲೇಶ್ ಹೋಗಿ ಕರೆದಾಗ "ಇದೊಂದಿಷ್ಟು ಓದಿ ಮುಗಿಸುವುದಿದೆ. ನೀವೇ ಮುಗಿಸಿ ಬಿಡಿ." ಎಂದ.

ಆತ್ಮಾರಾಂ ಕರ್ವೆ ಮಗುವನ್ನು ತೊಡೆಯಮೇಲೆ ಕೂರಿಸಿಕೊಂಡು "ಮಗುವನ್ನು ನಿನ್ನ ಉಡಿಗೆ ಹಾಕಲೆಂದೇ ಅವರಿಗೆ ಬೆಂಗಳೂರಿಗೆ ವರ್ಗವಾಗಿದೆ. ನೋಡು, ಭಗವಂತ ಸಮಯ ಸಂದರ್ಭಗಳಲ್ಲಿ ಹೇಗೆ ಸಹಾಯ ಮಾಡುತ್ತಾನೆ!"

"ನಿಜ, ಮಾಮಾ." ಎಂದಳು ದನಿ ಭಾರವಾಗಿತ್ತು.

ಆತಿಥೇಯಳ ಆತಿಥ್ಯಾನಂತರ ಅತಿಥಿಗಳು ಹೊರಟರು.

ಅವರ ಬಾಳ್ಮಂಟಪದಲ್ಲಿ ತಮ್ಮಿಂದಲೇ ಉರಿಯಬೇಕಾಗಿದ್ದ ಸೊಡರು ಉರಿಯಲೊಲ್ಲದಾಗ ಸ್ವರ್ಣಮಾಲಿನಿ ಎಷ್ಟು ನೊಂದುಕೊಂಡಿದ್ದಳೋ.... ಅಷ್ಟೇ ಪರಿತಾಪದಿಂದ ಹಿರಿಯ ನಿಟ್ಟುಸಿರೊಡನೆ ಎದೆಯ ಹಾರೈಕೆಯನ್ನು ಹೊರತಂದಿದ್ದಳು. "ಹೋಗಲಿ, ನಮ್ಮಿಂದಂತೂ ದೀಪ ಉರಿಯಲಿಲ್ಲ. ಬರುವ ಸೊಸೆಯಾದರೂ ಅವರಿಗೆ ಅನುರೂಪಳಾಗಿದ್ದು ಮನೆ ಬೆಳಗುವಂತಾಗಲಿ...."

ಈಗ ಅದೇತಾನೇ ಅವರಿಂದ ಸಂತಸದ ಸುದ್ದಿ ಕರ್ಣಾನಂದಕರವಾಗಿ ತಿಳಿದು ಬಂದಮೇಲೆ ಕಣ್ಣು ಮುಖಗಳಲ್ಲಿ ಸಮಾಧಾನದ ತೆರೆ ಲಾಸ್ಯವಾಡಿತು. ಕಾಣದ ಜಗಜ್ಜನನಿಗೆ ಕೈಮುಗಿದು ಪೂರ್ಣ ಶುಭಕ್ಕಾಗಿ ಪ್ರಾರ್ಥನೆ ಸಲ್ಲಿಸಿದಳು ಸ್ವರ್ಣಮಾಲಿನಿ.

ಕಮಲೇಶ್ ಚೇತನಳ ಹಳೆಯ ಕಾಗದಗಳನ್ನು ತಡುಕಿ ನೋಡಿದರೆ ಮರುದಿನವೇ ವಿಮಲ ವಂಶ ಸಂಭೂತಳಾದ ಚೇತನಳ ಹುಟ್ಟುಹಬ್ಬ. ಮೂರು ವರ್ಷ ತುಂಬಿ ನಾಲ್ಕನೆಯ ವರ್ಷಕ್ಕೆ ಕಾಲಿಡಲಿದ್ದುದನ್ನು ಅರಿತು ಹೃದಯ ಬಿರಿಯುವಷ್ಟು ಸಂತಸ ತುಂಬಿ ಬಂತು. ಚಂದ್ರಕಾಂತನೊಂದಿಗೆ ಆಸ್ಪತ್ರೆಗೆ

ಹೆಜ್ಜೆ ಹಾಕುವ ಬದಲು ಕೊಳ್ಳಬೇಕಾದ್ದನ್ನು ಕೊಳ್ಳಲು ಬಜಾರಿಗೆ ಹೊರಟಳು ಪ್ರೇಮೋನ್ಮತ್ತಳಾದ ಆ ಲಲನೆ.

ಆ ಕೂಡಲೆ ಚಂದ್ರಮಂಡಲದ ಮೇಲೆ ಇದ್ದಕ್ಕಿದ್ದಂತೆ ಕಾಳಮೇಘ ಕವಿಯಿತು.

ಮಗುವಿನ ಅಮ್ಮೂರಿಯು ಹುಟ್ಟು ಹಬ್ಬವನ್ನಾಚರಿಸಿ ಗೆಳೆಯರ ಸ್ನೇಹದ ಸವಿಯನ್ನು ಸವಿಯುವಾಗ ಚೇತನಳ ನೆನಪು ಒಂದಲ್ಲ, ಹತ್ತಲ್ಲ, ನೂರಲ್ಲ, ಸಾವಿರಾರು ಬಾರಿ ಮೂಡಿ ಬಂತು. ಸುಖ ದುಃಖಗಳ ಒಕ್ಕೂಟದಲ್ಲಿ ಹೃದಯ ದಣಿದರೂ ಮೈ ಉಲ್ಲಸಿತವಾಗಿತ್ತು. ಪುಟ್ಟ ಚೇತನಾ ಕೈಯಿಂದ ಕೈಗೆ ಮೈಯಿಂದ ಮೈಗೆ ಚಲಿಸಿ ಹಾಲ್ಗಲ್ಲದ ಮೇಲೆ ತಿಳಿನಗೆಯನ್ನು ಸೂಸಿ ಅತಿಥಿಗಳ ಕೂಟದಲ್ಲಿ ತನ್ನ 'ಅಮ್ಮ'ನಿಗಾಗಿ ತಡುಕಿ ಸೋತು ಮೆಲ್ಲನೆ ಸೊಲ್ಲೆತ್ತಿದಳು "ಅಮ್ಮ....ಅಮ್ಮ!"

ಪರಂತು,

ಪರಲೋಕದಲ್ಲಿರುವ "ಅಮ್ಮ" ಓಗೊಡಲಿಲ್ಲ.

ಒಂದೆರಡು ದಿನಗಳಲ್ಲಿ ಚಂದ್ರಕಾಂತನೊಂದಿಗೆ ಮಧುಚಂದ್ರಕ್ಕೆ ಹೊರಡಲು ಸಿದ್ಧರಿಸಿದಾಗ ಕಮಲೇಶಳಿಗೆ ಕಸಿವಿಸಿ ಮೂಡದಿರಲಿಲ್ಲ. ಹೊರಡುವ ಮುನ್ನ ಮನೆಯ ಕಡೆ ವ್ಯವಸ್ಥೆಗೊಳಿಸುವ ಆವಶ್ಯಕತೆ ಬಹಳವಾಗಿತ್ತು. ಚೇತನಾ "ನೀಲಿ ಮಗು" ಅವಳಿಗೆ ಯಾವುದೇ ಸಣ್ಣ ಕಾರಣಕ್ಕೂ ಜ್ವರ ನೆಗಡಿ ಇತ್ಯಾದಿಗಳು ಬಾಧಿಸುವುದುಂಟು. ಅವಳ ಸೂಕ್ಷ್ಮ ದೇಹಪ್ರಕೃತಿಯನ್ನು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳುವುದಿದೆ. ಆ ವಿಚಾರಗಳು ಸ್ವರ್ಣಮಾಲಿನಿಗೆ ತಿಳಿದಿದ್ದರೂ ಮನಸ್ಸಿಗಿಷ್ಟು ಕಳವಳ. ಮಕ್ಕಳ ಚಿಕಿತ್ಸಾ ತಜ್ಞರುಗಳಾದ ಡಾ|| ಯಶಪಾಲ್ ಡಾ|| ಶುದ್ಧೋಧನರಿಗೆ ಹೇಳಿತ್ತಾಸಿಲ್ಲದ ಸಮಯದಲ್ಲಿ ಮಗುವನ್ನು ನೋಡಿಕೊಳ್ಳುವ ಏರ್ಪಾಡು ಮಾಡುವುದಿತ್ತು. ಎಲ್ಲವೂ ಸುವ್ಯವಸ್ಥೆಗೊಂಡಮೇಲೆ ಪಯಣಸನ್ನದ್ಧಳಾಗಿ ನಿಂತ ಕಮಲೇಶಳನ್ನು ದಿನನಿತ್ಯದಂತೆ ಆಸ್ಪತ್ರೆಗೆ ಹೋಗಬಹುದೆಂದು ಭಾವಿಸಿದ ಮಗು ವಿಶೇಷವೆನಿಸದಿದ್ದರೂ ಎರಡೂ ಕೈಗಳಿಂದ ಕೊರಳನ್ನು ತಬ್ಬಿ ಹಿಡಿ

ಯಿತು.

ಹೇಮರತಿ ಕರ್ವೆ ಮನೆಯ ಕಡೆ ನೋಡಿಕೊಳ್ಳುವುದಾಗಿ ಹೃತ್ಪೂರ್ವಕವಾದ ಆಶ್ವಾಸನೆ ನೀಡಿದ್ದಳು. ಆ ಅಮೃತೋಪಮ ನುಡಿಗಳು ನೀಡಬಹುದಾದಷ್ಟು ಸಮಾಧಾನ ಇನ್ನಾವುದರಲ್ಲಿಯೂ ಬರಲಾರದೇನೋ....ಅಪಾರವಾದ ಸಹನೆ-ದಯೆ-ಸ್ನೇಹಗಳಿಗೆ ಏಕೈಕ ಭೂಮಿಕೆಯನ್ನು ಪಡೆದ ವ್ಯೋಮೋನ್ನತವಾದ ಆ ಮಾತೃಪದದ ಮುಂದೆ ಪ್ರಯತ್ನಿಸಿದರೂ ಕಣ್ಣೆತ್ತಿ ನೋಡುವುದು ಸಹ ಈಗ ಲಜ್ಜೆಯೆನಿಸುತ್ತದೆ. ಹೇಗೆ ಕೃತಜ್ಞತೆಯನ್ನು ಸಲ್ಲಿಸಬೇಕೋ ಹೊಳೆಯದು. ಯಾವ ಮಾತುಗಳ ಮುತ್ತನ್ನು ಚೆಲ್ಲಬೇಕೋ ತೋರದು. ಪ್ರಯಾಣ ಕಾಲದಲ್ಲಿ ಕಾಲ್ಮುಟ್ಟಿ ನಮಸ್ಕರಿಸಬಹುದಾದ ಅವಕಾಶ ದೊರಕಿದುದರಿಂದ ಆ ಸುಮುಹೂರ್ತವನ್ನು ಮನಃಪೂರ್ವಕವಾಗಿ ಉಪಯೋಗಿಸಿಕೊಂಡಳು ಕಮಲೇಶ್.

ಮುರಳೀಧರ ದಲ್ವಾಡಿ ದಂಪತಿಗಳು ತಂಗಿಯ ಧಾರಾಮುಹೂರ್ತಕ್ಕೆ ಬಂದಿರಲಿಲ್ಲ. ಚಂದ್ರಮುಖಿ ತನ್ನ ಸಂಸಾರ ಸಹಿತ ಆಗಮಿಸಿದರೂ ಸಂತೋಷ ದಾರಿದ್ರ್ಯವಿತ್ತು. ಸತ್ಯಭಾಮೆಗೆ ಇಲ್ಲಿಯ ತನಕ ಬಂದು ಅಕ್ಕಿಕಾಳು ತಳೆಯಬೇಕೆಂಬ ಉತ್ಸಾಹದಿಂದ ಕೂಡಿದ್ದರೂ ತನ್ನ ಅಸಹಾಯಕತೆಯನ್ನು ನೂರು ವಿಧದಲ್ಲಿ ಕರಿಯ ಅಕ್ಷರಗಳಿಂದ ತೋಡಿಕೊಂಡಿದ್ದಳು. ಕಂಬನಿಯ ಕಾಣಿಕೆಯಿಂದ ಕಾಗದ ತೊಯ್ದಿತ್ತು. ಈಚೆಗೆ ಶ್ರೀಧರ ದಲ್ವಾಡಿ ಬರ್ಮಾ ಹೆಣ್ಣಿನ ಸಂಸರ್ಗದಿಂದ ಬರ್ಮ ದೇಶಕ್ಕೆ ಹೋದನೆಂಬ ವದಂತಿ. ಹೋದರೆ ಹೋಗಲಿ, ಒಂದು ಕಾಗದ ಬರೆಯ ಬಾರದೇ? ಅಥವಾ ಒಮ್ಮೆ ಬಂದು ಮುಖ ತೋರಿಸಿ ಹೋಗಬಾರದೇ? ಇನ್ನಾರಿಗಲ್ಲದಿದ್ದರೂ ತಾಯಿಗಾಗಿ ಅಷ್ಟೂ ಬೇಡವೇ? ಎಂಬುದು ಹಿರಿಯ ಕೊರತೆ....

ತನ್ನ ಸುತ್ತಮುತ್ತಿನ ಅಸಂತೋಷವನ್ನೆಲ್ಲಾ ಹೀರಿಕೊಂಡು ಆತ್ಮೀಯ ಗೆಳತಿ ಹೇಮರತಿಯ ಮುಂದೆ ಹರಿಯಬಿಟ್ಟು ತನ್ನ ಹೃದಯವನ್ನು ಹಗುರ ಮಾಡಿಕೊಳ್ಳುವಳು ಸ್ವರ್ಣಮಾಲಿನಿ.

ಎರಡು ವಾರಗಳ ಮಧುಚಂದ್ರ ಅಷ್ಟೇನೂ ಹೆಚ್ಚಲ್ಲ ಎಂದುಕೊಂಡಿದ್ದ ಕಮಲೇಶಳಿಗೆ ತನ್ನ ಗ್ರಹಿಕೆ ತಪ್ಪು ಎಂಬುದನ್ನರಿಯಲು ಬಹಳ ಕಾಲ ಬೇಕಾಗಲಿಲ್ಲ. ಅನಂತರ ಅಂಕೆಯನ್ನು ತಿದ್ದಿ ಇನ್ನೂ ನಾಲ್ಕು ವಾರಗಳ ರಜೆಯನ್ನು

ಪಡೆದಿದ್ದ ಚಂದ್ರಕಾಂತ್. ರಜೆ ಮಂಜೂರಾಗಿ ಬಂದಮೇಲೆ ಪೆಚ್ಚಾದಳು ಕಮಲೇಶ್. ಚಿದಾಕಾಶವು ಸಂಭ್ರಾಂತವಾಯಿತು. ಸಖೇದಾಶ್ಚರ್ಯಗಳ ವಶೀಭೂತಳಾಗಿ ಕೇಳಿದಳು-"ಇದೇನು ಡಾಕ್ಟರ್ ?"

ಚಂದ್ರಕಾಂತ್ ತುಂಟನಗೆ ಬೀರಿ ಮೈಯೆಲ್ಲಾ ಉಲ್ಲಸಿತನಾಗಿ ಉದ್ಗರಿಸಿದ "ಅನುಗಾಲವೂ ದುಡಿತ ಯಾರಿಗೂ ಸಲ್ಲ ಡಾಕ್ಟರ್. ಪ್ರತಿಯೊಬ್ಬರಿಗೂ ಮನರಂಜನೆ ಬೇಕೇ ಬೇಕು. ನಾವು ಅಂದಿನಿಂದ ಇಂದಿನವರೆವಿಗೆ ಎಂದೂ ರಜೆ ತೆಗೆದುಕೊಳ್ಳಲಿಲ್ಲ. ಈಗೊಂದೆರಡು ತಿಂಗಳು ರಜೆ ತೆಗೆದುಕೊಂಡಾಕ್ಷಣ ಅದರಿಂದ ಯಾರಿಗೂ ನಷ್ಟವಿಲ್ಲ....ಯಾವ ಬಾಧಕವೂ ಇಲ್ಲ."

ಕಮಲೇಶಳಿಗೆ ಏನೆನ್ನಬೇಕೋ ಹೊಳೆಯಲಿಲ್ಲ. ಹೃದಯ ಬೇಗುದಿಯಲ್ಲಿ ಬೇಯತೊಡಗಿತು. ಸಾಮಾನ್ಯ ಹೆಣ್ಣಿನಂತೆ ಮೈಯ್ಯ ತೃಷೆಗೆ ಬಲಿಯಾಗಲು ಹೇಸಿತು ಮನಸ್ಸು....ಜೀವನಾರಣ್ಯದ ಮಹಾಯಾತ್ರೆಯಲ್ಲಿ, ಹಸುರು ಹೊಮ್ಮುವ ಸಾನು ಪ್ರದೇಶಗಳಲ್ಲಿ ಪಲ್ಲವಿತ ವನಸುಮ ಸಮುಚ್ಚಯಗಳ ತಿಳಿಗಂಪನ್ನು ಹೀರುವುದಷ್ಟೇ ಅಲ್ಲ, ಮುಳ್ಳು ಕಲ್ಲುಗಳ ಮಾರ್ಗಾನುಕ್ರಮಣವೂ ಉಂಟು ಎಂಬುದನ್ನು ಅವಳು ಬಲ್ಲವಳಾದರೂ ಇಂದೇ ಈಗಲೇ ಮುಳ್ಳು ತುಳಿಯಬೇಕೇ? ಎಂಬುವ ಮಹಾಪ್ರಶ್ನೆ ಮನವನ್ನು ಹಿಂಡುತ್ತದೆ. ಎದೆಯನ್ನು ಗಾಣಕ್ಕೆ ಕೊಡುತ್ತದೆ....ಆದರೂ ಆತನ ನಿರ್ಲಜ್ಜ ನಡತೆಯೊಂದಿಗೆ ಸಾಹಸವನ್ನೂ ಕಂಡು ಬೆರಗಾಗುತ್ತದೆ ಮನಸ್ಸು.

....ನಡೆಸುವವ ಬೇರೆ ಇರುವಾಗ ಮತ್ತೇಕೆ ದುಃಖ?

....ಜೀವನದ ಪ್ರಥಮ ಸೂರ್ಯೋದಯದಲ್ಲೇ ಮನಸ್ಸು ಮುಜುಗರವಾಗಬಾರದು. ಏನೇ ಇರಲಿ, ಈ ಜೀವನಧರ್ಮಕ್ಕಾಗಿಯಾದರೂ ಹಣೆ ಮಣಿಯಲೇಬೇಕು ...ಎಂದು ಹೃದಯ ಬನದ ಹಕ್ಕಿ ಸ್ಪಷ್ಟವಾಗಿ ಉಲಿಯುತ್ತದೆ....

ಪಯಣ ಸಾಗಿತು. ಹತ್ತಾರು ದಿನಗಳುರುಳಿದುವು. ಎಷ್ಟೇ ಪ್ರಯತ್ನಪಟ್ಟರೂ ಅವನ ಸಂತಸದಾಗಸದಲ್ಲಿ ತಾನು ಕೇವಲ ಪಕ್ಷಿಯಾಗಿ ವಿಹರಿಸಲಾರೆ. ....ಮೆಡಿಕಲ್ ಕಾಲೇಜಿಗೆ ಸೇರಿದಾಗಿನಿಂದ ಅವನನ್ನು ಕಂಡಿದ್ದಾಗಿದೆ. ಸ್ನೇಹ ಬೆಳಸಿಕೊಂಡಿದ್ದಾಗಿದೆ. ಆದರೂ ಅವನ ಆಳವನ್ನು ಕಂಡುಕೊಳ್ಳಲಾಗಲಿಲ್ಲ. ಆ ಆಶಾಗೋಪುರದೆತ್ತರವನ್ನು ಏರಲಾಗಲಿಲ್ಲ....ತೀರ ಮುಳುಗಿದವರು ಮೇಲೇರಲು ಸರ್ವ ಸಹಸಾ ಹೆಣಗಾಡಿ ಪ್ರಯತ್ನಿಸುವಂತೆ ಆಳಕ್ಕಿಳಿದರೂ ಮೇಲೇ

ರುವ ಜಾಡನ್ನು ಅರಸಲೇಬೇಕಾಗಿದೆ. ಅವಾಸ್ತವಿಕತೆಯೊಡನೆ ಸಂಧಿ ಮಾಡಿಕೊಂಡರೂ ಚಾರಿತ್ರಿಕ ಔನ್ನತ್ಯ ಪಡೆಯುವುದು ಲೇಸು........ಎನ್ನುತ್ತದೆ ಪ್ರಾಣಪಕ್ಷಿ.

ಈಸಬೇಕು ; ಇದ್ದು ಜೈಸಬೇಕು.

ಯುಗಯುಗಯುಗಾಂತರಗಳಲ್ಲೂ ಬುದ್ಧಿಜೀವಿಗಳನ್ನು ಎಚ್ಚರಿಸುವ ದುಂದುಭಿಯಂತೆ ದಾಸ ಮಹಾಶಯರು ಹಾಡಿದ್ದಾರೆ. ನಿಜ, ಈಸಬೇಕು ; ಇದ್ದು ಜೈಸಬೇಕು !

ಆಗ್ರಾದಲ್ಲಿ ಟಾಜ್ ಮಹಲಿನ ಮುಂಭಾಗದ ಹಸುರು ಸೂಸುವ ಗರಿಕೆ ಹುಲ್ಲಿನ ಮೆತ್ತೆಯ ಮೇಲೆ ತನ್ನ ಹೃದಯಬನದ ರಾಣಿಯನ್ನು ಪ್ರೇಮಾಚ್ಛಾದಿತ ಉಜ್ವಲ ಕಾಂತಿಯುತ ಕಣ್ಣುಗಳಿಂದ ನಿಟ್ಟಿಸುತ್ತಾ ಆನಂದ ಪರವಶನಾಗಿ ಚಂದ್ರಕಾಂತ್ ಅಂದ "ನಮ್ಮ ಬಾಳದೇಗುಲ ಟಾಜ್‌ಮಹಲಿನಂತೆ ಸುಭದ್ರವಾಗಿಯೂ ಪ್ರೇಮಸಾಮ್ರಾಜ್ಯದ ಸಂಕೇತವಾಗಿಯೂ ರೂಪುಗೊಳ್ಳಬೇಕು ಡಾಕ್ಟರ್ !"

"ಬೇಡ ಅಂದವರಾರು ?"

"ಇನ್ನು ನೀವೆಂದೂ ನಿಮ್ಮ ನಿಲುವನ್ನು ಡಾಕ್ಟರೆಂಬ ಅಭಿಮಾನದಿಂದ ಸಮರ್ಥಿಸಿಕೊಳ್ಳುವಂತಿಲ್ಲ. ಚಪ್ಪಾಳೆ ತಟ್ಟಬೇಕಾದರೆ ಎರಡೂ ಕೈಗಳೂ ಒಟ್ಟುಗೂಡಬೇಕು."

"ದೇವರ ದಯದಿಂದ ನನಗೆ ಎರಡೂ ಕೈಗಳೂ ಇವೆ." ನಸುನಕ್ಕಳು ಕಮಲೇಶ್.

"ಅಹಹ್ಹಾ !" ಹುಬ್ಬೇರಿಸಿದ ಚಂದ್ರಕಾಂತ್. ಕಣ್ಣು ಕೆನ್ನೆ ಗಲ್ಲಗಳಲ್ಲಿ ತುಂಟತನ ನಲಿಯಿತು.

"ನನಗೇನೋ ಇಲ್ಲಿ ಬಹಳ ದಿನಗಳಿರಲು ಮನಸ್ಸಿಲ್ಲ. ಎಂದಾದರೂ ಬೇಸರ ಬಂದರೆ ಹೊರಟೇ ಬಿಡುವೆ....!"

"ಓ....ಚನ್ನಾಗಿದೆ! ಅನಂತರ ನನಗಿಲ್ಲೇನು ಕೆಲಸ?" ಒಂದು ಘಳಿಗೆ ತಡೆದು "ಈಗಷ್ಟೆ ಹೇಳಿದ್ದಾಯಿತು. ಇನ್ನು ನೀವೆಂದೂ ನಿಮ್ಮ ನಿಲುವನ್ನೇ ಸಮರ್ಥಿಸಿಕೊಳ್ಳುವಂತಿಲ್ಲ. ಏನಿದ್ದರೂ ಕೂಡಿಯೇ ಮಾಡಬೇಕು."

"ಅದು ಹೇಗಾದೀತು? ಉದ್ಯೋಗವೆಂದಮೇಲೆ ಹೆಚ್ಚು ಕಡಿಮೆ

ಾಗಿಯೇ ಆಗುತ್ತೆ."

"ಕ್ರಮಬದ್ಧವಾದರೆ ಕಾರಣಬದ್ಧವಾದರೆ ಹೆಚ್ಚು ಕಡಿಮೆಯಾದರೂ ಚಿಂತೆಯಿಲ್ಲ....ಡಾಕ್ಟರ್."

"ಅದೇನೇ ಇರಲಿ, ನಾನು ಇಲ್ಲಿಂದ ಬೇಗನೆ ಹೊರಡುವುದಿದೆ. ನಿಮಗಾದರೆ ಸಂಸಾರ ತಾಪತ್ರಯವಿಲ್ಲ; ನನ್ನದು ಹಾಗಲ್ಲ. ನನಗೆ ಚೇತನಾ ಹೇಗಿದ್ದಾಳೋ ಎಂಬ ಚಿಂತೆಯಾಗಿಬಿಟ್ಟಿದೆ."

"ಇರುವುದು ಇಬ್ಬರು. ಅದಕ್ಕೇಕೆ ಅಷ್ಟು ಯೋಚನೆ?"

"ಗಂಡಸರಿಗೆ ಮನೆಯ ಕಷ್ಟ ಅರ್ಥವಾಗುವುದಿಲ್ಲ."

"ನಮ್ಮ ಮನೆಯ ವಿಷಯ ಜ್ಞಾಪಿಸಿಕೊಳ್ಳಿ ಡಾಕ್ಟರ್. ಎಲ್ಲರನ್ನು ಬಿಟ್ಟು ನಾನು ಬರಲಿಲ್ಲವೇ?"

"ತಮ್ಮ ಇದ್ದಾರೆ ಇನ್ನೇಕೆ ಯೋಚನೆ?"

"ಎಷ್ಟೆಂದರೂ ನಾನು ಆ ಮನೆಯ ಹಿರಿಯ ವ್ಯಕ್ತಿ."

ಗೋಧೂಳೀವೇಳೆಯ ಹೊಂಗಾಂತಿ ಸ್ವಚ್ಛಂದವಾಗಿ ಹರಡಿತು. ಕಮಲೇಶ್ ಅದರಲ್ಲೇ ತನ್ಮಯಳಾದಳು, ತನ್ನ ಎರಡೂ ಕೈಗಳಿಂದ ಮೊಣಕಾಲುಗಳನ್ನು ಕಟ್ಟಿ ಆ ಭವ್ಯ ಭವನದ ಸೌಂದರ್ಯರಾಶಿಯ ಸ್ವಚ್ಛಪ್ರಭೆಯಲ್ಲಿ ಮೈಮರೆತು ಕುಳಿತ ಸ್ತ್ರೀಮೂರ್ತಿಯ ಪ್ರೇಮ ಸಾನಿಧ್ಯದಲ್ಲಿ ಚಂದ್ರಕಾಂತ್ ಭಾವಾವಿಷ್ಟನಾದ. ಹೃದಯ ಸಮುದ್ರವು ಆನಂದದ ಹೆದ್ದೆರೆಗಳಿಂದ ತುಂಬಿ ತುಳುಕಿತು. ಕಮಲೇಶ್ ಒಮ್ಮೆ ಪತಿಯೆಡೆಗೆ ಕಡೆಗಣ್ಣ ಕಟಾಕ್ಷವನ್ನು ಬೀರಿ ಮತ್ತೆ ಟಾಜ್‌ಮಹಲಿನೆಡೆಗೆ ನೋಟ ಹರಿಸಿದಳು....ಪುರಾತನ ಬೌದ್ಧಿಕ ಸ್ತರದಲ್ಲಿ ಆವಿರ್ಭವಿಸಿ ಜಗತ್‌ಪ್ರಖ್ಯಾತವಾಗಿ ವಿಜೃಂಭಿಸಿ ಭಾರತಶ್ರೀಯಾಗಿ ಮೆರೆದ ಆ ಭವ್ಯ ಕೃತಿಕೃತ ಮನೋವಿಕಾಸ ಕಲೋಪಾಸನೆಗಳ ಮೂಲ ಶಕ್ತಿಯನ್ನು ಜೆದಕ ಹತ್ತಿತು ಸಂಭ್ರಾಂತ ಚಿತ್ತ.

"ಕಮಲೇಶ್?"

"........"

"ಏಕೆ ನನ್ನ ಮೇಲೆ ಕೋಪವೇ?"

ನೀಲಾಕಾಶದ ಹಿನ್ನೆಲೆಯಲ್ಲಿ ಉದಯಗಿರಿಯ ಮಸ್ತಕದ ಮೇಲೆ ಹುಣ್ಣಿಮೆಯ ಚಂದ್ರ ದಿವ್ಯ ತೇಜಸ್ಸಿನಿಂದ ಮೂಡಿ ಬಂದ, ಶೋಭಾ ಸಮುದ್ರವನ್ನು

ಉಕ್ಕೇರಿಸುತ್ತ. ಅದೃಶ್ಯವಾಗಿದ್ದ ಲಕ್ಷ ಲಕ್ಷ ನಕ್ಷತ್ರಗಳು ಜ್ವಲಿಸತೊಡಗಿದುವು. ಪ್ರಕೃತಿಯೈಸಿರಿಯಲ್ಲಿ ಮೈಮರೆತ ಕಮಲೇಶಳನ್ನು ಮಾತಿನ ಸರಣಿ ಕೊಕ್ಕೆಯಂತೆ ಎಳೆದು ಜಗ್ಗಿತು.

"ನಿಮ್ಮ ರೀತಿಯೇ ನನಗೆ ಅರ್ಥವಾಗುವುದಿಲ್ಲ. ಬಾಯಿಯಲ್ಲಿ ಶರಣಾರ್ಥಿ ; ಕೊಂಕುಳಲ್ಲಿ ದೊಣ್ಣೆ !"

"ಪೌರುಷವಿಲ್ಲದಿದ್ದರೆ ಪುರುಷ ಶಂಡನಾಗುತ್ತಾನೆ."

ಕಮಲೇಶ್ ಮಾತಾಡಲಿಲ್ಲ.

ರುದ್ರಗಂಭೀರ ಮೌನ ಮನವನ್ನು ಇರಿಯಿತು. ಚಂದ್ರಕಾಂತ್ ದೀಪ್ತ ಕಂಠದಿಂದ–"ಏಕೆ ಮೌನ ಡಾಕ್ಟರ್ ?"

"ನಿಮಗೆ ಹುಡುಗಾಟ, ನನಗೆ ಪ್ರಾಣ ಸಂಕಟ....ನಾನು ಬೇಸರಪಟ್ಟುಕೊಳ್ಳಬಹುದೆಂದು ಮನೆಯ ತೊಂದರೆಗಳನ್ನು ಬರೆಯುವುದಿಲ್ಲ ಮಾ...."

"ಅಸಂಭವ....ವೃಥಾ ಕಲ್ಪನೆ....ವಿನಾಕಾರಣ ಬೇಸರ. ಹೀಗಾದರೆ ಸಕ್ಕರೆಯು ಸವಿಗೆ ಇಂಗು ಬೆರೆಸಲು ಒಹಳ ಕಾಲ ಬೇಕಾಗುವುದಿಲ್ಲ."

"ಸಣ್ಣ ಸಣ್ಣ ವಿಚಾರಗಳಿಗೂ ತಲೆ ಹಾಕುತ್ತೀರಿ....ಮಾತು ಮಾತಿಗೂ ಒತ್ತಾಯ ಬೇರೆ...."

ಹಾಗಾದರೆ....!

"ಸೊಗಸಾಗಿದೆ !"

"ದಯಮಾಡಿ ನನ್ನ ಮೇಲೆ ಬಲಾತ್ಕಾರ ಹೇರಬೇಡಿರಿ."

"ಅಂದರೆ ನಿಮಗೆ ಪೂರ್ಣ ಸ್ವಾತಂತ್ರ್ಯಬೇಕು ಎಂದಂತಾಯಿತು !"

"ಹೌದು...."

"ಜೀವನ ಅಂದಮೇಲೆ ಹಾಗೆನ್ನುವುದು ಸಾಧ್ಯವೇ ಇಲ್ಲ. ಸತಿ.... ಎಂದೆಂದೂ ಸತಿ !"

ಕಮಲೇಶ್ ಅವನ ಕಟೂಕ್ತಿಯನ್ನು ಕೇಳಿ ಬೆಚ್ಚಿದಳು.

"ಡಾಕ್ಟರ್ ! ದಾಂಪತ್ಯದ ಮೂಲ ಶಕ್ತಿಯೇ ಜೀವನ ವಿಕಾಸ. ಜೀವನ ಮೊಳಕೆಯಲ್ಲೇ ಮುಜಗರವಾಗಬಾರದು. ಅಂತಲೇ ನಾನು ನಿಮ್ಮನ್ನು ಇಷ್ಟು ದೂರ ಎಳೆದು ತಂದೆ. ಆಸ್ಪತ್ರೆಯಲ್ಲಿ ನೀವಾಯ್ತು ಉದ್ಯೋಗವಾಯ್ತು. ಮನೆಯಲ್ಲಿ ನೀವಾಯ್ತು ಮಗುವಾಯ್ತು. ಹೀಗಾದರೆ ಅಂತಹ ಜೀವನವಾ

ದರೂ ಏಕಿರಬೇಕು....?"

ಕಮುಲೇಶ್ ಮಾತಾಡದೆ ಟಾಜ್‌ಮಹಲಿನಲ್ಲಿ ದಿಟ್ಟಿಯನ್ನಟ್ಟಿ ಕಲೋಪಾಸನೆಯಲ್ಲಿ ಮೈಮರೆತು ಕುಳಿತುಕೊಂಡಳು. ಚಂದ್ರಕಾಂತನಿಗೀಗ ನಿಜವಾಗಿಯೂ ಸಿಟ್ಟು ಬಂತು. ಅಲ್ಲಿಂದ ಎದ್ದು ಬೇರೆಡೆಗೆ ಹೋದ. ಹಸುರುಗಿಡದ ನೆಲೆಯಲ್ಲಿ ಕುಳಿತು ಪ್ರಕೃತಿ ಸೌಂದರ್ಯದ ರಾಶಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿದರೂ ಮರುಕ್ಷಣದಲ್ಲಿ ಅದು ಮರ್ಕಟದಂತೆ ವಿವಶ! ಬೈಗುಗೆಂಪು ಅಳಿದು ಕತ್ತಲೆಯು ಎಳೆದೆರೆ ಮೆಲ್ಲಮೆಲ್ಲನೆ ಇಳೆಯನ್ನು ಆವರಿಸಹತ್ತಿತು. ಕತ್ತು ಆನಿಸಿ ಅವಳೆಡೆಗೆ ದಿಟ್ಟಿ ಹರಿಸಿದ. ನೋಡೆ, ನೋಡೆ ಟಾಜ್‌ಮಹಲಿನ ಪ್ರತೀಕ! ಅಲ್ಲ, ಅಲ್ಲ. ಟಾಜ್‌ಮಹಲಿನಂತೆ ಶಿಲಾಮೂರ್ತಿಯಲ್ಲ ಕಮುಲೇಶ್ ಮತ್ತೆ? ಹಿಂದೂಸ್ಥಾನದ ಪ್ರತೀಕ! ಉಹೂ, ಅದೂ ಸರಿಯಲ್ಲ. ಹಿಂದೂಸ್ಥಾನದಂತೆ ದಾರಿದ್ರ್ಯದೇವತೆಯಲ್ಲ ಅವಳು. ಹಾಗಾದರೆ ಪ್ರಕೃತಿಯ ಪ್ರತೀಕ! ಅನೃತ ಶಿಲಾಮೂರ್ತಿಯಂತೆ ಪ್ರಕೃತಿಯೈಸಿರಿಯಲ್ಲಿ ಮೈಮರೆತು ತದೇಕ ಚಿತ್ತಳಾದ ನಾರೀಶ್ರೀ....ಕಲಾತಪಸ್ವಿನಿ! ಪ್ರಕೃತಿಯಾರಾಧಕಿ!

ಚಂದ್ರಕಾಂತ್ ತುಂಬುಗಣ್ಣುಗಳಿಂದ ನೋಡುತ್ತಾ ತನುಮನಗಳಿಗೆ ಪರಮಾನಂದವನ್ನೂಡಿಸಿದ. ಒಯ್ಯೊಯ್ಯನೆ ಬೀಸಿ ಬಂದ ತಂಗಾಳಿ ಅವಳ ಮುಖಗಳನ್ನು ಮೈ ಮುದ್ದಿಟ್ಟು ಕಾಮಕೇಳಿಗೈದು ಸೆರಗನ್ನು ಹಾರಿಸಿದಾಗ ತನ್ನವಳನ್ನು ಪರಕೀಯನೊಬ್ಬ ಮುದ್ದಿಸುತಿದ್ದಾನೆ ಎನ್ನಿಸಿತು! ಎದ್ದು ಹೋಗಿ ಅವಳ ಮೈಗೆ ಮೈ ಹಚ್ಚಿ ಕುಳಿತುಕೊಂಡು "ಹೋಟೆಲಿಗೆ ಹೋಗೋಣವೇ ಕಮುಲೇಶ್?"

ಅವಳು ಮೊಗ ತಿರುವದೆ ಕೇಳಿದಳು "ಏಕೀಗ ಅಷ್ಟು ಅವಸರ?"

"ನನ್ನವಳನ್ನು ಪರಕೀಯನು ಮುದ್ದಿಸುವುದನ್ನು ನಾನು ಸಹಿಸಲಾರೆ!"

"ಹಾಗೆಂದರೆ?" ಸಿಟ್ಟಿನಿಂದ ಕೇಳಿದಳು ಕಮುಲೇಶ್.

"ಮಾರುತ ಮಹಾಶಯ ಆಗಿನಿಂದ ನಿಮ್ಮೊಡನೆ ರಮಿಸುತಿದ್ದಾನೆ!"

"ಅಷ್ಟೇನೇ." ಎಂಬಂತೆ ಉದಾಸೀನ ತಳೆದರೂ ಆತನ ಸಹಚರ್ಯದಲ್ಲಿ ಸುದೀರ್ಘ ಕಾಲದ ಸಂಸರ್ಗದಿಂದ ಅನನ್ಯ ಆತ್ಮಾನುಭೂತಿ ಇತ್ತು.

"ಸಾಕ್ಷಾತ್ ಚಂದ್ರಕಾಂತ್ ಬಳಿಯಲ್ಲಿರುವಾಗ ಡಾಕ್ಟರಾಣಿಯವರು

ಜೀವರಹಿತ ಟಾಜ್‌ಮಹಲಿನ ಸೌಂದರ್ಯವನ್ನು ಆಸ್ವಾದಿಸುವುದು ಸರಿಯೆ?"

ಆತನ ಸ್ವಾರ್ಥಮೂಲವಾದ ಪ್ರಶ್ನೆ ಅಸಮಾಧಾನ ಮೂಡಿಸಿತು. ತಟ್ಟನೆ "ಕಮಲೇಶ್ ಪಶುವಲ್ಲ" ಎಂದಳು.

"ಅಂದರೆ ಚಂದ್ರಕಾಂತ್ ಪಶುವೆಂದೋ?"

"ನೀವೇ ಯೋಚಿಸಿ ನೋಡಿ."

"ಕಪ್ಪೆ ನೀರಿನಲ್ಲಿದ್ದರೂ ನೈದಿಲೆಯನ್ನು ಬಯಸುವುದಿಲ್ಲ."

"ಇರಬಹುದು...."

"ಏಕೆ ಇಷ್ಟೊಂದು ನಿರ್ಲಕ್ಷ್ಯ ಎಂಬುದನ್ನು ತಿಳಿಯ ಬಯಸುತ್ತಾನೆ ಚಂದ್ರಕಾಂತ್."

"ಚಂದ್ರಕಾಂತ್ ವಿಷಯಲಂಪಟರಾಗಬಾರದು ಎಂದು ತಿಳಿಸಬಯಸುತ್ತಾಳೆ ಕಮಲೇಶ್."

ಇಬ್ಬರೂ ಕಿಲಕಿಲನೆ ನಕ್ಕು ಬಿಟ್ಟರು.

ಅದೇ ಧಾಟಿಯಲ್ಲಿ ಮತ್ತೆ ಅವನೆಂದ "ಕಮಲೇಶಳನ್ನು ಮದುವೆಯಾದುದು ತಪ್ಪು ಎಂಬುದು ಚಂದ್ರಕಾಂತನಿಗೆ ಈಗೀಗ ಅರ್ಥವಾಗಿದೆ!"

"ಇನ್ನೊಬ್ಬರಿಗೂ ಅಷ್ಟೆ; ಎಂದು ಹೇಳದೆ ವಿಧಿಯಿಲ್ಲ."

"ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಡಾಕ್ಟರ್! ತೀರ ಮುಳುಗಿಯಾಗಿದೆ; ಇನ್ನು ಈಜಿ ದಡ ಹತ್ತುವುದೊಂದೇ ದಾರಿ"

"ಕಮಲೇಶ್ ಎಂದೂ ಹಿಂಜರಿಯುವುದಿಲ್ಲ."

"ಅಂದಮೇಲೆ ಕಮಲೇಶಳಿಗೆ ಈಗಾಗಲೇ ಅಷ್ಟೊಂದು ಜಿಗುಪ್ಸೆಯೇಕೆ?"

"ಜಿಲೇಬಿ ಸಿಹಿಯಾಗಿರಬಹುದೇ ಹೊರತು ಆಹಾರವಾಗುವುದಿಲ್ಲ."

"ಚಂದ್ರಕಾಂತ್ ಸಿಹಿಪ್ರೇಮಿ."

"ಹಾಗಾದರೆ ಕಮಲೇಶಳ ಮೇಲೆ ಬಲಾತ್ಕಾರ ಹೇರುವಿರೇನು?"

"ಅದೇ ಪ್ರಶ್ನೆ ಚಂದ್ರಕಾಂತನದೂ ಕೂಡಾ. ಚಂದ್ರಕಾಂತನ ಮೇಲೆ ಬಲಾತ್ಕಾರ ಹೇರುತ್ತೀರೇನು?" ಒಂದು ಘಳಿಗೆ ತಡೆದು "ಚಂದ್ರಕಾಂತನ ಹೃನ್ಮಂದಿರದಲ್ಲಿ ಬಂದಿಯಾದ ಕಮಲೇಶ್ ತಲೆ ಬಾಗಲೇಬೇಕು. ಅದು ಪ್ರಕೃತಿ ನಿಯಮ. ಸಮರ್ಪಣೆ ಪಾತಿವ್ರತ್ಯದ ಮೂಲ ಡಾಕ್ಟರ್!"

ಆಲೋಚನಾಪರವಶಳಾಗಿ ಮೌನಧಾರಣೆ ಮಾಡಿದಳು ಕಮಲೇಶ್.

"ಮದುವೆಯೆಂಬುದು ಬೂಟಾಟಿಕೆಯಲ್ಲ; ಡಾಕ್ಟರ್! ವಂಶಾಭಿವೃದ್ಧಿಯೇ ಮದುವೆಯ ಬುನಾದಿ. ದಾಂಪತ್ಯದ ಮೂಲಶಕ್ತಿ ಜೀವನ ವಿಕಾಸ. ಸ್ತ್ರೀ ಕ್ಷೇತ್ರಾಂತರ ಹೊಂದುವುದೇ ಅದಕ್ಕಾಗಿ. ಅಲ್ಲದ ಮೇಲೆ ಮದುವೆಯೇಕೆ? ಆತ್ಮಶಕ್ತಿಗಿಂತ ಸೃಷ್ಟಿಶಕ್ತಿ ಮೇಲು. ಸೃಷ್ಟಿ ಶಕ್ತಿಯನ್ನು ನಿಯಂತ್ರಣಕ್ಕೆ ಅರ್ಪಿಸಿ ಸ್ವಶಕ್ತಿಯನ್ನು ವ್ಯರ್ಥಗೊಳಿಸಿ ಕಾಮನೆಗಳ ಕೊಳದಲ್ಲಿ ಮಿಂದು ನೀರಸಕ್ಕೆ ಬೂಟಾಟಿಕೆಯ ಬಣ್ಣ ಬಳಿಯುವುದೆಂದರೆ ಹೇಸಿಗೆಯಲ್ಲವೇ?"

ಸದ್ಯ, ಮಾತು ಮುಗಿಸಿದರೆ ಸಾಕಾಗಿತ್ತು. ಕಮಲೇಶ್ ತುಸು ಯೋಚಿಸಿ ನುಡಿದಳು "ನೀವು ಏನೆಲ್ಲಾ ಹೇಳಿದಿರೋ ಅವೊಂದೂ ನನ್ನ ಕಿವಿಗೆ ಬೀಳಲಿಲ್ಲ. ಕಲಾ ಸೌಂದರ್ಯದಲ್ಲಿ ನಾನು ಸಂಪೂರ್ಣ ಮಗ್ನಳಾಗಿದ್ದೆ. ಅಮೃತ ಶಿಲೆಯ ಅಂದವನ್ನು ಹೀರಿಕೊಳ್ಳಲು ನೂರು ಕಣ್ಣುಗಳಿದ್ದರೂ ಸಾಲದು ಡಾಕ್ಟರ್!"

"ಜೀವರಹಿತ ಅಮೃತಶಿಲೆಯ ಅಂದವನ್ನು ಹೀರಿಕೊಳ್ಳಲು ನೂರು ಕಣ್ಣುಗಳು ಬೇಕಾದರೆ ಜೀವಿತ ಚಂದ್ರಕಾಂತಶಿಲೆಯ ಅಂದವನ್ನು ಹೀರಿಕೊಳ್ಳಲು ಇನ್ನೆಷ್ಟು ಹೃದಯಗಳು ಬೇಕೋ....?"

ಕಮಲೇಶ್ ಮಾತಾಡದೆ ನೋಟವನ್ನು ದೂರ ದಿಗಂತದಲ್ಲಿ ನೆಟ್ಟು ಅಲ್ಲೇ ತನ್ಮಯಳಾದರೂ ದೇಹದಾದ್ಯಂತ ಮೆಲ್ಲನೆ ಕಂಪನದ ಅಲೆ ಹರಿದಾಡ ಹತ್ತಿತು.

ಅಂದು,

ಮಹದ್‌ಭವಿಷ್ಯಕ್ಕೆ ನಿಮಿತ್ತವಾಗಲು ಸಂಕಲ್ಪಿಸಿದ್ದ ಬಗೆಗಣ್ಣಿಗೆ ಇಂದು ಜಗತ್ತು ಶೂನ್ಯವಾಗಿ ಕೇವಲ ಬಿಸಿಲ್ಗುದುರೆಯಂತೆ ಕಾಣಿಸುತ್ತದೆ. ಬೌದ್ಧಿಕ ಸ್ತರದಲ್ಲಿ ಆವಿರ್ಭವಿಸುವ ವ್ಯತಿರಿಕ್ತ ಸ್ಥೂಲ–ಸೂಕ್ಷ್ಮ ಅವಿರಲ ವಿಚಾರತರಂಗಗಳು ಅಲ್ಲಿಂದಲ್ಲೇ ದೀರ್ಣವಿದೀರ್ಣವಾಗುವಾಗ ದಿನಚರಿ ಕನಸಿನರಂಗದಂತೆ ತೋರುತ್ತದೆ. ಈ ಅಕಾಂಡತಾಂಡವ ದ್ವೈದೀಭಾವತರಂಗಿಣಿಗಳ ಕಮನೀಯ ಕಠೋರ ಸಂಘರ್ಷಣೆ ಹೇಗೆ ಯಾವ ದುರ್ಮುಹೂರ್ತದಲ್ಲಿ ಅವಿರ್ಭವಿಸುವುದೋ ಎಂಬುದು ಸಹ ಅರ್ಥವಾಗುವುದಿಲ್ಲ. ಈ ಜಗತ್ತಿನಲ್ಲಿ ಸಂಭವಿಸುವ ರಾಗಾನುರಾಗಗಳ ವರ್ಣಮಯ ರೂಪಕದಲ್ಲಿ ಧರ್ಮಾಧರ್ಮಗಳ ಅನುಬಂಧವೇ ಅಮಿತಾಶ್ಚರ್ಯಕ್ಕೆ–ದುಃಖಕ್ಕೆ–ಸಕಲ ಕ್ಲೇಶಕ್ಕೆ ಕಾರಣ........

ಪ್ರಪಂಚದಲ್ಲಿ ಸಂಭವಿಸುವ ಪ್ರತಿಯೊಂದಕ್ಕೂ ಯಾವುದೋ ಸಂಕಲ್ಪವಿರಬಹುದಾಗಿದ್ದರೂ ಬೌದ್ಧಿಕಸ್ತರದಲ್ಲಿ ಕಾರ್ಯಾಕಾರ್ಯಗಳನ್ನು ಸತ್ಯಾಸತ್ಯಗಳನ್ನು ಧರ್ಮಾಧರ್ಮಗಳನ್ನು ವಿಮರ್ಶಿಸುವಷ್ಟು ಸಮಯವಾಗಲೀ ಸಹನೆಯಾಗಲೀ ಸಾಮರ್ಥ್ಯವಾಗಲೀ ಇಲ್ಲದಿಲ್ಲ. ಕ್ಷಮಾಪಣೆ-ಪಶ್ಚಾತ್ತಾಪ-ಮಾನವತೆ-ಯುಗಧರ್ಮ ಮುಂತಾದ ಶಬ್ದ ಭಂಡಾರದಿಂದ ಎದೆಯ ನಿಘಂಟು ತುಂಬಿ ಹೋಗಿದ್ದರೂ ಘೂರ್ಣ ಉದ್ಭ್ರಾಂತತೆ ಮಂಡಿಯೂರಿ ನಿಲ್ಲುತ್ತದೆ.

ಅಂದಮೇಲೆ....?

ಭಗವಾನ್ ಮರೀಚಿಮಾಲಿಯು ಅಸ್ತಂಗತನಾಗಿ ಆದೆಷ್ಟು ಹೊತ್ತು ಉರುಳಿತ್ತೋ. ಶೀತಲ ಗಾಳಿ ಯಾವಾಗಿನಿಂದ ತೀಡುತ್ತಿದೆಯೋ ದೇವರಿಗೆ ಗೊತ್ತು. ಲಕ್ಷ ಲಕ್ಷ ಲಕ್ಷ ಲಕ್ಷ ನಕ್ಷತ್ರನಯನಗಳು ದಿಟ್ಟಿಗೆ ಬಿದ್ದಾಗಲೇ ಇತ್ತ ಗಮನ.

ಅಧ್ಯಾಯ

೨೦

ಕಮಲೇಶ್ ಚಂದ್ರಕಾಂತರು ಮಧುಚಂದ್ರದಲ್ಲಿದ್ದಾಗ ಬಲರಾಂ ಸುಧಾರಾಣಿಯರ ವಿವಾಹ ವೈಭವದಿಂದ ನಡೆಯಿತು. 'ಡಾ|| ಸುಧಾರಾಣಿ' ಎಂಬ ತನ್ನ ಸಹಿಯನ್ನು 'ಡಾ||ಸುಧಾ ಬಲರಾಂ' ಎಂದು ಬದಲಾಯಿಸಿಕೊಂಡಿದ್ದಳು ಸುಧಾರಾಣಿ. ಅದನ್ನೊಮ್ಮೆ ಗಮನಿಸಿದಾಗ ಚಂದ್ರಕಾಂತನಿಗೆ ಎಲ್ಲಿಲ್ಲದ ಕಸಿವಿಸಿ. ಅದಕ್ಕೆ ಕಾರಣ ಕಮಲೇಶ್ ಇನ್ನೂ 'ಕಮಲೇಶ್ ದಲ್ವಾಡಿ' ಎಂದೇ ಸಹಿ ಹಾಕುತ್ತಿದ್ದುದು. ಅದರ ಬಗ್ಗೆ ಟೀಕೆ ಟಿಪ್ಪಣಿಗಳು ಸಹ ನಡೆದಿದ್ದುವು. "ಅದು ಅಭ್ಯಾಸವಾಗಿದೆ ಈಗ ಬದಲಾಯಿಸುವ ಅಗತ್ಯವಾದರೂ ಏನು?" ಎಂಬುದು ಕಮಲೇಶಳ ಮಾರುತ್ತರ.

ಒಮ್ಮೆ ಅವಳ ಸಹಿಯನ್ನು ನೋಡಿದಾಗ ಬಲರಾಂ ಹೆಮ್ಮೆಯ ಧಾಟಿಯಲ್ಲಿ ಅಂದ "ಸುಧಾ ಬಲರಾಂ ಎಂದು ಸಹಿ ಮಾಡುತ್ತಾರೆ ನನ್ನ ಸುಧಾ!" ನೋಟ ಚಂದ್ರಕಾಂತನನ್ನು ಅಣಕಿಸಿತು.

ಅಸಮಾಧಾನದಿಂದ ಚಂದ್ರಕಾಂತನ ಪ್ರತಿಕ್ರಿಯೆ ಹೊರಬಿತ್ತು "ನಾನೂ ಅದನ್ನೇ ಹೇಳುತ್ತಿದ್ದೇನೆ ...ಆದರೆ ಕೇಳಬೇಕಲ್ಲ?"

"ಅವರು ಹಾಗೆಯೆ ಎಂಬುದು ನಮಗೂ ಗೊತ್ತು!"

ಗಾಳಿಗೆ ಅಲುಗುವ ಅಲೆಗೂದಲು ಶುಭ್ರ ಧವಳ ವರ್ಣರಂಜಿತ ಮುಖದಂದಕ್ಕೆ ನಿತ್ಯನೂತನ ಶೋಭೆಯನ್ನುಂಟುಮಾಡುತ್ತಿರುತ್ತವೆ. ಅದರೊಂದಿಗೆ ಅಂದಿನ ಟೀಕೆ ಕೆನ್ನೆಗಳಿಗೆ ನಸುಗೆಂಪೊರೆದು ಇನ್ನಿಷ್ಟು ಕಳೆಗೂಡಿಸಿತು.

"ಈಗ ಸಹಿ ಬದಲಿಸಬೇಕಾದ ಕಡ್ಡಾಯವಾದರೂ ಏನು? ಹೇಗೂ ಅದು ನನ್ನ ಮನೆತನದ ಹೆಸರು."

"ಧಾರಾಪೂರ್ವಕವಾಗಿ ಪಾಣಿಗ್ರಹಣ ಮಾಡಿಕೊಂಡಮೇಲೆ ಇನ್ನೆಲ್ಲಿಯ ಮನೆತನ?" ಚಂದ್ರಕಾಂತ್ ತುಂಟನಗೆ ಬೀರಿದ.

"ಆದರೇನು? ದಲ್ವಾಡಿ ಮನೆತನದಲ್ಲಿ ಸೃಷ್ಟಿಯಾದ ಜೀವ ಬದಲಾಗು

ವುದಿಲ್ಲವಷ್ಟೆ ?”

“ಬದಲಾಗದಿದ್ದರೂ ಸಂಪ್ರದಾಯ ಉಂಟಲ್ಲ ?”

“ನಾನು ನನ್ನ ಅಭಿಪ್ರಾಯವನ್ನು ಸಂಪ್ರದಾಯಕ್ಕಿಂತ ಹೆಚ್ಚಾಗಿ ಗೌರವಿಸುವೆ.”

“ಕಮಲೇಶ್ ಹೆಣ್ಣಲ್ಲ, ಗಂಡು ; ಎಂಬುವು ನನಗೂ ಗೊತ್ತು !”

ಬಲರಾಂ ಸಂತಸದ ಸುಗ್ಗಿಯನ್ನುಂಡು ಅಣಕದ ನಗೆ ಬೀರಿದ.

ಚಂದ್ರಕಾಂತ್ ಯಾವ ಸಂಸ್ಕಾರದಲ್ಲಿ ಬೆಳೆದನೋ ಯಾವ ಶಿಷ್ಟಾಚಾರದಲ್ಲಿ ಆತನ ಜೀವ ರೂಪುಗೊಂಡಿತೋ ಅವುಗಳ ದಿವ್ಯ ಪ್ರಭಾವದಿಂದ ಅನುದಿನವೂ ಸಂಭವಿಸುವ ಅಲ್ಲದ ಸಲ್ಲದ ಟೀಕೆಗಳು ಸಮಯಾಸಮಯಗಳಲ್ಲಿ ಮನವನ್ನು ಮುಳ್ಳಿನಂತೆ ಚುಚ್ಚಿ ಘಾಸಿಗೊಳಿಸುವಾಗ ಆಕೆ ಬೆಳೆಸಿಕೊಂಡ ಸಂಸ್ಕಾರ, ಕಲಿತವಿದ್ಯೆ, ನೂತನ ಜೀವನದ ಹುರುಪುಗಳು ಕುಕ್ಕುಟ ಧೈರ್ಯದಿಂದ ಶಿಷ್ಟಾಚಾರದ ಸಭ್ಯತೆಯನ್ನೂ ಅತೀತಯುಗದ ಧರ್ಮವನ್ನೂ ಕುರಿತು ವಾಖ್ಯೆಹೂಡಿ ವಿಜಯಪತಾಕೆ ಹಾರಿಸುವುದೂ ಉಂಟು. ಆದರೆ, ಅದರ ಹಿಂದೆ ವ್ಯಾಪಕವಾದ ನಿಷ್ಠುರತೆ ಬೆಳೆಯುತಿತ್ತು, ಸುಂದರ ವನದಲ್ಲಿ ಮುಳ್ಳುಕಳ್ಳಿಗಳು ಸುಲಲಿತವಾಗಿ ಸವಿಸ್ತಾರವಾಗಿ ಬೆಳೆಯುವಂತೆ. ಈ ಭವ್ಯ ಬ್ರಹ್ಮಾಂಡದಲ್ಲಿ ಕ್ಷಣಕ್ಷಣವೂ ಸಂಭವಿಸುವ ಪ್ರತಿಯೊಂದರ ಭವಿಷ್ಯತ್ತು ಅನಿವಾರ್ಯವಾದರೂ ನವನವೋಜ್ವಲವಾದ ಈ ಅತೀತ ಶತಮಾನಸಂಧ್ಯೆಯಲ್ಲಿ ಆತನ ಭಾವನಿರೂಪಣೆ, ರಾಗಾತ್ಮಕಶ್ರದ್ಧೆ, ಅಧಿಕಾರಲಾಲಸೆ, ಪ್ರಲೋಭನೆಯ ನಿರ್ಭರದೃಷ್ಟಿ ಅಶಾಂತಿಯ ತೆರೆಯನ್ನು ಅತ್ಯಂತ ನವುರಾಗಿ ಜೇಡ ಬಾಂಧವನ ತಂತು ಕೃತಿಯಂತೆ ಹರಡತೊಡಗಿದುವು.

ಕಮನೀಯ ಕಠೋರ ಜೀವನ ಕಾಂತಾರದಲ್ಲಿ ದಿನನಿತ್ಯ ಸಂಭವಿಸುವುದು ಅದೇ. ಹಳತು–ಹೊಸತುಗಳ ತಾನ ವಿತಾನದಲ್ಲಿ ಆಕೆ ದಣಿದರೂ ಆತ ಮಣಿಯಲಾರ ಕಟ್ಟೆಯೊಡೆದು ಮುಂದೆ ನುಗ್ಗಲಿಚ್ಛಿಸುವ ನಿರ್ಝರ ವಾಗ್ಧಾರೆಯನ್ನು ತಡೆಹಿಡಿಯಲೆಳೆಸಿದರೂ, ಲಗಾಮು ಎಳೆದನಂತರವೂ ಮುಂದೆ ಹೋಗಿ ನಿಲ್ಲುವ ತುಂಟ ಕುದುರೆಯಂತಾಗುತ್ತದೆ ಪರಿಸ್ಥಿತಿ. ಪ್ರತಿಭಾ ಯುವಕನಲ್ಲಿರುವ ಮಾನಸಿಕ ಶೈಥಿಲ್ಯ ಚಿದಾಕಾಶದಲ್ಲಿ ಕಾರ್ಮೋಡಗಳನ್ನೇಳಿಸು

ವುದು. ಹಾಗೆ ಎದ್ದಾಗ ಅವುಗಳ ಹಣಾಹಣಿಯಲ್ಲಿ ಬಹಳ ಮಟ್ಟಿಗೆ ಅಂತರ್ಯದಲ್ಲಿ ಕಾರ್ಮಳೆ ಸಹ ಕರೆಯುವುದು.

ಕಮಲೇಶ್ ಜೀವನ ಸಂಘರ್ಷಣೆಗಳ ಚಿಂತನೆಯಲ್ಲೇ ಕೆಲಸ ಮುಗಿಸಿ ಮನೆಗೆ ಹೊರಡುವ ಮುನ್ನ ಚಂದ್ರಕಾಂತನನ್ನು ನೋಡಲು ಹೋದಾಗ ಅವನಿನ್ನೂ ಕಾರ್ಯ ತತ್ಪರನಾಗಿದ್ದ. ಅಲ್ಲಿಂದಲೇ ಹುಬ್ಬೆತ್ತಿ ಹೊರಡುವುದಾಗಿ ಹೇಳಿ ಹೊರಟಳು. ಸಾಲು ವಾರ್ಡುಗಳನ್ನು ದಾಟಿ ಕಾರಿಡಾರಿನಲ್ಲಿ ಹೆಜ್ಜೆ ಇಡುತಿದ್ದಂತೆ ಡಾ|| ಚಂದ್ರಿಕಾ ಹೆಗ್ಗಡೆ ಡಾ|| ಕಲ್ಪನಾರವರು ಕೂಡಿದರು. ಅವರಿಬ್ಬರಿಗೂ ಈಚೆಗೆ ಇತರೆ ಆಸ್ಪತ್ರೆಗೆ ವರ್ಗವಾಗಿದ್ದು ಇನ್ನು ಕೆಲವು ದಿನಗಳಲ್ಲಿ ಅಲ್ಲಿಂದ ನಿರ್ಗಮಿಸಲಿದ್ದಾರೆ.

ಚಂದ್ರಿಕಾ ಹೆಗ್ಗಡೆ ತಮಾಷೆಯ ಧಾಟಿಯಲ್ಲಿ ಕೇಳಿದಳು "ಹೇಗಿದೆ ನಿಮ್ಮ ವಿವಾಹಿತ ಜೀವನ ?"

"ಇದೆ, ಎಲ್ಲರದ್ದೂ ಇದ್ದ ಹಾಗೆ." ಕಮಲೇಶ್ ಮುಗುಳು ನಕ್ಕಳು.

ಕಾರಿಡಾರಿನ ಕಂಬಕ್ಕೆ ಒರಗಿಕೊಂಡು ನಿಂತಿದ್ದ 'ಕಾಮಾಕ್ಷಿ'ಯನ್ನು ನೋಡಿ ಕೇಳಿದಳು ಕಮಲೇಶ್ "ಹೇಗಿದ್ದಿ ಕಾಮಾಕ್ಷಿ?"

"ನಾನು ಕಾಮಾಕ್ಷಿಯಲ್ಲ." ಮೆಲುದನಿ ಹೊರಬಿತ್ತು. ತುಟಿಗಳಲ್ಲಿ ಮಂದಹಾಸ ಮೂಡಿ ಎರಡೂ ಕೆನ್ನೆಗಳಲ್ಲೂ ಗುಳಿ ಬಿದ್ದಿತು....ಕಮಲೇಶ್ ಉತ್ತರದ ಕಡೆ ಹೋದ ಮೇಲೆ ಅವಳಿಗೆ ಪೂರ್ಣಪ್ರಜ್ಞೆ ಬಂದಿದ್ದು ಆರೋಗ್ಯ ಸುಧಾರಿಸುತ್ತಿದೆಯಾದರೂ ತನ್ನವರ ನೆನಪು ಮೂಡಿರಲಿಲ್ಲ. ಅಪಘಾತ ನಡೆದ ಹಿಂದಿನ ಘಟನೆಗಳೆಲ್ಲವನ್ನೂ ಮರೆತುಬಿಟ್ಟಿರುವುದರಿಂದ ಅನಾಥೆಯಾದ ಅವಳನ್ನು ಎಲ್ಲಿಗೂ ಕಳುಹಿಸಲಾಗದೆ ಆಸ್ಪತ್ರೆಯಲ್ಲೇ ಇಟ್ಟುಕೊಳ್ಳಲಾಗಿದೆ. ಹಿಂದಿನ ಘಟನೆಗಳು ಮರೆತಿರುವಾಗ 'ಕಾವೇರಿ' ಎಂಬ ಹೆಸರು ಮಾತ್ರ ಹೇಗೆ ನೆನಪಿನಲ್ಲಿ ಉಳಿಯಿತೆಂಬುದು ಕಮಲೇಶಳಿಗೆ ಆಶ್ಚರ್ಯ. ತಟ್ಟನೆ ಕೇಳಿದಳು "ನಿಜವಾಗಿಯೂ ನಿನ್ನ ಹೆಸರು ಕಾವೇರಿಯೆ ?"

"ಹೌದು."

ಡಾ|| ಚಂದ್ರಿಕಾ ಹೆಗ್ಗಡೆ ಹೇಳಿದಳು 'ಕಾವೇರಿ' ಎಂಬ ಹೆಸರನ್ನು

ಯಾರಿಂದಲೋ ಕೇಳಿದಾಗ ತನ್ನ ಹೆಸರೂ ಸಹ ಅದೇ ಎಂಬುವನ್ನು ಜ್ಞಾಪಿಸಿ ಕೊಂಡಿದ್ದಾಳೆ. ಪಾಪ, ಅವಳ ತಾಯಿ ತಂದೆ ಎಲ್ಲಿದ್ದಾರೋ ಎಷ್ಟು ಹುಡುಕಿದ್ದಾರೋ ದೇವರಿಗೇ ಗೊತ್ತು. ಇವಳು ಇಲ್ಲಿರುವುದು ಬಹಳ ಮಟ್ಟಿಗೆ ಅವರಿಗೆ ತಿಳಿದಿರಲಿಕ್ಕಿಲ್ಲ. ಮುಂದೆಯೂ ಯಾರೂ ಬರದಿದ್ದಲ್ಲಿ ಇವಳ ಹೊಣೆಯನ್ನು ಆಸ್ಪತ್ರೆಯೇ ಹೊರಬೇಕಾಗುವುದೇನೋ...." ಒಂದು ಘಳಿಗೆ ತಡೆದು ಪುನಃ ಮುಂದುವರಿದಳು "ಅಲ್ಪ ಸ್ವಲ್ಪ ಓದು ವಿದ್ಯೆ ಬಂದಿದೆ. ಹುಡುಗಿ ಚಿಕ್ಕವಳು. ಕಲಿತುಕೊಂಡರೆ ಏನಾದರೂ ಮಾಡಬಹುದು."

ನಿಜ.... ನಿಜ....

ಮೂವರೂ ಅವಳಿಗೆ ವಿದ್ಯೆ ಕಲಿತುಕೊಳ್ಳಲು ಪ್ರೋತ್ಸಾಹ ನೀಡಿ, ಹಿತ ವಚನಗಳನ್ನು ಹೇಳಿ ಹೊರಟರು. ಅಂಗಳವನ್ನು ದಾಟಿ ರಸ್ತೆಗಿಳಿದ ನಂತರ ಗೆಳತಿಯರು ವಿರುದ್ಧ ದಿಕ್ಕನ್ನು ಹಿಡಿದರು. ಕಮಲೇಶ್ ಮನೆ ಮಟ್ಟಿದಾಗ ಹೊತ್ತು ಒಂದರ ಅಂಚನ್ನು ದಾಟಿತ್ತು. ಪ್ರಾಕಾರದ ಬಾಗಿಲು 'ಖಣಿಲ್' ಎಂದು ಸದ್ದುಗೈಯ್ಯೊಡನೆ ಆ ಮುಹೂರ್ತಕ್ಕಾಗಿ ಕಾದಿದ್ದ ಚೇತನಾ ಓಡೋಡಿ ಬಂದಳು. ಮುಖವರಳಿ ಹೂವಾಯಿತು.

"ಚೇತನಾ!"

"ಮಾ! ಸೀತಮ್ಮ ಪಾಯಸ ಮಾಡಿದ್ದಾರೆ!"

"ನಿಜವಾಗಿ?"

ಕಮಲೇಶ್ ಎರಡೂ ಕೈಗಳಿಂದ ಮಗುವಿಗೆ ನಲ್ಮೆಯ ಸ್ವಾಗತ ನೀಡಿದಳು. ಅವಳ ಮುದ್ದು ಮಾತುಗಳನ್ನು ಮೆಲ್ಲುತ್ತಾ ಆನಂದಾತಿಶಯದಿಂದ ನಲಿಯುವಾಗ ದಧಿ ಘೃತಗಳೊಂದಾದಂತಹ ಸವಿ ಮೂಡಿತು. ನಗೆ ಮಾತುಗಳ ದನಿ ಕೇಳಿ ಸ್ವರ್ಣಮಾಲಿನಿ ಹೊರ ಬಂದು ಏನೋ ಹೇಳಲು ಬಯಸಿದವಳು ಹಾಗೇ ನೋಡುತ್ತಾ ನಿಂತಳು. ವಿಕಸಿತ ಜೀವನ ಸುಮದ ಸೌರಭ ತನುಮನಗಳನ್ನು ಸ್ವಚ್ಛಂದವಾಗಿ ಮುಸುಗಿತು.

ಚೇತನಾ ಎದೆಯಿಂದ ಸರಸರ ಇಳಿದು ಒಳಗಡೆ ಓಡಿ "ಮಾ ಬಂದಿದ್ದಾರೆ ಊಟ ಇಡಿ ಸೀತಮ್ಮಾ!" ಎಂದಳು ಮೈಯೆಲ್ಲಾ ಉತ್ಸಾಹದ ಬೀಡಾಗಿ.

"ಈಗ ಬೇಡಮ್ಮಾ, ಅವರು ಕೈ ತೊಳೆದುಕೊಳ್ಳಲಿ" ಎಂದರೂ ಕೇಳಲಿಲ್ಲ. ಚೇತನಾ ಮತ್ತೆ ಅವಸರಿಸಿದಳು. ಮೃದು ಮಧುರವಾಗಿ ನೊಳಗಿತು

ಬಾಲವಾಣಿ "ಬೇಗ ಇಡಿ ಸೀತಮ್ಮಾ."

ಎಲ್ಲರ ಮುಖದಲ್ಲೂ ಮೃದು ಹಾಸ ನಲಿಯಿತು.

ಕಮಲೇಶ್ ಮುಖ ಮಜ್ಜನ ಮಾಡಿ ಮಗು ಮತ್ತು ತಾಯಿಯೊಂದಿಗೆ ಊಟ ಮುಗಿಸಿ ಮಗುವಿನೊಂದಿಗೆ ಹಾಸಿಗೆಯ ಮೇಲೆ ಅಡ್ಡಾದಳು. ಚಂದ್ರ ಕಾಂತನಿಲ್ಲದಾಗಲೆಲ್ಲಾ ಚೇತನಾ ಕಮಲೇಶಳೊಂದಿಗೆ ಮಲಗುವ ವಾಡಿಕೆ. ತನ್ನ ಮನವೊಪ್ಪುವ ಗುಬ್ಬಿ ಕತೆ ಹೇಳಿಸಿಕೊಂಡು ಆನಂದದಿಂದ ಕೇಳುತ್ತಾ ಹಾಯಾಗಿ ನಿದ್ದೆ ಹೋದಳು. ಮಗುವನ್ನಪ್ಪಿದ ಕಮಲೇಶಳಿಗೆ ಹೊಟ್ಟೆಯಲ್ಲಿ ಏನೋ ಕಲಕಿದಂತಾಗಿ ತಳಮಳ ಮೂಡಿತು. ಪಕ್ಕದಲ್ಲಿ ಮೈಗೊತ್ತಿ ಮಲಗಿದ್ದ ಚೇತನಳನ್ನು ಸ್ವಲ್ಪ ಬದಿಗೆ ಮಲಗಿಸಿ ಎದ್ದು ಕುಳಿತುಕೊಂಡಳು. ಸ್ವಲ್ಪ ಹೊತ್ತು ಉರುಳಿತು. ತನ್ನ ಒಡಲ ಸಂಕಟ ಏನೆಂಬುದು ಎಂದೋ ಗ್ರಹೀತವಾಗಿದೆ....ಅದರ ಕತೆ ಯೋಚಿಸುವ ಅಗತ್ಯವಿರಲಿಲ್ಲ. ಇನ್ನಷ್ಟು ಸಂಕಟ ಹೆಚ್ಚಿ ಬಾಯಿಯಲ್ಲಿ ಹುಳಿ ನೀರು ಬಂದು ಎದ್ದು ನೀರು ಮನೆಗೆ ಹೋದಳು. ಮರು ಕ್ಷಣದಲ್ಲಿ ಉಂಡ ಅನ್ನವೆಲ್ಲ ವಾಂತಿಯಾಯಿತು. ಕಮಲೇಶ್ ಕೈ ಬಾಯಿ ತೊಳೆದುಕೊಂಡು ಪುನಃ ಹಾಸಿಗೆ ಸೇರಿದಳು.

ಸಂಪ್ರಾಪ್ತಿ....!

ಒಮ್ಮೆಲೆ ಬಂಡೆದ್ದ ಭಾವನಾ ತರಂಗಿಣಿಯ ರುದ್ರಲಾಸ್ಯದ ನೂಪುರಗಳ ಟಂಟಣಿನಾದ ಧ್ವನಿಮುದ್ರಿಕೆಯಂತೆ ಮನೋಮಂದಿರದಿಂದ....ಹೊಮ್ಮಿತು. ಚಂದ್ರಕಾಂತನನ್ನು ಕೈಹಿಡಿದ ತರುಣದಲ್ಲಿ ತನ್ನ ಅಭಿಪ್ರಾಯವನ್ನು ಮುಂದಿಟ್ಟಿದ್ದಳು "ಇನ್ನು ನಾಲ್ಕು ವರ್ಷ ನಮಗೆ ಮಕ್ಕಳು ಬೇಡ."

"ಇನ್ನೊಮ್ಮೆ ಯೋಚಿಸಿರಿ. ಮದುವೆಯಾದ ತರುಣದಲ್ಲಿ ಹೆಣ್ಣು ತಾಯಿಯಾಗುವುದು ಲೇಸು. ಜೀವನ ವಿಕಾಸವೇ ಮದುವೆಗೆ ನಾಂದಿ. ನನಗೆ ತಂದೆಯಾಗುವುದೆಂದರೆ ಬಲು ಹೆಮ್ಮೆ. ಹೇಮುಲಾಲ್ ಆಗಲೇ ನಾಲ್ಕು ಮಕ್ಕಳ ತಂದೆ!"

ಅವಳ ಕೆನ್ನೆಗಳಲ್ಲಿ ಚೆಂಗುಲಾಬಿಗಳು ಅರಳಿದುವು. ಸ್ವಲ್ಪ ಹೊತ್ತು ಸುಮ್ಮನಿದ್ದು ನಂತರ ತನ್ನ ಅಭಿಪ್ರಾಯವನ್ನು ಮುಂದಿಟ್ಟಳು "ಛೀಃ! ಛೀಃ! ಹಾಗೆಂದರೆ ಹೇಗೆ? ಸದ್ಯಕ್ಕಂತೂ ನಮಗೆ ಯಾವ ತೊಂದರೆಯೂ ಕೂಡದು. ಮನೆಗೆ ಬೆಳಕಾಗಿ ಚೇತನಾ ಇದ್ದಾಳೆ ಸಾಕು."

"ಯಾರದೋ ಮಗುವಿಗಾಗಿ ನಾವೇಕೆ ಬಾಯಿ ಬಿಡಬೇಕು? ನಾವು ಅಷ್ಟೊಂದು ಸತ್ವರಹಿತರೇ?"

ಅವಳ ಮೌನವೇ ಉತ್ತರವಾಯಿತು.

ಚಂದ್ರಕಾಂತ್ ಆನಂದೋತ್ಸಾಹದಿಂದ ಹಾಸ್ಯದ ಚಟಾಕಿ ಹಾರಿಸಿದ, "ನನಗೆ ನಾಲ್ಕು ಮಕ್ಕಳು ಬೇಕು. ಎರಡು ಗಂಡು! ಎರಡು ಹೆಣ್ಣು! ಅದಕ್ಕಿಂತ ಕಡಿಮೆಯೆಂದರೆ ಅದು ಜೀವನವೇ ಅಲ್ಲ ಡಾಕ್ಟರ್!"

ಒಮ್ಮೆಲೆ ಹೌಹಾರಿದಳು ಕಮಲೇಶ್ "ನಾನೇನಾಗಬೇಡ?"

"ಒಂದು ಬಂದಮೇಲೆ ಅಭ್ಯಾಸವಾಗುತ್ತೆ!" ಕಿಲಕಿಲ ನಕ್ಕ ಚಂದ್ರಕಾಂತ್. ರಾಗ ಭಾವೋದ್ವೇಗಗಳಿಂದ ಮುಖ ಕೆಂಪಡರಿತು.

"ನನ್ನಿಂದ ಸಾಧ್ಯವೇ ಇಲ್ಲ. ನಮಗೆ ಒಂದು ಮಗುವಿದ್ದರೆ ಸಾಕು. ಅನಂತರ ಉಳಿದ ಕಾಲವೆಲ್ಲಾ ಜನಸೇವೆ...."

"ಒಂದು ಮಗು ಮಗುವಲ್ಲ! ಒಂದು ಕಣ್ಣು ಕಣ್ಣಲ್ಲ! ಎಂಬ ಗಾದೆ ಉಂಟಲ್ಲ; ಯಾರ ಜೀವನವೂ ಹೂವಿನ ಹಾಸಿಗೆಯಲ್ಲ, ಕಷ್ಟ ಸುಖಗಳು ಜೋಡಿಯಾಗಿಯೇ ಇರುತ್ತವೆ. ಅಂದಮೇಲೆ ಯೋಚನೆಯೇಕೆ? ಬಿತ್ತುವವರಿಗೂ ಬೆಳೆ ಬೆಳೆಸುವವರಿಗೂ ಬಿಟ್ಟು ಬಿಡಿ. ಅದರ ಪೋಷಣೆ ಅವರು ನೋಡಿಕೊಳ್ಳುತ್ತಾರೆ. ನಿಮ್ಮದು ಕೇವಲ ಒಂಬತ್ತು ತಿಂಗಳ ನಿರ್ವಹಣೆ."

ಅಂದು ಕಮಲೇಶ್ ಬೆವತು ಹೋಗಿದ್ದಳು. ಇಂದು ಸದ್ದಿಲ್ಲದೆ ಭ್ರೂಣವೊಂದು ಉದರದಲ್ಲಿ ಮನೆಮಾಡಿಕೊಂಡಿದೆ! ಬಗೆಗೆಟ್ಟು ಯೋಚನೆಯಲ್ಲಿ ಸಿಕ್ಕಿ ತಳಮಳಿಸುತ್ತಿರುವಾಗ ಮುಂದಿನ ಪ್ರಾಕಾರದ ಬಾಗಿಲು 'ಖಣಿಲ್' ಎಂದು ಸದ್ದು ಮಾಡಿತು. ಕಮಲೇಶ್ ಎದ್ದು ಹೋಗಿ ಕದ ತೆರೆದಳು. ಬೆಳಗಿನಿಂದ ಒಂದೇ ಸಮನೆ ಕೆಲಸ ಮಾಡಿದ್ದ ಚಂದ್ರಕಾಂತನ ಮುಖ ಬಳಲಿ ಬೆಂಡಾಗಿತ್ತು. ಒಳ ಬಂದವನೇ ಮುಖ ಮಜ್ಜನ ಮಾಡಿ ಊಟಕ್ಕೆ ಕುಳಿತ. ಊಟಕ್ಕಿಡುವ ಮೋಹಕ ಹಸ್ತಗಳ ಕೊಡುಗೆಯನ್ನು ಮನಕ್ಕಾನಂದ ತುಂಬಿಕೊಳ್ಳುತ್ತ ಉಣ್ಣ ತೊಡಗಿದ. ಅವನದಾಗುವವರೆಗೂ ಕಾದಿದ್ದ ಕಮಲೇಶಳ ಅಂತರ್ವಾಣಿ ಚೀರಿತು "ಸದಾ ಹಸಿದಿರುವ ಹುಲಿ!"

ಕೈ ಬಾಯಿ ತೊಳೆದು ಟವಲಿನಿಂದ ತೀಡಿ ಒಳಬಂದ ಚಂದ್ರಕಾಂತ್ ಮಂದಸ್ಮಿತನಾಗಿ ಅಂದ "ಇಂದು ಬಹಳ ಹಸಿದಿದ್ದೆ ಕಮಲೇಶ್!"

"ನೀವು ಹಸಿದಿಲ್ಲದ ಘಳಿಗೆ ಯಾವುದು?" ಸಿಟ್ಟಿನಿಂದ ಹೇಳಿದಳು ಮಲೇಶ್.

"ಅದೇನು ಹಾಗೆಂದರೆ? ನಾನು ಸದಾ ತಿನ್ನುತ್ತಿರುತ್ತೇನೆಯೆ?"

ಪ್ರಶ್ನೆ ನಗು ತರಿಸಿತು. ಸಿಟ್ಟು ಮಾಯವಾಗಿ ಮುಖ ಪ್ರಸನ್ನವಾ ಯಿತು. ಕಮಲೇಶ್ ಹಾಸಿಗೆಯನ್ನು ಸೇರಿದಳು. ಮಗ್ಗುಲಲ್ಲಿ ಹಾಯಾಗಿ ಲಗಿದ್ದ ಚೇತನಳನ್ನು ನೋಡುತ್ತಾ ಚಂದ್ರಕಾಂತ್–"ಅವಳೇಕೆ ಇಲ್ಲಿ? ನನ್ನ ಸ್ಥಾನವನ್ನು ಇತರರು ಆಕ್ರಮಿಸಿಕೊಳ್ಳುವುದನ್ನು ನಾನು ಸಹಿಸಲಾರೆ!"

"ಮೊದಲಿಷ್ಟು ಸುಧಾರಿಸಿಕೊಳ್ಳಿರಿ. ಅನಂತರ ಅದೆಲ್ಲ."

ಕನ್ನಡಿಯ ಮುಂದೆ ನಿಂತು ಕೂದಲು ತಿದ್ದುತಿದ್ದ ಅವನು ಗಡಿಯಾ ದ ಕಡೆ ಕಣ್ಣು ಹೊರಳಿಸಿ "ಗಂಟೆ ಈಗಾಗಲೇ ನಾಲ್ಕಾಗುತ್ತಾ ಬಂತು. ುಧಾರಿಸಿಕೊಳ್ಳಲು ಇನ್ನೂ ಹೊತ್ತಾದರೂ ಎಲ್ಲಿದೆ?"

ಪ್ರತಿಯುತ್ತರ ಬಾರದಿರಲು ಚಂದ್ರಕಾಂತ್ ಹಿಂತಿರುಗಿ ನೋಡಿದಾಗ ಾಸಿಗೆಯಲ್ಲಿ ಅವಳಿರಲಿಲ್ಲ. ಎಲ್ಲೆಂದು ನೋಡಲು ಅತ್ತಿತ್ತ ತಿರುಗುವುದ ೊಳಗಾಗಿ ವಾಂತಿ ಮಾಡುವ ಸದ್ದು ಕಿವಿಗೆ ಬಿತ್ತು. ತಕ್ಷಣ ನೀರುಮನೆಗೆ ೋದ. ವ್ಯಗ್ರವಾಗಿ ವಾಂತಿ ಮಾಡುತಿದ್ದ ಅವಳ ಬೆನ್ನಿನ ಮೇಲೆ ಕೈಯಿಟ್ಟು ನುಕಂಪದಿಂದ ಕೇಳಿದ "ಏಕೆ....ಏನಾಯಿತು ಡಾಕ್ಟರ್? ಏನಾದರೂ ಜೀರ್ಣವೇ?"

ಕಮಲೇಶ್ ಪೂರ್ತಿ ವಾಂತಿ ಮಾಡಿ ಮುಗಿಸುವವರೆಗೂ ಸುಮ್ಮನಿದ್ದು ಂತರ ಕಷ್ಟದಿಂದ ನುಡಿದಳು "ಏನೋ ಗೊತ್ತಿಲ್ಲ."

ಕೊಠಡಿಯ ಕದ ಮುಚ್ಚಿ ಪುಸ್ತಕ ಪಠಣದಲ್ಲಿ ತೀವ್ರ ಮಗ್ನಳಾಗಿದ್ದ ್ಣಮಾಲಿನಿಯ ಕಿವಿಗೆ ಸದ್ದು ಮುಟ್ಟಿರಲಿಲ್ಲ. ಚಂದ್ರಕಾಂತ್ ಅವಳ ಂದೆಯೇ ಒಳಬಂದ. ಮನದಲೆಯಲ್ಲಿ ನಾನಾ ಪ್ರಶ್ನೆಗಳೆದ್ದುವು. ಹುಚ್ಚೆತ್ತಿ ವನನ್ನು ನೋಡಲಾಗದೆ ಹೋಗಿ ಹಾಸಿಗೆಯ ಮೇಲೆ ಜೋರಲಾಗಿ ಬಿದ್ದು ೊಂಡಳು. ಹೊಟ್ಟೆಯ ಸಂಕಟದೊಂದಿಗೆ ಮನದ ದುಗುಡವೂ ಬೆರೆತು ೊಂಡಿತು. ಯಾವುದೋ ವೀಣೆಯ ವಿಶಾದ ಗೀತೆ ಅಂತರಂಗದ ತಂತುಗಳಲ್ಲಿ ೃತಗತಿಯಲ್ಲಿ ಮಿಡಿಯುತ್ತಿದೆ.

ತಲೆಯನ್ನು ನೇವರಿಸುತ್ತಾ ಒಲುಮೆಯಿಂದ, ಕಾತರ ತುಂಬಿದ ಧ್ವನಿ

ಯಿಂದ ಕೇಳಿದ ಚಂದ್ರಕಾಂತ್ "ಡಾಕ್ಟರ್! ಏನಾದರೂ ತೆಗೆದುಕೊಳ್ಳು ವಿರಾ? ಔಷಧಿ ಕೊಡಲೇ?"

"ಈಗ ಏನೂ ಬೇಡ."

"ಏನೆಂಬುದನ್ನಾದರೂ ಹೇಳಿ ಕಮಲೇಶ್?"

"ಏನೂ ಇಲ್ಲ. ನನಗಿಷ್ಟು ವಿಶ್ರಾಂತಿ ಬೇಕು ಅಷ್ಟೆ."

"ಈ ಕಡೆ ತಿರುಗಿರಿ. ಹೊಟ್ಟೆಯನ್ನಾದರೂ ನೋಡುವೆ."

ಅವನ ಒರಟು ಕೈ ಮೈಕೈಯನ್ನೆಲ್ಲಾ ನೇವರಿಸಿತು. ಬಳಿಯಲ್ಲಿ ಕುಳಿತು ಮುಖಮುಡಿಯಾಗಿ ಮಲಗಿದ ಅವಳನ್ನು ತನ್ನೆಡೆಗೆ ತಿರುಗಿಸಿಕೊಳ್ಳಲು ಪ್ರಯತ್ನ ಪಟ್ಟ.

"ನೀವು ಸ್ವಲ್ಪ ಹೊತ್ತು ಸುಮ್ಮನಿದ್ದರೆ ನನಗೆ ವಿಶ್ರಾಂತಿ."

ಆದರೆ ಕುತೂಹಲ ಕೆರಳಿದ್ದುದರಿಂದ ನಿಮಿಷವೂ ಸುಮ್ಮನೆ ಇರಲಾರ ದಷ್ಟು ತವಕಗೊಂಡು "ಇದೂ ಒಂದು ರೀತಿಯ ಜಂಬ!" ಎಂದು ನಿಷ್ಠುರತೆ ಯಿಂದ ನುಡಿದ.

ಸ್ವಲ್ಪ ಹೊತ್ತು ಆಶ್ಚರ್ಯ ನಿಮಗ್ನನಾದರೂ ಅವಳ ಮೌನಮುದ್ರೆ ಅಂತಃಪಟಲಕ್ಕೆ ಕನ್ನಡಿಯನ್ನು ಹಿಡಿಯಿತು. ಚಂದ್ರಕಾಂತ್ ಪುಳಕಿತನಾಗಿ ಅಂದ "ಓ....!ನನಗೀಗ ಹೊಳೆಯಿತು. ಚಂದ್ರಕುಮಾರನಿಗೆ ಸುಸ್ವಾಗತ!"

ಕೃತಕೃತ್ಯತೆಯ ಉತ್ತೇಜನ ಸಹಸ್ರ ಸಹಸ್ರ ಸ್ರೋತಗಳಲ್ಲಿ ಹರಿದಾಗ ಆಕೆಯ ಲೋಹಿತ ಕಪೋಲತಲದ ಕಾಂತಿಯು ದ್ವಿಗುಣವಾಯಿತು. ಅದನ್ನು ತೋರಿಕೊಳ್ಳದಿರಲು ಹಾಗೇ ಮುಖಮುಡಿಯಾಗಿ ಮಲಗಿಕೊಂಡಳು. ಈಕಡೆ ತಿರುಗಲು ಮನಸ್ಸಾಗಲಿಲ್ಲ. ಚಂದ್ರಕಾಂತನ ಮುಖ ಮೈಗಳಲ್ಲಿ ಸಂತಸದ ಅಮಲು ತುಂಬಿ ಹರಿಯಿತು. ನಿಷ್ಕಲ್ಮಶ ಅನುರಾಗ ಭಾವೋದ್ವೇಗಗಳ ಪರ ವಶನಾಗಿ ಹಾಸ್ಯಮಿಶ್ರಿತ ಅಮಿತಾಶ್ಚರ್ಯದಿಂದ ಪ್ರಶ್ನಿಸಿದ "ಡಾಕ್ಟರ್ ನಿಮಗೆ ಸಂತೋಷವಾಗಲಿಲ್ಲವೇ....? ನಾವು ತಂದೆ ತಾಯಿಗಳೆನ್ನಿಸಿಕೊಳ್ಳುವುದು ಎಂತಹ ಹೆಮ್ಮೆ?"

ಅವಳು ಮಾತಾಡಲಿಲ್ಲ. ಅಂತರಂಗ ಸಂಘರ್ಷಣೆಗೊಳಗಾಗಿತ್ತು. ಹೊಟ್ಟೆಯೊಳಗಿನ ತೊಳಸುವಿಕೆಯಿಂದ ಸಾವಧಾನವಾಗಿ ಯೋಚಿಸುವಷ್ಟು ಸಮಯವಾಗಲೀ ಸಹನೆಯಾಗಲೀ ಇರಲಿಲ್ಲ. ಪೂರ್ಣದೋಷವೆಲ್ಲ ಅವನದೇ

ಅಲ್ಲವಾದರೂ ಇನ್ನೆರಡು ವರ್ಷಗಳಾದರೂ ಹಾಯಾಗಿರೋಣವೆಂಬುವ ಹಂಬಲವನ್ನು ಕಡೆಗಣಿಸಿದ್ದು ಅಸಮಾಧಾನ. ಮುಖದ ಮೇಲೆ ಮೂಡಿದ ಹನಿಗಳನ್ನು ತೀಡಿಕೊಳ್ಳುತ್ತಾ ಹೇಳಿದಳು "ನನಗಿಷ್ಟು ವಿಶ್ರಾಂತಿ ಬೇಕು. ದಯಮಾಡಿ...."

"ಈಗೆಲ್ಲಿ....? ಚಂದ್ರಕುಮಾರನ ಆಗಮನಾನಂತರ ವಿಶ್ರಾಂತಿ!"

ಒಮ್ಮೆಲೇ ನೂರು ಆರತಿಗಳು ಬೆಳಗಿದುವೋ ಎಂಬಂತೆ ಉದ್ವಿಗ್ನತೆಯಿಂದ ನಗುವಿನ ವಿಮಲಧಾರೆ ತುಂಬಿ ಹರಿಯಿತು.

"ನೀವಿಷ್ಟೊಂದು ನಿರ್ದಯರೆಂಬುದನ್ನು ತಿಳಿದುಕೊಳ್ಳದಿದ್ದುದು ನನ್ನ ತಪ್ಪು" ಎಂದುಕೊಂಡಳು ಕಮಲೇಶ್. ಮನದಾಗಸದಲ್ಲಿ ಯಾವುದೋ ಅವ್ಯಕ್ತ ಭಯ ಮೂಡಿ ಸುಂದರ ಮುಖಬಿಂಬ ಕಳಾಹೀನವಾಯಿತು. ಭವಿಷ್ಯದ ಭವ್ಯ ವೇದಿಕೆಯನ್ನು ಮನೋಜ್ಞವಾಗಿ ನಿರ್ಮಿಸಲು ಅವಾಸ್ತವಿಕತೆಯೊಡನೆ ರಾಯಭಾರ ನಡೆಸುತಿತ್ತು ಅಂತರಂಗದ ಭಾವಜ್ವಾಲೆ.

"ನೀವು ತಪ್ಪಾಗಿ ಭಾವಿಸುತ್ತಿರುವಿರಿ! ಜೀವನ ವಿಕಾಸವೇ ಬದುಕಿನ ಪರಮ ಸಿದ್ಧಿ!"

ಒಮ್ಮೆ ಯಾವ ಆದರ್ಶಕ್ಕಾಗಿ ಡಾಕ್ಟರೇ ಆಗಬೇಕೆಂದು ತಾಯಿಯೊಡನೆ ಹೇಳಿಕೊಂಡಿದ್ದಳೋ ಆ ಸದ್ಭಾವನೆಯ ಹಿಂದೆ ಈಗ ಯಾವುದೋ ತಾನರಿಯದ ಸಣ್ಣ ನಿಷ್ಠುರತೆ ವ್ಯಾಪಕವಾಗಿ ಬೆಳೆದಂತಿದೆ....ಅದು ತಾತ್ಕಾಲಿಕವೋ ಅಥವಾ ಆಜನ್ಮ ಪರ್ಯಂತವೋ ದೇವರಿಗೇ ಗೊತ್ತು.

ಕಮಲೇಶ್ ನಿಡಿದಾದ ನಿಟ್ಟುಸಿರು ಬಿಟ್ಟಳು.

ಅಧ್ಯಾಯ

೨೧

....ಸುಪ್ರಭಾತ....ಅರುಣೋದಯ ಶ್ರೀ !

....ರಾತ್ರಿಯ ವಿಶ್ರಾಂತಿ ಮಾನವೀಶಕ್ತಿಯನ್ನು ಪ್ರೋಜ್ವಲಗೊಳಿಸಿದೆ. ಪೂರ್ವದಿಗಂತದಲ್ಲಿ ಸೂರ್ಯೋದಯವಾದನಂತರ ದಿನಚರಿ ಆರಂಭವಾಗಿದ್ದರೂ ಆಗಲೇ ನಗರದಲ್ಲಿ ಚಟುವಟಿಕೆ ಆರಂಭವಾಗಿತ್ತು. ಡಾ|| ಕಮಲೇಶ್ ದಂಪತಿಗಳು ಆಸ್ಪತ್ರೆಯ ಹಾದಿ ಹಿಡಿದಿದ್ದರು. ಮಡಿಲು ತುಂಬಿದ ಶರೀರದ ಅಂಗೋಪಾಂಗಗಳು ರಸವೂಡಿಕೊಳ್ಳುವ ಚಂದನರಾಗದ ಕಿತ್ತಳೆಯಂತೆ ಮೋಹದ ಕಣ್ಣಿಗೆ ಹಬ್ಬವಾಗಿ, ಸ್ಪರ್ಶಕ್ಕೆ ಹೂವಾಗಿ, ಮನಕ್ಕೆ ಆನಂದವಾಗಿ, ಹೃದಯ ಬನಕ್ಕೆ ರಾಣಿಯಾಗಿ ರಾಗಾನುರಾಗಗಳ ಭಾವಜ್ವಾಲೆ ಉದ್ದೀಪನಗೊಂಡಿತ್ತು. ಡಾ|| ಚಂದ್ರಕಾಂತ್ ಆನಂದ ಸಾಮ್ರಾಜ್ಯದ ಅಧಿಪತಿಯಾಗಿ ನುಡಿದ "ಡಾಕ್ಟರ್, ಈ ಅಸ್ಥಿರವಾದ ಶರೀರ ವಲಯಗಳಲ್ಲಿ ಕೆಲವು ಸ್ಥಿರವಾದ ವಿಚಾರಗಳು ಇಲ್ಲದೆ ಹೋಗಿದ್ದರೆ ಈ ಜಗತ್ತಿನ ಇತಿಹಾಸ ಇನ್ನಾವ ಬಗೆಯ ರೂಪ ತಳೆಯುತಿತ್ತೋ....?"

ಕಮಲೇಶ್ ಕೆಲವು ಕ್ಷಣ ಯೋಚಿಸಿ ಸಹಾನುಭೂತಿಯ ವರ್ಷಣದಿಂದ ಕಡೆಗಣ್ಣ ಕಟಾಕ್ಷವನ್ನು ಬೀರಿ ನುಡಿದಳು "ನಿಜ ; ಆದರೂ ಇಂದಿನ ನಾಗರಿಕತೆಗನುಗುಣವಾಗಿ ನಮ್ಮ ಜೀವನವನ್ನು ರೂಪುಗೊಳಿಸಿ ಆದರ್ಶ...."

ಚಂದ್ರಕಾಂತ್ ನಡುವೆ ಬಾಯಿಹಾಕಿದ "ಡಾಕ್ಟರ್, ಸಾಮಾಜಿಕ ಸಂವಿಧಾನವನ್ನು ವಿಶ್ಲೇಷಣೆ ಮಾಡಿ ನೋಡಿದರೆ ಈ ಜೀವನವು ಸಾಮಾಜಿಕ ವಲಯವನ್ನು ಬಳಸಿಕೊಂಡ ರೀತಿ ನಿಜವಾಗಿಯೂ ಅದ್ಭುತವಾದುದು. ಇಲ್ಲದಿದ್ದಲ್ಲಿ ನಾವು ಮೇಲೆ ಕಾಣುವ ಡಾಂಬಿಕತೆಯನ್ನು ನೋಡುತಿದ್ದೆವೇ ಹೊರತು ಆಂತರಂಗಿಕ ದಂದ್ವಭಾವನೆಗಳನ್ನು ಕಂಡುಕೊಳ್ಳದೆ ಹಿಂದೂಸ್ಥಾನದ "ಸ್ತ್ರೀ"ತ್ವ ಎಂದೋ ಅಡವಿಪಾಲಾಗುತಿತ್ತು."

ವಿಷಯ ವಾಸ್ತವತೆಯನ್ನು ತಲುಪಿದಾಗ ಮುಂದೆ ಏನು ಹೇಳಬೇಕೋ

ಹೊಳೆಯುದೆ ಅವಾಕ್ಕಾದಳು. ಆತನ ಶೋಣವರ್ಣದ ಮುಖದಮೇಲೆ ಉಬ್ಬಿದ ನರಗಳು ಸ್ಪಷ್ಟವಾಗಿ ಕಾಣಿಸಿದುವು. ಒಂದು ಕ್ಷಣ ನೋಟ ಅವನೆಡೆಗೆ ಹೊರಳಿ ಬೇರೆಡೆಗೆ ಜಿಗಿಯಿತು. ಅದೇ ಘಳಿಗೆಯಲ್ಲಿ ಆಸ್ಪತ್ರೆಯ ಮೆಟ್ಟಿಲು ಹತ್ತುತ್ತಿದ್ದಂತೆ ಡಾ|| ಥಾಮಸ್ ಎದುರಾದರು. ಹಿರಿಯ ವ್ಯಕ್ತಿಗೆ ಅಭಿವಾದನ ಸಲ್ಲಿಸಿದರು ದಂಪತಿಗಳು. ಅವರು ತಟ್ಟನೆ ಕೇಳಿದರು "ಇಂದಿನ ವಿಷಯ ಕೇಳಿದಿರಾ ಡಾಕ್ಟರ್ ?"

"ಏನು ?" ಮುಖಮುದ್ರೆಯಲ್ಲಿ ತವಕ ಸ್ಪಷ್ಟವಾಗಿ ಕಾಣಿಸಿತು.

"ಇಂಗ್ಲೆಂಡಿನಲ್ಲಿ ಡಾ|| ನಿರಂಜನ್‌ರವರಿಗೆ ರೆಸ್ಪರೇಟರಿ ಮಸಲ್ಸ್ ಪೆರಾಲಿಸಿಸ್ ಆಗಿದೆಯಂತೆ. ಅಲ್ಲಿಯ ತಂಡಿಯ ಹವೆಯಿಂದ ಅಲ್ಲಿದ್ದು ಚಿಕಿತ್ಸೆ ಪಡೆಯುವಂತಿಲ್ಲ. ಐರನ್‌ಲಂಗ್ ಮಿಷನ್‌ನಲ್ಲಿಟ್ಟು ಇಲ್ಲಿಗೆ ಅವರನ್ನು ಕರೆತರುವುದಾಗಿ ಟ್ರಂಕ್‌ಕಾಲ್ ಒಂದಿದೆ. ಇಂದು ಒಂದು ಗಂಟೆಯ ವಿಮಾನದಲ್ಲಿ ಇಲ್ಲಿಗೆ ಬರುತ್ತಾರೆ. ನಾವು ಯಾರಾದರೂ ವಿಮಾನ ನಿಲ್ದಾಣಕ್ಕೆ ಹೋಗಬೇಕಾಗುತ್ತದೆ."

"ಬಹಳ ವಿಶಾದಕರ. ಆಗಾಗ್ಗೆ ಮೀಟಿಂಗಿಗೋಸ್ಕರ ಹೋಗುತಿದ್ದ ಅವರಿಗೆ ಇಂಗ್ಲೆಂಡ್ ಬಹಳ ಬಳಕೆಯ ಕ್ಷೇತ್ರ. ಆಹಾರ ಪಾನಾದಿಗಳನ್ನು ಹಿತಮಿತವಾಗಿ ಬಳಸುವ ವ್ಯಕ್ತಿ. ಪಾಪ, ಇದೇನೋ ಗ್ರಹಚಾರ."

ಡಾ||ಥಾಮಸ್ ಅನುದಿನದ ಕಾರ್ಯಕಲಾಪದೊಂದಿಗೆ ಡಾ||ನಿರಂಜನ್‌ರವರಿಗೆ ಎಲ್ಲಾ ಅನುಕೂಲಗಳನ್ನು ಕಲ್ಪಿಸುವ ಸಲುವಾಗಿ ಸರಸರ ಹೊರಟರು. ಕಮಲೇಶ್ ದಂಪತಿಗಳ ಹಾದಿಯು ಅಲ್ಲಿಂದ ಕವಲೊಡೆಯಿತು. ಚಂದ್ರಕಾಂತ್ ಆಪರೇಶನ್ ಥಿಯೇಟರಿಗಭಿಮುಖವಾಗಿ ನಡೆದ. ಕಮಲೇಶ್ ಸಹ ಡಾಕ್ಟರುಗಳೊಂದಿಗೆ ವಾರ್ಡ್ ಭೇಟಿಯನ್ನಾರಂಭಿಸಿದಳು. ಮೊದಲ ವಾರ್ಡು ಅಳಿದ ಚಂದ್ರಭಾನುವಿನ ತಮ್ಮ ಸೂರ್ಯಭಾನುವಿನದು. ಕಿವಿಯಲ್ಲಿ ಮೊಳೆತ ಹುಣ್ಣು ಮ್ಯಾಸ್ಟಾಡೈಟೀಸ್ (MASTOIDITIS)ಗೆ ಹರಡಿ ದಿನೇ ದಿನೇ ಬಾಲಕನ ಸ್ಥಿತಿ ಉತ್ಕಟಾವಸ್ಥೆಗೆ ಏರುತಿತ್ತು. ವೈದ್ಯ ವೃತ್ತಿಗೆ ಸವಾಲೋ ಎಂಬಂತೆ ವಿಧಿ ಅವರ ಮಕ್ಕಳನ್ನು ಒಂದೊಂದಾಗಿ ಕಸಿಯುತ್ತಿದೆ. ಸಿರಿವಂತರಾದ ತಂದೆ ತಾಯಿಗಳು ಹಣವನ್ನು ನೀರಿನಂತೆ ಖರ್ಚು ಮಾಡಲು ಸಿದ್ಧರಾಗಿ ಮೃತ್ಯುವಿನೊಡನೆ ಹೋರಾಟಕ್ಕಿಳಿದಿದ್ದರೂ ಬಾಲಕ ಕ್ಷೀಣಿಸುತಿದ್ದಾನೆ;

ಹಿರಿಯ ವೈದ್ಯವೃಂದ ಕಲಿತ ವಿದ್ಯೆಯನ್ನೆಲ್ಲಾ ಧಾರೆಯೆರೆದರೂ ಮೃತ್ಯುವಿನ ಕೈ ಮೇಲಾಗುತ್ತಲೇ ಇದ್ದು, ತುಹಿನ ಬಿಂದುಗಳಿಂದ ತುಂಬಿದ ಪದ್ಮಪಲಾಶ ದಂತೆ ಬಾಲಕನ ಮುಖಮಂಡಲ ಬೆವರಿನ ತುಂತುರುಗಳಿಂದ ಆವೃತವಾಗಿತ್ತು. ಶೀರ್ಣಿತ ವದನದಲ್ಲಿ ಜ್ಯೋತಿರ್ಬಿಂದುಗಳಂತೆ ಕಣ್ಣುಗಳು ಮಿನುಗುತಿದ್ದುವು. ಬಿಳಿಯ ಹೊದಿಕೆಯಡಿ ಬಾಲಕ ಕರುಣಾಜನಕ ರೀತಿಯಲ್ಲಿ ಮೈ ಮುದುಡಿ ಮಲಗಿದ್ದ. ಆದರೂ ಮನಸ್ಸು ದೃಢವಾಗಿತ್ತು. ನತದೃಷ್ಟ ಬಾಲಕನ ತಂದೆ ಕೃಷ್ಣಭಾನು ಹೊರ ರಾಜ್ಯದ ಹಿರಿಯ ವೈದ್ಯರನ್ನು ಬರಮಾಡಿಕೊಳ್ಳಲು ಕೇಳಿಕೊಂಡಿದ್ದರು. ಆದರಂತೆ ಹೊರರಾಜ್ಯದ ವೈದ್ಯರುಗಳು ಬಂದು ನೋಡಿದ್ದರು ಸಹ.

ಹಣದ ಥೈಲಿ ಕರಗಿದರೂ, ಬುದ್ಧಿಶಕ್ತಿ ವ್ಯಯವಾದರೂ ದೊರೆತ ಫಲ ನಿಷ್ಫಲ. ಬಾಳಿನ ಭಾಗ್ಯಸೂರ್ಯ ಆಗಲೇ ಪಡುವಣ ಮಟ್ಟಿಗೆ ಇಳಿದು ಬಿಟ್ಟಿದ್ದಾನೆ. ಇನ್ನು ಮುಳುಗುವುದೊಂದು ಬಾಕಿ.

ದುರ್ವಿಧಿಯು ತೆರೆಯಮರೆಯಲ್ಲಿ ಹೊಂಚುಹಾಕಿ ಅನಂತವೂ ಅಸಹ್ಯವೂ ಆದ ಅವಾಸ್ತವಿಕತೆಯೊಡನೆ ಸಂಧಿ ಮಾಡಿಕೊಂಡು ಅಮೂಲ್ಯವಾದ ಜೀವನವನ್ನು ನಷ್ಟಪಡಿಸುತ್ತಿರುವನಲ್ಲಾ ಎಂಬುದೇ ಕೊನೆಗಾಣದ ಸಮಸ್ಯೆ.... ತೀರದ ದುಃಖ. ಯಾವುದು ಕರ್ತವ್ಯವೋ ಅದರಲ್ಲಿ ಸಂಕೋಚಗೊಂಡು, ಯಾವುದು ಮಾಯಕವೋ ಅದರಲ್ಲಿ ತೊಡಗಿ, ಯಾವುದು ಧರ್ಮವೋ ಅದರ ಕತ್ತು ಹಿಸುಕಿ ಸಾರ್ಥಕತೆಯನ್ನು ಬೋಧಿಸುವ ಬಗೆಗೆ ಏನೆನ್ನಬೇಕೋ. ಈ ಜೀವನದಲ್ಲಿ ಅದೃಷ್ಟಾದೃಷ್ಟಗಳು ಶಾಶ್ವತವಲ್ಲವಾದರೂ ಅವುಗಳ ಕಟುಸತ್ಯ ಗಂಭೀರ ಸ್ವರೂಪಗಳನ್ನು ಅನುಭವಿಸುವ ಅನುಭವ ವಾಸ್ತವವಾದುದು....

ಕಮಲೇಶ್ ಚಿಂತಾಕುಲಳಾಗಿ ಬಾಲಕನ ನಾಡಿ ಹಿಡಿದಳು.

"ರಾತ್ರಿ ನಿದ್ದೆ ಬಂದಿತ್ತೆ ಮಗೂ ?"

ಬಾಲಕ ನರಳು ದನಿಯಲ್ಲಿ ಉತ್ತರಿಸಿದ "ಮಾತ್ರೆ ನುಂಗಿದಮೇಲೆ ಸ್ವಲ್ಪ ನಿದ್ದೆ ಬಂದಿತ್ತು....ಬಹಳ ನೋವು ಡಾಕ್ಟರ್."

ತಲೆಯ ದಿಶೆಯಲ್ಲಿ ನಿಂತಿದ್ದ ಶೀರ್ಣಮುಖಿ ಮಾತೆಯ ಕಂಬನಿಗಳು ಕಪೋಲದ ಮೇಲೆ ಧಾರಾಕಾರವಾಗಿ ಹರಿಯುತ್ತಿವೆ. ಆ ಚಿರ ದುಃಖಿನಿಯನ್ನು ಕಣ್ಣೆತ್ತಿ ನೋಡುವುದೂ ಸಹ ಕಷ್ಟವೆನಿಸುತ್ತದೆ. ಬಾಲಕನ ನರಳು

ದನಿ ಬಾವಿಯಾಳದಿಂದ ಮೊಳಗಿದಂತೆ ಮೊಳಗಿತು. "ಡಾಕ್ಟರ್, ಅಮ್ಮ ಬಹಳ ದುಃಖಿಸುತ್ತಾರೆ. ಅವರಿಗೆ ಸಮಾಧಾನ ಹೇಳಿರಿ. ಅವರು ಸಮಾಧಾನ ಹೊಂದಿದರೆ ನನ್ನ ಆತ್ಮಕ್ಕೆ ಶಾಂತಿ."....ಒಂದು ಘಳಿಗೆ ತಡೆದು ಪುನಃ ಮುಂದುವರಿದ "ನನಗೂ ಅಪ್ಪ ಅಮ್ಮನನ್ನು ಬಿಟ್ಟು ಹೋಗುವುದು ತುಂಬ ಕಷ್ಟ. ಆದರೆ ಅದು ಭಗವಂತನ ಇಚ್ಛೆ. ಈ ಪ್ರಪಂಚ ಯಾರಿಗೂ ಸ್ಥಿರವಲ್ಲ. ಮತ್ತೇಕೆ ದುಃಖ?"

"ಮಗೂ, ದೇವರಿದ್ದಾನೆ. ಧೈರ್ಯ...."

ಬಾಲಕ ತಕ್ಷಣ ನಡುವೆ ಬಾಯಿ ಹಾಕಿದ "ಡಾಕ್ಟರ್, ಧೈರ್ಯಗೆಡುವ ಪ್ರಶ್ನೆಯೇ ಇಲ್ಲ. ಚಂದ್ರಭಾನು ಕರೆಯುತ್ತಿದ್ದಾನೆ. ನಾನು ಪಯಣ ಬೆಳೆಸಲು ಸಿದ್ಧನಾಗುವೆ. ಇನ್ನು ನೀವು ನನಗಾಗಿ ತೆಗೆದುಕೊಳ್ಳುವ ಶ್ರಮ ವ್ಯರ್ಥ. ಅದಕ್ಕಿಂತ ಅಮ್ಮನಿಗೆ ಧೈರ್ಯ ಹೇಳಿರಿ. ಅವರು ಸಮಾಧಾನ ಹೊಂದಿದರೆ ನನಗೆ ಶಾಂತಿ. ನೀವು ಇನ್ನು ಮಾಡಬಹುದಾದ ಉಪಕಾರ ಅದೊಂದೇ."

ಬಾಲಕ ಒಣಗಿದ ತುಟಿಯನ್ನು ನಾಲಿಗೆಯಿಂದ ಸವರಿಕೊಂಡ. ಮುಖ ಮಂಡಲ ಶೀರ್ಣವಾಗಿದ್ದರೂ ಅಸ್ತಮಾನ ಪ್ರಭೆಯಿಂದ ಕಳಾಪೂರ್ಣವಾಗಿದೆ. ನಿಶ್ಚಲ ಶಾಂತ ಮುಗ್ಧ ಸೌಂದರ್ಯ ಆತ್ಮಪ್ರತಿಭೆಗೆ ಪೂರಕವಾಗಿವೆ. ಆ ದೃಢ ಮನಸ್ಥೈರ್ಯವನ್ನೂ ಕಣ್ಣುಗಳಲ್ಲಿ ಮಿನುಗುವ ಜೀವಜ್ಯೋತಿಯನ್ನೂ ನೋಡುತ್ತಾ ಸ್ವಲ್ಪ ಹೊತ್ತು ಹಾಗೇ ನಿಂತಳು ಕಮಲೇಶ್. ಆ ಮುಹೂರ್ತದಲ್ಲಿ ಏನು ಹೇಳಬೇಕೋ ಹೊಳೆಯಲಿಲ್ಲ. ಅಂತಃಕರಣ ಬಿಸಿಲು ತಾಗಿದ ಮಂಜಿನಂತೆ ಕರಗಿತು. ಇನ್ನೊಂದು ಘಳಿಗೆ ಅಲ್ಲೇ ಇದ್ದರೆ ತನ್ನ ಕಣ್ಣುಗಳಲ್ಲಿ ಕಂಬನಿಗಳು ಮೊಳೆಯುವುದರಲ್ಲಿ ಅನುಮಾನವಿಲ್ಲವೆಂಬುದರ ಅನುಭವ ಆಗಲೇ ಆಗುತ್ತಿದೆ. ತನ್ನನ್ನು ತಾನು ಸುಧಾರಿಸಿಕೊಳ್ಳುವಷ್ಟರಲ್ಲಿ ಪದ್ಮಾಕಮಲಾನಿ ಜುಬೇದಾಬೇಗಂ ಆಗಮಿಸಿದರು. ಮೂವರ ಕಣ್ಣುಗಳೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡುವು.

ಕಮಲೇಶ್ ಆ ಪರಮ ದುಃಖಿನಿಯಾದ ತಾಯಿಗೆ ಒಂದೆರಡು ಸಮಾಧಾನದ ಮಾತುಗಳನ್ನು ಹೇಳಿ, ಬಾಲಕನ ಹಣೆಯ ಮೇಲೆ ಕೈಯಿಟ್ಟು ಕಾರುಣ್ಯಪೂರ್ಣ ಸ್ವರದಲ್ಲಿ ನುಡಿದಳು "ದೇವರು ದೊಡ್ಡವನು ಮಗೂ,

ಸರ್ವದಾ ಆತನ ಧ್ಯಾನ ಮಾಡು. ನಿನಗೆ ಇತರೆ ಚಿಂತನೆ ಬೇಡ. ನೀನಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಬಾರದು."

ಸ್ನೇಹಸ್ನಿಗ್ಧ ಆಶೀರ್ವಾದದಂತೆ ಹಣೆಯ ಮೇಲಿನ ಮೃದು ಹಸ್ತ ಇನ್ನೂ ಕದಲದೆ ಇತ್ತು.

"ನಾನು ಭಯಪಟ್ಟಿದ್ದೇನೆ ಎಂದುಕೊಂಡಿದ್ದೀರೇನೋ....ಸರ್ವಥಾ ಇಲ್ಲ, ಏನು ಆಗಬೇಕೋ ಅದು ಆಗಿಯೇ ತೀರುತ್ತೆ. ಅದಕ್ಕೇಕೆ ಭಯ?" ನಿಶ್ಚಲವಾದರೂ ಮರುಕಾಂತಾರದಲ್ಲಿ ಬತ್ತಿಹೋಗಲಿರುವ ನದಿಯಂತೆ ಕ್ಷೀಣಿತವಾಗಿತ್ತು ಅಮಾಯಕ ಸೌಕುಮಾರ್ಯ ಧ್ವನಿ.

ಅವನಿಗೆ ಏನಾದರೂ ಹೇಳಲೂ ಆಸ್ಪದವಿಲ್ಲದಂತೆ ಕಸ್ತೂರೀಗಂಧಕ್ಕೆ ಮಾರು ಹೋದ ಮುಗ್ಧ ಮನಸ್ಸಿನಂತಾಗಿ ತನ್ನ ಸಂಗಡಿಗರೊಡನೆ ಹೊರ ಬಂದಳು ಕಮಲೇಶ್. ಹೊಸ್ತಿಲು ದಾಟುತ್ತಲೂ "ಅಲ್ಪಾಯುಸ್ಸಿನ ಮಕ್ಕಳೇ ಹಾಗೆ." ಎಂದಳು ಜುಬೇದಾ.

"ಹೌದು, ಹೆತ್ತೊಡಲಿಗೆ ಕಿಚ್ಚು ಹಚ್ಚಲಿಕ್ಕೆ." ಭಾರವಾದ ಧ್ವನಿಯಲ್ಲಿ ಬಿತ್ತರಿಸಿದಳು ಕಮಲೇಶ್....ಪೂರ್ವಜನ್ಮ ಸಂಯೋಗದಿಂದ ಧರ್ಮಸಾಧನೆಯಲ್ಲಿ ರಸಾನುಭೂತಿಯನ್ನು ಪಡೆದ ದಿವ್ಯಾತ್ಮನಿಗೆ ಈ ಬದುಕು ಮಹತ್ವದ್ದಲ್ಲ. ಶ್ರದ್ಧಾಗಮ್ಯವಾದ ಧರ್ಮ ಯಾರಲ್ಲಿ ಇಚ್ಛಾಶಕ್ತಿಯನ್ನು ದೃಢಪಡಿಸಿರುವುದೋ ಆತ್ಮವಿಶ್ವಾಸವನ್ನು ಮೂಡಿಸಿರುವುದೋ ಅಂಥ ವ್ಯಕ್ತಿಯ ಇಚ್ಛಾಶಕ್ತಿ ಪೂರ್ಣ ದೃಷ್ಟಿಯಿಂದ ಕೂಡಿದ್ದು ಬದುಕಿನಲ್ಲಿ ತಥ್ಯ ಪ್ರಧಾನ ಅಂಶವನ್ನು ಪಡೆಯುತ್ತದೆ....ಎಂದು ಕೂಗಿ ಹೇಳುತ್ತಿದೆ, ಬೌದ್ಧಿಕ ತೂರ್ಯವಾಣಿ....ನದಿಯು ತನ್ನ ಇಕ್ಕೆಲಗಳ ಸರ್ವಸ್ವವನ್ನೂ ಎರಡೂ ಪಾರ್ಶ್ವಗಳಿಂದಲೂ ಸೂರೆಗೊಳ್ಳುತ್ತಾ ಉನ್ಮತ್ತವೇಗದಲ್ಲಿ ಸಮುದ್ರದೆಡೆಗೆ ಹರಿಯುವಂತೆ ದಿವ್ಯಾತ್ಮ ಸಾಕ್ಷಾತ್ಕಾರದೆಡೆಗೆ ನುಗ್ಗುವಾಗ ಲೋಕದಿಂದ ಲೋಕಾಂತರಕ್ಕೆ ಕಲುಷಿತ ಮಾನಸಿಕ ಅಂಧಕಾರವನ್ನು ತರುಬಿ ಕೊಂಡೊಯ್ಯಬಹುದು; ದಿಕ್ಕಿನಿಂದ ದಿಗಂತರಕ್ಕೆ ಕಾಲದಿಂದ ಕಾಲಾಂತರಕ್ಕೆ ಇನ್ನಾವ ಜೀವನ ಸಂದೇಶವನ್ನು ಮುಟ್ಟಿಸಲಿದೆಯೋ....

ಕಮಲೇಶ್ ತನ್ನಲ್ಲೇ ಯೋಚಿಸಿದಳು.

ಎಲ್ಲರೂ ಮುಂದಿನ ವಾರ್ಡಿಗೆ ಪದಾರ್ಪಣೆ ಮಾಡಿದರು.

ಹಾಸಿಗೆಯ ಮೇಲೆ ಐವತ್ತರ ಹರೆಯದ ಹೆಣ್ಣು ಮೈಮುದುಡಿ ಮಲಗಿದೆ. ಸೊರಗಿ ಸುಕ್ಕುಗಟ್ಟಿದ ಮುಖದಲ್ಲಿ ಕಣ್ಣಾಲಿಗಳು ಕಳಾಹೀನವಾಗಿ, ದೇಹ ಕ್ಷೀಣಿಸಿ, ತಲೆಯ ಕೂದಲುದುರಿ, ಮೈ ಬಿಳಿಚಿಕೊಂಡು ಸ್ಥಿತಿ ಚಿಂತಾಜನಕವಾಗಿದೆ ಆಕೆಯಲ್ಲಿ ಕ್ಯಾನ್ಸರ್ (CANCER) ರೋಗ ವ್ಯಾಪ್ತಿಗೆ ಮೀರಿ ಬೆಳೆದು ದೇಹದ ಮಿಕ್ಕ ಭಾಗಗಳಿಗೆ ತನ್ನ ಪಿಶಾಚ ಹಸ್ತವನ್ನು ಚಾಚಿತ್ತು. ಡಾಕ್ಟರುಗಳನ್ನು ನೋಡುತ್ತಲೂ ಹೆಣ್ಣು ನರಳಿತು. ಕಣ್ಣುಗಳಲ್ಲಿ ಕಟ್ಟೆಯೊಡೆದಂತೆ ನೀರಾಡಿತು.

"ನಾನು ಇನ್ನೂ ಎಷ್ಟುಕಾಲ ಹೀಗೆ ನರಳಬೇಕು ಡಾಕ್ಟರ್? ನಾನು ಬೇಗನೆ ಸಾಯುವ ಬಗ್ಗೆ ಏನಾದರೂ ಮಾಡಬಾರದೆ? ದೇವರಂತೂ ನನ್ನ ಬಗೆಗೆ ನಿಷ್ಕರುಣಿ....ನೀವೂ ಸಹ ನಿಷ್ಕರುಣಿಯಾಗುವಿರಾ?"

ಕಮಲೇಶಳ ಹೃದಯ ತಂತುಗಳಲ್ಲಿ ಯಾವುದೋ ರುದ್ರವೀಣೆ ರೌದ್ರ ಗೀತೆಯನ್ನು ಮಿಡಿಯಿತು. ಶಾಂತಸ್ವರದಿಂದ ಹೇಳಿದಳು "ಈ ಕಾಯಿಲೆ ಗುಣವಾಗುವುದು ತುಂಬ ನಿಧಾನ..." ಕೊನೆಯ ಘಳಿಗೆಯವರೆಗೆ ಧೈರ್ಯ ನೀಡುವ ವೈದ್ಯಧರ್ಮವನ್ನು ಪೂಸಿಕೊಂಡಿತ್ತು ವಿಷಾದ ನುಡಿ. ಅವಳ ಚಾರ್ಟನ್ನು ನೋಡಿ ಸ್ಥಿತಿಗತಿಯನ್ನರಿತುಕೊಂಡು, ಔಷಧಿಯ ಕ್ರಮವನ್ನು ಗಮನಿಸಿ, ಹೇಳಬೇಕಾದುದನ್ನು ಹೇಳಿ ಹೊರಬಿದ್ದಳು. ಕಾರಿಡಾರಿನಲ್ಲಿ ಎಳೆ ಬಿಸಿಲಿಗೆ ಮೈಗೊಟ್ಟು ಓಡಾಡುತ್ತಿದ್ದ ಚಿಂಗೆನ್ನೆಗಳ ಚೆಲುವೆ-ಕಾವೇರಿ ಕಣ್ಣಿಗೆ ಬಿದ್ದಳು. ತಲೆಯಲ್ಲಾದ ಗಾಯದ ಕಲೆ ಕಾಣಿಸದಂತೆ ದಟ್ಟವಾದ ಗುಂಗುರು ಕೂದಲನ್ನು ಮುಚ್ಚಿ ಜಡೆ ಹೆಣೆದುಕೊಂಡ ಹುಡುಗಿ ಮೋಹದ ಕಣ್ಣಿಗೆ ಸಮ್ಮೋಹನಾಂಗಿಯಾಗಿದ್ದಾಳೆ. ಡಾಕ್ಟರನ್ನು ನೋಡುತ್ತಲೂ ಕರಗಳನ್ನು ಜೋಡಿಸಿದಳು "ಪ್ರಣಾಮ್ ಜೀ....!"

"ಮಗೂ, ಹೇಗಿದ್ದೀಯಮ್ಮ?"

"ಚೆನ್ನಾಗಿರುವೆ. ಪ್ರೈವೇಟ್ ಟ್ಯೂಶನ್ ಹೇಳಿಸಿಕೊಳ್ಳುತ್ತಿರುವೆ. ಪಾಠ ಸುಲಭವಾಗಿ ಹತ್ತುತ್ತಿದೆ."

"ಕಲಿತುಕೊ. ಮುಂದೆ ಇಲ್ಲೇ ನರ್ಸಾಗಿ ಕೆಲಸ ಮಾಡಬಹುದು!"

ಹುಡುಗಿ ಸಂತಸದ ಮೆಲುನಗೆ ಬೀರಿದಳು.

ಸರ್ಜಿಕಲ್ ವಾರ್ಡಿನ ದೃಶ್ಯ ಕರುಣಾಜನಕವಾಗಿತ್ತು. ಸಾಲಾಗಿನ

ಮಂಚಗಳಲ್ಲಿ ಗಾಯಾಳುಗಳು ಸಾಲಾಗಿ ಬಿಳಿಯ ಹೊದ್ದಿಕೆಯಡಿ ನರಳುತ್ತಾ ಮಲಗಿದ್ದಾರೆ. ರಸ್ತೆ ಅಪಘಾತಗಳಲ್ಲಿ ಕೈಕಾಲು ಕಳೆದುಕೊಂಡವರು ಪೆಟ್ಟು ತಾಗಿದವರು ನರಳುವರೀತಿ ಕರ್ಣಕಠೋರ. ಚಾರ್ಟುಗಳನ್ನು ನೋಡಿ ದೇಹ ಪರೀಕ್ಷೆ ಮಾಡಿ ಔಷಧಿಯ ಕ್ರಮವನ್ನು ಬರೆದಿಟ್ಟು ಅಲ್ಲಿದ್ದ ಸೇವಿಕೆಯರಿಗೆ ತಿಳಿಯ ಹೇಳಿ ಅಲ್ಲಿಂದ ಹೊರಟರು.

ವಾರ್ಡಿಂದ ವಾರ್ಡಿಗೆ ದಾಳಿಯಿಟ್ಟಿತು ದಳ.

ಐದನೆಯ ಯೂನಿಟ್ಟಿನಲ್ಲಿ ಹೆತ್ತ ಹೆಂಗಳೆಯರು ಹಸುಮಕ್ಕಳ ಸಹಿತ ವಾರ್ಡು ತುಂಬಿದೆ. ಅಂದವಾಗಿ ಶೃಂಗರಿಸಿದ ಸಾಲು ತೊಟ್ಟಿಲುಗಳು. ಅವು ಗಳಲ್ಲಿ ಮುದ್ದಾಗಿ ಮಲಗಿದ ಹೂ ಮಕ್ಕಳ ದೃಶ್ಯ ಅತ್ಯಂತ ಮನೋಹರವಾಗಿ ನೊಂದ ತನುಮನಗಳಿಗೆ ಹರ್ಷವನ್ನೂಡಿಸುತ್ತದೆ. ತಾಯಂದಿರನ್ನೂ ಮಕ್ಕಳನ್ನೂ ನೋಡಿಕೊಂಡು ಹೊರಬಿದ್ದಳು ಕಮಲೇಶ್.

ಹೊತ್ತು ಒಂದರ ಅಂಚನ್ನು ದಾಟಿತು. ಇನ್ನೇನು ಈಗಲೀಗ ಡಾ|| ನಿರಂಜನ್ ಆಗಮಿಸಲಿದ್ದಾರೆ. ಪೋರ್ಟಿಕೋಗೆ ಹೋದರೆ ಸರಿ....ಅಂದಿನಿಂದ ಇಂದಿನವರೆವಿಗೆ ಆರೋಗ್ಯ ಕ್ಷೇತ್ರಕ್ಕೆ ಬಹಳವಾಗಿ ಶ್ರಮಿಸಿದ ವ್ಯಕ್ತಿ. ಒಂದು ವಿಧವಾದ ಕ್ಷಮೆ....ಮತ್ತೊಂದು ವಿಧವಾದ ತೀವ್ರಾಸಕ್ತಿ....ಸ್ನೇಹ.... ಸೌಹಾರ್ದ....ಮಾರ್ದವ ಭಾವನೆಗಳಿಂದ ತುಂಬಿದ ವ್ಯಕ್ತಿ. ದೇಶಕ್ಕೆ....ಅದರಲ್ಲೂ ಪ್ರಗತಿಯ ಕ್ಷೇತ್ರಕ್ಕೆ ಯಾವುದು ಅಗತ್ಯವೋ ಅದಕ್ಕೆ ಯಮಗಂಡ.

ಕೈಬಿಡುವು ಇದ್ದ ಅನೇಕ ಡಾಕ್ಟರುಗಳು ಪೋರ್ಟಿಕೋ ಬಳಿ ಕಾದಿದ್ದರು. ಆಂಬುಲೆನ್ಸ್ ಘಂಟಾರವಗೈಯ್ಯುತ್ತ ಆಸ್ಪತ್ರೆಯ ಆವರಣವನ್ನು ಪ್ರವೇಶಿಸಿತು. ಐರನ್ ಲಂಗ್ ಮಿಷನ್ ಸಹಿತ ಅವರನ್ನು ಒಳಗಡೆ ಬರಮಾಡಿಕೊಳ್ಳಲಾಯಿತು. ಇಂಗ್ಲೆಂಡಿನ ವೈದ್ಯ ವರದಿಯನ್ನೂ ಅವರ ಚಿಕಿತ್ಸಾ ಕ್ರಮವನ್ನೂ ಗಣನೀಯವಾಗಿ ಅನುಸರಿಸಿ, ತಮ್ಮ ಚಿಕಿತ್ಸೆಯನ್ನು ಆರಂಭಿಸಿದರು ಡಾ|| ಭರತ್. ಡಾ|| ನಿರಂಜನರವರಿಗೆ ಉಸಿರಾಟ ಕಷ್ಟವಾಗಿದ್ದರೂ ತಡೆ ತಡೆದು ಮಾತಾಡಿದರು,

"ಅಲ್ಲಿಯೇ....ಚಿಕಿತ್ಸೆ....ತೆಗೆದುಕೊಳ್ಳಬಹುದಾಗಿತ್ತು....ಆದರೆ....ತಂಡಿ ಹವೆಯಿಂದಾಗಿ....ಸಾಧ್ಯವಾಗಲಿಲ್ಲ.....ಈ ಸ್ಥಿತಿಯಲ್ಲಿ ನನ್ನನ್ನಿಲ್ಲಿಗೆ ಕಳುಹಿಸಲು ಅಲ್ಲಿಯ ಡಾಕ್ಟರುಗಳಿಗೆ....ಸರ್ವಥಾ ಇಷ್ಟವಿರಲಿಲ್ಲ....ಅಲ್ಲಿಯ ಡಾಕ್ಟರು

ಗಳು....ನನ್ನ ಬಗ್ಗೆ ಅಸೀಮ ಪ್ರೇಮ ತೋರಿದ್ದಾರೆ...."

ದನಿ ಅತ್ಯಂತ ದುಗುಡದಿಂದ ಕೂಡಿತ್ತು.

ಕಮಲೇಶ್ ಅನಂತರ ಆಫೀಸಿಗೆ ಹೊರಟಳು. ಕಾರಿಡಾರಿನಲ್ಲಿ ಹರಿದ ಹಾದಿ ಕಾಲುನೋವು ಮೂಡುವವರೆಗೂ ಸಾಗಿತು. ಆಫೀಸನ್ನು ಮುಟ್ಟುತ್ತಲೂ ಇದುವರೆಗೂ ಕಾಣದಿದ್ದ ಆಯಾಸ ದುರ್ಬಲತೆಗಳು ಒಮ್ಮೆಲೆ ದಾಳಿಯಿಟ್ಟುವು. ಮುಖದ ಮೇಲಿನ ಬೆವರಿನ ಕಣಗಳನ್ನು ಒರಿಸಿಕೊಂಡು ಕಾಗದ ಪತ್ರಗಳಿಗೆ ಕೈ ಹಚ್ಚಿದೊಡನೆ ಮೇಜಿನ ಮೇಲಿನ ಟೆಲಿಫೋನು ಗಂಟೆಣಿ ಸದ್ದುಮಾಡಿ ಕರೆ ನೀಡಿತು. ಕಮಲೇಶ್ ರಿಸೀವರನ್ನು ಕೈಗೆತ್ತಿಕೊಂಡಳು. ಆಕಡೆಯಿಂದ ಡಾ|| ಜುಬೇದಳ ದನಿ,

"ಡಾಕ್ಟರ್ ಆರನೆಯ ಯೂನಿಟ್ಟಿನಲ್ಲಿ ಆರನೆಯ ವಾರ್ಡಿನಲ್ಲಿರುವ ಗರ್ಭಿಣಿ ಸ್ತ್ರೀ ನಿನ್ನನ್ನು ಬಹಳವಾಗಿ ಕೇಳಿದ್ದಾಳೆ. ಅವಳು ನಿನ್ನನ್ನು ನೋಡಲೇಬೇಕಂತೆ....ಬೆಳಿಗ್ಗೆಯೇ ಹೇಳಿದ್ದಳು. ಅನೇಕ ಕೆಲಸಗಳಲ್ಲಿ ನಿನಗೆ ಟೆಲಿಫೋನು ಮಾಡಲಾಗಲಿಲ್ಲ."

"ಆಗಲಿ, ಮನೆಗೆ ಹೋಗುವಾಗ ಹಾಗಿಂದೇ ಹೋಗುವೆ."

"ಪಾಪ, ಬಹಳ ವೀಕ್ ಕಂಡಿಷನ್"

"ಯಾರು ? ಅವಳ ಹೆಸರೇನು ?"

ಒಂದು ನಿಮಿಷ ಯೋಚಿಸಿ ನೆನಸಿಕೊಳ್ಳಲಾಗದೆ "ಕ್ಷಮಿಸು ಕಮಲೇಶ್, ಮರೆತುಬಿಟ್ಟೆ."

"ಇರಲಿ, ಬಿಡು. ನಾನೇ ತಿಳಿದುಕೊಳ್ಳುವೆ."

ಕಮಲೇಶ್ ರಿಸೀವರನ್ನು ಸ್ವಸ್ಥಾನದಲ್ಲಿ ಅಳವಡಿಸಿ ಉಳಿದ ಒಂದೆರಡು ಕಾಗದಗಳನ್ನು ನೋಡಿ ಜೋಡಿಸಿಟ್ಟು ಆತುರಾತುರವಾಗಿ ಹೊರಟಳು. ಹಾದಿಯುದ್ದಕ್ಕೂ ಕೆಲಸ ಮುಗಿಸಿ ಹೊರಹೋಗುವ ಡಾಕ್ಟರುಗಳ ದರ್ಶನವಾಯಿತು. ದನಿ ಸಾಲುದ್ದಕ್ಕೂ ಸಾಂಪ್ರದಾಯಿಕವಾಗಿ ಮರ್ಮರಿಸಿತು. "ಪ್ರಣಾಮ್ ಡಾಕ್ಟರ್ !"

"ಪ್ರಣಾಮ್ ಡಾಕ್ಟರ್ !"

ಕಮಲೇಶ್ ಕಾರಿಡಾರನ್ನು ದಾಟಿ ಆರನೆಯ ಯೂನಿಟ್ಟಿನತ್ತ ಹೆಜ್ಜೆ ಹಾಕಿದಳು. ಏನಿಲ್ಲೆಂದರೂ ತನ್ನ ಆಫೀಸಿನಿಂದ ಆರು ನಿಮಿಷಗಳ ಹಾದಿ.

ಲೋರ್ಷ ವಾಸನೆ ಮೂಗಿಗೆ ಬಡಿಯುತಿತ್ತು. ಸುಡುಬಿಸಿಲಿನಲ್ಲಿ ತೀಡಿಬರುವ ತಂಗಾಳಿ ತನುಮನಗಳನ್ನು ತಣ್ಣಗೆ ಆವರಿಸಿ ಆ ಲೋಷನ್ನಿನ ಕಟು ವಾಸನೆಗೆ ತಡೆ ಹಾಕಿ ಉಪಕಾರ ಮಾಡಿದಾಗ ಅಂದಿಂದಿಗೂ ಸುಖದುಃಖಗಳನ್ನು ಸಮ ಸಮವಾಗಿ ಹೊಂದಿಸಿಕೊಂಡು ಬಂದ ಪ್ರಕೃತಿಯ ಶುಭಚರಣಗಳು ಚಿತ್ತಭಿತ್ತಿ ಯಲ್ಲಿ ತಟ್ಟನೆ ಸುಳಿದಳಿದುವು.

ಢಣ್ ! ಢಣಾರ್ ! ಢಣ್ ! ಢಣಾರ್! ಢಣ್ ! ಢಣಾರ್ !

ರಾಣೀ ಭವತಾರಿಣಿಯ ತುರ್ತು ಕರೆ!

ಕೆಂಪು ದೀಪಗಳು ಹತ್ತಿ ವಾರ್ಡಿನ ನಂಬರನ್ನು ತೋರಿ ಮಾಯವಾ ದುವು. ಕತ್ತೆತ್ತಿ ನೋಡಿದರೆ ಎಂಟನೆಯ ಸಂಖ್ಯೆ ವಿರಾಜಮಾನವಾಗಿತ್ತು! ಡಾ|| ಜುಬೇದಾ ಹೇಳಿದುದು ಆರನೆಯ ಯೂನಿಟ್ಟಿನ ಆರನೆಯ ವಾರ್ಡು. ಆದರೆ ಇದು ಎಂಟನೆಯ ಸ್ಪೆಷಲ್ ವಾರ್ಡು. ನಾನೀಗ ಯಾವ ಕಡೆ ಹೋಗಲಿ? ಎಂಟನೆಯ ಸ್ಪೆಷಲ್ ವಾರ್ಡು ಏನಿಲ್ಲವೆಂದರೂ ಏಳೆಂಟು ನಿಮಿಷ ಗಳ ಹಾದಿ. ತನ್ನ ಆಫೀಸಿನ ಆಚೆಯ ವಿಭಾಗ. ಬಂದ ಹಾದಿಯಲ್ಲಿಯೇ ಹಿಂದಿರುಗಬೇಕು. ಹೋಗುವವರೆಲ್ಲಾ ಹೋಗಿಬಿಟ್ಟಿದ್ದಾರೆ. ಇನ್ನು ಹೆಚ್ಚು ಮಂದಿ ಉಳಿದಿರಲಾರರು. ಎಂಟನೆಯ ಸ್ಪೆಷಲ್ ವಾರ್ಡ್ ಕಡೆ ಹೋಗದಿದ್ದರೆ ವಿಧಿಯೇ ಇಲ್ಲ. ಆದರೆ ಆರನೆಯ ಯೂನಿಟ್ಟಿನ ಹತ್ತಿರ ಹತ್ತಿರ ಬಂದಿದ್ದಾಗಿದೆ. ನೋಡದೆಯೇ ಹೋಗುವುದೇ ಎಂಬ ಪ್ರಶ್ನೆಯೂ ಕಾಡುತ್ತದೆ. ಮೇಲಾಗಿ ಮೈಗೆ ಆರೋಗ್ಯವೂ ಇಲ್ಲ. ಬೆಳಗಿನಿಂದ ಸುತ್ತಿ ಸುತ್ತಿ ಕಾಲುಗಳೂ ನೋಯು ತ್ತಿವೆ. ಸಾಧ್ಯವಾದಷ್ಟು ಬೇಗನೆ ಮನೆಗೆ ಹೋಗೋಣವೆಂಬಷ್ಟು ಆತುರ. ಆದರೆ ಎಲ್ಲಕ್ಕೂ ಮೀರಿದೆ ರಾಣೀ ಭವತಾರಿಣಿಯ ತುರ್ತು ಕರೆ!

ಕಮಲೇಶ್ ಹಿಂದಿರುಗಿ ಬಂದ ನೇರಕ್ಕೆ ಹೆಜ್ಜೆ ಹಾಕಿದಳು. ಸ್ವಲ್ಪದೂರ ಹೋಗುವುದರೊಳಗಾಗಿ ಆಕಡೆ ಈಕಡೆಯಿಂದ ಸೇವಿಕೆಯರು ಓಡೋಡಿ ಬಂದರು. ಡಾಕ್ಟರುಗಳ ಸುಳಿವೇ ಇಲ್ಲ. ಹೆಜ್ಜೆಗಳ ಪಟಪಟಾತ್ಕಾರ ಮಾಡು ಮುಟ್ಟುವತನಕ ಮರ್ಮರಿಸಿತು.

....ಪಾಪ, ಯಾರಿಗೆ ಏನಾಗಿದೆಯೋ?

ಪ್ರಯತ್ನ ಪಟ್ಟರೂ ಶಕ್ತಿಮೀರಿ ಓಡಲಾಗಲಿಲ್ಲ. ಹಣೆಯ ಮೇಲೆ ಬೆವರಿನ ಹನಿಗಳು ತುಂತುರು ತುಂತುರಾಗಿ ಮೂಡಿ, ಧಾರಾಕಾರವಾಗಿ ಇಳ

ಯಹತ್ತಿದುವು. ಜೊತೆಗೆ ಹಸಿವಿನ ಕಾಟವೂ, ಹೊಟ್ಟೆಯಲ್ಲಿ ಕಲಕಿದಂತೆ ಸಣ್ಣ ಸಂಕಟವೂ ಮೂಡಿತು. ಆದರೆ ಈ ಎಲ್ಲಕ್ಕೂ ಮಿಗಿಲಾದ ಕರ್ತವ್ಯದ ಹೊರೆ. ಯಾರಾದರೂ ಡಾಕ್ಟರಿದ್ದರೆ ಅವರಿಗೆ ಹೇಳಿ ತಾನು ವಿಶ್ರಾಂತಿ ತೆಗೆದುಕೊಳ್ಳಬಹುದಾಗಿತ್ತು. ನಾನಿನ್ನು ಓಡಲಾರೆ ಎಂದು ಮೊರೆಯಿಟ್ಟಿತು ಅಂತರಾತ್ಮ. ಅದೇ ಯೂನಿಟ್ಟಿನಲ್ಲಿದ್ದ ಡಾ|| ನಿರಂಜನರ ವಾರ್ಡಿನಲ್ಲಿದ್ದ ಡಾ|| ಶುದ್ಧೋಧನ ಡಾ|| ಯಶಪಾಲ್ ಡಾ|| ಚಂದ್ರಕಾಂತ್ ಆಗಲೇ ಅಲ್ಲಿಗೆ ಧಾವಿಸಿ ಬಂದಿದ್ದಾರೆ. ಮೇಲುಸಿರು ಬಿಡುತ್ತಲೇ ವಾರ್ಡು ಸೇರಿದಳು ಕಮಲೇಶ್.

ನೋಡಿದರೆ ಡಾ|| ಜಮುನಾ ನೆಲದ ಮೇಲೆ ಬಿದ್ದಿದ್ದಾಳೆ. ದೃಷ್ಟಿ ಊರ್ಧ್ವಮುಖವಾಗಿದೆ. ಬಾಯಿಯಲ್ಲಿ ನೊರೆ ಉಕ್ಕಿಬರುತ್ತಿದೆ. ಡಾಕ್ಟರುಗಳು ಇಂಜಕ್ಷನ್ ಚುಚ್ಚುತಿದ್ದಾರೆ. ಏನಿದ್ದರೂ ಕೆಲವೇ ಕೆಲವು ನಿಮಿಷಗಳ ಮಾತು. ರೋಗಿಯನ್ನು ಪರೀಕ್ಷಿಸುತಿದ್ದ ಡಾ|| ಜಮುನಳಿಗೆ ಹೃದಯಾಘಾತವಾಗಿ ವಾರ್ಡಿನಲ್ಲೇ ಕುಸಿದು ಬಿದ್ದಿದ್ದಳು. ಧಾವಿಸಿ ಬಂದ ಕಮಲೇಶಳಿಗೆ ಆ ದೃಶ್ಯ ಸಿಡಿಲು ಬಡಿಸಿದಂತಾಯಿತು. ಒಮ್ಮೆಲೆ ಕಣ್ಣುಗಳಿಗೆ ಮಂಜು ಕವಿದು, ಮೈ ಬಸುವಳಿದು ಬಂದಾಗ ಬಳಿಯಲ್ಲಿನ ತೋಳುಗಳು ಆಶ್ರಯ ನೀಡಿದುದು ತನ್ನ ಅನುಭವಕ್ಕೆ ಬಂದಿತು. ಅವಳು ಕಣ್ತೆರೆದಾಗ ಬಿಡುವಿನ ಕೋಣೆಯಲ್ಲಿದ್ದಳು. ಚಂದ್ರಕಾಂತ ಹಣೆಯ ಮೇಲೆ ಕೈಯಿಟ್ಟು ಅವಳನ್ನೇ ನಿಟ್ಟಿಸುತಿದ್ದ. ಭಯ ಮಿಶ್ರಿತ ಕಣ್ಣಾಲಿಗಳನ್ನು ಅತ್ತಿತ್ತ ತಿರುಗಿಸಿ ನೋಡಿ ಕೇಳಿದಳು ಕಮಲೇಶ್ "ನಾನೆಲ್ಲಿದ್ದೇನೆ ಡಾಕ್ಟರ್?"

"ಡಾಕ್ಟರ್ ಕೊಠಡಿ."

"ಹೇಗಿದ್ದಾರೆ ಡಾ|| ಜಮುನಾ?"

ಬಳಿಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ ಡಾ|| ಶುದ್ಧೋಧನ ಎದ್ದು ಬಂದು "ಅವರು ಸುಖವಾಗಿದ್ದಾರೆ. ಮೊದಲು ನೀವು ಸುಧಾರಿಸಿಕೊಳ್ಳಿರಿ."

"ನಿಜವಾಗಿಯೂ ಹೇಳಿ ಡಾಕ್ಟರ್." ಅಂಗಲಾಚಿದಳು ಕಮಲೇಶ್.

"ಈಗ ಸುಧಾರಿಸಿಕೊಂಡಿದ್ದಾರೆ."

ಅತ್ಯಂತ ವ್ಯಾಕುಲ ವೇದನೆಯಿಂದ ಚಂದ್ರಕಾಂತ್ ಅಂದ "ನೀವಿಷ್ಟೊಂದು ಗಾಬರಿಯಾದುದೇಕೆ? ನೀವಿರುವ ಸ್ಥಿತಿಯಲ್ಲಿ ಓಡಿ ಬರಬಾರದಿತ್ತು. ಡಾಕ್ಟರಾದವರಿಗೆ ಇದೆಲ್ಲಾ ತಿಳಿಯ ಹೇಳಬೇಕೆ? ಇದೆಂತಹ ಹುಚ್ಚು ಹುಡು

ಗಾಟ?" ದನಿ ಅಸಮಾಧಾನ ಮಿಶ್ರಣವಾಗಿತ್ತು. ಅವನ ಮಾತನ್ನು ಲಕ್ಷಿಸದೆ ಕೇಳಿದಳು ಕಮಲೇಶ್ "ನಿಜವಾಗಿಯೂ ಡಾ|| ಜಮುನಾ ಸುಧಾರಿಸಿಕೊಳ್ಳುತಿದ್ದಾರೆಯೆ ?"

"ಹೌದು."

"ಡಾಕ್ಟರ್...." ದನಿ ಗದ್ಗದವಾಯಿತು.

"ನೋ....ನೋ....ಅದೆಲ್ಲಾ ಕೂಡದು." ಎಂದರು ಡಾ|| ಶುದ್ಧೋಧನ.

"ಹೀಗಾದರೆ ಹೇಗೆ?" ಹಣೆಯ ಮೇಲಿನ ಬೆವರಿನ ಕಣಗಳನ್ನು ಒರಸಿ "ಯಾವುದೇ ವಿಚಾರಗಳನ್ನು ಅಷ್ಟಾಗಿ ಹಚ್ಚಿಕೊಳ್ಳಬಾರದು ಡಾಕ್ಟರ್. ಇವೆಲ್ಲ ದಿನನಿತ್ಯದ ಸಮಾಚಾರಗಳು; ಇವಕ್ಕೇಕೆ ದುಃಖ?" ಎಂದ ಚಂದ್ರಕಾಂತ್.

"ಎಲ್ಲಿದ್ದಾರೆ ಡಾ|| ಜಮುನಾ ?"

"ಮನೆಗೆ ಹೋದರು."

"ಸಾಕಪ್ಪಾ." ಎನ್ನುತ್ತಾ ಕಮಲೇಶ್ ಕಣ್ಣುಗಳನ್ನು ಸುತ್ತಮುತ್ತಲೂ ಹೊರಳಿಸಿದಳು. ಕಿಟಕಿಯ ನೇರಕ್ಕೆ ದೂರದಿಗಂತದ ಮೋಡಗಳ ಮಾಲೆಯಲ್ಲಿ ಬಿಳಿಯುಡಿಗೆಯುಟ್ಟು ಜಮುನಾ ತೇಲುತ್ತಾ ಹೋದಂತೆ ಭಾಸವಾಯಿತು. ಕಣ್ಣುಜ್ಜಿಕೊಳ್ಳಲೆಂದು ಕೈಯೆತ್ತಲು ಪ್ರಯತ್ನಿಸಿದಾಗ ಚಂದ್ರಕಾಂತನ ಕೈಗಳು ಬಿಗಿಯಾಗಿ ಅದುಮಿ ಹಿಡಿದುದು ಗಮನಕ್ಕೆ ಬಂತು.

ಅಧ್ಯಾಯ

೨೨

ಗೋಧೂಳೀ ಸಮಯ....

ಪ್ರಶಾಂತ ವಾತಾವರಣ....

ಹೊನ್ನರಾಗರಂಜಿನಿ ನಿರಾಭರಣ ಸುಂದರಿ ಸಂಜೆವೆಣ್ಣಿನ ಸಡಗರದ ಸ್ವಾಗತಕ್ಕೆ ಹಣೆ ಮಣಿದ ಸೂರ್ಯದೇವನ ಹಿಂದೆ ತೆರೆ ಹಚ್ಚಿದ ಧೂಮನೀಲಿಮೆಯ ಕಾಷ್ಠ ಮೌನ ಮಹಾ ಅಭಿಜ್ಞಾನದ ವಿಪುಲ ಸಂಪತ್ತು ಎಂಬುದನ್ನು ಬಲ್ಲವರೆಷ್ಟೋ....ತಿಳಿನಗೆ ಸೂಸುವ ತಿಳಿಗಾಳಿಯ ಪಾದ ಸಪ್ಪಳದ ಸಣ್ಣ ಶೃತಿ ಶುಭ ಸಮಯದಲ್ಲಿ ಸುಪ್ತವಾದ ಸಾಸಿರ ಸಾಸಿರ ಸ್ಮೃತಿಗಳನ್ನು ಬಡಿದೆಬ್ಬಿಸಿ ದಿಗ್ಭ್ರಮೆ ಹಿಡಿಸಿದೆ. ಶ್ರುತಿ–ಸ್ಮೃತಿಗಳ ತಾನವಿತಾನದಲ್ಲಿ ಯೌವ್ವನದ ಅಹಂಕಾರ ಮಾಯಾಮಿಥ್ಯೆಯ ಭದ್ರ ಮುಷ್ಟಿಯಿಂದ ಬಿಡುಗಡೆ ಹೊಂದಿದರೂ ಅಂತರ್ಯದಲ್ಲಿ ಆತ್ಮ ಗ್ಲಾನಿಯಿಂದ ಕಡುನೊಂದಿದೆ....ನಿಃಶಬ್ದ ವಾತಾವರಣದಲ್ಲಿ ಸಾರಿಕೆಯ ಇನಿದನಿ ಸಹ ಕೇಳಿಬರುತ್ತಿಲ್ಲ....ಅಥವಾ ಕೇಳಿಸಿಕೊಳ್ಳುವ ಸಹನೆ ಇರಲಿಲ್ಲವೇನೋ. ಸ್ವಭಾವಜನ್ಯವಾದ ಮೃದು ಮಧುರತೆ ಕರ್ಮಕಾಂಡದ ಪ್ರಚಂಡ ಬೇಗೆಗೆ ಸಿಕ್ಕಿ ಧರ್ಮಾನುಶಾಸನಗಳ ಅನುಬಂಧವನ್ನು ದಾಟಿ ನಿಷ್ಠುರತೆಗೆ ಶರಣಾದರೂ ಆಶ್ಚರ್ಯವಿಲ್ಲ........ವಿಶೇಷವೂ ಅಲ್ಲ....

ಸ್ತ್ರೀ ಜೀವನ ಯಾತ್ರೆ ಎಷ್ಟು ಅದ್ಭುತವಾದುದೋ ಕಾಷ್ಠ ವ್ಯಸನವೂ ಅಷ್ಟೇ ಅದ್ಭುತವಾದುದು.

“ಸ್ವತಃ ಪ್ರಮಾಣಂ....

ಪರತಃ ಪ್ರಮಾಣಂ....”

ಮಾನಸ ಮುರಳಿ ಶೋಕರಾಗವನ್ನು ಚಿತ್ರಿಸುವಾಗ ಕಣ್ಣುಗಳು ಹನಿಯದಿದ್ದರೂ ಮುಖ ಕಳಾಹೀನ....

ತಾಯಿ ಮಗಳ ಸಾನ್ನಿಧ್ಯದಲ್ಲಿ ಮೂರು ದಿನಗಳ ರಜೆ ಸಾನಂದದಿಂದ ಕಳೆಯುವಾಗಲೂ ಕಲ್ಪನೆಗೂ ಮೀರಿ ಮನವನ್ನು ಕೊರೆಯುತ್ತಿದೆ

ಡಾ|| ಜಮುನಳ ಅನಿರೀಕ್ಷಿತ ಸಾವು, ಹೂವನ್ನು ಕೊರೆಯುವ ಹುಳುವಿನಂತೆ.

"ಕತೆ ಹೇಳಿ ಮಾ."

ಗುಡುಗುಡು ಓಡಿಬಂದು ಚೇತನಾ ಕೇಳಿದಾಗ ಮುಖ ಅರಳಿ ಹೂವಾಗಿ ಚೆಂಗೆನ್ನೆಗಳು ಗುಳಿ ಬಿದ್ದು ಮುಖಮಂಡಲ ಮನೋಹರವಾಯಿತು. ಹಣೆಯನ್ನು ಮುದ್ದಿಡುವ ಅಲೆಗೂದಲ ಅಂದವನ್ನು ಈಕ್ಷಿಸುತ್ತಾ ಆಹ್ವಾನಿಸಿದಳು ಕಮಲೇಶ್ "ಬಾ, ಮಗೂ...." ನಾಲಿಗೆ ಆಹ್ವಾನಿಸಿದರೂ ಎದೆಯ ನೆಲೆಯಲ್ಲಿ ಕೀಟದಂತೆ ಕೊರೆಯುತಿತ್ತು ಅದೇ ಆ ದುಃಖ.

ತೆರೆದ ಗವಾಕ್ಷಿಯಿಂದ ವ್ಯೆದೋರುವ ಅಸ್ತಂಗತವಾಗಲಿರುವ ಸಂಧ್ಯಾ ಸೂರ್ಯನ ಹೊಂಗಿರಣಗಳ ಅದ್ಭುತ ಸೌಂದರ್ಯಧಾರೆಯಲ್ಲಿ ಮಿಂದ ಪೃಥ್ವಿಯಲ್ಲಿ ಐಹಿಕ ವ್ಯಾಪಾರಗಳು ಕ್ಷಣೇ ಕ್ಷಣೇ ಕಳಾಹೀನವಾಗುತ್ತಿರುವುದನ್ನು ತದೇಕ ದೃಷ್ಟಿಯಿಂದ ನೋಡುತ್ತಾ ಭಾವಾವಿಷ್ಟಳಾದ ಕಮಲೇಶಳ ಕೆಂದುಟಿಗಳಲ್ಲಿ ಅಸ್ವಭಾವಿಕವಾದ ಸಣ್ಣ ನಗೆಯೊಂದು ಮಿನುಗಿ ಮಾಯವಾಯಿತು, ಜಾಹೀರಾತಿಗೆ ಹೊಮ್ಮುವ ಕೃತಕ ನಗೆಯಂತೆ.

ಅವಳ ಹೂ ಮನಸ್ಸು ಅರಳುವಂತಹ ಸಾರಿಕೆ, ಸಾರಂಗಗಳ ಕತೆಗಳನ್ನು ಹೇಳುತ್ತಾ ಬಾಲ ಪ್ರಪಂಚದಲ್ಲಿ ಮುಳುಗಿರುವಾಗ ಸೀತಮ್ಮ ಆತ್ಮಾರಾಂ ದಂಪತಿಗಳು ಆಗಮಿಸಿದ ಸುದ್ದಿಯನ್ನು ವರದಿ ಮಾಡಿ ಹೋದಳು. ಮಗುವನ್ನು ಕೆಳಗಿಳಿಸಿ ನೋಟವನ್ನು ಅತ್ತ ಹೊರಳಿಸುವುದರೊಳಗಾಗಿ ಪಾದರಕ್ಷೆಗಳ ಸಣ್ಣ ಶೃತಿ ಸ್ಪಷ್ಟವಾಗಿ ಕೇಳಿ ಬಂದಿತು.

"ಪ್ರಣಾಮ್ ಮಾಮಾ."

ಆದೇಶವೀಯದಿದ್ದರೂ ಇನಿದನಿ ಅಭ್ಯಾಸಬಲದಿಂದ ಹೊರಹೊಮ್ಮಿತು. ಅತಿಥಿಗಳಿಗೆ ಸಾನಂದದಿಂದ ಸ್ವಾಗತ ನೀಡಿದಳು ಕಮಲೇಶ್.

"ಪ್ರಣಾಮ್...."

ಆತ್ಮಾರಾಂ ಕರ್ವೆ ಸ್ನೇಹ ವಾತ್ಸಲ್ಯ ಹಾಗೂ ಕರುಣಾಪೂರಿತ ದೃಷ್ಟಿಯಿಂದ ಮಗುವಿನ ಕಡೆ ನೋಡಿ ಅತ್ಯಂತ ಆತ್ಮೀಯತೆಯಿಂದ ಎದೆಗೆತ್ತಿಕೊಂಡು ಮುದ್ದುಗೈಯ್ಯುತ್ತಾ ಕೇಳಿದರು "ಇವಳ ಮನೆ ಏನು ಮಾಡಿದಿರಿ? ಅದರ ವ್ಯವಸ್ಥೆ ಹೇಗೆ?"

"ಹಾಗೇ ಉಳಿದಿದೆ ಮಾಮಾ. ಹೋಗಿ ನೋಡಲು ಸಂಕಟ. ಮಾಡಲು

ರಾಮವಿಲ್ಲ, ಹೀಗಾಗಿದೆ."

"ಈಗ ಹೋಗಿ ಬರೋಣ, ನೀನು ಹೇಗೂ ಬಿಡುವಾಗಿದ್ದಿ."

ಚಂದ್ರಕಾಂತ್ ಮಗುವನ್ನಾಗಲಿ, ಮಗುವಿನ ಭವಿಷ್ಯವನ್ನಾಗಲೀ ರಿತು ಒಂದು ದಿನವೂ ಮಾತಾಡಿರಲಿಲ್ಲ. ಮುಂದೆ ಮಾತನಾಡುವವನೂ ಲ್ಲ....ಯೋಚನೆ ಬಂದೊಡನೆಯೇ ಬಿಸಿಯುಸಿರು ಹೊರಚೆಲ್ಲಿ ತಾಯಿಗೆಂದಳು ಹೋಗಿ ಬರೋಣ ಮಾ."

ಮಗುವಿನೊಡನೆ ನಾಲ್ವರೂ ಹೊರಟರು. ದೂರದ ಹಾದಿಯನ್ನು ಳಿದು ಕಾರು ಮನೆಯ ಮುಂದೆ ನಿಂತಾಗ "ಹಾ....ವಿಧಿ!" ಎಂದುಕೊಂಡಳು ಮಲೇಶ್. ಕದ ತೆಗೆದು ಒಳಹೋದರೆ ಧೂಳೀ ಧೂಸರಿತವಾದ ವಸ್ತು ಸ್ತುವೂ ಚೇತಳನ್ನು ಪ್ರತಿಬಿಂಬಿಸುತ್ತಿವೆ. ಚೇತನಾ ಹರೀಶರ ನಾನಾ ಂಗಿಯ ಚಿತ್ರಪಟಗಳೊಂದಿಗೆ ಮುಗ್ಧ ಮಗುವಿನ ಸುಂದರ ಚಿತ್ರಗಳು ಸ್ಪರ್ಧೆ ಡಿವೆ....ಮನಸೆಳೆಯುವ ಆ ಚಿತ್ತಾರ ಯಾವುದೋ ಅವ್ಯಕ್ತ ಅವರ್ಣ ೀಯ ಶೋಕ ಮಾಧುರ್ಯವನ್ನು ಹೃದಯ ತಂತುಗಳಲ್ಲಿ ಮಿಡಿಸುತ್ತಿದೆ. ಗುವಿನ ಕೈ ಬೆರಳನ್ನು ಹಿಡಿದುಕೊಂಡು ಮನೆಯನ್ನೊಂದು ಸುತ್ತುಹಾಕಿ ಸ್ತುವಸ್ತುವನ್ನೂ ನಿಟ್ಟಿಸಿದಳು. ಅಂದಿನ ಸ್ನೇಹದ ಹೊರೆಗಿಂತಲೂ ುಂದಿನ ಕಮನೀಯ ಕಠೋರ ಹೊಣೆ ಹೆಚ್ಚಿನದೆಂಬುದನ್ನು ಗ್ರಹಿಸಲಾರ ಷ್ಟು ಅಜ್ಞಾನಿಯಲ್ಲ ಆಕೆ. ಆದರೂ ಎದೆಯ ಹಕ್ಕಿ ಕೂಗಿ ಹೇಳಿತು....ಎಷ್ಟೇ ಷ್ಟವಾದರೂ ಮುಂದಿಟ್ಟ ಹೆಜ್ಜೆ ಹಿಂತೆಗೆಯಬಾರದು.

ಆತ್ಮಾರಾಂ ಕರ್ವೆ ಬೀರುವಿನ ಬೀಗ ತೆಗೆದು ಲೆಖ್ಖಪತ್ರಗಳನ್ನು ಪರಿಶೀ ಸಿದರು. ಬ್ಯಾಂಕಿನಲ್ಲಿ ಏಳೆಂಟು ಸಾವಿರಗಳಷ್ಟು ಹಣವಿದೆ. ಇಪ್ಪತ್ತೈದು ಾವಿರಕ್ಕೆ ಇನ್ಸ್ಯೂರ್‌ರೆನ್ಸ್ ಮಾಡಿದ್ದಾರೆ. ಮನೆಗೆ ಆರು ತಿಂಗಳ ಬಾಡಿಗೆ ರನ್ನು ಮುಂಗಡವಾಗಿ ಕೊಟ್ಟಾಗಿದೆ. ಮನೆಯಲ್ಲಿಯ ಬೆಲೆಯುಳ್ಳ ವಸ್ತು ಳನ್ನು ಮಾರಿದರೆ ಏಳೆಂಟು ಸಾವಿರ ರೂಪಾಯಿಗಳು ಬಂದರೂ ಬರಬಹುದು. ಲವು ಸಣ್ಣ ಪುಟ್ಟ ಒಡವೆಗಳೂ ಹಲವು ಸೀರೆ ಬಟ್ಟೆಗಳೂ ಒಳ್ಳೊಳ್ಳೆಯ ಡುಪುಗಳೂ ಹಾಸಿಗೆ ದುಪ್ಪಟಿಗಳೂ ಇವೆ.

"ಇವುಗಳಲ್ಲಿ ಕೆಲವು ಬಟ್ಟೆ ಬರೆಗಳನ್ನು ಅಬಲಾಶ್ರಮಕ್ಕೆ ಕೊಡಬಹುದು, ಾಮಾ."

"ನಿಜ ಡಾಕ್ಟರ್." ಶಿರದೂಗಿ ಸಮ್ಮತಿ ನೀಡಿದರು ಆತ್ಮಾರಾಂ ಕರ್ವೆ.

ಸಕಲ ಕಾಗದ ಪತ್ರಗಳು, ಲೆಖ್ಖ ಪತ್ರಗಳು, ಚಿತ್ರಪಟಗಳು, ಅವರ ಸಂಭಾಷಣೆ ಸಂಗೀತಗಳಿದ್ದ ಟೇಪ್ ರಿಕಾರ್ಡರು, ಚಿತ್ರಪಟಗಳಿಂದ ತುಂಬಿದ ಹೊತ್ತಗೆ ಇವುಗಳಲ್ಲದೆ ಅವರ ಸಾಕ್ಷೀಭೂತವಾಗಿದ್ದ ವಸ್ತುವಸ್ತುವನ್ನೂ ಸ್ವತಃ ಕಲೆ ಹಾಕಿದರು ಆತ್ಮಾರಾಂ ಕರ್ವೆ. ಸ್ವರ್ಣಮಾಲಿನಿ ಹೇಮರತಿಯರು ಸಂಗ್ರಹಿಸುವುದರಲ್ಲಿ ಜೋಡಿಸುವುದರಲ್ಲಿ ಸ್ವಚ್ಛಗೊಳಿಸುವುದರಲ್ಲಿ ಮುಂದಾದರು. ಎಲ್ಲವೂ ನಿರಾತಂಕವಾಗಿ ಸಾಗಿದ ಮೇಲೆ ಆತ್ಮಾರಾಂ ಕರ್ವೆ ನಿಟ್ಟುಸಿರು ಬಿಡುತ್ತಾ ಹೇಳಿದರು "ಡಾಕ್ಟರ್, ಈ ಎಲ್ಲಾ ವಸ್ತುಗಳಿಗೂ ನೀವು ಗಿರಾಕಿಗಳನ್ನು ಹುಡುಕಿಕೊಂಡು ಹೋಗುವುದೆಂದರೆ ಕಷ್ಟ. ನಮ್ಮ ಪಾಲುದಾರರಿಗೆ ಮನೆ ಬೇಕಾಗಬಹುದು. ಸಕಲ ವಸ್ತುಗಳನ್ನೂ ನಾನೇ ಕೊಂಡುಕೊಳ್ಳುವುದಲ್ಲದೆ ಮನೆ ಬಾಡಿಗೆಗೆ ಮುಂಗಡವಾಗಿ ಕೊಟ್ಟ ಹಣವನ್ನೂ ಸಹ ಕೊಡುವೆ. ನೀನು ಯಾವ ಶ್ರಮವನ್ನೂ ತೆಗೆದುಕೊಳ್ಳಬೇಡ." ದನಿ ಸ್ಥಿರ ಗಂಭೀರವಾಗಿತ್ತು.

"ನಿಮ್ಮದೇ ನಿಮಗೆ ಬೇಕಾದಷ್ಟಿದೆ ಮಾಮಾ. ಇದನ್ನೂ ಕೊಂಡು ಕೊಂಡು ಏನು ಮಾಡುತ್ತೀರಿ?"

"ನಮ್ಮ ಗೆಳೆಯರು, ಸ್ಟಾಫ್ ಇವರಲ್ಲದೆ ನೆಂಟರಿಷ್ಟರೂ ಇದ್ದಾರೆ. ಯಾರಿಗಾದರೂ ಆಗುತ್ತೆ."

"ನಿಮ್ಮಿಷ್ಟ....ಮಾಮಾ." ಎಂದಳು ಕಮಲೇಶ್. ಕಣ್ಣುಗಳಲ್ಲಿ ಕೃತಜ್ಞತೆ ತುಂಬಿ ಬಂತು. ಇನ್ನು ಏನಾದರೂ ಒಂದೆರಡು ಒಳ್ಳೆಯ ಮಾತುಗಳನ್ನು ಸೌಜನ್ಯಪೂರ್ವಕವಾಗಿಯಾದರೂ ಹೇಳೋಣವೆಂದು ಪ್ರಯತ್ನಿಸಿದರೆ ತುಟಿಗಳು ಬಿರಿಯದೆ ಮಂತ್ರಮುಗ್ಧಳಂತೆ ಹಾಗೇ ನಿಂತುಬಿಟ್ಟಳು. ವೃದ್ಧ ಮಹಾಶಯ ಅಲ್ಲಿಯ ಕಾಗದಪತ್ರಗಳನ್ನು ಒಂದೊಂದಾಗಿ ಜೋಡಿಸುವ ರೀತಿ ತಮ್ಮ ಸ್ವಂತ ಕೆಲಸದಂತೆಯೇ ತೋರುತ್ತದೆ....ಈ ಪ್ರಪಂಚದಲ್ಲಿ ಬಾಳು ಬಹು ದೀರ್ಘವೇ ಆದರೂ ತೀರ ಅಲ್ಪವೇ ಆದರೂ ದೂರಗಮ್ಯಸ್ಥಾನವನ್ನು ಕುರಿತು ಕೇವಲ ಕೈದೀವಿಗೆಯ ಸಹಾಯದಿಂದ ಪಯಣಿಸುವಾಗ ಮಾನವನ ಅಭಿಶಪ್ತ ಹೆಜ್ಜೆಗಳ ಸದ್ದು ಪ್ರಾಯಶಃ ನಿಗೂಢವಾಗಿರುತ್ತವೆ. ಆತನ ಇಚ್ಛಾಶಕ್ತಿಯು ಧೀಶಕ್ತಿ-ಪಾಶವೀ ಪ್ರವೃತ್ತಿಗಳ ಮೇಲೆ ಯಾವ ಅಜ್ಞಾತಶಕ್ತಿಯಿಂದ ಪ್ರಬಲ

ವಾದ ಪಾಶವನ್ನೆಸೆದು ಅಧಿಕಾರವನ್ನು ಚಲಾಯಿಸುತ್ತದೆಯೋ ಆ ಶಕ್ತಿ ಕ್ಷಣ ಕ್ಷಣಗಳನ್ನೂ ವ್ಯಕ್ತಿ ವ್ಯಕ್ತಿಯನ್ನೂ ಹೇಗೆ ಗಮನಿಸುತ್ತದೆ? ಎಷ್ಟೇ ಜ್ಞಾನಿಯಾದರೂ ಎಷ್ಟೇ ಯೋಚಿಸಬಲ್ಲವನಾದರೂ ಆ ದುರ್ಮುಹೂರ್ತದಲ್ಲಿ ಸೋಲುತ್ತಾನೆ ಹೇಗೆ....ಎಂಬುದೇ ನುಂಗಲಾರದ ತುತ್ತು.

ವಿಧಿ ಲಿಖಿತ....

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ |
ಲಲಾಟಲಿಖಿತಾ ರೇಖಾ ಪರಿಮಾರ್ಷ್ಟುಂ ನ ಶಕ್ಯತೆ ||

ಮಾ ಎಂದೋ ಹೇಳಿದ ಸೂಕ್ತಿ ಸುಧೆ ಮನದಲೆಯಲ್ಲಿ ತೇಲಿ ನಲಿದಾಗ ದುಃಖಗರ್ಭಿತ ಎದೆಯಿಂದ ಭಾರವಾದ ನಿಟ್ಟುಸಿರು ತಪ್ಪಿಸಿಕೊಂಡಿತು. ಚೇತನಾ ಅಲ್ಲೆಲ್ಲಾ ನಿರ್ಭಯದಿಂದ ಓಡಾಡುತ್ತಾ, ವಸ್ತು ವಸ್ತುಗಳಿಗೂ ಕೈಹಚ್ಚಿ ಮುದ್ದು ಮಾತಿನ ಮಳೆಗರೆಯುತ್ತಾ ತಂದೆ ತಾಯಿಯರ ಆ ಭಯಂಕರ ಬೀಭತ್ಸ ಅಂತ್ಯದ ನೆನಪು ಕಿಂಚಿತ್ತೂ ಮೂಡದೆ ಇದ್ದಾಳೆ. ಕಮಲೇಶಳ ನೋಟ ಒಮ್ಮೆ ಚೇತನಳನ್ನು ಗಮನಿಸಿದರೆ ಇನ್ನೊಮ್ಮೆ ಪಿತೃ ಸದೃಶ ಆತ್ಮಾರಾಂ ಕರ್ವೆಯ ಭವ್ಯಭಾವವನ್ನು ಗಮನಿಸುತಿತ್ತು....ತೆಗೆದುಕೊಂಡು ಹೋಗಲು ಕಾಗದ ಪತ್ರಗಳನ್ನೂ ಚಿತ್ರಪಟಗಳ ಆಲ್ಬಮ್ಮನ್ನೂ ಗೋಡೆಯ ಮೇಲಿನ ಚಿತ್ರಪಟಗಳನ್ನೂ ಜೋಡಿಸಿದ ಮೇಲೆ ಉಳಿದೆಲ್ಲವನ್ನೂ ಅಲ್ಲೇ ಬಿಟ್ಟು ಬೀಗ ಹಾಕಿದರು ಆತ್ಮಾರಾಂ ಕರ್ವೆ. ಚೇತನಾ ಹೇಮರತಿ ಕರ್ವೆಯ ಸೊಂಟವನ್ನೇರಿದಳು. ಎಲ್ಲರೂ ಅಲ್ಲಿಂದ ಹೊರಟಾಗ ಕತ್ತಲೆಯ ಕಾಳಗಪ್ಪು ಇಳೆಯನ್ನು ಮುಸುಗಿ ಬಿಟ್ಟಿತ್ತು. ಮನೆ ತಲ್ಪಿದಾಗ ಚಂದ್ರಕಾಂತ್ ಪುಸ್ತಕಾವಲೋಕನದಲ್ಲಿ ತಲ್ಲೀನನಾಗಿದ್ದ. ಅವನು ಎಲ್ಲಿಗೆ ಹೋಗಿದ್ದಿರೆಂದು ಕೇಳದಿದ್ದರೂ ತಾನು ಆ ಮನೆಗೆ ಹೋಗಿ ಬಂದ ವಿಷಯವನ್ನೂ, ಆತ್ಮಾರಾಂ ಕರ್ವೆ ಸಾಮಾನನ್ನು ಕೊಂಡುಕೊಳ್ಳಲಿರುವುದನ್ನೂ ಪ್ರಾಸಂಗಿಕವಾಗಿ ಮುಂದಿಟ್ಟಳು ಕಮಲೇಶ್. ದನಿಯಲ್ಲಿ ಹುರುಪು ಮೂಡದಿದ್ದರೂ ಹೇಳಬೇಕಾದ ಅಗತ್ಯವಿತ್ತು. ಚಂದ್ರಕಾಂತ್ ಔಪಚಾರಿಕವಾಗಿ 'ಹೂ' ಎಂದ. ಅವನ ರೀತಿಯಲ್ಲಿ ತುಂಬಿ ತುಳುಕುತ್ತಿದ್ದ ನಿರ್ಲಕ್ಷ್ಯ ಭಾವನೆಯನ್ನು ವಿಸ್ಮಯಾಧಿಕ್ಯದಿಂದ ನಿಟ್ಟಿಸಿ ಬೇರೆಡೆಗೆ ಹೊರಳಿತು ದಿಟ್ಟಿ....ಮಹಾ ಶಿಲಾಕಾಠಿಣ್ಯ ಸ್ವರೂಪಿಯಾದ ಆತನ ಹೃನ್ಮಂದಿರದಲ್ಲಿ ಇನ್ನಾವ ಬಗೆಯ ಶ್ರದ್ಧಾಪೂರ್ಣವಾದ ಲೌಕಿಕಾ-

ಲೌಕಿಕ ವಿಚಾರಗಳಿವೆಯೋ ಆ ನಿಗಮಗೋಚರನಿಗೊಬ್ಬನಿಗೇ ಗೊತ್ತು.... ವಿಚಾರ ಶ್ರದ್ಧೆಯಲ್ಲಿ ತೊಡಗಿದ ಹೃದಯದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಕಮಲೇಶ್ ಚೇತನಾ ಹರೀಶರ ಮನೆಯಿಂದ ಕಲೆಹಾಕಿ ತಂದ ಕಾಗದ ಪತ್ರಗಳೊಂದಿಗೆ ಅವಳು ತನಗೆ ಬರೆದಿದ್ದ ಕಾಗದಗಳನ್ನೂ ಜೋಡಿಸಿ, ಎಲ್ಲಾ ಚಿತ್ರಪಟಗಳನ್ನೂ ಟೇಪ್‌ರಿಕಾರ್ಡರನ್ನೂ ಒಟ್ಟಿಗೆ ಒಂದೇ ಪೆಟ್ಟಿಗೆಯಲ್ಲಿಟ್ಟು ಬೀರುವಿನಲ್ಲಿಟ್ಟಳು. ಎಂದಾದರೊಮ್ಮೆ ಸ್ಥಿರರುಜುವಿಗೆ ಬೇಕಾಗಬಹುದೆಂಬ ದೂರ ದೃಷ್ಟಿಯು ಭದ್ರಪಡಿಸುವಿಕೆಗೆ ಕಾರಣವಾದರೂ ಮಗುವಿಗೆ ಅದರ ಸುಳಿವು ನೀಡುವುದು ಬೇಡವಾಗಿತ್ತು.

ಬಹಳ ದಿನಗಳ ಮೇಲೆ ಶ್ರೀ ಕಾಗದ ಬರೆದಿದ್ದ. ಬರ್ಮಾಕ್ಕೆ ಬಂದಾಗಿನಿಂದ ಕೆಲಸ ಹುಡುಕುತಿದ್ದೇನೆ ಇನ್ನೂ ಸಿಕ್ಕಿಲ್ಲ....ಎಂದು ಒಂದೇ ಪಂಕ್ತಿಯಲ್ಲಿ ವಿಷಯವನ್ನು ಮುಗಿಸಿದ್ದ. ಸ್ವರ್ಣಮಾಲಿನಿ ಬಹಳ ದಿನಗಳನಂತರ ಬಂದ ಕಾಗದವನ್ನು ನೋಡಿ "ಕೆಲಸವಿಲ್ಲದೆ ಇನ್ನೆಷ್ಟು ತೊಂದರೆ ಪಡುತಿದ್ದಾನೋ" ಎಂದು ಮಾತೃ ಸಹಜಭಾವದಿಂದ ಕಂಬನಿ ಮಿಡಿದಳು....ಆತನ ಬಗ್ಗೆ ಆಗಿನಿಂದಲೂ ಕೆಟ್ಟವದಂತಿಗಳೂ ಕುಕಲ್ಪನೆಗಳೂ ಆಗಾಗ ಕೇಳಿ ಬರುತ್ತಲೇ ಇರುತ್ತವೆ. ಇನ್ನು ಅವನೆಂದೂ ಅವುಗಳಿಂದ ವಿಮುಕ್ತನಾಗನೇನೋ....ಎಂಬ ಸಂದೇಹವೊಂದಾದರೆ ಆ ವದಂತಿಗಳನ್ನು ತಂದವರಿಗೂ ಸಹ ಅವನ ವ್ಯಕ್ತಿತ್ವ ತಿಳಿದಿರಲಾರದು; ಅದರಲ್ಲಿ ಸತ್ಯಾಸತ್ಯಗಳೂ ಇದ್ದಿರಬಹುದು ಎಂಬ ಆಶಾಕಿರಣ ಇನ್ನೊಂದು. ಆಸೆ ನಿರಾಸೆಗಳ ತಾನವಿತಾನದಲ್ಲಿ ಮಾತೃ ಹೃದಯ ಸುಖದುಃಖಗಳ ಪಾಲಾಯಿತು.

ಮೂರು ದಿನಗಳ ವಿಶ್ರಾಂತಿ ಪಡೆದುದಂತೂ ನಿಜ....ಆದರೆ ಅವು ಹೇಗೆ ಬಂದುವೋ ಹೇಗೆ ಕರಗಿದುವೋ ದೇವರಿಗೆ ಗೊತ್ತು. ಮೂರನೆಯ ದಿನವೂ ಬಂದಿತು. ಹಗಲು ಉರುಳಿ, ರಾತ್ರಿ ಮೆಲ್ಲ ಮೆಲ್ಲನೆ ಹೆಜ್ಜೆ ಇಡುತ್ತಿದೆ. ಬಿಸಿಲಿನ ಬೇಗೆಯಿಳಿದು ತಣ್ಣನೆಯ ಸೊಂಪು ತುಂಬಿ ಹರಡುತ್ತಿದೆ. ಆದರೆ, ಎಲ್ಲವೂ ಯಾಂತ್ರಿಕವಾಗಿ.

ತಲೆ ಬಾಗಿಲ ಕರೆಗಂಟೆ ಸದ್ದುಗೈದು ಕರೆ ನೀಡಿತು.

ಸೀತಮ್ಮ ಕದ ತೆರೆದಾಗ ಒಳಬಂದ ಅತಿಥಿಗಳು ಚಿತ್ರಸೇನ ಮತ್ತು

ಹೇಮರತಿ ಕರ್ವೆ. ಚಿತ್ರಸೇನನ ಮದುವೆ ಕಲಿಕತ್ತೆಯಲ್ಲಿ ನಡೆದು ಎರಡು ಮೂರು ತಿಂಗಳಾಗಿದೆ, ಅನಂತರ ಅವನು ಬಂದೇ ಇರಲಿಲ್ಲ....ನೂತನ ಬಾಳಿನ ಅನುಪಮ ಅನುಭವ ತುಟಿ ಕೆನ್ನೆಗಳಿಗೆ ಆಚ್ಛೊತ್ತಿ ಮೈಸಿರಿಗೆ ಇನ್ನಷ್ಟು ಇಂಬು ಕೊಟ್ಟಿದೆ. ಆ ನವಾಗತ ವ್ಯಕ್ತಿ ಒಳ ಬಂದವನೇ ಮಗುವಿಗೆ ನಗೆ ಮೊಗದಿಂದ ಎರಡೂ ಕೈಗಳ ಸ್ವಾಗತ ನೀಡಿ, ತೊಡೆಯ ಮೇಲೆ ಕೂಡಿಸಿಕೊಂಡು ಮುದ್ದು ಮಾತುಗಳ ಸವಿಯನ್ನು ಸವಿಯುತ್ತಾ ಅವಳಲ್ಲೇ ಸಂಪೂರ್ಣ ತಲ್ಲೀನನಾದ. ಅದನ್ನು ನೋಡುತಿದ್ದಂತೆ ಕಮಲೇಶಳ ಚಿತ್ತ ಚಂದ್ರಕಾಂತನ ಸುತ್ತಮುತ್ತ ಸುಳಿದಾಡಿತು....ಆ ಶಿಲಾ ಕಾಠಿಣ್ಯ ಮೂರ್ತಿ ಒಂದಿನವಾದರೂ ಮಗುವನ್ನು ಎತ್ತಿಕೊಳ್ಳಲಿಲ್ಲ. ಮಾರ್ದವ ಭಾವನೆಯಿಂದ ನೋಡಲಿಲ್ಲ. ಮುಂದಾದರೂ ಹೊಂದಿಕೊಂಡರೆ ಸಾಕು ಎಂದು ಮನಸ್ಸಿನೊಳಗೆ ಭಾದೆಪಟ್ಟುಕೊಳ್ಳುತ್ತಾ ನಿಡುಸುಯ್ದಳು.

ಹೇಮರತಿ ಕರ್ವೆ ಸ್ವಲ್ಪ ಹೊತ್ತಿದ್ದು, ಚೇತನಾ ಹರೀಶರ ಸೊತ್ತನ್ನು ಕೊಂಡುಕೊಂಡುದುದಕ್ಕೆ ಹತ್ತು ಸಾವಿರ ರೂಪಾಯಿಗಳ ಚೆಕ್ಕನ್ನು ನೀಡಿ “ಈ ಚಿರಂಜೀವ ಸತ್ಯದ ಎದುರು ಆತ್ಮದಾನದ ಲಕ್ಷ್ಯಸಿದ್ಧಿ ನಿನಗೇನೆನಿಸುತ್ತದೆ ಕಮಲೇಶ್ ?” ಎಂದಳು. ದನಿಯಲ್ಲಿ ಭಾವುಕತೆಯ ತನಿರಸ ಜಿನುಗುತಿತ್ತು. ಕಮಲೇಶಳ ತುಟಿಗಳು ಬಿರಿಯುವುದರೊಳಗಾಗಿ ಹೇಮರತಿ ಕರ್ವೆ ಪುನಃ ನುಡಿದಳು “ಏನೇ ಇರಲಿ, ಅವರವರ ಪ್ರೇಮ ಬಾಂಧವ್ಯ ಇನ್ನೆಷ್ಟೇ ಇರಲಿ, ಈ ಸಜೀವ ಆತ್ಮಜ್ಯೋತಿಯನ್ನು ನಿರ್ಲಕ್ಷಿಸಿ ತನ್ನ ಬಲಿದಾನದ ಮೂಲಕ ಆಕೆ ಸಾಧಿಸಿದುದಾದರೂ ಏನು? ನಿಶ್ಚಲ ರಾಗ ಜ್ಯೋತಿಯ ಮಹತ್ವವನ್ನು ಒಲಿಗೊಟ್ಟು, ದೃಢ ಸಂಕಲ್ಪದಿಂದ ಜೀವನ ಜ್ಯೋತಿಯ ಕುಡಿ ಆರದಂತೆ ಕಾಪಾಡಿಕೊಂಡಿದ್ದಿದ್ದರೆ ಅದೇ ಸರ್ವೋತ್ತಮ ಲಕ್ಷ್ಯಸಿದ್ಧಿಯಾಗುತಿತ್ತು. ಆಕೆ ಆ ಕ್ರೂರ ಸನ್ನಿವೇಶದ ಒತ್ತಡಕ್ಕೆ ಸಿಕ್ಕಿ ದಿಕ್ಕೆಟ್ಟು ಆತ್ಮಹತ್ಯ ಮಾಡಿಕೊಂಡು ಶಿಶು ಹತ್ಯಾದೋಷಕ್ಕೂ ಒಳಗಾಗಿದ್ದಾಳೆ. ಅಂದು ಆ ದುರ್ಮುಹೂರ್ತದಲ್ಲಿ ಅವಳೊಂದಿಗೆ ಇನ್ನಾರಾದರೂ ಹಿರಿಯರು ಇದ್ದಿದ್ದರೆ ಈ ಅನಾಹುತ ನಡೆಯುತ್ತಿರಲಿಲ್ಲ.”

ಚಿತ್ರಸೇನ ತಾಯಿಯ ಅಭಿಪ್ರಾಯವನ್ನು ಅನುಮೋದಿಸಿದ. ಸ್ವರ್ಣಮಾಲಿನಿಯೂ ‘ಹೌದು’ ಎಂಬಂತೆ ತಲೆದೂಗಿದಳು. ಕಮಲೇಶ್ ಒಂದು

ಘಳಿಗೆ ಯೋಚಿಸಿದಳು. ಆ ಮೂವರ ಅಭಿಪ್ರಾಯವನ್ನು ಮೀರಿ, ಆ ಮಹೋತ್ತಾದ ಸಜೀವ ಸತ್ಯದ ಎದುರು ಏನು ಹೇಳಲೂ ತೋರದೆ ನಿಷ್ಕಳಂಕವಾದ ಶುಷ್ಕ ನಗೆ ಬೀರಿದಳು. ಅದೇ ಸಮಯಕ್ಕೆ ಚಂದ್ರಕಾಂತ್ ಅಕ್ಷತೆಯಿಟ್ಟು ಕರೆದಂತೆ ಒಳಬಂದ.

ಅನಿರೀಕ್ಷಿತ ಉತ್ತರ ತಟ್ಟನೆ ಹೊರಬಿತ್ತು,

"ನೀವು ಯಾವ ಆತ್ಮದಾನದ ಮಹತ್ತನ್ನು ಅಲ್ಲಗಳೆಯುತ್ತೀರೋ 'ಸನ್ನಿವೇಶದ ಒತ್ತಡ'ದಿಂದ ಎಂಬ ಅಡ್ಡ ಹೆಸರಿನಿಂದ ಅವಮಾನಿಸುತ್ತೀರೋ ಅದು ಸರಿಯಲ್ಲ. ಏನೇ ಇರಲಿ, ಈ ಬಲಿದಾನ ಆಕೆಯ ಸರ್ವೋತ್ತಮ ಸಿದ್ಧಿ ಮತ್ತು ಪ್ರಧಾನ ಲಕ್ಷ್ಯ ಅಂದರೆ ತಪ್ಪಲ್ಲ."

ಚಂದ್ರಕಾಂತ ಹೇಗೆ ಆಗಮಿಸಿದನೋ ಹಾಗೆಯೇ ನಿರ್ಗಮಿಸಿದ. ಕೇವಲ ತನ್ನ ಅಭಿಪ್ರಾಯವನ್ನು ಕಟುವಾಗಿ ತಿಳಿಸಲೆಂದೇ ಬಂದು ಹೋದಂತಿತ್ತು....ಅವನ ರೀತಿ. ಯಾರ ತುಟಿಗಳು ಬಿರಿಯದಿದ್ದರೂ ಕಣ್ಣುಗಳು ಪರಸ್ಪರ ಸಂಧಿಸಿದುವು. ಕಮಲೇಶಳ ಅಂತರಂಗ ಕಡಿದ ಬಾಳೆಯ ಸಸಿಯಂತೆ ನಲುಗಿತು. ಚಿತ್ರಸೇನ ಮಗುವನ್ನು ಕೆಳಗಡೆ ಬಿಟ್ಟು ಎದ್ದು ನಿಂತ. ಹೇಮರತಿ ಮಾತು ಮರೆಸಲೆಂದೋ ಏನೋ "ಚೇತನಾ ನಿಮಗೆ ಮಾತ್ರವಲ್ಲ; ನಮಗೂ ಹೊಂದಿಕೊಂಡಿದ್ದಾಳೆ. ಈಗ ಇವಳಿಂದ ಮನೆ ತುಂಬ ಮಂದಿ ಇದ್ದಂತೆ ಎನಿಸುತ್ತೆ, ಅಲ್ಲವೆ ?"

"ನಿನಗೂ ಸದ್ಯದಲ್ಲಿ ಮೊಮ್ಮಕ್ಕಳು ಬಂದಾರು ಯೋಚಿಸಬೇಡ." ಎಂದಳು ಸ್ವರ್ಣಮಾಲಿನಿ.

ಚಿತ್ರಸೇನ ಹೆಣ್ಣುಮಕ್ಕಳಂತೆ ಒಮ್ಮೆಲೆ ಕೆಂಪು ತಳೆದ.

ಅವರು ಹೊರಟರು. ಕಮಲೇಶಳ ಚಿದಾಕಾಶದಲ್ಲಿ ಕಾರ್ಮೋಡಗಳುದಿಸಿದುವು. ಚೇತನಾ ಕಮಲೇಶಳ ಸ್ಟೆತೊಸ್ಕೋಪನ್ನು ಕೊರಳಿಗೆ ತಗುಲಿಸಿಕೊಂಡು--"ನಾನು ಡಾಕ್ಟರ್ ! ಮಾ ಜೊತೆ ಆಸ್ಪತ್ರೆಗೆ ಹೋಗುವೆ !" ಎಂದಳು ಮನಮೋಹಕವಾಗಿ.

"ಓ....ಹೋ....ಹೋ !" ಎನ್ನುತ್ತ ಮಗುವಿಗೆ ಉತ್ತೇಜನ ನೀಡಿ ಅವಳ ಆಟ ಪಾಠಗಳನ್ನು ಗಮನಿಸುತ್ತ ಚೆಕ್ಕನ್ನು ಒಂದು ಘಳಿಗೆ ಹಿಂದೆ ಮುಂದೆ ತಿರುಗಿಸಿ ನೋಡಿದಳು ಕಮಲೇಶ್. ಅದರಲ್ಲಿದ್ದುದು ಆತ್ಮಾರಾಂ

ಕರ್ಮೆಯ ಅಕ್ಷರಗಳಾಗಿರದೆ ಚಿತ್ರಸೇನನ ಅಕ್ಷರಗಳಾಗಿದ್ದುವು. ಕಮಲೇಶ್ ಅದನ್ನು ನಿಷ್ಕಳಂಕವಾಗಿ ಭಾವಿಸಿದರೂ ಚಂದ್ರಕಾಂತನ ಮನವನ್ನು ಅದು ಮುಳ್ಳಿನಂತೆ ಚುಚ್ಚಿತು. ಕೋಟು ಬೂಟುಗಳನ್ನು ಅಲ್ಲಲ್ಲೇ ಎಸೆದು ನೀರು ಮನೆಗೆ ಹೋದ. ನಡೆ ನುಡಿಗಳಲ್ಲಿ ಬಿಗುವಾನ ಹೊಮ್ಮುತಿತ್ತು. ಉಂಡು ಮುಗಿಸಿ ಬರುವಷ್ಟರಲ್ಲಿ ಚೇತನಾ ಅರೆ ನಿದ್ದೆಯ ಮಂಪರದಲ್ಲಿದ್ದಳು. ಅವಳನ್ನಲ್ಲಿ ನೋಡಿದವನೇ "ಇಲ್ಲೇಕೆ? ನಿಮ್ಮಮ್ಮನ ಬಳಿ ಬಿಡಬಾರದಿತ್ತೇ?" ಎಂದ.

"ಸ್ವಲ್ಪ ಹೊತ್ತು ಮಲಗರಲಿ. ಅನಂತರ ಒಳಗಡೆ ಮಲಗಿಸುವೆ."

ಕಮಲೇಶ್ ಮಗುವಿನ ಬಳಿ ಅಡ್ಡಾದಳು.

ಅವನ ಮನದಲ್ಲಿನ ನಂಜನ್ನು ಗಮನಿಸಿದರೂ ಗಮನಿಸದವಳಂತೆ ಮಗುವನ್ನು ಆ ಕಡೆಗೆ ಮಲಗಿಸಿಕೊಂಡು ಅವನಿಗೆ ಸ್ಥಳವನ್ನು ತೆರವು ಮಾಡಿದಳು. ಚೇತನಳ ನಳಿದೋಳು ಅವಳ ಕೊರಳನ್ನು ಮೃದುವಾಗಿ ಬಳಸಿ ಹಿಡಿಯಿತು. ಮೃಣಾಳವನ್ನಣಕಿಸುವ ಎಳೆಯ ಹಸ್ತವನ್ನು ನೇವರಿಸುತ್ತಾ ನೆಟ್ಟ ದಿಟ್ಟಿಯನ್ನು ಮಾಡಿನ ಕಡೆ ಹರಿಸಿದಳು ಕಮಲೇಶ್.

"ಕಮಲೇಶ್?"

ಕಮಲೇಶಳ ಅರಳುಗಂಗಳೇ ಕೇಳಿದುವು "ಏನು ಡಾಕ್ಟರ್?"

"ನಾನು ಅಂದಿನಿಂದ ನಿಮಗೆ ಹೇಳಬೇಕೆಂದಿದ್ದುದನ್ನು ಇದುವರೆವಿಗೂ ಹೇಳಿರಲಿಲ್ಲ. ಈಗ ಬಾಯಿ ಬಿಡುತ್ತಿದ್ದೇನೆ. ಇನ್ನು ಮೇಲೆ ನಾವು ನಮ್ಮಲ್ಲಿಗೆ ಹೋಗೋಣ. ಇಲ್ಲಿ ನಾಲ್ಕೈದು ತಿಂಗಳಿದ್ದುದೇ ಬಹಳವಾಯಿತು.

ಸಿಡಿಲು ಬಿದ್ದಿದ್ದರೂ ಅಷ್ಟು ಬೆಚ್ಚುತ್ತಿರಲಿಲ್ಲ ಅವಳು. ನುಡಿ ಎದೆಯಾಳಕ್ಕೆ ಕಾದ ರಸದಂತೆ ಇಳಿಯಿತು. ಜೀವನದ ಬಗ್ಗೆ ಪೂರ್ವಭಾವಿಯಾಗಿ ಯಾವ ಮಾತುಕತೆಯಾಡದಿದ್ದುದೂ ಸಹ ಅವಳ ತಪ್ಪಾಗಿದೆ. ವಿಧಿ ಯಾವ ಮುಹೂರ್ತದಲ್ಲಿ ಮದುವೆಯ ಒಪ್ಪಂದ ಮಾಡಿಸಿತೋ ಅದೇ ಮುಹೂರ್ತದಲ್ಲಿ ಆ ಪ್ರಸ್ತಾಪವನ್ನು ಮರೆಯುವಂತೆಯೂ ಮಾಡಿದೆ. ಈಗ....ಏನೆನ್ನಬೇಕೋ ತಿಳಿಯದಾಯಿತು. ಭಯದುಃಖಗಳಿಂದ ತನುಮನಗಳು ಘಾಸಿಗೊಂಡುವು. ಸೈದ್ಧಾಂತಿಕವಾದ ಅವನ ನುಡಿ ಕಿವಿಯಲ್ಲಿ ಇನ್ನೂ ಮರ್ಮರಿಸುತ್ತಲೇ ಇದೆ, ಕಾಂಡವನ್ನು ಕೊರೆಯುವ ಗುಂಗೆಯ ಹುಳುವಿನಂತೆ....

ಅವಳು ನಿರುತ್ತರಳಾದುದು ಆತನ ಸಹನೆಯನ್ನು ಮೀರಿಸಿತು. ಒಂದು ಘಳಿಗೆ ಇನ್ನೊಂದು ಘಳಿಗೆ ಕಾದರೂ ಉತ್ತರವಿಲ್ಲ. ಒಡನೆ ಅಹಂಕಾರಯುತವಾದ ಸುಪ್ತ ಪ್ರತಿಕೂಲತೆಯನ್ನು ಹೊಡೆದೆಬ್ಬಿಸಿ ಹುರಿದುಂಬಿಸಿತು ಅಸಹನೆ. ಚಂದ್ರಕಾಂತ್ ಬಾಯ್ದೆರೆದ "ಡಾಕ್ಟರ್....! ಏನು ಹೇಳುತ್ತೀರಿ? ಏಕೆ ಮಾತಿಲ್ಲ? ಇದೇನು ಮಕ್ಕಳಾಟವೆ?"

ಭಯ ಭೀತಿ ದುಃಖ ದುಗುಡಗಳ ವಶೀಭೂತಳಾಗಿ ಕೇಳಿದಳು ಕಮಲೇಶ್ "ಇಲ್ಲಿ ನಿಮಗಾದ ತೊಂದರೆಯಾದರೂ ಏನು?"

"ಆ ಪ್ರಶ್ನೆಯೇ ಬೇಡ ಕಮಲೇಶ್. ವಿಷಯವನ್ನು ಸಂಪ್ರದಾಯ ಬದ್ಧರಾಗಿ ಪರಿಶೀಲನೆ ಮಾಡಿರಿ....ಅದಕ್ಕಿಂತ ಇನ್ನೇನೂ ಹೇಳಲಾರೆ."

ಅವಳ ಸುನೇತ್ರಗಳಲ್ಲಿನ ವ್ಯಥೆ ಮತ್ತು ಅಸಹಾಯಕತೆಗಳನ್ನು ಗ್ರಹಿಸಿದರೂ ಚಂದ್ರಕಾಂತ್ ವಿಚಲಿತನಾಗಲಿಲ್ಲ.

"ಹಾಗೆಂದರೆ ಹೇಗೆ ಡಾಕ್ಟರ್? ಇಲ್ಲಿ ಇನ್ನಾರಿದ್ದಾರೆ. ಮಾ ಒಬ್ಬರನ್ನೆ ಬಿಟ್ಟು ನಾನಾದರೂ ಹೇಗೆ ಬರಲಿ? ಸಂಪ್ರದಾಯಕ್ಕೆ ಶರಣಾಗಲು ನಾವು ಸನಾತನಿಗಳಲ್ಲವಲ್ಲ."

"ಅವರ ಬಗ್ಗೆ ಯೋಚಿಸುವ ನೀವು ಜೀವನಕ್ಕೆ ಕಾಲಿಟ್ಟುದುದೇಕೆ?.... ಸಂಪ್ರದಾಯ ಸನಾತನಿಗಳಿಗೆ ಮಾತ್ರವೇನು? ವಿನೂತನರಿಗೂ ಉಂಟು."

"........"

ದೈಹಿಕ ಕ್ರಿಯೆಗಳು ಒಮ್ಮಿಂದೊಮ್ಮೆಲೇ ನಿಷ್ಕ್ರಿಯೆಯಾದಂತೆ ಭಾಸವಾಯಿತು. ಆಪಾದಮಸ್ತಕವೂ ಮೈನವಿರೆದ್ದು ತನಗರಿಯದಂತೆಯೇ ನಸುಕಂಪನದ ಅಲೆ ಹರಿದಾಡಿ ಹೋಯಿತು. ಸನಾತನ ವಿಶಿಷ್ಟ ಸಂಪ್ರದಾಯ ಮತ್ತು ಜೀವನ ಪರಿಸ್ಥಿತಿಯ ತಾಕಲಾಟಗಳು ವಾಸ್ತವ ಜೀವನದ ತೆರೆಮರೆಯಲ್ಲಿ ನಡೆಯುವುದು ಸರ್ವೇಸಾಮಾನ್ಯವಾದರೂ ಇಂದು ಅತ್ಯಂತ ಭೀಷಣವಾಗಿ ತೋರಿ ಕಮಲೇಶ್ ತತ್ತರಿಸಿದಳು.

"ಕಮಲೇಶ್, ನಾನಿಲ್ಲಿ ನಿಮ್ಮ ದಾಸಾನುದಾಸನಾಗಿರಲಾರೆ."

"ಛೀ! ಎಂತಹ ಮಾತು....? ನೀವಿಲ್ಲಿ ದಾಸಾನುದಾಸರಾಗಿದ್ದೀರಾ?"

"ಪತಿಯ ಮನೆಯಲ್ಲಿನ ಜೀವನ ದಾಸ್ಯವಲ್ಲದೆ ಮತ್ತೇನು?"

ಸಾಗರದುಬ್ಬರವು ಸರ್ರನೆ ಏರಿ ಕೊನೆಯ ಬಿಂದುವನ್ನು ಮುಟ್ಟಿ ತಣ್ಣಗೆ

ನಿಃಶಬ್ದವಾಗಿ ಹಿಂದಿರುಗಿದಂತಾಯಿತು ಅಂತರಂಗದ ಪರಿಸ್ಥಿತಿ. ಮನಃಸ್ಥಿತಿ ಪತೋಟಿಯಲ್ಲಿದ್ದರೂ ಹೃದಯ ಸ್ಥಿತಿ ಏರುಪೇರಾಗಿದೆ....ಕಮಲೇಶ್ ಸೂಕ್ಷ್ಮ ವಾಗಿ ಜೆವರ ಹತ್ತಿದಳು-

"ಡಾಕ್ಟರ್ ಸ್ವಲ್ಪ...."

"ಅರ್ಥಂಬರ್ಥ ಮಾತುಬೇಡ; ಪೂರ್ತಿಮಾಡಿರಿ."

"ಧಾರ್ಮಿಕ ದೃಷ್ಟಿಯಿಂದ ನೋಡಿರಿ. ಸಣ್ಣ ಮನಸ್ಸಿನ ಆಳಾಗ ಬಾರದು.

"ವಿದ್ಯೆಯ ಯೋಜನಲ್ಲಿ ಸಂಪ್ರದಾಯ ಆದರ್ಶಗಳನ್ನು ಬಲಿಗೊಟ್ಟು ಆಧುನಿಕ ಜೀವನಕ್ಕೆ ಮರುಳಾಗಿ ಯಾಂತ್ರಿಕ ತಾಂತ್ರಿಕ ಮೌಲ್ಯಗಳನ್ನು ಜಾರಿಗೆ ತಂದಿರುವುದೇ ದೇಶದ ಅವನತಿಗೆ ಕಾರಣ ಎಂದರೆ ತಪ್ಪಾಗದು, ಕಮ ಲೇಶ್! ಪುರಾತನ ಜ್ಞಾನ ಮೂಲಗಳನ್ನು ಇನ್ನೊಮ್ಮೆ ಪರಿಶೀಲನೆ ಮಾಡಿರಿ. ಶತ ಶತಮಾನಗಳ ಹಿಂದೆ ಮನು....ಪತಂಜಲಿ ವಿರಚಿತ ಸೂತ್ರಗಳೇ ನಿಜವಾ ಗಿಯೂ ಅನುಷ್ಠಾನಯೋಗ್ಯವಾಗಿವೆ. ಇಂದಿನ ಅಧ್ಯಯನ ಪಾಂಡಿತ್ಯಗಳನ್ನು ಅಂದಿಗೆ ಹೋಲಿಸಿದರೆ ಇವು ತುಂಬ ಬಾಲಿಶವಾಗಿ ಕಾಣಿಸುವುದಿಲ್ಲವೇ?.... ನಿಜವಾಗಿಯೂ ಹೇಳಿರಿ, ನಿಮಗೇನೆನಿಸುತ್ತದೆ? ಪುರಾತನ ಸಂಪ್ರದಾ ಯವೋ? ಇಂದಿನ ನಾಗರಿಕತೆಯ ಬೂಟಾಟಿಕೆಯೋ? ಯಾವುದು ಧರ್ಮ ಬೋಧೆ ಮಾಡುತ್ತದೆ?"

ಶಿಥಿಲ ಶ್ರಾಂತ ನಾಲಿಗೆ ಮೌನಧಾರಣೆ ಮಾಡಿತು.

ಡಬ. ಡಬ. ಡಬ. ಡಬ.

ಎದೆಯ ಮೃದಂಗ ಇನ್ನೂ ಸ್ಪಷ್ಟವಾಗಿ ಘೋಷಿಸುತ್ತಿದೆ. ಡಬ್. ಡಬ್. ಡಬ್. ಡಬ್.

ಈ ಹಿಂದೆ ಕಷ್ಟ ನಿಷ್ಠೂರಗಳ ಮುಳ್ಳುಗೆಂಟೆಗಳನ್ನು ಹತ್ತಿ ಇಳಿಯು ವಾಗಲೂ ಇಂಥ ಘಾತವನ್ನು ತಿಂದಿರಲಿಲ್ಲ. ಏರಿ ಇಳಿಯುವ ತಿದಿಯಂತೆ ಎದೆ ಒಂದೇಸಮನೆ ಏರಿ ಇಳಿಯುತ್ತಿದೆ. ಏನೂ ಹೇಳಲಾಗದಷ್ಟು ಯೋಚನೆ ಮಲೆಗಳು ಸ್ತಬ್ಧವಾದುವು. ಯಾವುದಾದರೊಂದು ನೆವ ದೊರೆತರೆ ಎದ್ದು ಹೋಗಬಹುದಾಗಿತ್ತು. ಏನೂ ಇಲ್ಲದೆ ಎದ್ದು ಹೋದರೆ ಕೋಪಗೊಂಡಳೆಂಬ ಅಪಾರ್ಥಕ್ಕೆ ಕಾರಣವಾಗಬಹುದು. ಆವೇಶಪೀಡಿತಳಾದರೂ ಕಾಲದೆಶೆಯಲ್ಲಿನ

ಹೊದ್ದಿಕೆಯನ್ನು ಕೈಗಳು ಮೇಲೆಳೆದುಕೊಂಡುವು.

"ನೀವು ಏನೇ ಅನ್ನಿ. ನಾನು ಅಪ್ಪಟ ಸಂಪ್ರದಾಯಸ್ಥ. ನನ್ನನ್ನು ಅಪ್ಪ ಅಮ್ಮ ಬೆಳೆಸಿರುವುದೇ ಹಾಗೆ. ನಮ್ಮವರೆಲ್ಲಾ ತುಂಬ ಸಂಪ್ರದಾಯ ಶರಣರು. ನಮ್ಮ ತಾಯಿ ಇಂದಿಗೂ ಮಡಿಯುಡುತ್ತಾರೆ. ಅವರ ಆದರ್ಶಗಳಿಗನುಗುಣವಾಗಿ ಸಂಸಾರ ನಡೆಯುತ್ತದೆ. ಸಂಪ್ರದಾಯಸ್ಥರೆಂದರೆ ನನಗೆ ನಿಜವಾಗಿಯೂ ಗೌರವವಿದೆ; ಭಕ್ತಿಯಿದೆ; ಇದು ಬೂಟಾಟಿಕೆಯಲ್ಲ ಡಾಕ್ಟರ್."

ಮುಂದೇನು ?

....ನಿಜ, ಹಿಂದೂಸ್ಥಾನದಲ್ಲಿ ಮನುಷ್ಯನಿಗಾಗಿ ವಿಶಿಷ್ಟತೆಯಿದೆ. ಧಾರ್ಮಿಕ ಚೌಕಟ್ಟಿದೆ....ವಿಚಾರಗತ್ತರಿಯಲ್ಲಿ ಸಿಕ್ಕಿ ಮನಸ್ಸು ನುಚ್ಚು ನೂರಾಯಿತು. ಕಮಲೇಶ್ ಹೊರಳಿ ಮಲಗಿದಳು.

"ಡಾಕ್ಟರ್, ಈಗಲೂ ಈ ವಿಜ್ಞಾನಯುಗದಲ್ಲೂ ಭಾರತ ಭಾರತವಾಗಿಯೇ ಉಳಿದಿದೆ ಹೇಗೆ? ಈ ವಿನೂತನ ಧಾಳಿಯಲ್ಲೂ ಪ್ರಾಚೀನ ಸಂಸ್ಕೃತಿ ಬದುಕಿದೆ ಹೇಗೆ? ಎಲ್ಲವೂ ಆ ಸಂಪ್ರದಾಯ ಶರಣರಿಂದ. ಇಲ್ಲವಾಗಿದ್ದಲ್ಲಿ, ಇಷ್ಟರೊಳಗಾಗಿ ಹಿಂದೂಸ್ಥಾನ ಅರ್ಥಾತ್ ಪಾಕಿಸ್ಥಾನವೋ ಕಿಲಿಸ್ಥಾನವೋ ಆಗಿರುತಿತ್ತು. ಈ ನಾಗರಿಕ ಮುನ್ನಡೆ ಎಷ್ಟೇ ಇರಲಿ, ನೂತನ ವಿಜ್ಞಾನ ಎಷ್ಟೇ ಇರಲಿ, ಅದಕ್ಕೂ ಸಂಪ್ರದಾಯಕ್ಕೂ ಏನೇನೂ ಸಂಬಂಧವಿಲ್ಲ...."

ಚಂದ್ರಕಾಂತ್ ಬುಸುಗುಟ್ಟುತ್ತಾ ನುಡಿದ.

ಅಂತರಂಗದಿಂದ ಹೊಮ್ಮುವ ವಿಶಾದಗೀತೆ ಪ್ರಶಾಂತ ನಿಶ್ಯಬ್ದತೆಯ ಮೇಲೆ ಗರಗಸದಲುಗಿನಂತೆ ಹರಿದು ಸ್ಪಷ್ಟವಾಗಿ "ನಿನ್ನ ನಿಲುವು ತಪ್ಪಲ್ಲ. ಒಂದು ವೇಳೆ ನೀನು ಆತನೊಂದಿಗೆ ಹೋಗದಿದ್ದರೂ ಅಪರಾಧಿನಿಯಾಗಲಾರೆ." ಎನ್ನುತ್ತಿದೆ, ಅದೇ ನಿಲುವಿನಿಂದ ಅದೇ ನುಡಿ ಮತ್ತೆ ಸ್ಫುಟವಾಗಿ ನರನರಗಳಲ್ಲೂ ಮರುಪ್ರಸಾರ ಹೊಂದಿತು.

ಸದ್ದಿಲ್ಲದ ಶಾಂತಿಯಲ್ಲಿ ಘಳಿಗೆ ಘಳಿಗೆಗಳು ನಿರಾತಂಕವಾಗಿ ನಿಷ್ಕ್ರಮಿಸಿದುವು.

ಆತನ ಪೌರುಷೇಯವಾದ ದನಿ ಪುನಃ ಕಿವಿಯನ್ನು ತಾಗಿತು "ನಾವು

ವಿದೇಶೀಯರ ಸಂಸರ್ಗದಿಂದ ಅಲೋಪತಿಯನ್ನು ಕಲಿತು ಉದ್ಧಾನುವಾಗಿ ಬೆಳೆಸಿಕೊಂಡಿದ್ದೇವೆ ನಿಜ. ಆದರೆ ಹಾಗೆಂದು ಆಯುರ್ವೇದವನ್ನು ಕಿತ್ತೊಗೆಯಲಿಲ್ಲವಷ್ಟೆ? ನಾವು ಯಾವುದೇ ರೀತಿಯಲ್ಲಿ ಪರಾನುಕರಣೆ ಮಾಡಿದರೂ ಭಾರತನಾರಿಯ ಪಾವಿತ್ರ್ಯ ಮತ್ತು ಪಾತಿವ್ರತ್ಯಗಳ ಮಹಿಮೆಗೆ ಕುಂದು ಬರುವಂತಿರಬಾರದು."

ಹಾ....! ನುಡಿ ಜರ್ರನೆ ಕಾದರಸದಂತೆ ಎದೆಯಾಳಕ್ಕಿಳಿಯಿತು.

ಕಮಲೇಶ್ ಅತ್ತ ಹೊರಳಿ ಮಗುವನ್ನಪ್ಪಿ ಕಣ್ಣುಗಳನ್ನು ಮುಚ್ಚಿಕೊಂಡು ನಿದ್ದೆಯ ಸೋಗು ಹಾಕಿ ವಿಚಾರವಾಹಿನಿಗೆ ಅಡ್ಡಗಟ್ಟೆ ಹಾಕಿದಳು. ಕದಡಿ ಬಗ್ಗಡವಾದ ಮನಸ್ಸಿಗೆ ಕಿಂಚಿತ್ ಶಾಂತಿಯನ್ನೊದಗಿಸಲು ಆರ್ತತೆಯಿಂದ ನಿದ್ರಾದೇವಿಯನ್ನು ಮರೆ ಹೊಕ್ಕಿದರೂ ಆತನ ಸ್ಪಷ್ಟ ಸಿದ್ಧ ನಿಲುವು ಎದೆಯನ್ನು ಭೈರಿಗೆಯಂತೆ ಕೊರೆಯುತ್ತಿದೆ. ಬಹಳ ಹೊತ್ತಿನ ಮೇಲೆ ನಿದ್ದೆಯ ಮಂಪರ ಮೆಲ್ಲನೆ ಆವರಿಸಿದಾಗ ಎದೆಯಾಳದಲ್ಲಿ ಬಿಸಿಯುಸಿರು ಎಣೆಯಿಲ್ಲದೆ ಹರಿದಾಡುತಿತ್ತು.

ನೋಟದ ನೇರಕ್ಕೆ ಗಿರಿ ಶಿಖರಗಳ ಸಾಲು. ಹಸುರುಡೆಯುಟ್ಟು ಮಂಜಿನ ಬಿಳಿ ಮುಸುಕು ಹೊದ್ದ ನೆಲವೆಣ್ಣು ಹಸೆಮಣೆಯ ಹೆಣ್ಣಿನಂತೆ ಶೋಭಿಸುತ್ತಿದ್ದಾಳೆ. ಸುಯ್ ಸುಯ್ಯನೆ ಸುಯ್ದು ಬರುವ ಮಂದ ಮಾರುತ ವನಸುಮಗಳ ಕಂಪನ್ನು ತರುಬಿ ತಂದು ಎಲ್ಲೆಡೆಗೂ ಹರಡಿ ತನುಮನಗಳಿಗೆ ತಂಪನ್ನೊರೆಯುತ್ತಿದ್ದಾನೆ.

ಹಸುರು ...ಹಸುರು....ಹಸುರು....ಎಲ್ಲೆಲ್ಲೂ ಹಸುರು ಕಕ್ಕುವ ಹಚ್ಚ ಹಸುರು. ನೋಡಿದಷ್ಟೂ ಸಾಲದಾದ ಪ್ರಕೃತಿಯೈಸಿರಿಗೆ ಮನತೆತ್ತ ಕಮಲೇಶ್ ತದೇಕ ಧ್ಯಾನದಿಂದ ಮರವಟ್ಟು ನಿಂತಳು. ಆ ಬೆಟ್ಟಗಳಂಚಿನ ಅಂಕುಡೊಂಕು ದಾರಿಯಲ್ಲಿ ಸೀರಿ ಸೀಕಲಾದ ಹೆಣ್ಣೊಂದು ಪ್ರಯತ್ನಪೂರ್ವಕವಾಗಿ ಮಾರ್ಗಯೋಗವನ್ನು ಕೈಕೊಂಡಿದೆ. ಕಿಬ್ಬದಿಯಿಂದ ಸುತ್ತಿಸುತ್ತಿ ಬೆಟ್ಟದ ಮೇಗಡೆಗೆ ಹರಿದ ದಾರಿಯಲ್ಲಿ ಏದುಸಿರು ಬಿಡುತ್ತಾ ಮೇಲೇರುತ್ತಿರುವ ಹೆಣ್ಣು ಯಾರಿರಬಹುದು? ಅವಳನ್ನೆಲ್ಲೋ ನೋಡಿದಂತಿದೆ ಆ ವಿಶಿಷ್ಟ ನಡಿಗೆ 'ನಿನಗೆ ಗೊತ್ತು' ಎಂದೇ ಹೇಳುತ್ತಿದೆ. ಬಹಳ ದೂರದಲ್ಲಿರುವುದರಿಂದ ಸ್ಪಷ್ಟವಾಗಿ ತಿಳಿಯುವಂತಿಲ್ಲ. ಆಶ್ಚರ್ಯಚಕಿತಳಾಗಿ ಸಂದಿಗ್ಧಾವಸ್ಥೆಯಲ್ಲಿ ಸಿಲುಕಿ ಎವೆ

ಯಿಕ್ಕದೆ ಅತ್ತಲೇ ನಿಟ್ಟಿಸಿ ನೋಡಿದಳು, ಕಮಲೇಶ್. ತಲೆಯ ಮೇಲೆ ಹೊದ್ದ ಸೆರಗು ಗಾಳಿಗೆ ಹಾರದಂತೆ ಬಿಗಿ ಹಿಡಿದು ಹಿಂತಿರುಗಿ ನೋಡದೆ ನಡೆಯುವ ಅವಳನ್ನು ಯಾರೆಂದು ತಿಳಿಯುವ ಅತೀವ ಹಂಬಲಕ್ಕೆ ಶರಣಾಗಿ ಬೆನ್ನು ಹತ್ತಿ ನಡೆದಳು. ದೂರದ ರೂಪು ನಿಲ್ಲದೆ ಹಿಂತಿರುಗಿ ನೋಡದೆ ಯಾಂತ್ರಿಕವಾಗಿ ಸಾಗುತ್ತಲೇ ಇದೆ. ನಡೆದೂ ನಡೆದೂ ಕಾಲುಗಳು ಸೋತು ಕೋಡುಗಲ್ಲಿನ ಮೇಲೆ ಮುಖಮಡಿಯಾಗಿ ಅವಳು ಚೂಪಗೆ ಕುಳಿತುಕೊಂಡಳು. ಒಡನೆ ಕಮಲೇಶಳ ಕಾಲುಗಳು ಚುರುಕುಗೊಂಡುವು. ಕೇವಲ ಕೆಲವೇ ನಿಮಿಷಗಳಲ್ಲಿ ಅವಳ ಬಳಿ ಸಾರಿ ಕಾತರ ಮಿಶ್ರಿತ ದನಿಯಲ್ಲಿ ಕೇಳಿದಳು "ನೀನು ಯಾರು ತಂಗೀ, ಸ್ವಲ್ಪ ಮುಖವೆತ್ತು ?"

ತಲೆಯ ಮೇಲೆ ಸೆರಗು ಹೊದ್ದು ಮುಖಮಡಿಯಾಗಿ ಕುಳಿತ ಅವಳು ತಲೆಯೆತ್ತಲಿಲ್ಲ. ಕಮಲೇಶ್ ಅಲ್ಲಿಗೂ ಬಿಡದೆ ಅವಳ ಗಲ್ಲವನ್ನು ಹಿಡಿದೆತ್ತಿದಳು. ನೋಡೆ, ಹರಿದ್ರಾ ಕುಂಕುಮ ಸುಶೋಭಿತ ಚ....ಂ....ಪಾ ! ನಿಸ್ತೇಜವಾದರೂ ಆ ಸುಲೋಚನಗಳಲ್ಲಿ ಭಾವಜ್ವಾಲೆ ತಾಂಡವಾಡುತ್ತಿದೆ!

ಕಮಲೇಶ್ ಗಾಬರಿಯಿಂದ ಚೀರಿದಳು "ಇದೇನು ಚಂಪಾ ? ಎಲ್ಲಿಗೆ ಹೊರಟಿದ್ದಿ ?"

"ನನ್ನನ್ನೇಕೆ ಬೆನ್ನು ಹತ್ತಿ ಬಂದಿದ್ದಿ ಕಮಲೇಶ್ ?"

"ಚಂಪಾ....!"

"ನನಗೊತ್ತು ! ನೀನು ನನ್ನನ್ನು ತಡೆ ಹಿಡಿಯಲಾರೆ. ನಾನು ಹಿಡಿದಿರುವುದು ತೀರದ ಹಾದಿ ! ಭಗವಂತನ ವಿಸಾ ನನ್ನೆದೆಗೆ ಇನ್ನಾರೂ ತಣಿವನ್ನೀಡಲಾರರು." ತಲೆಯೆತ್ತಿ ಭಾವೋದ್ವೇಗದಿಂದ ನುಡಿದ ಅವಳು ಸುಮಧುರವಾದ ಕಂಠದಲ್ಲಿ ಹಾಡತೊಡಗಿದಳು....ಯಾರು ಕೈ ಬಿಟ್ಟರೂ ನೀ ಕೈಯ ಬಿಡದಿರೋ ನಾರಾಯಣಾ| ನೀ ಕೈ ಬಿಟ್ಟರೆ ನಾನ್ಯಾರ ಸೇರಲಿ ನಾರಾಯಣಾ|

ನೂರು ನೂರು ನೂರು ನೂರು ಜನುಮಗಳಾಚೆಯ ಮೊರೆ ಚಿರನೂತನವಾಗಿ ಕರ್ಣದೇಶಗಳನ್ನು ಮುಚ್ಚಿತು. ದನಿಯ ಮೃದು ಮಾಧುರ್ಯ ತನುಮನಗಳನ್ನು ಸೂರೆಗೊಂಡಿತು. ಭಾವೋದ್ವೇಗದಲ್ಲಿ ಕಣ್ಣುಗಳು ತಾವಾಗಿ ಮುಚ್ಚಿಕೊಂಡುವು. ಕಮಲೇಶ್ ಭಾವಪರವಶಳಾದಳು. ಹಾಡು ಮುಗಿದು ದನಿ ತುಂಡುಗಡಿದಾಗ ಕಣ್ಣುಗಳು ತಟ್ಟನೆ ತೆರೆದುವು. ನೋಡೆ, ಚಂಪಾ

ಇಲ್ಲವೇ ಇಲ್ಲ.ಅಯ್ಯೋ ಅವಳೆಲ್ಲಿ? ಕಮಲೇಶ್ ಎಲ್ಲೆಡೆಗೂ ಅರಳಿದಳಿದ ದಿಟ್ಟಿಯನ್ನು ಅಟ್ಟಿದಳು. ನೋಟ ಹರಿಯುವವರೆಗೂ ನೋಡಿತು ನೇತ್ರ. ಡಬ ಡಬ ಹೊಡೆನುಕೊಳ್ಳುತಿದ್ದ ಹೃದಯವನ್ನು ಎರಡೂ ಕೈಗಳಿಂದ ಅದುಮಿ ಹಿಡಿದುಕೊಂಡು ಭಯಾಶ್ಚರ್ಯಗಳಿಂದ ಉಡುಗಿ ನಿಂತಳು. ನೋಟಕ್ಕೆದುರಾದ ದೂರದ ಶಿಖರದ ಮಂಜಿನ ತೆರೆ ಕಳಚಿ ಬಿತ್ತು. ನೋಡೆ, ದೇವರ ನಾಮ ಹಾಡುತ್ತಾ ಶಿಖರವನ್ನೇರುತಿದ್ದಾಳೆ ಚಂಪಾ! ಒಂದು ಘಳಿಗೆ, ಒಂದೇ ಒಂದು ಘಳಿಗೆ ಬಾಹ್ಯ ಜಗತ್ತಿಗೆ ಮರಳಿ ಕೈಯೆತ್ತಿ "ಟಾ! ಟಾ!" ಎಂದಳು ಅವಳು. ಮುಖದಲ್ಲಿ ತಿಳಿನಗೆ ಮಿನುಗಿ ಮಾಯವಾಯಿತು.

"ಚಂಪಾ!....ಚಂಪಾ!"

"ಕಮಲೇಶ್! ಕಮಲೇಶ್!" ವ್ಯಾಕುಲುಗಿಸುತ್ತಾ ಚಂದ್ರಕಾಂತ್ ಕರೆದಾಗ ಕನಸಿನ ಸೆಲೆಯೊಡೆದು ಪ್ರಜ್ಞೆ ಬಾಹ್ಯ ಜಗತ್ತಿಗೆ ಮರಳಿತು. ಕಮಲೇಶ್ ಎರಡೂ ಕೈಗಳಿಂದ ಕಣ್ಣುಗಳನ್ನುಜ್ಜಿಕೊಂಡು ಬಿರುಬಿರನೆ ನೋಡಿದಳು. ಕಿವಿಯಲ್ಲಿ ಮಧುರ ದನಿ ಮಾರ್ನುಡಿಯಿತು....ಯಾರು ಕೈಬಿಟ್ಟರೂ ನೀ ಕೈಯ್ಯ ಬಿಡದಿರೊ ನಾರಾಯಣಾ....ನಾರಾಯಣಾ....

ಅಧ್ಯಾಯ

೨೩

ನೋಟ ಕಿಟಕಿಯಲ್ಲಿ ತೂರಿ ದೂರ ದಿಗಂತವನ್ನು ಮುಟ್ಟಿತು

ಅದೇ ಹಿರಣ್ಮಯನಾದ ಶಾಂತಸೂರ್ಯ!

ಧೂಮನಾಲೆಯಲ್ಲಿ ಮೆಲ್ಲನೆ ನುಸುಳಿ ಬರುವ ಗಾಳಿ....ತಂಗಾಳಿ.

ಟ್ರಿಣ್. ಟ್ರಿಣ್. ಟ್ರಿಣ್. ಟ್ರಿಣ್.

ದಿನಚರಿಯಲ್ಲಿ ತೀವ್ರ ಮಗ್ನಳಾಗಿದ್ದ ಕಮಲೇಶಳ ಗಮನವನ್ನು ಟೆಲಿಫೋನಿನ ಟಂಟಣಿ ನಾದ ತನ್ನೆಡೆಗೆ ಸೆಳೆದುಕೊಂಡಿತು. ರಿಸೀವರನ್ನು ಕೈಗೆತ್ತಿಕೊಂಡು "ಹಲೋ!" ಎಂದಳು ಅವಳು.

ಆ ಕಡೆಯಿಂದ ಡಾ| ಪದ್ಮಾ ಕಮಲಾನಿಯ ಧ್ವನಿ "ಡಾಕ್ಟರ್, ಆರನೆಯ ಯೂನಿಟ್ಟಿನಲ್ಲಿ ಆರನೆಯ ಸ್ಪೆಷಲ್ ವಾರ್ಡಿನ ಪೇಷಂಟ್ ನಿನ್ನನ್ನು ಬಹಳವಾಗಿ ನೋಡುವ ಕಾತರದಿಂದಿದ್ದಾಳೆ. ಅವಳ ಸ್ಥಿತಿ ತೀವ್ರ ಕೆಡುತ್ತಿದೆ. ಈಗಲೇ ಹೊರಟು ಬಾ."

"ಆಗಲಿ, ಪೇ...."

ಟೆಲಿಫೋನಿನ ಸಂಪರ್ಕ ಅಷ್ಟಕ್ಕೆ ತುಂಡುಗಡಿಯಿತು. ಮೇಜಿನ ಮೇಲಿದ್ದ ಟಪ್ಪಾಲನ್ನು ಅಲ್ಲಿಂದಲ್ಲೇ ಬಿಟ್ಟು ಹೊರಟಳು. ಮನಸ್ಸು ಹಲವು ಚಿಂತನೆಗಳಿಗೆ ಇಂಬು ಕೊಟ್ಟಿತು ...ನನ್ನನ್ನು ನೋಡ ಬಯಸುವ ಆ ಹೆಣ್ಣು ಯಾರಿರಬಹುದು? ನಿನ್ನೆ ಕನಸಿನಲ್ಲಿ 'ಟಾ ಟಾ' ಹೇಳಿ ಹೋದ ಚಂಪಾ ಇರಬಹುದೇ? ಅವಳೇ ಆಗಿದ್ದಲ್ಲಿ ವಾರ್ಡಿಗೆ ಸೇರಿದುದೂ ಸಹ ನನಗೆ ತಿಳಿಯಲಿಲ್ಲವಲ್ಲಾ? ಓ....! ಮೊನ್ನೆ ಮೂರು ದಿನಗಳ ಹಿಂದೆ ಅದೇ ವಾರ್ಡಿನಿಂದ ಕರೆ ಬಂದಿತ್ತು. ಆರನೇವಾರ್ಡಿನ ಸಮೀಪಕ್ಕೆ ಹೋಗಿ 'ತುರ್ತು ಕರೆ'ಗಾಗಿ ಹಿಂದಿರುಗಿ ಬಂದೆ. ಅನಂತರ ರಜೆ ತೆಗೆದುಕೊಂಡುದುದರಿಂದ ಏನಾಯಿತೋ ತಿಳಿಯಲಿಲ್ಲ. ಬಹುಶಃ ಚಂಪಾ....ಛೇಃ! ಎಂತಹ ಹೆಣ್ಣು ಚಂಪಾ?....ಮಾರ್ಗಯೋಗದಲ್ಲಿ ಮೈಮರೆತ ಕಮಲೇಶ್ ಮಂಚದ ಬಳಿಗೆ ಹೋದೊಡನೇ

ಕಣ್ಣಿಗೆ ಬಿದ್ದುದು ಜೀವಚ್ಛವವಾದ ಚಂಪಾ. ಡಾ!....ಡಾ|| ಪದ್ಮಾ ಕಮಲಾನಿಯ ಕೊನೆಯ ಪ್ರಯತ್ನ ನಡೆಯುತ್ತಲೇ ಇದೆ. ನೋಟ ನೋಡಲಾರದೆ ನೋಡಿದಾಗ ಖಿನ್ನ ವದನದಿಂದ ನುಡಿದಳು, ಡಾ|| ಪದ್ಮಾಕಮಲಾನಿ-"ಪಾಪ, ಇದುವರೆವಿಗೂ ನಿನಗಾಗಿ ಬಹಳ ಕೇಳಿದ್ದಾಳೆ. ಈಗಷ್ಟೆ ಪ್ರಜ್ಞೆ ಹೋಯಿತು."

ಎದೆಯಮೇಲೆ ಕತ್ತಿಯಲುಗು ಹರಿದಾಡಿದಂತಾಯಿತು ಕಮಲೇಶಳಿಗೆ ....ಒಂದು ಘಳಿಗೆ ತನುಮನಗಳು ಜಡವಾದುವು. ಕ್ಷಣ ಮೌನ ಆವರಿಸಿ, ಅಶ್ರುಸಿಕ್ತನೇತ್ರಗಳಲ್ಲಿ ಭಾವಜ್ವಾಲೆ ತಾಂಡವವಾಡಿತು. ಅಂತರಂಗದ ಕಸಿವಿಸಿ ಮುಖಕ್ಕೆ ಕಾರ್‍ನದಿಯಂತೆ ನುಗ್ಗಿದಾಗ ಒಂದು ಘಳಿಗೆ ತಾನು ಡಾಕ್ಟರೆಂಬುದು ಸಹ ಮರೆತು ಹೋಯಿತೋ ಏನೋ....ತನ್ನ ವಿವಾಹಪೂರ್ವ ಚಂಪಾ ಅಂದಿದ್ದಳು. "ನೀನಿನ್ನೂ ಕುಮಾರಿ. ಒಮ್ಮೆ ಸಂಸಾರ ಹೊಕ್ಕಿನೋಡು."

ಆಗ ಅದೆಷ್ಟು ಹಗುರವಾಗಿ ವಿಡಂಬನೆಯಾಗಿ ಕಂಡಿತ್ತೋ....

"ಈ ಜಗತ್ತು ಇಷ್ಟೆ ಡಾಕ್ಟರ್!" ತನಗರಿಯದಂತೆಯೇ ಉದ್ಗಾರ ಹೊರಬಿದ್ದಾಗ ದನಿ ಭಾರವಾಗಿತ್ತು. ಒಂದುಗೂಡಿದ ನಾಲ್ಕು ಕಣ್ಣುಗಳೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡನಂತರ ವ್ಯಥಿತಳಾಗಿ ನುಡಿದಳು ಕಮಲೇಶ್ "ಚಂಪಾ ನನ್ನ ಕ್ಲಾಸ್‌ಮೇಟ್, ಅತ್ಯಂತ ಆತ್ಮೀಯ ಗೆಳತಿಯೂ ಸಹ. ಕಾಲೇಜಿನ ದಿನಗಳಲ್ಲಿ ಅವಳ ಸಂಗೀತ ಕೇಳಿ ಮಂತ್ರಮುಗ್ಧರಾಗದವರಿಲ್ಲ. ಇಂದು ಎಲ್ಲವೂ ಮಣ್ಣುಪಾಲಾಗಿದೆ...." ದನಿ ತುಂಡುಗಡಿಯಿತು, ಮುಂದೆ ಮಾತು ಹೊರಡಲಿಲ್ಲ....ನಾಡಿ ಹಿಡಿದು ಸ್ಥಿತಿ ಏರು ಪೇರಾಗಿದ್ದುದನ್ನು ಗಮನಿಸಿ, ಚಾರ್ಟಿನ ಕಡೆ ಕಣ್ಣು ಹಾಯಿಸಿದಳು. ಮೂರು ದಿನಗಳ ಹಿಂದೆ ಆಸ್ಪತ್ರೆಗೆ ಸೇರಿದ್ದಾಳೆ. ಸೇರಿದಂದೇ ಗರ್ಭಪಾತವಾಗಿದೆ. ಅದು ಆರನೇ ಗರ್ಭಪಾತವೆಂದು ಅಂಕಿ ಅಂಶಗಳು ಸಾರಿ ಹೇಳುತ್ತಿವೆ. ಅಂದೇ ಅವಳು ಗದ್ಗದ ಕಂಠದಿಂದ ಬೇಡಿಕೊಂಡಿದ್ದಳು, "ವಂಶೋದ್ಧಾರಕ್ಕಾದರೂ ಒಂದು ಮಗು ಬೇಕಲ್ಲ ಕಮಲೇಶ್. ಹೇಗಾದರೂ ಈ ಒಂದು ಮಗುವನ್ನು ಸಜೀವವಾಗಿ ಉಳಿಸಿಕೊಡು...." ಆ ದುಃಖತಪ್ತ ಆರ್ತನಾದ ಮನವನ್ನು ಇಂದು ಸುಡುತ್ತಿದೆ.

ಪ್ರೀತಿ ವಿಶ್ವಾಸ ಹಾಗೂ ಜನ್ಮ ಸಿದ್ಧಿಯ ದೃಷ್ಟಿಯಿಂದ ಜೀವನ ವಿಕಾಸ

ಕ್ಕಾಗಿ ಪವಿತ್ರ ಹೃದಯದ ಕವಾಟವನ್ನು ತೆರೆದು ಯಾರನ್ನು ನಿರ್ಮಲ ಚಿತ್ತ ದಿಂದ ಆಹ್ವಾನಿಸಿದಳೋ ಆತನಲ್ಲಿ ಈಗ ಲೋಕೋತ್ತರವಾದ ಶೂನ್ಯತೆ ಮಾತ್ರ ಉಳಿದಿದೆ ಎಂಬುದನ್ನು ಅರಿಯಲಾರದಷ್ಟು ಅಜ್ಞಾನಿಯಲ್ಲ ಚಂಪಾ. ಕಲ್ಮಶಪೂರಿತ ಶಿಲಾ ಕಾಠಿಣ್ಯಮಯ ಸಂಸಾರದಲ್ಲಿ ರಾಹುಗ್ರಸ್ತಳಾದರೂ ಕೆಚ್ಚಳಿಯದ ಆ ಉಜ್ವಲ ನಾರೀಮಣಿ ಮುಂದುವರಿಸಿಕೊಂಡು ಬಂದ ಕಠಿಣ ತಪಸ್ಸು ಸಾಮಾನ್ಯವಲ್ಲ. ಜೀವನಮಾರ್ಗಯೀಗ ದುಸ್ಸಹವಾದರೂ, ದುರ್ಗಮವಾದರೂ ತನ್ನ ಕಠಿಣ ಸಾಧನೆ ವಿಫಲ ಎಂಬುದು ಮನದಟ್ಟಾದರೂ ಹಿಂಜರಿಯಲಿಲ್ಲ....ವಂಚಿತಳಾದೆನೆಂದು ದುಃಖಿಸಲಿಲ್ಲ. ಸರ್ವಸ್ವವನ್ನೂ ಬಿಟ್ಟುಕೊಟ್ಟು ಕಲಾರಾಧನೆ ಗೈಯ್ಯಬಹುದಾಗಿದ್ದರೂ ವಿಚಲಿತಳಾಗದ ಹೆಣ್ಣು.... ಆದರೂ ಜೀವನ ಅವಳಿಗೆ ಪ್ರಾಸಾದಿಸಿದುದೇನು ? ಸಮಾಜ ಅವಳಿಗೆ ಕೊಟ್ಟ ಬಿರುದಾದರೂ ಎಂಥಾದ್ದು ? ನಿಷ್ಕಳಂಕಿನಿಯೂ, ನಿರಪರಾಧಿನಿಯೂ ಆದ ಅವಳು 'ದೋಷಿ' 'ಪಾಪಿ'ಯಾಗುವುದು ಸಹ ಅನಿವಾರ್ಯವಾಯಿತಷ್ಟೆ ?

ಇದು ಶಿಕ್ಷೆಯೋ ಸಂಪ್ರದಾಯಃವೋ ಅಥವಾ ಸಹನೆಗೆ ಸೀಡುವ ಬಹುಮಾನವೋ ಎಂಬುದನ್ನು ತಿಳಿದುಕೊಳ್ಳಲು ಸಹ ಆ ಪಾಮರಳು ಪ್ರಯತ್ನಿಸಲಿಲ್ಲವೇನೋ....ಒಂದಲ್ಲ ಒಂದು ದಿನ ಈ ಎಲ್ಲಾ ದೌರ್ಭಾಗ್ಯಗಳಿಂದ ಬಿಡುಗಡೆ ಹೊಂದಿ ಹೊರಟು ಹೋಗುವ ಸಾಧ್ಯತೆ ಇರುವುದರಿಂದ ಯಾವ ಆಸೆಯೂ ಅವಳನ್ನು ಪ್ರಲೋಭಿಸಲಿಲ್ಲವೇನೋ....ಸುಖ-ಸಂಪತ್ತು-ಪ್ರೀತಿ-ವಿಶ್ವಾಸಗಳ ಮಾಲಿನ್ಯವನ್ನು ನಿಷ್ಕಲ್ಮಶಗೊಳಿಸುವುದು ಅಷ್ಟು ಸುಲಭವೂ ಅಲ್ಲ. ಆಕೆ ಎಷ್ಟೆಂದರೂ ಹೆಣ್ಣು....ಅಬಲೆ....ಪರಾಧೀನೆ....

ಹಿಂದೂಸ್ಥಾನದಲ್ಲಿ ಈ ದೌರ್ಭಾಗ್ಯಯುತವಾದ ಸಮಸ್ಯೆಗೆ ಎಂದಾದರೂ ಉತ್ತರ ಸಿಕ್ಕೀತೆ ?

ಅಂದೇ ವನಮಾಲಿ ಅಂದದ್ದೇನು ? ಚಂಪಳ ಸ್ಥಿತಿ ನೋಡಿದರೆ ಭಯವಾಗುತ್ತದೆ ಕಮಲೇಶ್. ಸದ್ಯ ಮೂರು ಹೆಣ್ಣು ಮಕ್ಕಳ ಮೇಲೆ ಭಗವಂತ ನನಗೆ ಗಂಡುಮಗು ಪ್ರಾಸಾದಿಸಿದ. ಓ....ಅದೂ ಇಲ್ಲವಾಗಿದ್ದಲ್ಲಿ ಕೊನೆಯವರೆಗೂ ಪ್ರಯತ್ನಿಸಬೇಕಾಗಿತ್ತೋ ಏನೋ....ಈ ನಡುವೆ ಆದ ಗರ್ಭಪಾತಗಳೆಷ್ಟು ? ಎಂದೆಂದಿಗೂ ಸಾಕಾಗಿದೆ ಈ ಹೆಣ್ಣು ಜನ್ಮ....ಕಲೆಯ ಕೊಲೆಯಾದಂದೇ ಭವಬಂಧನದಿಂದ ಬಿಡುಗಡೆ ಹೊಂದಬೇಕೆಂಬ ಬಯಕೆ ಬಲವಾಗಿ

ಮೂಡಿತ್ತು. ಆದರೆ ಅಂದಿನ ಪ್ರಮಾಣವಚನಕ್ಕೆ ಹಣೆ ಮಣಿದೆ. ನನ್ನೀ ದೃಢ ನಿಲುವನ್ನು ನೀನು ಮೆಚ್ಚಲೇಬೇಕು ಕಮಲೇಶ್."

ಹಾ....! ಶಾಂತ ಶ್ರಾಂತ ಧರಿತ್ರಿಯೇ ಪರಾಧೀನೆ!

ಯೋಚನೆಯಾಳಕ್ಕೆ ದುಮುಕಿದ ಕಮಲೇಶಳಿಗೆ ತಲೆ ಚಿಟ್ಟು ಹಿಡಿದಂತಾಯಿತು. ಯಾವುದೋ ಕಾಣದ ಪಿಶಾಚ ಹಸ್ತ ಹೃದಯವನ್ನು ಒಂದೇ ಸಮನೆ ಹಿಸುಕುತ್ತಿದೆ. ಹಳೆಯ ನೆನಹುಗಳು ಮನಸ್ಸನ್ನು ಮುತ್ತುತ್ತಿವೆ.... ಏನು ಮಾಡಲಿ ಎಂಬ ಗಾಢವಾದ ಚಿಂತನೆಯೂ ಸಹ.

ಇತರ ಕಾರ್ಯಭಾರದಿಂದ ಉತ್ತರಾರ್ಧವನ್ನು ಗೆಳತಿಗೆ ವಹಿಸಿಕೊಟ್ಟು ಪದ್ಮಾ ಕಮಲಾನಿ ನಿರ್ಗಮಿಸಿದಾಗ ಕಮಲೇಶ್ ತನ್ನ ಕರ್ತವ್ಯಕ್ಕೆ ಶರಣಾದಳು.... ರೋಗಿಯ ನಾಡಿ ಕ್ಷೀಣಿಸುತ್ತಾ ನಡೆದಿದೆ. ಕ್ಷಣ ಕ್ಷಣವೂ ಮೃತ್ಯುವಶಳಾಗುತ್ತಿದ್ದಾಳೆ. ಆದರೂ ಸಹ ತನ್ನ ಹುಚ್ಚು ಸಾಹಸಕ್ಕೆ ಕೈ ಹಾಕಿದಳು ಕಮಲೇಶ್. ಹಲವಾರು ಸೂಜಿ ಮದ್ದುಗಳು ಮೈ ಸೇರಿದುವು. ಆಕ್ಸಿಜನ್ ಯಂತ್ರ ಕೆಲಸ ಮಾಡುತ್ತಿದೆ. ಶ್ವೇತವಸನಧಾರಿಣಿಯರು ಅಂತ್ಯಸೇವೆಗೆ ಟೊಂಕ ಕಟ್ಟಿದ್ದಾರೆ. ಕಮಲೇಶ್ ಎಷ್ಟೇ ಪ್ರಯತ್ನಿಸಿದರೂ ಹೋದ ಪ್ರಜ್ಞೆ ಮರಳಲಿಲ್ಲ. ಚಂಪಾ ಅನುಭವಿಸುತ್ತಿದ್ದ ಮರಣಾಂತಕ ವೇದನೆ ಕಣ್ಣುಗಳಲ್ಲಿ ಅಶ್ರುಬಿಂದುಗಳನ್ನು ಧಾರಾಕಾರವಾಗಿ ಮೂಡಿಸಿತು....ಅಚ್ಚಳಿಯದ ಆತ್ಮೀಯ ಗೆಳೆತನಕ್ಕೆ ಸಲ್ಲಿಸಿದ ಕಾಣಿಕೆ ಅದೊಂದೇ.

"ಮೊನ್ನೆಯಿಂದಲೂ ನಿಮಗಾಗಿ ಚಡಪಡಿಸುತ್ತಿದ್ದಳು ಡಾಕ್ಟರ್.... ಆದರೆ ನೀವು ರಜೆಯಲ್ಲಿದ್ದಿರಿ" ಎಂದಳಾ ಭಗಿನಿಯತಾಯಿ.

"ತಿಳಿಸಿದ್ದರೆ ಬಂದು ನೋಡುತಿದ್ದೆ....ತಪ್ಪು ಮಾಡಿದಿರಿ." ಉತ್ತರಿಸುವಾಗ ದನಿ ವಿಕಂಪಿಸಿದುದನ್ನು ಆ ವೃದ್ಧೆ ಗಮನಿಸಲಿಲ್ಲವೇನೋ.

ಬಾಳಿನ ಗರಡಿಯಲ್ಲಿ ಸಕಲ ಸೌಭಾಗ್ಯವನ್ನು ಪಡೆದುಕೊಂಡ ದಯಾಶೂನ್ಯ ಧಣಿಯ ಅಂತರಾತ್ಮ ಇಂದು ವಿಕಟವಾಗಿ ರೋದಿಸುತ್ತಿದೆ, ಕಾಲುವೆಯಾಗಿ ಹರಿಯುವ ಕಣ್ಣೀರನ್ನು ಸಾಕ್ಷಿಯಾಗಿಟ್ಟು. ದುಃಖದಿಂದಲೂ ಆತ್ಮಗ್ಲಾನಿಯಿಂದಲೂ ಮುಖ ಕಳಾಹೀನವಾಗಿದೆ. ಅಸ್ಪಷ್ಟವಾದರೂ ಸ್ಥಿರ–ಸಶೇಷ ಕರ್ತವ್ಯವನ್ನು ನೆರವೇರಿಸಲು ಆತ ಕಂಕಣ ಬದ್ಧನಾಗಿದ್ದಾನೆ ದೀರ್ಣವಿದೀರ್ಣವಾದ ಹೃದಯವನ್ನು ಹೊತ್ತು. ಜ್ಞಾನಿಗಳಾದರೂ ಮಾನವರಲ್ಲಿ

ಪರಸ್ಪರ ವಿರುದ್ಧ ಗುಣಗಳೇ ಮನೆ ಮಾಡಿರುತ್ತವೆ....ಏಕೆ? ಈ ವಿಭಿನ್ನಭಾವನೆಗಳು ವಿಭಿನ್ನ ಪ್ರವೃತ್ತಿಯಲ್ಲಿ ತೊಡಗಿರುವಾಗ ಸುಕರ್ಮಗಳಿಗಿಂತಲೂ ದುಷ್ಕರ್ಮಗಳು ಹೆಚ್ಚಾಗಿ ಹೊರಬೀಳುತ್ತವೆ....ತನ್ನಲ್ಲೂ ಸಹ ಅಷ್ಟೆ. ದುಷ್ಕರ್ಮಗಳನ್ನು ಕನಸಿನಲ್ಲೂ ಎಣಿಸದ ತಾನು ಕಳಂಕ ಅಪನಿಂದೆಯ ಪಾಲಾದುದನ್ನು ಯೋಚಿಸಿದರೆ ಇದಕ್ಕಿಂತ ಆಶ್ಚರ್ಯವೇನಿದೆ? ನಂಬಿಕೆ ಎಂಬುದು ನಶಿಸಿ ಹೋಗಲು ಕಾರಣವಾದರೂ ಏನು? ಜನ ಸಮುದಾಯದ ಅಂತರ್ಯದಲ್ಲಿ ಭಗವಂತ ತುಂಬಿರುವುದಾದರೂ ಏನು? ಮಾನವ ಏತಕ್ಕಾಗಿ ಹುಟ್ಟುತ್ತಾನೆ? ಆತನ ಗುರಿಯೇನು?....ಅದೇ ಅಸ್ಪಷ್ಟ....

ಅಂತ್ಯಸೇವೆಗಾಗಿ ನೆರೆದ ಬಂಧು–ಬಳಗ ತಮ್ಮ ಅಸಾಯಕತೆಯನ್ನು ರೋದನರೂಪದಲ್ಲಿ ವ್ಯಕ್ತಪಡಿಸುತ್ತಿದೆ. ಆ ಸಂಕಟಕರವಾದ ವಾತಾವರಣದಲ್ಲಿ ಹೆಚ್ಚು ಹೊತ್ತಿರಲು ಮನಸ್ಸಿಲ್ಲದಿದ್ದರೂ ವಿಧಿಯಿರಲಿಲ್ಲ. ಪ್ರಾಣ ಪಕ್ಷಿ ದೇಹ ಪಂಜರವನ್ನು ಬಿಟ್ಟು ಹೋಗಲಾರದೆ ಚಡಪಡಿಸುತ್ತಲೇ ಇದೆ. ಆ ದಾರುಣವಾದ ಸಂಕಟವನ್ನು ನೋಡುವಾಗ ಒಮ್ಮೆ ಈ ಪ್ರಕರಣ ಮುಗಿದರೆ ಸಾಕು ಎಂಬ ವೈರಾಗ್ಯವು ಮೂಡಿತು.

ಆದರೂ ತನ್ನ ಕರ್ತವ್ಯ ಸ್ಮರಣೆಯಲ್ಲಿ, ಆ ದೇಹ ಪಂಜರದಿಂದ ಪ್ರಾಣ ಪಕ್ಷಿ ಬಿಡುಗಡೆ ಹೊಂದುವವರೆಗೆ ಇರಲಾರದೆ ಇದ್ದು ನತದೃಷ್ಟ ತಾಯಿಗೆ ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ಭಾರವಾದ ಹೆಜ್ಜೆಗಳನ್ನೆಳೆದುಕೊಳ್ಳುತ್ತಾ ಹೊರಬಂದಳು. ಅಂದು ಆತ್ಮೀಯ ಗೆಳತಿ ಚೇತನಳಿಗೆ ಸ್ಮಶಾನ ಕೈಂಕರ್ಯವನ್ನೂ ಸಹ ಮನಮುಟ್ಟಿ ನಡೆಸಿದ್ದ ಕಮಲೇಶ್ ಇಂದು ಅಂತ್ಯಸೇವೆಗೆ ತಾನು ಹೋಗಲಾರೆ ಎಂದುಕೊಂಡಳು. ದುರಂತ ವಾಹಿನಿಯ ಮಹಾಪೂರದಿಂದ ದೇಹ ಧರಿತ್ರಿ ತಲ್ಲಣಿಸಿತ್ತು.

ಹೊತ್ತು ನಾಲ್ಕರ ಅಂಚನ್ನು ಮುಟ್ಟಿತು. ಸುಡು ಬಿಸಿಲು ಇನ್ನೂ ಸುಡುತ್ತಿದೆ....ಆಗೊಮ್ಮೆ ಈಗೊಮ್ಮೆ ತಂಗಾಳಿಯು ಠೀಡುತ್ತಿದೆ. ಚಿಲಿಪಿಲಿ ಗುಟ್ಟುವ ಹಕ್ಕಿಗಳು ಇನ್ನೆಲ್ಲಿ ಅಡಗಿವೆಯೊ....ಹಸಿವಿನ ಕಾಟಕ್ಕಿಂತಲೂ ಬಾಯಾರಿಕೆ ಬಹಳವಾಗಿದೆ. ಡಾ|| ಚಂದ್ರಕಾಂತ್ ಆಗಲೇ ಹೊರಟುಹೋಗಿರುವುದರಿಂದ ಅವನಿಗಾಗಿ ಹುಡುಕುವ ಯೋಚನೆಯೂ ಇರಲಿಲ್ಲ, ನಿರ್ಮಾನುಷವಾದ ಕಾರಿಡಾರು ಕಾಳಸರ್ಪದಂತೆ ಗೋಚರಿಸುತಿತ್ತು.

ಮೆಟ್ಟಿಲು ಇಳಿಯುವುದರೊಳಗಾಗಿ ಸೇವಿಕೆಯೊಬ್ಬಳು ಓಡುತ್ತಾ ಬಂದು- "ಡಾಕ್ಟರ್ ಸಿಜೇರಿಯನ್ ಕೇಸೊಂದು ಮೇಜಿನ ಮೇಲಿದೆ. ಡಾ|| ಸುಧಾ ಬಲರಾಂ ನೋಡಬೇಕಾಗಿತ್ತು, ಅವರಿಲ್ಲ. ಡಾ|| ಕಾಮಿನಿ ನಿಮ್ಮ ಸಹಾಯ ಕೋರಿದ್ದಾರೆ."

ಕಮಲೇಶ್ ಒಂದು ಘಳಿಗೆ ನಿಂತು ಯೋಚಿಸಿದಳು. ಗಂಟೆ ನಾಲ್ಕಾಗಿದ್ದರೂ ಬಿಸಿಲು ಪ್ರಖರವಾಗಿಯೇ ಇದೆ. ಹಸಿದ ಹೊಟ್ಟೆ, ಆರೋಗ್ಯವಿಲ್ಲದ ಮೈ ಹೊತ್ತು ಈ ಬಿಸಿಲಲ್ಲಿ ಹೋಗುವುದಕ್ಕಿಂತ ಇಲ್ಲೇ ಎರಡಿಡ್ಲಿ ತರಿಸಿ ತಿಂದು ಕೆಲಸ ಮಾಡಿ ಹೋಗುವುದು ಲೇಸು....ಚಂಪಳನ್ನಂತೂ ಉಳಿಸಿಕೊಳ್ಳಲಾಗಲಿಲ್ಲ; ಇವಳಿಗಾದರೂ ಸಹಾಯ ಹಸ್ತ ನೀಡಬಹುದು ಎನಿಸಿತು.

ಮುಂದಿಟ್ಟ ಹೆಜ್ಜೆಗಳು ಹಿಂದಿರುಗಿದುವು.

ಕಾಫಿ ಮನೆಯಿಂದ ಇಡ್ಲಿ ಮೊಸರನ್ನು ತರಿಸಿ ನುಂಗಲಾರದೆ ನುಂಗಿ ಆಪರೇಷನ್ನಿಗೆ ಕೈಹಚ್ಚಿದಾಗಲೂ ವ್ಯಥಿತ ಚಿತ್ತ ಚಂಪಳ ಸುತ್ತಮುತ್ತ ಸುಳಿದಾಡಿ ಅವಳ ದುರ್ಬರ ಬಾಳನ್ನು ನೆನೆಯುತಿತ್ತು. ಮೇಜಿನ ಮೇಲಿನ ಹೆಣ್ಣು ನೋವುಂಡು ಬಳಲಿ ದೈನ್ಯತೆಯಿಂದ ಬೇಡಿಕೊಂಡಳು, "ಮೊದಲ ಮಗು ಹೊಟ್ಟೆಯಲ್ಲೇ ಹೋಗಿತ್ತು. ದಯಮಾಡಿ ಉಪಕಾರ ಮಾಡಿ ಡಾಕ್ಟರ್."

ಎಲ್ಲೋ ಹರಿದ ಚಿತ್ತ ಸರ್ರನೆ ಹಿಮ್ಮರಳಿ ಕಾರ್ಯಾಸಕ್ತವಾಯಿತು. ಕಮಲೇಶ್ ಅವಳಿಗೆ ಧೈರ್ಯ ಹೇಳಿ ಕೇಸ್‌ಶೀಟನ್ನು ಕೈಗೆ ತೆಗೆದುಕೊಂಡಳು. ಚೊಚ್ಚಲ ಮಗು ಹೊಟ್ಟೆಯಲ್ಲಿ ಸಾವನ್ನಪ್ಪಿ ಆಪರೇಶನ್ ಮಾಡಿಯೇ ತೆಗೆಯಲಾಗಿತ್ತು....ಈ ಸಲ ಎಚ್ಚರಿಕೆ ತೆಗೆದುಕೊಳ್ಳುವ ಸಲುವಾಗಿ ಅವಳು ಒಂದು ವಾರಕ್ಕೆ ಮೊದಲೇ ಬಂದು ಸೇರಿಕೊಂಡಿದ್ದರೂ ತನ್ನ ಡಾಕ್ಟರೇ ಸಿಗಲಿಲ್ಲವಲ್ಲಾ ಎಂಬ ತಳಮಳ ತುಂಬಿಕೊಂಡಿದ್ದಳು. ಮಗುವಿನ ಪ್ರಾಣ ರಕ್ಷಣೆಗಾಗಿ ಅವಳು ಕೈಮುಗಿದು ಬೇಡಿಕೊಂಡ ಬಗೆ ಮನವನ್ನು ಬೆಣ್ಣೆಯಂತೆ ಕರಗಿಸಿತು. ನೀಳವಾದ ನಿಟ್ಟುಸಿರು ಬಿಟ್ಟು ಕಾರ್ಯೋನ್ಮುಖಳಾದಳು. ಹೊಟ್ಟೆಯ ಹೊರ ಪದರವನ್ನು ಸೀಳಿ ನೆತ್ತರು ಪ್ರವಿಸುವ ನಾಳಗಳನ್ನು ಹಿಡಿದು ಕಟ್ಟಿ ಗರ್ಭಕೋಶಕ್ಕೆ ಕೈಯಿಟ್ಟಾಗ ಎರಡು ಮಕ್ಕಳಿರುವುದು ಕಂಡುಬಂತು. ಒಂದು ಹೆಣ್ಣು ಒಂದು ಗಂಡು; ಕಮಲೇಶಳಿಗಾದ ಆನಂದ ಅಷ್ಟಿಷ್ಟಲ್ಲ. ಸಮಯಕ್ಕೊದಗಿ ಜೀವದಾನ ಮಾಡಿದುದು ತನುಮನಗಳಿಗೆ ಆನಂದವನ್ನೂಡಿಸಿತು.

"ಡಾಕ್ಟರ್, ಆರನೆಯ ಸ್ಪೆಷಲ್ ವಾರ್ಡಿನಲ್ಲಿ ಮೃತಿ ಹೊಂದಿದ ಚಂಪಾ ತನ್ನ ಶರೀರದ ಯಾವುದೇ ಉಪಯುಕ್ತ ಅಂಗಗಳನ್ನು ಶರೀರದಿಂದ ಬೇರ್ಪಡಿಸಿ ತೆಗೆದುಕೊಳ್ಳಲು ಕೇಳಿಕೊಂಡಿದ್ದರು. ಮೂರು ದಿನಗಳಿಂದಲೂ ಬದುಕಿರುವಂತೆಯೇ ತೆಗೆದುಕೊಳ್ಳಿ ಎಂತಲೂ ಒತ್ತಾಯಪಡಿಸಿದ್ದಾರೆ. ಪಾಪ.... ಅವರ ಸ್ಥಿತಿ ಬಹಳ ಕರುಣಾಜನಕವಾಗಿತ್ತು." ಎಂದಳು ಡಾ|| ಕಾಮಿನಿ.

"ಯಾವುದೇ ಕೃತಕ ರೀತಿಯ ನೆರವಿಲ್ಲದೆ ಶರೀರದ ಅಂಗಾಂಗಗಳಿಗೆ ಸ್ವಾಭಾವಿಕ ಚಲನ ವಲನಗಳಿದ್ದಲ್ಲಿ ರೋಗಿಯ ಮೆದುಳು "ಸತ್ತಿದ್ದರೂ" ವ್ಯಕ್ತಿ ವೈದ್ಯಕೀಯವಾಗಿ ಸತ್ತಿರುವನೆಂದು ಘೋಷಿಸುವುದಕ್ಕಾಗುವುದಿಲ್ಲ. ಏನಿದ್ದರೂ ಪ್ರಾಣ ಹೋದಮೇಲೆಯೇ ಡಾಕ್ಟರ್."ಎಂದಾಗ ಎದೆಯಾಳದಿಂದ ನಿಟ್ಟುಸಿರು ಹೊರ ಹರಿದು ಬಂತು. ಕಮಲೇಶ್ ವಿಜಾತೀಯವಾದ ದನಿಯಲ್ಲಿ ಕೇಳಿದಳು "ಈಗ ಪ್ರಾಣ ಹೋಗಿದೆ. ಬೇಕಾದುದನ್ನು ತೆಗೆದುಕೊಳ್ಳಬಹುದು. ಏನಾದರೂ ಏರ್ಪಾಡು ಮಾಡಿದಿರಾ ?"

"ಹೌದು ; ಅವರ ಹೇಳಿಕೆಯನ್ನು ರಿಕಾರ್ಡ್ ಮಾಡಿಕೊಳ್ಳಲಾಗಿದೆ. ಕಣ್ಣುಗಳನ್ನೂ ಇತರೆ ಉಪಯುಕ್ತ ಅಂಗಗಳನ್ನೂ ತೆಗೆದುಕೊಳ್ಳುತ್ತಾರಂತೆ."

ಹೊಟ್ಟೆಯ ಪದರವನ್ನು ಜೋಡಿಸಿ ಹೊಲಿಗೆ ಹಾಕುತಿದ್ದ ಕಮಲೇಶಳ ಚಿತ್ತ ಚಂಪಳ ಬಳಿಗೆ ಹಾರಿ ಅವಳ ಸಂಗೀತ ಸುಧೆಯಲ್ಲಿ ಮಿಂದು ದುಃಖದೂಟಿಯಲ್ಲಿ ಮುಳುಗೆದ್ದಿತು.

"ಚಂಪಾ ಒಳ್ಳೆಯ ಹಾಡುಗಾರ್ತಿ. ಅವರ ಸಂಗೀತವನ್ನು ನಾನು ಅನೇಕ ಬಾರಿ ಕೇಳಿದ್ದೇನೆ." ಎಂದಳು ಕಾಮಿನಿ ವಿಶಾದವಾಣಿಯಲ್ಲಿ.

"ಒಂದಾನೊಂದು ಕಾಲದಲ್ಲಿ ಕೋಕಿಲಗಾನ ಚಂಪಾ ! ನಾಟ್ಯವಿಶಾರದೆ ವನಮಾಲಾ ! ಎಂಬ ಕೂಗು ಜನಜನಿತವಾಗಿತ್ತು. ವನಮಾಲಳ ನಾಟ್ಯ ಮಣ್ಣುಗೂಡಿದರೂ ಅವಳು ಸಂಸಾರ ನೋಡಿಕೊಂಡು ಸುಖವಾಗಿದ್ದಾಳೆ. ಇಂದಿಗೆ ಇವಳ ಹೆಸರೇ ಇಲ್ಲದಂತಾಯಿತು. ಬಹಳ ನತದೃಷ್ಟ ಹುಡುಗಿ."

ಪಾಪ....

"ಆರನೇ ಗರ್ಭಪಾತ, ವಯಸ್ಸಾಗಿರಲಿಕ್ಕೂ ಸಾಕು."

"ಛೀ ! ಸೊರಗಿ ಸೋತು ಹಾಗಾಗಿದ್ದಾಳೆ. ನನ್ನ ಕ್ಲಾಸ್‌ಮೇಟ್."

"ಓ....! ಪಾಪ, ತುಂಬ ಅನ್ಯಾಯ."

ಆತ್ಮಗ್ಲಾನಿಯಿಂದ ಯಾಂತ್ರಿಕವಾಗಿ ತನ್ನ ಕರ್ತವ್ಯದ ಹೊರೆಯನ್ನಿ
ಹಿ ಮನೆಯ ಹಾದಿ ತುಳಿದಾಗ ಅಭಿಶಪ್ತ ಹೆಜ್ಜೆಗಳ ಗತಿ ಮಂದವಾಗಿತ್ತು.
ನೆಗೆ ಹೋಗಿದ್ದ ಡಾಕ್ಟರುಗಳು ಹಿಂದಿರುಗುತ್ತ ಬೆಳಗಿದ ಸುಹಾಸಕ್ಕೆ ಪ್ರತಿ
ಾಸ ತೋರಿದರೂ ಆ ಸಹಜ ಅನುಭಾವದಿಂದ ಮುಖಮಂಡಲ ಅನಿರ್ವಚ
ೀಯವಾದ ಮರ್ಮಾಂತಿಕ ವೇದನೆಯಿಂದ ಆಚ್ಛಾದಿತವಾಗಿತ್ತು. ಆಸ್ಪತ್ರೆಯ
ವರಣವನ್ನು ದಾಟುವುದರೊಳಗಾಗಿ ಡಾ|| ಸುಧಾ ಡಾ|| ಬಲರಾಂರವರು
ರುತ್ತಿದ್ದುದು ಕಾಣಬಂತು. ಅವರು ಹತ್ತಿರಕ್ಕೈದುತ್ತಲೂ ಸಿಜೇರಿಯನ್
ಪರೇಷನ್ ವರದಿಯನ್ನೊಪ್ಪಿಸಿ ಉತ್ತರಾರ್ಧವನ್ನು ಅವರಿಗೆ ವಹಿಸಿದಳು.

"ಬಹಳ ಥ್ಯಾಂಕ್ಸ್ ಡಾಕ್ಟರ್. ನಿನಗೆ ತುಂಬ ಶ್ರಮವಾಯಿತು. ಬಹಳ
ಣೆದಿದ್ದಿ. ಮನೆಯಲ್ಲಿ ವಿಶ್ರಾಂತಿ ತೆಗೆದುಕೊ; ನಿನ್ನ ಯೂನಿಟ್ಟಿನ ಸಂಜೆಯ
ೌಂಡ್ ನಾನು ನೋಡಿಕೊಳ್ಳುವೆ." ಎಂದಳು ಸುಧಾರಾಣಿ. ಬಲರಾಂ ವಿನೀ
ನಾಗಿ ವಂದನೆಯನ್ನರ್ಪಿಸಿದ.

ಕಮಲೇಶ್ ಮನೆಯ ಹಾದಿ ಹಿಡಿದಳು. ಕಾಫಿ ಮನೆಯ ಇಡ್ಲಿ
ೊಟ್ಟೆಯಲ್ಲಿ ಇನ್ನೂ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದೆ. ಸಂಕಟವೋ
ಸಿವೋ ಯಾವುದೋ ಕಂಡರಿಯಲಾಗದ ದುರ್ದಮನೀಯವಾದ ಹಿಂಸೆ
ನ್ನ ಮೇಲೆ ಅಧಿಕಾರ ಚಲಾಯಿಸುತ್ತಿದೆ. ಸದ್ಯ ಹಾದಿ ಕಳೆದು ಮನೆಗೆ
ೋಗಿ ಒಂದು ತುತ್ತು ನುಂಗಿ ಹಾಸಿಗೆ ಸೇರಿಬಿಟ್ಟರೆ ಸಾಕು ಎನಿಸಿದೆ. ಹಾದಿ
ಲ್ಲಿ ಅನೇಕ ಡಾಕ್ಟರುಗಳ ಭೇಟಿಯಾದರೂ ಚಂದ್ರಕಾಂತನ ದರ್ಶನವಾಗಿರ
ಲ್ಲ. ಮನೆ ಮುಟ್ಟಿದೊಡನೆ ಮೊಟ್ಟಮೊದಲು ತನ್ನ ಕೊಠಡಿಯ ಕಡೆ ಕಣ್ಣು
ರಿದುವು. ಕಿಟಕಿಗಳು ವಿಶಾಲವಾಗಿ ತೆರೆದಿದ್ದರೂ ಚಂದ್ರಕಾಂತನ ಸುಳಿವಿಲ್ಲ.
ನ್ನೆಲ್ಲಿಗೆ ಹೋಗಿರಬಹುದು ? ಒಂದು ವೇಳೆ ಅವರ ಮನೆಗೆ ಹೋಗಿರಬ
ಹುದೇ....? ಯೋಚಿಸುತ್ತಲೇ ಪ್ರಾಂಗಣವನ್ನು ದಾಟಿದಳು. ಮುಂಬಾಗಿಲ
ರೆಗಂಟೆಯನ್ನು ಒತ್ತುವ ಮೊದಲೇ ಶ್ವೇತವಸನಧಾರಿಣಿ ಮಾ ಕದ ತೆರೆದಳು.
ುಟಿಗಳಲ್ಲಿ ಮಂಗಳಮಯವಾದ ಮಂದಹಾಸ ಮೂಡಿ ಮಾಯವಾಯಿತು.
ಳ ಬಂದರೆ ಚಂದ್ರಕಾಂತ್ ಹಾಯಾಗಿ ನಿದ್ದೆ ಹೋಗಿದ್ದ. ಬಂದ ಹಾಗೆಯೇ
ಜ್ಜೆಯ ಮೇಲೆ ಹೆಜ್ಜೆಯಿಟ್ಟು ಸದ್ದಿಲ್ಲದೆ ಹಿಂದಿರುಗಿ ಸ್ನಾನ ಮುಗಿಸಿ ಊಟದಮನೆ
ಲ್ಲಿ ತಿಂಡಿ ಅಣಿಯಾಗಿತ್ತು. ತಿಂದು ಮುಗಿಸಿದ ಬಳಿಕ ಇನ್ನು ರಾತ್ರಿಯೂಟ

ಬೇಡ ಎನಿಸಿತು. ಅತೀವ ಬಳಲಿಕೆಗೆ ಶರಣಾದ ತನುಮನಗಳಿಗೆ ವಿಶ್ರಾಂತಿ ಯನ್ನೀಡಲು ತಾಯಿಯ ಕೊಠಡಿಯಲ್ಲಿ ಹಾಸಿಗೆಯ ಮೇಲೆ ಹಾಗೇ ಅಡ್ಡಾ ದಳು. ಆ ಸಮಯವನ್ನೇ ಕಾದಿದ್ದ ಚೇತನಾ ಮಂಚ ಹತ್ತಿ ಮೈಮೇಲೆ ವಾಲಿ ಕುಳಿತುಕೊಂಡು ಮುದ್ದು ಮಾತಿನ ಮಳೆಕರೆಯತೊಡಗಿದಳು. ಮಾರ್ದ ವತೆ ತುಂಬಿದ ಮುಖ ಬಿಂಬದಲ್ಲಿ ಚೇತನಾ ಹರೀಶರ ಹಾವ ಭಾವ ರೂಪು ವಿನ್ಯಾಸಗಳು ತೆಳ್ಳನೆಯ ಪರದೆಯ ಹಿಂದೆ ಇಣುಕುವ ಸುಂದರಿಯ ಛಾಯೆ ಯಂತೆ ಹೊರ ಹೊಮ್ಮುತ್ತಿವೆ. ತುಂಬು ಗಲ್ಲದ ಮೇಲೆ ನಲಿದಾಡುವ ಎಳೆ ನಗುವಿನ ಕಲಕಲರವ ಮೃದುಮಧುರವಾಗಿ ಕಿವಿಯ ಮೇಲೊರೆದು ಮನದ ಲ್ಲಿನ ಕ್ರಮ ವಿಹೀನವಾದ ಆಲೋಚನೆಗಳನ್ನು ಹೊರದಬ್ಬಿದುವು. ಎಳೆಗಾಳಿಗೆ ಹರಿದಾಡುವ ಅಲೆಗೂದಲು ಸುತ್ತಮುತ್ತ ಕುರುಳು ಕುರುಳಾಗಿ ಮುತ್ತಿದ ಮುಖವನ್ನು ಮುದ್ದಿಟ್ಟುಕೊಂಡು ದುಃಖದ ಪಾಲಾಗಿದ್ದ ಹೃದಯಕ್ಕೆ ತುಸು ಆನಂದದೌತಣವನ್ನು ನೀಡಿದಳು.

ಬಾಗಿಲ ಬಳಿ ಕಿಸಲಯ ಕೋಮಲ ಕಂಠ ಮೊಳಗಿತು "ಚೇತನಾ.... ಚೆಂಡಾಡೋಣವೇ?"

"ಓ....ಬಂದೆ." ಚೇತನಾ ಸಾನಂದದಿಂದ ಮರು ನುಡಿದಳು.

ಚೇತನಳ ವಯಸ್ಸಿನ ನೆರೆಮನೆಯ ಮಗು ಬಾಗಿಲಲ್ಲಿ ಬಂದು ನಿಂತಿತ್ತು. ಪರಸ್ಪರ ಸಂದರ್ಶನ ಲಾಭದಿಂದ ಎಳೆ ಮುಖಗಳು ಅರಳಿ ಆನಂದದ ಬೀಡಾ ದುವು. ಅನುನಯದಿಂದ ಮಗುವನ್ನು ಅವಳೊಂದಿಗೆ ಆಡಲು ಕಳುಹಿಸಿ ಚಂದ್ರಕಾಂತನನ್ನು ನೋಡಲು ಕೊಠಡಿಗೆ ಹೋದರೆ ಅವನು ಆಗಲೇ ಹೋಗಿ ಯಾಗಿದೆ. ಕಮಲೇಶ್ ಒಂದು ಘಳಿಗೆ ಗರಬಡಿದವಳಂತಾದಳು.... ಈ ನಿರಂತರ ಸಂಘರ್ಷಣೆಯ ರೀತಿ ನೀತಿ ವಿಚಿತ್ರವಾಗಿವೆ. ಯೋಚನಾರಹಿತ....ಕ್ರಮ ವಿಹೀನ....ನಿರ್ಲಜ್ಜ ನಡತೆಗಳಿಗೆ ಏಕೈಕ ಭೂಮಿಕೆಯನ್ನು ಪಡೆದ ಈ ಉತ್ಸಾಹೀ ತರುಣನ ಮಹಾ ಯಜ್ಞವೇದಿಕೆಯಲ್ಲಿ ಇನ್ನೇನಿದೆಯೋ.... ಈ ದೇಶದ ಯುವಕರಿಗೆ—ಯಾವತ್ತೂ ಜೀವನಧರ್ಮದಲ್ಲಿ ಮಹಾಪ್ರಭುಗಳಾಗಿ ಸ್ತ್ರೀಯನ್ನು ತಮ್ಮ ಸುಖೋಪಭೋಗಗಳಿಗೆ ಸ್ವಚ್ಛಂದವಾಗಿ ಅಳವಡಿಸಿಕೊಂಡ ವರಿಗೆ— ನಿಮ್ಮ ಮಾರ್ಗ ಬದಲಿಸಿರಿ; ಹೆಣ್ಣನ್ನು ಇನ್ನೂ ಮೊಲಗಳಂತೆ ಕುರಿ ಗಳಂತೆ ಸಾಕುವ ರಜೋಧರ್ಮವನ್ನು ಬಿಟ್ಟುಕೊಟ್ಟು ಮಾನವತೆಗಾಗಿ ತ್ಯಾಗ

ಮಾಡಿರಿ; ಅವರಲ್ಲಿ ನಿಜವಾಗಿಯೂ ನಿಮ್ಮ ಉಜ್ವಲ ಭವಿಷ್ಯತ್ತು ಅಡಗಿದೆ ಎಂದು ಹೇಳುವುದೆಷ್ಟು ಪ್ರಮಾದ! ಎಂಥ ಭಯಂಕರ ಘರ್ಷಣೆಗೆ ನಾಂದಿ!

ಕಮಲೇಶ್ ಚಿಂತಿಸುತ್ತ ನಿಡುಸುಯ್ದಳು.

ಸುರಹೊನ್ನೆ ಮರದ ಹೊಂದಳಿರ ಹೊದರಿನಲ್ಲಿ ಹುದುಗಿ ಕುಳಿತ ಯಾವುದೋ ಪಕ್ಷಿ ಮೈಮರೆತು ಹಾಡಿದಾಗ ದನಿಯ ಮಾಧುರ್ಯ ಮಾಯೆಯಂತೆ ಮನವನ್ನು ಮುಸುಗಿ ಹಾಳು ಚಿಂತೆಗಳನ್ನು ಬಡಿದೋಡಿಸಿತು....ಈ ಹೊತ್ತಿನಲ್ಲಿ ಏಕಾಂಗಿಯಾಗಿ ಹಾಡುತ್ತಿದೆ, ಬಹುಶಃ ಅದರ ಸಂಗಾತಿ ಜಾಡು ತಪ್ಪಿತೇನೋ. ಅಂತಲೇ ಆ ಶೀತಲವಾಣಿ ಕೂಗಿ ಕರೆಯುತ್ತಿದೆ....ಈ ಮಾಯಾ ಜಗತ್ತಿನಲ್ಲಿ ಯಾರಿಗೆ ಯಾರು?

ನೋಟ ಕಿಟಕಿಯಿಂದ ಜಿಗಿದು ಮಾ ಕಡೆ ಹರಿಯಿತು....ಎಡಗೈ ಹಸ್ತದ ಮೇಲೆ ಭಾರವನ್ನಿಳುಹಿದ ಭಾವಪೂರ್ಣ ನಿಮೀಲಿತ ನೇತ್ರ, ಬೆಳ್ಳಿಯನ್ನಣಕಿಸುವ ಕೂದಲು, ಮುಖದ ಮೇಲೆ ಅಸಂಖ್ಯಾತ ರೇಖೆಗಳು, ಅಶಾಂತಿಯ ನೆಲೆವೀಡಾದ ಮನಸ್ಸು, ಬಾಳುದ್ದಕ್ಕೂ ತೊಳಲಿ ಬಳಲಿದ ಜೀವ, ಬಾಳಿನ ಸಂಜೆಯಲ್ಲಿ ಈ ಮಗಳಿಂದ ಕಿಂಚಿತ್ ಶಾಂತಿಯನ್ನು ಬಯಸಿದ ದೀನೆ....

ವಿದ್ಯುಚ್ಛಕ್ತಿ ಅವಿಚ್ಛಿನ್ನವಾಗಿ ಹರಿದಾಡಿದಂತೆ ಕರುಳು ಚುರು ಚುರುಗುಟ್ಟಿತು.

ಬೆಳಿಗ್ಗೆ ಆಸ್ಪತ್ರೆಯ ಹಾದಿ ಹಿಡಿದಾಗ ಚಂದ್ರಕಾಂತನೆಂದಿದ್ದ "ಕಮಲೇಶ್, ನಾನು ನಿಜವಾಗಿಯೂ ಅವಸರದ ಕ್ರಮ ಕೈಗೊಂಡಿಲ್ಲ. ಈ ನಿರ್ಧಾರಕ್ಕೆ ಬರಲು ಹಲವು ತಿಂಗಳುಗಳು ತೆಗೆದುಕೊಂಡಿದ್ದೇನೆ. ನಿಮ್ಮ ತಾಯಿ ಮತ್ತು ಚೇತನರನ್ನು ಮುಂದಿಟ್ಟುಕೊಂಡು ನನ್ನನ್ನು ಖೆಡ್ಡಾದಲ್ಲಿ ಬೀಳಿಸಲಾರಿರಿ ಎಂಬುದನ್ನು ಇಂದೇ ದೃಢಪಡಿಸಿಕೊಳ್ಳಿ. ಪತಿಯನ್ನನುಸರಿಸಬೇಕಾದುದು ಸತಿಯ ಧರ್ಮ. ಭಾರತ ನಾರಿಯ ಪಾತಿವ್ರತ್ಯ ಯುಗಯುಗಾಂತರಗಳಿಂದಲೂ ಪ್ರಾತಃಸ್ಮರಣೀಯವಾದುದು ಎಂಬುದನ್ನು ಯಾವ ಕಾರಣಗಳಿಂದಲೂ ಅಲ್ಲಗಳೆಯುವಂತಿಲ್ಲ."

ಕಮಲೇಶಳಿಗೆ ಮುಳ್ಳು ತುಳಿದಂತಾಯಿತು. ಆವನಿಗೆ ಹೂ ಮಾಲೆ ಯಿಕ್ಕುವ ಮೊದಲು ಇದನ್ನೆಲ್ಲಾ ಯೋಚಿಸಲಾರದಷ್ಟು ಮೂರ್ಖಳಾಗಿರಲಿಲ್ಲ. ಇದೇನು ಪೂರ್ವ ಜನ್ಮದ ಕರ್ಮವೋ, ಅಥವಾ ಮೌಢ್ಯದ ಫಲವೋ?

ಏನಿಲಬಹುದು ?

ಹೇಗೆಂದರೂ ಸರಿಯೆ. ಎರಡರ ಫಲವೂ ಒಂದೇ.

"ಏಕೆ ಮಾತಿಲ್ಲ ಡಾಕ್ಟರ್ ? ಚಂದ್ರಕಾಂತ್ ಎಂದೂ ನಿಮ್ಮ ಸ್ವತ್ತಾಗ ಲಾರ. ಜೀವನದ ಮೂಲಭೂತ ಮೌಲ್ಯಗಳ ಬಗೆಗೆ ಭಾವಾತ್ಮಕ ಶ್ರದ್ಧೆ ಇಲ್ಲ ದಿದ್ದರೆ ಆಗುವುದೇ ಹೀಗೆ....ಯೋಚಿಸಿನೋಡಿ."

"........"

ಚಿತ್ತಭಿತ್ತಿಯಲ್ಲಿ ಅದೇ ಮಾತುಕತೆ ಪುನಃ ಪುನಃ ಸುಳಿದಳಿಯಿತು. ಇದನ್ನೆಲ್ಲಾ-ತನ್ನ ಜೀವನದ ಬಗ್ಗೆ ಮಹೋದ್ದೇಶವನ್ನು ಹೊಂದಿದ್ದ-ತಾಯಿಯ ಮುಂದೆ ಇಡುವುದಾದರೂ ಹೇಗೆ? ಯಾವ ನಾಲಿಗೆ ಈ ವಿಷಯವನ್ನು ಮುಂದಿಟ್ಟೀತು ?....ಕಮಲೇಶ್ ಯೋಚಿಸುತ್ತಾ ಪಲ್ಲಂಕದ ಮೇಲೆ ಕುಳಿತಳು.

....ಒಂದಾನೊಂದು ಕಾಲದಲ್ಲಿ ಕಷ್ಟಕಾರ್ಪಣ್ಯಗಳ ಪಾಲಾಗಿದ್ದ ಈ ಜೀವನವನ್ನು ಯಾವ ದಕ್ಷತೆ ದಿನೇ ದಿನೇ ಉತ್ತುಂಗಕ್ಕೇರಿಸುತ್ತ ನಡೆದಿದೆಯೋ ಅದೇ ದಕ್ಷತೆ ಇಂದು ಪದಾಕ್ರಾಂತವಾಗಿ ಕಂಬನಿ ಮಿಡಿಯುತ್ತಿದೆ. ಯಾರ ಸಹ ಚರ್ಯದಲ್ಲಿ ಸ್ವಾತಂತ್ರ್ಯದ ಸುಗ್ಗಿಯನ್ನು ಉಣ್ಣುವೆನೆಂದೂ ಅದರಲ್ಲಿಯೇ ತನ್ನ ಉಜ್ವಲ ಭವಿಷ್ಯತ್ತು ಅಡಗಿದೆಯೆಂದೂ ಪರಿಭಾವಿಸಿದ್ದಳೋ ಅದೇ ಶಕ್ತಿ ತನ್ನನ್ನು ಪಾಶ ಹಾಕಿ ತುರಂಗವಾಸಕ್ಕೆಳೆಯುತ್ತಿರುವಾಗ ಅದೇ ದಕ್ಷತೆ ಬುದ್ಧಿ ವಂತಿಕೆಯನ್ನಪ್ಪಿ ದುಃಖರೂಪದಲ್ಲಿ ತನ್ನ ಸೋಲನ್ನೊಪ್ಪಿಕೊಳ್ಳುತ್ತಿದೆ.

ಬೆವರು ಹನಿಗಳನ್ನು ತೀಡಿಕೊಳ್ಳುವ ನೆವದಲ್ಲಿ ಅಶ್ರು ಸಿಕ್ತ ನೇತ್ರಗಳನ್ನು ತೀಡಿಕೊಂಡಳು ಕಮಲೇಶ್. ಪಲ್ಲಂಕದ ಮೇಲೆ ಕುಳಿತ ಮಗಳು ಸ್ಥಿರ ಗಂಭೀರ ಭಾವದಿಂದ ಕುಳಿತುದನ್ನು ನೋಡಿ ಸ್ವರ್ಣಮಾಲಿನಿ ತಾನಾಗಿಯೇ ಮಾತು ತೆಗೆದಳು.

"ಕಮಲೇಶ್....ನಿಮ್ಮ ತಂದೆ ಬದುಕಿದ್ದಾಗ ನಾವು ಯಾವುದಾದರೂ ತೀರ ಪ್ರದೇಶಕ್ಕೆ ಹೋಗಿ ಪ್ರಶಾಂತತೆಯಿಂದ ಬದುಕಬೇಕು. ಈ ಸಿಟಿ ವಲಯ ಗಳಲ್ಲಿದ್ದರೆ ನಾವು ಇನ್ನೊಂದು ಜನ್ಮಕ್ಕೂ ಮಾನವತೆಯನ್ನು ಕಂಡುಕೊಳ್ಳ ಲಾರೆವು....ಎನ್ನುತಿದ್ದರು. ಇಂದು ನಿಜವಾಗಿಯೂ ನಮ್ಮ ಸ್ಥಿತಿ ಹಾಗೆಯೇ ಆಗಿದೆ....ವಿಶ್ರಾಂತಿ....ಪ್ರಶಾಂತತೆ....ಮನುಷ್ಯತ್ವ....ಎಂಬಂಥ ಅನೇಕ ಶಬ್ದ ಗಳಿಗೆ ನಮ್ಮ ಎಜಿಯ ನಿಘಂಟಿನಲ್ಲಿ ವಿಧಿ ಅರ್ಥವನ್ನು ಬರೆಯಲಿಲ್ಲ ಕಮಲೇಶ್.

ನಾವು ತೀರದ ಹಾದಿಯನ್ನು ನಡೆದು ಭಗವಂತನ ಸನ್ನಿಧಿಯನ್ನು ಮುಟ್ಟು ವಷ್ಟರಲ್ಲಿ ಪ್ರಾಯಶಃ ಈ ಶಬ್ದಗಳನ್ನು ಅಕ್ಷರಶಃ ಮರೆತುಬಿಟ್ಟಿರುತ್ತೇವೆ."

ವೀಣಾ ಮಧುರ ನಿನಾದ ಶೋಕಗೀತೆಯನ್ನು ಹಾಡಿದಂತಾಯಿತು.

ಎಲ್ಲೋ ಕಂಡರಿಯದ ಗತಕಾಲದಂಬರದಲ್ಲಿಅಂಡಲೆಯುತಿದ್ದ ಗಮನ ಸರ್ರನೆ ಹಿಂತಿರುಗಿ ಬಂತು....ಏನು ಹೇಳಲಿ? ಏನು ಮಾಡಲಿ? ಎಂಬ ಪ್ರಶ್ನೆ ಹಿರಿದು ತಿನ್ನ ತೊಡಗಿತು. ಕಮಲೇಶ್ ಶುಷ್ಕವಾದ ನಗು ಬೀರಿ–"ಜೀವನಕ್ಕೆ ಕಾಲಿಡುವ ಮುನ್ನ ನಾನಾ ಉದ್ದೇಶಗಳಿರುತ್ತವೆ....ಅನಂತರ ಒಂದೇ. ಆ ಒಂದನ್ನು ಸಾಧಿಸಬೇಕೆಂದರೂ ನಾವು ಎಷ್ಟೊಂದು ಹೆಣಗಬೇಕು? ಈ ಹೆಣ ಗುವಿಕೆಯಲ್ಲಿ ಕಣ್ಣು ಕಟ್ಟಿದ ಕುದುರೆಯಂತೆ ಒಂದೇ ನೇರಕ್ಕೆ ಓಡುತ್ತಾ ಬದು ಕಿನ ಪರಮ ಲಕ್ಷ್ಯವನ್ನೂ ಸಹ ಮರೆತು ಬಿಡುತ್ತೇವೆ."

ರೇಡಿಯೋ ಕಿಸಲಯ ಕೋಮಲ ಕಂಠದಿಂದ ಸೂಕ್ತಿ ಸುಧೆಯನ್ನು ಬಿತ್ತರಿಸಿತು.

ರತ್ನೈಃ ಮಹಾಬ್ಧೇಃ ತುತುಷುಃ ನ ದೇವಾಃ ನಭೇಜಿರೇಭೀಮ ವಿಷೇಣ ಭೀತಿ |

ಸುಧಾಂವಿನಾನ ಪ್ರಯಯುಃವಿರಾಮಂ ನ ನಿಶ್ಚಿತಾರ್ಥಾತ್ ವಿರ ಮಂತಿಧೀರಾಃ||

ತಾಯಿ ಮಗಳು ತಲೆದೂಗಿದರು.

ಅಧ್ಯಾಯ

೨೪

....ಗುಡುಗು....ಮಿಂಚು....ಕಾರ್ಮೋಡ....

ಚಂಡಮಾರುತ ಕ್ಷಣೇ ಕ್ಷಣೇ ಪ್ರಚಂಡನಾಗುತಿದ್ದಾನೆ.

ಧೂಳು ದರುಗು ಕಸ ಕಡ್ಡಿಗಳನ್ನು ಒಂದೇ ಸಮನೆ ಒಳ ತೂರುತ್ತಿದೆ ಭೀಷಣ ಬಿರುಗಾಳಿ. ಕಿಟಿಕಿ ಬಾಗಿಲುಗಳನ್ನು ಮುಚ್ಚಿದರೂ ತಡೆಗಟ್ಟುವಂತಿಲ್ಲ. ಗುಡುಗಿನ ಅಬ್ಬರದಲ್ಲಿ ಮಳೆ ಗಾಳಿಗಳ. ಅವ್ಯಾಹತ ಕಾಳಗ ಮಳೆಯೂ ಸೋಲದು....ಗಾಳಿಯೂ ಬಿಡದು.

ಕಾರಿಡಾರಿನಲ್ಲಿ ಸಾಲಾಗಿ ಹೆಜ್ಜೆ ಹಾಕುತಿದ್ದ ಕಮಲೇಶ್ ದಲ್ಲಾಲಿ ಮದನಾಪುರ್ ವಿಜಯಾ ಜುಬೇದಾಬೇಗಂ ಪದ್ಮಾ ಕಮಲಾನಿಯರ ನೋಟ ಮತ್ತೆ ಮತ್ತೆ ಹದಗೆಟ್ಟ ವಾತಾವರಣವನ್ನು ನಿಟ್ಟಿಸುತಿತ್ತು. ಭೀಕರ ಬಿರು ಗಾಳಿ....ಭೀಷಣ....ಭೀಷಣವಾಗುತ್ತಿರುವ ದೃಶ್ಯ ಮೈ ನಡುಗಿಸುವಂತಿದೆ. ಮನೆ ಮಠಗಳು ಹಾರಿ ಹೋಗುವಂತಹ ಪ್ರಚಂಡ ವೇಗಕ್ಕೆ ಸಿಕ್ಕಿ ತತ್ತರಿಸಿದ ಜನವರ್ಗವನ್ನೂ ಪ್ರಾಣಿವರ್ಗವನ್ನೂ ನೋಡಿದಾಗ ಮನಸ್ಸು ಆತಂಕಗೊಳ್ಳುವುದು.

ಬಿಳಿಯ ಮೇಲಂಗಿಯ ಕಾಲರನ್ನು ಮುಚ್ಚಿ ಚಳಿಗೆ ತಡೆ ಹಾಕುತಿದ್ದ ಕಮಲೇಶಳಿಗೆ “ನೀನು ಸ್ವೆಟರ್ ತೆಗೆದುಕೊಳ್ಳದೆ ಬಂದುದು ತಪ್ಪು ಛೀಃ!.... ಛೀಃ!....ಗರ್ಭಿಣಿ ಸ್ತ್ರೀ ಇಷ್ಟು ಉದಾಸೀನಳಾಗಿದ್ದರೆ, ಹೇಗೆ?” ಎಂದಳು ಜುಬೇದಾ.

“ಬೆಳಿಗ್ಗೆ ಹೊರಡುವಾಗ ವಾತಾವರಣ ಶುಭ್ರವಾಗಿತ್ತು. ಆಗ ಸ್ವೆಟರ್ ಬೇಕೆನಿಸಲಿಲ್ಲ.” ಸಣ್ಣಗೆ ನಡುಗುತ್ತಾ ನುಡಿದಳು ಕಮಲೇಶ್.

“ಬೇಗನೆ ಒಳಗಡೆ ಸೇರಿಕೊಂಡರೆ ಒಳ್ಳೆಯದು. ಗಾಳಿಯ ಹೊಡೆತ ತಡೆಯುವಂತಿಲ್ಲ.”

ಎಲ್ಲರ ಹೆಜ್ಜೆಗಳು ತೀವ್ರಗತಿಯಲ್ಲಿ ಮುಂದುವರಿದುವು. ಮಳೆಗಾಳಿಗಳ

ಭೀಕರ ಪ್ರಕ್ರಿಯೆ ಅವ್ಯಾಹತವಾಗಿ ನಡೆಯುತ್ತಲೇ ಇದೆ....ಮೈ ನಡುಗಿಸುವಂತ ಚಳಿಯನ್ನು ಸೂಸಿ.

"ಮದುವೆಯಾದ ಮೇಲೆ ನಿನ್ನ ಚಟುವಟಿಕೆ ಕುಗ್ಗುತ್ತಿದೆ ಕಮಲೇಶ್."

"ಅದೇ ನೇರಕ್ಕೆ ನಿನ್ನದು ದಿನೇ ದಿನೇ ಹೆಚ್ಚುತ್ತಿದೆ." ಹುಬ್ಬೇರಿಸಿದಳು ಕಮಲೇಶ್.

ಎಲ್ಲರೂ ಕುಲುಕುಲು ನಕ್ಕುಬಿಟ್ಟರು.

"ಯಾವಾಗಲೂ ಆದರ್ಶದ ಮೇಲೆ ಭಾಷಣ ಬಿಗಿಯುತಿದ್ದ ನೀನು ಈಗ ತೆಪ್ಪನೆ ಬಾಲ ಮುದುರಿ ಬಿಟ್ಟಿದ್ದಿ....? ಅದೇ ಆಶ್ಚರ್ಯ ಡಾಕ್ಟರ್....!"

ಕಾರಿಡಾರಿನ ತುತ್ತ ತುದಿಯಲ್ಲಿ ಚಂದ್ರಕಾಂತ್ ಬಲರಾಂರವರು ಇತ್ತಲೇ ಬರುತಿದ್ದುದನ್ನು ನೋಡಿ, ಎಡಬಲಗಳಲ್ಲಿದ್ದ ಜುಬೇದಾ ವಿಜಯಾರವರು ಕಮಲೇಶಳನ್ನು ತಿವಿದು "ನೋಡು, ನಿಮ್ಮವರು ಬರುತಿದ್ದಾರೆ!" ಎಂದರು ಕಿರು ಹಾಸ್ಯವಾಣಿಯಲ್ಲಿ.

"ಹಗಲೂ ರಾತ್ರಿ ಇರುವುದೇ ಅವರೊಡನೆ!"

ಅವರಿಬ್ಬರೂ ಮಾತುಕತೆಯಲ್ಲಿ ಮೈಮರೆತು ಹೆಜ್ಜೆ ಹಾಕುತಿದ್ದುದರಿಂದ ಅವರ ಗಮನ ಈ ಕಡೆ ಹರಿಯಲಿಲ್ಲ.

"ಚಂದ್ರಕಾಂತರ ಗಮನ ಈ ಕಡೆ ಹರಿಯಲಿಲ್ಲವೆಂದು ನಿನಗೆ ಸಿಟ್ಟು!"

"ಅವರ ಗಮನ ಇತ್ತ ಹರಿಯದಿದ್ದಷ್ಟೂ ನಮಗೆ ಕ್ಷೇಮ."

ಒಡನೆ ಕಿಲಕಿಲ ನಗುವಿನಲೆಯೆದ್ದಿತು.

ನಗುವಿನ ನಿನಾದ ಕಿವಿಯನ್ನು ತಾಗುತ್ತಲೂ ಬಲರಾಂ ಚಂದ್ರಕಾಂತರ ದಿಟ್ಟಿ ಈ ಕಡೆ ಹರಿಯಿತು. ಗೆಳತಿಯರ ದನಿಗಳು ಒಕ್ಕೊರಲಿನಲ್ಲಿ ಹರಿದುವು "ಅಭಿನಂದನೆಗಳು!"

ಚಂದ್ರಕಾಂತ್ ಹಿರಿ ಹಿರಿ ಹಿಗ್ಗಿದ. ಏನೆಂಬುದನ್ನು ಊಹಿಸಲಾರದ ಬಲರಾಂ ಚಕಿತನಾದ. ವಿಷಯವನ್ನು ಪರ್ಯಾಲೋಚಿಸುವುದರೊಳಗಾಗಿ ಅವರ ಅರ್ಥಪೂರ್ಣವಾದ ನಗು ಅರಳಿದ ಮುಖಭಾವ ಏನೆಂಬುದನ್ನು ಕೂಗಿ ಹೇಳಿತು.

"ಹೃತ್ಪೂರ್ವಕವಾದ ಅಭಿನಂದನೆಗಳು!" ಒಡನೆ ತನ್ನ ದನಿಯನ್ನೂ ಹರಿಯಬಿಟ್ಟ ಬಲರಾಂ.

"ಥ್ಯಾಂಕ್ಯೂ....ಥ್ಯಾಂಕ್ಯೂ !" ಸಂತಸಪೂರ್ಣ ದನಿ ಹೊರಬೀಳುವಾಗ ಚಂದ್ರಕಾಂತನ ಮುಖ ಹೂವಿನಂತರಳಿ ಹಸನಾದ ಹಿಳಿನಗೆ ಮೂಡಿತು.

"ಕೇಳಿದಿರಾ !" ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವಷ್ಟು ಉತ್ಸಾಹ ದಿಂದ ಸತಿಯ ಕಡೆ ಹುಬ್ಬು ಹಾರಿಸಿದ ಚಂದ್ರಕಾಂತ್. ಹಾಸ ಪ್ರತಿಹಾಸ ವನ್ನು ಪಡೆದರೂ ಚೆಂಗೆನ್ನೆಗಳಲ್ಲಿ ರಂಗನ್ನು ಹೊಮ್ಮಿಸಿದರೂ....ಮನದ ನೆಲೆ ಯಲ್ಲಿ ಮುಳ್ಳೊಂದು ಚುಚ್ಚಿಕೊಂಡಿತ್ತು.

ಅಂದು,

ಟಾಜ್ ಮಹಲಿನ ಮುಂಭಾಗದ ಅಮೃತಶಿಲೆಯ ಬೆಂಚಿನಮೇಲೆ ಚಂದ್ರಕಾಂತನೊಡನೆ ಕುಳಿತಾಗ ಪ್ರಾಸಂಗಿಕವಾಗಿ ಕಮಲೇಶ್—"ನಮಗೆ ಒಂದು ಮಗು ಇದ್ದರೆ ಸಾಕು ಡಾಕ್ಟರ್. ನಮ್ಮ ಉಳಿದ ಕಾಲವನ್ನೆಲ್ಲ ದೀನ ದಲಿತರ ಸೇವೆಗಾಗಿ ಮೀಸಲಿಟ್ಟು ಕಲಿತ ವಿದ್ಯೆಯನ್ನು ಸಾರ್ಥಕ ಪಡಿಸಿಕೊ ಳ್ಳೋಣ....ಜೀವನಕ್ಕೊಂದು ಧ್ಯೇಯ ...ಆಸೆ....ಆಕಾಂಕ್ಷೆ....ಗುರಿಗಳಿಲ್ಲದಿದ್ದರೆ ಈ ಯುಗಧರ್ಮ ಶೋಭಿಸದು."

"ಅಹಹ್ಹಾ ! ಹೇಡಿತನಕ್ಕೆ ಆಸೆ ಆಕಾಂಕ್ಷೆ ಗುರಿಗಳ ಬಣ್ಣ ಬಳಿದರೆ ಮುಗಿಯಿತಲ್ಲ. ಆದರ್ಶದ ಹೆಸರಿನಲ್ಲಿ ಜೀವನ ವಿಕಾಸನವನ್ನು ನಲುಗಿಸುವುದು ಸರಿಯಲ್ಲ....ಯೋಚಿಸಿನೋಡಿ, ಧ್ಯೇಯ ಆದರ್ಶ ಗುರಿಗಳಿಗೆ ಜೀವನ ವಿಕಾ ಸವು ಯಾವ ಅಡೆತಡೆಯೂ ಅಲ್ಲ...ಒಂದು ಮಗುವನ್ನು ನಂಬಿಕೊಂಡು ಹೇಗೆ ಭವಿಷ್ಯವನ್ನು ನಿರ್ಧರಿಸುವಿರಿ? ಅದು ಕುಂಟಾಗಬಹುದು, ಕುರುಡಾಗ ಬಹುದು, ಹುಚ್ಚಾಗಬಹುದು, ರೋಗಿಯಾಗಬಹುದು ಅಥವಾ ಬುದ್ಧಿಹೀನ ನಾಗಬಹುದು...."

"ಸಾಕು ಬಣ್ಣನೆ !"

ಚಂದ್ರಕಾಂತ್ ಕಿಲ ಕಿಲನೆ ನಕ್ಕು ನುಡಿದ "ಡಾಕ್ಟರ್, ನಿಮ್ಮ ಕೆಲ ವಷ್ಟು ವಿಚಾರಗಳು ನನಗೆ ಅರ್ಥವೇ ಆಗುವುದಿಲ್ಲ. ನಾವು ಪಾಶ್ಚಾತ್ಯರನ್ನು ಕೆಲವು ವಿಚಾರಗಳಲ್ಲಿ ಅನುಕರಣ ಮಾಡಿದರೂ ನಾವು ಅಪ್ಪಟ ಭಾರತೀ ಯರು !"

....ಮಕ್ಕಳಿರಲವ್ವಾ ಮನೆ ತುಂಬ....

ಚಂದ್ರಕಾಂತ್ ಬಲರಾಮರು ತಮ್ಮ ಹಾದಿ ಹಿಡಿದರು. ಕಮಲೇಶ್

ಮತ್ತು ಗೆಳತಿಯರು ಅದೇ ಹಾದಿಯಲ್ಲಿ ಮುಂದುವರಿದರು. ಮೂರನೇ ಯೂನಿಟ್ಟಿನ ಐದನೇ ಸ್ಪೆಷಲ್ ವಾರ್ಡ್ ಡಾ|| ನಿರಂಜನರದು. ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುವ ಸಲುವಾಗಿ ನಾಲ್ವರೂ ಅವರ ವಾರ್ಡಿಗೆ ಪದಾರ್ಪಣೆ ಮಾಡಿದಾಗ ಡಾ|| ನಿರಂಜನರು ಪಲ್ಲಂಕದ ಮೇಲೆ ಕುಳಿತಿದ್ದರು. ಮುಖದಲ್ಲಿ ಸಮಾಧಾನದ ತಿಳಿನಗೆ ಅರಳಿತ್ತು.

"ಪ್ರಣಾಮ್ ಸರ್."

"ಪ್ರಣಾಮ್....ಪ್ರಣಾಮ್ !"

"ಹೇಗಿದ್ದೀರಿ ಸರ್ ?"

"ಫಿಜಿಯೋ ಥೆರಫಿ (PHYSIO-THERAPY) ಚಿಕಿತ್ಸೆ ತುಂಬ ಸಹಾಯ ಮಾಡಿದೆ"

ಮಂಗಳಮಯ ಉತ್ತರವನ್ನು ಕೇಳಿ ಎಲ್ಲರ ಹೃದಯಗಳೂ ಸಮಾಧಾನದಿಂದ ಮಿಡಿದುವು.

ಎಲ್ಲರೂ ಅವರ ಬಳಿ ಸ್ವಲ್ಪ ಹೊತ್ತು ಮಾತಾಡಿ ಹಿಂದಿರುಗಿದಾಗ ಹಾದಿಯಂಚಿನಲ್ಲಿ ಮಳೆಗಾಳಿಯ ಭೀಕರ ಕಾಳಗವನ್ನು ದಿಕ್ಕೆಟ್ಟು ವೀಕ್ಷಿಸುತಿದ್ದ ಕಾವೇರಿ ದಿಟ್ಟಿಗೆ ಬಿದ್ದಳು. ವಿಸ್ಫಾರಿತವಾದ ಅವಳ ಕಣ್ಣುಗಳಲ್ಲಿ ಭಯಭೀತಿಯ ಛಾಯೆ ಹೊರ ಹೊಮ್ಮುತ್ತಿದೆ. ಗಾಳಿಯ ಹೊಡೆತಕ್ಕೆ ಸಿಕ್ಕಿ, ಬೀಳು ಬೀಳಾಗಿ ಇಳಿಬಿದ್ದ ಕೂದಲು ಎಡ ಬಲಗಳಲ್ಲಿ ಅತ್ತಿತ್ತ ತೂಗಾಡುತ್ತಿವೆ. ಡಾಕ್ಟರುಗಳನ್ನು ನೋಡುತ್ತಲೂ ಹುಡುಗಿ ಕರ ಜೋಡಿಸಿದಳು....ದುಂಡನೆಯ ಎಳೆಯ ಮುಖದಲ್ಲಿ ಸೌಂದರ್ಯಕ್ಕೆ ನಿಮಿತ್ತವಾದ ಚೆಂದುಟಿಗಳ ಮೇಲೆ ಹಸನಾದ ಹೂನಗೆ ಅರಳಿದಾಗ ಎರಡೂ ಕೆನ್ನೆಗಳಲ್ಲಿ ಗುಳಿ ಬಿದ್ದು ಅತ್ಯಂತ ಮನೋಹರವಾಗಿ ಕಂಡುಬಂದಳು.

"ನನ್ನನ್ನು ಡಿಸ್ ಚಾರ್ಜ್ ಮಾಡಲಾಗಿದೆ. ಡಾ|| ಯಶಪಾಲ್ ಅಬಲಾಶ್ರಮಕ್ಕೆ ಸೇರಿಸುವೆ ಎಂದರು. ಏನು ಮಾಡುವುದೋ ನನಗೊಂದೂ ಗೊತ್ತಾಗುವುದಿಲ್ಲ." ಎಂದಳು ಹುಡುಗಿ.

"ಡಾ|| ಯಶಪಾಲ್ ಹಾಗೆಂದರೆ?" ಅಚ್ಚರಿಯಿಂದ ಕೇಳಿದಳು ಕಮಲೇಶ್.

ಇದುವರೆಗೆ ಎಷ್ಟುಮಂದಿ ಹೆಂಗಳೆಯರ ಕುಲ ಗೋತ್ರ ಹಾಳುಮಾಡಿ

ಯಾಗಿದೆಯೋ....ಇನ್ನು ಇವಳೊಂದು ಬಾಕಿ....ಅದಕ್ಕೆಂದೇ ಅವರು ಅಬಲಾಶ್ರಮದ ಪ್ರೆಸಿಡೆಂಟ್‌ಷಿಪ್ಪಿಗೆ ಹೋರಾಟ ನಡೆಸಿದ್ದು !

ಡಾಕ್ಟರುಗಳೆಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ನೀನೆಲ್ಲೂ ಹೋಗಬೇಡ. ಇಲ್ಲಿಯೇ ನರ್ಸ್ ಕ್ವಾರ್ಟರ್ಸ್‌ನಲ್ಲಿ ಇರಲು ಸ್ಥಳಾವಕಾಶ ಮಾಡಿಸುವೆ. ನಿನ್ನಲ್ಲಿರುವ ವಿದ್ಯೆಯನ್ನು ಊರ್ಜಿತಗೊಳಿಸಿಕೊಂಡರೆ ಇಲ್ಲೆ ನರ್ಸಾಗಿ ಕೆಲಸ ಮಾಡಬಹುದು. ಮುಂದೆ ಯೋಗ್ಯ ವರನನ್ನು ಹುಡುಕೋಣ ಆಯಿತೇ ?"

ಹುಡುಗಿಯ ಚೆಂಗೆನ್ನೆಗಳು ರಂಗೊರೆದು ಕೆಂಪು ತಳೆದುವು.

ಡಾ|| ನಿರಂಜನ್‌ರವರ ವಾರ್ಡ್ ಕಡೆ ಹೋಗುತ್ತಿದ್ದ ಡಾ|| ಥಾಮಸ್ ಎದುರಾದರು. ಅಲ್ಲಿಂದಲೇ ಕೇಳಿದರು ಅವರು "ಏನು ಸಮಾಚಾರ ?"

ಡಾ|| ನಿರಂಜನ್ ಹಾಸಿಗೆ ಹಿಡಿದಮೇಲೆ ಡಾ|| ಥಾಮಸ್ ಡೀನ್ ಪಟ್ಟ ಏರಿದ್ದರು. ಅಕ್ಷತೆ ಇಟ್ಟು ಕರೆದಂತೆ ಅವರೇ ಸಮಯಕ್ಕೆ ಸರಿಯಾಗಿ ಬಂದುದು ಅನುಕೂಲವೇ ಆಯಿತು ಎಂದು ಕೊಳ್ಳುತ್ತಾ ಕಮಲೇಶ್ ವಿಷಯವನ್ನು ಮುಂದಿಟ್ಟಳು, "ಪ್ರಣಾಮ್ ಸರ್!....ಕಾವೇರಿಯನ್ನು ಅಬಲಾಶ್ರಮಕ್ಕೆ ಕಳುಹಿಸುವುದಕ್ಕಿಂತ ಇಲ್ಲೇ ನರ್ಸ್ ಕ್ವಾರ್ಟರ್ಸ್‌ನಲ್ಲಿ ಸ್ಥಳಾವಕಾಶ ಒದಗಿಸಿದರೆ ಅವಳಿಗೆ ನರ್ಸಿಂಗ್‌ನಲ್ಲಿ ತರಬೇತಿ ಪಡೆಯಲು ಅನುಕೂಲವಾಗುತ್ತೆ."

"ಅವಳು ವಿದ್ಯೆ ಕಲಿತು ನರ್ಸಿಂಗ್‌ನಲ್ಲಿ ತರಬೇತಿ ಹೊಂದುವುದೆಂದರೆ ಬಹಳ ಕಾಲ ಬೇಕಾಗುತ್ತದೆ."

"ಟ್ಯೂಷನ್ ಕೊಡಿಸೋಣ. ವಿದ್ಯೆ ಕಲಿಯುವುದರೊಂದಿಗೆ ಇಲ್ಲಿ 'ಆಯಾ' ಕೆಲಸ ಸಹ ಮಾಡಲಿ. ಈಗಿನಿಂದಲೇ ಟ್ರೈನಿಂಗ್ ಶುರು ಮಾಡಿದರೆ ಜೀವನಕ್ಕೊಂದು ದಾರಿಯಾಗುತ್ತದೆ."

"ಆಗಬಹುದು. ಯಾರಾದರೊಬ್ಬರು ಮೆಟ್ರೀನಳಿಗೆ ಜವಾಬ್ದಾರಿ ವಹಿಸಿಬಿಡಿರಿ. ಟ್ಯೂಷನ್ ಸಹ ಅವರೇ ನೋಡಿಕೊಳ್ಳುತ್ತಾರೆ."

ಕಮಲೇಶಳಿಗೂ ಅದು ಸರಿಯೆನಿಸಿತು.

ಎಲ್ಲರ ಮುಖದಲ್ಲೂ ಸಮಾಧಾನದ ತಿಳಿನಗು ಮೂಡಿತು. ಡಾ||ಥಾಮಸ್ ಅನುಮತಿ ನೀಡಿ ತಮ್ಮ ಹಾದಿ ಹಿಡಿದರು. ಕಮಲೇಶ್ ಅವಳಿಗೆ ವಸತಿ ಸೌಕರ್ಯದೊಂದಿಗೆ ಪಾಠ ಪ್ರವಚನಗಳನ್ನು ಹೇಳಿಕೊಡಲು ಹಿರಿಯ ಮೆಟ್ರೀ

ನ್ಗೆ ಚೀಟಿ ಕಳುಹಿಸಿ ತನ್ನ ಆಫೀಸಿನತ್ತ ಹೆಜ್ಜೆ ಹಾಕಿದಳು. ಉಳಿದ ಮೂವರೂ ತಮ್ಮ ತಮ್ಮ ವಿಭಾಗಗಳಿಗೆ ತೆರಳಿದರು. ಆಫೀಸಿಗೆ ಹೋಗಿ ಒಂದೆರಡು ಕಾಗದವನ್ನು ನೋಡುವುದರೊಳಗಾಗಿ ಟೆಲಿಫೋನಿನ ಟಂಟಣಿ ನಾದ ಕರೆ ನೀಡಿತು.

"ಹಲೋ! ಕಮಲೇಶ್!"

"ಹೌದು ಡಾಕ್ಟರ್....ನಾನೆ...."

ಇದೀಗ ಎಮರ್ಜನ್ಸಿ ಕೇಸೊಂದು ದಾಕಲಾಗಿದೆ. ಈಗಲೇ ಆಪರೇಷನ್ ಆಗಬೇಕಾಗಿದೆ. ದಯಮಾಡಿ ಹೊರಟುಬಾ." ಪದ್ಮಾ ಕಮಲಾನಿಯು ವಿನಯಪೂರ್ವಕ ಕರೆ.

"ಆಗಲಿ."

"ಕೈ ಬಿಡುವಾಗಿದ್ದೀಯಷ್ಟೆ?"

"ಹೌದು. ಬರುವೆ."

"ತುಂಬ ಥ್ಯಾಂಕ್ಸ್!"

ಡಾ|| ಚಂದ್ರಿಕಾ ಹೆಗ್ಗಡೆ ಡಾ|| ಕಲ್ಪನಾರವರು ವರ್ಗವಾಗಿ ಹೋದ ನಂತರ ಹೆಚ್ಚು ಕಡಿಮೆ ಹಿರಿಯ ಜವಾಬ್ದಾರಿ ಕಮಲೇಶಳ ತಲೆಗೆ ಕಟ್ಟಿತ್ತು. ಒಂದು ಆಪರೇಶನ್ ನಡೆಯುತಿದ್ದಂತೆ ಇನ್ನೊಂದು ಆಪರೇಶನ್ ನುಗ್ಗಿ ಬಂದುದರಿಂದ ತುಸು ಕೈ ಬಿಡುವು ಇರುವ ಡಾಕ್ಟರುಗಳಿಗೆ ಕರೆ ಹೋಗಿತ್ತು. ಕಮಲೇಶ್ ಆಪರೇಷನ್ ಥಿಯೇಟರನ್ನು ಸೇರುವುದರೊಳಗಾಗಿ ಹುಡುಗಿಯ ತುರ್ತು ಆಪರೇಷನ್ನಿಗೆ ತಯಾರಿ ನಡೆಸಿದ್ದರು.

ಮೇಜಿನ ಮೇಲಿದ್ದ ಹದಿನಾರರ ಮುಗುದೆ ನೋವುಂಡು ಹಣ್ಣುಹಣ್ಣಾಗಿ ಮಲಗಿದ್ದಾಳೆ. ಎಕ್ಸ್‌ರೇ ನೋಡುವಷ್ಟು ಸಮಯವೂ ಉಳಿದಿರಲಿಲ್ಲ. ಮುಖವಾಡ ಧರಿಸಿ ಕೈಚೀಲ ತೊಟ್ಟು ಕಮಲೇಶ್ ಸಿದ್ಧಳಾದಳು. ಸುತ್ತು ಮುತ್ತ ಕೆಲವಾರು ಮಂದಿ ಡಾಕ್ಟರುಗಳು ಮೇಜಿನ ಸುತ್ತುವರಿದಿದ್ದರು. ಹರಿತವಾದ ಕತ್ತರಿಗಳೊಡನೆ ಕೈಗಳು ಹರಿದಾಡಿದುವು. ಚರ್ಮವನು ಹರಿದು ಮಾಂಸದ ಪದರನ್ನು ಕತ್ತರಿಸಿ ನೆತ್ತರು ಪ್ರವಿಸುವ ನಾಳಗಳನ್ನು ಕಟ್ಟಿ, ಒಳಗಡೆ ಕೈ ಯಿಟ್ಟು ಪರೀಕ್ಷಿಸಿ ನೋಡಿದರೆ ಒಳಗಿನ ಅವಯವಗಳು ತಿರುಗು ಮುರುಗು!

DEXTRA POSITION OF THE VISCERA!

ಎಡಗಡೆ ಇರಬೇಕಾದ ಅವಯವ ಬಲಗಡೆ! ಬಲಗಡೆ ಇರಬೇಕಾದ ಅವಯವ ಎಡಗಡೆ! ಓಹ್! ಹೃದಯವೂ ಸ್ಥಳ ಪಲ್ಲಟ! ಆ ಕುತೂಹಲ ಕಾರಿ ಸ್ಥಿತಿಯನ್ನು ಓದಿ ತಿಳಿದಿದ್ದರೂ ಇದುವರೆವಿಗೆ ಕಂಡಿರಲಿಲ್ಲ. ಕಲಿಕೆಯುವರಿಗೆ ಅದೊಂದು ಸೊಗಸಾದ ಹಬ್ಬ!

ಕರುಳು ಮುದ್ದೆಯಾಗಿ ಆಹಾರ ಪದಾರ್ಥ ಮುಂದುವರಿಯದೆ ಅಲ್ಲೇ ನಿಂತುದುದರಿಂದ ನೋವು ಕಾಣಿಸಿಕೊಂಡಿದೆ. ಕಲಿಕೆಯ ಎಳಸು ಡಾಕ್ಟರುಗಳಿಗೆ ದೇಹಸ್ಥಿತಿಯನ್ನು ವಿವರಿಸುತ್ತಾ ಮೈಯೆಲ್ಲಾ ಮನಸ್ಸಾಗಿ ಆಪರೇಶನ್ ಮುಗಿಸಿದರೂ ಪಕ್ಕದಲ್ಲಿದ್ದು ಅನಸ್ತೇಶಿಯಾ ನೀಡುತಿದ್ದ ಚಂದ್ರಕಾಂತ್ ಗಂಭೀರಮುದ್ರೆ ತಳೆದಿದ್ದ. ಯಾಂತ್ರಿಕವಾಗಿ ತಾಂತ್ರಿಕವಾಗಿ ಕರ ಕುಶಲತೆಯಿಂದ ಕೆಲಸ ನಡೆದು ಒಂದೆಡೆ ಮುದ್ದೆಗಟ್ಟಿದ್ದ ಕರುಳನ್ನು ಬಿಡಿಸಿ ಸ್ವಸ್ಥಾನದಲ್ಲಿ ಅಳವಡಿಸಿ ಹೊಲಿಗೆ ಹಾಕುವಾಗ ಹೊತ್ತು ಎರಡರ ಅಂಚನ್ನು ದಾಟಿತು. ಆಪರೇಷನ್ ಮುಗಿಸಿ ಉತ್ತರಾರ್ಧವನ್ನು ಡ್ಯೂಟಿ ಡಾಕ್ಟರುಗಳಿಗೆ ವಹಿಸಿ ಮುಂದಿನ ವ್ಯವಸ್ಥೆಯನ್ನು ಕ್ರಮಶಃ ಮಾಡಿ ಹೊರಡುವಷ್ಟರಲ್ಲಿ ಚಂದ್ರಕಾಂತ್ ಹೊರಹೋಗಿ ಡಾ|| ಚಂದನ್‌ರವರೊಡನೆ ಮಾತಾಡುತ್ತಾ ನಿಂತಿದ್ದ. ಹಾದಿ ಸ್ವಲ್ಪ ದೂರ ಮಾತಿಲ್ಲದೆ ಕಳೆಯಿತು. ಅನಂತರ ಚಂದ್ರಕಾಂತನೇ ಮೌನ ಮುರಿದ.

"ಇನ್ನು ನನ್ನಿಂದಂತೂ ನಿಮ್ಮ ಮನೆಯಲ್ಲಿರುವುದು ಸಾಧ್ಯವೇ ಇಲ್ಲ ಕಮಲೇಶ್!"

"ನಿಮಗೆ ನಮ್ಮಿಂದಾದ ತೊಂದರೆಯಾದರೂ ಏನು?"

"ನನ್ನ ಮುಂದಿರುವುದು ತೊಂದರೆಯ ಪ್ರಶ್ನೆಯಲ್ಲ; ಮಾನದ ಪ್ರಶ್ನೆ."

"........"

"ನನಗೂ ಸ್ವಾಭಿಮಾನವುಂಟು."

"ಅದರೊಂದಿಗೆ ನನ್ನ ತೊಂದರೆಗಳನ್ನೂ ಗಮನಿಸಿ ಡಾಕ್ಟರ್!" ವ್ಯಥಿತಳಾಗಿ ನುಡಿದಳು ಕಮಲೇಶ್. ಆ ಅಮಾಯಕವಾದ ದನಿಯಲ್ಲಿ ನಿಸ್ಸಹಾಯಕತೆ ದುಗುಡರೂಪದಲ್ಲಿ ಹೊರ ಹೊಮ್ಮಿದೆ....ಆತನ ನಿಜಸ್ವಭಾವ....ಒಳ ಮನಸ್ಸಿನ ಭೀಕರ ಸತ್ಯ....ಶಿಲಾ ಕಾಠಿಣ್ಯ ಹೃದಯ....ಒಂದೊಂದಾಗಿ ಅಂತ

ರಂಗಕ್ಕಿಳಿದು ಹೃದ್ಗತವಾದಾಗ ಹರಿದಾಡುವ ನೆತ್ತರು ಹೆಪ್ಪುಗಟ್ಟಿದಂತಾಯಿತು ಕಲಿತ ವರ್ಗದ ಬಗ್ಗೆ ಇದ್ದ ಉನ್ನತಭಾವ ಬಿಸಿಲಟ್ಟಿ ಕರಗುವ ಮಂಜಿನಂತೆ ಕರಗುತ್ತಿದೆ. ಅವಳು ಯಾವ ಸಂಸ್ಕಾರದಲ್ಲಿ ಬೆಳೆದು ದೊಡ್ಡವಳಾಗಿ ತನ್ನದೇ ಆದ ರೀತಿಯಲ್ಲಿ ಸಮಾಜದ ರೂಪುರೇಷೆಗಳನ್ನು ಕಲ್ಪಿಸಿಕೊಂಡಿದ್ದಳೋ ಅದೇ ಸಮಾಜದ ವಾತಾವರಣದಲ್ಲಿ ಅಕಲ್ಪಿತ ಅವಾಂಛಿತ ಶೃಂಖಲೆಯಲ್ಲಿ ಸಿಕ್ಕಿದಾಗ ದಿಕ್ಕು ತಪ್ಪಿದಂತಾದಳು.

ತಾಯಿಯ ಆದರ....ಚೇತನಳ ಹೂನಗೆ ...ಕಲಿತ ವಿದ್ಯೆ....ತನ್ನದೇ ಆದ ಸಂಸಾರ....ಆತ್ಮಾರಾಂಕರ್ವೆಯಂತ ಪಿತೃ ಸದೃಶ ಬಾಂಧವರು....ಸ್ವಾತಂತ್ರ್ಯ ಜೀವನದಲ್ಲಿ ಸುಖ ಶಾಂತಿಯ ಅಮೃತಕಲಶವನ್ನು ಭಗವಂತನ ಆಶೀರ್ವಾದ ಪೂರ್ವಕವಾಗಿ ಪಡೆದುದು, ಬಹಳ ಮಟ್ಟಿಗೆ ಮಾನವ ಹೃದಯದ ಕುತ್ಸಿತ ಮನೋಭಾವವನ್ನು ಅರಿಯಲಾಗದಂತೆ ದಟ್ಟವಾದ ತೆರೆಯನ್ನು ಮನಃಪಟಲದ ಮೇಲೆ ಎಳೆದು ಬಿಟ್ಟಿತ್ತೋ....ಏನೋ. ಇತ್ತೀಚಿನ ವ್ಯವಹಾರಗಳಲ್ಲಿ-ಬೌದ್ಧಿಕಸ್ತರದ ಸಂಘರ್ಷಣೆಗಳಲ್ಲಿ-ಅವಾಂಛನೀಯ ಮಾನಸಿಕಾಂದೋಲನದಲ್ಲಿ ದೃಢತೆಯನ್ನು ಕಳೆದುಕೊಂಡರೂ ಮರುಕ್ಷಣದಲ್ಲಿ ಪಡೆದುಕೊಂಡು ಕರ್ತವ್ಯಪರಳಾಗುವುದು ದಿನೇ ದಿನೇ ಅಭ್ಯಾಸವಾಗುತ್ತಿದೆ ; ಆದರೂ ಇಂದ್ಯ ಏನೋ ಒಂದು ಬಗೆಯ ಅಸಹನೀಯ ಸಂಕಟ ಮೂಡಿದಂತಾಯಿತು. ಹಾದಿ ನಡೆಯುತ್ತಿದ್ದಂತೆ ಸಂಕಟ ಮೈಮನಸ್ಸುಗಳನ್ನೆಲ್ಲಾ ಆವರಿಸ ತೊಡಗಿತು. ಉಳಿದ ಹತ್ತು ಮಾರು ಕಳೆದು ಮನೆ ಮುಟ್ಟಿದಾಗ 'ಹಾ' ಎನಿಸಿ ಸೋಫಾದ ಮೇಲೆ ಕುಳಿತುಕೊಂಡಳು. ಕಣ್ಣುಗಳ ಮೇಲೆ ಕತ್ತಲೆಯ ತೆರೆ ಹರಡಿತು. ಚಂದ್ರಕಾಂತ್ ಮುಖ ಮಜ್ಜನ ಮಾಡಿ ಊಟಕ್ಕೆ ಅಣಿಯಾದರೂ ಅವಳು ಏಳಲಿಲ್ಲ. ಸ್ವರ್ಣಮಾಲಿನಿ ಮೈ ಮುಟ್ಟಿ "ಕಮಲೇಶ್ !" ಎಂದಳು.

ಉತ್ತರವಿಲ್ಲ.

"ಕಮಲೇಶ್ !" ಗಾಬರಿಯಿಂದ ಕೂಗಿತು ಮಾತೆಯ ದನಿ.

"........"

ಊಟಕ್ಕೆ ಕುಳಿತ ಚಂದ್ರಕಾಂತ್ ಎದ್ದು ಬಂದು ನೋಡಿದರೆ ಅವಳು ಪ್ರಜ್ಞೆ ತಪ್ಪಿದುದು ತಿಳಿದು ಬಂತು. ಅತೀವ ಅಸಹನೀಯ ಬಳಲಿಕೆಗೆ ಶರಣಾಗಿ ಮೈ ಬಸುವಳಿದಿದೆಯೆಂಬುದು ಮನವರಿಕೆಯಾದಾಗ ಚಂದ್ರಕಾಂತ್ ಅವಳ

ಶುಶ್ರೂಷೆಯಲ್ಲಿ ತೊಡಗಿದ. ಮುಖದಮೇಲೆ ಬೆವರಿನ ತುಂತುರುಗಳು ಒಂದೇ ಸಮನೆ ಮೂಡುತ್ತಿವೆ. ಮುಚ್ಚಿದ ಕಣ್ಣುಗಳು ತೆರೆಯಲಿಲ್ಲ. ಒಂದೆರಡು ಸೂಜಿ ಮದ್ದುಗಳು ಮೈಸೇರಿದುವು. ಭಯವಿಹ್ವಲೆಯಾದ ಸ್ವರ್ಣಮಾಲಿನಿಗೆ ಸಮಾಧಾನ ಹೇಳಿ ಬಳಿಯಲ್ಲಿ ಕಾದು ಕುಳಿತ. ಸ್ವಲ್ಪ ಹೊತ್ತು ಉರುಳುವುದರೊಳಗಾಗಿ ನಿದ್ದೆ ತಿಳಿದೆದ್ದವಳಂತೆ ಸುತ್ತಲೂ ನಿಟ್ಟಿಸಿ ನೋಡಿದಳು ಕಮಲೇಶ್. ಮುಖದ ಮೇಲಿನ ಬೆವರಿನ ತುಂತುರು ಹನಿಗಳನ್ನು ಕರವಸ್ತ್ರದಿಂದ ತೀಡಿ ಚಂದ್ರಕಾಂತ್ ಅಂದ "ಕಾಲಕಾಲಕ್ಕೆ ಸರಿಯಾದ ನಿದ್ರಾಹಾರಗಳಿಲ್ಲದಿದ್ದರೆ ಗರ್ಭಿಣಿ ಸ್ತ್ರೀಯರು ಭರಿಸಬಲ್ಲರೇ? ಇನ್ನು ಮೇಲೆ ರಜೆ ಬರೆದು ಹಾಕಿ ನೀವು ಮನೆಯಲ್ಲಿರುವುದು ಲೇಸು."

ಕಮಲೇಶ್ ಎದ್ದು ಕುಳಿತುಕೊಳ್ಳುತ್ತಲೂ "ನೀವಿಲ್ಲೇ ವಿಶ್ರಾಂತಿ ತೆಗೆದುಕೊಳ್ಳಿರಿ. ಊಟ ಇಲ್ಲಿಗೇನೆ ತಂದರಾಯಿತು." ಎಂದ ಚಂದ್ರಕಾಂತ್.

"ಈಗ ಸರಿ ಹೋಗಿದೇನೆ. ಪರವಾಯಿಲ್ಲ."

"ಬೇಡ ಡಾಕ್ಟರ್!"

ಅವನ ವಜ್ರಕಾಯದಲ್ಲಿನ ಮೃದು ಹೃದಯವನ್ನು ಇದುವರೆವಿಗೂ ಕಂಡುಕೊಂಡಿರದ ಕಮಲೇಶಳಿಗೆ ಅವನ ರೀತಿಯಲ್ಲಿ ಘಳಿಗೆಗೊಂದು ಬದಲಾವಣೆಗಳನ್ನು ಕಾಣುವಾಗ ಹೇಗೆ ಹೇಗೋ ಆಯಿತು. ನಿಮೀಲಿತ ನೇತ್ರೆಯಾಗಿ ಅವನೆಡೆಗೆ ನೋಟ ಹೆದರಳಿಸಿದಾಗ ಆ ಶಿಲಾ ಕಾಠಿಣ್ಯ ಮೂರ್ತಿ ಮೃದುಹಾಸ ಬೀರಿ-"ಸದ್ಯ, ನೀವು ದಾರಿಯಲ್ಲಿ ಕುಸಿದು ಬೀಳಲಿಲ್ಲವಲ್ಲಾ!"

ಅವಳು ಮಾತಾಡದೆ ಮುಗುಳ್ನಗೆ ಬೀರಿದಳು.

ಸ್ವರ್ಣಮಾಲಿನಿ ಊಟದ ಸಹಿತ ಒಳಬಂದು "ನನಗೆ ಬಹಳ ಗಾಬರಿಯಾಗಿತ್ತು ಕಮಲೇಶ್" ಎಂದಳು, ಆತಂಕಪೂರ್ಣವಾಗಿ.

"ಬಹಳ ಬಳಲಿದ್ದೆ. ಆದರಿಂದಲೇ ಹಾಗಾಯಿತು."

ಚಂದ್ರಕಾಂತ್ ನೀರು ಸೋಪನ್ನು ತಂದು ಮುಂದೆ ಹಿಡಿದ. ನೋಟ ಅವಳ ನಿಮ್ನೋನ್ನತ ಪ್ರದೇಶಗಳಲ್ಲಿ ಹರಿದಾಡುತಿತ್ತು.

ಕಮಲೇಶ್ ಮುಖ ಮಜ್ಜನ ಮಾಡಿ ಎಲ್ಲರ ಆದರಾತಿಥ್ಯಗಳನ್ನೂ ಸ್ವೀಕರಿಸಿದಳು.

ಅಧ್ಯಾಯ

೨೫

....ಸಾಯಂಸಮಯ.

ಕಾವ್ಯಕಲ್ಪನೆಗೆ ಚಿತ್ರಕೃತಿಗೆ ವಸ್ತುವಸ್ತುವೂ ಆಹಾರವಾಗುವಂತಹ ಸುಂದರ ಸನ್ನಿವೇಶ. ತನುಮನಗಳಿಗೆ ತಂಪನ್ನೂಡಿಸುವಂತಹ ಶೀತಲವಾತಾವರಣ.

ಮನೆಯ ಮುಂದಿನ ಹೂದೋಟದಲ್ಲಿ ಸಂಜೆಯ ಸೊಂಪನ್ನು ಸಾನಂದದಿಂದ ಸವಿಯುತ್ತಾ ತಾಯಿಯೊಂದಿಗೆ ಮಂಡಿಸಿದ್ದಳು ಕಮಲೇಶ್. ಮಿತಿಮೀರಿದ ಪರಿಶ್ರಮದಿಂದ ದಣಿದ ಮೈ ವಿಶ್ರಾಂತಿಯನ್ನು ಬಯಸಿತ್ತು. ಉಟ್ಟ ಶ್ವೇತಾಂಬರ ತಿಳಿಗಾಳಿಗೆ ಅತ್ತಿತ್ತ ಹರಿದಾಡುತ್ತಿದೆ.

"ಇನ್ನಾದರೂ ಆಸ್ಪತ್ರೆಗೆ ಹೋಗುವುದನ್ನು ನಿಲ್ಲಿಸು ಕಮಲೇಶ್." ಆತಂಕ ತುಂಬಿದ ದನಿಯಲ್ಲಿ ನುಡಿದಳು ಸ್ವರ್ಣಮಾಲಿನಿ.

"ಈಗಲೇ ಏಕೆ ಮಾ? ಇನ್ನೂ ಆರುವಾರಗಳ ಕಾಲಾವಕಾಶವಿದೆ. ಹೊತ್ತುಮೀರಿ ಮನೆಗೆ ಬರುವುದನ್ನು ಇನ್ನು ನಿಲ್ಲಿಸಿದರಾಯಿತು."

ತಾಯಿಯ ಅತೀವ ಆತಂಕವನ್ನು ನಕ್ಕು ನಿವಾರಿಸಿದರೂ ಮೈಯ್ಯಲ್ಲಿನ ಬಳಲಿಕೆ ಮನವನ್ನು ಇರಿಯುತ್ತಿದೆ. ಕಾಲುಗಳು ಜೋಮು ಹಿಡಿದಂತೆ ಜುಮುಜುಮುಗುಟ್ಟುತ್ತಿವೆ. ಆದರೂ ಇದನ್ನೆಲ್ಲಾ ಹೇಳಿಕೊಂಡು ತನ್ನ ದೌರ್ಬಲ್ಯವನ್ನೇಕೆ ತೋರಿಕೊಳ್ಳಬೇಕು ಎನ್ನುತ್ತದೆ ಅಂತರಂಗ.

ಸ್ವಭಾವಜನ್ಯವಾದ ಶಾಂತಸ್ವರದಲ್ಲಿ ನುಡಿದಳು ಸ್ವರ್ಣಮಾಲಿನಿ. "ಊರು ಮಂದಿಯನ್ನೆಲ್ಲಾ ನೋಡುವ ನೀನು ನಿನ್ನನ್ನು ನೋಡಿಕೊಳ್ಳುವುದರಲ್ಲಿ ಅಷ್ಟು ಆಸ್ಥೆ ವಹಿಸುತ್ತಿಲ್ಲ, ಎಂದು ನನಗನ್ನಿಸುತ್ತೆ. ದಿನಕ್ಕಿಷ್ಟು ಮಾತ್ರೆ ಔಷಧಿ ನುಂಗಿದರೆ ಸಾಕೆ? ತೆಗೆದುಕೊಳ್ಳುವ ಔಷಧಿ ಪರಿಣಾಮಕಾರಿಯಾಗಿದೆಯೇ ಇಲ್ಲವೇ ಎಂಬುದನ್ನಂತೂ ಗಮನಿಸಿದಂತೆ ಕಾಣುವುದಿಲ್ಲ ಕಮಲೇಶ್."

ಕಮಲೇಶ್ ನಗುತ್ತಾ ಹೇಳಿದಳು "ಹಾಗೆಲ್ಲಾ ನೋಡಿಕೊಳ್ಳದಿದ್ದರೆ

ಆದೀತೆ ?"

ಪ್ರಾಕಾರದ ಬಾಗಿಲು 'ಖಣಿಲ್' ಎಂದು ಸದ್ದು ಮಾಡಿತು. ಸಹಜವಾಗಿ ಇಬ್ಬರ ಕಣ್ಣುಗಳೂ ಅತ್ತ ಹೊರಳಿದಾಗ ಸಕ್ಕೂ ಮಂದಸ್ಮಿತವದನಾರವಿಂದಳಾಗಿ ಒಳ ಬರುತಿದ್ದುದು ಗೋಚರಿಸಿತು. ಪರಸ್ಪರ ದರ್ಶನಲಾಭದಿಂದ ಗೆಳತಿಯರ ಮುಖಗಳು ಅರಳಿ ಹೂವಾದುವು. ಸೀತಮ್ಮ ಇನ್ನೊಂದು ಕುರ್ಚಿಯನ್ನು ತಂದು ಹಾಕಿದಳು.

"ಬಾ, ಸಕ್ಕೂ ! ಇಲ್ಲಿಗೆ ಒಬ್ಬಳೇ ಬರುವಂತಾದೆಯಲ್ಲ ಅದೇ ಸಂತೋಷ."

"ದೇವರು ದೊಡ್ಡವನು."

"ನೀನು ಆಗಲೇ ಮಾಡಿಸಿಕೊಂಡಿದ್ದರೆ ಬಹಳ ಒಳ್ಳೆಯದಿತ್ತು. ವ್ಯರ್ಥ ಕಾಲಹರಣ ಮಾಡಿದಂತಾಯಿತು."

ಕಮಲೇಶಳ ನುಡಿಗುತ್ತರವಾಗಿ ಶುಷ್ಕನಗೆ ಬೀರಿದಳು ಸಕ್ಕು.

ವಿಧಿ....!

"ಈಚೆಗೆ ಮೈ ಬೆಳೆಸಿದ್ದಿ. ತೂಕ ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು."

"ನನಗೀಗ ಯಾವುದರಲ್ಲೂ ಆಸಕ್ತಿಯಿಲ್ಲ....ಮನೆಗೆಲಸಕ್ಕೆ ಹದವಾಗಿದ್ದೇನೆ, ಸಾಕು."

"ತಾಯಿಯಾಗಲಿಕ್ಕೂ ಹದವಾಗಿದ್ದಿ !"

ಮೂವರ ಮುಖದಲ್ಲೂ ಎಳೆನಗು ಮಿನುಗಿ ಮಾಯವಾಯಿತು.

"ಹೆಣ್ಣಾದವಳಿಗೆ ಒಂಟಿ ಜೀವನ ಕಷ್ಟ....ನಿನ್ನನ್ನು ಅರ್ಥಮಾಡಿಕೊಳ್ಳಬಲ್ಲ ಮಹಾನುಭಾವ ಬಂದರೆ ಮದುವೆಯಾಗು. ಆ ಸರ್ವಾಂತರ್ಯಾಮಿ ನಿನಗೆ ಅಷ್ಟಾದರೂ ಕರುಣಿಸುತ್ತಾನೆ ಎಂದು ನನ್ನ ನಂಬುಗೆ." ದನಿ ಭಾರವಾದರೂ ಎದೆಯಾಳದಿಂದ ಹರಿದು ಬಂತು.

ನೆರೆಮನೆಯ ಮಗುವಿನೊಂದಿಗೆ ಆಡಲು ಹೋಗಿದ್ದ ಚೇತನಾ ಓಡೋಡಿ ಬಂದಳು. ತುಟಿಯಲ್ಲಿ ಎಳೆನಗು ಸೂಸುವ ಮುದ್ದು ಮಗುವನ್ನು ನೋಡಿ ಅತ್ಯಂತ ಆಸ್ಥೆಯಿಂದ ಕೇಳಿದಳು ಸಕ್ಕೂ " ಓ....ನಿನಗೊಬ್ಬ ಮಗಳಿದ್ದಾಳೆಯೇ ?"

ಮಗುವಿಗೆ ಎರಡೂ ಕೈಗಳಿಂದ ಸ್ವಾಗತ ನೀಡಿ 'ಹೌದು' ಎಂಬಂತೆ ತಲೆ

ಯಾಡಿಸಿದಳು ಕಮಲೇಶ್. ಎದೆಯ ಹರ್ಷವೆಲ್ಲ ಮುಖಮುದ್ರೆಯಲ್ಲಿ ಹೊರ ಹೊಮ್ಮಿತು. ಚೇತನಳಿಗೆ ತಾನು ಪರಕೀಯಳೆಂಬ ಭಾವನೆ ಬರದಿರಲೆಂದು ಕೇಳಿದವರಿಗೆಲ್ಲಾ ತನ್ನ ಮಗುವೆಂದೇ ಹೇಳಿಕೊಳ್ಳುತ್ತಿದ್ದಳು ಕಮಲೇಶ್. ಮಗುವಿನ ನೀಲಿ ಬಣ್ಣವನ್ನು ಗಮನಿಸಿದ ಸಕ್ಕೂ–"ಮಗುವಿನ ಬಣ್ಣವೇಕೆ ಹೀಗಿದೆ?"

"BLUE BABY"

"ಓ....! ಹಾಗಿದ್ದರೆ ಆಪರೇಷನ್ ಆಗಬೇಕೆ?"

"ಹೌದು ಸಕ್ಕು. ಇದುವರೆವಿಗೆ ನಾನೆಷ್ಟು ಆಪರೇಷನ್ ಮಾಡಿದ್ದೇನೋ ....ಈಗ ನನ್ನ ಮಗುವನ್ನು ಇನ್ನೊಬ್ಬರಿಗೆ ಒಪ್ಪಿಸುವುದೆಂದರೆ ನಿಜವಾಗಿಯೂ ನನಗೆ ಬಹಳ ಕಷ್ಟ."

ತಟ್ಟನೆ ಅಂತರಂಗದ ನೋವು ಮುಖಭಾವದಲ್ಲಿ ತಳಕ್ಕನೆ ಸುಳಿದು ಮಾಯವಾಯಿತು.

"ಓ....ನಿನಗೇ ಹೀಗೆನಿಸಿದರೆ....?"

ಕಮಲೇಶ್ ಪ್ರಯತ್ನಪೂರ್ವಕವಾಗಿ ಮುಗುಳುನಗೆ ಬೀರಿದಳು. ಆ ಪ್ರಶ್ನೆ ಉದಿಸಿದಾಗ ತನ್ನ ಅಂತರಂಗವನ್ನೆ ಪರೀಕ್ಷಿಸಿಕೊಂಡಂತಾಗುತ್ತದೆ.... ಸಹಜವಾಗಿ ಸಂದಿಗ್ಧತೆಗೊಳಗಾದಂತೆ ಭಾಸವಾಗುತ್ತದೆ....ಆಗ ಆ ಅಮಾಯಕವಾದ ಭಾವುಕತೆಗೆ ತಂತಾನೆ ಮಾರುಹೋದರೂ ಮರುಘಳಿಗೆಯಲ್ಲಿ ಸಾವರಿಸಿಕೊಳ್ಳುತ್ತಾ ಭಗವಂತನನ್ನು ಮನದಲ್ಲೇ ಪ್ರಾರ್ಥಿಸಿಕೊಳ್ಳುವಳು. ಆದರೆ ಮತ್ತೆ ಮನಸ್ಸು ಕುಂಟುವುದು....ಚಂದ್ರಕಾಂತನನ್ನು ಸಹಚರಿಯನ್ನಾಗಿ ಆರಿಸಿಕೊಳ್ಳುವಾಗ....ಧ್ಯೇಯಸಾಧನೆಯ ಹಂಬಲವನ್ನು ಎದೆಯಲ್ಲಿ ತುಂಬಿಕೊಳ್ಳುವಾಗ ಅದೇ ಭಗವಂತನನ್ನು ಎಷ್ಟುಬಾರಿ ಪ್ರಾರ್ಥಿಸಲಿಲ್ಲ? ಕದಾಚಿತ್ ಆತನ ಹೆಸರೆತ್ತಲೂ ಸಹ ಈಗ ಸಂಕೋಚವೆನಿಸುತ್ತದೆ....ಆದರೂ ಸಹ, ವಿಧಿಯಿಲ್ಲ....ಒಂದಾನೊಂದು ಕಾಲದಲ್ಲಿ ಅಜ್ಞಾನ, ಅನ್ಯಾಯಗಳೆರಡೂ ಒಂದೇ ವಸ್ತುವಿನ ಅಕ್ಕಪಕ್ಕಗಳೆಂದು ಪರಿಭಾವಿಸಿದ್ದ ಮನಸ್ಸು ಈಗ ಆ ಅಭಿಪ್ರಾಯದಿಂದ ಬಿಡುಗಡೆ ಹೊಂದಿ, ವಿದ್ಯಾಬುದ್ಧಿಗಳಿಂದ....ಅನುಶಾಸನಗಳಿಂದ ಪ್ರತಿರೂಪ ಕೊಡುವುದಾಗಲೀ ಪರಿವರ್ತನೆ ಹೊಂದಿಸುವುದಾಗಲೀ ಅಸಂಭವ ಎಂಬ ತೀರ್ಮಾನಕ್ಕೆಡೆಕೊಟ್ಟಿದೆ... ಪ್ರಸ್ತುತ, ಡೋಲಾಯಮಾನ

ಸ್ಥಿತಿಯಲ್ಲಿ ಅವಳು ಯೋಚಿಸುತ್ತ ನುಡಿದಳು "ಭಗವಂತ ಕೊನೆಗೂ ನಿನ್ನನ್ನು ಪಾರುಮಾಡಿದ. ಆ ಒಂದು ಆಶಾಕಿರಣ ಆತನ ಹೆಸರನ್ನು ಮತ್ತೆ ಮತ್ತೆ ಹೇಳಿಸುತ್ತದೆ."

ಸಕ್ಕೂ ಹೊರಟು ನಿಂತಾಗ ಇಳೆಯ ಮೇಲೆ ಮಬ್ಬುಗತ್ತಲು ತೆರೆ ತೆರೆಯಾಗಿ ಹರಡುತಿತ್ತು. ಅವಳು ನಿರ್ಗಮಿಸಿದ ಸ್ವಲ್ಪ ಹೊತ್ತಿನೊಳಗಾಗಿ ಆತ್ಮಾರಾಂ ಕರ್ವೆ ಸಂಸಾರ ಸಹಿತನಾಗಿ ಆಗಮಿಸಿದ. ಚಿತ್ರಸೇನ್ ಕರ್ವೆ ಪತ್ನೀ ಸಮೇತನಾಗಿ ಹಿಂದೆ ನಡೆದು ಬಂದ. ಎಲ್ಲರ ಪ್ರೀತಿ ವಿಶ್ವಾಸಗಳಿಗೂ ಚೇತನಾ ವಸ್ತುವಾದಳು. ಚಿತ್ರಸೇನ ಅವಳನ್ನೆತ್ತಿಕೊಂಡು ಮುದ್ದು ಮಾತು ಗಳ ಸವಿಯನ್ನುಣ್ಣತೊಡಗಿದ. ಹೃದಯ ಪ್ರೇಮದ ಆಗರವಾಗಿ ಮನಸ್ಸು ಅವಳಲ್ಲೇ ಸಂಪೂರ್ಣ ನೆಲೆಗೊಂಡಿತು.

"ಚಿತ್ರಸೇನ ಅಮೇರಿಕೆಯಲ್ಲಿ ಐದು ವರುಷ ಇದ್ದು ಬರಲು ಹೊರಟಿ ದ್ದಾನೆ ಕಮಲೇಶ್." ಆತ್ಮರಾಂ ಕರ್ವೆ ಬಿತ್ತರಿಸಿದರು. ನಗುಮುಖದ ಕಪೋಲಪಾಲಿ ವಿಕಸನಗೊಂಡಿತು.

"ಅವರೇನೋ ಹೊರಡುತ್ತಾರೆ....ನನ್ನ ಗತಿಯೇನು ಎಂಬಂತಾಗಿದೆ ನನಗೆ. ಅಷ್ಟು ದಿನ ಒಬ್ಬಳೇ ಕಾಲಹರಣ ಮಾಡುವುದೆಂದರೆ ಕಷ್ಟ. ಸುಚಿತ್ರ ಸೇನನೂ ಸದ್ಯಕ್ಕೆ ಹಿಂತಿರುಗುವ ಯೋಚನೆಯಲ್ಲಿಲ್ಲ." ಹೇಮರತಿ ಕರ್ವೆ ತನ್ನಂತರಂಗವನ್ನು ದುಗುಡದಿಂದ ತೋಡಿಕೊಂಡಳು.

ಸ್ವರ್ಣಮಾಲಿನಿಗೆ ಕರುಳು 'ಚುರುಕ್' ಎಂದಿತು.

"ಒಳ್ಳೆಯದು, ಸುಖವಾಗಿ ಹೋಗಿ ಬನ್ನಿ....ಬೇಗನೆ ಹಿಂದಿರುಗಿದರೆ ಮಾಮಿಗೆ ಉಪಕಾರ ಮಾಡಿದಂತಾಗುತ್ತದೆ." ಎಂದಳು ಕಮಲೇಶ್.

ಸ್ವರ್ಣಮಾಲಿನಿ ಹೇಮರತಿಯರು ಕೂಡಿ ಕಷ್ಟಸುಖಗಳನ್ನು ಕುರಿತು ಮಾತನಾಡುವಾಗ ಪರಿಸ್ಥಿತಿಗೆ ನಾನೇ ಕಾರಣ ಎಂಬ ಭಾವನೆ ಮನದಲ್ಲೇಳು ವುದು....ಆಗ ಎಷ್ಟೇ ಸಾವರಿಸಿಕೊಂಡರೂ ಅಪಾದಮಸ್ತಕವೂ ಮನಃಕ್ಷೋಭೆ ಯಿಂದ ಸಂಕುಚಿತಗೊಳ್ಳುವಂತೆ ಭಾಸವಾಗಿ ಕೆಲಸ ಕಾರ್ಯಗಳ ನೆವದಲ್ಲಿ ಹೊರ ಸರಿಯುವಳು....ಆ ದುಃಖಿನಿಯನ್ನು ಇತರರು ಯಾವರೀತಿ ಅರ್ಥಮಾಡಿ ಕೊಂಡರೂ "ನಾನಿಟ್ಟ ಹೆಜ್ಜೆ ದಿಟ್ಟಹೆಜ್ಜೆ ಅದರಲ್ಲಿ ನಾನು ಸೋತರೂ ಸಹ ಗೆದ್ದಂತೆ." ಎಂದು ತನಗೆತಾನೇ ಸಮಾಧಾನ ಹೊಂದುತ್ತದೆ ಅಂತರಾತ್ಮ.

ಮಾಲತಿ ಮದುವೆಯಾದನಂತರ ಎರಡನೇ ವರ್ಷದ ಮಾಸ್ಟರ್ ಡಿಗ್ರಿಯನ್ನು ಮುಗಿಸಲು ಕಲಿಕತ್ತೆಯಲ್ಲೇ ಉಳಿದಿದ್ದು ಇದೀಗ ತಾನೇ ಇಲ್ಲಿಗೆ ಬಂದಿದ್ದಳು....ಪರೀಕ್ಷೆಗೆ ಬಹಳವಾಗಿ ಓದಿದ್ದರಿಂದಲೋ ಏನೋ ಸಣ್ಣಗಾಗಿದ್ದಾಳೆ. ಆದರೂ ವರಲಕ್ಷ್ಮಿಯಂತೆ ಶೋಭಿಸುವ ಆ ರೂಪ ಮಾನವ ಮಾತ್ರರಲ್ಲಿ ಅಪರೂಪ ಅವಳನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಪ್ರೇಮಾತಿಶಯದಿಂದ ಮಾತುಕತೆಯಲ್ಲಿ ನಿಮಗ್ನಳಾದಳು. ಮಗುವನ್ನು ಮುದ್ದುಗೈಯುತ್ತಾ ಚಿತ್ರಸೇನ-"ಇಂತಹ ಮಕ್ಕಳಿದ್ದಲ್ಲಿ ಹೊತ್ತು ಕಳೆದುದೇ ತಿಳಿಯುವುದಿಲ್ಲ ನೋಡಿ.... ಹುಡುಗಿ ಬಹಳ ಬುದ್ಧಿವಂತೆ."

ಕಮಲೇಶ್ ಆದುವರೆಗೂ ಅವನೊಂದಿಗೆ ಸಂಕೋಚದಿಂದ ನಡೆದುಕೊಂಡಿದ್ದಳು. ಮಾತುಕತೆಗಳಲ್ಲೂ ಮೊಟಕು ಮೊಳೆಯುತಿತ್ತು. ಈಗ ಹಳತನ್ನು ಮರೆತು ಉತ್ಸಾಹದಿಂದ ಮಾತಾಡಲು ಮುಂದಾದಳು, "ಹೌದು, ಅದನ್ನು ಎಷ್ಟು ಬಾರಿ ಹೇಳಿದರೂ ಮುಗಿಯುವಂತಿಲ್ಲ. ಮೌನಿಗಳನ್ನು ಸಹ ಮಾತನಾಡಿಸುತ್ತಾಳೆ....!"

ಆಗ ಇಬ್ಬರ ಮುಖದಲ್ಲೂ ಮೂಡಿದ ಮುಗುಳು ನಗೆ ಶರತ್ಕಾಲೀನ ಪ್ರಭಾತದಲ್ಲಿ ಸೂರ್ಯಾತಪವು ಚೆಲ್ಲಿದಂತಿತ್ತು.

ಅದೇ ಸಮಯಕ್ಕೆ ಸರಿಯಾಗಿ ಚಂದ್ರಕಾಂತ್ ಆಗಮಿಸಿದ. ಅವರಿಬ್ಬರ ತುಟಿಗಳಲ್ಲಿ ನಲಿಯುತಿದ್ದ ಸಮ್ಮೋಹನಕರವಾದ ನಗು ಮನಸ್ಸಿಗೆ ಮುಳ್ಳು ಮುರಿಯಿತು. ತಕ್ಷಣ ಅವರ ಕೂಟದಿಂದ ತಪ್ಪಿಸುವ ಉದ್ದೇಶದಿಂದ ಕೇಳಿದ "ನಾವೊಂದಿಷ್ಟು ಹೊರಗಡೆ ಹೋಗಿ ಬರೋಣವೇ ಕಮಲೇಶ್?" ದನಿಯ ತೀಕ್ಷ್ಣ ವಿಜಾತೀಯತೆ, ಧೂಮನೀಲಿಮೆ ಆವರಿಸಿದಂತಿದ್ದ ಮುಖದ ವರ್ಣಮಾಲಿಕೆ ಅಂತರಂಗದ ಪರಿಸ್ಥಿತಿಯನ್ನು ಸಾರಿ ಹೇಳುತಿದ್ದುವು.

ಅತಿಥಿಗಳ ಮುಂದೆ ಪ್ರದರ್ಶಿತವಾದ ಅವನ ವರ್ತನೆ ಅಸಹ್ಯವಾದರೂ ಸಹಿಸಿಕೊಂಡು ಮುಖವನ್ನು ಕರವಸ್ತ್ರದಿಂದ ತೀಡಿಕೊಂಡಳು ಕಮಲೇಶ್. ಚಿತ್ರಸೇನ ಅವನ ಮುಖಮುದ್ರೆಯನ್ನು ಒಂದು ಕ್ಷಣ ನಿಟ್ಟಿಸಿನೋಡಿ, ಮನದ ಕಹಿಯನ್ನಿಂಟಿ ಅಂದ "ನೀವು ಹೊರಡಿ ಡಾಕ್ಟರ್!"

ಸಹಜ ಭಾವದಿಂದ ಇಬ್ಬರಿಗೂ ಎಂಬಂತೆ ಒಂದೇ ಉತ್ತರ ಹೇಳಿದಳು

ಮಧುರ ಸ್ವನದಿಂದ–"ಇಂದು ವಿಶ್ರಾಂತಿಗಾಗಿಯೇ ಮನೆಯಲ್ಲುಳಿದೆ. ನಾನು ಹೊರಗೆಲ್ಲೂ ಹೋಗಲಾರೆ."

ಚಂದ್ರಕಾಂತನ ಮುಖದಲ್ಲಿನ ಒಗರು ಹೆಪ್ಪುಗಟ್ಟಿತು. ಅಲ್ಲಿ ನಿಲ್ಲದೆ ಆ ಕ್ಷಣ ಹೊರಬಿದ್ದ. ಅವನ ಅನಿರೀಕ್ಷಿತ ಆಗಮನದೊಂದಿಗೆ ಹಠಾತ್ತನೆ ಸಂಭವಿಸಿದ ನಿರ್ಗಮನವು ಕಮಲೇಶಳಿಗಷ್ಟೇ ಅಲ್ಲದೆ ಎಲ್ಲರಿಗೂ ಗರ ಬಡಿಸಿತು. ಆ ಮುಹೂರ್ತದಲ್ಲಿ ಪರಸ್ಪರ ಮುಖ ನೋಡಿಕೊಂಡರೂ ತುಟಿಗಳು ಬಿರಿಯಲಿಲ್ಲ. ಕಮಲೇಶ್ ಅವಮಾನ ಕ್ಷೋಭೆಯಿಂದ ಕುಗ್ಗಿದರೂ ತೋರಗೊಡದಿರಲು ಮಾತುಕತೆಯಲ್ಲಿ ನಿಮಗ್ನಳಾದಳು. ಹೃದಯ ಹೆಗ್ಗಲ್ಲಿನ ಗೂಡಾಯಿತು. ಚಿತ್ತ ಅವನ ಹಿಂದೆಯೇ ಹಾರಿ ಸಣ್ಣತನವನ್ನು ಮೆಲ್ಲಲಾರದೆ ಮೆಲ್ಲುತಿತ್ತು.

ಆ ವೀರೋಚಿತವಾದ ನಡಿಗೆ, ಹಠದ ಸ್ವಭಾವ, ಅಭಿಪ್ರಾಯಗೌರವ, ಮಾತಿನ ಸರಣಿ ಎಲ್ಲವೂ ಸಾಮಾನ್ಯವಾಗಿ ಅಂದಿನಂತೆಯೇ ಇದ್ದರೂ ಏನೋ ಒಂದು ಬಗೆಯ–ಊಹಿಸಲಾಗದಂತಹ ಕಟು ಮಾರ್ಪಾಡು ಕಾಣಿಸುತ್ತಿದೆ. ಆದರೂ ಸಹ ಯಾವುದೋ ಒಂದು ಬಗೆಯ ಆಕರ್ಷಣೀಯತೆ ಇದೆ. ಒಲವೋ ಕೂಡಿಕೊಂಡ ಕಠೋರ ಸತ್ಯವೋ ದೇವರಿಗೇ ಗೊತ್ತು. ಪತಿಗಾಗಿ ಜೀವ ತೆತ್ತ ಚೇತನಾ ವಂಶೋದ್ಧಾರಕ್ಕಾಗಿ ಮಗುವನ್ನು ಬಯಸಿದ ಚಂಪಕಮಾಲಿನಿ ಬಾಳಿಗಾಗಿ ಕಲೆಯನ್ನು ಬಿಟ್ಟುಕೊಟ್ಟ ವನಮಾಲಿ ಮನಃಪಟಲದ ಮೇಲೆ ಸುಳಿದಳಿದರು.

ಮನೋಮಂದಿರ ದಳ್ಳುರಿಯಿಂದ ದಹಿಸುತಿದ್ದರೂ ಹೃದಯ ಬನದಲ್ಲಿ ಸಾಂತ್ವನದ ಹೂ ಮಳೆ ಕರೆಯುತ್ತಲೇ ಇದೆ. ಕಳೆದುಳಿದ ಉತ್ಸಾಹದಿಂದ ರಕ್ತದ ಪ್ರತಿಕಣವೂ ಉತ್ತೇಜನಗೊಳ್ಳುತ್ತಿದೆ....ಇದೇ ಮೊದಲಲ್ಲ ಇದೇ ಕೊನೆಯಲ್ಲ ನಡೆಯುವಷ್ಟು ಕಾಲ ನಡೆಯಲಿ ಎಂದುಕೊಂಡಳು ಕಮಲೇಶ್.

ಚಾಂದ್ರಮಾನವು ಚಂದ್ರಿಕೆಯ ಉಜ್ವಲ ಕಾಂತಿಯಲ್ಲಿ ಕರಗಿತು.

ದಿನಗಳು ಉರುಳಿದುದಾಗಲೀ ಮಾಮರಗಳು ಹೊಂದಳಿರಿನಿಂದ ಅಲಂಕೃತವಾದುದಾಗಲೀ ಗಮನಕ್ಕೆ ಬರುವುದರೊಳಗಾಗಿ ಯಾನವು ನಡೆದು ಹೋಗಿದೆ.

ಚೇತನಳಿಗೆ ಒಮ್ಮೊಮ್ಮೆ ನೆಗಡಿ ಕೆಮ್ಮುಲು ಜ್ವರ ಬರುತಿದ್ದುದುಂಟು.... ಇಂದು ಇದ್ದಕ್ಕಿದ್ದಂತೆ ಜ್ವರವೇರಿದುದರಿಂದ ಆಸ್ಪತ್ರೆಗೆ ಹೊರಟಿದ್ದ ಕಮಲೇಶ್ ಹೋಗದೆ ಮನೆಯಲ್ಲುಳಿದಳು. ಚಂದ್ರಕಾಂತನ ರೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲದೆ ತಾನೊಬ್ಬನೇ ಆಸ್ಪತ್ರೆಗೆ ಹೋಗಿ ಬಂದು ಆರಾಮ ಕುರ್ಚಿಯಮೇಲೆ ಮೈ ಚೆಲ್ಲಿದ. ಕಮಲೇಶ್ ಮಗುವಿನ ಬಳಿ ಪಲ್ಲಂಕದ ಮೇಲೆ ಕುಳಿತಿದ್ದಳು ಅಷ್ಟಮೀಚಂದ್ರನಂತೆ ಮನೋಹರೆಯಾದ ಮಡದಿಯನ್ನು ಪ್ರಸನ್ನ ಭಾವದಿಂದ ನಿಟ್ಟಿಸಿತು ಪ್ರೇಮಪೂರ್ಣನೋಟ. ಮಡಿಲು ತುಂಬಿದ ಶರೀರ ನಸು ತೆಳುವಾಗಿದ್ದರೂ ಹಣ್ಣಿನ ಭಾರಕ್ಕೆ ಜಗ್ಗುವ ಮರದಂತೆ ಜಗ್ಗಿ ಮಾತೃಪದದ ಹಿರಿಮೆಯನ್ನು ಹೊರ ಸೂಸುತಿತ್ತು. ಸಗ್ಗಕ್ಕೆ ಸೋಪಾನದೋಪಾದಿಯಲ್ಲಿ ಹೃದಯಬನದ ರಾಣಿಯು ಕಣ್ಗೆಸೆಯುವಾಗ ಮಾನಸ ಸರೋವರದಲ್ಲಿ ಪರಮಾನಂದದ ಅಲೆಗಳು ಉಕ್ಕಿ ಅತ್ತಿತ್ತ ತುಯ್ಯಲಾಡಿದುವು.

ದಶಕದಶಕಗಳನ್ನು ಹರಿಹಾಯ್ದು ಚಕಚಕಚಕ ಮುಂದೋಡಿದ ಆತನ ಕಲ್ಪನೆಯ ಕುದುರೆ ಮಕ್ಕಳು ಮರಿಯಿಂದ ಕೂಡಿದ ತುಂಬು ಜೀವನದ ಸವಿಯನ್ನು ಸಾನಂದದಿಂದ ಮೆಲ್ಲತೊಡಗಿತು. ಎಂದೆಂದಿಗೂ ಈ ಜೀವನ ಪ್ರೇಮಮಯವಾಗಿದ್ದರೆ....ಇದ್ದರೇನೋ ಸರಿ....ಆದರೆ ಈ ಜೀವನ ಎಂದೆಂದಿಗೂ 'ಆದರೆ' ಮಯ. ಮರುಘಳಿಗೆಯಲ್ಲೇ ಮನಸ್ಸು ಮಿಡುಕಿ ಅದರ ಸಾಧ್ಯತೆಯನ್ನು ಕುರಿತು ಚಿಂತಿಸಿತು. ಹೆಣ್ಣು ಹೊನ್ನು ಗಳಿಗೆ ತಿಜೋರಿಯಿಲ್ಲದಿದ್ದರೆ ಅವು ಕಳ್ಳಕಾಕರ ಪಾಲಾಗವೇ? ಚರಿತ್ರಹೀನರ ಮಧ್ಯೆ ಕಲೆಯುವುದರಿಂದ ಹೆಣ್ಣು ಕಲುಷಿತಳಾಗಳೇ? ಹಾ....! ತಿಳಿದೂ ತಿಳಿದೂ ಇರುಳು ಕಂಡ ಬಾವಿಗೆ ಹಗಲು ಧುಮುಕುವ ಹವ್ಯಾಸ ಕಷ್ಟ....ಚಿಂತಿಸುತ್ತ ಚಿಂತಿಸುತ್ತ ದಿನಾಂತಕಾಲೀನ ಶ್ರೀಹೀನ ಕಾಳಿಕೆಯಂತೆ ಅಂತರಂಗ ಕಠೋರವಾಗಿ ಮಾರ್ಪಟ್ಟಿತು.

"ಮಗುವಿಗೆ ಜ್ವರ ಇಳಿಯಲಿಲ್ಲ ಡಾಕ್ಟರ್!"

ಗಗನವಿಹಾರಿಯಾಗಿದ್ದ ಮನಸ್ಸನ್ನು ಮಡದಿಯ ಶ್ರೀದನಿ ಧರಿತ್ರಿಗಿಳಿ ತಂದಿತು.

"ಏನು ಮಾಡಬೇಕೆನ್ನುತ್ತೀರಿ? ಡಾ|| ಶುದ್ಧೋಧನರಿಗೆ ಕರೆ ನೀಡಲೇ?"

"ಆಗಲೇ ಅವರಿಗೆ ಟೆಲಿಫೋನು ಮಾಡಿದ್ದೆ. ಇದೇ ಔಷಧಿ ಕೊಡಿ ಸಂಜೆ

ಯೊಳಗಾಗಿ ಬಂದು ನೋಡುವೆ ಎಂದಿದ್ದಾರೆ." ಚಿಂತಾಮಗ್ನಳಾಗಿ ನುಡಿದಳು ಕಮಲೇಶ್.

"ಸರಿ....ಮತ್ತೆ...." ವಿಷಯ ಅಷ್ಟಕ್ಕೆ ತುಂಡುಗಡಿಯಿತು.

ಮಗುವಿನ ಸೂಕ್ಷ್ಮ ಪ್ರಕೃತಿಗೂ ಆತನ ಶಿಲಾಕಾಠಿಣ್ಯ ಅಂತರಂಗಕ್ಕೂ ತಾಳೆ ಹಾಕಿದಾಗ ಪ್ರಚಂಡ ಬಿರುಗಾಳಿಗೆ ಸಿಲುಕಿದ ಮೇಘಮಂಡಲದಂತಾಯಿತು ಮನಃಸ್ಥಿತಿ. ಕಮಲೇಶ್ ಅವನೆಡೆಗೆ ಕ್ಷಣಿಕ ನೋಟವನ್ನು ಬೀರಿ ಮತ್ತೆ ಮಗುವಿನ ಚಿಂತನೆಯಲ್ಲಿ ತೊಡಗಿದಳು.

ಆಗಿನಿಂದಲೂ ಅಲ್ಲೇ ಕುಳಿತಿದ್ದರೂ ಅವಳ ಗಮನ ತನ್ನೆಡೆಗೆ ಹರಿಯಲಿಲ್ಲವೇಕೆ? ಮಗುವಿನ ನೆವದಲ್ಲಿ ನಿರ್ಲಕ್ಷ್ಯ....ತಾತ್ಸಾರ. ತಾನೇ ತಾನೆಂಬ ಅಹಂಕಾರ! ಎಷ್ಟೆಂದರೂ ಹೆಣ್ಣಿಗೆ ಸ್ವಚ್ಛಂದ ವ್ಯವಹಾರ ಸರಿಯಲ್ಲ. ನಿಯತಿ ನಿಯಮಗಳಿಲ್ಲದಿದ್ದರೆ ಭಾರತ ಎಂದೂ ಭಾರತವಾಗಿ ಉಳಿಯದು....ಚಂದ್ರಕಾಂತ್ ತನ್ನೊಳಗೇ ಸಿಡಿಮಿಡಿಗೊಂಡ. ಸ್ವಾಭಿಮಾನ ಸ್ತಬ್ಧತೆಯ ಬಯಲನ್ನು ದಾಟಿ ಅಶಾಂತತೆಯ ಘನಕೃಷ್ಣಕಾಂತಾರವನ್ನು ಪ್ರವೇಶಿಸಿತು. ಇನ್ನು ಅವನಿಂದ ಅಲ್ಲಿ ಕೂಡಲಾಗದೆ ಮರ್ಮಹತನಾಗಿ ಬಟ್ಟೆ ಧರಿಸಿದ. ಆವನ ಆತುರವನ್ನು ಲಕ್ಷಿಸಿ-"ಈಗಲೇ ಹೋಗಬೇಕೆ?...."

ಕನ್ನಡಿಯ ಮುಂದೆ ನಿಂತು ರೋಮರಾಜಿಯಿಂದಾವೃತವಾದ ದಟ್ಟಪುಷ್ಟ ಕೈಯಿಂದ ಕೂದಲು ತಿದ್ದಹತ್ತಿದ, ಮಾತಾಡಲಿಲ್ಲ.

"ಹೋಗುವುದೆಲ್ಲಿಗೆ?" ಆಶ್ಚರ್ಯತೃಷಿತಲೋಚನಗಳಿಂದ ನಿಟ್ಟಿಸುತ್ತಾ ಮತ್ತೆ ಕೇಳಿದಳು ಕಮಲೇಶ್.

"ನರಕಕ್ಕೆ!"

ಧೀರ ಗಂಭೀರಭಾವದಿಂದ ಅವನು ಹೊರಬಿದ್ದ. ಆ ಅನಿರೀಕ್ಷಿತ ವ್ಯವಹಾರ ಶ್ವಾಸೋಚ್ಛ್ವಾಸಗಳನ್ನು ಅದುಮಿ ಹಿಡಿದಂತಾಗಿ ಸಂಧಿಗ್ಧತೆಗೊಳಗಾದ ಮನಸ್ಸು ಕಳವಳವನ್ನು ತುಂಬಿಕೊಂಡಿತು. ಖಣಿಲ್ಲನೆ ಸದ್ದುಮಾಡಿ ಅವನು ಹೊರ ಹೋದುದನ್ನು ವರದಿ ಮಾಡಿತು ಪ್ರಾಕಾರದ ಬಾಗಿಲು. ಅಶಾಂತ ಕ್ಷೋಭೆಯಿಂದ ಮುಖಮಂಡಲ ಕಳಾಹೀನವಾಯಿತು, ಕಮಲೇಶ್ ಯೋಚನಾಕ್ರಾಂತಳಾದಳು. ಮಗು ಶುಷ್ಕಪುಷ್ಪದಂತೆ ಬಳಲಿ ಮಲಗಿತ್ತು. ನಿಮೀಲಿತ ನಿಶ್ಚಲ ನೇತ್ರಗಳಲ್ಲಿ ನಿದ್ದೆ ತುಂಬಿ ಬಂದಿದೆ. ಕ್ಷೀಣಿತ ದೇಹಲತೆ ಮಾತ್ರ ಹೃದ

ಯದ ಚಲನವಲನಗಳನ್ನು ರುದ್ಧಗೊಳಿಸಿ ನಯನಯುಗ್ಮಗಳನ್ನು ಅಚಲಗೊಳಿಸಿತು. ಹಾಗೆ ಮೈಮರವಟ್ಟಂತೆ ಎಷ್ಟು ಹೊತ್ತು ಉರುಳಿತೋ....ತೀವ್ರ ಮಾನಸ ಸಂತಾಪದಿಂದ ಮೈ ಉರಿಯುತಿದ್ದುದು ಸಹ ಗಮನಕ್ಕೆ ಬರಲಿಲ್ಲ; ಎದೆಯಾಳದಲ್ಲಿ ಸಂತಾಪದ ಝರಿ ಎಣೆಯಿಲ್ಲದೆ ಹರಿದಾಡಿತು.

ನಿರ್ಮಲ ಚಿತ್ತದಿಂದ ಯಾರ ಶುಭಚರಣಗಳಲ್ಲಿ ಆತ್ಮಾರ್ಪಣೆ ಮಾಡಿಕೊಂಡಳೋ ಆ ದುರ್ದಾಂತ ಪರಾಕ್ರಮಿಯ ಹೆಜ್ಜೆಗಳ ವಿಸ್ತಾರವನ್ನಾಗಲೀ ಮುಷ್ಟಿಯ ದೃಢತೆಯನ್ನಾಗಲೀ ಯಾವ ಅಳತೆಗೋಲೂ ಅಳೆಯಲು ಶಕ್ಯವಾಗದೇನೋ ಎಂಬಷ್ಟು ಗಹನ. ಹೃದಯದೇಗುಲದಲ್ಲಿ ಬೆಳಗಿಸಿದ ರಾಗಜ್ಯೋತಿಯ ಕುಡಿಯನ್ನು ಎತ್ತರಿಸಿ ಉಜ್ವಲಗೊಳಿಸುವ ಮೊದಲೇ ಆತನ ದಿಟ್ಟ ಹೆಜ್ಜೆಗಳು ಮರುಭೂಮಿಯ ಕಡೆಗೆ ಹೇಳದೆ ಕೇಳದೆ ನುಗ್ಗುವುದು ಸಾಮಾನ್ಯವಾಗಿಹೋಗಿದೆ. ಹೆಣ್ಣಿನ ಸನಾತನತೆಗೆ ಇಂದಿನ ನೂತನತೆ ಬೆರೆತರೆ ತಪ್ಪು-ಅಪಾರ್ಥಗಳ ಕರಾಳರೂಪ ಉದ್ದಂಡವಾಗಿ ಬೆಳೆಯುತ್ತದೆಯೇ ಹೊರತು ಇನ್ನೇನೂ ಇಲ್ಲ. ಪ್ರಕ್ಷುಬ್ಧ ವಾತಾವರಣದಲ್ಲಿ ವ್ಯಕ್ತಿಗೆ ಇರಬಹುದಾದ ಗೌರವ ಸವೆಯತೊಡಗಿದಾಗ ಜೀವನೋದ್ದೇಶವನ್ನು ವಿಶ್ಲೇಷಿಸುವುದೂ ಸಹ ಶಕ್ಯವಿಲ್ಲ. ಯೋಚಿಸಿದಷ್ಟೂ ಮನದಲ್ಲಿ ಅತೀವ ಕಳವಳ....ಏನೋ ಒಂದು ಬಗೆಯ ಉದಾಸೀನ....ಇನ್ನೇನೋ ಒಂದು ಬಗೆಯ ಜಿಗುಪ್ಸೆ....ತಾಳಲಾಗದ ಪರಿತಾಪ.

ಹೊತ್ತು ಲೀಲಾಜಾಲವಾಗಿ ಉರುಳುತ್ತಿದೆ. ಟಿಕ್. ಟಾಕ್. ಟಿಕ್. ಟಾಕ್. ಟಿಕ್. ಟಾಕ್.

ಆ ಟಿಕ್ ಟಾಕ್ ಸದ್ದಿನ ಗಹನವಾದ ಅರ್ಥ ಇದುವರೆವಿಗೂ ನಿಗೂಢವಾಗಿತ್ತು. ಅದನ್ನು ಅರಿಯುವಷ್ಟು ಸಹನೆಯಾಗಲೀ ಸಮಯವಾಗಲೀ ಇರಲೂಇಲ್ಲ. ಈಗ ಯೋಚಿಸಿದರೆ ಹೊಳೆಯುವ ಅರ್ಥ ಇದೇ. ನಿರ್ವೀರ್ಯತೆ ಅಸಮರ್ಥತೆ; ವಿಫಲತೆ.

ಧಿಕ್....!

ಬಗೆ ಕದಡಿದರೂ ಧೃತಿಗೆಡುವಷ್ಟು ಅಜ್ಞಾನಿಯಲ್ಲ ಆಕೆ. ಆ ಅಪೂರ್ವ ಕಳಾಯುಕ್ತ ಮುಖಮಂಡಲದಲ್ಲಿ ಮಿನುಗುವ ಅದ್ಭುತ ಶಾಂತಿಯು ಸ್ವಚ್ಛಕಾಂತಿಯಿಂದ ಅಮೃತಧಾರೆಯಂತೆ ತೊಟ್ಟಿಕ್ಕುತಿತ್ತು.

ಮಗುವಿನ ಸ್ಥಿತಿ ಒಂದೇ ರೀತಿ ಇತ್ತು. ಜ್ವರ ಇಳಿದರೂ ಮತ್ತೆ ಏರಿತು.

ಮರುದಿನವೂ ಆಸ್ಪತ್ರೆಗೆ ಹೋಗದೆ ಉಳಿದಳು ಕಮಲೇಶ್. ಚಂದ್ರಕಾಂತ್ ರಾತ್ರಿ ಈಕಡೆ ಮುಖ ಹಾಕದೆ ತನ್ನ ಮನೆಯಲ್ಲಿ ತಂಗಿದ್ದು ಹಾಗಿಂದ್ಹಾಗೇ ಆಸ್ಪತ್ರೆಗೆ ಹೋಗಿದ್ದುದರಿಂದ ಅವನಿಗೆ ಟೆಲಿಫೋನು ಮಾಡಿ ಮಗುವಿನ ಪರಿಸ್ಥಿತಿಯನ್ನು ಮುಂದಿಟ್ಟು ಹತ್ತು ಗಂಟೆಗೆ ಮಗುವಿನೊಂದಿಗೆ ಆಸ್ಪತ್ರೆಗೆ ಬರುವುದಾಗಿ ತಿಳಿಸಿ ಟ್ಯಾಕ್ಸಿಗೆ ಹೇಳಿಕಳುಹಿಸಿದಳು, ಕಮಲೇಶ್.

ಟ್ಯಾಕ್ಸಿ ಬಾಗಿಲಲ್ಲಿ ಬಂದು ನಿಲ್ಲುತ್ತಲೂ ಕಮಲೇಶ್ ತಾಯಿ ಮತ್ತು ಮಗುವಿನೊಂದಿಗೆ ಹೊರಟಳು. ಆಸ್ಪತ್ರೆಯನ್ನು ಸೇರಿದಾಗ ಡಾ|| ಶುದ್ಧೋಧನ ಡಾ|| ಯಶಪಾಲರು ಅವಳಿಗಾಗಿ ಅತ್ಯಂತ ಶ್ರದ್ಧೆಯಿಂದ ಕಾದಿದ್ದರು. ಒಡನೆ ಸೌಜನ್ಯಪೂರ್ವಕವಾಗಿ–"ಬನ್ನಿ ಡಾಕ್ಟರ್ !"

"ಪ್ರಣಾಮ್ ಸರ್ !" ಕರ ಜೋಡಿಸಿದಳು ಕಮಲೇಶ್. ಮುಖದಲ್ಲಿ ದುಗುಡದ ಛಾಯೆ ಮೂಡಿತ್ತು.

"ಪ್ರಣಾಮ್ ಜೀ !"

ಮಗುವಿಗೆ ಸಿಹಿನೀಡಿ ಮೆಲು ಮಾತುಗಳಿಂದ ಲಲ್ಲೆಗೈಯ್ಯುತ್ತಾ ಹೃದಯವನ್ನು ಆದ್ಯಂತವಾಗಿ ಪರೀಕ್ಷಿಸಿ–"ಡಾಕ್ಟರ್. ಎಷ್ಟು ಬೇಗನೆ ಆಪರೇಷನ್ ಮಾಡಿದರೆ ಅಷ್ಟು ಕ್ಷೇಮ."

ವಿಷಯ ತಿಳಿದು ಏನು ಮಾಡುವುದೆಂದು ಯೋಚಿಸಿದಳು ಕಮಲೇಶ್.... ತನ್ನ ಗರ್ಭಸ್ಥ ಶಿಶುವಿಗೆ ಆಗಲೇ ಎಂಟು ತಿಂಗಳು. ಇನ್ನು ಮೂರು ನಾಲ್ಕು ವಾರಗಳಲ್ಲಿ ತಾನೇ ಆಸ್ಪತ್ರೆ ಸೇರಬೇಕು. ಈಗಲೇ ಆಪರೇಷನ್ ಮಾಡಿಸಿದರೆ ಆ ಅವಧಿಯೊಳಗಾಗಿ ಮಗು ಚೇತರಿಸಿಕೊಂಡಾಳು. ಅಷ್ಟಾದರೆ ಅನುಕೂಲ.... ಯೋಚನೆಯ ಚಕ್ರ ಸುಳಿಸುತ್ತುತ್ತಲೇ ಇತ್ತು.

"ಹೇಗೂ ನೀವೊಂದು ತಿಂಗಳು ರಜೆ ತೆಗೆದುಕೊಳ್ಳುತ್ತೀರಷ್ಟೆ, ಆ ಅವಧಿಯೊಳಗೆ ಮಾಡಿಸಿದರೆ ನಿಮಗೂ ಅನುಕೂಲ." ತಮ್ಮ ಸಲಹೆ ನೀಡಿದರು ಡಾ|| ಶುದ್ಧೋಧನ.

ಡಾ|| ಯಶಪಾಲರೂ ಹಾಗೇ ಅಂದರು "ಈಗಲೇ ಮಾಡಿಸಿ ಬಿಡಿ, ಡಾಕ್ಟರ್."

ಡಾ|| ಶುದ್ಧೋಧನ ತಮ್ಮ ಬಳಗದ ಕಿರಿಯ ಡಾಕ್ಟರುಗಳಿಗೆ ಹೀಗೆವಿವರಿಸಿದರು "ಎಳೆಯ ಮಗುವಿನ ಹೃನ್ನಾಳ ವ್ಯವಸ್ಥೆಯಲ್ಲಿ ಕಂಡು ಬರುವ ಅನೇಕ

ಪ್ರಯೋಜನಗಳು ವಯಸ್ಕರಿಗೆ ಇರುವುದಿಲ್ಲ. ವಯಸ್ಕರ ರೋಗಗಳಿಂದ ಪರಿಣಮಿಸುವ ರೋಗ ಪರಿವರ್ತನೆಗಳು ಮಕ್ಕಳಲ್ಲಿ ಉಂಟಾಗುವುದಿಲ್ಲ. ಮದ್ಯ-ಮಾದಕ ವಸ್ತುಗಳಲ್ಲಿರುವ ಅಪಾಯಕರ ಪ್ರಭಾವವನ್ನು ಮಕ್ಕಳ ಹೃದಯ ಅರಿಯದು. ದೀರ್ಘ ಅಸ್ವಸ್ಥತೆ ಹೃನ್ನಾಳ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತದೆ."

ಕಮಲೇಶ್ ವಿಜಾತೀಯವಾದ ದನಿಯಲ್ಲಿ ಹೇಳಿದಳು "ಮಗುವನ್ನು ನಿಮ್ಮ ಕೈಗೆ ಒಪ್ಪಿಸಿಬಿಡುವೆ ಡಾಕ್ಟರ್." ಆ ಮುಹೂರ್ತದಲ್ಲಿ ಎದೆಯ ನೆಲೆಯಲ್ಲಿ ಹೃದಯ ದ್ರವೀಭೂತವಾದಂತೆ ಭಾಸವಾಯಿತು.

"ದೇವರಿದ್ದಾನೆ. ಯೋಚಿಸಬೇಡಿ ಡಾಕ್ಟರ್." ಎಂದರು ಶುದ್ಧೋಧನ ಸಾಂತ್ವನಗೈಯ್ಯುವ ದನಿಯಲ್ಲಿ, ಕದಡಿದ ಚಿತ್ತವನ್ನು ಪರಿತೃಪ್ತಗೊಳಿಸುವಂತೆ.

ಕಮಲೇಶಳ ಹೃದಯ ವ್ಯಾಪ್ತಿಗೆ ತುಸು ಮೀರಿ ಮಿಡಿಯಿತು. ಚಂದ್ರಕಾಂತನಿಗೆ ಸುದ್ದಿ ನೀಡಿದ್ದರೂ ಮಗುವನ್ನೋಡಲು ಬರಲಿಲ್ಲವಲ್ಲಾ ಎಂಬ ಚಿಂತೆ ಮನವನ್ನು ಕೀಟದಂತೆ ಕೊರೆಯುತಿತ್ತು. ಆಪರೇಶನ್ ಥಿಯೇಟರಿಗೆ ಹೋಗಿ ಅವನನ್ನು ನೋಡುವ ಯೋಚನೆಯನ್ನು ಬಿಟ್ಟು ವಿದೀರ್ಣ ಹೃದಯವನ್ನು ಹೊತ್ತು ಹೊರಟಳು. ತಾಯಿಯ ಭುಜದ ಮೇಲೆ ತಲೆಯಿಟ್ಟು ಸಪ್ಪೆಯಾಗಿ ಮಲಗಿದ್ದ ಮಗು ತನ್ನ ಕಡೆ ಅತ್ಯಂತ ದೈನ್ಯತೆಯ ನೋಟ ಬೀರಿದಾಗ ಕಣ್ಣುಗಳಲ್ಲಿ ಫಳಕ್ಕನೆ ನೀರಾಡಿತು.

ಅಂದು ಆಪರೇಷನ್ ಥಿಯೇಟರು ಹೇಮುಲಾಲ್ ಚಂದಾನಿಯ ಒಡೆತನಕ್ಕೆ ಒಳಪಟ್ಟಿದ್ದರೂ ಚೇತನಳಿಗಾಗಿ ಅದನ್ನು ಸ್ವಲ್ಪ ಹೊತ್ತು ಬಳಸಿಕೊಳ್ಳಲು ಡಾ|| ಯಶಪಾಲ್ ಡಾ|| ಶುದ್ಧೋಧನರು ಅಪ್ಪಣೆ ಪಡೆದುಕೊಂಡಿದ್ದರು. ಅದೇ ಸಮಯಕ್ಕೆ ಸರಿಯಾಗಿ ಡಾ|| ಶುದ್ಧೋಧನರ ಕಡೆಯವರೊಬ್ಬರು ಮಹಡಿಯ ಮೆಟ್ಟಿಲಿನಿಂದ ಜಾರಿ ಬಿದ್ದು ತಲೆ ಜಜ್ಜಿ ಆಸ್ಪತ್ರೆಗೆ ಧಾವಿಸಿ ಬಂದುದರಿಂದ ಚೇತನಳ ಆಪರೇಶನ್ ಅನಿವಾರ್ಯವಾಗಿ ಮುಂದುವರಿಯಿತು. ಗಾಲಿ ಸ್ಟ್ರೆಚರ್ ಜರಜರ ಸದ್ದುಮಾಡುತ್ತಾ ಒಳಗಡೆ ಆಗಮಿಸುತ್ತಲೂ ಡಾ|| ಶುದ್ಧೋಧನ ಡಾ|| ಕಮಲೇಶಳ ಕ್ಷಮೆ ಕೇಳಿ ಒಳಹೋದರು. ನ್ಯೂರೋ ಸರ್ಜನ್ನರಾದ

ಡಾ|| ಥಾಮಸ್‌ರವರಿಗೆ ಕರೆ ಹೋಯಿತು. ಅವರು ಬರುವುದರೊಳಗಾಗಿ ಮುಚ್ಚಿದ ಬಾಗಿಲ ಹಿಂದೆ ಆಪರೇಶನ್ನಿನ ತಯಾರಿ ನಡೆಯುತಿತ್ತು. ಡಾ||ಥಾಮಸ್ ಒಳಬಂದವರೇ ಆಪರೇಶನ್ನಿಗೆ ಕೈ ಹಚ್ಚಿದರು. ಪಟ್ಟಾಗಿ ಜಜ್ಜಿದ ಚಿಪ್ಪನ್ನು ಕೊರೆದು ಕಳಚಿ ನೋಡಿದರೆ ಅಪಘಾತವಾದ ಸ್ಥಳದಲ್ಲಿಯೇ ಮಿದುಳಿನ ಟ್ಯೂಮರ್ (TUMOUR) ಬೆಳೆದಿದ್ದುದು ಗೋಚರಿಸಿತು. ಎರಡೂ ಆಪರೇಶನ್ನುಗಳು ಒಂದೇ ಬಾರಿಗೆ ನಡೆದುದರಿಂದ ಅದೊಂದು ಕುತೂಹಲಕರ ಪ್ರಸಂಗ ಎನ್ನಬಹುದು. ಡಾ|| ಥಾಮಸ್ ಉಲ್ಲಾಸಭರಿತರಾಗಿ ಯಶಸ್ವೀ ಆಪರೇಶನ್ ನಡೆಸಿದರು.

ಅನಂತರ ಚೇತನಳದು.

ಸಾಮಾನ್ಯ ಹೆಣ್ಣಿನಂತೆ ಕಂಬನಿ ತುಂಬಿದ ಕಮಲೇಶಳನ್ನು ನೋಡಿ "ನೀವೇ ಹೀಗಾದರೆ ಬೇರೆಯವರ ಕತೆಯೇನು ಹೇಳಿ...." ಎಂದರು ಡಾ||ಯಶಪಾಲ್, ಕರುಣಾರ್ದ್ರ ಕಂಠದಲ್ಲಿ.

ಸಹ ಡಾಕ್ಟರುಗಳ ಮುಖದಲ್ಲಿ ಎಳೆನಗು ಮೂಡಿದರೂ ಹೃದಯಗಳು ಅನುಕಂಪದಿಂದ ಮಿಡಿದುವು. ಕಮಲೇಶಳನ್ನು ಹೊರಗಡೆ ಉಳಿಯಲು ಕೇಳಿಕೊಂಡರು ಡಾ|| ಶುದ್ಧೋಧನ.

"ನೀವು ಧೈರ್ಯವಾಗಿರಿ. ಹೇಗೂ ಡಾ|| ಚಂದ್ರಕಾಂತ್ ಇದ್ದಾರೆ.... ಇನ್ನಾರು ಬೇಕು ನಿಮಗೆ?"

ಡಾ|| ಯಶಪಾಲರಿಗೆ ಏನುತ್ತರ ಹೇಳಬೇಕೋ ಹೊಳೆಯಲಿಲ್ಲ. ಮಗುವನ್ನು ಎದೆಗಪ್ಪಿ ಹಿಡಿದ ಕೈಗಳು ಸಡಿಲವಾಗಲಿಲ್ಲ. ಚೇತನಳ ಅಳಂಕಮೂರ್ತಿ ಅಕ್ಷಿಪಟಲದ ಮೇಲೆ ತೇಲಿ ಆ ಗದ್ಗದ ಕಂಠದ ಕೊನೆಯ ಬೇಡಿಕೆ ಕಿವಿಯಲ್ಲಿ ಝೇಂಕರಿಸಿತು. ಆರ್ತಳಾಗಿ ಕೇಳಿಕೊಂಡ ರೀತಿ ಮನದಲೆಯಲ್ಲಿ ಪುನಃಪುನಃ ಸುಳಿಸುಳಿದಳಿಯಿತು, ಕಮಲೇಶ್ ಮರವಟ್ಟು ನಿಂತಳು.

ಚಂದ್ರಕಾಂತ್ ಹಿಂದಿಲಿಂದ ಬೆನ್ನಿನ ಮೇಲೆ ಕೈಯಿಟ್ಟು ಹೇಳಿದ "ನೀವು ಒಳಗಡೆ ಬರಲೇ ಕೂಡದು. ಹೊರಗಡೆ ಇದ್ದು ವಿಶ್ರಾಂತಿ ತೆಗೆದುಕೊಳ್ಳಿ."

ಡಾ|| ಶುದ್ಧೋಧನ ಮಗುವನ್ನೆತ್ತಿಕೊಂಡಾಗ ಅದು ಅಳಲು ಮೊದಲಿಟ್ಟಿತು. ದುಃಖತಪ್ತಳಾದ ಕಮಲೇಶ್ ಕಣ್ಣುಗಳನ್ನು ತೀಡಿಕೊಳ್ಳುತ್ತ ಹಿಂದೆ ಸರಿಯುವಾಗ ವೃದ್ಧ ಜನನಿಯ ಮುಗ್ಧದುಗ್ಧ ಮನವನ್ನು ಭಯಭೀತಿಯ ಅಜಗರ ಸರ್ಪನೆ ಹೊಕ್ಕಿ ಕಂಬನಿಯ ಕಟ್ಟೆಯೊಡೆಸಿತು....ಜೀವನ ಕಾಂತಾರದಲ್ಲಿ

ಉಜ್ವಲಬೆಳಕಾಗಿದ್ದ ಮಗು.... ಭಗವಂತನ ಕೃಪೆಯಿಂದ ಆಪರೇಶನ್ ಸುಖವಾಗಿ ಆದರೆ ಸಾಕು ಎಂದು ದುಃಖತಪ್ತ ಹೃದಯದಿಂದ ನಿಗಮಗೋಚರನನ್ನು ಸಹಸ್ರನಾಮಗಳಿಂದ ಪ್ರಾರ್ಥಿಸತೊಡಗಿದಳು.

ಸ್ವಲ್ಪ ಹೊತ್ತಿನನಂತರ ಕಮಲೇಶ್ ಒಳಹೋಗಿ ಮಗುವನ್ನು ನೋಡಿಕೊಂಡು ಬಂದು ತಾಯಿಗೆ ವರದಿ ಮಾಡಿ "ಭಗವಂತ ಕರುಣೆದೋರಿದರೆ ಸಾಕು. ಚೇತನಳ ಭೀಕರ ಅಂತ್ಯ ಮತ್ತು ಕೊನೆಯ ಬೇಡಿಕೆಯನ್ನು ನೆನೆಸಿಕೊಂಡರೆ ಹೃದಯ ಸಹಸ್ರ ಹೋಳುಗಳಾಗುತ್ತವೆ." ಎಂದಳು ದುಃಖ ಮಿಶ್ರಿತ ದನಿಯಲ್ಲಿ.

"ನೀನೂ ನಾನೂ ಎಷ್ಟೇ ಆಸ್ಥೆ ವಹಿಸಿದರೂ ಚಂದ್ರಕಾಂತರೇ ಆಗಲೀ ಅವರ ಮನೆಯವರೇ ಆಗಲೀ ಮಗುವನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಈಗಂತೂ ಮಗು, ಅದಕ್ಕೇನೂ ಅರ್ಥವಾಗುವುದಿಲ್ಲ. ಮುಂದೇನೊ...."

ಆ ಮಾತನ್ನು ಎಷ್ಟುದಿನದಿಂದ ಹೃದಯಬನದಲ್ಲಿ ಅಡಗಿಸಿದ್ದಳೋ ನುಂಗಲಾರದ ತುತ್ತಿನಂತೆ ವಿಷಯ ಗಂಟಲಗಾಳವಾಗಿದ್ದರೂ 'ಪರಿವರ್ತನೆ' ಎಂಬುದು ಎಂದೂ ದೊಡ್ಡದಲ್ಲ. ಈಗಲೇ ಹೇಳಿ ಕೇಳುವ 'ಔಚಿತ್ಯ'ವಾದರೂ ಏನು ಎಂಬ ತಾಳ್ಮೆ ವೃದ್ಧಜನನಿಗೆ. ಆದರೂ ಹೃದಯಹೀನ ಮಾನವ ಸಮಾಜದ ರೂಪರೇಷೆಗಳು.... ಬಾಹ್ಯಾಡಂಬರಗಳು.... ಪರಿಮಿತಿಯ ಎಲ್ಲೆಗಿಂತಲೂ ಮೀರಿ ನಡೆಯುತ್ತಿರುವುದನ್ನು ನೆನೆನೆನೆದು ಪ್ರಾಣಿ ಸಮಾಜದಲ್ಲಿ ಎಷ್ಟೋ ಸೌಜನ್ಯವಿದೆ ಎಂಬ ಭಾವನೆ ಮೂಡಿ ಹೃದಯ ಸಂತಾಪದಿಂದ ಮಿಡಿಯುವುದು. ಕಣ್ಣುಗಳಂಚಿನಲ್ಲಿ ಹನಿಗಳು ಮೂಡಿ ಕದಪುಗಳ ಮೇಲೆ ಜಾರುವುವು.

ಚಂದ್ರಕಾಂತನ ಕುಟುಂಬದ ರೂಢಮೂಲವಾದ ಕುರುಡು ಪದ್ಧತಿಗಳ ಬಗ್ಗೆ ಕಮಲೇಶಳಿಗಾಗಲೀ ಸ್ವರ್ಣಮಾಲಿನಿಗಾಗಲೀ ಸಮಾಧಾನವಿರಲಿಲ್ಲ. ಅವನ ತಾಯಿಯೂ ನಾದಿನಿಯೂ ಕಲಿಯದವರು... ಹಳೆಯ ಕಂದಾಚಾರಗಳಲ್ಲಿ ದೃಢ ನಂಬಿಕೆಯುಷ್ಟೇ ಅಲ್ಲ; ಶುಚಿ ಅಶುಚಿಗಳಲ್ಲಿ ಬೇಧವನ್ನು ಕಾಣದಷ್ಟು ಅಂಧಕಾರದ ತೆರೆ ಮನಃಪಟಲದಮೇಲೆ ಮುಸುಗಿಬಿಟ್ಟಿದೆ. ಕಮಲೇಶ್ ಯಾವ ಸಂಸ್ಕಾರದಲ್ಲಿ ಬೆಳೆದಳೋ ಅದರ ಬಗ್ಗೆ ಅವರಿಗೆ ವಿರಕ್ತಿಭಾವವೂ ಉಂಟು. ಚಂದ್ರಕಾಂತನನ್ನು ವಿನಾ ಅವನ ಮಂದಿಯಲ್ಲಿ ಅಷ್ಟಾಗಿ ಬಳಕೆಯಿಲ್ಲದಿದ್ದರೂ ಕಮಲೇಶ್ 'ತಪ್ಪು' ಹೆಜ್ಜೆ ಇಟ್ಟಿದ್ದಾಳೆಂಬುದು ವೃದ್ಧಜನನಿಯ

ದೃಢವಾದ ಭಾವನೆ. ಅದು ಮಗಳಿಗೂ ಗೊತ್ತು. ಇಬ್ಬರೂ ಅಪಾರ್ಥ ಪರಿಹಾರಾರ್ಥವಾಗಿ ಅವಾಂಛನೀಯ ವಿಷಯವನ್ನು ತಮ್ಮ ತಮ್ಮೊಳಗೆ ಹುಗಿದಿಟ್ಟುಕೊಂಡಿದ್ದರು.

ಮಾನಸಿಕಾಂದೋಲನದಲ್ಲಿ ಅಮೃತ ಶಿಲಾರಮಣಿಯಂತೆ ಕುಳಿತ ಕಮಲೇಶ್ ಹುಬ್ಬೆತ್ತಿ ತಾಯಿಯನ್ನು ನೋಡಿ ವಿಜಾತೀಯವಾದ ದನಿಯಲ್ಲಿ ನುಡಿದಳು "ದೇವರಿದ್ದಾನೆ ಮಾ."

ಕಮಲೇಶ್ ಒಳಹೋದಳು, ಮಗು ಬಸುವಳಿದು ಮಲಗಿದ ರೀತಿ ಕರಳು ಮಿಡಿಸುವಂತಿತ್ತು....ಎಷ್ಠೆಯನ್ನು ಬಗೆದು ಹೃನ್ನಾಳ ವ್ಯವಸ್ಥೆಯನ್ನು ದುರುಸ್ತುಗೊಳಿಸುತ್ತಿದ್ದ ಕೈಚಳಕವನ್ನು ಒಂದು ಘಳಿಗೆ ನಿಟ್ಟಿಸಿನೋಡಿ ಭಗವಂತನನ್ನು ಮನಮುಟ್ಟಿ ಪ್ರಾರ್ಥಿಸಿಕೊಂಡಳು....

....ಭಯ ನಿವಾರಣಂ ಶ್ರೀಹರಿ ನಿಮ್ಮನಾಮ....

ಅಧ್ಯಾಯ

೨೬

ಭಗವಾನ್ ಮರೀಚಿಮಾಲಿಯು ದಿಗಂತದಂಚಿಗೆ ಆಗಲೇ ಇಳಿಯ ತೊಡಗಿದ್ದಾನೆ.

ಹೊಂಗದಿರನ ಹೊನ್ನರಾಜಿಯಲ್ಲಿ ಮಿಂದ, ಹೊನ್ಮಳೆಯ ಹನಿಗಳು ಅಲ್ಲೊಂದು ಇಲ್ಲೊಂದರಂತೆ ಉದುರುತ್ತಿವೆ. ಪ್ರಕೃತಿ ಮಾತೆಯ ಪವಿತ್ರ ಪುಣ್ಯರಾಶಿಯೇ ಜಲಧಾರೆಯಂತೆ ದ್ರವಿಸುತ್ತಿದೆಯೋ ಅಥವಾ ಆಕೆಯ ದಾರುಣವಾದ ಶೋಕ ವ್ಯಾಕುಲವೇ ಕಂಬನಿಯ ರೂಪದಲ್ಲಿ ವಿಗಲಿತವಾಗುತ್ತಿದೆಯೋ ಎಂಬುದನ್ನು ಊಹಿಸುವುದೂ ಸಹ ಕಷ್ಟ.

ಆದರೂ ಪವಿತ್ರ ಜಲಧಾರೆ ಎಂಥ ಶಾಂತಿಯ ಚಿರಂಜೀವ ಸತ್ಯ !

ವೈಜ್ಞಾನಿಕವಾಗಿ ವೈಚಾರಿಕವಾಗಿ ಅಂಬರದೆತ್ತರಕ್ಕೂ ಏರಿನಲ್ಲಬಲ್ಲ ಬುದ್ಧಿಶಕ್ತಿ ಆತಂಕ ಕಳವಳಗಳ ಮೂಸೆಯಲ್ಲಿ ಬೇಯುವಾಗ ಸಾಮಾನ್ಯತೆಯನ್ನಪ್ಪಿ ಕಂಬನಿಗರೆಯುವಂತೆ ಸ್ಫಟಿಕ ಸ್ವಚ್ಛ ಜಲರಾಶಿ ಕೊಚ್ಚೆಯಲ್ಲಿ ಸುರಿದು ಹರಿಯುವಾಗ ಕಂಬನಿಗರೆಯುವುದೋ ಏನೋ.... ಯಾರಿಗೆ ಗೊತ್ತು ?

ಚೇತನಳಿಗೆ ಆಪರೇಶನ್ ಆದಮೇಲೆ ಮೊದಲ ದುರ್ಭರ ದಿನಗಳಲ್ಲಿ ಕಮಲೇಶಳ ಕಣ್ಣುಗಳು ಮತ್ತೆ ಮತ್ತೆ ತೇವವಾದುವು. ನಿದ್ರಾಹಾರಾದಿಗಳನ್ನು ತೊರೆದು ಮಗುವಿನ ಬಳಿ ಕಾದು ಕುಳಿತ ತುಂಬುಗರ್ಭಿಣಿಗೆ ವಿಶ್ರಾಂತಿ ನೀಡಲು ಡಾ|| ಶುದ್ಧೋಧನ ಡಾ|| ಯಶಪಾಲರು ಮುಂದಾದುದನ್ನು ನೋಡಿ ಚಂದ್ರಕಾಂತ್ ಔಪಚಾರಿಕವಾಗಿ ಮುಂದಾದ. ಆದರೆ ಆ ಹೃದಯ ಹುತ್ತದೊಳಗೆ ಯಾವ ಬಗೆಯ ಹಾವೊ....!

ಹಾ....! ಆ ಯೋಚನೆ ತಳಕ್ಕನೆ ಮೂಡಿದೊಡನೆ ದೇಹದಾದ್ಯಂತ ಮೈ ನವಿರೆದ್ದಿತು. ಕಮಲೇಶ್ ಸಾಮಾನ್ಯ ಹೆಣ್ಣಿನಂತಾದಳು. ಹೃದಯ

ದೀರ್ಣವಿದೀರ್ಣವಾಯಿತು. "ಮೂರು ದಿನ ನೋಡಿಕೊಳ್ಳುವುದೇನೂ ನನಗೆ ಕಷ್ಟವಲ್ಲ ಡಾಕ್ಟರ್. ನಾನೇ ನೋಡಿಕೊಳ್ಳುವೆ.

ಸ್ವಭಾವಜನ್ಯವಾದ ಆ ಮಧುರ ಕಂಠಸ್ವರ ಹೊರಬಿದ್ದಾಗ ಚಂದ್ರ ಕಾಂತ್ ನಿರುತ್ತರನಾದ.

ರುದ್ರಭೀಷಣ ದಿನಗಳು ಕತ್ತಿಯಲುಗಿನ ಮೇಲೆ ಹರಿದಾಡಿದಂತೆ ಕಳೆದುವು. ಅನಂತರ ಚೇತನಾ ಮೆಲ್ಲಮೆಲ್ಲನೆ ಚೇತರಿಸಿಕೊಳ್ಳತೊಡಗಿದಳು. ಕಮಲೇಶಳ ಕಳವಳ ತುಂಬಿದ ಹೃದಯ ಹಾಲ್ಗಡಲಾಯಿತು. ಅವಳ ಬಳಿ ಆರಾಮವಾಗಿ ಕುಳಿತು ಹೊತ್ತು ಕಳೆಯುವಾಗ ಮುಂಬರುವ ಮಗುವಿನ ವಿಚಾರಗಳು ತಲೆಯಲ್ಲಿ ತುಂಬಿಕೊಳ್ಳುವುವು. ಅದರ ಲಾಲನೆ ಪಾಲನೆಗಳು ಯೋಚನೆಗೆ ಮುಗಿಯದ ವಿಷಯ....ಅದರ ಚಲನವಲನ ಆಗಲೇ ಮಾತೃ ಪದದ ಹಿರಿಮೆಯನ್ನು ತನುಮನಗಳಿಗೆ ಮೆತ್ತಿದೆ. ನರನಾಡಿಗಳಲ್ಲಿ ಹರಿದಾಡುವ ತಾಯ್ತನದ ಹುಮ್ಮು ಮೈಗೆ ನವಚೈತನ್ಯವನ್ನೂಡಿಸಿದೆ. ಗರ್ಭಸ್ಥ ಶಿಶು ಎಷ್ಟು ಬೇಗ ಹಸ್ತಗತವಾದರೆ ಅಷ್ಟು ಕ್ಷೇಮ ಎಂಬಷ್ಟು ತರಾತುರಿ, ಅದರಿಂದ ಮೈಭಾರ ಕಳೆಯುವುದಷ್ಟೇ ಅಲ್ಲ; ಎದೆಗೆತ್ತಿಕೊಳ್ಳುವ ಆತುರವೂ ಸಹ.

ಚೇತನಳಿಗೆ ಈಗೀಗ ಅನೇಕ ಮಂದಿ ಡಾಕ್ಟರುಗಳ ಬಳಕೆ. ಅವಳ ಚತುರತೆ ಚಟುವಟಿಕೆಗಳೇ ಬಹಳ ಮಟ್ಟಿಗೆ ಅವರನ್ನು ಆಕರ್ಷಿಸುತ್ತವೆ. ಎಲ್ಲರ ಪ್ರೀತಿ ವಿಶ್ವಾಸಕ್ಕೂ ಪಾತ್ರಳಾದ ಅವಳು ಚಂದ್ರಕಾಂತನ ಅಜ್ಞಾತ ಅಲಕ್ಷ್ಯವನ್ನು ಕಂಡುಕೊಳ್ಳದಿರಲಿಲ್ಲ, ಅಂತಲೇ ಅವಳು ಬಹಳ ಸೂಕ್ಷ್ಮ. ಔದಾಸೀನ್ಯತೆ–ಪ್ರಸನ್ನತೆಗಳ ನಿಕಟ ಬಾಂಧವ್ಯದಲ್ಲಿ ಒಮ್ಮೆ ಸೋತರೂ ಇನ್ನೊಮ್ಮೆ ಗೆಲ್ಲುತ್ತಾಳೆ. ರುದ್ರಮಧುರ ಸನ್ನಿವೇಶಗಳು ಧೀರ ಪ್ರಸನ್ನ ಭಾವದ ನೆಲೆಯಲ್ಲಿ ಪುಟನೆಗೆದು ಹಾರುತ್ತವೆ.

ಹಾಸಿಗೆಯಮೇಲೆ ಬಿಳಿಯ ಹೊದ್ದಿಕೆಯಡಿ ನಿದ್ದೆ ಹೋಗಿದ್ದ ಚೇತನಾ ಹೊದ್ದಿಕೆಯನ್ನು ಸರಿಸಿ ...!" ಎಂದಳು ಕ್ಷೀಣ ಶ್ರಾಂತ ಕಂಠದಿಂದ.

"ಏನಮ್ಮಾ?"

"ನೀವೆಲ್ಲಿಗೆ ಹೋಗಿದ್ದಿರಿ ?"

"ನಾನೆ....? ಎಲ್ಲಿಗೂ ಇಲ್ಲವಲ್ಲಾ."

"ಇಲ್ಲ, ಇಲ್ಲಿ ನೀವಿರಲಿಲ್ಲ." ತಲೆಯಾಡಿಸಿದಳು ಅವಳು.

ಕಮಲೇಶಳಿಗೆ ತುಸು ಅಚ್ಚರಿ ಮೂಡಿತು "ನೀನು ಸೊಗಸಾಗಿ ನಿದ್ದೆ ಮಾಡಿದ್ದೆ. ನಿನಗೆ ತಿಳಿಯುವುದಾದರೂ ಹೇಗೆ ?"

"ನಾನು ನಿದ್ದೆ ಮಾಡಲಿಲ್ಲ,ಬಲರಾಂಮಾಮನೊಂದಿಗೆ ಮಾತಾಡುತಿದ್ದೆ."

"ಅವರು ರಜೆ ತೆಗೆದುಕೊಂಡಿದ್ದಾರೆ, ನೀನೆಲ್ಲೋ ಕನಸು ಕಂಡಿರಬೇಕು" ಎನ್ನುತ್ತ ಮಗುವನ್ನು ಮುದ್ದಿಟ್ಟುಕೊಂಡಳು ಕಮಲೇಶ್.

"ನಿಜವಾಗಿಯೂ ಇಷ್ಟೊತ್ತೂ ಮಾತಾಡುತಿದ್ದೆ ಮಾ....!"

"ಬಲರಾಂ-ನೊಂದಿಗೆ?"

ಮಾತು ಮುಗಿಯುವುದರೊಳಗಾಗಿ ಚಂದ್ರಕಾಂತ್ ಒಳಬಂದ. ತನ್ನ ಮಗಳ ಇನಿದನಿಯಲ್ಲಿ ಬಲರಾಮನ ನಾಮ....? ಆ ತಕ್ಷಣವೇ ವ್ಯಾನಿಟಿ ಬ್ಯಾಗ್ ಕಿಡಿ ಕಿಡಿಯಾಗಿ ಹೇಳದೆ ಕೇಳದೆ ದಡದಡನೆ ಹೊರಬಿದ್ದ. ಅವನು ನಡೆದು ಹೋದ ರೀತಿಯನ್ನು ಗಮನಿಸಿದ ಕಮಲೇಶಳಿಗೆ ಒಮ್ಮೆಲೇ ಸಹಸ್ರ ಚೇಳುಗಳು ಕುಟುಕಿದಂತಾಯಿತು. ಯೋಚನೆಯ ಸುಳಿಯಲ್ಲಿ ಸಿಕ್ಕಿ ಒಂದು ಘಳಿಗೆ ಸುಮ್ಮನೆ ಕುಳಿತಳು. ಅತೀ ಕ್ಷುಲ್ಲಕ ಕಾರಣಗಳು ಬೃಹದಾಕಾರವನ್ನು ತಳೆಯುವ ಬಗೆ ಮನಸ್ಸಿಗೆ ಜುಗುಪ್ಸೆಯನ್ನು ಮೂಡಿಸಿತು. ಜೀವನದ ಸಮಸ್ಯೆಗಳನ್ನು ಎದುರಿಸಲಾರದೆ ತತ್ತರಿಸಿತು ಮನಸ್ಸು.

ಕಪ್ಪು ಕನ್ನಡಿಯ ಮೂಲಕ ಜಗತ್ತನ್ನು ನಿಟ್ಟಿಸಿದರೆ....?

ಹಾ....!

....ಜೀವನಕಾಂತಾರದಲ್ಲಿ ಭುಗಿಲೇಳುವ ಈ ಅಸಹ್ಯವೂ ಅಸಹನೀಯವೂ ಅದಮ್ಯವೂ ಆದ ಅರಿಷಡ್ವರ್ಗಗಳಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ ಮಗಳೇ!....ಎಂದು ಯಾವುದೋ ತೂರ್ಯವಾಣಿ-ಎಲ್ಲಿಯದೋ ಅನುಭವಪೂರ್ಣ ಮಾತೃವಾಣಿ ಕರ್ಣಪಟ್ಟಲಗಳಿಗೆ ಅತ್ಯಂತ ಸನಿಹದಲ್ಲೇ ಕೇಳಿ ಬರುತ್ತಿದೆ.

ಚೇತನಳನ್ನು ಮನೆಗೆ ಕರೆದೊಯ್ದನಂತರ ಮನೆಯಲ್ಲಿ ಒಂದೆರಡು ತಿಂಗಳು ಹಾಯಾಗಿದ್ದು ಬಿಡುವೆ ಈ ಕಾಟದಿಂದಲಾದರೂ ತಪ್ಪಿಸಿಕೊಳ್ಳಬಹುದು....ಎಂದು ತನ್ನೊಳಗೆ ಚಿಂತಿಸುತ್ತ ನಿಟ್ಟುಸಿರು ಬಿಟ್ಟಳು ಕಮಲೇಶ್.

ಪಕ್ಷಮಾನವೊಂದು ಉರುಳಿತು.

ನವ ಮಾಸಗಳು ತುಂಬಿ ಗಂಡು ಮಗುವಿಗೆ ಕಮಲೇಶ್ ಜನ್ಮವಿತ್ತಾಗ ಇನ್ನೂ ಬೆಳಗಿನ ಒಂದರ ಝಾವ. ಶೀತಲಗಾಳಿ ಚಾಮರವಿಕ್ಕಿ ಭಾರತದ ನೂತನ ಭರತನಿಗೆ ಸ್ವಾಗತ ನೀಡಿತು. ಚಂದ್ರಕಾಂತ್ ಟೊಮೆಟೋ ಹಣ್ಣಿನಂತಹ ಮಗುವನ್ನು ನೋಡಿ ಹರ್ಷೋನ್ಮತ್ತನಾದ. ಹೃದಯ ಆನಂದದ ಆಗರವಾಯಿತು.

ಹೊರ ಜಗತ್ತಿನಲ್ಲಿ ಕೃಷ್ಣಪಕ್ಷದ ಕಾಳಗಪ್ಪು ಹೆಪ್ಪುಗಟ್ಟಿದಂತಿದೆ. ಕತ್ತಲೆಯ ತೆರೆಯನ್ನು ಭೇದಿಸಿ ನಕ್ಷತ್ರಗಳು ಇಣಿಕಿ ನೋಡುವ ರೀತಿ ಸೃಷ್ಟಿ ವಿಧಾನವನ್ನು ಅಮೂಲಾಗ್ರವಾಗಿ ಗ್ರಹಿಸಿವೆ ಎಂಬುದರಲ್ಲಿ ಸಂಶಯವಿಲ್ಲ.... ಆದರೆ ನಮ್ಮವರಿಗೆ ಆ ದೂರದರ್ಶಿತ್ವ ಉಂಟೇ ? ಈ ದೇಶದಲ್ಲಿ ಜೀವನ ಮೌಲ್ಯವನ್ನು ನಿಯಂತ್ರಣಕೊಪ್ಪಿಸಿ ಬಂಗಾರದಂತಹ ವೇದ ಭೂಮಿಯನ್ನು ಬೂಟಾಟಿಕೆಯ ದರಿದ್ರಸ್ಥಿತಿಗೆ ಇಳಿಸುವ ಮಹಾಪರಾಧಕ್ಕೆ ಶಿಕ್ಷೆಯಾದರೂ ಏನು? ಯಾರೋ ವಿಚಾರಹೀನರು ಹಾಗೆಂದು ಪ್ರಚಾರ ಮಾಡಿದರೆ ಎಲ್ಲರೂ ಅದಕ್ಕೆ ಕಿವಿಗೊಡಬೇಕೆ? ಅದರಲ್ಲೂ ಕಲಿತವರು ಆಲೋಚನಾರಹಿತರಾದರೆ ನಮ್ಮ ದೇಶ ಕುಶಾಗ್ರಮತಿಗಳ ಕೈತಪ್ಪಿ ಮೂರ್ಖರ ಕೈಸೇರಿ ಹೋಗುವುದರಲ್ಲಿ ಅನುಮಾನವಿಲ್ಲ....ದೀನರು....ದಲಿತರು....ದುರ್ಬಲರು....ಅವಿಚಾರಿಗಳು ಅವಿವೇಕಿಗಳು ಅನಾಚಾರಿಗಳು ತುಂಬಿ ಹೋಗಿರುವ ಈ ದೇಶದಲ್ಲಿ ಕಲಿತವರು ಜೀವನ ಮೌಲ್ಯವನ್ನು ನಿಯಂತ್ರಣಕೊಪ್ಪಿಸುವುದು ನಿಜವಾಗಿಯೂ ಅಸಹನೀಯ....ತರ್ಕವಿತರ್ಕಗಳ ಸುಳಿಯಲ್ಲಿ ಸಿಕ್ಕಿ ಬಿಸಿಯುಸಿರು ಬಿಡುತ್ತಾ ಚಂದ್ರಕಾಂತ್ ಹಣೆಯಮೇಲೆ ಕೈಯಿಟ್ಟು ಹೇಳಿದ "ಡಾಕ್ಟರ್, ಬೆಳಗಾದ ಮೇಲೆ ಮಗು ಬೆಳಕು ಕಾಣಬಹುದು ಎಂದುಕೊಂಡಿದ್ದೆ. ಆದರೆ ಇದು.... ಎಷ್ಟು ಸುಖಕರವಾದ ಪ್ರಸವ !"

"ಓ....ಚೆನ್ನಾಗಿದೆ ! ನಿಮಗೇನು ಗೊತ್ತು ಅದರ ಕಷ್ಟ ?"

ಚಂದ್ರಕಾಂತ್ ನಸು ನಕ್ಕು ನುಡಿದ "ಹೋಗಲಿ, ಅದರ ಕಷ್ಟಗಳೇನೇ ಇರಲಿ, ಫಲ ಸಫಲವಾಗಿದೆಯಾದ್ದರಿಂದ ನೋವು ಗಣನೀಯವಾದುದಲ್ಲ...."

ಹಣೆಯ ಮೇಲಿನ ಹಸ್ತ ಸ್ನೇಹಪೂರ್ಣ ಆಶೀರ್ವಾದದಂತೆ ಇನ್ನೂ ಒತ್ತಿ ಹಿಡಿದಿತ್ತು.

ಸಿಡಿಲಿನ ಆರ್ಭಟ ನಿಂತಮೇಲೆ ಸ್ತಬ್ಧಗೊಳ್ಳುವ ಗಗನದಂತೆ ಶಾಂತ-ಶ್ರಾಂತ– ಸ್ವಸ್ಥ–ಪ್ರಕೃತಿಯಲ್ಲಿ ಕಳೆದ ದಿನಗಳ ನಿದ್ದೆಯೆಲ್ಲಾ ಒಂದೇ ಬಾರಿಗೆ ತುಂಬಿ ಬಂದಿದೆ. ಪ್ರಯತ್ನಿಸಿದರೂ ಕಣ್ಣುಗಳು ತೆರೆಯಲಾರವು. ಒಂದು ಘಳಿಗೆ ತೆರೆದು ಮತ್ತೆ ಹಾಗೇ ಮುಚ್ಚಿಕೊಂಡುವು. ಅತ್ಯಂತ ಉತ್ಸುಕತೆಯಿಂದ ಬಂದ ಚಂದ್ರಕಾಂತನಿಗೆ ಅದು ಉಪೇಕ್ಷೆ...ತಾತ್ಸಾರ ಎನಿಸಿತು. ಇನ್ನೊಂದು ಕ್ಷಣನಿಂತು ಬಂದ ಹಾಗೆಯೇ ಹಿಂದಿರುಗಿದ. ಈ ಹೆಣ್ಣಿನಲ್ಲಿ ಭಕ್ತಿ ಶ್ರದ್ಧೆ ದಿನ ದಿನಕ್ಕೆ ನಶಿಸಿ ಹೋಗುತ್ತಿದೆ ಎಂದುಕೊಳ್ಳುತ್ತಲೇ ವರಾಂಡದಲ್ಲಿ ಅಡ್ಡಾಡಿದ. ಒಡೆದ ಕನ್ನಡಿಯಂತೆ ಮನಸ್ಸು ಚೂರ್ಣೀಕೃತವಾಯಿತು.

ಹಗಲು ಉರುಳಿತು. ಇರಳು ಹೆಜ್ಜೆ ಇಡುತ್ತಿದೆ.

ಬೆಳಗಿನಿಂದ ಅನೇಕ ಮಂದಿ ಡಾಕ್ಟರುಗಳು ವಾರ್ಡಿಗೆ ದಾಳಿಯಿಟ್ಟು ಅಭಿನಂದಿಸಿ ಕಿಲಕಿಲ ನಗುವಿನ ನಿನಾದ ಹರಿಸಿ ಆಶೀರ್ವದಿಸಿದ್ದಾರೆ. ಆ ಆಶೀರ್ವಚನಗಳ ಮಧುರ ದನಿ ಪ್ರತಿ ಅವಯವಗಳಲ್ಲಿ ಹರಿದಾಡಿ ಕರ್ಣಪಟಲಗಳ ಮೇಲೆ ಮತ್ತೆಮತ್ತೆ ಮರುಪ್ರಸಾರ ಮಾಡಿ ತಾಯ್ತನದ ಹುಮ್ಮಗೆ ಹುರಪು ನೀಡುತ್ತಿವೆ.

ನಾರೀಶ್ರೀಹೃದಯದಲ್ಲಿ ಮಾತೃಪದದ ಅಮೃತ ಕಲಶವು ಪ್ರತಿಷ್ಠಾಪನೆಗೊಂಡಮೇಲೆ ಅಂತರಂಗ ಪ್ರೀತಿ ಶ್ರದ್ಧೆಗಳಿಂದ ತುಂಬಿ ಬಿರಿಯುವಂತಾಯಿತು....ಒಂದು ಕಾಲದಲ್ಲಿ ಉಪೇಕ್ಷೆ...ಪಶ್ಚಾತ್ತಾಪಗಳಿಂದ ದಗ್ಧವಾಗಿದ್ದ ಮನಸ್ಸು ಇಂದು ಅರಳಿ ಪ್ರಸನ್ನವಾಗಿ ವಿಭಿನ್ನ ಅಭಿಪ್ರಾಯವನ್ನು ತೊಡೆದು ಹಾಕಿತು. ನಾರೀಲೋಕದ ಸಹಜ ಸ್ವಭಾವದಿಂದ ಪ್ರೇಮೋನ್ಮತ್ತಳಾಗಿ ಔರಸಪುತ್ರನನ್ನು ಎದೆಗೊತ್ತಿಕೊಂಡು ಆನಂದಿಸಿದಳು, ಕಮಲೇಶ್.

ಪೂರ್ವದಿಗಂತದಂಚಿನಲ್ಲಿ ಶೋಭಾಸಮುದ್ರ ಉಕ್ಕೇರಿ ಬಂದಂತೆ ನವಜಾತ ಸುಂದರ ಶಿಶುವಿನಾಗಮನದಿಂದ ಮನೆ ಶಿವನ ಪವಿತ್ರಸ್ಮಿತ ಅರಳಿದಂತಾಯಿತು. ಎಲ್ಲರೂ ಉತ್ಸಾಹದ ಕಡಲಿನಲ್ಲಿ ಮುಳುಗಿದರು.

ಚಂದ್ರಕಾಂತ್ ಕೆಲಸ ಮುಗಿಸಿ ವಾರ್ಡಿಗೆ ಬಂದಾಗ ಮುಖದಲ್ಲಿ ಆಯಾಸದ ಮುದ್ರೆಯೊತ್ತಿತ್ತು. ಮಗುವನ್ನು ಸಂತಸಪೂರ್ಣಲೋಚನಗಳಿಂದ ನಿಟ್ಟಿ

ಸುತ್ತಾ....ಡಾಕ್ಟರ್, ನನಗೆ ಇಂದೇ ಎಲ್ಲಿಲ್ಲದ ಕೆಲಸ! ಒಂದು ನಿಮಿಷವೂ ಬಿಡುವಾಗಲಿಲ್ಲ." ಎಂದ. ದನಿ ಆಯಾಸ-ಸಂತಸಗಳ ಒಕ್ಕೂಟವಾಗಿತ್ತು.

ಕಮಲೇಶ್ ನಗುತ್ತಾ ಹೇಳಿದಳು "ಅತೀ ಸಂತೋಷ ಒಳ್ಳೆಯದಲ್ಲ ವೆಂದು ಭಗವಂತ ಕಷ್ಟವನ್ನೂ ಸಮತೂಕವಾಗಿ ನೀಡಿದ್ದಾನೆ."

ಮಗುವಿನ ಬಳಿ ಕಾದು ಕುಳಿತ ಚೇತನಳನ್ನು ನೋಡಿ ಹುಬ್ಬುಹಾರಿಸಿ- "ನೋಡಿ, ಚಿಕ್ಕವಳಾದರೂ ಅವಳಿಗೆಷ್ಟು ಶ್ರದ್ಧೆ? ನಮಗೊಂದು ಮಗು ಬಂದುದು ಎಲ್ಲರಿಗೂ ಎಷ್ಟು ಸಂತೋಷ ತಂದಿದೆ? ಜೀವನ ವಿಕಾಸ ಶೈಲೋಪ ಶೈಲಗಳಿಗೂ ಶ್ರದ್ಧೆ ಮೂಡಿರುತ್ತದೆ."

"ನಿಜ." ಒಪ್ಪಿಕೊಂಡಳು, ಕಮಲೇಶ್. ಆಕೆಯ ಹಗುರವಾದ ಅಂಗ ಪ್ರತ್ಯಂಗಗಳಿಂದ ಮಾತೃತ್ವದ ಶೀತಲ ಆನಂದ ಲಹರಿಗಳು ಹೊಮ್ಮಿ ಮುಖ ಮಂಡಲ ಮಂಗಳ ಮಯವಾದುದನ್ನು ನೋಡುತ್ತಾ ಚಂದ್ರಕಾಂತನ ಹೃದಯ ಸಮುದ್ರ ಉಕ್ಕೇರಿತು. "ಇಷ್ಟುದಿನವಂತೂ ನೀವೂ ಇಲ್ಲದೆ ನಾನೂ ಇಲ್ಲದೆ ನಮ್ಮ ಮನೆ ಬರಿದಾಗಿತ್ತು. ಇನ್ನು ತೊಟ್ಟಿಲು ಸಹಿತ ಮನೆದುಂಬಿಸಿಕೊಳ್ಳುವೆ!" ಎಂದ ಆನಂದ ಪ್ರಮತ್ತನಾಗಿ.

"ಅದು ಹೇಗಾದೀತು? ಈಗ ಬಂದರೆ ಮಗುವನ್ನು ನೋಡಿಕೊಳ್ಳುವುದು ಹೇಗೆ?"

"ಸಂಪ್ರದಾಯ ಬದ್ಧನಾಗಿ ನಿಮ್ಮನ್ನು ಅಲ್ಲಿರಗೊಟ್ಟೆ. ಹೆರಿಗೆಯ ಸೌಲಭ್ಯಕ್ಕಾಗಿ ನೀವು ಅಲ್ಲಿರಬೇಕಾಗಿತ್ತು ಇದ್ದಿರಿ. ಇನ್ನೂ ಇರುವುದೆಂದರೆ ಹೇಗೆ?"

"ನೋಡೋಣ ಈಗಲೇ ಏಕೆ?"

ಚಂದ್ರಕಾಂತ್ ಸುಮ್ಮನಾದ. ಕಮಲೇಶಳ ಮನದಲ್ಲಿ ಕಸಿವಿಸಿ ಮೂಡಿತು. ಆಲೋಚನಾರಹಿತನೂ ನಿಷ್ಕರುಣಿಯೂ ಆದ ಅವನ ಬಳಿ ವಾದ ವಿವಾದ ಕೇವಲ ಜಿಗುಪ್ಸೆಗೆ ದಾರಿ ಮಾಡುತ್ತದೆಂಬುದು ಗೊತ್ತು....ಮತ್ತೇಕೆ ಮೊಂಡುವಾದ ಹೂಡುವುದು?.

ಹಠಾತ್ತನೆ ಚಂದ್ರಕಾಂತನ ದನಿ ಕಿವಿಯನ್ನು ತಾಕಿತು. "ಜೀವನವೆಂದರೆ ಎರಡು ಬಣಗಳ ಒಕ್ಕೂಟ. ಸಾಧಾರಣವಾದದ್ದು ಅಸಾಧಾರಣವಾಗುವುದು ಒಕ್ಕೂಟದಿಂದ. ಹೆಣ್ಣು ಎಷ್ಟೇ ಮೇಧಾವಿಯಾಗಿರಲಿ, ಎಷ್ಟೇ

ಕಲಿತಿರಲಿ, ಸಂಪ್ರದಾಯಕ್ಕೆ ವಿಮುಖಳಾಗುವುದು ಸರಿಯಲ್ಲ. ಶೂನ್ಯತೆಯಲ್ಲಿ ಪೂರ್ಣತೆಯನ್ನು ತುಂಬಿಕೊಳ್ಳಲೆಂದೇ ಹೆಣ್ಣು ಪುರುಷಾನುವರ್ತಿಯಾಗುತ್ತಾಳೆ. ಮಾನವತೆ ದೈವೀಕಕ್ಕೇರಬೇಕಾದರೆ ನಾವು ಇಂದಿನ ನಾಗರಿಕ ವಾತಾವರಣವನ್ನು ಮರೆತು ಬಿಡಲೇ ಬೇಕು ಡಾಕ್ಟರ್ !"

ಕಮಲೇಶ್ ಒಂದು ನಿಮಿಷ ತಬ್ಬಿಬ್ಬಾದಳು.

ನಿಮಗೆ ಮೊದಲೇ ತಿಳಿಯು ಹೇಳಬೇಕಾದುದು ನನ್ನ ಕರ್ತವ್ಯ. ಅನಂತರ ನೀವು ಆಕ್ಷೇಪಣೆಯೆತ್ತಬಾರದು."

ಬಾಗಿಲ ಬಳಿ ಪಾದ ಸಪ್ಪಳದೊಂದಿಗೆ ಮಾತಿನ ಮರ್ಮರ ಸದ್ದು ಕೇಳಿಸಿತು. ಹೆಜ್ಜೆಗಳು ಹೊಸ್ತಿಲಿನ ಬಳಿಗೆ ಬರುತ್ತಲೂ ಬಾಗಿಲಲ್ಲಿ ಮಿಡಿತದ ಮೆಲುಸದ್ದು ಮೊಳಗಿತು.

" Yes Please "

ಡಾ|| ಥಾಮಸ್‌ರವರೊಡನೆ ಹಿರಿಯ ವೈದ್ಯ ಮಂಡಳಿ ಆಗಮಿಸಿತು. ಅದೇ ದಾರಿಯಲ್ಲಿ ಹಾದು ಹೋಗುತಿದ್ದ ಅವರು ಕಮಲೇಶಳನ್ನು ನೋಡಿ ಹೋಗಲು ಬಂದಿದ್ದರು. ಚಂದ್ರಕಾಂತನ ಮುಖ ಹೂವಿನಂತರಳಿತು. ವಿನೀತನಾಗಿ ಕರಗಳನ್ನು ಜೋಡಿಸಿದ. "ಪ್ರಣಾಮ್ ಸರ್ !"

"ಅಭಿನಂದನೆಗಳು !"

ಎಲ್ಲರೂ ಹಾರ್ದಿಕವಾಗಿ ಕೈ ಕುಲುಕಿ ಅಭಿನಂದಿಸಿದರು. ಕಮಲೇಶ್ ಪ್ರಸನ್ನಮುಖಿಯಾಗಿ ಅಭಿನಂದನೆಗಳನ್ನು ಸ್ವೀಕರಿಸಿದರೂ ಯಾವ ಮಹಾ ಕಾರ್ಯಕ್ಕಾಗಿ ಎನಿಸದಿರಲಿಲ್ಲ. ಮರುಕ್ಷಣದಲ್ಲಿ ಮಲಗಿ ನಿದ್ದೆಗೈದ ಮುದ್ದು ಮಗು ಕಣ್ಣಿಗೆ ಬಿತ್ತು. ಒಡನೆ ಹೃದಯದ ಹೊಂಗಡಲು ಉಕ್ಕೇರಿ ಬಂತು.

ಆಸ್ಪತ್ರೆಯಿಂದ ನಿರ್ಗಮಿಸಿದ ಕಮಲೇಶ್ ತನ್ನ ದಿನಚರಿಯಲ್ಲಿ ಬಹು ದೊಡ್ಡ ಬದಲಾವಣೆಯನ್ನು ಕಂಡಳು. ಅನುದಿನದ ಕಾರ್ಯಕಲಾಪಗಳ ತಾಕಲಾಟದಲ್ಲಿ ಚಕಮುಕಿಯಾಗಿರುತ್ತಿದ್ದ ತನುಮನಗಳು ಇಂದು ಜಡವಾಗಿರುವಂತೆ ಅಲ್ಲ....ಅಲ್ಲ....ಏನೋ ಒಂದು ಬಗೆಯ ಆಲಸ್ಯದಂತೆ....ಅಲ್ಲ, ಅಲ್ಲವೇ ಅಲ್ಲ....ಯಾವುದೋ ಒಂದು ಬಗೆಯ ಉನ್ಮತ್ತತೆ ಪ್ರಾಕ್ತನ ಪುಣ್ಯವಶಾತ್ ಆತ್ಮ ದರ್ಶನ ಮಾಡಿಸಿದಂತೆ ತೋರುತ್ತದೆ.

ಟೊಮೆಟೋ ಹಣ್ಣಿನಂತಹ ಮಗುವನ್ನು ತೊಡೆಯ ಮೇಲಿಟ್ಟು

ಕೊಂಡು ಪ್ರೇಮಾನಂದಗಳ ವಶೀಭೂತಳಾಗಿ ಯೋಚಿಸಿದಳು ಕಮಲೇಶ್, ಏನೆಂದು ಹೆಸರಿಡೋಣ ? ಒಡನೆ ನೂತನ ಹೆಸರುಗಳ ಮಾಲೆ ಸ್ಮರಣೆಯ ಹಾದಿಯಲ್ಲಿ ಸಾಗಿ ಹೋಯಿತು. ಯಾಕೋ ಒಂದೂ ರುಚಿಸಲಿಲ್ಲ. ಭಾರತ ವೀರವರೇಣ್ಯರ ಕಡೆ ಗಮನ ಹೊರಳಿತು. ಸಿದ್ಧಾರ್ಥ, ವಿವೇಕಾನಂದ, ಕೇಶವಚಂದ್ರಸೇನ, ಮೋಹನ್‌ದಾಸ್ ಗಾಂಧಿ, ಬಾಲಗಂಗಾಧರ ತಿಲಕ್. ಓ....ಸಾಕು ! ಮಗು ಬೂಟಾಟಿಕೆಯ ಕೂಸಾಗುವುದಕ್ಕಿಂತ ದೇಶ ಸೇವಕ ನಾಗಿ ಅಮರಜೀವಿಯಾಗಲಿ.... ಭಾವೋದ್ವೇಗದಿಂದ ಬಾಲಗಂಗಾಧರ ತಿಲಕ್ ಎಂದು ಹೆಸರಿಸುವ ನಿರ್ಧಾರಕ್ಕೆ ಶರಣಾಗಿ ಮಗುವನ್ನು ಭಾವಪರವಶತೆಯಿಂದ "ತಿಲಕ್" ಎಂದು ಮುದ್ದಿಟ್ಟು ಕೊಂಡಳು.

ಮನೆಗೊಂದು ಮಗು ಬಂದುದು ಚೇತನಳಿಗೆ ನೂರ್ಮಡಿಯ ಉತ್ಸಾಹ ವನ್ನು ತಂದಿತ್ತು. ಜೊತೆಗೆ ಕಮಲೇಶಳೂ ಮನೆಯಲ್ಲಿದ್ದಾಳೆಂದರೆ ಅದೇನು ಸಾಮಾನ್ಯ ವಿಷಯವಲ್ಲ. ತುಂಬುಗಲ್ಲದ ಮೇಲೆ ಬೆಳುದಿಂಗಳಂತಹ ನಗು ವನ್ನು ಚೆಲ್ಲಿ ನಲಿದಾಡುವಳು. ತನ್ನ ಗೆಳತಿಯನ್ನು ಕರೆತಂದು ತೋರುವಳು. ದಾದಿಗೆ ಕೈ ತೊಳೆದು ಮುಟ್ಟುವಂತೆ ಎಚ್ಚರಿಕೆ ಹೇಳುವಳು. ಹೇಮರತಿ ಮಾಮಿಯೊಡನೆ ಬಸಂತ ಸೇನ ಬಂದಾಗ "ನೀನು ಗಟ್ಟಿಯಾಗಿ ಮುಟ್ಟುತ್ತಿ! ಮಗುವಿಗೆ ನೋವಾಗುತ್ತದೆ!" ಎನ್ನುವಷ್ಟು ಬುದ್ಧಿವಂತಿಕೆ ತೋರುವಳು. ಅವಳ ರಸಪೂರ್ಣ ಗಲ್ಲದಮೇಲೆ ಚಿಮ್ಮುವ ಎಳೆನಗುವನ್ನು ನೋಡು ನೋಡು ತಿದ್ದಂತೆ ಎಲ್ಲರ ಉತ್ಸಾಹ ಗರಿಗೂಡುವುದು. ಬಾಳಿಗೆ ಬೆಳಕನ್ನು ತಂದ ಮೊ ಮ್ಮಗು ಮಹಾ ಮಹಿಮಾಶಾಲಿಯೋ ಎಂಬಂತೆ ಆನಂದೋನ್ಮತ್ತಳಾಗುವಳು ವೃದ್ಧ ಜನನಿ. ಇನ್ನು ತಾನೊಬ್ಬಳೇ ಮನೆಯಲ್ಲಿ ಹೊತ್ತು ಕಳೆಯುವ ಬದಲು ಮಕ್ಕಳೊಂದಿಗೆ ಮಕ್ಕಳಾಗಿ ನಲಿಯುವ ಹುಮ್ಮಸ್ಸು ಗರಿಗೂಡಿಕೊಳ್ಳು ವುದು.

"ಮಾ ! ಸಿಂಧೂ ಮಗು ನೋಡುತ್ತಾಳಂತೆ !"

ಎಳೆದನಿ ಗಮನವನ್ನು ಸೆಳೆಯಿತು. ಸಿಂಧೂ ಚೇತನರು ಮೈಯೆಲ್ಲಾ ಹರ್ಷದ ನೆಲೆಯಾಗಿ ಜೋಡಿಯಾಗಿ ನಿಂತಿದ್ದರು. ಬಾಲ ಸಹಜ ಕಿಸಲಯ ಕೋಮಲ ದನಿಯಲ್ಲಿ ಸಿಂಧೂ ಕೇಳಿದಳು "ತಮ್ಮನ ಹೆಸರೇನು ಮಾ ?"

"ತಿಲಕ್"

"ಓ! ತಿಲಕ್! ಬಲು ಮುದ್ದಾದ ಹೆಸರು !"

ಇಬ್ಬರೂ ಎಳೆನಗು ಬೀರಿ ಕುಣಿಕುಣಿದಾಡಿದರು.

ಪಾದ ರಕ್ಷೆಗಳ ಪಟ ಪಟ ಸದ್ದು ಮಾಡುತ್ತ ಚಂದ್ರಕಾಂತ ಒಳಬಂದ. ಅವನನ್ನು ನೋಡುತ್ತಲೂ ಮಕ್ಕಳ ಸದ್ದಡಗಿತು.

"ಹೇಗಿದ್ದಾನೆ ಚಂದ್ರ ಕುಮಾರ್?" ತಮಾಷೆಯ ಧಾಟಿಯಲ್ಲಿ ಕೇಳಿದ ಚಂದ್ರಕಾಂತ್.

ಕಮಲೇಶ್ ಮಾತಾಡದೆ ಮುಗುಳು ನಗೆ ಬೀರಿದಳು.

"ನನಗೇಕೋ ತುಂಬ ತಲೆ ನೋಯುತ್ತಿದೆ ಕಮಲೇಶ್!"

"ಸಾರಿಡಾನ್ ತೆಗೆದುಕೊಳ್ಳುವಿರಾ ?"

"ಈಗ ಏನೂ ಬೇಡ. ಹಾಯಾಗಿ ಮಲಗಿ ಬಿಡುವೆ."

ಬಟ್ಟೆಗಳಚಿ ಅಲ್ಲಲ್ಲೆ ಎಸೆದು ಶೌಚಗೃಹದ ಕಡೆ ಹೋದ. ಕಮಲೇಶಳ ಕಣ್ಣುಗಳು ನೋಡಲಾರದೆ ನೋಡಿದುವು. ಕೋಟು ಕುರ್ಚಿಯಮೇಲೆ ಬಿದ್ದಿದೆ. ಪ್ಯಾಂಟು ಟೈಗಳು ಅಲ್ಲಲ್ಲೆ ಮುದುರಿವೆ. ಪಾದರಕ್ಷೆಗಳು ಕಾಲುಚೀಲ ಗಳು ಕೊಳಕು ಕವಿದು ತಮ್ಮಿರುವನ್ನು ಸಾರಿ ಹೇಳುತ್ತಿವೆ. ತಾನೆಷ್ಟೇ ಕಷ್ಟ ಪಟ್ಟರೂ ಈ ಮನೆಯನ್ನು ಶುದ್ಧವಾಗಿ ಇಡುವಂತಿಲ್ಲ ಎಂದು ಗೋಗರೆಯಿತು ಅಂತರಂಗ. ಸ್ಟಾಂಡಿನ ಮೇಲೆ ಬೀರುವಿನಲ್ಲಿ ಮಂಚದ ಮೇಲೆ ಎಲ್ಲಿ ನೋಡಿ ದರಲ್ಲಿ ಬಟ್ಟೆ ಬರೆಗಳ ರಾಶಿ.... ಇತರೆ ವಸ್ತುಗಳ ಕಲಸು ಮೇಲೋಗರ. ಶ್ರೀಧರ ಮುರುಳೀಧರರೇ ಅವ್ಯವಸ್ಥೆಯವರೆಂದರೆ ಇದು ಇನ್ನೂ ಒಂದು ಕೈ ಮೀರಿದೆ.

ಸ್ವರ್ಣಮಾಲಿನಿ ಚಂದ್ರಕಾಂತನನ್ನು ಊಟಕ್ಕೆ ಕರೆದಳು. ಅವನು ಮುಗಿಸಿ ಬರುವುದರೊಳಗಾಗಿ ಜೋಡಿಸೋಣವೆಂದು ಕೆಲಸಕ್ಕೆ ಕೈ ಹಚ್ಚಿದಳು ಕರ್ಮಶೀಲೆ. ಚಂದ್ರಕಾಂತ್ ಊಟ ಮುಗಿಸಿದವನೇ ಎದುರಿನ ಮಂಚದ ಮೇಲೆ ಅಡ್ಡಾದ. ತೊಟ್ಟಿಲಲ್ಲಿ ಮಗು ಹಾಯಾಗಿ ಮಲಗಿತ್ತು, ಮೋಹದ ಮುದ್ದೆಯಂತೆ.

ಮಧ್ಯಾಹ್ನದ ಸುಡು ಬಿಸಿಲು ಜೀಯುತ್ತಿದೆ. ಒಮ್ಮೊಮ್ಮೆ ತಂಗಾ ಳಿಯೂ ತೀಡಿ ಬರುವುದು. ಕಮಲೇಶ್ ಕೆಲಸ ಮುಗಿಸಿ ಹಾಸಿಗೆ ಸೇರಿದಳು. ಸ್ವಲ್ಪ ಹೊತ್ತಿನೊಳಗಾಗಿ ಕಣ್ಣಿಗೆ ಜೊಂಪು ಹತ್ತಿತು. ಕನಸಿನ ಮಾಯಾ

ಲೋಕದಲ್ಲಿ ಕಮಲೇಶ್ ಆಸ್ಪತ್ರೆಯಲ್ಲಿದ್ದಾಳೆ. ಕಲ್ಪನಾ ಕಮಲೇಶ್ ಬಿಳಿಯಂಗಿ ತೊಟ್ಟು ಜೋಡಿಯಾಗಿ ಹೆಜ್ಜೆ ಹಾಕುತಿದ್ದಾರೆ.

"ಡಾಕ್ಟರ್, ನಮ್ಮವರ ರೀತಿ ನೀತಿ ವಿಶಾದನೀಯ....ಲಜ್ಜಾಸ್ಪದ...." ಸಿಟ್ಟಿನಿಂದ ಮಾತು ತಡೆ ತಡೆದು ಹೊರಬಿತ್ತು. ಕಲ್ಪನಾ ತುಟಿ ಕಚ್ಚಿದಳು.

"ಏನು ಹೇಳು ?"

"ಹೇಳಲೇಬೇಕು....ಆದರೆ ಹೇಳುವುದೇ ಕಷ್ಟ."

ಕಲ್ಪನಾ ಕಾರಿಡಾರಿನುದ್ದಕ್ಕೂ ದಿಟ್ಟಿಯನಟ್ಟಿದಳು. ಅಜಗರದೋ-ಪಾದಿಯಲ್ಲಿ ಹರಿದ ಊದಾವರ್ಣದ ಕಾರಿಡಾರು ಸದ್ದು ಗದ್ದಲವಿಲ್ಲದೆ ಮೌನಿಗಳ ವೇಶ ತಳೆದಿದ್ದುದನ್ನು ಗಮನಿಸಿ ಮೆಲ್ಲನೆ ಬಾಯ್ದೆರೆದಳು "ಡಾಕ್ಟರ್ ! ಕಾವೇರಿ ನಾಲ್ಕೈದು ತಿಂಗಳ ಗರ್ಭಿಣಿ !"

"ನಿಜವಾಗಿ ?"

"ಹೌದು."

"ಅಯ್ಯೊ, ಗ್ರಹಚಾರವೇ ...ಮೊದಲೇ 'ಮಿದುಳು' ಕಳೆದುಕೊಂಡ ಹುಡುಗಿ !"

"ಅಷ್ಟೇ ಅಲ್ಲ, ಇನ್ನೂ ಕೇಳು !....ವರದಾತ ಡಾ|| ಬಲರಾಂ !"

"ಬಲರಾಂ....!" ಚೀರಿದಳು ಕಮಲೇಶ್.

ಕನಸಿನ ಸೆಲೆಯೊಡೆದಾಗ ಮೈ ಬೆವರಿನಿಂದ ತೊಯ್ದಿತ್ತು. ಕಣ್ಣುಗಗಳನ್ನು ಅಗಲವಾಗಿ ತೆರೆದು ಸುತ್ತಲೂ ಹೊರಳಿಸಿದಾಗ ಮುಖದ ಮೇಲಿನ ಹೊದ್ದಿಕೆಯನ್ನೆಳೆನುಕೊಂಡು ಇತ್ತಲೇ ನಿಬ್ಬೆರಗಾಗಿ ನಿಟ್ಟಿಸುತಿದ್ದ ಚಂದ್ರಕಾಂತನ ಮುಖದಲ್ಲಿ ಕೋಪದ ಕಿಡಿಗಳು ಹಾರುತಿದ್ದುದು ಗೋಚರಿಸಿತು. ಮಾತಾಡದೆ ತೀಕ್ಷ್ಣ ದಿಟ್ಟಿಯಿಂದ ನಿಟ್ಟಿಸುತಿದ್ದುದನ್ನು ನೋಡಿದ ಕಮಲೇಶ್ ಕೇಳಿದಳು "ನಿಮಗೆ ನಿದ್ದೆ ಬರಲಿಲ್ಲವೆ ?"

"ಇಲ್ಲ...."

"ಸಾರಿಡಾನ್ ತೆಗೆದುಕೊಂಡಿದ್ದರೆ ಒಳ್ಳೆಯದಿತ್ತು."

"ಒಳಗಡೆ ಬಲರಾಮನ ಧ್ಯಾನ ! ಹೊರಗಡೆ ಚಂದ್ರಕಾಂತನ ಉಪಚಾರ !" ಕಟೂಕ್ತಿ ಕತ್ತಿಯಲುಗಿನಂತೆ ಹರಿದು ಬಂತು. ಹೊದ್ದಿಕೆಯನು ಅತ್ತ ಒಗೆದು ಸಿಟ್ಟಿನಿಂದ ಎದ್ದು ಹೋದ. ಅವನು ದಡದಡ ನಡೆದು ಹೋದ

ರೀತಿ ಮೈ ನಡುಗಿಸಿತು. ಕಮಲೇಶ್ ಮತ್ತೊಮ್ಮೆ ಬೆವತು ಹರಿದಳು. ಅವನು ಶೌಚಗೃಹಕ್ಕೆ ನುಗ್ಗಿ ಜಳಜಳ ನೀರು ಸುರಿದು ಮುಖ ಮಜ್ಜನ ಮಾಡಿ ದಡ ಬಡನೆ ಒಳಬಂದಾಗ ಕಮಲೇಶ್ ಸಂತಾಪ ಮಿಶ್ರಿತದನಿಯಲ್ಲಿ ನುಡಿದಳು "ಕನಸಿನಲ್ಲಿ ಏನು ಬರುತ್ತೆ–ಏನು ಬರಲಿಕ್ಕಿಲ್ಲ? ಇದನೆಲಾ ಅನುಮಾನಿಸುವುದೆ?"

"ನಾನೀಗ ನಿಮ್ಮ ಸಮಾಜಾಯಿಸಿ ಕೇಳಲಿಲ್ಲ."

"ಶುದ್ಧ ಅನಾಗರಿಕರಂತೆ ವರ್ತಿಸಬಾರದು."

"ಹೌದು! ಅನಾಗರಿಕರು ನಾಗರಿಕರ ಕೈ ಹಿಡಿದುದೇ ತಪ್ಪು!" ದನಿ ರೋಷಪೂರ್ಣವಾಗಿತ್ತು. ಸರಸರನೆ ಬಟ್ಟೆಗಳನ್ನು ಹಾಕಿಕೊಳ್ಳತೊಡಗಿದ

"ತಪ್ಪು ನಿಮ್ಮದಲ್ಲ ಕಮಲೇಶ್, ಕಾಲಧರ್ಮ!"

ಇನ್ನೊಂದು ಘಳಿಗೆಯೊಳಗಾಗಿ ಅವನು ಬಿರುಗಾಳಿಯಂತೆ ಹೊರಟು ಹೋದ.

ಅಬ್ಬಾ....!

ಕಮಲೇಶಳ ಎದೆ ಬೇಗುದಿಯಿಂದ ಬೇಯತೊಡಗಿತು. ಸ್ವರ್ಣಮಾಲಿನಿಯ ಕಣ್ಣುಗಳು ಮಗಳನ್ನು ಪ್ರಶ್ನಾರ್ಥಕವಾಗಿ ನೋಡಿದುವು. "ಅದೇಕೆ ಈಗಲೇ ಹೊರಟರೊ...."

"ಬಹುಶಃ ಆಸ್ಪತ್ರೆಯಿಂದ ತುರ್ತುಕರೆ ಬಂದಿರಬಹುದು." ವಿಜಾತೀಯವಾದ ಧ್ವನಿಯಲ್ಲಿ ಉತ್ತರಿಸಿದಳು ಕಮಲೇಶ್.

"ಟೆಲಿಫೋನಿನ ಸದ್ದೇ ಆಗಲಿಲ್ಲ?"

"ಏನೋ....ನನಗೆ ನಿದ್ದೆ ಬಂದಿತ್ತು."

ಅಂದು ಎಷ್ಟು ಹೊತ್ತು ಕಾದರೂ ಚಂದ್ರಕಾಂತನ ಸುಳಿವೇ ಇಲ್ಲ. ಅವನು ತನ್ನ ಮನೆಗೆ ಹೋಗಿರಬಹುದೆನಿಸಿದರೂ ಕಳವಳ....ಕಿನಿಸಿಗೆ....ದುಮ್ಮಾನಗಳ ವಶೀಭೂತವಾದ ಮನಸ್ಸು ಬಹುವಾಗಿ ಘಾಸಿಗೊಂಡಿತು.

ಬಾಲರವಿ ಬಾನೇರ ತೊಡಗಿದ್ದ.

ಕಮಲೇಶ್ ತಿಂಡಿ ಮುಗಿಸಿ ಹೊರ ಬರುತ್ತಲೂ ಟೆಲಿಫೋನಿನ ಟಿಂಟಿಣಿ

ನಾದ ಕರೆ ನೀಡಿತು. ಮೇಜಿನ ಬಳಿಗೈದು ರಿಸೀವರನ್ನು ಎತ್ತಿಕೊಂಡಳು, ಆ ಕಡೆಯಿಂದ ಶ್ರೀಮರ್ತಿ ಬಲರಾಮನ ದನಿ!

"ಡಾಕ್ಟರ್! ದಯಮಾಡಿ ಕ್ಷಮಿಸಿರಿ."

ಮಾತಿಗೆ ಮೊದಲು ಕ್ಷಮೆ ಕೋರುವಂತಾದ್ದೇನು? ಚಂದ್ರಕಾಂತ್ ಏನಾದರೂ ಮಾತಾಡಿ ಗದ್ದಲವೆಬ್ಬಿಸಿದ್ದಾರೆಯೇ ಹೇಗೆ? ....ವೈ ರೋಮಾಂಚನವಾಗಿ ಹೃದಯ ವ್ಯಾಪ್ತಿಗೆ ತುಸು ವಿಸ್ತಾರಿಯಾಯಿತು.

"ಕ್ಷಮೆ ಕೋರುವಂತಾದ್ದೇನು ಡಾಕ್ಟರ್?"

"ಚಂದ್ರಕಾಂತ್ ಇಲ್ಲಿ ಅಡ್ಮಿಟ್ಟಾಗಿದ್ದಾನೆ"

"ಏಕೆ? ಏನಾಗಿದೆ?" ಚೀರಿದಳು ಕಮಲೇಶ್.

"ರಾತ್ರಿ ಡ್ಯೂಟಿಗೆ ಬಂದಮೇಲೆ ಏಕಾಏಕಿ ವಿಪರೀತ ಜ್ವರ ಬಂತು. ಈಗ ಕಡಿಮೆಯಾಗಿದೆ. ಗಾಬರಿ ಪಡುವಂತಾದ್ದು ಏನೂ ಇಲ್ಲ. ನೂರೆರಡು ಡಿಗ್ರಿಯಿದೆ."

"ಓ....! ಬಂದು ನೋಡುವೆ, ಡಾಕ್ಟರ್."

"ಜ್ವರ ಬಿಟ್ಟಮೇಲೆ ಅವನೇ ಬರುತ್ತಾನೆ. ಮತ್ತೇಕೆ ತೊಂದರೆ....?"

"ಇರಲಿ, ತಿಳಿಸಿದುದಕ್ಕೆ ತುಂಬ ವಂದನೆಗಳು."

ಕಮಲೇಶ್ ಆಸ್ಪತ್ರೆಯನ್ನು ಮುಟ್ಟಿದಾಗ ಚಂದ್ರಕಾಂತ್ ಹುಚ್ಚುಚ್ಚಾಗಿ ಬಡಬಡಿಸುತ್ತಿದ್ದ. ಕಮಲೇಶ್ ಜ್ವರ ನೋಡಿದಳು ಹೆಚ್ಚಿರಲಿಲ್ಲ.

"ಇದಿಷ್ಟನ್ನು ತಡೆದುಕೊಳ್ಳಲಾರಿರಾ?" ಸಖೇದಾಶ್ಚರ್ಯದಿಂದ ಕೇಳಿದಳು ಕಮಲೇಶ್.

"ನನಗೆ ಜ್ವರ ಬಂದರೆ ಹಾಗೆಯೆ."

"ಸರಿ....ಸರಿ."

ಚಂದ್ರಕಾಂತ್ ನಕ್ಕುಬಿಟ್ಟ. ಕಮಲೇಶಳ ಹೃದಯ ಹಗುರವಾಯಿತು.

"ನೀವಿಲ್ಲಿಗೆ ಬರುವತೊಂದರೆ ತೆಗೆದುಕೊಂಡುದುದೇಕೆ? ಈ ಜ್ವರ ಏನು ಮಾಡೀತು?" ಚಂದ್ರಕಾಂತ್ ಔಪಚಾರಿಕವಾಗಿ ನುಡಿದ.

ಬಾಗಿಲಲ್ಲಿ ಕಟಕಟ ಸದ್ದುಮಾಡಿ ಡಾ|| ಬಲರಾಂ ಒಳ ಬಂದ "ಓ....! ಇನ್ನು ಜ್ವರ ಹೇಳದೆ ಕೇಳದೆ ಓಡಿ ಹೋಗುತ್ತದೆ!"

ಚಂದ್ರಕಾಂತನ ಮುಖ ಕಮಲಪುಷ್ಪದಂತೆ ಅರಳಿತು.

ಕಮಲೇಶಳೊಂದಿಗೆ ಚಂದ್ರಕಾಂತ್ ಮನೆ ಮುಟ್ಟಿದಾಗ ಹನ್ನೆರಡು

ಗಂಟೆಯಾಗಿತ್ತು. ಚಂದ್ರಕಾಂತ್ ನೇರವಾಗಿ ಹೋಗಿ ಹಾಸಿಗೆಯ ಮೇಲೆ ಕುಳಿತು "ಮಗುವಿಗೆ ಏನು ಹೆಸರಿಡೋಣ....?" ಎಂದ.

"ನಮ್ಮ ಹಿಂದಿನ ಗಣ್ಯವರೇಣ್ಯರ ಹೆಸರಿಡುವುದು ಒಳ್ಳೆತು. 'ಬಾಲ ಗಂಗಾಧರ ತಿಲಕ್' ಎಂದು ಹೆಸರಿಸಿದರೆ 'ತಿಲಕ್' ಎಂದು ಕರೆಯಬಹುದು. ಹೆಸರು ಲಲಿತವಾಗಿದೆ."

"ಛೀ! ಛೀ! ಹೆಸರು ಆನುವಂಶಿಕವಾಗಿರಬೇಕು."

"ಅಂದರೆ....?"

"ಚಂದ್ರಕುಮಾರ್, ಚಂದ್ರಹಾಸ್, ಚಂದ್ರದೇವ್ ಇತ್ಯಾದಿ!"

"ಅದರಲ್ಲೇನು ವಿಶೇಷ?"

"ಅದೇ ಶೋಭೆ!"

"ನನಗೆ ಮನಸ್ಸೇ ಇಲ್ಲ."

"ಏನಿದ್ದರೂ ವಂಶೀಕವಾಗಿಯೇ ಬರಬೇಕು. ಬೇರೊಂದನ್ನು ನಾನು ಒಪ್ಪಲಾರೆ."

ಕಮಲೇಶ್ ಮೌನಧಾರಣೆ ಮಾಡಿದಳು.

ಗಡಿಯಾರದ ಟಿಕ್ ಟಾಕ್ ಸದ್ದು ಒಂದೇ ಗತಿಯಲ್ಲಿ ಸಾಗುತಿತ್ತು. ನಿಮಿಷನಿಮಿಷಗಳು ಸದ್ದಿಲ್ಲದೆ ಉರುಳಿದುವು. ವಿಷಯ ಸಮಸ್ಯೆಯಾಗಿ ಉಳಿಯಿತು. ಹೂ ಬಳ್ಳಿಯಲ್ಲಿ ಹುದುಗಿ ಕುಳಿತ ಪಕ್ಷಿ ಹಾಡುತ್ತಿದೆ. ಚಿಲಿಪಿಲಿ ಹಕ್ಕಿಗಳ ಅತ್ತಿಂದಿತ್ತ ಜಿಗಿದಾಡುತ್ತಿವೆ, ಕಿಟಕಿಯಲ್ಲಿ ಮೈದೋರಿದ ಆ ಸುಂದರ ದೃಶ್ಯವನ್ನೇ ನಿಟ್ಟಿಸುತ್ತ ಕುಳಿತಳು ಕಮಲೇಶ್.

"ಏಕೆ ಸುಮ್ಮನಾದಿರಿ?"

"ನೀವು ಏನಾದರೂ ಅನ್ನಿ. ನನಗಂತೂ 'ತಿಲಕ್' ಎಂಬುದೇ ಬಹಳ ಇಷ್ಟ."

"ಚಂದ್ರಕುಮಾರ್' ಎಂಬುದು ನನ್ನಿಚ್ಛೆ."

"ಸರಿ."

ಇಬ್ಬರ ಮನಸ್ಸೂ ವಿರುದ್ಧ ದಿಕ್ಕಿನಲ್ಲಿ ನಾಗಾಲೋಟದಿಂದ ಓಡಿದುವು. ತೊಟ್ಟಿಲಲ್ಲಿ ಚಂದ್ರಕುಮಾರ್ ಉರುಫ್ ಬಾಲಗಂಗಾಧರ ತಿಲಕ್ ಹಾಯಾಗಿ ನಿದ್ದೆ ಹೋಗಿದ್ದ. ಕಮಲೇಶಳ ಎದೆಯಾಳದಿಂದ ಬಿಸಿಯುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು. ನಿಶ್ಚೇಷ್ಟಳಾಗಿ ಕುಳಿತುಕೊಂಡಳು. ಮುಖದಮೇಲೆ ಸುಖ ದುಃಖಗಳ ಚಿಹ್ನೆಗಳಿರದ ಸಂಜ್ಞಾಶೂನ್ಯತೆ ನೆಲಸಿತು. ತೈಲಪ್ಲೋತ್ತಿದ ಘನಕೃಷ್ಣ ಕೇಶಪಾಶಗಳು ಸುತ್ತಲೂ ಇಳಿ ಬಿದ್ದಿದ್ದುವು.

ಅಧ್ಯಾಯ

೨೭

ಕಮಲೇಶ್ ಶಕ್ತಳಾಗಿ ಆಸ್ಪತ್ರೆಗೆ ಹೋಗುವಂತಾಗುತ್ತಲೂ ಚಂದ ಕಾಂತನ ಒತ್ತಾಯ ದಿನೇದಿನೇ ಹೆಚ್ಚ ತೊಡಗಿತು. ಆದರೂ ಕಮಲೇಶಳದು ಒಂದೇ ಉತ್ತರ "ಮಗುವನ್ನು ನೋಡಿಕೊಳ್ಳುವ ವ್ಯವಸ್ಥೆಗೇನು ಮಾಡು ವಿರಿ ? ಇಲ್ಲಿ ಮಾ ಇದ್ದಾರೆ, ನೋಡಿಕೊಳ್ಳುತ್ತಾರೆ; ಅಲ್ಲಿ....?"

"....ಅಲ್ಲಿ....?"

ಆ ಪ್ರಶ್ನೆ ಸರ್ರನೆ ಎದೆಯಾಳಕ್ಕಿಳಿಯಿತು. ಚಂದ್ರಕಾಂತ್ ವಿಚಲಿತ ನಾದರೂ ಒಂದು ನಿಮಿಷ ಯೋಚಿಸಿದ. ಅವಳ ನುಡಿಯಲ್ಲಿನ ವಾಸ್ತವಾಂಶ ಮನದೆಳೆಯನ್ನು ಕೊಕ್ಕೆಯಂತೆ ಎಳೆದು ಜಗ್ಗುತ್ತಿದೆ. ತಾಯಿ ನಾದಿನಿಯ ರಿದ್ದರೂ ಏನೇನೂ ಕಲಿಯದ ಹುಂಬರು. ಅವರಿಂದ ಈಗಿನ ಮಕ್ಕಳ ಪ್ರಕೃತಿ ಯನ್ನು ಅರಿತುಕೊಳ್ಳುವುದು ಕಷ್ಟವೇ....ಒಬ್ಬ ದಾದಿಯನ್ನು ನಿಯಮಿಸಿ ಕೊಂಡರೆ........ಅಥವಾ ಇಲ್ಲಿರುವಾಕೆಯನ್ನೇ ಕರೆದೊಯ್ದರೆ ...?

"ಈಕೆ ನಮ್ಮ ಮನೆಯನ್ನು ಬಿಟ್ಟು ಬರಲಾರಳು."

ಆತನ ಹುಚ್ಚು ಪ್ರವಾಹಕ್ಕೆ ಸದ್ಯಕ್ಕೊಂದು ತಡೆಗಟ್ಟೆ ಹಾಕಿದರೂ ಮುಂದೇನು ? ಎಂಬ ಪ್ರಶ್ನೆ ಹಿರಿದು ತಿನ್ನುತಿತ್ತು. ಕಮಲೇಶ್ ಚಿಂತಾಕ್ರಾಂತ ಳಾದಳು.

ಇಂದು ಔಟ್‌ಪೇಷಂಟ್‌ನಲ್ಲಿ ಕೆಲಸ. ಪರೀಕ್ಷಾ ಕೊಠಡಿಯ ಪರಿಸರ ದಲ್ಲಿ ಜನವಾರಿಧಿ ತುಂಬಿಹೋಗಿದೆ. ನಾಲ್ಕಾರು ಡಾಕ್ಟರುಗಳಿದ್ದರೂ ಮುಗಿಯದ ಕೆಲಸ. ಕೊಂಕುಳಲ್ಲಿ ಮಕ್ಕಳನ್ನಾಂತು ನೆರೆದ ನಾರೀಶ್ರೀವೃಂದ ....ರೋಗ ಜರೆಗಳ ಅವ್ಯಾಹತ ಪ್ರದರ್ಶನ.

ಈ ಜೀವನ ಲೀಲೆ ಎಷ್ಟು ಅದ್ಭುತವಾದುದೋ ಅಷ್ಟೇ ವಿಚಿತ್ರವೂ ಹೌದು.

ಟೆಲಿಫೋನಿನ ಟಂಟಣಿನಾದ ತಟ್ಟನೆ ಕರೆ ನೀಡಿತು. ಆ ಕಡೆಯಿಂದ ಡಾ|| ಥಾಮಸ್ ಮಾತಾಡಿದರು, "ಡಾ|| ಕಮಲೇಶ್ ಇದ್ದಾರೆಯೇ ?"

"ಹೌದು, ಸರ್. ನಾನೇ ಮಾತಾಡುವುದು."

"ನೀವು ದಯಮಾಡಿ ಆಫೀಸಿಗೆ ಬಂದು ಹೋಗುವಿರಾ ?"

"ಆಗಲಿ ಸರ್."

ಕಮಲೇಶ್ ರಿಸೀವರನ್ನು ಸ್ವಸ್ಥಾನದಲ್ಲಿ ಆಳವಡಿಸಿ ತನ್ನ ಕೆಲಸವನ್ನು ಡಾ|| ಜುಬೇದಾ ಬೇಗಂ-ಳಿಗೆ ವಹಿಸಿ ಡಾ|| ಥಾಮಸ್‌ರವರನ್ನು ನೋಡಲು ಹೊರಟಳು. ಗುಡುಗಿನ ಭಯಂಕರ ಆರ್ಭಟ ಕೇಳಿ ಬರುತ್ತಿದೆ, ನಿನ್ನೆಯೇ ಮಳೆ ಬೀಳಬಹುದೆಂದು ಭಾವಿಸಿದ್ದರೂ ಬೀಳಲಿಲ್ಲ. ಇಂದಾದರೂ ಬಿದ್ದಿದ್ದರೆ ಈ ಬಿಸಿಲಿನ ಬೇಗೆಯಾದರೂ ಕಡಿಮೆಯಾಗುತಿತ್ತು....ಆದರೆ ಮಾನವ ಸಹಜ ವಾದ ಆಸೆ ಆಕ್ಷಾಂಕ್ಷೆಗಳಿಗೆ ಇತಿಮಿತಿಯೇಕಿಲ್ಲ? ಈ ಆಕಾಲವರ್ಷವು ನಾವು ಬಯಸಿದಷ್ಟು ದೊರೆಯುವುದುಸಾಧ್ಯವೇ ?....ಒಡನೆ ಅವಳ ಶೋಣವರ್ಣದ ತುಟಿಗಳಂಚಿನಲ್ಲಿ ಸರಳ ಸ್ನಿಗ್ಧ ಹಾಸ ಮಿನುಗಿ ಮಾಯವಾಯಿತು.

ಡಾ|| ಥಾಮಸರ ಆಫೀಸಿಗೆ ಕಾಲಿಟ್ಟಾಗ ಅವರು ದಿನಚರಿ ಕೆಲಸದಲ್ಲಿ ತೀವ್ರ ಮಗ್ನರಾಗಿದ್ದುದು ಕಾಣಬಂತು. ಪದಾಘಾತದ ಸದ್ದು ಕೇಳಿದಾಗ ತಲೆಯೆತ್ತಿ ನೋಡಿ "ಬನ್ನಿ ಡಾಕ್ಟರ್ !" ಎಂದರು ಗಂಭೀರ ದನಿಯಲ್ಲಿ.

ಕಮಲೇಶ್ ಕುಳಿತುಕೊಂಡಳು.

"ನೀವು ಈಚೆಗೆ ಕಾವೇರಿಯನ್ನು ವಿಚಾರಿಸಿಕೊಂಡಿದ್ದೀರಾ?"

"ಇಲ್ಲ....ಆಗಲಿಲ್ಲ ಸರ್."

"ನೀವು ದೂಡುವುದೆಲ್ಲಿಗೆ ಅಂದಿರಿ. ನನಗೂ ಹಾಗೇ ಆನಿಸಿತು. ಈಗ ನೋಡಿದರೆ ಎಲ್ಲಾ ವ್ಯರ್ಥ ಎನಿಸುತ್ತಿದೆ...."

ಕಮಲೇಶಳಿಗೆ ಏನು ಹೇಳಬೇಕೋ ತಿಳಿಯದೆ....ವಿಷಯವೇನೆಂಬುದೂ ಸಹ ಹೊಳೆಯದೆ ಒಂದು ಘಳಿಗೆ ಆವಾಕ್ಕಾದಳು. ಕಣ್ಣುಗಳಲ್ಲಿ ಆಶ್ಚರ್ಯದ ಛಾಯೆ ಸುಳಿದಳಿಯಿತು.

"ಅವಳು....ಗರ್ಭಿಣಿ !"

ತಟ್ಟನೆ ಕನಸಿನ ಚಿತ್ರ ಚಿತ್ತಭಿತ್ತಿಯಲ್ಲಿ ತೇಲಿ ನಲಿಯಿತು. ಎಷ್ಟು ಬೇಗ ನನಸಾಗಿ ಬಿಟ್ಟಿದೆ ಕನಸು! ಛೆಃ! ಛೆಃ!....

"ಈಗೇನು ಮಾಡೋಣ?" ಮತ್ತೆ ಅವರ ದನಿ ಕಿವಿಯನ್ನು ತಾಗಿತು.

"ಸರ್, ಆ ಹುಡುಗಿಯ ಮೇಲೆ ಅತ್ಯಾಚಾರ ನಿಜವಾಗಿಯೂ ಅಕ್ಷಮ್ಯ ಅಪರಾಧ. ಅವರನ್ನು ಪತ್ತೆ ಹಚ್ಚಿ ಶಿಕ್ಷೆಗೊಳಪಡಿಸಲೇಬೇಕು."

"ಕೇಳಿದರೆ ಅವಳು ಗುಟ್ಟೇ ಬಿಡುವುದಿಲ್ಲ. ಒಳಕೋಣೆಯಲ್ಲಿದ್ದಾಳೆ. ನೀವೇ ಕೇಳಿ ನೋಡಿರಿ."

ಆ ಮುಂದಮತಿಯ ಕರುಣಾಜನಕ ಪ್ರಕರಣ ಕ್ಷಣ ಕ್ಷಣವೂ ಅಸಹನೀಯವಾಗುತಿತ್ತು.......

"ಇನ್ನು ಯೋಚಿಸಿ ಫಲವಿಲ್ಲ. ಮುಂದೇನು ಮಾಡಬೇಕೋ ಯೋಚಿಸಿ ನೋಡಿ."

ಕಮಲೇಶ್ ಸ್ವಲ್ಪ ಹೊತ್ತು ಮೌನಧಾರಣೆ ಮಾಡಿದಳು.

"ಅವಳ ಸಹಪಾಟಿಗಳ ಹೇಳಿಕೆಯ ಪ್ರಕಾರ ಕಾವೇರಿಗೆ ಹೊಟ್ಟೆನೋವು ಬರುತಿತ್ತಂತೆ. ತೋರಿಸಿಕೊಳ್ಳುವುದಕ್ಕಾಗಿ ಆಗಾಗ ಡಾ|| ಬಲರಾಂರವರಲ್ಲಿಗೆ ಹೋಗುತ್ತಿದ್ದಳಂತೆ. ಆದರೆ ನಾವು ಅವರನ್ನು ಅನುಮಾನಿಸಲಾದೀತೆ?" ಗಂಭೀರಭಾವದಿಂದ ನುಡಿದರು ಡಾ|| ಥಾಮಸ್.

ವಿಷಯ ಇನ್ನೂ ಪರಿಶೀಲನೆಯಲ್ಲಿದ್ದುದರಿಂದ ಏನೂ ಹೇಳುವಂತಿಲ್ಲದೆ ಹೋದರೂ ಡಾ|| ಬಲರಾಂ ವಿಷಯ ನಂಬುವುದಕ್ಕಾಗುವುದಿಲ್ಲ ಎಂಬ ಯೋಚನೆ ಬಂತು. ಒಳಕೋಣೆಯ ಕದ ತೆರೆಯಿತು. ಮೇಟ್ರನ್ ಹೊರ ಬಂದು "ಎಷ್ಟೇ ಪ್ರಯತ್ನ ಪಟ್ಟರೂ ಅವಳು ಏನೂ ಹೇಳುವುದಿಲ್ಲ." ಎಂದಳು.

ಕಮಲೇಶ್ ಎದ್ದು ಒಳಗಡೆ ಹೋದಳು. ಕಾವೇರಿ ಮುಖಮುಡಿಯಾಗಿ ಮೇಜಿನ ಬಳಿ ನಿಂತಿದ್ದಾಳೆ.ತುಂಬಿಕೊಂಡ ಅಂಗಾಂಗಗಳು ವರದಿಗೆ ಸಾಕ್ಷಿಯಾಗಿವೆ....ಹೆಣ್ಣಿನ ಜೀವನವನ್ನು ಯಾವ ಮಾರ್ದವತೆ ನಡೆಸುವುದೋ ಅದೇ ರಾಗಮಾಧುರ್ಯವನ್ನು ಅಂತರಂಗದಲ್ಲಿ ಬಂಧಿಸಿಟ್ಟು ಹಿಂದು ಮುಂದು ಆಲೋಚಿಸಲು ಸಹ ಅವಕಾಶ ಕೊಡುವುದಿಲ್ಲ....ಮೇಲಾಗಿ ಪುರುಷನ ಪ್ರಬಲ ಶಕ್ತಿಯ ಮುಂದೆ ಆಕೆ ನಿಸ್ಸಹಾಯಕಳೂ ಹೌದು....ಯೋಚಿಸುತ್ತಾ ನಿಡುಸುಯ್ದಳು ಕಮಲೇಶ್.

ಅವಳು ಮುಸು ಮುಸು ಅಳತೊಡಗಿದುದನ್ನು ನೋಡಿ ಕಮಲೇಶಳ ಅಂತಃಕರಣ ಮಂಜಿನಂತೆ ಕರಗಿತು. ನಲ್ಮೆಯಿಂದ ಬೆನ್ನಿನ ಮೇಲೆ ಕೈಯಿಟ್ಟು

ಸಂತೈಸಿ ಹಿತವಚನಗಳನ್ನು ಹೇಳಿ, ಡಾ|| ಥಾಮಸ್‌ರವರೊಂದಿಗೆ ಮಾತಾಡಿ, ಮುಂದಿನ ವ್ಯವಸ್ಥೆಯ ಬಗ್ಗೆ ಏರ್ಪಾಡು ಮಾಡಿ ಹೊರಟಳು. ಆಫೀಸನ್ನು ಬಿಟ್ಟು ಕಾರಿಡಾರಿನಲ್ಲಿ ಹತ್ತು ಹೆಜ್ಜೆ ನಡೆಯುವುದರೊಳಗಾಗಿ ಡಾ|| ಪದ್ಮಾ ಕಮಲಾನಿ ಎದುರಾದಳು. ಮುಂದೆ ಇಬ್ಬರೂ ಕೂಡಿ ಹೊರಟರು.

"ಸಕ್ಕೂಗೆ ಮದುವೆಯಂತೆ, ನಿನಗೆ ತಿಳಿಯಿತೇ ಕಮಲೇಶ್?"

"ಇಲ್ಲ....ಯಾರು ಗಂಡು?"

"ಐದು ಮಕ್ಕಳ ತಂದೆ....ಶಾಲಾ ಮಾಸ್ತರು!"

"ಅದೇಕೆ ಅಂತಹ ಸಂಬಂಧ ಒಪ್ಪಿಕೊಂಡರೋ ?"

"ಗಂಡು ಸಿಗಲಿಲ್ಲ."

"ಪಾಪ, ಅವಳ ಕತೆ ಹೀಗಾಗುತ್ತೆಂದು ಯಾರು ತಿಳಿದಿದ್ದರು?"

ವಿಧಿ ವಿಲಾಸ....!

"ಓ...! ನಿನಗೆ ಇನ್ನೊಂದು ವಿಷಯ ಹೇಳಲು ಮರೆತು ಬಿಟ್ಟೆ!"

"ಒಂದೊಂದೇ ಬಾಣವನ್ನು ಬತ್ತಳಿಕೆಯಿಂದ ಹೊರ ತೆಗೆಯುತಿದ್ದಿ?"

ತುಟಿಗಳಲ್ಲಿ ಮೃದುಹಾಸವನ್ನು ಹರಿಸಿ "ಸುಧಾ ಹೆತ್ತಿದ್ದಾಳೆ! ಈಗಷ್ಟೆ ಹೆರಿಗೆ ಮಾಡಿಸಿ ಬಂದೆ."

"ಎಂಥ ಮಗು ?"

"ಗಂಡು."

ಕಮಲೇಶ್ ಕಾವೇರಿಯ ಸ್ಥಿತಿಯನ್ನು ನೆನೆದು ಮರುಗಿದಳು....ಪ್ರಿಯ ಸಹಧರ್ಮಿಣಿಯೊಂದಿಗೆ ಬಾಳುವೆ ನಡೆಸಿ, ಇಲ್ಲೂ ದ್ರೋಹ ಬಗೆದು, ಅಲ್ಲೂ ಹಾಳು ಮಾಡಿದ ಪಾಪಕೃತ್ಯಕ್ಕೆ ಭಗವಂತ ಇನ್ನಾವ ಶಿಕ್ಷೆ ವಿಧಿಸುವನೋ....

ಇಬ್ಬರ ಹಾದಿಯೂ ಕವಲೊಡೆದು ಕಟಾಕ್ಷಗಳು ಪರಸ್ಪರ ಬೀಳ್ಕೊಟ್ಟುವು.

ಹಗಲು ಉರುಳಿ ರಾತ್ರಿ ಆಗಮಿಸಿತು. ಅಂಧಕಾರದ ಆವರಣವನ್ನು ಭೇದಿಸಿ ನಕ್ಷತ್ರಗಳು ಹಣಕಿದುವು.

ಚಂದ್ರಕಾಂತ್ ಊಟವಾದನಂತರ ಮಡದಿಯ ಆಗಮನವನ್ನೆದುರು ನೋಡುತ್ತಾ ಪತ್ರಿಕೆಯ ಮೇಲೆ ಕಣ್ಣಾಡಿಸುತಿದ್ದ. ಮಗು ತೊಟ್ಟಿಲಲ್ಲಿ

ಹಾಯಾಗಿ ಮಲಗಿ ನಿದ್ದೆ ಹೋಗಿತ್ತು. ತಾಯಿಯೊಂದಿಗೆ ಮಾತುಕತೆಯಲ್ಲಿ ಮೈ ಮರೆತಿದ್ದ ಕಮಲೇಶಳಿಗೆ ದಿನದ ಜಂಜಡವನ್ನು ಕಳೆದು ಹಾಯೆನಿಸಿತು. ಗಡಿಯಾರದ ಮುಳ್ಳು ಹನ್ನೊಂದರ ಅಂಚಿನವರೆವಿಗೂ ನಡೆದಿದೆ. ಸದ್ದು ಗದ್ದಲಗಳಿಲ್ಲದ ಪ್ರಶಾಂತವಾದ ರಾತ್ರಿಯಲ್ಲಿ ಎಳೆದಿಂಗಳಿನ ವಿಮಲಧಾರೆಸ್ನಿಗ್ಧ ಶೀತಲ ಜ್ಯೋತಿಯಂತೆ ಮನಸ್ಸಿಗೆ ಉಲ್ಲಾಸವನ್ನೂಡಿಸಿತು. ಗಾಢ ನಿದ್ದೆಯ ಲ್ಲಿದ್ದ ಚೇತನಳ ಶಯ್ಯಾ ಪ್ರಾಂತದಲ್ಲಿ ಕುಳಿತ ಕಮಲೇಶಳಿಗೆಹೊತ್ತಿನ ಪರಿವೆಯೇ ಇಲ್ಲ. ನೀರವವನ್ನು ಬೇಧಿಸಿಕೊಂಡು ಹರಿದು ಬಂದ ದನಿ ಕಿವಿ ಯನ್ನು ತಾಗಿತು "ಕಮಲೇಶ್!"

"ಚಂದ್ರಕಾಂತ್ ಕರೆಯುತಿದ್ದಾರೆ!" ಎಂದಳು ಸ್ವರ್ಣಮಾಲಿನಿ, ಹುಬ್ಬುಗಳು ಏರಿ ಇಳಿದುವು.

ಉಳಿದ ಮಾತಿನ ತುಣುಕನ್ನು ಮುಗಿಸಿ ಎದ್ದು ನಿಲ್ಲುವುದರೊಳಗಾಗಿ ಚಂದ್ರಕಾಂತ್ ಅಲ್ಲಿಯೇ ಕಾಣಿಸಿಕೊಂಡ. ಬಾಗಿಲಿಗಡ್ಡಲಾಗಿ ಹೊಸ್ತಿಲ ಮೇಲೆ ನಿಂತು ಸ್ವರ್ಣಮಾಲಿನಿಯನ್ನು ಕುರಿತು ಇಂತೆಂದ. "ನನ್ನ ಸಂಸಾರ ವನ್ನು ನಮ್ಮಲ್ಲಿಗೆ ಕರೆದೊಯ್ಯುವೆ. ಇನ್ನು ನನ್ನಿಂದ ಇಲ್ಲಿರಲು ಸಾಧ್ಯವೇ ಇಲ್ಲ."

ಸ್ವರ್ಣಮಾಲಿನಿ ಬೆಕ್ಕಸ ಬೆರಗಾದಳು. ಹೃದಯ ಮೇರೆ ಮೀರಿ ಮಿಡಿಯಿತು.

ಈ ವಿಚಾರದಲ್ಲಿ ದಂಪತಿಗಳಲ್ಲಿ ಎಷ್ಟೇ ಮಾತುಕತೆ ನಡೆದಿದ್ದರೂ ಆ ವೃದ್ಧ ಜನನಿಗೆ ಅದರ ಬಿಸಿ ತಟ್ಟಿರಲಿಲ್ಲ. ಏಕಾಏಕಿ ಸಿಡಿಲು ಬಡಿದಿದ್ದರೂ ಸಹ ಅಷ್ಟು ಬೆಚ್ಚುತ್ತಿರಲಿಲ್ಲವೇನೋ. ಅವಳ ಬಾಯಿಯಲ್ಲಿ ಸ್ವರವೇ ಹೊರಡ ದಂತಾಗಿ ಸುಮ್ಮನೆ ನಿಂತು ಬಿಟ್ಟಳು.

"ನೀವು ಹೀಗೆಲ್ಲಾ ಹಠಮಾಡಿದರೆ ಹೇಗೆ ಡಾಕ್ಟರ್?" ಎಂದಳು ಕಮ ಲೇಶ್.

"ಭೇಷ್....ಚೆನ್ನಾಗಿದೆ! ನಾನಾದರೂ ಎಷ್ಟುಕಾಲ ನಿಮ್ಮಲ್ಲಿರಲಿ?"

ಕಮಲೇಶ್ ಅವಾಕ್ಕಾದಳು. ಮೈಮರವಟ್ಟಂತಾಯಿತು.

ಹಿರಿಯ ಸಮಸ್ಯೆ ಹಿರಿದು ತಿನ್ನ ತೊಡಗಿತು. ವೃದ್ಧ ಜನನಿಯ ಮುಂದೆ ತಾನು ನಿಸ್ಸಹಾಯಕತೆಯಿಂದ ತಲೆ ಬಾಗಬೇಕಾಗಿ ಬಂದ ಬಗೆ ಹೃದಯ

ವನ್ನು ಹಿಂಡತೊಡಗಿತು. ಎಷ್ಟೇ ಪ್ರಯತ್ನ ಪಟ್ಟರೂ ಎಷ್ಟೇ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಂಡರೂ ದುರ್ಬಲತೆಯನ್ನು ಮುಚ್ಚಿಡಲಾಗ ಲಿಲ್ಲ. ಮುಖದ ಮೇಲೆ ವ್ಯಸನದ ಕಪ್ಪುಛಾಯೆ ದಟ್ಟವಾಗಿ ಕವಿಯಿತು.

ಚಂದ್ರಕಾಂತ್ ಪುನಃ ಕೇಳಿದ "ಏನು ಹೇಳುತ್ತೀರಿ?"

"ನಮ್ಮ ಗತಿಯೇನು? ಇಲ್ಲಿ ಇನ್ನಾರಿದ್ದಾರೆ?" ದುಗುಡ ಮಿಶ್ರಿತ ದನಿ ಯಲ್ಲಿ ಕೇಳಿದಳು ಸ್ವರ್ಣಮಾಲಿನಿ. ಚೇತನದ ಮೇಲೆ ಬಿದ್ದ ಆಘಾತದ ರುದ್ರ ಶಬ್ದ ಅನಂತದಲ್ಲಿ ವಿಲೀನವಾಗಿದ್ದರೂ ಕಿವಿಯಲ್ಲಿ ಮೊರೆಯುತ್ತಲೇ ಇತ್ತು, ಜೇನ್ದುಂಬಿಯ ಝೇಂಕಾರದಂತೆ.

"ಈ ವಿಚಾರವನ್ನೆಲ್ಲಾ ಮದುವೆಗೆ ಮುನ್ನ ಯೋಚಿಸಬೇಕಾಗಿತ್ತು. ಈಗ ಹಾಗೆಂದರೆ....?" ಚಂದ್ರಕಾಂತ್ ಸಿಟ್ಟಿನಿಂದ ಕೇಳಿದ.

"ಅಲ್ಲಿ ನಿಮ್ಮ ತಮ್ಮ ಇರುವುದರಿಂದ ನಿಮ್ಮ ಸಂಸಾರಕ್ಕೆ ಯಾವ ಕೊರ ತೆಯೂ ಬೀಳುವುದಿಲ್ಲ. ವಿನಾಕಾರಣ ತೊಂದರೆಯೆಬ್ಬಿಸುವುದೇಕೆ?"

"ನೀವು ನಿಮ್ಮ ತೊಂದರೆಗಳನ್ನು ಮುಂದಿಟ್ಟರೆ ಅದಕ್ಕೆ ಕೊನೆಯೇ ಇಲ್ಲ. ನಾನು ಸಾಯುವತನಕ ನಿಮ್ಮ ಕೈಗೊಂಬೆಯಾಗಿರಲಾರೆ."

ಸ್ವರ್ಣಮಾಲಿನಿ ದೀರ್ಘವಾಗಿ ನಿಟ್ಟುಸಿರು ಬಿಟ್ಟಳು. ಕಣ್ಣುಗಳಲ್ಲಿ ಫಳ ಕ್ಕನೆ ನೀರಾಡಿತು.

"ನಮ್ಮ ತಾಯಿ ಸಂಪ್ರದಾಯ ಶರಣರು. ಅವರಿಗೆ ನಾನಿಲ್ಲಿರುವುದು ಸರ್ವಥಾ ಇಷ್ಟವಿಲ್ಲ." ಚಂದ್ರಕಾಂತ್ ಅಷ್ಟು ಹೇಳಿ ಹಠಾತ್ತನೆ ನಿರ್ಗಮಿಸಿದ. ಕೇವಲ ತನ್ನ ದೃಢ ಅಭಿಪ್ರಾಯವನ್ನು ತಿಳಿಸಿ ಹೋಗಲೆಂದೇ ಬಂದಂತಿತ್ತು ಅವನ ಅನಿರೀಕ್ಷಿತ ಆಗಮನ....ಆ ಪ್ರಶಸ್ತ ಹೆಜ್ಜೆಗಳು ನಿಷ್ಕ್ರಮಿಸುವ ಸದ್ದು ಕೇಳಿಸುತ್ತಲೇ ಇದೆ. ಇನ್ನೂ, ಈಗಲೂ ಈ ಕ್ಷಣವೂ.. ....

ಹೃದಯ ಸಂಪುಟವು ಕಳಚಿ ಬಿದ್ದಂತಾಯಿತು .ಸ್ವರ್ಣಮಾಲಿನಿಗೆ. ಮಗಳನ್ನು ಬಿಗಿಯಾಗಿ ಅಪ್ಪಿಕೊಂಡು ಗಳಗಳನೆ ಅಳತೊಡಗಿದಳು. ಎದೆಯ ಸಂಕಟವೆಲ್ಲಾ ಧಾರೆಧಾರೆಯಾಗಿ ಹರಿದು ಬಂತು.

"ನಾನೆಲ್ಲಿದ್ದರೂ ನಿಮ್ಮವಳೇ. ನಿಮ್ಮನ್ನೆಂದೂ ಬಿಟ್ಟಿರಲಾರೆ ಯೋಚಿಸ ಬೇಡ ಮಾ." ದುಃಖಪೂರ್ಣವಾದ ದನಿಯಲ್ಲಿ ನುಡಿದಳು ಕಮಲೇಶ್.

"ತಿಳಿದೂ ತಿಳಿದೂ ಕಷ್ಟಕ್ಕೆ ತಂದುಕೊಂಡೆ."

ಸ್ವರ್ಣಮಾಲಿನಿಯ ದುಃಖತಪ್ತ ಚಿತ್ತ ಹಳೆಯದಿನಗಳಿಗೆ ಜಾರಿ, ಚಿತ್ರಸೇನನ ಸುತ್ತಮುತ್ತ ದಿಕ್ಕೆಟ್ಟ ಹಕ್ಕಿಯಂತೆ ಅಲೆದಾಡಿ ಹಲವಾರು ವಿಧಗಳಲ್ಲಿ ಹಲುಬಿತು. ಗೃಹಸ್ಥಾಶ್ರಮವನ್ನು ಕೈಕೊಂಡ ರಮಣಿ ಪತಿ ಗೃಹಕ್ಕೈದುವುದು ಸರ್ವೇಸಾಮಾನ್ಯವಾದರೂ ಅವಳು ಕಂಡ ಕನಸಿನ ರೀತಿಯೇ ಬೇರೆ. ಬಯಸಿದ ಬಯಕೆಯೇ ಬೇರೆ. ತನಗೂ ಮಗಳಿಗೂ ಇದ್ದ ಅನುಬಂಧ ಅಪಾರವಾದುದು. ಈ ಪ್ರತಿರೋಧಕ್ಕೆ ಅವಿರತ ಸಂಘರ್ಷಣೆಗೆ ಪರಿಹಾರವಾದರೂ ಏನು?

ಗಡಿಯಾರದ ಮುಳ್ಳು ಮುಂದುವರಿಯುತ್ತಲೇ ಇದೆ. ಮಧ್ಯರಾತ್ರಿ ಕಳೆಯಿತು. ಎಳ್ಳುಬೀರಿದರೂ ಕೇಳಿಸುವಂತಹ ನಿಶ್ಯಬ್ದ. ಸ್ವರ್ಣಮಾಲಿನಿಯ ಕೊಠಡಿಯಲ್ಲಿ ವಿನಾ ಇನ್ನೆಲ್ಲಾ ದೀಪಗಳೂ ನಂದಿವೆ. ಅಲ್ಲಲ್ಲಿ ಆಗೊಮ್ಮೆ ಈಗೊಮ್ಮೆ ನಾಯಿಗಳು ಬೊಗಳುವುದು ಕೇಳಿಸುತ್ತಿದೆ. ನೀರವತೆಯನ್ನು ಭೇದಿಸಿಕೊಂಡು ಬರುವ ಶಬ್ದ ಕರ್ಣಪಟಲಗಳಮೇಲೆ ಗಡುಸಾಗಿ ಬೀಳುವಾಗ ....ಆ ಕರ್ಕಶ ಧ್ವನಿ ಯಾವುದೋ ಚರಮ ಸಂದೇಶದಂತೆ, ಯಾವುದೋ ವಿಶಾದ ಗೀತೆಯಂತೆ ಹೃದಯ ತುಂತುಗಳಲ್ಲಿ ಮತ್ತೆ ಮತ್ತೆ ಮಿಡಿಯುವುದು ....ಸ್ವಯಂ ಪ್ರೇರಣೆಯಿಂದ ಆರಂಭವಾದ ರಾಗಾಭಿಮಾನರಂಜಿತ ರೂಪಕದ ಭವಿಷ್ಯತ್ತು ಪ್ರತಿಕೂಲವಾಗಲು ಕಾರಣವೇನು ? ಈ ಜಗತ್ತಿನಲ್ಲಿ ಕ್ಷಣ ಕ್ಷಣವೂ ಸಂಭವಿಸುವ ಜೀವನಪ್ರಕರಣಗಳಲ್ಲಿ "ಔನ್ನತ್ಯ" ವೆಂಬುದು ಇಲ್ಲವೇ ಇಲ್ಲವೆ? "ಔನ್ನತ್ಯ" ವಿಲ್ಲದಮೇಲೆ ಜೀವನಬಂಧವನ್ನು ಅನುಭವಿಸುವ "ಅಗತ್ಯ" ವಾದರೂ ಏನು....?

ಹಾ........!

ಮನೋಮಂದಿರದಿಂದ ಹೊರಹೊಮ್ಮುವ ವಿಷಾದ ಗೀತೆಯ ವಿಚಿತ್ರ ಪರಿಮಳವನ್ನು ಆಸ್ವಾದಿಸಲು ಅಂತರಂಗ ಹಿಂಜರಿಯಿತು. ಜೀವನರಂಗದ ಕರಾಳ ಸ್ವರೂಪ ಸಮಾಜದ "ಹೃದಯಹೀನ"ತೆಯನ್ನು ಪ್ರದರ್ಶಿಸುವಾಗ ಕ್ಷಣ ಕ್ಷಣವೂ ದೈಹಿಕ ಕ್ರಿಯೆಗಳು ನಿಷ್ಕ್ರಿಯೆಯಾಗುತ್ತಿರುವಂತೆ ಭಾಸವಾಗಿ ಸುಮ್ಮನೆ ಕುಳಿತು ಬಿಟ್ಟಳು.

ಕಮಲೇಶಳ ವಿಶಾಲವಾದ ಕಾಡಿಗೆಗಣ್ಣುಗಳು ತುಂಬಿ ಬಂದುವು. ತನ್ನನ್ನು ತಾನು ಸಾವರಿಸಿಕೊಳ್ಳುತ್ತ ಮಾತೆಯನ್ನು ಹಲವು ವಿಧದಲ್ಲಿ ಸಂ

ತೈಸಿ ಕೊಠಡಿಗೆ ಹೋಗಿ ಹಾಸಿಗೆ ಸೇರಿದಾಗ ಚಂದ್ರಕಾಂತ್ ಸಿಡಿದೆದ್ದ "ಈ ಬೆಳಗಿನ ಝಾವ ಬಂದು ನಿದ್ದೆಗೆಡಿಸುವುದೇ? ಅಲ್ಲೇ ಬಿದ್ದುಕೊಳ್ಳಲಿಕ್ಕೇನಾಗಿತ್ತು?"

ಬರದಿದ್ದರೂ ಇನ್ನಾವ ಕಿಡಿ ಹಾರಲಿತ್ತೋ....

ಬೆಳಗಿನ ದಿನಚರಿ ನಿಶ್ಯಬ್ದವಾಗಿ ಆರಂಭವಾಯಿತು. ದಿಗಂತದಿಂದ ದಿಗಂತದೆಡೆಗೆ ಬೀಸುವ ತಂಗಾಳಿ ವಿಷಾದವಾರ್ತೆಯನ್ನು ಬಿತ್ತರಿಸುವಂತೆ ಸುಯ್ಯನೆ ಸುಯ್ದು ಬೀಸುತ್ತಿದೆ. ಸುಪ್ರಭಾತವಾದಾಗಲೇ ಚೇತನಾ ತಿಲಕರು ಎದ್ದು ಬಿಟ್ಟಿದ್ದಾರೆ. ಈಚೆಗೆ ಶಾಲೆಗೆ ಹೋಗಲು ಆರಂಬಿಸಿದ್ದ ಚೇತನಳಿಗೆ ಶಾಲೆಗೆ ಹೋಗುವುದು ಒಮ್ಮೆ ಉತ್ಸಾಹವಾದರೂ ಇನ್ನೊಮ್ಮೆ ಕಿನಿಸಿಗೆ. ಇಂದು ಹೋಗುವುದಿಲ್ಲವೆಂದೋ ಏನೋ....ಮುಸು ಮುಸು ರಾಗ ಆರಂಭಿಸಿದಾಗ ಚಂದ್ರಕಾಂತ್ ನಿದ್ದೆಯಿಂದ ತಿಳಿದೆದ್ದು ಫಳೀರನೆ ಕೆನ್ನೆಯ ಮೇಲೊಂದು ಬಿಗಿದು "ಮುಚ್ಚು ಬಾಯಿ !" ಅಂದ.

ಆ ಘಾತ ತನಗೇ ಬಿದ್ದಿದ್ದರೂ ಅಷ್ಟು ವ್ಯಸನವಾಗುತ್ತಿರಲಿಲ್ಲ ಕಮಲೇಶಳಿಗೆ. 'ಹಾ!' ಎನ್ನುವುದರೊಳಗಾಗಿ ಪೆಟ್ಟುಬಿದ್ದಾಗಿತ್ತು. ಕಮಲೇಶ್ ಸಿಡಿಲು ಬಡಿದವಳಂತಾದಳು. ಅಂದಿನಿಂದ ಇಂದಿನವರೆವಿಗೆ ಮುದ್ದಿನ ಆಗರವಾಗಿ ನೋಡಿಕೊಂಡಿದ್ದ ಮಗು ತನ್ನ ಮುಂದೆಯೇ ದಂಡನೆಗೊಳಗಾದ ಬಗೆ ಚಿತ್ತಾಂಬುಧಿಯನ್ನು ಕಲಕಿಬಿಟ್ಟಿತು.

"ಛೀ! ಛೀ! ಇದೇನು ? ಯಾರಮೇಲಿನ ಸಿಟ್ಟು ಯಾರಮೇಲೆ ತೀರಿಸುತಿದ್ದೀರಿ?"

"ಸಿಟ್ಟೂ ಅಲ್ಲ; ಗಿಟ್ಟೂ ಅಲ್ಲ. ಅವಳನ್ನು ಮುದ್ದುಮಾಡಿ ಬಹಳ ಹೆಚ್ಚಿಸಿಬಿಟ್ಟಿದ್ದೀರಿ! ಒಂದಿಷ್ಟು ಬಿಸಿತೋರದಿದ್ದರೆ ಅವಳೆಂದೂ ದಾರಿಗೆ ಬರುವುದಿಲ್ಲ." ಚಂದ್ರಕಾಂತ್ ತುಟಿ ಕಚ್ಚಿದ.

ಮಗುವನ್ನು ಎದೆಗೆತ್ತಿಕೊಂಡು ಧೀರಗಂಭೀರಳಾಗಿ ನಿಂತಳು ಕಮಲೇಶ್. ಕಣ್ಣುಗಳಲ್ಲಿ ಸಖೇದಾಶ್ಚರ್ಯಗಳಜ್ವಾಲೆ ಹೊರಹೊಮ್ಮುತಿತ್ತು. ಚಂದ್ರಕಾಂತ್ ಅಲ್ಲಿ ನಿಲ್ಲದೆ ಶೌಚಗೃಹಕ್ಕೆ ಹೋದ. ಬಿಕ್ಕಿ ಬಿಕ್ಕಿ ಅಳುವ ಚೇತನಳನ್ನು ಸಂತೈಸುತ್ತಾ ಒಳಗಡೆ ಬಂದಳು. ಕಾದ ಸರಳು ಸರ್ರನೆ ಹೃದಯದಾಳಕ್ಕೆ ಇಳಿದಂತಾಯಿತು. ಪ್ರಯತ್ನಪೂರ್ವಕವಾಗಿ ತಡೆ ಹಿಡಿ

ದರೂ ಕಂಬನಿಗಳು ಪಟಪಟನೆ ಉದುರಿದುವು. ಕಮಲೇಶ್ ನೀರು ಮನೆಗೆ ಹೋಗಿ ಮಗುವಿನ ಮುಖ ತೊಳೆಯುವುದರೊಂದಿಗೆ ತಾನೂ ತೊಳೆದುಕೊಂಡಳು. ಹೃದಯ ಹೆಗ್ಗಲ್ಲಾಯಿತು. ವಿರುದ್ಧಮುಖವಾದ ಅನಾತ್ಮೀಯ ಭಾವಗಳ ಕರ್ಕಶ ಕಠಿಣ ಸಂಘರ್ಷಣೆ ಜೀವಗತಿಯನ್ನು ತಲ್ಲಣಿಸುವಂತೆ ಮಾಡಿತು.

ತನ್ನನ್ನು ಬರಲೇಬೇಕೆಂದು ಒತ್ತಾಯಗೊಳಿಸುವ ವ್ಯಕ್ತಿ ಮಾ–ನನ್ನೂ ಕರೆದು "ನೀವೂ ಬನ್ನಿರಿ. ಎಲ್ಲರೂ ಒಂದೆಡೆ ಕಲೆತು ಒಂದೇ ಸಂಸಾರದವರಂತೆ ಇರೋಣ" ಎನ್ನಬಾರದಿತ್ತೆ? ಹೇಗೂ ಮಾ ಒಪ್ಪುವುದಿಲ್ಲ. ಅಷ್ಟು ಸೌಜನ್ಯವಾದರೂ ತೋರಿದ್ದರೆ ಏನು ನಷ್ಟವಾಗುತಿತ್ತು? ಕಣ್ಣಿದ್ದೂ ಕುರುಡು, ಕಲಿತೂ ವ್ಯರ್ಥ, ವಿನಾಕಾರಣ ಮಗುವಿಗೆ ದಂಡನೆ....ಸಹಾನುಭೂತಿ ಎಂಬುದು ಇಲ್ಲವೇ ಇಲ್ಲ. ಜೀವನಾದರ್ಶಗಳ ಬಗ್ಗೆ ಆಗ ಏನೇನು ಕನಸುಗಳೋ ಯಾವ ಯಾವ ರೂಪರೇಷೆಗಳೋ.... ಈಗ ?

ಹೊತ್ತು ಅಣಕಿಸಿ ಮುಂದುವರಿಯಿತು ರುದ್ರಮೌನ ಅದರೊಡನೆ ಸ್ಪರ್ಧೆ ಹೂಡಿತು.

ಅಂದು ಕಮಲೇಶ್ ಮತ್ತು ಬಲರಾಮರ ಒಡೆತನಕ್ಕೆ ಆಪರೇಷನ್ ಥಿಯೇಟರು ಒಳಪಟ್ಟಿತ್ತು. ಅವನೊಂದಿಗೆ ಕೆಲಸ ಮಾಡಲು ಹೇಸಿದರೂ ಕತ್ತರಿಗೆ ಕೈ ಹಚ್ಚಿದಳು ಕಮಲೇಶ್. ಮೇಜಿನ ಮೇಲೆ ಮಲಗಿದ ಹೆಣ್ಣು ಸುತ್ತಮುತ್ತಲಿನ ನೂರಾರು ವೈದ್ಯಕೀಯ ಆಯುಧ ಸಲಕರಣೆಗಳನ್ನು ನೋಡಿದೊಡನೆ ಅತ್ಯಂತ ಭಯ ಭೀತಿ ಕಳವಳಗಳ ವಶೀಭೂತಳಾಗಿ ನೆತ್ತರು ಹೆಪ್ಪುಗಟ್ಟಿದಂತೆ ಕಪ್ಪುತಳೆದು ಗಳಗಳ ಅಳಹತ್ತಿದಳು. ಅವಳನ್ನು ಸಂತೈಸಿ ಒತ್ತಾಸೆ ನೀಡಿ ಲಗುಬಗೆಯಿಂದ ಆಪರೇಷನ್ ಮಾಡಲು ಉದ್ಯುಕ್ತಳಾದಳು. ಕಾರ್ಯ ನಿರತನಾದ ಡಾ|| ಬಲರಾಂ ಮೇಜಿನಬಳಿ ಸಮಯ ಸಂದರ್ಭಗಳಲ್ಲಿ ಮೈಗೆ ಮೈ ಹಚ್ಚಿ ನಿಂತುಕೊಳ್ಳುವ ರೀತಿ ಕಮಲೇಶಳಿಗೆ ಸಿಟ್ಟು ತರಿಸಿದರೆ ಚಂದ್ರಕಾಂತನಿಗೆ ಕಿಚ್ಚು ಮೂಡಿಸಿತು. ಆಗಿನಿಂದಲೂ ಇತ್ತಲೇ ಗಮನವಿಟ್ಟ ಅವನ ರೀತಿಯನ್ನು ಭಾವಿಸಿದರೂ ಭಾವಿಸದಂತೆ ಕೆಲಸ ಮುಂದುವರಿಸಿದಳು ಕಮಲೇಶ್.

Horse shoe kidney!

ಕಿಡ್ನಿಯ ಎರಡು ತುದಿಗಳೂ ಅಂಟಿಕೊಂಡಿದ್ದು ಕುದುರೆಯ ಲಾಳಾಕಾರವಾಗಿದೆ. ಅವು ಕೂಡಿಕೊಂಡಿದ್ದ ಭಾಗವನ್ನು ಬಿಡಿಸಿ ಬೇರ್ಪಡಿಸಿ ಎಡ ಭಾಗದ ಕೆಟ್ಟು ಹೋದ ವಿಭಾಗವನ್ನು ತೆಗೆದುಹಾಕಿ ಆಪರೇಶನ್ ಮುಗಿಸುವಷ್ಟರಲ್ಲಿ ತಾಸೆರಡು ಉರುಳಿದುವು. ಇನ್ನೂ ಅನೇಕ ಆಪರೇಶನ್‌ಗಳನ್ನು ಮುಗಿಸಿ ಮನೆಗೆ ಹೊರಡುವಷ್ಟರಲ್ಲಿ ಚಂದ್ರಕಾಂತ್ ನಂಜಿನ ಊಟಿಯಾಗಿದ್ದ.

ಹಾದಿ ಸಾಗಿದರೂ ಇಬ್ಬರ ತುಟಿಯೂ ಬಿರಿಯಲಿಲ್ಲ. ಮನದ ಕಿಂಡಿಯೂ ತೆರೆಯಲಿಲ್ಲ. ಸಂಘರ್ಷಣ ಭಾವವನ್ನು ಬದಿಗೊತ್ತಿ ಅವ್ಯಕ್ತ ಮಧುರ ಸಹಾನುಭೂತಿಯನ್ನು ಹೊಮ್ಮಿಸಿದರೂ ಒಂದು ವಿಧವಾದ ಗ್ಲಾನಿ ... ಮತ್ತೊಂದು ವಿಧವಾದ ಸ್ವಾಭಿಮಾನ....ಏನೋ ಒಂದು ಬಗೆಯ ಗೌರವ.... ಅಂತರಂಗಗಳೆರಡೂ ಕಠೋರವಾಗಿ ಮಾರ್ಪಡುತ್ತಲೇ ಇವೆ.

ದುರ್ನಿಮಿತ್ತಗಳಿಗಾಗಿ ಹೆಜ್ಜೆಗಳನ್ನು ಹೊಂಚಿಕೊಳ್ಳುತ್ತಲೇ ಇರಬಹುದೇನೋ ವಿಧಿ.

ನೋಟದ ನೇರಕ್ಕೆ ರಭಸವಾಗಿ ಬರುತಿದ್ದ ಕಾರನ್ನು ನೋಡುತ್ತಾ ನಿಡುಸುಯ್ದಳು ಕಮಲೇಶ್ ...ಅದು ನಮ್ಮಿಬ್ಬರ ಮೇಲೂ ಹೋಗಿ ಬಿಟ್ಟರೆ ಈ ಜಂಜಡವೇ ಇರುವುದಿಲ್ಲ.

ಹಿಂದಿನ ದಿನ ಪೋಸ್ಟ್‌ಮಾರ್ಟಂ-ಗೆ ಬಂದಿದ್ದ ತಾಯಿ ಮತ್ತು ಎರಡು ಮುದ್ದು ಮಕ್ಕಳ ಶವಚಿತ್ರ ಮನದಲೆಯಲ್ಲಿ ತೇಲಿನಲಿಯಿತು. ಮಕ್ಕಳಿಗೆ ವಿಷವುಣಿಸಿ ತಾನೂ ಉಂಡು ಮರಣವನ್ನಪ್ಪಿದ್ದಳಾಕೆ....ಸಂಶಯ ಕಳಂಕಗಳ ಗಣಿಯಾದ ಪತಿಯೊಂದಿಗೆ ಬಾಳುವುದಕ್ಕಿಂತ ಮರಣವನ್ನಪ್ಪುದು ಪರಮ ಸುಖ ಎಂದು ಚೀಟಿಯನ್ನು ಬರೆದಿಟ್ಟ ಬಗೆ ಮನವನ್ನು ಹಿಂಡಿತು. ಯೋಚನೆಯ ಮಂಟಪದಲ್ಲಿ ಕಾಣದ ತಪ್ಪು ಹೆಜ್ಜೆಯಿಟ್ಟು ಬೀಳುವಂತಾಗಲು ಚಂದ್ರಕಾಂತನ ವಜ್ರಮುಷ್ಟಿ ಬಿಗಿಯಾಗಿ ರಟ್ಟೆಯನ್ನು ಹಿಡಿದುಕೊಂಡಿತು. ಎಡವಿದ ಕಾಲ್ಬೆರಳ ಕಡೆ ನೋಟ ಹರಿದಾಗ ನೆತ್ತರು ಬಸಿಯುತಿದ್ದುದು ಗೋಚರಿಸಿತು. ಒಡನೆ ಸ್ವರ್ಗೀಯ ಸುರೇಶದಲ್ಲಾಲಿಯ ಚಿತ್ರ ಅಕ್ಷಿಪಟಲದಮೇಲೆ ಮೂಡಿ ನಿಂತಿತು.

ಆದರೆ....

ಅಧ್ಯಾಯ

೨೮

ಚಂದ್ರಕಾಂತನ ಕೋಪತಾಪಗಳ ಜ್ವಾಲೆಯನ್ನು ನಂದಿಸಬೇಕಾದ ಆತನ ಒಡಲ ಹಸಿವಿಗೆ ಗ್ರಾಸವಾಗುವುದೊಂದೇ ದಾರಿ. ಅವನೆದೆಯ ನಂಜ ನ್ನೀಂಟುವರೆ ಎಲ್ಲಿಲ್ಲದ ಪ್ರೇಮ ಪ್ರದರ್ಶನಮಾಡಿ ರಮಿಸಿ ಮುದ್ದುಗೈದು ನೋಡಿ ಎಸಗುವುದು ವಿನಾ ಬೇರೆ ದಾರಿಯಿಲ್ಲವೆಂಬುದನ್ನು ಕಂಡುಕೊಳ್ಳಲು ಕಮಲೇಶಳಿಗೆ ಬಹಳ ದಿನಗಳು ಬೇಕಾಗಲಿಲ್ಲ. ತನ್ನ ಬಿಗುಮಾನ ಅವನ ಅನುಮಾನವನ್ನು ಹೆಚ್ಚಿಸಿ ಬಾಳನ್ನು ಮಣ್ಣುಗೂಡಿಸುತ್ತೆಂಬುದರಲ್ಲಿ ಅನು ಮಾನವಿಲ್ಲ. ಅಂದಮೇಲೆ ಕಷ್ಟವಾದರೂ ಅನುಭೋಗಿಸಲೇಬೇಕು, ಎಂಬ ದೃಢ ನಿರ್ಧಾರಕ್ಕೆಡೆ ಕೊಟ್ಟಾಗ ದೇಹದಾದ್ಯಂತ ಕಂಪನದ ಅಲೆ ಹರಿದಾಡಿ ಹೋಯಿತು.

ಕಮಲೇಶ್ ವಿಚಾರಗತ್ತರಿಯಲ್ಲಿ ಸಿಲುಕಿ ಆದರ್ಶದ ವೇದಿಕೆಯ ಮೇಲೆ ಏಕಾಕಿಯಾಗಿ ಅಂಡಲೆಯುವಾಗ ಚೇತನಾ ಮತ್ತು ಚಂಪಕಮಾಲಿನಿಯರ ಜೀವನಾದರ್ಶಗಳು ತನ್ನ ಬಾಳಿನ ಮೇಲೆ ಮಹತ್ಪ್ರಭಾವ ಬೀರುವ ಮಹಾ ಉಲ್ಕೆಗಳಂತೆ ತೋರಿ ಬರುತ್ತವೆ. ಅಳಿದ ಆತ್ಮೀಯ ಗೆಳತಿಯರಿಗಾಗಿ, ಅವರ ಆತ್ಮಗಳ ದಿವ್ಯಶಾಂತಿಗಾಗಿ ಏಕಾಗ್ರತೆಯಿಂದ ಪ್ರಾರ್ಥಿಸಿದಳು. ಈಚೆಗೆ ಅವಳ ದೇಹಸ್ಥಿತಿಯೂ ಚೆನ್ನಾಗಿರಲಿಲ್ಲ. ರೋಗವೋ ನಿರೋಗವೋ ಯಾವುದೋ ಕಾಣದ ಮೊಳಕೆಯೊಂದು ಮೈಯಲ್ಲಿ ಮೊಳೆತು ಶಕ್ತಿಯನ್ನು ಮೆಲ್ಲಮೆಲ್ಲನೆ ಹೀರತೊಡಗಿದೆ. ಟಾನಿಕ್ಕು ಮಾತ್ರೆ ಔಷಧಿ ಯಾವುಯಾವುದನ್ನೋ ಸೇವಿಸು ತ್ತಿದ್ದರೂ ದೇಹಸ್ಥಿತಿ ಉತ್ತಮವಾಗಲಿಲ್ಲ. ಕದಾಚಿತ್ ಕೆಲಸ ಮಾಡಲಿಕ್ಕೂ ಬೇಸರ ಬರುವುದು. ವಿನಾಕಾರಣ ಮನೆಯಲ್ಲಿ ಉಳಿಯಲೂ ಬೇಸರ. ಸ್ವರ್ಣ ಮಾಲಿನಿ ಅನೇಕವೇಳೆ "ಮಗೂ, ನೀನೇಕೋ ಇಳಿದು ಹೋಗುತಿದ್ದಿ ಮುಖವೂ ಬಿಳಿಚಿಕೊಂಡಿದೆ ಕೆಲವು ದಿನ ರಜೆ ಬರೆದು ಹಾಕಿ ಮನೆಯಲ್ಲಿದ್ದು

ಬಿಡು. ಬಹುಶಃ ತಿಂಗಳ ಬಾಣಂತಿ ಕೆಲಸಕ್ಕೆ ಹೊರಟಿದ್ದು ಆಗಲಿಲ್ಲವೇನೋ" ಎಂದು ವ್ಯಾಖ್ಯಾನ ಮಾಡಿದ್ದುಂಟು. ಕಮಲೇಶ್ ನಸುನಕ್ಕು ನಿವಾರಿಸಿ ಅನುದಿನದಂತೆ ತನ್ನ ದಿನಚರಿಯನ್ನು ಆರಂಭಿಸುವಳು.

ಒಮ್ಮೆ ಅನಿರೀಕ್ಷಿತವಾಗಿ ಆಪರೇಶನ್ ಥಿಯೇಟರಿನಲ್ಲಿ ಕಮಲೇಶ್ ಕುಸಿದು ಬಿದ್ದು ಪ್ರಜ್ಞೆ ತಪ್ಪಿದಾಗ ಚಂದ್ರಕಾಂತ್ ಅಲ್ಲಿರಲಿಲ್ಲ. ಬಳಿಯಲಿದ್ದ ಜುಬೇದಾ ಹೇಮುಲಾಲರು ಅವಳನ್ನು ಪಕ್ಕದ ಕೊಠಡಿಗೊಯ್ದು ಮಲಗಿಸಿ ಶೈತ್ಯೋಪಚಾರ ನೈದಮೇಲೆ ಚಂದ್ರಕಾಂತ್ ಆಗಮಿಸಿದ. ಮಡದಿಯ ಅನಿರೀಕ್ಷಿತ ಮೂರ್ಛೆ ಮನಸ್ಸಿಗೆ ಕಸಿವಿಸಿಯುಂಟುಮಾಡಿಸಿತು. ಅವಳನ್ನು ಪರೀಕ್ಷಿಸುತಿದ್ದ ಹೇಮುಲಾಲ್ ಮತ್ತು ಜುಬೇದಾ ಮುಸು ಮುಸು ನಗುತ್ತಾ ತಮ್ಮ ವರದಿಯನ್ನು ಮುಂದಿಟ್ಟರು. "ಡಾಕ್ಟರ್! ನೀವು ಇನ್ನೊಮ್ಮೆ ತಂದೆಯಾಗಲಿದ್ದೀರಿ!"

"ನಿಜವಾಗಿ?" ನಯನದ್ವಯಗಳು ಸ್ವಚ್ಛಂದವಾಗಿ ಅರಳಿದುವು.

ಇನ್ನಷ್ಟು ಹೊತ್ತಿನೊಳಗಾಗಿ ಕಮಲೇಶ್ ಪ್ರಜ್ಞೆ ತಿಳಿದೆದ್ದಳು. ಹಾಸಿಗೆಯ ಮೇಲೆ ತಾನು ಮಲಗಿದ್ದುದು ಗಮನಕ್ಕೆ ಬರುತ್ತಲೂ ಎಲ್ಲಿಲ್ಲದ ಅಚ್ಚರಿಮೂಡಿತು. ಸುತ್ತಲೂ ನಿರಿನಿರಿ ನಿಟ್ಟಿಸಿ "ಇದೇನು ?" ಎಂದಳು. ಕೈಗೆ ಗ್ಲೂಕೋಸ್ ಇಂಜಕ್ಷನ್ ಚುಚ್ಚಿ ಹತ್ತಿ ಇಟ್ಟುದುದೂ ಗಮನಕ್ಕೆ ಬಂತು.

"ನೀನು ಇದ್ದಕ್ಕಿದ್ದಂತೆ ಕುಸಿದುಬಿದ್ದೆ! ಜುಬೇದಾ ನಸುನಗೆ ಬೀರಿದಳು.

"ನಿಜವಾಗಿ?" ಭಯಾಶ್ಚರ್ಯಗಳಿಂದ ಉಡುಗಿ ಕೇಳಿದಳು ಕಮಲೇಶ್.

ತಿಳಿ ಹಾಸ್ಯದ ತುಂಟದನಿಯಲ್ಲಿ ನುಡಿದಳು ಜುಬೇದಾ "ಏಕೆ ಹೇಳಲೇ?"

"ಹೇಳು, ಅದರಲ್ಲೇನು?"

"ತಾವು ಇನ್ನೊಮ್ಮೆ ತಾಯಿಯಾಗಲಿದ್ದೀರಿ !"

"ಏನು ?"

"ಓ....ನಿನಗೆ ಗೊತ್ತೇ ಇಲ್ಲವೇ ?"

ಒಮ್ಮೆಲೇ ಸೌಂದರ್ಯ ಲಕ್ಷ್ಮಿಯ ಮುಖ ಕಾಂತಿಹೀನವಾಗಿ ಮನಃಪ್ರಾಣಗಳು ಆಕುಲಗೊಂಡುವು. ಎಡಗೈ ಬೆರಳಿಂದ ಹಣೆಯನ್ನು ಒತ್ತಿ ಹಿಡಿದುಕೊಂಡಳು. ತಿಲಕ್ ಹುಟ್ಟಿದಮೇಲೆ ಬಹಿಷ್ಠೆಯಾಗಿರಲಿಲ್ಲವಾದುದರಿಂದ ಮುನ್ನೆಚರಿಕೆ ತೆಗೆದುಕೊಂಡಿರಲಿಲ್ಲ. ಕಳವಳ ಪಶ್ಚಾತ್ತಾಪಗಳಿಂದ

ತನು ನೊಂದಿತು ಅವಳಿಗೆ ಮಗು ಬೇಡವೆಂದೇನೂ ಇರಲಿಲ್ಲ. ಆದರೂ ಇಷ್ಟು ಬೇಗನೆ ಹೀಗಾದುದು ಎಲ್ಲಕ್ಕೂ ಅಡಚಣೆ, ತನ್ನ ಆರೋಗ್ಯವೂ ಸರಿಯಾಗಿಲ್ಲ. ಮಗು ತಿಲಕ್ ಇನ್ನೂ ಆರೇಳು ತಿಂಗಳ ಹಸುಗೂಸು. ಮೃದು ಮಂದ ಭಾವ ದಿಂದ ಸಿಹಿಕಹಿಗಳನ್ನು ನುಂಗಿಕೊಂಡು ಹೊರಡಲಣಿಯಾದಳು. ಶುಭ್ರಧವಳ ವರ್ಣದ ಮುಖಮಂಡಲವು ಚಂದನ ಗಂಧ ಲೇಪಿತವಾದಂತೆ ಕೆಂಪು ತಳೆ ದರೂ, ಭಾವ-ವಿಭಾವದಿಂದ ತೊಟ್ಟು ಕಳಚಿದ ಮಂದಾರ ಪುಷ್ಪದಂತೆ ಮೆಲ್ಲ ಮೆಲ್ಲನೆ ಮ್ಲಾನವಾಗತೊಡಗಿತು. ಆಕೆ ಏನೂ ಹೇಳದಾದಳು. ಶಾಲೀನ ಪೂರ್ಣ ವಿವಶತೆ ಸ್ಪಷ್ಟವಾಗಿ ಗೋಚರಿಸುತಿತ್ತು

"ಹೋಗಲಿ ಬಿಡು, ಒಬ್ಬ ಮಗಳು ಬೇಕೇಬೇಕಲ್ಲ...." ಜುಬೇದಳ ದನಿ ಕಿವಿಯನ್ನು ತಾಗುತ್ತಲೂ ಎಲ್ಲೋ ಗತಕಾಲದಂಬರದಲ್ಲಿ ಓಲಾಡುತಿದ್ದ ಮನಸ್ಸು ಸರ್ರನೆ ಹಿಂದಿರುಗಿ ತುಟಿಗಳಲ್ಲಿ ನೀರಸ ನಗೆ ಹರಿಯಿತು.

"ಅಷ್ಟೇಕೆ ಬೇಸರ ? ಮೊದಲ ಅಧ್ಯಾಯವನ್ನು ತಿರಿವಿ ಹಾಕಿದೆವೆಂದರೆ ಅನಂತರ ಬಾಳು ಸುಖಕರ!" ಎಂದ ಚಂದ್ರಕಾಂತ.

ಹೇಮುಲಾಲ್ ಚಂದಾನಿ ಅತ್ಯಂತ ಆತ್ಮೀಯತೆಯಿಂದ ಚಂದ್ರಕಾಂತನ ಕೈಕುಲುಕಿ ಅಭಿನಂದನೆ ಸಲ್ಲಿಸಿದ. ಇಬ್ಬರ ತುಟಿಗಳಲ್ಲೂ ಮಂದಹಾಸ ಚೆಲ್ಲು ತಿತ್ತು. ಜುಬೇದಳ ಮುಖದಲ್ಲೂ ಪ್ರತಿಹಾಸ ಮೂಡಿತು. ಹಾಸ ಸುಹಾಸ ಗಳು ಪ್ರತಿಹಾಸ ಮೂಡಿಸಿ ಕೆನ್ನೆಗಳಿಗೆ ಲಜ್ಜೆಗೆಂಪೊರೆದುವು. ಕೈ ತೊಳೆಯುವ ನೆವದಲ್ಲಿ ಅಲ್ಲಿ ನಿಲ್ಲದೆ ಸಿಂಕಿನೆಡೆಗೆ ಹೋದಳು ಕಮಲೇಶ್.

"ನಾನೂ ಬೇಸ್ತು ಬಿದ್ದೆ !" ಚಂದ್ರಕಾಂತ್ ನಗುತ್ತಾ ಮುಂದುವರಿದ "ಮಗು ದೊಡ್ಡವನಾಗುತಿದ್ದಾನೆ. ಇನ್ನು ನಮ್ಮಮನೆಗೆ ಕರೆದೊಯ್ಯಬಹುದು ಎಂದುಕೊಂಡಿದ್ದೆ. ಈಗ ನೋಡಿದರೆ ನಾನು ಸಲಸಲಕ್ಕೂ ಸೋಲುವುದೇ ಸೈ !"

ಒಮ್ಮೆಲೇ ನಗುವಿನಲೆ ಮಾಡುಮುಟ್ಟುವಂತೆ ಮೊಳಗಿತು.

ಹೊಸದಾಗಿ ಕಾರು ಕೊಂಡಿದ್ದ ಹೇಮುಲಾಲ್ ಅಂದ "ಬನ್ನಿ ಡಾಕ್ಟರ್, ಕಾರಿದೆ ಮನೆಗೆ ಬಿಟ್ಟು ಬರುವೆ. ಇಂದೇ ಸಂಪೂರ್ಣ ವಿಶ್ರಾಂತಿ ತೆಗೆದು ಕೊಂಡು ಬಿಡಿ."

ಕಮಲೇಶಳಿಗೆ ಮನೆಗೆ ಹೋಗಿದ್ದರೆ ಸಾಕಾಗಿತ್ತು. ತನ್ನ ಬ್ಯಾಗನ್ನು ತೆಗೆದುಕೊಂಡು ಹೊರಡಲಣಿಯಾದುದನ್ನು ನೋಡಿದ ಚಂದ್ರಕಾಂತನಿಗೆ

ಅವನೊಂದಿಗೆ ಕಳುಹಿಸುವುದೆಂದರೆ ಕಸಿವಿಸಿ. ತುಸುಯೋಚಿಸಿ ಕೇಳಿದ "ಹೋಗುವಿರಾ ಹೇಗೆ?"

"ಹೋದರೆ ಅನುಕೂಲ."

"ಹೂಂ, ಹೊರಡಿ. ನಾನೂ ಬರುವೆ."

ತನ್ನ ಕೆಲಸವನ್ನು ಚಿಕ್ಕವರಿಗೆ ವಹಿಸಿ ಅವನು ಹೊರಟುದುದು ಗೌರವ ಹೀನವಾಗಿ ತೋರಿ ಕಮಲೇಶಳ ಅಂತಃಪ್ರಜ್ಞೆ ನೀರಿನಿಂದ ಹೊರಹಾಕಿದ ಮೀನಿನಂತಾಯಿತು. ಆಹ್ವಾನಿತನಲ್ಲದ ಚಂದ್ರಕಾಂತನನ್ನು ಸತಿಸಹಿತ ಕೂಡಿಸಿಕೊಂಡು ಹೇಮಲಾಲ್ ಕಾರು ನಡೆಸಿ ಅವರ ಮನೆಯ ಮುಂದೆ ನಿಲ್ಲಿಸಿದ. ಅವಳ ಹೃದಯ ಅಜ್ಞಾತವೇದನೆಯಿಂದ ತುಂಬಿಹೋಗಿತ್ತು.... ನನ್ನ ದಿನ ನನ್ನದಲ್ಲ, ನನ್ನ ನಿಶಿ ನನ್ನದಲ್ಲ, ನನ್ನ ರೀತಿನೀತಿಗಳೂ ನನ್ನವಲ್ಲ, ನನ್ನ ಸ್ಥಿತಿಗತಿಯೂ ನನ್ನದಲ್ಲ. ಅಪರಾಧವೇನೆಂಬುದನ್ನು ಅರಿಯೆ; ಆದರೂ ಅಪರಾಧಿ. ಅವಿರತ ಶ್ರಮಸಾಧನೆ ಮಾಡುವೆ; ಆದರೂ ಪರಾಧೀನೆ.

ಸ್ವಚ್ಛಂದ ಬಂಧನ; ಗಂಭೀರ ಕ್ಲೇಶ.

ಏಕೆ ಹೀಗೆ? ಎದೆಯ ನಿಘಂಟಿನಲ್ಲಿ ಕ್ಲೇಶ–ಆನಂದಗಳಿಗೆ ಅರ್ಥಭೇದವೇ ಇಲ್ಲವೇ ಹೇಗೆ? ಈ ದುರ್ಗತಿಯ ಹೊರತು ಜೀವನವೇ ಇಲ್ಲವೇ?

ಆದರೆ, ಉತ್ತರಿಸುವವರಾರು?

ಮೂರು ದಿನಗಳ ವಿಶ್ರಾಂತಿಯ ನಂತರ ಆಸ್ಪತ್ರೆಗೆ ತೆರಳಿದ ಕಮಲೇಶಳಿಗೆ ಮೊಟ್ಟಮೊದಲಿಗೆ ಲೇಬರ್ ವಾರ್ಡಿನಿಂದ ಕರೆ ಬಂದಿತು. ಕಾವೇರಿಗೆ ಹೆರಿಗೆ ಕಷ್ಟವಾದುದರಿಂದ ಸಿಜೇರಿಯನ್ (CAESAREAN) ಮಾಡಿ ಮಗು ತೆಗೆಯಬೇಕಾಗಿತ್ತು. ಕಮಲೇಶ್ ಹೊರಟಳು. ಲೇಬರ್ ವಾರ್ಡ್ ತಲುಪಿದಾಗ ಪೂರ್ವಭಾವಿ ಸಿದ್ಧತೆಗಳು ನಡೆದಿದ್ದುವು. ಕಾವೇರಿ ಎರಡು ಕೈಗಳನ್ನು ಜೋಡಿಸಿಕೊಂಡು ದೈನ್ಯವೇ ಮೈವೆತ್ತಿ ಬಂದಂತೆ–ದುಃಖದ ಕಡಲೇ ಕ್ರೋಡೀಕರಿಸಿದಂತೆ ದೀನಾದೀನಳಾಗಿ ಗದ್ಗದ ಕಂಠದಿಂದ ಕೇಳಿಕೊಂಡಳು "ನನ್ನ ಮಗುವನ್ನು ಹೇಗಾದರೂ ಕಾಪಾಡಿರಿ."

ಅವಳ ಬೇಡಿಕೆಯಿಂದ ಅಂತಃಕರಣ ಶ್ರಾವಣ ಮೇಘದಂತೆ ದ್ರವೀಭೂತವಾಯಿತು.

"ಮಗು ಕಾಪಾಡಿದರೆ ಸಾಕೆ? ಮಗುವಿಗೆ ತಾಯಿಬೇಡವೆ?"

"ನನ್ನದೇನಾದರೂ ಚಿಂತೆಯಿಲ್ಲ. ಮಗು ಉಳಿದರೆ ಯಾರಾದರೂ ಕಾಪಾಡಿಕೊಳ್ಳುತ್ತಾರೆ."

ಹೃದಯ ಅನುಕಂಪದಿಂದ ಮಿಡಿಯಿತು. ಕಮಲೇಶ್ ಅವಳಿಗೆ ಧೈರ್ಯ ಹೇಳಿ ಕತ್ತರಿಗೆ ಕೈ ಹಚ್ಚಿದಳು. ಆಪರೇಶನ್ ನಡೆಯುತಿದ್ದಂತೆ ಕಲಿಕೆಯ ಡಾ|| ಕಾಮಿನಿ ಹೇಳಿದಳು" ಡಾ|| ಬಲರಾಂರವರನ್ನು ವಿಚಾರಣೆಗೆ ಗುರಿಪಡಿಸಿದ್ದರು ಡಾ|| ಥಾಮಸ್. ಅವರು ಸಿಟ್ಟಿನಿಂದ ಕೂಗಾಡಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಕಾವೇರಿಯ ದುಸ್ಥಿತಿಗೆ ಅವರೇ ಕಾರಣ ಎಂಬುದು ಸಾಬೀತಾಯಿತು."

"ಸಮಾಜಕ್ಕೂ ಧರ್ಮಕ್ಕೂ ಅತೀತರಾಗಿ ಕೂಗಾಡಲು ನಾಲಿಗೆ ಹೇಗೆ ಬಂತು?"

"ಗಂಡುತನ...."

ಕಮಲೇಶ್‌ಗಂಭೀರ ಧ್ವನಿಯಲ್ಲಿ ಹೇಳಿದಳು,

"ಎಲ್ಲರೂ ಒಮ್ಮನದಿಂದ ಅನಾಥ ಹೆಣ್ಣನ್ನೆತ್ತಲು ಮುಂದಾದಾಗಲೂ ಉನ್ನತ ಸಮಾಜದ ಮಧ್ಯೆ ನಡೆದುಹೋದ ಜೀವನ ದುರಂತ ಸಾಮಾನ್ಯವಲ್ಲ. ಅಂತರಂಗದಲ್ಲಿ ಹೆಣ್ಣಿನ "ವಾಂಛೆ" ಮಾಯಕತೆಯಿಂದ ಪರಿಗ್ರಹಿಸಲು ಎಷ್ಟು ಸಾಮರ್ಥ್ಯ ನೀಡುವುದೋ ಬಹಿರಂಗದಲ್ಲಿ ತ್ಯಜಿಸಲು ಅಷ್ಟೇ ಸಾಮರ್ಥ್ಯ ನೀಡುವುದು. ಇದನ್ನು ಹೆಣ್ಣಾದವಳು ಅರಿತುಕೊಳ್ಳದಿದ್ದಲ್ಲಿ ...ಓ! ಗಂಡು ಮಗು ಒಳ್ಳೆ ಆರೋಗ್ಯವಾಗಿದೆ!"

ಗರ್ಭಕೋಶದಿಂದ ಹೊರತೆಗೆದ ಮಗುವನ್ನು ಡಾ|| ಕಾಮಿನಿಯ ಕೈಗೆ ನೀಡಿದಳು. ಮುಖಭಾವ ಪ್ರಸನ್ನವಾಯಿತು. ಹೊಕ್ಕಳ ಬಳ್ಳಿಯನ್ನು ಕತ್ತರಿಸಿ ಮೇಜಿನಮೇಲೆ ಮಲಗಿಸಿದ ಕಾಮಿನಿ ಅದನ್ನೇ ನಿಟ್ಟಿಸಿ "ಮಗು ದಟ್ಟಪುಷ್ಟವಾಗಿರುವುದಷ್ಟೇ ಅಲ್ಲ; ಸಾಕ್ಷಾತ್ ಬಲರಾಂ!"

ಕಮಲೇಶ್ ಮಾತಾಡಲಿಲ್ಲ; ಕೆಲಸ ಮುಂದುವರಿಯಿತು.

ತಾಯಿ ಮಗುವಿಗೆ ಜೀವದಾನ ಮಾಡಿ ಉತ್ತರಾರ್ಧ ಕಾರ್ಯವನ್ನು

ಡಾ|| ಕಾಮಿನಿಗೆ ವಹಿಸಿಕೊಟ್ಟು ತನ್ನ ಆಫೀಸನ್ನು ಸೇರಿದಾಗ ಹೊತ್ತು ಹತ್ತರ ಸಮಯ.

ಟ್ರಣ್. ಟ್ರಣ್. ಟ್ರಣ್. ಟ್ರಣ್.

ಟೆಲಿಫೋನ್ ಟಂಟಣಿ ಸದ್ದುಗೈದು ಕರೆ ನೀಡಿತು. ರಿಸೀವರನ್ನು ಕೈಗೆತ್ತಿಕೊಳ್ಳುತ್ತಲೂ ಆಕಡೆಯಿಂದ ಡಾ|| ಪದ್ಮಾಕಮಲಾನಿಯ ದನಿ ಮೊಳಗಿತು. "ಪ್ರಣಾಮ್ ಡಾಕ್ಟರ್!"

"ಪ್ರಣಾಮ್ ಜೀ!"

"ಡಾಕ್ಟರ್, Rh ವೈಶಮ್ಯವಿರುವ ಕೇಸೊಂದು ಬಂದಿದೆ. ಈ ಹಿಂದೆ ಇವರು ನಾಲ್ಕಾರು ಮಕ್ಕಳನ್ನು ಕಳೆದುಕೊಂಡಿದ್ದಾರೆ. ಈ ಸಲ ಹೇಗಾದರೂ ಉಳಿಸಿಕೊಳ್ಳಬೇಕೆಂಬ ಹಂಬಲವಿದೆ. ಈಗ ನಾಲ್ಕುತಿಂಗಳ ಗರ್ಭಿಣಿ. ಕೈ ಬಿಡುವಿದ್ದರೆ ಈಗಲೇ ಹೊರಟು ಬಾ."

"ಡಾ|| ವಿಲಿಯಂ ಲಿಲಿಯವರ ಚಿಕಿತ್ಸಾ ತಂತ್ರವನ್ನು ನಾವು ಅನುಸರಿಸಬೇಕಾಗುತ್ತದೆ."

"ಹೌದು."

"ಈಗಲೇ ಬಂದೆ."

ಕಮಲೇಶ್ ಅದೇ ವಿಷಯವನ್ನು ಮೆಲುಕು ಹಾಕುತ್ತಾ ಹೊರಬಿದ್ದಳು. ಆ ಚಿಕಿತ್ಸೆ ಅಷ್ಟು ಸುಲಭವೇನಲ್ಲ. ತಮ್ಮ ಕೈ ಎಷ್ಟೇ ಪಳಗಿದ್ದರೂ ಎಷ್ಟೇ ಬುದ್ಧಿ ಬಲವಿದ್ದರೂ ಅವರವರ ಅದೃಷ್ಟದ ಮೇಲೂ ಅವಲಂಭಿಸುತ್ತದೆ. ರಕ್ತಸಂಚಯನ ಕಾಲದಲ್ಲಿ ತಾಯಿ-ಮಗು ತುಸು ಹೊರಳಿದರೂ ಅನಾಹುತ ಕಾದಿರುತ್ತದೆ.

ಪರೀಕ್ಷಾ ಕೊಠಡಿಯಲ್ಲಿ Rh ವೈಶಮ್ಯವಿರುವ ಸ್ತ್ರೀಮೂರ್ತಿ ಮ್ಲಾನವದನದಿಂದ ಕುಳಿತಿದ್ದಳು. ಕಣ್ಣುಗಳಲ್ಲಿ ಕಂಬನಿಯಾರಿದ ಕಲೆ ಇನ್ನೂ ಆರಿಲ್ಲ. ದೈನ್ಯವೇ ಮೂರ್ತಿಯೆತ್ತಿ ಬಂದಂತೆ ಕುಳಿತ ಅವಳ ಸುತ್ತ ಮುತ್ತ ಕಂಗಾಲಾದ ಕುಟುಂಬ ವರ್ಗವು ನೆರೆದಿತ್ತು. ಅವಳನ್ನು ಪರೀಕ್ಷಾ ಕೊಠಡಿಗೆ ಕರೆದೊಯ್ದು ಪರೀಕ್ಷಿಸಿ ಅಂದಿನಿಂದ ಇಂದಿನವರೆಗಿನ ವರದಿಯನ್ನು ತೆಗೆದುಕೊಂಡು ಅನೇಕ ಮಂದಿ ಡಾಕ್ಟರುಗಳು ಕೂಡಿ ಮುಂದಿನ ಚಿಕಿತ್ಸೆಯನ್ನು ನಿರ್ಣಯಿಸಿದರು. ಡಾಕ್ಟರುಗಳ ದಳ ಅವಳ ಸ್ಥಿತಿಗತಿಯನ್ನು ಅವಲೋಕಿಸುತಿತ್ತು. ಮಗುವಿಗೆ ರಕ್ತ ಪೂರಣವಾಗದ ಹೊರತು ಬದುಕುವುದಿಲ್ಲವೆಂಬ

ಅಂತ್ಯ ತೀರ್ಮಾನಕ್ಕೆ ಬಂದನಂತರ ರಕ್ತ ಸಂಯೋಜನೆಗೆ ಆಕೆಯನ್ನು ಒಳ ಪಡಿಸಲಾಯಿತು.

ಮೊದಲು ಸಾಮಾನ್ಯವಾಗಿ ರೋಗಿಗಳ ಎಕ್ಸ್‌ರೇ ಚಿತ್ರವನ್ನು ತೆಗೆ ಯುವ ಮುನ್ನ ಕುಡಿಸುವ ವರ್ಣಕಾರಕ ದ್ರವವನ್ನು ಅವಳ ಗರ್ಭಕೋಶದ ಜಲಾವರಣಕ್ಕೆ ಚುಚ್ಚು ಸೂಜಿಯ ಮೂಲಕ ಸೇರಿಸಲಾಯಿತು. ಅದು ನೇರವಾಗಿ ಗರ್ಭಸ್ಥ ಮಗುವಿನ ಶರೀರವನ್ನು ಪ್ರವೇಶಿಸಿ ಕರುಳು ಜಠರ ಗಳನ್ನು ವರ್ಣಾಂಕಿತವನ್ನಾಗಿ ಮಾಡಿದ ನಂತರ ಎಕ್ಸ್‌ರೇ ಮೂಲಕ ಮಗು ವಿನ ಹೊಟ್ಟೆಯ ಭಾಗಗಳನ್ನು ಅರಿತುಕೊಂಡು ಅದರ ಕಿಬ್ಬೊಟ್ಟೆಯನು ಅಂದಾಜುಮಾಡಿ, ಅಲ್ಲಿಗೆ ರಕ್ತ ಸಂಯೋಜನೆಗಾಗಿ ಸೂಜಿ ಚುಚ್ಚಿ ರಕ್ತವನ್ನ ಪೂರೈಸಲಾಯಿತು. ಹೊಟ್ಟೆಯೊಳಗೆ ಜಿಗಿದಾಡುವ ಮಗುವಿನ ರಕ್ತ ಪೂರಣ ವೆಂದರೆ ಸಾಮಾನ್ಯವಲ್ಲ .... ಮೊದಲನೆಯದಾಗಿ ತಾಯಿಯು ಸ್ವಲ್ಪವೂ ಅಲುಗದಂತೆ ಮಲಗಿಕೊಳ್ಳಬೇಕು; ಎರಡನೆಯದಾಗಿ ಮಗು ಅಲುಗಾ ಡದಂತೆ ವೈದ್ಯರೊಬ್ಬರು ಅದುಮಿ ಹಿಡಿಯಬೇಕು. ರಕ್ತಪೂರಣ ಪೂರೈಸುವ ವರೆಗೆ ಪುನರ್ ಜನ್ಮ ಕಾಣುವಷ್ಟು ಕಡು ಹಿಂಸೆ. ವಂಶದ ಕುಡಿಗಾಗಿ ಎಲ್ಲಾ ಬಗೆಯ ಕಷ್ಟವನ್ನೂ ಸಹಿಸಿಕೊಂಡಳು ತಾಯಿ. ಹಿರಿಯ ಡಾಕ್ಟರುಗಳ ಚಾಕಚಕ್ಯತೆಯನ್ನು ತರುಣ ಡಾಕ್ಟರುಗಳ ವೃಂದ ಅತ್ಯಂತ ಆಸಕ್ತಿಯಿಂದ ವೀಕ್ಷಿಸಿತು.

ಇದೇ ರೀತಿ ಮತ್ತೆರಡು ಬಾರಿ ರಕ್ತ ಪೂರಣವಾದ ನಂತರ ಐದನೆಯ ಮಗು ಸುರಕ್ಷಿತವಾಗಿ ತಾಯಿಯ ಕೈಸೇರಿ ತಾಯಿತಂದೆಗಳಿಗಾದ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ತನ್ನ ಮಗುವಿಗಾಗಿ ಎಲ್ಲಿಲ್ಲದ ಆಸ್ಥೆ ವಹಿಸಿದ ಕಮಲೇಶಳನ್ನು ಸಂತಸ ತುಂಬಿದ ಕಣ್ಣುಗಳಿಂದ ನೋಡುತ್ತಾ ನುಡಿದಳು ತಾಯಿ "ನಿಮ್ಮ ಸಕಲ ಪ್ರಯತ್ನದಿಂದ ಮಗು ಬದುಕಿತು. ನಿಮ್ಮ ಹೆಸ ರನ್ನೇ ಮಗುವಿಗೆ ಇಡಬೇಕೆಂಬುದು ನನ್ನ ಅಂತರಂಗದ ಬಯಕೆ....ಅಂದರೆ ನೀವೇ ಮಗುವಿನ ಹೆಸರನ್ನು ಕರೆಯಬೇಕು."

" ಓ....ಆದೀತು. ಏನೆಂದು ಕರೆಯಬೇಕು ?"

"ಕಮಲ್ ಕುಮಾರ್ !"

ಬೀಸಿ ಬಂದ ತಂಗಾಳಿಯು ಮರ್ಮರಿಸಿತು "ಕಮಲ್ ಕುಮಾರ್ !"

ಸುತ್ತ ಮುತ್ತಲಿಂದ ಎಲ್ಲರ ದನಿಯೂ ಮೊಳಗಿತು "ಸೊಗಸಾದ ಹೆಸರು !"

ಕಮಲೇಶ್ ಮಗುವನ್ನು ಮುದ್ದುಗೈದು ಆನಂದಾತಿರೇಕದಿಂದ ಹೆಸರು! ಕರೆದಳು "ಕಮಲ್ ಕುಮಾರ್ !....ಕಮಲ್ ಕುಮಾರ್ !"

ಸುತ್ತಮುತ್ತಣಿಂದ ಚಂದ್ರಮಲ್ಲಿಕೆಯಂತೆ ಎಳೆ ನಗುವಿನ ಸಂತಸ ಲಹರಿಯು ಉಕ್ಕಿ ಹರಿಯಿತು ಕಮಲೇಶ್ ತನ್ನ ಇನಿದನಿಯನ್ನು ಆಮೋದ ಪೂರ್ವಕವಾಗಿ ಅವರೊಂದಿಗೆ ಹರಿಯ ಬಿಟ್ಟಳು.

ಒಂದೆರಡು ನಿಮಿಷಗಳ ನಂತರ ಅವಳು ವಾರ್ಡಿನಿಂದ ಹೊರಬಿದ್ದು ಹತ್ತುಮಾರು ಸಾಗಿರಬಹುದೇನೋ....

ಢಣ್ ! ಢಣಾರ್ ! ಢಣ್ ! ಢಣಾರ್ ! ಢಣ್ ! ಢಣಾರ್ !

ಕಮಲೇಶ್ ತಟ್ಟನೆ ಅಲ್ಲೇ ನಿಂತಳು. ಕಣ್ಣುಗಳನ್ನು ಕೆಂಪು ದೀಪ ಗಳು ಸೆರೆ ಹಿಡಿದುವು. ನೋಡೆ, ನೋಡೆ ಮೂರನೆಯ ಸ್ಪೆಷಲ್ ವಾರ್ಡ್ !

ರಾಣೀ ಭವತಾರಿಣಿಯ ತುರ್ತು ಕರೆ!

ಮುಂದಿನ ಕೆಲವು ವಾರ್ಡುಗಳನ್ನು ಸಾಲಾಗಿ ದಾಟಿದರೆ ಮೂರನೆಯ ಸ್ಪೆಷಲ್ ವಾರ್ಡ್. ಅನೇಕರು ತುರ್ತು ಕರೆಗೆ ಓಗೊಟ್ಟುದುದರಿಂದ ಹೋ ಗುವ ಹಾದಿಯಲ್ಲಿ ಒಳಗಿನ ವಿದ್ಯಮಾನವೇನೆಂಬುದನ್ನರಿಯಲು ಒಳ ಹೋ ದಳು ಕಮಲೇಶ್. ಮೂರನೆಯ ವಾರ್ಡಿಗೆ ದಾಖಲಾದ ತರುಣಿ ಇನ್ನೂ ಹದಿನೆಂಟರ ಮುಗುದೆ. ಮೈ ಬಹಳವಾಗಿ ಸುಟ್ಟು ಸ್ಥಿತಿ ವಿಪನ್ನಾವಸ್ಥೆಗೇ ರಿತ್ತು. ಅದು ಅಕಸ್ಮಿಕವಾಗಿರಲಿಲ್ಲವಾದುದರಿಂದ ಅವಳಿಂದ ಹೇಳಿಕೆ ತೆಗೆದು ಕೊಳ್ಳಲು ಪೋಲೀಸರು ಆಗಮಿಸಿದ್ದಾರೆ. ಆಕಸ್ಮಿಕವಾಗಿ ಸುಟ್ಟುಕೊಂಡಳೆಂ ಬುದು ಅತ್ತೆ ಮಾವ ಮತ್ತು ಗಂಡನ ಹೇಳಿಕೆ. ಮೊದಲಿನಿಂದಲೂ ಹಿಂಸೆ ಕೊಡುತಿದ್ದ ಅವರು ವರದಕ್ಷಿಣೆ ಹಣ ಬರಲಿಲ್ಲವೆಂದು ಬೆಂಕಿ ಹಚ್ಚಿದ್ದಾ ರೆಂದು ಹುಡುಗಿಯ ಕಡೆಯವರ ಹೇಳಿಕೆ. ಈ ಪ್ರಕ್ಷುಬ್ಧ ಸ್ಥಿತಿಯಿಂದಾಗಿ ಎರಡೂ ಬಣಗಳಲ್ಲಿ ಬಿಸಿ ವಾತಾವರಣವೇರ್ಪಟ್ಟಿತ್ತು. ಕಮಲೇಶ್ ಹೇಗೆ ಒಳ ಹೋದಳೋ ಹಾಗೆಯೇ ಹೊರ ಬಂದಳು. ಹೃದಯ ಸಮುದ್ರ ಸಹಸ್ರ ಧಾರೆಗಳಾಗಿ ಹರಿದು ಹೋಗುತ್ತಿರುವಂತೆ ಭಾಸವಾಯಿತು.

ಹುಡುಗಿ ಒಂದೇ ಸಮನೆ ಅಂಗಲಾಚುತಿದ್ದಳು "ನನಗೆ ಬದುಕು ಬೇಡವೇ ಬೇಡ; ನನ್ನನ್ನು ಸಾಯಗೊಡಿರಿ." ದನಿಯಲ್ಲಿ ಮರಣಾಂತಕ

ವಾದ ನೋವು ಹುದುಗಿತ್ತು.

ಕಮಲೇಶ್ ಮನದಲ್ಲೇ ಅವಳ ದಿವ್ಯ ಆತ್ಮಶಾಂತಿಗಾಗಿ ಪ್ರಾರ್ಥಿಸಿ ಕೊಂಡಳು.

ಪಕ್ಕದ ವಾರ್ಡಿನಲ್ಲಿ ಬಾನುಲಿ ಮೃದು ಮಧುರವಾದ ದನಿಯಲ್ಲಿ ಹಾಡುತಿತ್ತು....ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ....

ಸ್ವಂತ ಕುಟುಂಬಿಗರಿಗೆ ದಯವಿಲ್ಲದಾಗ ಅಂತಕನ ದೂತರಿಗೆ ದಯೆ ಬರುವುದೆಂತೋ....

ಮುಂದೆರಡು ತಿಂಗಳೊಳಗಾಗಿ ಕಮಲೇಶ್ ಹೆಣ್ಣು ಮಗುವಿನ ತಾಯಿ ಯಾದಳು. ಕೆಲಸಕಾರ್ಯಗಳ ಹಣಾಹಣಿಯಲ್ಲಿ ಬಹಳವಾಗಿ ದಣಿದಿದ್ದ ಮೈಗೆ ಪೋಷಣೆ ಸಾಲದೆ ಹೆರಿಗೆಯ ಸಮಯಕ್ಕೆ ಹಣ್ಣು ಹಣ್ಣಾಗಿದ್ದಳೆಂದರೆ ಅತಿಶಯೋಕ್ತಿಯಾಗಲಾರದೇನೋ....ಈ ಸಲ ಅವಳು ಬಯಸಿದ್ದೂ ಹೆಣ್ಣು; ಭಗವಂತ ನೀಡಿದ್ದೂ ಹೆಣ್ಣು. ಆತನಿಗೆ ಎಷ್ಟು ಪರಿಯಲ್ಲಿ ನಮಿಸಿದರೂ ಸಾಲದು....ಎನಿಸಿತು ಅವಳಿಗೆ.

ಚಂದ್ರಕಾಂತ್ ಆನಂದೋತ್ಸಾಹದಲ್ಲಿ ಪ್ರಾಸಂಗಿಕವಾಗಿ ಅಂದ "ನೀವು ಆಗೆಲ್ಲಾ ಎಷ್ಟು ಬೇಸರ ಪಟ್ಟುಕೊಂಡಿರಿ? ಮಕ್ಕಳಿದ್ದ ಮನೆ ಸ್ವರ್ಗ.... ಜೀವನದಾದಿಯಲ್ಲಿ ಮೊದಲ ಅಧ್ಯಾಯವನ್ನು ಬೇಗನೆ ತಿರಿವಿ ಹಾಕುವುದು ಪರಮ ಸುಖ. ನಮಗಿನ್ನೆರಡು ಮಕ್ಕಳಾದರೆ ಸಾಕು! ಅನಂತರ ನಾವು ರಾಜಾ ರಾಣಿ!"

ಅವಳ ಚಿದಾಕಾಶದಲ್ಲಿ ನೂರು ಆನೆಗಳು ನುಗ್ಗಿ ಬಂದಂತಾಯಿತು. ಗದ್ದಲ ಗೊಂದಲಗಳಿಂದ ಕೂಡಿದ ಮನಸ್ಸು ಯಾವ ವಿಷಯವನ್ನೂ ಕುರಿತು ಚಿಂತಿಸಲೂ ಒಲ್ಲದು. ಚರ್ಚಿಸಲೂ ಒಲ್ಲದು.

ಅವನು ಕಿಲಕಿಲನೆ ನಕ್ಕು "ಏಕೆ ಮಾತಿಲ್ಲ? ನಿಮ್ಮ ಕೋಪ ಅರ್ಥ ವಿಲ್ಲದ್ದು. ಕೇವಲ ಒಂಭತ್ತು ತಿಂಗಳ ನಿರ್ವಹಣೆ ನಿಮ್ಮದು. ಅನಂತರ ಸಾಕುವವರಿಗೇನು ಕೊರತೆ?"

"ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ."

" ಹೇಗೆಂದುಕೊಂಡರೆ ಹಾಗೆ ಕಮಲೇಶ್! ಮುಖ್ಯವಾಗಿ ನಿಮಗೆ ಆತ್ಮ ಶಕ್ತಿಯಿಲ್ಲ! ಆದರಿಂದಲೇ ಇಷ್ಟೊಂದು ಪುಕ್ಕಲು!.... ಧೈರ್ಯಂ ಸರ್ವತ್ರ ಸಾಧನಂ."

ಈ ಗಂಡು ಜಾತಿ ಸ್ವಾರ್ಥಸಾಧನೆಗಾಗಿ ನೂರು 'ಸೂತ್ರ'ಗಳನ್ನಾದರೂ ಬರೆಯಬಲ್ಲದು. ವೃಥಾ ವಾತಂಕತೆಯಿಂದ ಪರಿಹಾರವಿಲ್ಲ........ ಕಮಲೇಶ್ ಗಾಢವಾಗಿ ಚಿಂತಿಸಿದಳು. ಹೆಬ್ಬಂಡೆ ಹೊತ್ತಂತೆ ಹೃದಯ ಭಾರವಾಯಿತು.

ಒಂದುವಾರ ಆಸ್ಪತ್ರೆಯಲ್ಲಿ ಕಳೆದು ಮನೆಗೆ ಮರಳಿದಂದು ಚಂದ್ರ ಕಾಂತ್ ಉತ್ಸಾಹದಿಂದ ಕೇಳಿದ "ಮಗುವಿಗೆ ಏನೆಂದು ಹೆಸರಿಡೋಣ?"

" ನೀವೇ ಹೇಳಿ ಬಿಡಿ."

" ಚಂದ್ರ ಪ್ರಭಾ!"

" ಹಾಡಿದ್ದೇ ಹಾಡಿರಿ!"

" ನನ್ನಲ್ಲೇನೂ ವಿಶೇಷವಿಲ್ಲ. ನಾನು ಎತ್ತಿ ಹಿಡಿಯುವುದು ವಂಶಾವಳಿ!" ಕಣ್ಣುಗಳು ಅರಳಿ ವಿಸ್ಫಾರಿತವಾದುವು.

" ಸ್ವಾರ್ಥದ ಪರಮಾವಧಿ!" ಎದೆಯಹಕ್ಕಿ ಚೀರಿದರೂ ತುಟಿಗಳು ಬಿರಿಯಲಿಲ್ಲ. ಸ್ವಲ್ಪ ಹೊತ್ತು ಸುಮ್ಮನಿದ್ದು, ಒಂದು ಘಳಿಗೆ ಯೋಚಿಸಿ "ನೀವು ಏನೆಂದಾದರೂ ಕರೆಯಿರಿ, ನಾನು 'ಸ್ವರೂಪರಾಣಿ' ಎನ್ನುವೆ."

" ಓ.... ಹೋ.... ಹೋ! ಜವಾಹರಲಾಲರನ್ನು ಮೊಮ್ಮಗನನ್ನಾಗಿ ಪಡೆಯುವ ಉದ್ದೇಶ!"

" ಯಾಕಾಗಬಾರದು?" ಎಳೆಯ ನಗು ಮಿನುಗಿ ಮಾಯವಾಯಿತು.

ಇಬ್ಬರೂ ಪುಟ್ಟ ಮಕ್ಕಳಾದುದರಿಂದ ಕಮಲೇಶಳನ್ನು ತನ್ನ ಮನೆಗೆ ಕರೆದೊಯ್ಯುವ ಉದ್ದೇಶಕ್ಕೆ ಸ್ವಲ್ಪ ಕಾಲ ಅಡ್ಡಗಟ್ಟಿ ಹಾಕಿದಂತಾಗಿ ಚಂದ್ರ ಕಾಂತ ಸುಮ್ಮನಾದ. ಮಾನವ ಜಾತಿಯ ಉದ್ದೇಶ ಸಫಲವಾಗದಾಗ ಕ್ರೋಧಾನುತಾಪಗಳು ವಿನಾಕಾರಣ ಹುಟ್ಟಿಕೊಳ್ಳುತ್ತಲೇ ಇರುವುದು ಸಹಜ. ಆ ಕಟೂಕ್ತಿಗಳ ಖಾರವನ್ನೂ ಸ್ವಾರ್ಥಪೂರಿತವಾದ ಎದೆಯ ನಂಜನ್ನೂ ಹೀರಿ ದಣಿದಳು ಮಕ್ಕಳ ತಾಯಿ. ಈ ಎಲ್ಲಾ ಜಂಜಡದಲ್ಲಿ ಸಿಕ್ಕಿಕೊಳ್ಳುವಾಗ ಒಮ್ಮೆ ಅಲ್ಲಿಗೆ ಹೋಗಿಬಿಡಲೇ? ಎಂಬ ಯೋಚನೆ ಬಂದರೆ ಇನ್ನೊಮ್ಮೆ ನಾನಾದರೂ ಏಕೆ ಅಷ್ಟೊಂದು ಅಂಜಬೇಕು? ಎಂಬ ಕೆಚ್ಚೂ ಮೂಡು

ವುದು. ಆದರೆ ಇವೆಲ್ಲಕ್ಕೂ ಜೀವನೋದ್ದೇಶ–ಮಾನ ಮರ್ಯಾದೆ ಮೀರಿದ್ದು ಕಮಲೇಶ್ ನೀಳವಾದ ನಿಟ್ಟುಸಿರು ಬಿಟ್ಟಳು.

ತಿಲಕ್ ಮುದ್ದು ಮುದ್ದಾಗಿ ಎತ್ತರವಾಗಿ ಬೆಳೆಯುತಿದ್ದ. ಹೃದಯದ ಆಪರೇಶನ್ ಆದಮೇಲೆ ಚೇತನಾ ಚೈತನ್ಯವೂಡಿಕೊಂಡು ಓದು ವಿದ್ಯೆಯಲ್ಲಿ ಅತ್ಯಂತ ಆಸಕ್ತಿ ತಳೆದಳು. ಮಕ್ಕಳ ನಗೆ ಮಾತುಗಳಿಂದ ಕೂಡಿದ ಮನೆ ಮಧುವನವಾಗಿ ಸ್ವರ್ಣಮಾಲಿನಿ ಪ್ರೇಮಾದರಗಳ ಒಡತಿಯಾದಳು....ಕಮ ಲೇಶಳಿಗೆ ಈಗೀಗ ಬಿಡುವಿಲ್ಲದ ಕೆಲಸ. ಮನೆಯಲ್ಲೂ ರೋಗಿಗಳು ಗೊತ್ತು ಗುರಿಯಿಲ್ಲದಂತೆ ಬಂದು ಕಲೆಯುತಿದ್ದುದರಿಂದ ಎರಡು ಕಡೆ ಕೆಲಸ. ಅತ್ತೆ ಮನೆ ಆಸ್ಪತ್ರೆಗಳಿಗೆ ಓಡಾಡುವುದು ಸರ್ವೇಸಾಮಾನ್ಯವಾಯಿತು. ವರ್ಷಾ ನಂತರ ಚಂದ್ರಕಾಂತ್ ಮುಂದಿನ ಅಭ್ಯಾಸಕ್ಕೆ ಹೊರಟುದುದರಿಂದ ತಾಯಿ ಮಗಳು ಹಾಯಾಗಿ ಉಸಿರಾಡುವಂತಾಯಿತು. ದಿನಗಳು ಸಂಭ್ರಮದಿಂದ ಮಿಂಚಿನಂತೆ ಮಿಂಚಿ ಮಾಯವಾದುವು.

ಅಂದು ವೈಶಾಖ ಶುದ್ಧ ಪೂರ್ಣಿಮಾ.

ಸಂಜೆಯ ವಾತಾವರಣ ಶೀತಲವಾಗಿತ್ತು.

“ ಹೇಮರತಿ ಕರ್ವೆಯ ಮನೆ ಖಾಲಿಯಾಗಲಿದೆಯಂತೆ. ಮನೆ ಬಹಳ ಅನುಕೂಲವಾಗಿದೆ. ನಾವು ಅಲ್ಲಿಗೆ ಹೋದರೆ ನೀನಿಲ್ಲದಾಗ ನಾನೊಬ್ಬಳೆ ಇರುವ ತೊಂದರೆಯೂ ತಪ್ಪುತ್ತೆ. ಚಂದ್ರಕಾಂತ್ ಊರಿಗೆ ಮರಳಿದ ಮೇಲೆ ಸರ್ವಥಾ ನಿನ್ನನ್ನು ಇಲ್ಲಿರಗೊಡುವುದಿಲ್ಲ” ಎಂದಳು ಸ್ವರ್ಣಮಾಲಿನಿ.

“ ಚಂದ್ರಕಾಂತರನ್ನು ಒಂದು ಮಾತು ಕೇಳಬೇಕಲ್ಲ ?” ಆಲೋಚನಾ ಮಗ್ನಳಾಗಿ ನುಡಿದಳು ಕಮಲೇಶ್.

“ ಅವರು ಹೇಗೂ ಇಲ್ಲಿರುವುದಿಲ್ಲ. ನಿನ್ನನ್ನೂ ಇರಗೊಡಿಸುವುದಿಲ್ಲ. ಮತ್ತೇಕೆ ಕೇಳುವ ಪ್ರಶ್ನೆ....? ” ವೃದ್ಧ ಜನನಿ ಸಖೇದಾಶ್ಚರ್ಯದಿಂದ ಪ್ರಶ್ನೆ ಹಾಕಿದಳು.

“ ಆದರೂ ಕೇಳಲಿಲ್ಲ ಅಂದಾರು.”

ಅದೇ ಸಮಯಕ್ಕೆ ಸರಿಯಾಗಿ ಹೇಮರತಿ ಕರ್ವೆ ಬಸಂತ ಸೇನನೊಡನೆ ಆಗಮಿಸಿದಳು. ಬಸಂತ್ ಒಳ ಬಂದವನೇ ಚೇತನಾ ತಿಲಕರನ್ನು ಕರೆದು ಕೊಂಡು ಅಂಗಳಕ್ಕೋಡಿದ. ಅತಿಥಿಗಳಿಗೆ ಚಹ ಸಿಹಿ ಕಾರಗಳು ಅಣಿಯಾಗಿ

ಬಂದುವು. ಕಮಲೇಶ್ ಮಕ್ಕಳ ಕೂಟದಲ್ಲಿದ್ದ ಬಸಂತನನ್ನು ಕರೆಯ ಹೋದೊಡನೆ ಸೌಕುಮಾರ ಸುಂದರ ಮುಖ ಸಂಧ್ಯಾಕಾಲೀನ ಶೋಭಾಧಾರೆಯಂತೆ ಸುಮನೋಹರವಾದ ಎಳೆ ನಗುವನ್ನು ಸೂಸಿತು. "ಓ....ನಾನು ಈಗಷ್ಟೆ ತಿಂದು ಬಂದೆ, ನನಗೇನೂ ಬೇಡ" ಅಂದ, ಅಲ್ಲಿಗೂ ಬಿಡದೆ ಅವಳು ಎಳೆದು ತಂದಾಗ ದುಂಡು ದುಂಡಾದ ನುಣ್ಣನೆ ಹಾಲ್ಗೆನ್ನೆಗಳಲ್ಲಿ ಮೂಡಿದ ಗುಳಿಗಳು ಮುಖದಂದಕ್ಕೆ ಇನ್ನಷ್ಟು ಇಂಪುಗೊಟ್ಟುವು. ಕಿಲಕಿಲ ನಗುತ್ತಾ ನಿಂತ, ಬಾಲಕ.

"ಸ್ವಲ್ಪ ತೆಗೆದುಕೊ." ಒತ್ತಾಯ ಪಡಿಸಿದಳು ಸ್ವರ್ಣಮಾಲಿನಿ.

ಬಸಂತ್ ಅವಸರವಸರವಾಗಿ ಕೆಲವು ಮಿಠಾಯಿಗಳನ್ನು ತೆಗೆದುಕೊಂಡು ಚೇತನಾ ತಿಲಕರಿಗೆ ನೀಡಿ, ತಾನೂ ತಿಂದು ಅವರೊಂದಿಗೆ ಪುನಃ ಅಂಗಳಕ್ಕೆ ಓಡಿದ. ಅವನ ಆಗಮನದಿಂದ ಮಕ್ಕಳ ಮುಖ ಕಳೆ ಕಟ್ಟಿತ್ತು; ಸ್ವರೂಪಳೊಡನೆ ಲಲ್ಲೆಗೈಯ್ಯುತ್ತಾ ಚಹಪಾನ ಮಾಡಿದಳು ಹೇಮರತಿ ಕರ್ವೆ. ಹೃದಯದಾಳದಲ್ಲಿ ಶುದ್ಧ ಸಾತ್ವಿಕ ರಸ ಹರಿದಾಡಿ ಮುಖಮಂಡಲವನ್ನು ಮಂಗಳಮಯ ಗೊಳಿಸಿತ್ತು. ಹಾಲು ಸಕ್ಕರೆ ಬೆರೆತಂತೆ ಮಗುವಿನೊಂದಿಗೆ ಬೆರೆತುಕೊಂಡ ಅವಳನ್ನು ನೋಡುತ್ತಾ ಒಂದು ಘಳಿಗೆ ಮೈಮರೆತಳು ಕಮಲೇಶ್.

ಟ್ರಿಣ್. ಟ್ರಿಣ್. ಟ್ರಿಣ್. ಟ್ರಿಣ್.

ಕರೆ ನೀಡಿದವಳು ಪದ್ಮಾಕಮಲಾನಿ.

"ಏನು ಡಾಕ್ಟರ್?"

"ಡಾ|| ಕಾಮಿನಿ ಅಪೆಂಡಿಸೈಟಿಸ್‌ನಿಂದ ಅಡ್ಮಿಟ್ಟಾಗಿದ್ದಾಳೆ."

"ಓ....ಹೋ!"

ಅವಳು ತನ್ನ ಅಸಿಸ್ಟೆಂಟ್ ಆದುದರಿಂದ ರಜೆ ಪಡೆದುಕೊಂಡಿದ್ದರೂ ಹೋಗಲೇಬೇಕಾಯಿತು. ಯೋಚಿಸುತ್ತಾ–"ಈಗಲೇ ಆಂಬುಲೆನ್ಸ್ ಕಳುಹಿಸು....ಬರುವೆ."

ಹೇಮರತಿ ಭಾವಪೂರ್ಣಲೋಚನಗಳಿಂದ ನೋಡುತ್ತ ನುಡಿದಳು, "ಇದಕ್ಕಾಗಿಯೇ ಹೇಳುವುದು....ನೀವು ನಮ್ಮ ಮನೆಗೆ ಬಂದರೆ ಸಮಯ ಸಂದರ್ಭಗಳಲ್ಲಿ ಸ್ವರ್ಣಮಾಲಿನಿ ಒಬ್ಬಳೇ ಇರುವುದು ತಪ್ಪುತ್ತೆ. ನನಗೂ

ಇಷ್ಟುದೂರ ಓಡಿ ಬರುವುದು ತಪ್ಪುತ್ತೆ. ಅಲ್ಲದೆ ಇಬ್ಬರಿಗೂ ಒಬ್ಬೊಬ್ಬರೇ ಇದ್ದು ಸಾಕಾಗಿದೆ."

ಕಮಲೇಶ್ ಸ್ವಲ್ಪಹೊತ್ತು ಯೋಚಿಸಿದಳು....ಆ ಮನೆ ಅವರ ಮನೆಯ ವಿಶಾಲವಾದ ಕಾಂಪೌಂಡಿನಲ್ಲಿ ಕಟ್ಟಿದ್ದರೂ ಪಕ್ಕದ ರಸ್ತೆಗೆ ಮೊಗ ತಿರುವಿ ಕಟ್ಟಿರುವುದರಿಂದ ಮುಂಭಾಗದಿಂದ ಎರಡೂ ಮನೆಗಳಿಗೆ ಸಂಪರ್ಕವಾಗಲೀ ಸದ್ದು ಗದ್ದಲಗಳಾಗಲೀ ಇಲ್ಲದೆ ಅನುಕೂಲವಾಗಿದೆ. ಒಳ ಅಂಗಳದಿಂದ ಎರಡೂ ಮನೆಗಳಿಗೆ ಸಂಪರ್ಕವಿರುವುದರಿಂದ ಹೆಂಗಸರು ಮಕ್ಕಳು ಅಲ್ಲೇ ಓಡಾಡಬಹುದು. ಹೋಗುವುದರಿಂದ ನಿಜವಾಗಿಯೂ ತುಂಬ ಕ್ಷೇಮವಿದೆ....

"ಮಾ ಸಹ ಅದೇ ಹೇಳುತಿದ್ದಾರೆ. ಆಸ್ಪತ್ರೆಗೆ, ಚಂದ್ರಕಾಂತರ ಮನೆಗೆ, ಚೇತನಳ ಶಾಲೆಗೆ ಎಲ್ಲಕ್ಕೂ ಹತ್ತಿರ. ನಮಗೆ ಎಲ್ಲಾ ರೀತಿಯಿಂದಲೂ ಅನುಕೂಲವಿದೆ. ಯಾರಿಗೂ ಕೊಡಬೇಡಿ ಮಾಮಿ. ಚಂದ್ರಕಾಂತರಿಗೆ ಬರೆದು ನಿಮಗೆ ಹೇಳುವೆ."

ಇನಿದನಿ ನಮ್ರತಾಪೂರ್ವಕವಾಗಿ ಉತ್ತರಿಸಿತು.

"ಹಾಗೆ ಮಾಡು ಕಮಲೇಶ್, ಏನೇ ಒರಲಿ, ನಮ್ಮನಮ್ಮೊಳಗೆ ಹೊಂದಿಕೊಳ್ಳುವ ಹೃದಯಗಳಿವೆ. ಏಕೀಭವಿಸುವ ಸಮ ಭಾವನೆಗಳಿವೆ."

ಹೇಮರತಿಯ ನುಡಿಯನ್ನು ಅಕ್ಷರಶಃ ಅನುಮೋದಿಸಿದಳು ಸ್ವರ್ಣ ಮಾಲಿನಿ.

ಕಮಲೇಶ್ ಅಣಿಯಾಗುವುದರೊಳಗಾಗಿ ಶುಭ್ರಧವಳ ವರ್ಣರಂಜಿತ ವ್ಯಾನು ಘಂಟಾರವಗೈಯುತ್ತಲೇ ಆಗಮಿಸಿತು. ಕಮಲೇಶ್ ಹೊರಟಳು. ಡಾ|| ಕಾಮಿನಿ ಅತೀವ ನೋವಿನಿಂದ ಹಣ್ಣುಹಣ್ಣಾಗಿದ್ದು ಕಮಲೇಶಳನ್ನು ನೋಡುತ್ತಲೂ ಕೈಗಳನ್ನು ಹಿಡಿದುಕೊಂಡು ಕಂಬನಿ ಮಿಡಿದಳು,

"ನೋವು ತಡೆಯಲಾರೆ ಡಾಕ್ಟರ್."

"ಈಗಲೇ ಮಾಡಿಸಿಕೋ. ಇದಿದ್ದರೆ ಎಂದಾದರೂ ಗಂಡಾಂತರವೇ."

"ಆಗಲಿ....ಮಾಡಿಬಿಡಿ ಡಾಕ್ಟರ್."

ಹಾಗೆಂದರೂ ಭಯ ಭೀತಿಯ ಗಣಿಯಾದಳು ಕಾಮಿನಿ. ರಾಹುಗ್ರಸ್ತ ಚಂದ್ರನಂತಾಗಿತ್ತು ಮುಖ ಮಂಡಲ.

"ನೀನೇ ಹೀಗಾದರೆ ಇತರರ ಪಾಡೇನು?"

" ಆದರೂ.... "

ಕಮಲೇಶ್ ಅವಳಿಗೆ ನಾನಾ ಹಿತನುಡಿಗಳನ್ನು ಹೇಳಿ ಧೈರ್ಯ ತುಂಬಿ ಆಪರೇಷನ್ನಿಗೆ ಕೈ ಹಚ್ಚಿದಳು. ಆಪರೇಷನ್ ಮುಗಿಸುವಷ್ಟರಲ್ಲಿ ಇಳೆಯನ್ನು ಕತ್ತಲೆಯ ತೆರೆ ತೆರೆತೆರೆಯಾಗಿ ಮುಸುಗುತಿತ್ತು. ಅವಳಿಗೆ ರಾತ್ರಿ ಅಲ್ಲೇ ಇದ್ದು ನೋಡಿಕೊಳ್ಳುವುದಾಗಿ ಹೇಳಿದ್ದುದರಿಂದ ಮನೆಗೆ ಹೋಗುವಂತಿಲ್ಲ. ಮೇಲಾಗಿ ಅವಳಿಗೆ ಪ್ರಜ್ಞೆಯೂ ಬಂದಿರಲಿಲ್ಲ. ಹೊರಡುವ ಅವಸರದಲ್ಲಿ ಒಂದು ಪುಸ್ತಕವನ್ನು ಸಹ ತರದೆ ಬಂದೆ, ಹೊತ್ತು ಕಳೆಯುವುದು ಹೇಗೆ ಎಂಬ ಯೋಚನೆ ಮೂಡುತ್ತಿದ್ದಂತೆಯೇ ಇನ್ನೊಂದು ಎಮರ್ಜನ್ಸಿ ಆಪ ರೇಷ್ನ ಕೇಸು ಆಗಮಿಸಿತು. ನೋಡಿದರೆ ಅದೂ ಪರ್ಫರೇಟೆಡ್ ಅಪೆಂಡಿಕ್ಸ್. (PERFORATED APPENDIX)

ಡಾ|| ಕಾಮಿನಿಯನ್ನು ವಾರ್ಡಿಗೆ ಕಳುಹಿಸಲು ಇನ್ನೂ ಸ್ವಲ್ಪ ಹೊತ್ತು ಬೇಕಾಗುವುದರಿಂದ ತಾನಲ್ಲಿ ಇರಲೇಬೇಕಾಗಿತ್ತು. ಸುಮ್ಮನೆ ಕುಳಿತು ಮಾಡುವುದೇನು? ಆ ಆಪರೇಷನ್ನಿಗೂ ಕೈ ಹಚ್ಚಿದಳು ಕಮಲೇಶ್. ಅದು ಮುಗಿಯುವಷ್ಟರೊಳಗಾಗಿ ಮನೆಯಿಂದ ಊಟವು ಆಗಮಿಸಿತು. ಮುಖ ಮಜ್ಜನಮಾಡಿ ಊಟ ಮುಗಿಸಿ ಕಾಮಿನಿಯ ಬಳಿಗೆ ಬಂದು ಐದು ನಿಮಿಷ ಉರುಳಿರಲಿಕ್ಕಿಲ್ಲ. ಅಷ್ಟರೊಳಗಾಗಿ ಇನ್ನೊಂದು ಎಮರ್ಜನ್ಸಿ ಕೇಸು ಒಳನುಗ್ಗಿ ಬಂತು. ಮಂಚದಮೇಲೆ ಆಪರೇಷನ್ ಆದವರಿಬ್ಬರೂ ಬಾಹ್ಯಪ್ರಜ್ಞೆ ಇಲ್ಲದೆ ಮಲಗಿದ್ದರು. ಅವರ ಸ್ಥಿತಿಗತಿಯನ್ನು ನೋಡಿಕೊಂಡು ಮೂರನೆಯ ಕೇಸೇ ನೆಂಬುದನ್ನು ನೋಡಲು ಆಪರೇಷನ್ ಥಿಯೇಟರಿಗೆ ಹೋದಳು. ಹನ್ನೆರಡು ವಸಂತಗಳ ಸೊಂಪನ್ನುಂಡಿದ್ದ ಬಾಲಕ. ಹಾಲ್ಗೆನ್ನೆಗಳು ಕಂಬನಿಯಿಂದ ತೊಯ್ದು ಮೇಘಾಚ್ಛಾದಿತ ರವಿಯಂತೆ ಮ್ಲಾನವಾಗಿವೆ. ಮುಖದ ಮೇಲೆ ಭಯದ ಮುದ್ರೆ ದಟ್ಟವಾಗಿದೆ. ಕಮಲೇಶ್ ಅವನನ್ನು ಸಮಾಧಾನಗೊಳಿ ಸುತ್ತಲೇ ಪರೀಕ್ಷೆಗೆ ಕೈ ಹಚ್ಚಿದಳು. ಓ....ಅದೂ ಸಹ ಪರ್ಫರೇಟೆಡ್ ಅಪೆಂಡಿಕ್ಸ್!

" ಓ....! ದೇವರೇ!" ಉದ್ಗಾರ ತೆಗೆದಳು ಕಮಲೇಶ್. ತುಟಿಗಳಂಚಿ ನಲ್ಲಿ ಎಳೆನಗು ಮಿನುಗಿ ಮಾಯವಾಯಿತು.

ಅಧ್ಯಾಯ

೨೯

ನೆಹರೂ ರಸ್ತೆಯಲ್ಲಿರುವ ಮನೆಯನ್ನು ತಾನು ಬಾಡಿಗೆಗೆ ಹಿಡಿಯುವುದಾಗಿಯೂ ಅದು ಆಸ್ಪತ್ರೆಗೆ ಚೇತನಳ ಶಾಲೆಗೆ ಮತ್ತು ನಿಮ್ಮ ಮನೆಗೆ ಹತ್ತಿರವಾಗಿರುವುದರಿಂದ ತುಂಬ ಅನುಕೂಲವೆಂದು ಕಮಲೇಶ್ ಕಾಗದ ಬರೆದಾಗ ಅದರಲ್ಲಿ ಚಂದ್ರಕಾಂತನಿಗೆ ಪ್ರತಿರೋಧ ತೋರುವಂತಹ ಕಾರಣವೇನೂ ತೋರಲಿಲ್ಲವಾದುದರಿಂದ 'ಆಗಬಹುದು' ಎಂದು ಸಲೀಸಾಗಿ ಉತ್ತರ ಬರೆದ. ಅದರಿಂದ ಎರಡೂ ಕುಟುಂಬಗಳು ಸಂತುಷ್ಟವಾದುವಷ್ಟೇ ಅಲ್ಲ ; ಆ ಕ್ಷಣವೆ ಕರ್ವೆಯವರ ಮನೆಗೆ ಸಂಸಾರವನ್ನು ಬದಲಾಯಿಸಿದ್ದೂ ಆಯಿತು.

ಈಗ ಮಕ್ಕಳ ಮೋಹಕ ಕೂಟಕ್ಕೆ ಬಸಂತ್ ಒಡೆಯ.

ಅದ್ಭುತ ಸ್ನೇಹವುಳ್ಳ ಗೆಳತಿಯರ ಅಂತರಂಗಗಳು ಇನ್ನಷ್ಟು ಹತ್ತಿರ ಸೆಳೆದುಕೊಂಡುವು. ಅವರ ಅಪಾರವಾದ ಉತ್ಸಾಹ ಸಂತೋಷಗಳನ್ನು ನೋಡಿ ಕಮಲೇಶಳ ಮನಸ್ಸು ಅರಳಿ ಹೃದಯ ಹಗುರವಾಯಿತು. ಅನೇಕ ವೇಳೆ ಹೊತ್ತು ಮೀರಿ ಮನೆಗೆ ಬರುವುದುಂಟು. ಆಗ....ಅಂತಹ ಸಂದರ್ಭಗಳಲ್ಲಿ ಆತ್ಮರಾಂ ಕರ್ವೆಯ ಅಭಯ ಹಸ್ತದಾಶ್ರಯದಲ್ಲಿ ಮನೆ ನೆಮ್ಮದಿಯಿಂದಿರುವುದನ್ನು ಕಾಣುವಾಗ ಅವರ ವಾತ್ಸಲ್ಯಕ್ಕೆ ತಾನು ಪಾತ್ರಳಾಗದೆ ಹೋದರೂ ಅವರು ತನ್ನ ಮೇಲಿಟ್ಟಿರುವ ಅಂಧಾಭಿಮಾನಕ್ಕೆ ತಲೆ ಮಣಿಯುವುದು....ಪರಮಪೂಜ್ಯರ ಆಶಾಭಂಗವೇ ಅಭಿಶಾಪವಾಗಿ ಪರಿಣಮಿಸಿ ತನ್ನ ಬಾಳಿನಲ್ಲಿ ಅಶಾಂತಿಯನ್ನು ತುಂಬಿರಬಹುದೋ ಏನೋ....ಈ ಅರ್ಥರಹಿತ ನಿಷ್ಠುರ ಧ್ಯೇಯಕ್ಕಾಗಿ ತನ್ನನ್ನು ಬಲಿ ಕೊಡಲು ದುರ್ವಿಧಿ ಅದಾವ ಮಾಯಕತೆಯಿಂದ ಕಾದಿತ್ತೋ.........ಎಂಬ ಚಿಂತೆಯು ಮೂಡದೆ ಇರುತ್ತಿರಲಿಲ್ಲ.

ಚಂದ್ರಕಾಂತ್ ಮುಂದಿನ ಅಭ್ಯಾಸವನ್ನು ಮುಗಿಸಿ ಮನೆಗೆ ಮರಳಿದಾಗ ಮೊದಲು ಮೂಡಿದ ಆಶ್ಚರ್ಯವೆಂದರೆ ಕಮಲೇಶಳ ನೆಹರೂ ರಸ್ತೆಯ

ಮನೆ. ಆದಿರುವುದು ಅರ್ಥಾತ್ ನೆಹರೂ ರಸ್ತೆಯಾದರೂ ನೆಲೆ ಕರ್ವೆಯವರ ಅಂಗಳದಲ್ಲೇ, ಹಿಂದೆ ಮುಂದೆ ಸರಿಯಾಗಿ ತಿಳಿದುಕೊಳ್ಳದೆ ಅಪ್ಪಣೆ ನೀಡಿ ತಪ್ಪುಮಾಡಿ ಬಿಟ್ಟೆ ಎಂಬ ಪಶ್ಚಾತ್ತಾಪ ಮೂಡಿತು. ಕರ್ವೆಯವರ ಸ್ನೇಹಾದರಗಳಿಂದ ಈಕೆಗೆ ನನ್ನ ಮೇಲೆ ಭಯ ಭಕ್ತಿಗಳಿಲ್ಲ....ಏನೋ ಒಂದು ಬಗೆಯ ತಾತ್ಸಾರ, ದೊಡ್ಡಸ್ತಿಕೆ. ಈ ದೇಶದಲ್ಲಿ ನಿತ್ಯಪೂಜನೀಯವೂ ಸದಾಚಾರವೂ ಆದ ಹಿಂದೂ ಧರ್ಮ....ಸತೀಧರ್ಮ ವಿನಾಶದ ಮಾರ್ಗ ಹಿಡಿಯುತ್ತಿದೆ. ಇದೆಲ್ಲಾ, ವಿದೇಶೀಯರ ಸಹವಾಸ ಮತ್ತು ಅವರ ಪ್ರಚಾರಕರು ಹಿಂದೂ ಧರ್ಮದ ಮೇಲೆ ಬೀರಿರುವ ಪ್ರಭಾವ........ಚಂದ್ರಕಾಂತ್ ವಿಚಾರ ವೇದಿಕೆಯನ್ನೇರಿ ಏಕಾಕಿಯಾಗಿ ಅಂಡಲೆದ. ಮನದಲೆಯಲ್ಲಿ ಬೀಸಿದ ಬಿರುಗಾಳಿ ಆತನನ್ನು ಸಮೂಲವಾಗಿ ಅಲುಗಾಡಿಸಿಬಿಟ್ಟಿತು.

ಹಾಗೆಂದು....ಆತ ಬುದ್ಧಿವಂತನಲ್ಲವೆಂದು ಹೇಳಲಾರೆವು. ವಿದ್ಯೆಯಲ್ಲಿ ಬುದ್ಧಿಯಲ್ಲಿ ಯೋಗ್ಯತೆಯಲ್ಲಿ ಸಭ್ಯತೆಯಲ್ಲಿ ಆತ ಎಲ್ಲರಿಗೂ ಸಾಟಿಯೆ ಸೈ. ಸಭ್ಯ ಸಮಾಜದಲ್ಲಿ ಎಂತಹ ನಡವಳಿಕೆ ಬೇಕೋ ಅವೆಲ್ಲವೂ ಅವನಲ್ಲಿವೆ. ಪ್ರೀತಿ ವ್ಯಾಮೋಹಗಳ ಧಣಿಯೂ ಹೌದು. ಪರನಾರಿ ಸಹೋದರನೂ ಸಹ. ಇವೆಲ್ಲವೂ ಕಮಲೇಶಳಿಗಷ್ಟೇ ಅಲ್ಲದೇ ಸ್ವರ್ಣಮಾಲಿನಿಗೂ ಗೊತ್ತು.... ಈ ಎಲ್ಲಾ ವಿಚಾರಗಳಿಗೂ ಹಣೆ ಮಣಿದು ಹೃದಯ ಪರಿತಾಪದಿಂದ ಆಕ್ರೋಶಿಸುತ್ತದೆ. ಇದೆಲ್ಲಾ ತನ್ನ ಹಣೆಯ ಬರಹವೆಂದು ಒಪ್ಪಿಕೊಳ್ಳುತ್ತ ಹೇಗೆ ಇದರ ಪರಿಹಾರ ಎಂಬ ಚಿಂತೆಗೀಡಾಗುವುದು ಇತ್ತೀಚೆಗೆ ದಿನಚರಿಯಾಗಿ ಹೋಗಿದೆ.

ಡಾ|| ಬಲರಾಂ ನಿರ್ಗಮಿಸಿದ ಮೇಲೆ ಡಾ|| ಶರಣ್ ಆಗಮಿಸಿದ್ದ. ಹೆಂಗಳೆಯರನ್ನು ಕಳ್ಳದಿಟ್ಟಿಯಿಂದ ಬಾರಿ ಬಾರಿಗೂ ನೋಡಿ ಎದೆಯ ತೃಷೆಗೆ ತಣಿವನ್ನು ನೀಡುವ ಹಾಳು ಚಪಲ ಅವನದು. ಅವನು ಬಂದನಂತರ ನಂಜಿನ ಬೆಟ್ಟ ಇನ್ನಷ್ಟು ಬೆಳೆಯ ಹತ್ತಿದೆ ಯಾವ ರಜೋಗುಣಿ ಪ್ರೇರಣೆಯಿಂದ ಚಂದ್ರಕಾಂತನ ಎದೆಯಲ್ಲಿ ಸ್ವಲ್ಪವೂ ಅನುಭೂತಿಗೆ ಅವಕಾಶವಿಲ್ಲವೋ ಅದೇ ರಜಃಪ್ರಭಾವದಿಂದ ಡಾ|| ಶರಣನ ಆತ್ಮಾನುಭೂತಿ ತೈಲವಾರಿದ ನೀಲಾಂಜನದ ಕುಡಿಯಂತೆ ಜ್ಯೋತಿರ್ವಿಹೀನವಾಗಿದೆ.

ಜೀವನಾರಣ್ಯಕ್ಕೆ ಸರಾಗವಾಗಿ ಕಾಲಿಟ್ಟ ಕಮಲೇಶಳಿಗೆ ಈ ಅತೀತ

ಯುಗದಲ್ಲಿ ಬಹು ದೂರಗಮ್ಯದ ಶ್ರೀಶುಭಚರಣಗಳ ನೆಲೆ ಎಲ್ಲಿದೆಯೋ.... ಎಲ್ಲಿಯವರೆಗೆ ಈ ದುರ್ಗಮವಾದ ಗಾಢಾಂಧಕಾರ ಮಾರ್ಗ್ಗಯೋಗದಲ್ಲಿ ಶೃಂಖಲಾಬದ್ಧ ಅಪರಾಧಿನಿಯಂತೆ ನಡೆಯಬೇಕೋ ಎಂಬುದರ ಅರಿವು ಸಹ ಇಲ್ಲ. ತದೇಕ ದೃಷ್ಟಿಯಿಂದ ಆ ಜಾಡನ್ನು ಅರಸಿದರೂ ಗಮ್ಯಸ್ಥಾನ ತೋರದು. ಪರಸ್ಪರ ಪ್ರತಿಕೂಲ ಭಾವತರಂಗಗಳ ಸಂಘರ್ಷಣೆಗೊಳಗಾಗಿ ಅಪ್ರತಿಭಳಾದರೂ ಆ ಭಾವೋನ್ಮಾದಿನಿಯ ಅಭಿಶಸ್ತ ಹೆಜ್ಜೆಗಳ ವೇಗ ತಗ್ಗಲಿಲ್ಲ. ಮಳೆ ಹೊಯ್ದು ನಿಂತನಂತರ ಮೂಡುವ ಪ್ರಭಾತ್ ಸೂರ್ಯಕಾಂತಿಯು ದಿಗಂತವ್ಯಾಪಕವಾದ ಪ್ರಶಾಂತತೆಯನ್ನು ತುಂಬಿ ಹರಡುವಂತಾಗಿದೆ ಅವಳ ನಿಃಶಬ್ದ ಪ್ರಕೃತಿ. ಆದರೂ ಚಂದ್ರಕಾಂತನ ಜೀವನ ಶ್ರದ್ಧೆಯ ಪ್ರಮಾಣಕ್ಕೆ ದಿನನಿತ್ಯದ ಸುಖಸಂತೋಷಗಳ ವೀರಪೂಜೆಗೆ ಆಕೆ ಒಂದೇ ಒಂದು ತುತ್ತು.... ನಂತರ....ಅನಂತರ....ಅನಂತರ....

ಶರತ್ಕಾಲೀನ ಮಧ್ಯಾಹ್ನ,

ಪ್ರಕೃತಿಯಲ್ಲಿ ಗಂಭೀರ ನಿಶ್ಶಬ್ದತೆ ನೆಲೆಸಿತ್ತು.

ಶ್ರುತಿ ಸಂವೇದನೆಗಳು ಸ್ತಬ್ಧವಾಗಿದ್ದುವು. ಪ್ರಫುಲ್ಲ ಪುಷ್ಪರಾಜಿ ಬಾಡಿ ತಲೆಬಾಗಿದೆ. ಪಶುಪಕ್ಷಿಗಳು ತಂಪನ್ನಾಶ್ರಯಿಸಿವೆ. ಮೂಕ ಮೌನವಾಗಿದೆ ಜನರಾಶಿ. ಸುಡುಬಿಸಿಲಲ್ಲಿ ಕಮಲೇಶ್ ಮನೆ ಮುಟ್ಟಿದಾಗ ಪ್ರಥಮ ದರ್ಶನ ತಾಯಿಯದೇ ಆಯಿತು. ಅವಳು ಅದೇ ತಾನೆ ಸ್ನಾನ ಮಾಡಿದ್ದಾಳೆ. ಸ್ವಚ್ಛ ಬೆಳ್ಳಿಯಂತೆ ಹೊಳೆಯುವ ಕೂದಲಿನಿಂದ ನೀರು ತೊಟ್ಟಿಕ್ಕುತಿತ್ತು. ನಸು ತೆಳ್ಳನೆಯ ನೀಳವಾದ ಅಂಗಲತೆ ಶುಭ್ರ ಶ್ವೇತಾಂಬರದಿಂದ ಸುಶೋಭಿತವಾಗಿದೆ....ಆಕ್ಕೆ ನಗುಮುಖದಿಂದ ಆದರಪೂರ್ವಕವಾಗಿ ನುಡಿದಳು "ಸ್ನಾನ ಮಾಡು ಮಗೂ."

ತಣ್ಣೀರಿನ ಸ್ನಾನ ಮಾಡಿದ ಮೇಲೆ ಬಳಲಿಕೆ ನೂರು ಗಾವುದ ಹಾರಿತು. ಬೆಳಗಿನಿಂದ ಓಡಾಡಿ ದಣಿದಿದ್ದ ಕಾಲುಗಳು ಹಗುರವಾದುವು. ಮಡಿಯುಟ್ಟು ಊಟ ಮುಗಿಸಿದಾಗ ಹೊತ್ತು ಮೂರರ ಹೊಸ್ತಿಲಿನಲ್ಲಿತ್ತು....ಮಗಳ ಕ್ಲಾಂತ ಶ್ರಾಂತ ಸ್ಥಿತಿ ಮನವನ್ನು ಒಮ್ಮೊಮ್ಮೆ ಗಾಣಕ್ಕೆ ಕೊಟ್ಟ ಕಬ್ಬಿನಂತೆ ಹಿಂಡು

ತ್ತದೆ. ಸ್ವರ್ಣಮಾಲಿನಿ ಸುಖದುಃಖಗಳ ಪಾಲಾಗಿ ಅತ್ಯಂತ ಕರುಣಾದ್ರ್ರ ದೃಷ್ಟಿಯಿಂದ ನೋಡುತ್ತ "ಏಕೆ ಸಪ್ಪಗಿದ್ದೀಯಲ್ಲ ಕಮಲೇಶ್?" ಎಂದು ಕೇಳುವುದುಂಟು, ಆಗ ಕೆಲವು ಕ್ಷಣಗಳು ಏನು ಹೇಳಬೇಕೋ ಹೊಳೆಯದೆ "ಇಲ್ಲವಲ್ಲಾ...." ಎಂದಷ್ಟು ನುಡಿದು ಬೇರೆ ವಿಷಯಕ್ಕೆ ಜಾರಿಕೊಳ್ಳುವಾಗ ಕರುಳು ಮಿಡಿಯುವುದು.

ಸ್ನೇಹಸ್ವರೂಪಿಣಿ ಹೇಮರತಿ ಕರ್ವೆ–"ನಿನ್ನ ಮುಖ ನೋಡುವಂತಿಲ್ಲ. ವರ್ಷದಲ್ಲಿ ಕೆಲವು ದಿನಗಳಾದರೂ ವಿಶ್ರಾಂತಿ ಇಲ್ಲದಿದ್ದರೆ ಹೇಗೆ? ಮಕ್ಕಳು ಮರಿಯೊಂದಿಗೆ ಸುಖವಾಗಿ ಕೆಲವು ದಿನ ಕಳೆ ಕಮಲೇಶ್." ಎಂದಾಗ ನಿಜ ವಾಗಿಯೂ ಅದು ಹಿತ....ಎಂದು ಒಪ್ಪಿಕೊಳ್ಳುತ್ತದೆ ಅಂತರಾತ್ಮ.

ಇದುವರೆಗೆ ಮೈಯಲ್ಲಿದ್ದ ನೂರ್ಮಡಿಯ ಉತ್ಸಾಹ ರಜೆಗಳನ್ನು ತಾನೇ ತಾನಾಗಿ ತಳ್ಳಿಹಾಕುತಿತ್ತು. ಈಗೀಗ ರಜೆ ಬಂದರೆ ಅಷ್ಟೇ ಸಾಕು ಮಕ್ಕ ಳೊಂದಿಗೆ ಹಾಯಾಗಿರುವೆ ಎಂದುಕೊಳ್ಳುವಳು. ಆದರೆ ಮರುದಿನ ಆ ಆನಂದದ ಘನಾಂಶವೆಲ್ಲಾ ಗಾಳಿಯಲ್ಲಿ ಸೇರಿ ಅನಂತಾನಂತದಲ್ಲಿ ಲೀನವಾಗು ವುದು....ರಜೆ ದೊರೆತಾಗ ಅತ್ತೆಯ ಬಳಿ ಏಕಿರಬಾರದು? ತಾಯಿ, ತಮ್ಮ, ತಮ್ಮನ ಸತಿ ಕಲಿತವರಲ್ಲ; ಮಕ್ಕಳಿಗೂ ಒಳ್ಳೆಯ ಶಿಕ್ಷಣವಿಲ್ಲ. ಇವಳ ಸಂಪರ್ಕ ಹೊಂದಿದರೆ ಅವರೂ ಸ್ವಲ್ಪ ಸುಧಾರಿಸಿಯಾರು. ಅಷ್ಟೂ ತಿಳಿವಳಿಕೆ ಇಲ್ಲ ಇವಳಿಗೆ, ಕಲಿತವಳನ್ನು ತಂದು ತಮ್ಮವರಿಗಾದ ಪ್ರಯೋಜನವೇನು? ... ಎಂಬುದು ಚಂದ್ರಕಾಂತನ ತರ್ಕಬದ್ಧವಾದ ಚಿಂತನೆ. ಅವಳಿಗೆ ಈಗೀಗ ರಜೆಯೂ ಮುಳ್ಳಿನ ಕಣವಾಗತೊಡಗಿತು.

ಕಮಲೇಶ್ ಮನೆಗೆ ಮರಳಿದಾಗ ಸ್ವರ್ಣಮಾಲಿನಿ ಜ್ವರ ಪೀಡಿತಳಾಗಿ ಹಾಸಿಗೆ ಹಿಡಿದಿದ್ದಳು. ಜ್ವರದ ಕಾವಿನಿಂದ ಮೈ ಕೆಂಡದಂತೆ ಸುಡುತಿತ್ತು. ಮಕ್ಕಳು ಹಾಯಾಗಿ ಆಟ ಆಡಿಕೊಂಡಿವೆ. ಹೇಮರತಿ ಕರ್ವೆ ಸಹ ಊರಿನ ಲ್ಲಿಲ್ಲ. ಕಮಲೇಶ್ ಆಸ್ಪತ್ರೆಗೆ ಹೋಗುವ ಯೋಚನೆಯನ್ನು ಬಿಟ್ಟು ಮನೆ ಯಲ್ಲಿ ಉಳಿದಳು.

"ಸ್ವರೂಪ್!"

ತಾಯಿಯ ದನಿ ಕೇಳಿ ಸ್ವರೂಪ್ ಓಡೋಡಿ ಬಂದಳು. ನಗುಮುಖದಿಂದ ಉತ್ಸಾಹವೇ ಮೈವೆತ್ತು ಬಂದಂತೆ ಬಂದ ಮಗುವನ್ನು ಎದೆಗಪ್ಪಿಕೊಂಡು ಮುದ್ದುಗೈಯ್ಯುತ್ತ ಕೇಳಿದಳು ಕಮಲೇಶ್ "ಸ್ವರೂ, ನೀನು ಶಾಲೆಗೆ ಹೋಗುವುದಿಲ್ಲವೆ ?"

ಬೆಣ್ಣೆಯಂತಹ ನಳಿದೋಳುಗಳಿಂದ ಕೊರಳನ್ನಪ್ಪಿಕೊಂಡು ಆನಂದೋತ್ಸಾಹದಿಂದ ನುಡಿದಳು ಸ್ವರೂಪರಾಣಿ. "ಹೋಗುವೆ!"

"ನೀನೆಷ್ಟು ಓದುವೆ ?"

"ಇಷ್ಟು!" ಎರಡೂ ಕೈಗಳನ್ನು ಅಗಲಿಸಿ, ಭಾವಪೂರ್ಣ ಲೋಚನಗಳನ್ನು ಅರಳಿಸಿ ಉತ್ಸಾಹದಿಂದ ನುಡಿದ ಮೃದು ಮಧುರ ಧ್ವನಿ ಕಿವಿಗಿಂಪಾಗಿ ಕೇಳಿಸಿತು. ಆ ಮಗುವನ್ನು ಮನವಾರೆ ಮುದ್ದಿಟ್ಟುಕೊಳ್ಳುವಾಗ "ಸಭ್ಯ ಸಮಾಜದ ಆತ್ಮಸಂಸರ್ಗದಿಂದ ಅರಳಿದ ಜೀವನ ವಿಕಾಸ ವನಸುಮದಂತೆ ಕಮನೀಯವಾಗಿದೆ......... ಇನ್ನು ಇದಕ್ಕಿಂತ ಇನ್ನೇನು ಬೇಕು? ದೂರಗಮ್ಯದ ಜಾಡನ್ನು ಎಂದೋ ಕಂಡುಕೊಂಡಾಗಿದೆ." ಎಂದುಕೊಂಡಳು.

ಅಂದು ಮಧ್ಯಾಹ್ನ ಚಂದ್ರಕಾಂತ್ ತನ್ನ ಮನೆಗೆ ಊಟಕ್ಕೆ ಹೋಗಿದ್ದುದರಿಂದ ಆಸ್ಪತ್ರೆಗೆ ಹೋಗುವಾಗ "ಹೀಗೆಯೇ ಬಂದು ಹೋಗಿ" ಎಂದಿದ್ದಳು ಕಮಲೇಶ್, ಹೊತ್ತು ಎರಡರ ಅಂಚನ್ನು ದಾಟಿತು. ತಾಯಿಗೆ ಇನ್ನೂ ಜ್ವರ ಇಳಿದಿರಲಿಲ್ಲ. ಅವಳೊಂದಿಗೆ ಮಾತಾಡುತ್ತಾ ಹಾಗೇ ಹಾಸಿಗೆಯ ಮೇಲೆ ಅಡ್ಡಾದಳು. ಅದನ್ನು ನೋಡಿ ಅತ್ಯಂತ ಉತ್ಸುಕತೆಯಿಂದ "ಒಳ್ಳೆ....ಕತೆ ಹೇಳಿ ಮಾ !" ಎನ್ನುತ್ತ ಸ್ವರೂಪರಾಣಿ ತಾಯಿಗೆ ಗಂಟು ಬಿದ್ದಳು. ಮಕ್ಕಳ ಮನ ಮೆಚ್ಚುವ ಕತೆಗಳನ್ನು ಬಣ್ಣಿಸಿ ಹೇಳುತಿದ್ದಂತೆ ಇಬ್ಬರಿಗೂ ಜೊಂಪು ಹತ್ತಿತು. ಕಮಲೇಶ್ ಮಗಳನ್ನಪ್ಪಿಹಿಡಿದುಕೊಂಡು ಹಾಗೇ ನಿದ್ದೆ ಹೋದಳು. ಬಳಲಿದ ಮೈ ವಿಶ್ರಾಂತಿಗೆ ಬಲಿಯಾಯಿತು.

ಚಂದ್ರಕಾಂತ್ ಆಗಮಿಸಿದಾಗ ಮನೆಯಲ್ಲಿನ ನಿಶ್ಶಬ್ದ ಎದೆಯನ್ನು ಇರಿಯುವಂತಿತ್ತು ಸ್ವಲ್ಪಹೊತ್ತು ಕುಳಿತು ಒಂದೆರಡು ಪತ್ರಿಕೆಗಳನ್ನು ತಿರುವಿಹಾಕಿದ. ಆದರೂ ಕಮಲೇಶಳ ಸುಳಿವಿಲ್ಲ. ಲಘು ಉಪಹಾರದೊಡನೆ ಚಹವನ್ನು ತಂದು ಮುಂದಿಟ್ಟಳು ಸೀತಮ್ಮ. ಅದು ತಣ್ಣಗಾದರೂ ಅದರೆಡೆಗೆ ಗಮನ ಹರಿಸದೆ ಸ್ವಲ್ಪ ಹೊತ್ತು ಪತ್ರಿಕೆಯನ್ನು ತಿರುವಿ ಹಾಕಿದ. ಅದರಲ್ಲೂ

ಕೆರಳಿದ ಮನಸ್ಸು ನೆಲೆಗೊಳ್ಳದು ಸಿಟ್ಟಿನಿಂದ ಪತ್ರಿಕೆಯನ್ನೆತ್ತ ತಳ್ಳಿ ಹೊರ ಹೋದ.

ಎಂದೂ ಮಧ್ಯಾಹ್ನ ನಿದ್ದೆ ಹೋಗದವಳಿಗೆ ಇಂದು ಆಶ್ಚರ್ಯ ಮೂಡಿದರೂ ಹಾಯೆನಿಸಿತು. ಸ್ವರ್ಣಮಾಲಿನಿಯ ಜ್ವರವು ಕಡಿಮೆಯಾಗಿತ್ತು. ಚಹ ತರ ಹೇಳಲು ಒಳ ಹೋದ ಕಮಲೇಶ್ ಮೇಜಿನಮೇಲೆ ಚಹ ಉಪಹಾರ ಹಾಗೇ ಇದ್ದುದು ನೋಡಿ–"ಯಾರಿಗಿಟ್ಟಿರಿ ಸೀತಮ್ಮಾ?"

"ಡಾಕ್ಟರು ಬಂದಿದ್ದರು. ಕೊಟ್ಟರೆ ತೆಗೆದುಕೊಳ್ಳದೆ ಹೋದರು."

"ಓಹೋ! ಏಕೆ ಏಳಿಸಲಿಲ್ಲ?"

"ನೀವು ನಿದ್ದೆ ಹೋಗಿದ್ದಿರಿ........"

ಮೈಗೆ ಬಿಸಿನೀರು ಚೆಲ್ಲಿದಂತಾಯಿತು. ಕ್ಷಣ ಕಾಲ ಯೋಚಿಸಿ ಕೊಠಡಿಗೆ ಹೋದಳು. ಮುಖ ಮಜ್ಜನ ಮಾಡಿ ತಿಲಕವಿಡುವಷ್ಟರಲ್ಲಿ ಚಹ ಅಣಿಯಾಗಿ ಬಂತು.

"ಡಾಕ್ಟರು ಬಂದರೇ?" ಸ್ವರ್ಣಮಾಲಿನಿ ಕೇಳಿದಳು.

"ಅವರು ಬಂದು ಹೋಗಿದ್ದಾರೆ. ನನಗೆ ಗೊತ್ತೇ ಇಲ್ಲ ಮಾ."

"ಡಾಕ್ಟರು ಚಹ ತಿಂಡಿ ಏನನ್ನೂ ತೆಗೆದುಕೊಳ್ಳದೆ ಹಾಗೇ ಹೋದರು ಮಾ." ಎಂದು ಕಳಕಳಿಯಿಂದ ಬಿತ್ತರಿಸಿದಳು ಸೀತಮ್ಮ.

"ಹಸಿವಿರಲಿಲ್ಲವೇನೋ." ವಿಷಯ ಮುಂದುವರಿಯದಂತೆ ಅಲ್ಲಿಗೆ ತಡೆ ಹಾಕಿದಳು ಕಮಲೇಶ್. ಹೃದಯ ಕಾಂತಾರದಲ್ಲಿ ಕಸಿವಿಸಿ ಮೂಡಿ ನರನಾಡಿಗಳಲ್ಲಿ ಮೆಲ್ಲನೆ ಸಂಚರಿಸತೊಡಗಿತು.

ಚಹ ಮುಗಿಯುವುದರೊಳಗಾಗಿ ಹೊರಬಾಗಿಲ ಕರೆಗಂಟೆ ಸದ್ದು ಮಾಡಿ ಕರೆ ನೀಡಿತು. ಬಹುಶಃ ಚಂದ್ರಕಾಂತ್ ಬಂದರೇನೋ ಎನ್ನಿಸಿ ತಾನೇ ಧಾವಿಸಿ ಲಗುಬಗೆಯಿಂದ ಬಾಗಿಲು ತೆರೆದರೆ ಸಾಲು ಹಲ್ಲುಗಳ ಪ್ರದರ್ಶನಗೈಯ್ಯುತ್ತಾ ನಿಂತಿದ್ದಳು ವನಮಾಲಿ....ಜೊತೆಗೆ ಎತ್ತರವಾಗಿ ಬೆಳೆದ ಮೂವರು ಹುಡುಗಿಯರಿದ್ದಾರೆ. ಅವಳ ಸಂಸಾರ ಸಮೂಹವನ್ನು ನೋಡಿದೊಡನೆ ಮನದ ದುಗುಡವೆಲ್ಲ ಮಂಗಳಮಾಯವಾಯಿತು. ಅತ್ಯಂತ ಆತ್ಮೀಯತೆಯಿಂದ ಬರಮಾಡಿಕೊಂಡಳು "ಬಾಮ್ಮಾ, ವನಮಾಲಿ!"

ಹೃದಯಕ್ಕೆ ಹೃದಯವನ್ನೊತ್ತಿ ಆತ್ಮೀಯ ಆಲಿಂಗನ ನೀಡಿದಾಗ ಹೃದಯ ಹಾಲ್ಗಡಲಾಯಿತು. ಎದೆಯ ಹರ್ಷವಾಹಿನಿ ಉತ್ಸಾಹರೂಪದಿಂದ

ಮುಖ ಮೈಗಳನ್ನು ಆವರಿಸಿತು.

"ನಿನ್ನನ್ನು ನೋಡಿ ಎಷ್ಟು ದಿನಗಳಾಗಿದ್ದುವೋ...."

"ಈಗ ಅಪ್ಪ ಅಮ್ಮ ಇಲ್ಲ. ನನಗೆ ಇಲ್ಲೇನು ಕೆಲಸ ಹೇಳು ?"

"ನಾನಿಲ್ಲವೇ ?"

"ನಿನಗಾಗಿಯೇ ಈಗ ಬಂದದ್ದು."

"ತುಂಬ ಥ್ಯಾಂಕ್ಸ್ !"

"ಮಕ್ಕಳು ನಿನ್ನಷ್ಟೇ ಎತ್ತರವಾಗಿದ್ದಾರೆ."

"ಮಕ್ಕಳು ಬೆಳೆದರೂ ಕಷ್ಟ; ಬೆಳೆಯದಿದ್ದರೂ ಕಷ್ಟ. ಹೈಸ್ಕೂಲು ಮುಗಿಸಿದರೆ ಮನೆಯಲ್ಲಿ ಕೂರಬೇಕು. ಮುಂದೆ ಓದಿಸಲು ದುಡ್ಡಿಲ್ಲ. ಯಾರಾದರೂ ಹಣವಂತರು ಸಿಕ್ಕಿದರೆ ಮದುವೆ ಮಾಡಿಬಿಡುವೆ. ಆ ಪುಣ್ಯಾತ್ಮ ಓದಿಸಿಕೊಳ್ಳುವುದಾದರೆ ಓದಿಸಿಕೊಳ್ಳಲಿ."

"ಇಷ್ಟು ತೊಂದರೆಯಲ್ಲಿದ್ದೂ ಭರತ ನಾಟ್ಯ ಬಿಟ್ಟುಬಿಟ್ಟೆಯಲ್ಲಾ.... ಎಂಥ ಅನ್ಯಾಯ ? ಸ್ತ್ರೀಶಕ್ತಿ ಎಷ್ಟು ಮಹತ್ತರವಾದುದೋ ಮಾನವ ಶಕ್ತಿಯೂ ಅಷ್ಟೇ ಮಹತ್ತರವಾದುದು. ಶಕ್ತಿ ಇದ್ದೂ ಬಳಸಿಕೊಳ್ಳದಿದ್ದಲ್ಲಿ ಯಾರ ತಪ್ಪು ಹೇಳು ? ಮಾನವ ಶಕ್ತಿಯ ದುರ್ವ್ಯಯದಿಂದಲೇ ನಮ್ಮ ದೇಶ ಇನ್ನೂ ಬಡತನದಲ್ಲಿ ನರಳುತ್ತಿದೆ. ಒಬ್ಬರು ದುಡಿದು ನಾಲ್ಕಾರುಮಂದಿ ಉಣ್ಣುವುದೆಂದರೆ ಹೇಗೆ ಸಾಧ್ಯ? ಹೆಣ್ಣು ಗಂಡು ಕೂಡಿ ದುಡಿದರೆ........" ಮಾತು ಅಷ್ಟಕ್ಕೆ ತುಂಡುಗಡಿದು, ಗಮನ ತನ್ನ ಸಂಸಾರದ ಕಡೆ ಹರಿಯಿತು ತಾವಿಬ್ಬರೂ ಕೂಡಿ ದುಡಿದರೂ ಕೈ ತುಂಬ ಆದಾಯ ಬಂದರೂ ಪಡೆದ ಸುಖ ನೋಡಿದರೆ ದೇವರಿಗೇ ಪ್ರೀತಿ.

"ಏನು ಮಾಡಲಿ? ಮೂವರಿಗೂ ನಾಟ್ಯಜ್ಞಾನವುಂಟು. ಕಲಿಸಿದರೆ ಹೇಗೋ....ನನಗೇನೋ ಕಲೆ ಉಳಿಯಲಿ ಅಳಿಯಲಿ ಹೊಂದಿಕೊಳ್ಳುವ ಮನೋಭಾವವುಂಟು. ಈಗಿನ ಮಕ್ಕಳು ಬಲು ಸೂಕ್ಷ್ಮ. ಕಲಿತು ಕಲೆಗಾತಿಯರಾಗಿ ನಮ್ಮಂತೆ ಅಡುಗೆಯ ಮನೆಗೆ ನೂಕಲ್ಪಟ್ಟರೆ ಪರಿಣಾಮವೇನಾಗುತ್ತೋ.... ಹೆದರಿ ಕಲಿಸಲಿಲ್ಲ ನೋಡು. ಇಲ್ಲದಿದ್ದಲ್ಲಿ ನಾನೇ ಹೇಳಿಕೊಡಬಹುದಾಗಿತ್ತು. ಈ ಹಿಂದೂಸ್ಥಾನದಲ್ಲಿ ಹೆಣ್ಣಿಗೆ ಸಟ್ಟುಗವೊಂದೇ ಕ್ಷೇಮ ನಿಧಿ!"

ಅಸ್ತಗಿರಿಯ ಮಸ್ತಕದ ಮೇಲೆ ಶೋಭಿಸುವ ಚಂದ್ರಮಂಡಲದಂತೆ ಎಲ್ಲರ ಮುಖಮಂಡಲಗಳೂ ನಗುವಿನ ವಿಮಲ ಧಾರೆಯಿಂದ ಶೋಭಾಯಮಾನವಾದುವು.

"ಸಟ್ಟುಗವೂ ಅಷ್ಟು ಸುಲಭವಲ್ಲ. ಅದಕ್ಕೂ ಇದೆ ಅತ್ತೆ ಕಾಟ, ಮಾವನ ಕಾಟ, ನಾದಿನಿ ಕಾಟ, ಗಂಡನ ಕಾಟ, ವರ್ಷಾಕಾಲವುಂಡರೂ ದವಸಧಾನ್ಯ ಖರ್ಚಾಗಬಾರದು, ಅದು ಮತ್ತೊಂದು ಕಾಟ. ಅಂತೂ ಇಂತೂ ಎಲ್ಲೂ ಸುಖವಿಲ್ಲ."

ಒಡನೆ ಅನುರಾಗ ರಂಜಿತ ಸುಂದರ ಕಪೋಲಗಳು ಹಾಸ್ಯಲಹರಿಯಿಂದ ಪ್ರಫುಲ್ಲವಾದುವು.

ವನಮಾಲಿ ಒಳ ಹೋಗಿ ಸ್ವರ್ಣಮಾಲಿನಿಯೊಡನೆ ಮಾತಾಡಿ ಯೋಗಕ್ಷೇಮವನ್ನು ವಿಚಾರಿಸಿಕೊಂಡು, ಮನೆಯನ್ನೆಲ್ಲಾ ಒಂದು ಸುತ್ತು ಹಾಕಿ ಪುನಃ ಬಂದು ಕುಳಿತಾಗ ಚಂಪಕಮಾಲಿನಿಯ ಕರುಣಕತೆಯಿಂದ ಅಪೂರ್ವ ಭೇಟಿಯ ಸಂತಸದ ನೆಲೆಯಲ್ಲಿ ದುಃಖ ದುಗುಡಗಳ ಛಾಯೆ ಸುಳಿದಾಡಿ ಕಣ್ಣುಗಳಂಚಿನಲ್ಲಿ ಬೆಳ್ಳಿಯ ಗೆರೆಯಂತೆ ಸಣ್ಣಗೆ ನೀರಾಡಿಸಿ ಒಯ್ಯೊಯ್ಯನೆ ಸಂದ ಶುಭ್ರ ಸುಂದರ ವಾತಾವರಣ ಸ್ನೇಹ-ವ್ಯಾಕುಲ ಮನೋಹರವಾಯಿತು.

ವನಮಾಲಿ ಮಕ್ಕಳೊಂದಿಗೆ ಕಮಲೇಶಳ ಬಳಿ ಮುಸ್ಸಂಜೆಯವರೆಗೆ ಹೊತ್ತು ಕಳೆದು ಹೊರಟು ನಿಂತಾಗ ಹೊರಗಡೆ ದ್ರವಿತ ಘನಕೃಷ್ಣ ಶಿಲೆಯಂತೆ ದುಸ್ತಮ ತುಂಬಿ ಹರಡಿತ್ತು. ರಾತ್ರಿಯೂಟವನ್ನು ನೆಂಟರ ಮನೆಯಲ್ಲಿ ಮುಗಿಸಿ ರೈಲು ಹತ್ತಲಿದ್ದ ಅವಳಿಗೆ ಇನ್ನು ಹೆಚ್ಚು ಹೊತ್ತು ಇರಲು ಸಮಯವಿರಲಿಲ್ಲವಾದರೂ ಅಲ್ಲಿಂದ ಹೊರಡಲು ಮನಸ್ಸೇ ಇಲ್ಲ. ಅಂದು ಅದೃಷ್ಟವಶಾತ್ ರೋಗಿಗಳಾದರೂ ಮನೆಗೆ ಬಂದಿರಲಿಲ್ಲವಾದುದರಿಂದ ಕಮಲೇಶಳಿಗೂ ಕೈತುಂಬ ಬಿಡುವು.

ವನಮಾಲಿ ಎಷ್ಟೇ ವ್ಯವಹಾರಿಕವಾಗಿ ವರ್ತಿಸಿದರೂ ಉತ್ಸಾಹ ತೋರಿದರೂ ಏನೋ ಒಂದು ಬಗೆಯ ಅನಾಸಕ್ತಿ ನಿರುತ್ಸಾಹಗಳು ಅವಳಲ್ಲಿ ತಾಂಡವವಾಡುತ್ತಿದ್ದುವು. ಅಂದಿಂದಿಗೂ ಆದ ಮಾರ್ಪಾಡನ್ನು ಕುರಿತು ಚಿಂತಿಸುತ್ತ ನುಡಿದಳು ಕಮಲೇಶ್, "ಮಕ್ಕಳನ್ನು ಕಲಿಕೆಯೊಂದಿಗೆ ಗಳಿಕೆಯ

ಹಾದಿಗೆ ಹಚ್ಚಿ ಅವರಿಗೆ ಕಾಲೇಜು ವಿದ್ಯಾಭ್ಯಾಸ ಮಾಡಿಸು ವನಮಾಲೀ."

"ವ್ಯರ್ಥ....!" ನೀರಸಧ್ವನಿಯಲ್ಲಿ ನುಡಿದಳು ವನಮಾಲಿ. ಯಾವುದೋ ಅಜ್ಞಾತವೇದನೆಯಿಂದ ಮುಖ ಕಳಾಹೀನವಾಯಿತು. ಆದರೂ ಸುಮ್ಮನೆ ಸಹಜ ಭಾವದಿಂದ ಮುಂದುವರಿದಳು "ಕಾಲೇಜು ವಿದ್ಯಾಭ್ಯಾಸ ಮಾಡಿಸಿದರೂ ಮುಂದೆ ವ್ಯವಹಾರಿಕ ಜೀವನ ಬರುವುದಿಲ್ಲವೆಂದಮೇಲೆ ಓದುವ ಶ್ರಮವಾದರೂ ಏಕೆ? ನಾವು ಬದುಕಿರುವಾಗ ಅವರಿಗೊಂದು ನೆಲೆ ದೊರೆತರೆ ಅಷ್ಟೇ ಸಾಕು."

"ಈ ಬಡ ಭಾವನೆಯಿಂದಲೇ ನಮ್ಮ ದೇಶ ಬಡವಾಯಿತು."

"ನೀನೇನೋ ನಿನ್ನ ನೇರಕ್ಕೆ ಮಾತಾಡುತ್ತಿ. ಎಲ್ಲರನ್ನೂ ಅದೇ ದೃಷ್ಟಿಯಿಂದ ನೋಡಿದರೆ ಆಗುತ್ತದೆಯೆ ಕಮಲೇಶ್?"

"ಪ್ರಾಚೀನ ಸಂಪ್ರದಾಯ ಪದ್ಧತಿಗಳೇ ಇಂದೂ ಪ್ರಚಲಿತದಲ್ಲಿರುವುದರಿಂದ ನಮ್ಮ ದೇಶ ಬಡವಾಯಿತು. ಯೋಚಿಸಿ ನೋಡು, ಮಾನವ ಶಕ್ತಿಯ ಕಣಕಣವೂ ರಾಷ್ಟ್ರ ಶಕ್ತಿ! ಈ ದೇಶ ಸ್ವಯಂಪೂರ್ಣವಾಗಬೇಕಾದರೆ ಮಾನವ ಶಕ್ತಿಯ ಕಣಕಣವೂ ಉಪಯೋಗ ಹೊಂದಲೇ ಬೇಕು. ಅಷ್ಟಲ್ಲದೆ ನಮ್ಮ ಜೀವನ ತುಂಬುವುದಿಲ್ಲ; ದೇಶ ಸಮೃದ್ಧಿಯಾಗುವುದಿಲ್ಲ."

"ಏನಿದ್ದರೂ ನಮ್ಮ ಕಾಲಾನಂತರ ಆದೀತಷ್ಟೆ?"

"ಈ ವಿಳಂಬ ಮನೋಭಾವದಿಂದಲೇ ನಮ್ಮ ದೇಶ ಹಿಂದೆ ಉಳಿದಿದೆ. ನಾಳೆ ನಿನ್ನ ಮಕ್ಕಳೂ ಹಾಗೆಯೇ ಹೇಳಿಯಾರು! ಅನಂತರ ಅವರ ವಂಶೀಕರೂ ಸಹ!"

ಎಲ್ಲರ ಸುಸ್ಮಿತ ವರ್ಷದ ಅವಿರಲ ಸ್ರಾವೀ ಸಲಿಲದಿಂದ ರಸಮಯವಾಯಿತು ಆ ಸುಂದರ ಸರಸ ಘಟಿ.

ಕಮಲೇಶ್ ಸ್ಥಿರ ಗಾಂಭೀರ್ಯದಿಂದ ಹೇಳಿದಳು,

"ರಾಷ್ಟ್ರದ ಸಂಪನ್ಮೂಲಗಳಲ್ಲಿ ಸ್ತ್ರೀಶಕ್ತಿಯೂ ಸಹ ಒಂದು ಅಗಾಧ ಶಕ್ತಿ. ಅದರ ಮೌಲ್ಯವನ್ನು ಅರಿತುಕೊಂಡವರೆಷ್ಟು ವಿರಳ....? ನಮ್ಮಲ್ಲಿ ಶಕ್ತಿ ವ್ಯರ್ಥವಾಗುವುದನ್ನು ನೆನಸಿಕೊಂಡರೆ ಕಂಬನಿ ಹರಿಯುತ್ತದೆ. ಈ ಜನಗತಿ ಇಂದೂ ಆಲೋಚನಾರಹಿತವಾಗಿಯೇ ಉಳಿದಿದೆ ಎಂದರೆ ತಪ್ಪಲ್ಲ."

"ನಿಜ ಕಮಲೇಶ್, ಹನಿಗೂಡಿದರೆ ಹಳ್ಳ; ತೆನೆಗೂಡಿದರೆ ಬತ್ತ."

ಅಲ್ಪಾನಾಮಪಿ ವಸ್ತೂನಾಂ ಸಂಹತಿಃ ಕಾರ್ಯಸಾಧಿಕಾ
ತೃಣೈರ್ಗುಣತ್ವಮಾಪನ್ನೈರ್ಬಧ್ಯಂತೇ ಮತ್ತದಂತಿನಃ||

ಎಂದೋ ಓದಿದ್ದ ಸೂಕ್ತಿಯೊಂದು ಮನೋಮಂದಿರದಲ್ಲಿ ವೀಣೆಯಂತೆ ಮಿಡಿಯಿತು.

"ನಿಜ ! ನಿಜ." ಭಾವೋದ್ವೇಗದಿಂದ ತನುಮನಗಳು ಮಿಡಿದುವು. ಕಮಲೇಶ್ ರಸ್ತೆಯಂಚಿನವರೆಗೂ ಹೋಗಿ ಗೆಳತಿಯನ್ನು ಆತ್ಮೀಯತೆಯಿಂದ ಬೀಳ್ಕೊಟ್ಟಳು.

ರಾತ್ರಿ ಹೆಜ್ಜೆಯಿಟ್ಟರೂ ಚಂದ್ರಕಾಂತನ ಸುಳಿವಿಲ್ಲ. ಸ್ವರ್ಣಮಾಲಿನಿಗೆ ಇಳಿದ ಜ್ವರ ಮತ್ತೆ ಏರಿತು. ಔಷಧಿ ಕೊಟ್ಟು ದಿನಚರಿಯನ್ನು ಮುಗಿಸಿ ಹಾಸಿಗೆ ಸೇರಿದಾಗಲೂ ಕದಡಿ ಬಗ್ಗಡವಾದ ಮನಸ್ಸಿಗೆ ಇನಿತೂ ಶಾಂತಿ ಇರಲಿಲ್ಲ. ಬೆಳಗ್ಗೆ ಆಸ್ಪತ್ರೆಗೆ ಟೆಲಿಫೋನಿನಲ್ಲಿ ಕರೆ ನೀಡಿದಳು "ಡಾಕ್ಟರ್.... ನಿಮಗೆ ರಾತ್ರಿ ಡ್ಯೂಟಿ ಇತ್ತೆ ? ಮನೆಗೆ ಬರಲಿಲ್ಲವಲ್ಲಾ ?"

"ಡ್ಯೂಟಿ ಇರಲಿಲ್ಲ. ಮನೆಯಲ್ಲಿದ್ದೆ."

"ಮಾ ಜ್ವರದಿಂದ ಮಲಗಿದ್ದಾರೆ. ನಾನಿಂದು ಆಸ್ಪತ್ರೆಗೆ ಬರಲಾಗುವುದಿಲ್ಲ."

"ಓ....ಹೋ!"

"ನೀವು ಎಷ್ಟೊತ್ತಿಗೆ ಬರುವಿರಿ ?"

"ಗೊತ್ತಿಲ್ಲ."

"ಬೇಗನೆ ಬರುವಿರಷ್ಟೆ ?"

"ಹೇಳಲಾರೆ...."

ಕಮಲೇಶ್ ರಿಸೀವರನ್ನು ಕೆಳಗಿಟ್ಟಳು.

ಅಂದು ಚಂದ್ರಕಾಂತನ ಸುಳಿವಿಲ್ಲ. ಮರುದಿನವೂ ಆಗಮಿಸಿತು. ಅದೂ ಹೇಳಹೆಸರಿಲ್ಲದೆ ಕರಗಿತು. ಚಂದ್ರಕಾಂತ್ ಟೆಲಿಫೋನು ಮಾಡಿ "ಜ್ವರ ಬಿಟ್ಟದೆಯೇ ಇಲ್ಲವೇ ?" ಎಂಬಷ್ಟನ್ನು ವಿಚಾರಿಸುವಷ್ಟು ಸೌಜನ್ಯವನ್ನಾದರೂ ತೋರಲಿಲ್ಲ. ಮೂರನೆಯ ದಿನ ಬೆಳಗ್ಗೆ ಆಸ್ಪತ್ರೆಯ ಮೆಟ್ಟಿಲು ಹತ್ತುತಿದ್ದಂತೆ ಚಂದ್ರಕಾಂತನ ಸಂದರ್ಶನವಾಯಿತು.

"ನಿನ್ನೆಯೂ ಮನೆಗೆ ಬರಲಿಲ್ಲವಲ್ಲಾ ?"

"ಯಾರು ಬರಬೇಕಾದವರು, ನಾನೋ ನೀವೋ?" ಕಟೋಕ್ತಿ ಹೊರ ಹೊಮ್ಮುವಾಗ ತಾನಿರುವುದು ಆಸ್ಪತ್ರೆಯಲ್ಲಿ ಎಂಬುದು ಸಹ ನೆನಪಿಗೆ ಬರಲಿಲ್ಲ ವೇನೋ. ಹತಾಶಳಾದ ಮಡದಿ ಮಾತಾಡದೆ ಮೆಟ್ಟಿಲು ಹತ್ತಿದಳು. ಅವನು ಗೊಣಗಿದ....ಆಶಾಡಭೂತಿ!

ಕಮಲೇಶಳ ಭಯ ಮಿಶ್ರಿತ ನೋಟ ಸುತ್ತಲೂ ಹರಿಯಿತು. ಹತ್ತಿರ ದಲ್ಲಿ ಇನ್ನಾರೂ ಇರಲಿಲ್ಲವಾದುದರಿಂದ ಭಯ ಉದ್ವೇಗ ದುಃಖ ದುಗುಡಗಳ ಪಾಲಾಗಿದ್ದ ಮನಸ್ಸು 'ಸಾಕಪ್ಪಾ' ಎಂದಿತು. ಪ್ರಸ್ತುತ, ಅವನು ನೀಡಿ 'ಉಪಾಧಿ' ಯನ್ನು ಹೊತ್ತು ಕೆಲಸ ಮಾಡಬೇಕಾದುದೂ ಸಹ ಆಪರೇಶನ್ ಥಿಯೇಟರಿನಲ್ಲಿ....ಏನೋ....ಹೇಗೋ....ಎಂಬ ಯೋಚನೆಯಲ್ಲೇ ಹೆಜ್ಜೆ ತೆಗೆ ದಳು. ಚಂದ್ರಕಾಂತ್ ಅವಳನ್ನು ಹಿಂದೆ ಹಾಕಿ ಮುಂದೆ ಹೋಗಿದ್ದ. ಅವನ ರೀತಿ ನೀತಿಗಳನ್ನು ಉದ್ವಿಗ್ನತೆಯಿಂದ ಅವಲೋಕಿಸಿತು ಸಂಭ್ರಾಂತ ಚಿತ್ತ.

ಯಾಂತ್ರಿಕವಾಗಿ ಕೆಲಸ ಮುಗಿಯಿತು. ಚಂದ್ರಕಾಂತ್ ಹೇಳದೆ ಕೇಳದೆ ತನ್ನ ಮನೆಗೆ ನಡೆದ. ಕಮಲೇಶ್ ತಬ್ಬಿಬ್ಬಾಗಿ ತರ್ಕವಿತರ್ಕಗಳ ವಾರಿಧಿಯ ಸುಳಿಯಲ್ಲಿ ಸಿಕ್ಕಿ ಏಕಾಕಿಯಾಗಿ ಕೊಚ್ಚಿಹೋದಳು. ಭಾವನಾಲೋಕದ ಭಾ ವಸಾ ತರಂಗಿಣಿಯ ರುದ್ರರಮಣೀಯ ರಾಸಕ್ರೀಡೆಯ ನೂಪುರಗಳ ಟಿಂಟಿಣಿ ನಾದ ಮನೋರಂಗದಲ್ಲಿ ಸ್ಪಷ್ಟವಾಗಿ ಕೇಳಬರುತ್ತಲೇ ಇದೆ....ನಿಲುಗಡೆ ಇಲ್ಲ ದಂತೆ. ಈ ಅನಾತ್ಮೀಯ ಜೀವಗಳ ಕಠೋರ ಸಂಘರ್ಷಣೆ ಕೇವಲ ಸೃಷ್ಟಿವಿಧಾ ನವೇ ಆದರೂ, ಸಂಕುಚಿತ ಪರಿಜ್ಞಾನದಿಂದ ಕೂಡಿದರೂ ಸಾಮಾಜಿಕ ಬಂಧಾನುಬಂಧನಗಳಿಂದುಂಟಾದರೂ ನಾರೀಶ್ರೀಕಂಠದಲ್ಲಿ ಪ್ರೀತಿ ವಾತ್ಸಲ್ಯ ಗಳ ಪ್ರತಿಧ್ವನಿ ಅಪಾಯಕತೆಯಿಂದ ಮೊಳಗಿದರೂ ಆದರ್ಶಕ್ಕೆ ಅಪಕೀರ್ತಿ ಯಂತೆ ಇಷ್ಟೊಂದು ವಿರುದ್ಧವಾಗಲು ಕಾರಣವಾದರೂ ಏನು? ಈ ಕಲಿತ ಜೀವ ಯುಗಧರ್ಮದ ಔನ್ನತ್ಯವನ್ನು ತಿಳಿದುಕೊಳ್ಳುತ್ತಿಲ್ಲವೇಕೆ? ತನ್ನ ಆತ್ಮದಂತೆಯೇ ಇನ್ನೊಂದು ಆತ್ಮವೂ ಸಹ ನವ ಚೈತನ್ಯಗಳಿಂದ ಕೂಡಿ ಈ ವಿಶಾಲ ಪ್ರಪಂಚದಲ್ಲಿ ಸ್ವಚ್ಛಂದವಾಗಿ ಉಸಿರಾಡುತ್ತದೆಯೆಂಬುದನ್ನು ಅರ್ಥ ಮಾಡಿಕೊಳ್ಳದಿರುವುದು ಎಂತಹ ಆಶ್ಚರ್ಯ? ಜ್ಞಾನಿಯಾದವನು ಬಾಳಿನ ಮಲಿನತೆಯನ್ನು ತೊಡೆಯುವ ಬದಲು ಸಂಗ್ರಹಿಸುತ್ತಾನೆ ಏಕೆ?....ಏಕೆ?

ಆತನೊಂದಿಗೆ ಆತ್ಮೀಯತೆಯಿಂದ ಒಪ್ಪಂದ ಮಾಡಿಕೊಂಡ ದಿನ ಅಂತ

ರಂಗದಲ್ಲಿ ಯಾವ ನಿಶ್ಚಲ ಜ್ಯೋತಿ ನಿರಂತರ ಬೆಳಗುತಿತ್ತೋ ಅದು ಇಂದು ಜ್ಯೋತಿರ್ವಿಹೀನವಾಗಿ ಲವಲೇಶವೂ ಕಾಣಿಸದಂತಿದೆ. ದೂರಾಲೋಚನೆ ಧೈರ್ಯ ಸಾಹಸ ನಿರ್ಮಲತೆಗಳ ಒಕ್ಕೂಟದಿಂದ ಯಾವ ರಾಗಜ್ಯೋತಿ ಯನ್ನು ಹೃನ್ಮಂದಿರದಲ್ಲಿ ಪೂಜ್ಯಭಾವನೆಯಿಂದ ಪ್ರತಿಷ್ಠಿಸಿದಳೋ ಅದನ್ನು ಕಂಡರೆ ಇಂದು ಭಯ ಭೀತಿಗಳುಂಟಾಗುತ್ತಿವೆ. ತನ್ನ ಕರ್ತವ್ಯ ನಿಷ್ಠೆಯನ್ನು ಯಾವ ಮಾರ್ದವತೆ ನಡೆಸುತಿತ್ತೋ ಅದಿಂದು ದುಃಖದಿಂದ ಕಂಬನಿಗರೆಯು ತ್ತಿದೆ.

ಮಾರ್ಕೆಟ್ ಟವರ್ ಗಡಿಯಾರ ಗಂಟೆ ಭಾರಿಸಿತು. ಢಣ್. ಢಣ್. ಢಣ್....

ಈ ಹೊತ್ತೇಕೆ ಇಷ್ಟು ತೀವ್ರಗತಿಯಲ್ಲಿ ಓಡುತ್ತೆ........?

....ಸರ್ವಂ ಶುಭಂ....

ಅಧ್ಯಾಯ

೩೦

ಸಾಯಂಸಮಯ.

ಪಶ್ಚಿಮ ದಿಗಂತದಲ್ಲಿ ರವಿ ಅಸ್ತಂಗತನಾಗಿದ್ದರೂ ಹೊಂಗಾಂತಿಯ ಅದ್ಭುತ ರಾಶಿಯನ್ನು ಹಿಂದೆಯೇ ಬಿಟ್ಟು ಹೋಗಿದ್ದಾನೆ. ಹೊನ್ನವರ್ಣದ ಹಿನ್ನೆಲೆಯಲ್ಲಿ ತೇಲುವ ಬೆಳ್ಳಿಯ ಮೋಡಗಳಿಗೆ ಹೊನ್ನರಾಜಿಯ ಅಂಚನ್ನು ನೇಯ್ದ ಬಗೆ ಮನಮೋಹಕವಾಗಿದೆ....

ಇಂದು ಚಂದ್ರಕಾಂತನ ಸ್ವಗೃಹಕ್ಕೆ ಗೃಹಲಕ್ಷ್ಮಿಯಾಗಿ ಆಗಮಿಸಿದ ಕಮಲೇಶಳನ್ನು ಪಾರ್ವತಮ್ಮನೂ ನಾಗವೇಣಿಯೂ ಸುಖದುಃಖಗಳ ಗೊಡವೆಯಿಲ್ಲದೆ ಔಪಚಾರಿಕವಾಗಿ ಬರಮಾಡಿಕೊಂಡರು.

"ಒಬ್ಬಳೇ ಬಂದೆಯಲ್ಲಾ ಮಕ್ಕಳೆಲ್ಲಿ?" ಎಂದು ಕೇಳಿದಳು ಪಾರ್ವತಮ್ಮ.

"ಮನೆಯ ಮಗ್ಗುಲಿಗೆ ಶಾಲೆಯಿದೆ. ಮಾ ಅವರ ಕ್ಷೇಮವನ್ನು ನೋಡಿಕೊಳ್ಳುತ್ತಾರೆ."

ಪಾರ್ವತಮ್ಮ ಒಂದು ಘಳಿಗೆ ಯೋಚಿಸಿ ಅದೂ ಹೌದೆಂದು ಸುಮ್ಮನಾದಳು.

"ನನ್ನ ಮಕ್ಕಳ ಜೊತೆ 'ಶಾರದವಿಲಾಸ'ದಲ್ಲೇ ಓದಬಹುದಾಗಿತ್ತು." ನಾಗವೇಣಿ ಸಲಹೆಯನ್ನು ಮುಂದಿಟ್ಟಳು.

"ಆ ಶಾಲೆ ಮಕ್ಕಳಿಗೆ ಅಭ್ಯಾಸವಾಗಿದೆ. ಮತ್ತೇಕೆ ಇಲ್ಲದ ತೊಂದರೆ?"

ಪ್ರಸ್ತಾಪ ಅಲ್ಲಿಗೆ ಮುಗಿಯಿತು.

ಆ ಮನೆಯ ದುರವಸ್ಥೆಗೆ ಇತಿಮಿತಿಯೇ ಇಲ್ಲ. ಮನೆಗೆ ಮನೆಯೇ ಅವ್ಯವಸ್ಥೆಯ ಉಗ್ರಾಣ. ಮೊದಲು ತನ್ನ ಕೊಠಡಿಯನ್ನಾದರೂ ಶುಚಿಗೊಳಿಸುವ ಆವಶ್ಯಕತೆಯಿತ್ತು. ಒಳ ಹೋಗಿ ಪೊರಕೆ ತಂದು ಕಸವನ್ನು ಝಾಡಿಸಿ ಸಾಮಾನುಗಳನ್ನು ಜೋಡಿಸಿ, ಹಾಸಿಗೆ ಕೊಡವಿ ಹಾಸಿ, ಕೊಳಕು ದುಪ್ಪಟಿಯನ್ನು ತೆಗೆದು ಶುಭ್ರವಾದ ತನ್ನ ದುಪ್ಪಟಿಯನ್ನು ಹಾಸಿ ಚೊಕ್ಕ

ಗೊಳಿಸುವಾಗ ಚಂದ್ರಕಾಂತ್ ಆರಾಮ ಕುರ್ಚಿಯ ಮೇಲೆ ಮೈ ಚೆಲ್ಲಿ ದೈನಂದಿನ ಪತ್ರಿಕೆಯ ಮೇಲೆ ಗಮನ ಹರಿಸಿದ್ದ.

ಈ ಸೊಸೆ ಬಂದವಳೇ ಶುಚಿತ್ವಕ್ಕೆ ಕೈ ಹಚ್ಚಿದ್ದು ತಮಗೇನೋ ಒಂದು ಬಗೆಯ ಅವಮಾನವಾದಂತೆನಿಸಿ ಕಪೋಲ ಪ್ರಾಂತ ವಿಭ್ರಮ ವೀಚಿಗಳಿಂದ ಮುದ್ರಿತವಾಯಿತು. ಶಿಥಿಲ ಶ್ರಾಂತ ವೃದ್ಧ ಶರೀರದ ರೋಮರೋಮವೂ ವಿಸ್ಮಯದಿಂದ ನಿಮಿರಿ ನಿಂತುವು. ಹತ ಬುದ್ಧಿಯಾಗಿ ಸೊಸೆಯನ್ನು ನಿಟ್ಟಿಸಿದಳು ಪಾರ್ವತಮ್ಮ.

ಚಂದ್ರಕಾಂತ್ ತಮ್ಮನೊಂದಿಗೆ ಕುಳಿತು ಊಟ ಮುಗಿಸಿದ. ಕಮಲೇಶ್ ಅತ್ತೆ ಮತ್ತು ಓರಗಿತ್ತಿಯೊಂದಿಗೆ ಊಟ ಮುಗಿಸಿ ಚಂದ್ರಕಾಂತನಿಗೆ ಹಾಲನ್ನು ತಂದಾಗ ಅವನೆಂದ “ಇದಿಷ್ಟನ್ನು ಮುಗಿಸಿ ಬಿಡುವೆ ಡಾಕ್ಟರ್.”

ಅವಳು ಹಾಲನ್ನು ಮೇಜಿನ ಮೇಲಿಟ್ಟು ಹಿಂದಿರುಗಿದಳು. ಅಡುಗೆಯ ಮನೆಯಲ್ಲಿ ಮುಸುರೆ ಹರಡಿ ಬಿದ್ದಿತ್ತು. ಕಮಲೇಶ್ ಅದಕ್ಕೂ ಕೈ ಹಚ್ಚಿದಳು. ಸಾಗವೇಣಿಗೆ ಆ ಆಧುನಿಕ ಸ್ತ್ರೀಯ ಚಟುವಟಿಕೆಯ ಮೇಲೆ ಎಲ್ಲಿಲ್ಲದ ಆಸ್ಥೆ. ಕೈ ತೊಳೆದುಕೊಳ್ಳುತ್ತಾ ಅವಳೆಂದಳು “ಮನೆಗೆ ಹಿರಿಯ ಸೊಸೆಯಾದರೂ ಕಿರಿಯ ಸೊಸೆಯಂತೆ ಈಗ ಬಂದಿದ್ದೀರಿ, ನಾನು ಕಿರಿಯ ಸೊಸೆಯಾದರೂ ಹಿರಿಯ ಸೊಸೆಗಿಂತ ಹೆಚ್ಚಾಗಿ ದುಡಿದಿರುವೆ. ಇನ್ನು ಮುಂದಿನದೇನಿದ್ದರೂ ನಿಮ್ಮ ಕಡೆಗೆ.”

ಕಮಲೇಶ್ ಮಂದಸ್ಮಿತ ವದನಾರವಿಂದಳಾಗಿ ಕೆಲಸಕ್ಕೆ ಕೈ ಹಚ್ಚಿದಳು. ಪಾತ್ರೆ ಪಗಡಿಗಳನ್ನು ತೊಳೆದು ಕೆಲಸವನ್ನು ಮುಗಿಸುವಷ್ಟರಲ್ಲಿ ಹೊತ್ತು ಹನ್ನೊಂದರ ಅಂಚಿನಲ್ಲಿತ್ತು.

“ಬೆಳಗ್ಗೆ ಉಪ್ಪಿಟ್ಟು....ನಾನು ಏಳುವ ಮೊದಲು ಮಾಡಿಟ್ಟು ಬಿಡಿ, ನನಗೆ ತಲೆ ನೋವು. ಏಳುವುದು ಹೊತ್ತಾದೀತು.”

ಕಮಲೇಶ್ ಕೊಠಡಿಗೆ ಪದಾರ್ಪಣೆ ಮಾಡಿದಾಗ ಚಂದ್ರಕಾಂತ್ ಇನ್ನೂ ಓದುತ್ತಲೇ ಇದ್ದ. ಮೇಜಿನ ಮೇಲಿದ್ದ ಹಾಲು ತಣ್ಣಗಾಗಿತ್ತು. ಅವನು ಪುಸ್ತಕದಿಂದ ತಲೆಯೆತ್ತದೆ “ಓ! ಮರತೇ ಬಿಟ್ಟೆ” ಎಂದ. ಅದನ್ನೆ ಕೊಂಡೊಯ್ದು ಪುನಃ ಬಿಸಿ ಮಾಡಿ ತಂದಳು. ಅವಳು ಮನೆಗೆಲಸಗಳನ್ನು ಮಾಡಲು ಅನೇಕ ವೇಳೆ ತಾಯಿಯೊಂದಿಗೆ ಭಾಗವಹಿಸಿದ್ದರೂ ತಾನೇ

ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡಿರಲಿಲ್ಲ. ಬೆಳಗ್ಗೆ ಉಪ್ಪಿಟ್ಟನ್ನು ಚೆನ್ನಾಗಿ ಮಾಡಲು ಪ್ರಯತ್ನಪಟ್ಟದ್ದರೂ ಅದು ಮುದ್ದೆಯಾಯಿತು. ಚಂದ್ರಕಾಂತ್ ಎಲ್ಲರೆದುರಿಗೆ ಗೇಲಿ ಮಾಡಿ ನಗೆ ಚಟಾಕಿ ಹಾರಿಸಿದ. ಪಾರ್ವತಿ ಮೂಗು ಸೆಟೆದರೆ ನಾಗವೇಣಿ ಕಿಸಕ್ಕನೆ ನಕ್ಕಳು. ಅವರಿಗೆಲ್ಲಾ ಕಮಲೇಶ್ ಒಂದೇ ಮಾತಿನಲ್ಲಿ ಉತ್ತರ ಹೇಳಿದಳು "ದಿನವೂ ಮಾಡಿ ಅಭ್ಯಾಸವಿದ್ದಿದ್ದರೆ ನಾನೂ ಚೆನ್ನಾಗಿ ಮಾಡಬಹುದಿತ್ತು."

ಅಭ್ಯಾಸ ಬಲವೇ ಬಲ....

ಕಮಲೇಶ್ ರಾತ್ರಿ ಚಂದ್ರಕಾಂತನಲ್ಲಿ ತಂಗಿ ಬೆಳಗ್ಗೆ ತನ್ನ ಮನೆಗೆ ಹೋಗಿ ಸ್ನಾನಾದಿಗಳನ್ನು ಮುಗಿಸಿ ಆಸ್ಪತ್ರೆಗೆ ಹೊರಡುವಳು. ಕೆಲವೊಮ್ಮೆ ಚಂದ್ರಕಾಂತನೊಂದಿಗೆ ಅಲ್ಲಿಂದಲೇ ಆಸ್ಪತ್ರೆಗೆ ಹೋಗುತಿದ್ದುದೂ ಉಂಟು. ಮಧ್ಯಾಹ್ನ ಆಸ್ಪತ್ರೆಯಿಂದ ನೇರವಾಗಿ ತನ್ನ ಮನೆಗೆ ಹೋದರೆ ಸಂಜೆಯವರೆಗೂ ರೋಗಿಗಳ ಪರೀಕ್ಷೆ. ಅನಂತರ ಆಸ್ಪತ್ರೆ, ಮತ್ತೆ ಚಂದ್ರಕಾಂತನ ಮನೆ. ದಿನಗಳುರುಳಿದಂತೆ ತನ್ನ ಹೊಸ ದಿನಚರಿಗೆ ಹೊಂದಿಕೊಳ್ಳತೊಡಗಿದಳು.

ಅಂದು,

ಚಂದ್ರಕಾಂತನ ಹರಡಿ ಬಿದ್ದಿದ್ದ ಬಟ್ಟೆಗಳನ್ನು ಜೋಡಿಸುತಿದ್ದ ಕಮಲೇಶ್ "ನಾನೊಂದು ತಿಂಗಳು ರಜೆ ತೆಗೆದುಕೊಳ್ಳಬೇಕೆಂದಿರುವೆ. ಮಾ ಆರೋಗ್ಯ ಇನ್ನೂ ಸುಧಾರಿಸಿಕೊಳ್ಳಲಿಲ್ಲ."

"ನೀವು ರಜೆ ತೆಗೆದುಕೊಂಡು ಮಾಡುವುದೇನು ?"

"ಕೆಲವು ದಿನ ಅವರನ್ನು ನಂದಿ ಬೆಟ್ಟದಲ್ಲಿಟ್ಟುಕೊಳ್ಳುವೆ."

"ಈಗಲೇ ಏಕೆ ? ಬೇಸಗೆ ರಜೆಯಲ್ಲಿ ಹೋದರೆ ನಮ್ಮವರನ್ನೂ ಕರೆದೊಯ್ಯಬಹುದಲ್ಲಾ, ಅವರೆಂದೂ ಬೆಟ್ಟವನ್ನು ನೋಡಲಿಲ್ಲ."

"ಇವರಿಗಾಗಿ ಮಾ–ಗೇಕೆ ತಡೆ ? ಮಾ ಹೊರಡುವುದು ಪ್ರವಾಸಕ್ಕಲ್ಲ ಹವೆಗಾಗಿ."

"ಈಗ ನಿಮ್ಮ ಮಾ ಸಾಯಲಿಕ್ಕೆ ಹೊರಟಿಲ್ಲವಲ್ಲಾ ! ಒಂದೆರಡು ತಿಂಗಳು ಕಳೆಯುವುದರಲ್ಲಿ ಪ್ರಪಂಚ ಮುಳುಗಿ ಹೋಗುವುದಿಲ್ಲ !"

ಕಮಲೇಶ್ ಆ ಕಟೂಕ್ತಿಯನ್ನು ಕೇಳಿ ತತ್ತರಿಸಿದಳು.

ದಯಾಶೂನ್ಯನಾದ ಕಟುಕನ ಅಂತರಂಗದಲ್ಲಿ ಅಂತಃಕರಣ ಎಂದು

ಜನಿಸುವುದೋ....ಅಥವಾ ಇಲ್ಲವೆ ಇಲ್ಲವೋ....

ದಿನೇ ದಿನೇ ಆತನ ಚರ್ಯೆಯಲ್ಲಿ ವಿಪರೀತವೇ ಕಾಣಿಸುತ್ತಿದೆ. ಅದು ವಿಧಾತನ ಅಪೇಕ್ಷೆಯೋ ಅಥವಾ ಇನ್ನಾವ ಕರ್ಮ ಕಾರಣವೋ ದೇವರಿಗೇ ಗೊತ್ತು. ವಿಶ್ವಾಸದ ನೆಲೆಯಲ್ಲೇ ಬೆಳೆದ ತಾನು ಅವಿಶ್ವಾಸದ ಪಾಲಾದುದು ಹೇಗೆ?

ಇದಕ್ಕೆ ಪರಿಹಾರವೇನು ? ಏನು ಮಾಡಿದರೆ ಸರಿ ಹೋಗುತ್ತದೆ ?

ಸಮಸ್ಯೆಯ ಜಾಲದಲ್ಲಿ ದಿನಗಳುರುಳುತ್ತಲೇ ಇವೆ. ಆದರೂ....

ಅಂದಿನ ಟಪ್ಪಾಲಿನಲ್ಲಿ ಶ್ರೀಧರ ದಲ್ಲಾಲಿಯ ಕಾಗದವಿತ್ತು....ತಾನು ಬರ್ಮಿ ಹುಡುಗಿಯನ್ನು ಮದುವೆಯಾಗಿ ಒಬ್ಬ ಸುಂದರವಾದ ಮಗನನ್ನು ಪಡೆದಿರುವುದಾಗಿಯೂ ಸಂಸಾರ ಸುಖವಾಗಿರುವುದಾಗಿಯೂ ಬರೆದುಕೊಂಡಿದ್ದ.

ಆ ಕಾಗದವನ್ನು ತಾಯಿಯ ಕೈಗೆ ನೀಡುವ ಮೊದಲೇ ಹೇಳಿದಳು ಕಮಲೇಶ್ " ಎಲ್ಲಾದರೇನು ? ಸುಖವಾಗಿದ್ದಾನಲ್ಲ, ಯೋಚಿಸಬೇಡಿ."

ಸ್ವರ್ಣಮಾಲಿನಿ ಕೇಳಿ ಸಂತಸಗೊಂಡರೂ ಕಸಿವಿಸಿಯನ್ನುಂಡಳು.

ಅಂದು,

ರಜೆ ತೆಗೆದುಕೊಂಡಿದ್ದ ಕಮಲೇಶ್ ತನ್ನ ಮನೆಯಲ್ಲೇ ಉಳಿದಳು. ತಾಯಿ ಮಕ್ಕಳ ಪವಿತ್ರ ಸಾನಿಧ್ಯದಲ್ಲಿ ಹೊತ್ತು ಸಾನಂದದಿಂದ ಉರುಳಿತು. ಮಕ್ಕಳ ಉತ್ಸಾಹ ಆಟಪಾಠಾದಿಗಳು ತನುಮನಗಳಿಗೆ ಆನಂದವನ್ನೂಡಿಸಿದುವು. ವೃದ್ಧ ಜನನಿ ಅಪೂರ್ವ ಸುಖ ಶಾಂತಿಗಳಲ್ಲಿ ಒಂದು ದಿನ ಕಳೆದಳು.

ನೋಟದ ನೇರಕ್ಕೆ ತೆರೆದ ಗವಾಕ್ಷಿಯಿಂದ ಮೈದೋರುತ್ತಿರುವ ಸಂಧ್ಯಾ ಸೂರ್ಯನ ಹೊಂಗಿರಣಗಳ ಅದ್ಭುತ ಸೌಂದರ್ಯರಾಶಿಯಲ್ಲಿ ಬೃಹತ್ ಬ್ರಹ್ಮಾಂಡದಲ್ಲಿನ ಸಕಲ ತೇಜಗಳೂ ಜ್ಯೋತಿರ್ವಿಹೀನವಾಗುತ್ತಿರುವುದನ್ನು ನೆಟ್ಟ ದಿಟ್ಟಿಯಿಂದ ನೋಡುತ್ತಾ ಚಿಂತಿಸಿದಳು ಕಮಲೇಶ್....ಸಕಲ ತ್ಯಾಗಿ, ನಿರಪರಾಧಿನಿಯಾದ ಸ್ತ್ರೀ ಅಭಿಮಾನಿನಿಯಾದರೆ ಯಾವ ಅಳತೆಗೋಲಿನಿಂದ ಅಳೆಯಲ್ಪಟ್ಟರೂ ಆಕೆಯು ಜೀವನದಲ್ಲಿ ' ದೋಷಿ 'ಯಾಗುವುದು ಅನಿವಾರ್ಯ.

'ಪಾಪಿ' ಎನಿಸಿದರೂ ಅತ್ಯುಕ್ತಿಯಲ್ಲ. ಆಕೆಯ ಶರೀರಸಂಪತ್ತು ಜೀವನ ಸಂಪತ್ತುಗಳೆರಡೂ ಪುರುಷನಿಗಾಗಿಯೇ ಸೃಷ್ಟಿಸಲ್ಪಟ್ಟವೆ ಎಂಬ ಕಠೋರ ಸತ್ಯವನ್ನು ಈಗಲೀಗ ಅರ್ಥಮಾಡಿಕೊಳ್ಳುತ್ತಿರುವೆ ಎನಿಸಿದಾಗ ಹೃದಯ ಸಮುದ್ರ ಉಲ್ಲೋಲಕಲ್ಲೋಲವಾಯಿತು. ಅದುವರೆವಿಗೂ ಆ ಅಜ್ಞಾತ ರಹಸ್ಯವನ್ನು ಪ್ರೇಮಾನುಬಂಧದ ಹೆಸರಿನಲ್ಲಿ ಆರಾಧಿಸಿದುದರ ಬಗೆಗೆ ಏನೆನ್ನ ಬೇಕೋ ಹೊಳೆಯಲಿಲ್ಲ ...ಬಹಳ ಹೊತ್ತಿನನಂತರ ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿದ್ದುದು ಗಮನಕ್ಕೆ ಬಂತು.

"ವೃಥಾ ನೀನು ತಪ್ಪಾಗಿ ಭಾವಿಸುತ್ತಿರುವೆ. ಅರ್ಥರಹಿತವಾದ ಆಲೋಚನೆಯಿಂದ ನಿನ್ನ ಭಾವನೆಗಳು ಮಸುಕಾಗಿವೆ. ಈ ಜೀವನವನ್ನು ನೀನೆಂದೂ ನಿರ್ಣಯಿಸಲಾರೆ." ಎಂದು ಯಾರೋ ಕಿವಿಗಳಲ್ಲಿ ಕೂಗಿ ಹೇಳಿ ದಂತಾಯಿತು. ಒಡನೆ ಯೋಜನ ಯೋಜನ ಯೋಜನ ಮಹಾ ಯೋ ಜನ ದೂರದಲ್ಲಿರುವ ವರ್ಣಮಯ-ದಿಗಂತದೊಡನೆ ರಮಿಸುತಿದ್ದ ಆ ಉಜ್ವಲ ನೋಟ ಸರ್‍ರನೆ ಹಿಂದಿರುಗಿತು.

....ಯಾವ ದೋಷಕ್ಕೆ ಈ ಶಿಕ್ಷೆ ಪಡೆಯುತಿದ್ದೇನೆ? ಇದುವರೆಗಿನ ಬಾಳು ಬದುಕು ಸಾಲದೆ? ಇನ್ನಾದರೂ ಈ ಹೃದಯ ಕವಾಟವನ್ನು ಮುಚ್ಚಿ ದೈನಂದಿನ ಸೇವೆಯಲ್ಲಿ ಮನಶ್ಯಾಂತಿಯನ್ನು ಪಡೆದುಕೊಳ್ಳಲೇ?

ಹಿಹ್ಹಿಹ್ಹೀ!

ಹಾ! ಎಲ್ಲಿಯ ಧ್ವನಿ? ನಕ್ಕವರು ಯಾರು? ಚಂಪಾ! ಅಲ್ಲ, ಅಲ್ಲ. ಚೇತನಾ! ಅಲ್ಲ, ಅಲ್ಲ, ಚಂಪಳೇ ಹೌದು! ಅಲ್ಲವೇ ಅಲ್ಲ. ಅದು ಚೇತನಳ ಧ್ವನಿ! ಎದೆಯಾಳದಿಂದ ನೀಳವಾದ ನಿಟ್ಟುಸಿರೊಂದು ಹೊರಹೊಮ್ಮಿತು. ಹಾ! ಆ ಉಜ್ವಲ ನಾರೀಮಣಿಯರೆಲ್ಲಿ? ...ನಾನೆಲ್ಲಿ? ಸೂತ್ರಧಾರಿ ವಿಧಿಯ ನಿರ್ಣಯ ಇನ್ನೇನೇ ಇರಲಿ....ನಾರೀಜೀವನದ ತಪಸ್ಸು ನಿಷ್ಫಲವಾದರೂ ಅಚಲ....ಅಚಂಚಲ....

ಕಾಲ ಚಕ್ರ ಉರುಳುತ್ತಲೇ ಇದೆ. ಜಗತ್ತು ನಾಲ್ಕೂ ನಿಟ್ಟನಿಂದ ಮುಂದುವರಿಯುತ್ತಿದೆ. ಆದರೆ....ಆದರೆ ಪರಿಪೂರ್ಣತೆಯಿಂದ ಶೂನ್ಯತೆಯೆಡೆಗೆ ವಿಚಿತ್ರಗತಿಯಲ್ಲಿ ಧಾವಿಸುತ್ತಿದೆಯೋ ಏನೋ....

ಹಾ! ಎಂದೊರಲಿತು ಎದೆಯ ಬನದ ಕೋಗಿಲೆ.

ಕಾಗದ ಪತ್ರಗಳ ಸಮುದಾಯದಲ್ಲಿ ಸತ್ಯಭಾಮಳ ಹಸ್ತಾಕ್ಷರ ಗಮನ ವನ್ನು ಮೊದಲು ತನ್ನೆಡೆಗೆ ಸೆಳೆದುಕೊಂಡಿತು.

....ನೀನು ಮನಸ್ಸು ಮಾಡಿದರೆ ಇಲ್ಲಿಯ ತನಕ ಬಂದು ಹೋಗು ವುದು ಕಷ್ಟವೇನಲ್ಲ. ಮಕ್ಕಳನ್ನೂ ನಾ–ನನ್ನೂ ಕರೆದುಕೊಂಡು ಬಾ ನಿಮ್ಮ ನ್ನೆಲ್ಲಾ ನೋಡಿ ಎಷ್ಟು ದಿನಗಳಾದುವೋ. ಸ್ವದೇಶದಲ್ಲೇ ಇರುವ ನಾನು ಪರದೇಶಿ! ನಿನ್ನಂತೆ ಕೈ ತುಂಬ ದುಡಿದುಕೊಳ್ಳುವ ಸಂಪದವನ್ನು ನಾನು ಪಡೆದು ಕೊಂಡಿದ್ದರೆ ಖಂಡಿತವಾಗಿಯೂ ನಿಮ್ಮನ್ನೆಲ್ಲಾ ನೋಡದಿರುತ್ತಿರ ಲಿಲ್ಲ ಎಂದರೆ ನೀನು ಕಿಲಕಿಲ ನಕ್ಕು ಬಿಡುತ್ತೀಯೋ ಏನೋ....ಬಹಳ ಹಿಂದೆ ಯಾವ ವಯಸ್ಸಿನಲ್ಲಿ ನಿನ್ನನ್ನು ನೋಡಿದ್ದೆನೋ ಅದೇ ವಯಸ್ಸಿನ ಹೆಣ್ಣಾಗಿ ಈಗಲೂ ನಿನ್ನನ್ನು ಮನದಲ್ಲಿ ಚಿತ್ರಿಸಿಕೊಳ್ಳುವೆ! ನೀನೀಗ ಮನೆ ಯೊಡತಿ, ಎರಡು ಮಕ್ಕಳ ತಾಯಿ, ಗಂಭೀರ ಸತಿ. ಎಷ್ಟು ಯೋಚಿಸಿದರೂ ಹೇಗಿದ್ದಿರಬಹುದು ಎಂಬ ಪ್ರಶ್ನೆಯೇಳುತ್ತೆ. ಆದರೆ ಆ ಎತ್ತರಕ್ಕೆ ಈ ಕಲ್ಪನೆ ಏರದು ಎಂತಲೇ ಹೇಳಬಹುದು.

ನನ್ನಂತೆ ನಿನಗೇನಾದರೂ ಅಡ್ಡಿ ಆತಂಕಗಳಿವೆಯೆ ? ಹಾದಿ ಸುಗಮ ವಾಗಿದ್ದಾಗ ಹತ್ತಾರು ಕಡೆ ಸುತ್ತಾಡಿ ಬರುವುದು ಲೇಸು. ಸದಾ ದುಡಿ ಯುವುದೇ ಆದರೆ ವಿಶ್ರಾಂತಿಯೆಲ್ಲಿ ? ಸ್ವಜನರ ಭೇಟಿ ಆತ್ಮೀಯರ ಒಡನಾಟ ತನುಮನಗಳಿಗೆ ಹರ್ಷವೂಡಿಸಿ ಆಯುಸ್ಸನ್ನು ವೃದ್ಧಿಗೊಳಿಸುತ್ತವೆ. ಅಷ್ಟಲ್ಲದೆ ನೀನು ಕರ್ತವ್ಯವನ್ನೇ ಮೆಚ್ಚಿಕೊಂಡರೆ ಆ ಹಾಳು ಕರ್ತವ್ಯದ ಹೊರೆ ಮತ್ತು ಹೊಣೆ ಮಹಾ ಕಾಳೋರಗದಂತೆ ಹತ್ತು ತಲೆಗಳಿಂದ ನಿನ್ನನ್ನು ಕಚ್ಚುತ್ತದೆ. ಜೋಕೆ!........

ಕಮಲೇಶಳ ಮುಖದಲ್ಲಿ ಕೃಷ್ಣಪಕ್ಷದ ಕಿದ್ದಿಂಗಳಂತಹ ಕಿರುನಗೆಯೊಂ ದು ಮೂಡಿ ಮಾಯವಾಯಿತು. ಮಧ್ಯಾಹ್ನ ತನ್ನ ಮನೆಯಿಂದ ಹೊರಟ ಕಮಲೇಶಳಿಗೆ ಆಸ್ಪತ್ರೆಯ ಮೆಟ್ಟಿಲು ಹತ್ತುತ್ತಿದ್ದಂತೆಯೇ ಚಂದ್ರಕಾಂತನ ಸಂದರ್ಶನವಾಯಿತು. ಡಾ|| ಚಂದನ್‌ರವರೊಡನೆ ಮಾತಾಡುತಿದ್ದ ಅವನು ಈಕಡೆ ಕಣ್ಣು ಹೊರಳಿಸಿದರೂ ಯಾವುದೋ ಗಹನವಾದ ವಿಚಾರದಲ್ಲಿ ಮುಳುಗಿರುವಂತೆ ಗಾಂಭೀರ್ಯ ಪ್ರದರ್ಶನ ಮಾಡಿ ಮತ್ತೆ ಅವರೊಂದಿಗೆ ಮಾತುಕತೆಯನ್ನು ಮುಂದುವರಿಸಿದ. ಡಾ|| ಚಂದನ್‌ರವರಿಗೆ ಕರಜೋಡಿಸಿ

ದಳು ಕಮಲೇಶ್ " ಪ್ರಣಾಮ್ ಸರ್ !"

"ನಿಮ್ಮವರಿಗಿಲ್ಲವೇ ಅಭಿವಾದನ?" ಡಾ|| ಚಂದನ್ ನಸುನಗೆ ಬೀರಿದರು.

ಕಮಲೇಶ್ ಮುಗುಳು ನಕ್ಕಳು ಭಾವಭರಿತ ನೋಟವನ್ನು ಅವನೆಡೆಗೆ ಹರಿಸಬಾರದೆಂದರೂ ಕಣ್ಣುಗಳು ವಂಚಿಸಿದುವು. ಅವನೂ ಗಂಭೀರ ಗಮನ ದಿಂದ ಇತ್ತಲೇ ನಿಟ್ಟಿಸಿದ; ದೊರೆತ ಫಲ ನೀರಸ. ಅಲ್ಲಿಂದ ತನ್ನ ಕಾರ್ಯಾ ಗಾರದೆಡೆಗೆ ಅವಸರವಸರವಾಗಿ ಹೊರಟಳು. ಒಳಬರುತಿದ್ದ ಮೂರನೆಯ ಪಾಳಿಯ ನೂರಾರು ಶ್ವೇತ ವಸನಧಾರಿಣಿಯರು ಎದುರಾದರು. ಅವರ ಉದ್ಯೋಗಶೀಲತೆ ಪರಂಪರಾನುಗತವಾಗಿ ಬಂದ ಸ್ವಯಂ ಸೇವಾವೈಖರಿ ಎಂದರೂ ಅತ್ಯುಕ್ತಿಯಲ್ಲವೇನೋ....ಬಗೆಗಣ್ಣಿಗೆ ಆನಂದವೀವ ಹಿಂದೂಸ್ಥಾ ನದ ನಾರೀಶ್ರೀಶಕ್ತಿಯ ಒಂದು ಕಣ, ಒಂದೇ ಒಂದು ಕಣ!

ಎದುರಾಗಿ ಬಂದ ಡಾ|| ಜುಬೇದಾಬೇಗಂ– " ಓ! ನಿನ್ನ ಮುಖ ಬಲು ಪ್ರಸನ್ನವಾಗಿದೆಯಲ್ಲಾ, ಏನು ವಿಶೇಷ ?"

" ನಿಜವಾಗಿ ?" ಅತ್ಯಂತ ಪ್ರಸನ್ನಭಾವದಿಂದ ಕೇಳಿದಳು ಕಮಲೇಶ್.

ಥಣ್ ! ಥಣಾರ್ ! ಥಣ್ ! ಥಣಾರ್ ! ಥಣ್ ! ಥಣಾರ್ !

ಇಬ್ಬರ ಕಣ್ಣುಗಳೂ ತಟ್ಟನೆ ಕೆಂಪುದೀಪಗಳತ್ತ ಹೊರಳಿದುವು. ಎಮ ರ್ಜನ್ಸಿ ವಾರ್ಡ್ ಮತ್ತು ಆಪರೇಶನ್ ಥಿಯೇಟರುಗಳೆರಡನ್ನೂ ತೋರುತಿದ್ದ ಕೆಂಪು ದೀಪ ಅಪಾಯದ ಸುದ್ದಿಯನ್ನು ಪುನಃ ಪುನಃ ಸಾರಿತು.

ರಾಣೀ ಭವತಾರಿಣಿಯ ತುರ್ತು ಕರೆ !

ಈಗ ಯಾವ ಕಡೆಗೆ ಹೋಗಬೇಕು ? ಅದು ತಮ್ಮ ಮುಂದಿನ ಪ್ರಶ್ನೆ.

" ನಾನು ಹೇಗಿದ್ದರೂ ಆಪರೇಶನ್ ಥಿಯೇಟರಿಗೆ ಹೋಗಲೇಬೇಕು, ಹೋಗುವೆ. ನೀನು ಎಮರ್ಜನ್ಸಿ ವಾರ್ಡಿಗೆ ಹೋಗು " ಎಂದಳು ಕಮಲೇಶ್.

ಮುಂದೆ ಇಬ್ಬರ ಹಾದಿಯೂ ಕವಲೊಡೆಯಿತು. ತಮ್ಮಂತೆಯೇ ಇನ್ನೂ ಹಲವಾರು ಮಂದಿ ತುರ್ತುಕರೆಗೆ ಓಗೊಟ್ಟಿದ್ದಾರೆ. ಔಷಧಿಯ ಟ್ರೇ ಗಳು ತುರ್ತುಗತಿಯಲ್ಲಿ ಧಾವಿಸಿದುವು.

ಜಣಿ. ಜಣಿ. ಜಣಿ ಜಣಿ. ಶೀಶೆಗಳ ಜಣ ಜಣಾತ್ಕಾರ.

ಪಟ. ಪಟ. ಪಟ. ಪಟ. ಪಾದರಕ್ಷೆಗಳ ಪಟ ಪಟಾತ್ಕಾರ.

ಆಗಲೇ ಡಾಕ್ಟರುಗಳು ಆಪರೇಶನ್ ಥಿಯೇಟರಿನಲ್ಲಿ ಕಿಕ್ಕಿರಿ ನೆರೆದಿದ್ದಾರೆ.

ಸಾಲಾಗಿನ ನಾಲ್ಕು ಮಂಚಗಳ ಮೇಲೂ ನಾಲ್ಕು ಮಂದಿ ಗಾಯಾಳುಗಳು ಮಲಗಿದ ರೀತಿ ಘೋರವಾಗಿತ್ತು. ಅಬ್ಬಾ ! ರುದ್ರ ಭಯಂಕರ !

ಕಮಲೇಶ್ ಮೊದಲ ನೋಟಕ್ಕೆ ಒಂದು ಹೆಜ್ಜೆ ಹಿಮ್ಮೆಟ್ಟಿದಳು. ಎದೆ ದಡ ದಡ ಮಿಡಿದುಕೊಳ್ಳಹತ್ತಿತು ಅತ್ಯಂತ ಕರುಣಾಜನಕವಾದ ಆ ಚೀರಾಟ ನರಳಾಟ ಗೋಳಾಟಗಳು ಹೃದಯದ ನೆತ್ತರನ್ನು ಒಮ್ಮೆಲೇ ಹೆಪ್ಪುಗಟ್ಟಿಸು ವಂತಿದೆ. ಮೆಲ್ಲನೆ ಪಿಸುಗುಟ್ಟಿದಳು ಪದ್ಮಾ ಕಮಲಾನಿ “ ಛೀ ! ಏಳು ಮಂದಿ ಡಾಕ್ಟರ್ ! ಇನ್ನೂ ಮೂವರು ಎಮರ್ಜನ್ಸಿ ವಾರ್ಡಿನಲ್ಲಿದ್ದಾರೆ !”

“ ಹೆಣ್ಣು ಸ್ವಲ್ಪ ಕಲಿತರೂ ಗಗನಕ್ಕೇರಿ ಬಿಡುತ್ತಾಳೆ !” ಅನಸ್ತೇಶಿಯಾ ಪ್ರಯೋಗಿಸುತಿದ್ದ ಚಂದ್ರಕಾಂತ್ ತುಟಿ ಕಚ್ಚಿದ.

ಕಮಲೇಶ್ ಅಚ್ಚರಿಯ ನೋಟ ಬೀರಿದಳು. ಅವನ ಮಾತಿನ ಸರಣಿ ಅರ್ಥವಾಗಲಿಲ್ಲ. ವಿಷಯವೇನೆಂಬುದೂ ಸಹ ಹೊಳೆಯಲಿಲ್ಲ. ಆಗಲೂ ಪದ್ಮಾ ಕಮಲಾನಿ ಗೆಳತಿಯ ಸಹಾಯಕ್ಕೆ ಬಂದಳು. “ ಬಹುಶಃ, ಕಾರು ನಡೆಸುತಿದ್ದುದು ಹೆಂಗಸಿರಬಹುದು !”

ತುರ್ತು ಚಿಕಿತ್ಸೆ ತೀವ್ರಗತಿಯಲ್ಲಿ ಸಾಗಿತು. ಕೃಷ್ಣಪಕ್ಷದ ಕಾಳರಾತ್ರಿ ಹೆಜ್ಜೆಯಿಟ್ಟರೂ ಕೆಲಸ ಮುಗಿಯಲೊಲ್ಲದು. ಕೊನೆಗೂ ಮುಗಿಸಿ ಹಿರಿಯ ಡಾಕ್ಟರುಗಳು ಹೊರಟು ನಿಂತಾಗ ವಾಹನ ಸೌಕರ್ಯವಿಲ್ಲದಿರುವವರನ್ನು ಮನೆ ಮನೆಗೆ ತಲುಪಿಸಲು ವ್ಯಾನು ಅಣಿಯಾಯಿತು. ಡಾ|| ಚಂದ್ರಕಾಂತ್ ದಂಪತಿ ಗಳು ಸಹ ಹೊರಟರು. ಮನೆ ಮುಟ್ಟಿದಾಗ ಮೊದಲು ಪಾರ್ವತಮ್ಮನ ದರ್ಶನವಾಯಿತು. ನಾಗವೇಣಿ ಉಂಡು ಮಕ್ಕಳೊಂದಿಗೆ ಹಾಸಿಗೆ ಸೇರಿ ದ್ದಳು. ನಿದ್ರಾಭಂಗವಾದುದರಿಂದಲೋ ಅಥವಾ ಸಹಜ ಸ್ವಭಾವದಿಂದಲೋ ಪಾರ್ವತಮ್ಮನ ಉಚ್ಚಕಂಠ ಜಲಧಾರೆಯಂತೆ ಹರಿದು ಬಂತು– “ ಹೆಣ್ಣಿಗೆ ಮನೆ ಮಠಗಳೇ ಭೂಷಣ....ಹೆಣ್ಣಾಗಿ ಹುಟ್ಟಿ....”

ಚಂದ್ರಕಾಂತ್ ಮುಸು ಮುಸು ನಗುತ್ತಾ ನೀರು ಮನೆಗೆ ಹೋದ.

“ ಆಸ್ಪತ್ರೆಯಲ್ಲಿ ತುಂಬ ಕೆಲಸ. ಬೇಗನೆ ಬರಲಾಗಲಿಲ್ಲ ಮಾಯಿ.”

“ ಹೆಂಗಸು ಕುಲ ಶೀಲಗಳನ್ನು ಮರೆತರೆ....”

ಆ ಮುಂದಿನ ಹುಣುಕನ್ನು ಕೇಳಲು ಇಷ್ಟವಿಲ್ಲದೆ ಶೌಚದ ಮನೆಗೆ ಹೋದಳು ಕಮಲೇಶ್. ಅಲ್ಲಿಗೂ ಬಿಡದೆ ತನ್ನ ಅನುಭವಾಮೃತವನ್ನು ಹರಿ

ಸುತ್ತಲೇ ಇದ್ದಳು ಅವಳು. ಮುಖಮಜ್ಜನ ಮಾಡಿ ಊಟಕ್ಕೆ ಅಣಿ ಮಾಡುವಷ್ಟರಲ್ಲಿ ಚಂದ್ರಕಾಂತ್ ಒಳಬಂದ. ಮುಖಮುದ್ರೆಯಲ್ಲಿ ತುಂಟತನವಿತ್ತು; ಪ್ರಚೋದನೆಯಿತ್ತು. ಅವನ ಊಟ ಮುಗಿದರೂ ಯಜಮಾನಿಯ ಅಮೃತಧಾರೆ ಹರಿಯುತ್ತಲೇ ಇದೆ...ಸದ್ದು ಕೇಳಿ ನಾಗವೇಣಿಯ ಮಗು ಎದ್ದು ಅಳಲು ಮೊದಲು ಮಾಡಿತು. ಮಲಗಿದ್ದ ಕೃಷ್ಣಮೂರ್ತಿ ಗದ್ದರಿಸಿದ "ಒಳಗಡೆ ಕರೆದುಕೊಂಡು ಹೋಗಿ ಸುಮ್ಮನಿರಿಸಬಾರದೆ? ಇಲ್ಲೇಕೆ ನನ್ನ ನಿದ್ದೆ ಹಾಳುಮಾಡುತ್ತಿ!"

ನಾಗವೇಣಿ ಮಗುವಿನ ಸಹಿತ ಹೊರ ಬಂದಳು. ಕಮಲೇಶ್ ಮಗುವನ್ನೆತ್ತಿಕೊಂಡರೂ ಅದು ಸುಮ್ಮನಿರಲಿಲ್ಲ. ಪಾತ್ರೆಯಲ್ಲಿದ್ದ ಹಾಲನ್ನು ಲೋಟಿಗೆ ಬಗ್ಗಿಸುತ್ತ-"ಎಷ್ಟೆಂದರೂ ನಿಮ್ಮದೇ ಸುಖ. ಹಗಲೂ ರಾತ್ರಿ ಓಡಾಡುತ್ತೀರಿ. ನನಗೊಂದು ನಾಟಕ-ಸಿನಿಮಾ ನೋಡೋಣವೆಂದರೂ ಗತಿಯಿಲ್ಲ. ಈ ಮಕ್ಕಳು, ಕಸ, ಮುಸುರೆ ಇದೇ ನಾಟಕ-ಸಿನಿಮಾ!"

ಯಜಮಾನಿಯ ಧ್ವನಿ ಹೊರಬಿತ್ತು. "ದಿನಾ ನಾಟ್ಕಾ ಸಿನಿಮಾ ತೋರಿಸಲು ನಿನ್ನಪ್ಪ ಗಂಟು ಕಳುಹಿಸಿದ್ದಾನೇನು?"

ಸೊಸೆಯು ಸೊಲ್ಲಡಗಿದರೂ ಮುಖಭಾವ ಸಾರಿ ಹೇಳುವಂತಿತ್ತು-"ನಾನೆಂದದ್ದು ಮೆಲ್ಲಗೆ. ಅಲ್ಲಿಗೆ ಹೇಗೆ ಕೇಳಿಸಿತೋ."

ಅವಳ ದೀನಸ್ಥಿತಿ ನಿಜವಾಗಿಯೂ ಕರುಳು 'ಚುರುಕ್' ಎನ್ನುವಂತಿತ್ತು. ಮಗುವಿಗೆ ಹಾಲು ಕುಡಿಸಿ ಅರೆನಿದ್ದೆಯಿಂದ ಹುಯ್ಯಲಿಡುವ ಅದನ್ನು ಎತ್ತಿಕೊಂಡು ಸಾತ್ವಿಸತೊಡಗಿದಳು. ಆ ಸಂಸಾರದ ಸ್ಥಿತಿಗತಿ ಜನ್ಮಧಾರಣೆಯ ಅಸಾರ್ಥಕತೆ ಹೃದಯವನ್ನು ಇರಿಯುವಂತಿದೆ. ಹೇಗೋ ಹಾಗೆ ತುತ್ತು ನುಂಗಿ, ಬಸಿ ಬಟ್ಟಲನ್ನು ತೊಳೆದು ಮುಸುರೆಯನ್ನು ಬಳಿದು ತನ್ನ ಕೊಠಡಿಗೆ ಜಾರಿಕೊಂಡಾಗ ಮನಃಕ್ಷೋಭೆಯಿಂದ ನಿದ್ದೆ ಗಾವುದ ದೂರ ಹಾರಿ ಹೋಗಿತ್ತು. ಮಗು ಅಳುತ್ತಲೇ ಇದೆ. ಅದನ್ನು ಮಲಗಿಸಲು ನಾಗವೇಣಿ ಶತಪ್ರಯತ್ನ ಪಡುತಿದ್ದಾಳೆ. ಅವಳಿಗೆ ಸಹಾಯ ಮಾಡಲು ಹೊರ ಹೋಗಿ ಒಳ ಬಂದಾಗ ಚಂದ್ರಕಾಂತ್ ಸಿಡಿಮಿಡಿಗೊಂಡ, ಕೃಷ್ಣಮೂರ್ತಿಯ ದನಿಗೆ ಪೂರ್ಣ ಒತ್ತಾಸೆ ನೀಡುವಂತೆ. ನಡುಮನೆಯಲ್ಲಿ ಮೈಮುದುಡಿ ಮಲಗಿದ

ಪಾರ್ವತಮ್ಮ ಏನೇನೋ ನುಡಿಯುತ್ತಲೇ ಇದ್ದಾಳೆ. ಆದರೆ ಮಗುವಿನ ಗದ್ದಲದಲ್ಲಿ ಸರಿಯಾಗಿ ಕೇಳಿಸುತ್ತಿಲ್ಲ ; ಅದು ಕೇಳಿಸದಿರುವುದೂ ಸಹ ಒಳ್ಳೆಯದು ಎಂದುಕೊಳ್ಳುತ್ತ ನಿಶ್ಚಲಳಾಗಿ ಮಲಗಿಕೊಂಡಳು. ಚಂದ್ರಕಾಂತನ ಬಲಿಷ್ಠವಾದ ತೋಳು ಬಳಸಿ ಹಿಡಿದುದು ಸಹ ಅವಳ ಗಮನಕ್ಕೆ ಬರಲಿಲ್ಲ.

ಮರುದಿನ ಆಸ್ಪತ್ರೆಯ ಮೆಟ್ಟಲಿಳಿಯುವ ಮುನ್ನ ಆಪರೇಶನ್ನುಗಳ ಪಟ್ಟಿಯನ್ನು ನೋಡಿದರೆ ಇನ್ನೂ ಎರಡು ಆಪರೇಶನ್ನುಗಳು ಉಳಿದಿದ್ದುದು ಗಮನಕ್ಕೆ ಬಂದಿತು. ಚಂದ್ರಕಾಂತನಿಗೆ ಬ್ರೆಡ್ಡು ಕಾಫಿಯನ್ನು ಒಳಕೋಣೆಯಲ್ಲಿ ನೀಡಿ ಅಪ್ಪಣೆ ಪಡೆದು ತನ್ನ ಮನೆಗೆ ಹೊರಟಳು.

ಅರ್ಧ ಹಾದಿ ಸಾಗಿರಬಹುದೇನೋ....

ಪಕ್ಕದ ರಸ್ತೆಯಿಂದ ಹೆದ್ದಾರಿಗೆ ಕಾಲಿಟ್ಟ ಸುಧಾರಾಣಿ ಕಮಲೇಶಳನ್ನು ನೋಡಿ ಪ್ರಸನ್ನಮುಖಿಯಾಗಿ ತಟ್ಟನೆ ನಿಂತಳು " ಹಲೋ !"

" ಹಲೋ ! ನಿನ್ನನ್ನು ನೋಡಿ ಎಷ್ಟು ದಿನಗಳಾದುವೋ ?"

" ಸ್ವಂತ ಚಿಕಿತ್ಸಾಲಯ ತೆರೆಯುವ ಯೋಜನೆಯಲ್ಲಿರುವುದರಿಂದ ಒಂದು ಘಳಿಗೆಯೂ ಬಿಡುವು ದೊರೆಯುವುದಿಲ್ಲ."

" ಓಹೋ ! ಯಾವಾಗ ಆರಂಭೋತ್ಸವ ?"

" ಸದ್ಯದಲ್ಲೇ...." ಪದ್ಮಪಲಾಶದಂತಹ ವಿಶಾಲ ನಯನಗಳು ಮಿಂಚಿನಂತೆ ಮಿಂಚಿದುವು. ಒಂದೆರಡು ಕ್ಷಣ ಯೋಚಿಸಿ ಮುಂದುವರಿದಳು ಸುಧಾ " ಡಾಕ್ಟರ್, ನಿನಗೆ ಅಂದಿನಿಂದಲೂ ಹೇಳಬೇಕೆಂದಿದ್ದೆ. ಇದುವರೆವಿಗೂ ಆಗಿರಲಿಲ್ಲ. ಡೀನ್ ಅನ್ಯಾಯವಾಗಿ ಡಾ|| ಬಲರಾಂರವರ ಮೇಲೆ ಅಪಾದನೆ ಮಾಡಿದ್ದಾರೆ....ಛೀಃ ! ಛೀಃ ! ಎಂತಹ ಅವಮಾನ ?"

ಕಮಲೇಶಳ ಮೌನವೇ ಉತ್ತರವಾಯಿತು.

" ಬಲರಾಂ ಬಯಸಿದರೆ ಎಂಥೆಂಥಹ ಹೆಣ್ಣುಗಳಿಲ್ಲ....? ನೀನೇ ಯೋಚಿಸಿನೋಡು ಕಮಲೇಶ್."

ಕಮಲೇಶ್ ಆಗಲೂ ಮಾತಾಡಲಿಲ್ಲ.

ಇವಳಿಗೆ ತಿಳಿಯದೆ ಉಂಟೆ ? ಮಾನ ಉಳಿಸಿಕೊಳ್ಳುವ ಪ್ರಯತ್ನ ಅಷ್ಟೆ

....ಏನೇ ಇರಲಿ ನನಗೇಕೆ....ಶಾಂತಂ ಪಾಪಂ ! ಶಾಂತಂ ಪಾಪಂ !!

ಕಮಲೇಶ್ ತನ್ನೊಳಗೇ ತರ್ಕಿಸುತ್ತಾ ನಡೆದಳು.

“ ನಮ್ಮದು ಬಲು ಕೆಟ್ಟ ಸಮಾಜ. ಇದಕ್ಕೆ ಹೃದಯವಾಗಲೀ ನೀತಿ ನಿಯಮಗಳಾಗಲೀ ಇಲ್ಲ. ಯಾವ ವ್ಯಕ್ತಿಯನ್ನು ಹಾಳು ಮಾಡಬೇಕೆಂದರೂ ಸಿದ್ಧ. ಯಾವುದೇ ಸ್ವರೂಪ ಕೊಟ್ಟು, ಯಾವುದೇ ಮುಳ್ಳಿನ ಕಿರೀಟ ಇಟ್ಟು, ಯಾವುದೇ ರೀತಿಯ ಶಿಕ್ಷೆಗೊಳಿಸಲೂ ಸಹ ಹಿಂಜರಿಯುವುದಿಲ್ಲ....ಏಕೆ ಮೌನ ಮಾತೇ ಆಡುತ್ತಿಲ್ಲವಲ್ಲ ?”

“ ನೀನೇ ಎಲ್ಲವನ್ನೂ ಹೇಳುತಿದ್ದಿ, ನಾನು ಕೇಳುತ್ತಿರುವೆ ಅಷ್ಟೆ.”

ಸುಧಾರಾಣಿ ಏನೋ ಹೇಳಬೇಕೆಂದು ಬಯಸಿದರೂ ತುಟಿಗಳು ಬಿರಿಯಲಿಲ್ಲ. ಹೊತ್ತು ಮೌನಧಾರಣೆ ಮಾಡಿತು. ಯೋಚಿಸಿ ಯೋಚಿಸಿ ದುಃಖ ಮಿಶ್ರಿತ ದನಿಯಲ್ಲಿ “ಈ ಅವಮಾನ ಸಹಿಸಲಾರದೆ ನಾನೂ ಸಹ ಕೆಲಸಕ್ಕೆ ರಾಜೀನಾಮೆ ಕೊಟ್ಟೆ. ಇನ್ನು ನಾವಿಬ್ಬರೂ ಸ್ವಂತ ಚಿಕಿತ್ಸಾಲಯ ನಡೆಸುತ್ತೇವೆ.”

“ ದೇವರ ದಯದಿಂದ ನಿಮಗೆ ಒಳ್ಳೆತಾಗಲಿ.”

“ ಅನೇಕ ವಂದನೆಗಳು !”

ಹಾದಿ ಕವಲೊಡೆಯಿತು. ಇಬ್ಬರೂ ಪರಸ್ಪರ ಬೀಳ್ಕೊಂಡು ಹೊರಟರು. ಕೊನೆಯ ಪ್ರಕರಣವಾಗಿ ಇಬ್ಬರ ಮುಖಮಂಡಲದಲ್ಲೂ ಮುಗುಳುನಗು ಮೂಡಿ ಮಾಯವಾಯಿತು.

ಕೊಂಕುಳಲ್ಲಿ ಮಕ್ಕಳನ್ನಾಂತು ಓಡಾಡುವ ಸತ್ವಹೀನ ಹೆಂಗಳೆಯರು ಸಾಲುಗಟ್ಟಿ ಎದುರಾದರು....ಬಾಳಿನಲ್ಲಿ ಬಂದಿಯಾಗಿ ರೋಗರುಜಿನಗಳನ್ನು ಹೊತ್ತು, ಶಕ್ತಿಕ್ಷಯ ಹೊಂದಿ ಮಸಣದತ್ತ ಹೆಜ್ಜೆ ಹಾಕುವ ಅವರ ಬಗೆಗೆ ಕಾರುಣ್ಯ ಪೂರಿತವಾದ ವಿಶಾದ ಗೀತೆ ಹೃದಯ ತುಂತುಗಳಲ್ಲಿ ಮಿಡಿಯಿತು.... ಜನ್ಮ ಸಾರ್ಥಕತೆಯಲ್ಲಿ ಜೀವನ ವಿಕಾಸವು ಮುಖ್ಯ ಗುರಿಯೆಂಬುದೂ ಸಹ ಸಹಜ. ಆದರೂ ಶಿಲಾಕಾಠಿಣ್ಯ ಪುರುಷವರ್ಗಕ್ಕೆ ಹೃದಯವಾಗಲೀ ನೀತಿ ನಿಯಮಗಳಾಗಲೀ ಧರ್ಮಕರ್ಮಗಳಾಗಲೀ ಇರುವುದಿಲ್ಲ. ಸಾಮಾಜಿಕ ಜೀವನದಲ್ಲಿ ಅಂದಿಂದಿಗೂ ನಾನಾ ನಿದರ್ಶನಗಳು ದೊರೆಯುತಿದ್ದರೂ ಅದರೆಡೆಗೆ ಲಕ್ಷ್ಯವಿಲ್ಲ. ಪರಂಪರಾನುಗತವಾಗಿ ಕಷ್ಟ ನಿಷ್ಠೂರಗಳನ್ನು ಅನುಭವಿಸುವುದು ನಾರೀವರ್ಗಕ್ಕೂ ಸಹ ಅಭ್ಯಾಸವಾಗಿ ಹೋಗಿದೆ ; ಸಮಾಜ ಏನು

ಪ್ರಾಶಾದಿಸಿದರೂ ಅದು 'ಪ್ರಸಾದ !'

ಮೂಕ ಸಂಕಲ್ಪದಲ್ಲಿ ಪಶುಜೀವನಕ್ಕೆ ಸಿದ್ಧಳಾಗುವ ಆಕೆಯದು ಎಂತಹ ಮಾರ್ದವ ಭಾವನೆ !

....ಆದರೆ....! ಪುರಾತನವಾದರೂ ಚಿರನೂತನವಾಗಿ ಮೊಳಗುತ್ತಿದೆ ವೇದವಾಣಿ.

ಸತ್ಯಸ್ಯತೇ ಸ್ವದೃಶ ಆತ್ಮನ ಆತ್ಮನೋಽನ್ಯಂ
ವಕ್ತಾರಮೀಶ ವಿಬುಧೇಷ್ವಪಿ ನಾನುಚಕ್ಷೇ ।
ಸರ್ವೇ ವಿಮೋಹಿತಧಿಯಸ್ತವ ಮಾಯಯೇ ಮೇ
ಬ್ರಹ್ಮಾದಯಸ್ತನುಭೃತೋಽಬಹಿರರ್ಥಭಾವಾಃ ||

ಅಂದಮೇಲೆ ಯಾರು ಹೊಣೆಯೆಂಬುದು ಆ ಭಗವಂತನಿಗೇ ಗೊತ್ತು.

ಡಾ|| ಕಮಲೇಶ್ ಸಂಜೆಯ ಪುನರ್ಭೇಟಿಯನ್ನು ಮುಗಿಸಿ ಹೊರಹೋಗಲಿದ್ದಾಗ ನಸುಗತ್ತಲಾಗಿತ್ತು. ಹೊರಾಂಗಣದಲ್ಲಿ ಚಂದ್ರಕಾಂತನನ್ನು ಕೂಡಿಕೊಳ್ಳುವ ಉದ್ದೇಶದಿಂದ ಸರಸರ ನಡೆಯುತಿದ್ದಾಗ ಎದುರಾಗಿ ಬಂದ ವ್ಯಕ್ತಿಯಲ್ಲಿ ಯಾವುದೋ ಹಳೆಯ ನೆನಪು ಮೂಡಿ ಮುಂದುವರಿಯದಂತೆ ತಡೆದು ನಿಲ್ಲಿಸಿತು. ಇತ್ತಲೇ ಬರುತಿದ್ದ ಆ ವ್ಯಕ್ತಿಯೂ ಸಹ ನಿಂತು ಕರರಳನ್ನು ಜೋಡಿಸಿತು. ಕಮಲೇಶ್ ಪ್ರತಿನಮಿಸಿ ಯೋಚಿಸಿದಳು....ಯಾರಿರಬಹುದು ?

" ನನ್ನ ಗುರುತು ಹತ್ತಿತೇ ಡಾಕ್ಟರ್ ?"

ದನಿಯು ಕಿವಿಯನ್ನು ತಾಗುತ್ತಲೂ ಹಿಂದೆ ಸ್ವರ್ಗಸ್ಥರಾದ ಚಂದ್ರಭಾನು ಸೂರ್ಯಭಾನುರವರ ತಂದೆ ಕೃಷ್ಣಭಾನು ಎಂಬುವನ್ನು ಅರಿತು " ಓ! ಈಗ ತಿಳಿಯಿತು. ಕತ್ತಲಾದುದರಿಂದ ಸರಿಯಾಗಿ ಗುರುತು ಸಿಗಲಿಲ್ಲ; ಹೇಗಿದ್ದೀರಿ ? ನಿಮ್ಮ ಪತ್ನಿ ಹೇಗಿದ್ದಾರೆ ?" ಎಂದಳು ಅವಳು.

" ನನ್ನ ಪತ್ನಿಯೂ ಸಹ ಹೋಗಿ ಬಿಟ್ಟಳು....ಹೋಗಲಿ, ಅವಳು ಮಕ್ಕಳೊಂದಿಗಾದರೂ ಸುಖವಾಗಿದ್ದಾಳೆ. ನನ್ನದೇ ಪಾಪಿ ಜನ್ಮ, ನನಗೆ ಐದು ಲಕ್ಷ ರೂಪಾಯಿಗಳ ಆಸ್ತಿಯುಂಟು. ಅದನ್ನು ಆಸ್ಪತ್ರೆಗೆ ಧರ್ಮಾರ್ಥವಾಗಿ ಕೊಡುವೆ. ಇನ್ನು ಮುಂದೆ ನನ್ನ ಕೊನೆಯ ದಿನಗಳನ್ನು ಇಲ್ಲಿಯೇ ಕಳೆಯುವೆ. ನಮ್ಮಂತೆಯೇ ಕಷ್ಟಪಡುವವರೊಂದಿಗಿದ್ದರೆ ನಮ್ಮ ಕಷ್ಟ

ನನಗೆ ಹೆಚ್ಚೆನಿಸುವುದಿಲ್ಲ. ನನ್ನ ಊಟ ಉಪಚಾರ ಕ್ಷೇಮಗಳು ಆಸ್ಪತ್ರೆಗೆ ಸೇರಿದ್ದು. ನೀವೇ ನನಗೆ ಬಂಧುಗಳು. ನನಗೆ ಇನ್ನಾರ ಅಗತ್ಯವೂ ಇಲ್ಲ."

"ಹಾಗೆ ಮಾಡಿರಿ...."

ಕೃಷ್ಣಭಾನು ಹೊರಟರು. ಅದೇ ಸಮಯಕ್ಕೆ ಚಂದ್ರಕಾಂತ್ ಆಗಮಿಸಿದ. ಕತ್ತಲೆಯ ಮುಸುಕಿನಲ್ಲಿ ಕರಗಿಹೋದ ಆ ವ್ಯಕ್ತಿ ಯಾರೆಂಬುದನ್ನು ತಿಳಿಯಲು ಮನಸ್ಸಿಗೆ ಎಲ್ಲಿಲ್ಲದ ತವಕ. ಕತ್ತು ಆನಿಸಿ ನೋಡಿದರೂ ವ್ಯಕ್ತಿಯ ಗುರುತು ಹತ್ತಲಿಲ್ಲ ...ಈಕೆ ಕತ್ತಲೆಯ ಮುಸುಕಿನಲ್ಲಿ ನಿಂತು ಮಾತುಕತೆಯಾಡುವ ಅಗತ್ಯವಾದರೂ ಏನು? ಅವರು ಯಾರಿದ್ದಿರಬಹುದು ?

ಇಬ್ಬರ ನೋಟವೂ ಸಂಧಿಸಿದುವು. ಅವನ ತಲೆಯಲ್ಲಿನ ವಿಚಾರ ಸರಣಿಯನ್ನು ಅಂತಃಪ್ರಜ್ಞೆ ತಕ್ಷಣ ಗ್ರಹಿಸಿತು. ಒಡನೆ ವೈನವಿದೆನ್ನು ಅಪಾದಮಸ್ತಕವೂ ನಸುಕಂಪನದ ಅಲೆ ಹರಿದಾಡಿ ಹೋಯಿತು. ಸ್ವಲ್ಪಹೊತ್ತು ಯೋಚಿಸಿ ನಿಶ್ಚಲ ಕಂಠದಿಂದ ನುಡಿದಳಾ ಮಡದಿ "ಅವರು ನಿಮಗೆ ಗೊತ್ತಿರಬಹುದಲ್ಲಾ, ಸೂರ್ಯಭಾನು ಚಂದ್ರಭಾನುರವರ ತಂದೆ ಕೃಷ್ಣಭಾನು !"

"ಓ....ಗೊತ್ತು, ಗೊತ್ತು !"

ಮನೆ ಮುಟ್ಟುವಷ್ಟರಲ್ಲಿ ಎಂಟುಗಂಟೆಯಾಗಿತ್ತು. ಯಜಮಾನಿ ನಿತ್ಯವೂ ಹಾಡಿದ್ದೇ ಹಾಡಿದಳು. ಆ ನುಡಿಗಳೆಲ್ಲಾ ಎಂದಿನಂತೆಯೇ ಈ ಕಿವಿಯಲ್ಲಿ ತೂರಿ ಆ ಕಿವಿಯಲ್ಲಿ ಹೊರ ಬೀಳುತ್ತವೆ. ಈಗ ಅವುಗಳಿಗೆ ಬೆಲೆಯೂ ಇಲ್ಲ; ಲಕ್ಷ್ಯವೂ ಇಲ್ಲ. ಆದರೂ ಅವಳು ಬಿಡಳು. ನೀರುಮನೆಯಲ್ಲಿ ಮುಖ ತೊಳೆಯುವಾಗ ನಾಗವೇಣಿ ಗೊಣಗಿಕೊಂಡುದುದೂ ಕಿವಿಗೆ ಬಿತ್ತು. ಆದರೆ, ಅವಳು ಅನ್ನುವುದರಲ್ಲಿ ನಿಜವಾಗಿಯೂ ಕಷ್ಟನಿಷ್ಠೂರಗಳ ಪರಿಪಾಡಿದೆ. ಅಂದಿನಿಂದ ಇಂದಿನವರೆವಿಗೆ ಅವಳಿಗೆ ಬಿಡುವೆಂಬುದೇ ಇಲ್ಲ. ಬಾಳಿನಲ್ಲಿ ಬಂದಿಯಾಗಿ ನಾಲ್ಕು ಮಕ್ಕಳನ್ನು ಹೆತ್ತು, ಗೃಹಲಕ್ಷ್ಮಿಯಾಗಿ ಸಂಸಾರದ ಭಾರವನ್ನು ಹೊತ್ತು ಸೋತು ಸುಣ್ಣವಾಗಿದ್ದಾಳೆ. ಪಾಪ, ಅವಳಿಗೆ ಸಹಾಯಕರೂ ಇಲ್ಲ; ಅನುಕಂಪ ತೋರುವವರೂ ಇಲ್ಲ. ತನ್ನ ಸಂಕಟವನ್ನು ಎರಡು ಮಾತುಗಳಲ್ಲಿ ತೋಡಿಕೊಳ್ಳುತ್ತಾಳೆ ಅಷ್ಟೆ....

ಆ ಕಟು ಸತ್ಯ ಹೊಳೆದನಂತರ ಹೃದಯ ಅನುಕಂಪದಿಂದ ಮಿಡಿಯಿತು.

ಆ ಮನೆಯನ್ನು ಕಟ್ಟಿ ಯಾವ ಕಾಲವೋ. ಗಾಳಿ ಬೆಳಕುಗಳು ಸಮ್ಮ

ದ್ಧಿಯಾಗಿ ಬರುವಂತಹ ಕಿಟಕಿಗಳೂ ಇಲ್ಲ. ಸೆಕೆಯು ಬೇಗೆ ಒಳಗಡೆ ಇರಗೊಡಿಸಲಿಲ್ಲ. ಅಂಗಳದ ಕಡೆ ಹೋದರೆ ತಿಳಿಗಾಳಿಯನ್ನಾದರೂ ಸೇವಿಸಬಹುದೆಂದುಕೊಂಡು ಅಂಗಳಕ್ಕಿಳಿದಳು. ಹಿತ್ತಿಲಲ್ಲಿ ತೊಟ್ಟಿಗೆ ನೀರು ಜೊಳ ಜೊಳ ಜೊಳ ಜೊಳ ಸುರಿಯುತಿತ್ತು. ಜಳಜಳ ನಿನಾದ ನೂರು ನಿಂದೆಗಳನ್ನು ಹಾಡುತ್ತಿದೆ. ಬೀಸಿ ಬಂದ ತಿಳಿಗಾಳಿಯೂ ಅದೇ ಶೃತಿಯನ್ನು ಬಿತ್ತರಿಸಿತು. ಈ ಜಗತ್ತು ಇಷ್ಟೆ, ಧೈರ್ಯಘೋರಣೆಗಳೂ ಸಹ ಇಷ್ಟೆ. ಈ ಬದುಕು ಎಂದೆಂದೂ ಮಾಲಿನ್ಯಪೂರ್ಣವಾಗಿಯೇ ಉಳಿಯುತ್ತದೆ. ಸತ್ಯ, ಸತ್ಯ ಎಂಬುದು ಬರಿಯ ಮಿಥ್ಯೆ!

ವಿಸ್ಮಯಾಧಿಕ್ಯದಿಂದ ಹಾಗೇ ನಿಂತುಬಿಟ್ಟಳು ತರುಣಿ. ಉಷ್ಣೋಧಿಕ ಜ್ವಾಲೆಯಲ್ಲಿ ಮೈ ಮೆಲ್ಲನೆ–ಬಹು ಮೆಲ್ಲನೆ ಕಂಪಿಸುತ್ತಿದೆ! ಅದೇನು ಚಳಿಯೋ ಭಯ ಭೀತಿಯೋ ದೇವರಿಗೆ ಗೊತ್ತು. ಕಮಲೇಶ್ ಪ್ರಾಣಾಯಾಮ ವಿಧಾನದಲ್ಲಿ ದೀರ್ಘವಾದ ನಿಟ್ಟುಸಿರು ಬಿಟ್ಟಳು.

ಆ ಭಯಂಕರ ಅಸುರ ಸಂಭ್ರಾಂತ ರಾತ್ರಿಯಲ್ಲಿ ತಂಗಾಳಿಯಲ್ಲಿ ತೇಲಿ ಬರುವ ಯಾವುದೋ ಹೂಗಂಪು ಪಂಚೇಂದ್ರಿಯಗಳನ್ನು ಮುತ್ತುತ್ತಿದೆ. ಹಾ! ಅದೆಲ್ಲಿಯದು? ಆಶ್ಚರ್ಯಚಕಿತಳಾಗಿ ಸುತ್ತಲೂ ನೋಡಿದರೆ ನೆರೆಮನೆಯಂಗಳದಲ್ಲಿ ರಾತ್ರಿರಾಣಿಯ ಬೇಲಿ! ಆ ಸಾಲುದ್ದಕ್ಕೂ ಹೂಗಳರಳಿ ಕಂಪನ್ನು ಚೆಲ್ಲುತ್ತಿದೆ. ದೂರದೂರದಿಗಂತದಲ್ಲಿ ಚಂದ್ರೋದಯವಾಗಿ ಹೊನ್ನರಾಜಿಯಿಂದ ಬಾನೇರುತಿದ್ದಾನೆ. ಗಿಡಮರಗಳ ನೆಲೆಯಲ್ಲಿ ಮೋಡಗಳಿಂದಾವೃತವಾಗಿ ಬೆಳಗುವ ಚಂದಿರನ ಸನ್ಮೋಹನ ದೃಶ್ಯ ತನುಮನಗಳನ್ನು ಸೆಳೆದುಕೊಂಡಿತು. ಅದೇ ದೃಶ್ಯವನ್ನು ಲೆಖ್ಖವಿಲ್ಲದಷ್ಟು ಬಾರಿ ಕಂಡಿದ್ದಾಗಿದೆ. ಅದೇ ನಿಶ್ಶಬ್ದ ಶಾಂತ ಮಹಾ ಸೌಂದರ್ಯ ರಸಪೌತಣವನ್ನು ಅನುದಿನವೂ ಉಂಡಿದ್ದಾಗಿದೆ. ಆದರೆ ಇಂದಿನ ಮಹಾ ಸೊಬಗನ್ನು ಎಂದೂ ಕಂಡಿರಲಿಲ್ಲ ಇಂದಿನಂತೆ ಎಂದೂ ಹೃದಯ ವೀಣೆ ಅನಿರೀಕ್ಷಿತವಾಗಿ ಹಾಡಿ ರಸದೌತಣವನ್ನು ನೀಡಿರಲಿಲ್ಲ. ಪಾಶ್ಚಾತ್ಯ ಕವಿವರ್ಯನ ಸೂಕ್ತಿ ಹೃದಯದ ನೆಲೆಯಿಂದಲೇ ಸ್ಪಷ್ಟವಾಗಿ ಕೇಳಿಸುತ್ತಿದೆ.

" Where you tend a rose, my lad
A thistle cannot grow."

ಅಧ್ಯಾಯ

೩೧

....ಶುಭ್ರ ಧವಳ ಸುಪ್ರಭಾತ.

....ಕ್ಹೂ ಊಊಉ ! ಕ್ಹೂ ಊಊಉ !

ಹೆಮ್ಮರದ ಹೊಂದಳಿರ ಹೊದರಿನಲ್ಲಿ ಹುದುಗಿ ಕುಳಿತ ಕೋಗಿಲೆ ಮೈ ಮರೆತು ಮನಮೋಹಕವಾಗಿ ಹಾಡುತ್ತಿದೆ. ಕ್ಹೂ ಊಊಉ! ಕ್ಹೂ ಊಊಉ!

ಅದೇ ತಾನೆ ಮುಖ ಮಜ್ಜನ ಮಾಡಿ ಟವಲ್ಲಿನಿಂದ ಮುಖವನ್ನು ತೀಡಿ ಕೊಳ್ಳುತ್ತಲೇ ಒಳ ಬಂದ ಸ್ವರೂಪ್ ಅರಳು ಕಂಗಳನ್ನು ಇನ್ನಷ್ಟು ಅರಳಿಸಿ ಎಳೆನಗೆಯನ್ನು ಚೆಲ್ಲುತ್ತ–" ಮಾ !"

ಅವಳ ಗಲ್ಲವನ್ನು ಬಲುಮೆಯಿಂದ ಮುದ್ದಿಟ್ಟುಕೊಂಡು ಕೇಳಿದಳು ಕಮಲೇಶ್ " ಏನು ಮಗೂ ?"

ಮೈಯೆಲ್ಲಾ ಹರ್ಷದ ನೆಲೆಯಾದ ಸ್ವರೂಪ್ ತುಂಬುಗಲ್ಲದ ಮೇಲೆ ತುಂಟನಗುವನ್ನು ಚೆಲ್ಲಿ " ಮಾ....ನನಗಿಂದು ರಜಾ !"

ಚೇತನಾ ಮತ್ತು ತಿಲಕ್ ತಮ್ಮ ಶಾಲೆಗಳಿಗೆ ರಜವೆಂದು ಘೋಷಿಸಿದು ದನ್ನು ಕೇಳಿದ ಮಗು ತನ್ನ ಶಾಲೆಗೂ ರಜವೆಂದು ಘೋಷಿಸಿತು! ಹಿಂದಿನಿಂದ ಸ್ವರ್ಣಮಾಲಿನಿ ಕೇಳಿದಳು " ನಿನಗೆಷ್ಟು ದಿನ ರಜ ಮಗೂ ?"

" ಮೂರ. ದಿನ !"

ತಿಲಕ್ ಚೇತನರು ಕೇಕೆ ಹಾಕಿ ನಕ್ಕರು "ನಮಗೆ ಹದಿನೈದು ದಿನ !"

ಸ್ವರೂಪ್ ಒಂದು ನಿಮಿಷ ತಬ್ಬಿಬ್ಬಾಗಿ ನುಡಿದಳು "ನನಗೂ ಅಷ್ಟೆ!"

ಎಲ್ಲರ ಮುಖದಲ್ಲೂ ಮುಗುಳುನಗೆ ಮೂಡಿತು.

ಮುಂದಣ ಕದ ತೆಗೆದು ಒಳ ಬಂದ ದಾದಿ ಚಿತ್ರಸೇನ ದಂಪತಿಗಳು ಬಂದ ಸುದ್ದಿಯನ್ನು ಬಿತ್ತರಿಸಿದಳು. ಚಿತ್ರಸೇನ ಊರಿಗೆ ಹಿಂದಿರುಗಿ ಆಗಲೇ ಎರಡು ತಿಂಗಳು ಸಂದಿವೆ. ಜಹಜಿನಲ್ಲಿ ಬಂದು ತಲುಪಿದ ತಮ್ಮ ಸಾಮಾನು

ಗಳನ್ನು ಪಡೆದುಕೊಂಡು ಎಲ್ಲರಿಗೂ ಕೈ ತುಂಬ ಬಹುಮಾನಗಳನ್ನು ತಂದಿದ್ದ. ಕಮಲೇಶ್ ಹೌಹಾರಿ ಕೇಳಿದಳು "ಇವೆಲ್ಲಾ ಏಕೆ ?"

"ಸ್ನೇಹದ ಕುರುಹು, ಅಷ್ಟೆ." ಮುಗುಳ್ನಗೆ ಬೀರಿದಳು ಮಾಲತಿ, ಕಮಲ ನಯನಗಳು ವಿಸ್ಫಾರಿತವಾದುವು. ಚಿನ್ನದ ಪುತ್ಥಳಿಯಂತಿರುವ ಆಕೆಯಲ್ಲಿ ರಾಜಕುವರಿಯ ಠೀವಿ ಇದೆ. ಚಂಚಲವಾದ ಆ ಸುಂದರ ಸುನೇತ್ರ ನಡೆನುಡಿಗಳಲ್ಲಿ ಸ್ಥಿರಗಾಮಿನಿ.

"ಆಸ್ಪತ್ರೆಗೆ ಹೊರಟದ್ದೀರಾ ?"

"ಹೌದು."

"ಈ ಬೆಳಗಿನ ಹೊತ್ತು ನೀವು ಇಲ್ಲಿರುವುದು ಅಪರೂಪವಲ್ಲವೇ ?"

"ನಿನ್ನೆ ಮಧ್ಯಾಹ್ನ ಆಸ್ಪತ್ರೆಗೆ ಹೋಗದುದರಿಂದ ಇಲ್ಲೇ ಉಳಿದೆ."

"ಓ....!"

ಕಮಲೇಶ್ ಅವರಿಂದ ಕ್ಷಮೆ ಕೇಳಿಕೊಂಡು ಪ್ರಾತಃರ್ವಿಧಿಗಳನ್ನು ಮುಗಿಸಿ ಆಸ್ಪತ್ರೆಗೆ ಹೊರಟಳು. ಹಾದಿ ಕಳೆದು ಆಸ್ಪತ್ರೆಯ ಮೆಟ್ಟಿಲು ಹತ್ತುತಿದ್ದಂತೆ ಡಾ|| ಶರಣ್ ಎದುರಾದ.

"ಡಾಕ್ಟರ್, ಇಂದು ಡಾ|| ಚಂದ್ರಕಾಂತ್. ರಜೆ ತೆಗೆದುಕೊಂಡಿರುವುದರಿಂದ ಒಳ್ಳೆ ತೊಂದರೆಯಾಯಿತು. ತುಂಬ ನಿಕ್ರಾಣವಾದ ಆಪರೇಶನ್ ಕೇಸೊಂದಿದೆ. ಅವರೇ ಇದ್ದಿದ್ದರೆ ಚೆನ್ನಾಗಿತ್ತು."

ಮೂರು ದಿನಗಳ ಹಿಂದೆ ಚಂದ್ರಕಾಂತ್ ರಜೆ ತೆಗೆದುಕೊಂಡಿದ್ದನಾದ್ದರಿಂದ ಪುನಃ ರಜೆ ತೆಗೆದುಕೊಂಡುದುದೇಕೆಂಬುದು ಅರ್ಥವಾಗಲಿಲ್ಲ. ಎರಡು ನಿಮಿಷ ಯೋಚಿಸಿ–"ಓ.... ಹಾಗೋ ?"

"ಈಗ ಏನು ಮಾಡುವುದೆಂಬ ಪೇಚಿಗೆ ಸಿಕ್ಕಿ ಬಿದ್ದಿದ್ದೇನೆ."

"ಡಾ|| ಚಕ್ರಪಾಣಿ ಇದ್ದಾರಷ್ಟೆ ?"

"ಇದ್ದಾರೆ."

"ಅವರಿದ್ದರೆ ಸಾಕು, ಏನೂ ಯೋಚಿಸಬೇಡ."

ಕಮಲೇಶ್ ಅಲ್ಲಿ ನಿಲ್ಲದೆ ತನ್ನ ಹಾದಿ ಹಿಡಿದಳು. ಶರಣ್ ಮಾತಾಡಲಿಲ್ಲ. ಸೌಂದರ್ಯ ತೃಷಿತಲೋಚನಗಳೆರಡೂ ಹಿಂಬಾಲಿಸಿದುವು. ಕಮಲೇಶ್ ರಿಜಿಸ್ಟರಿನಲ್ಲಿ ಸಹಿ ಹಾಕುವುದರೊಳಗಾಗಿ ಕಲಿಕೆಯ ಡಾಕ್ಟರುಗಳ ತಂಡ ಕೂಡಿ

ಕೊಂಡಿತು. ಅವರೊಂದಿಗೆ ವಾರ್ಡುಗಳ ಭೇಟಿ ಆರಂಭವಾಯಿತು. ಕಾರಣ ವಿಲ್ಲದೆ ಚಂದ್ರಕಾಂತ್ ರಜೆ ತೆಗೆದುಕೊಳ್ಳುವುದಿಲ್ಲವೆಂಬುದು ಗೊತ್ತು. ಮತ್ತೇಕೆ ರಜೆ ತೆಗೆದುಕೊಂಡರೆಂಬುದು ಮನವನ್ನು ಕೀಟದಂತೆ ಕೊರೆಯ ಹತ್ತಿತು. ಏನಾದರೂ ತೊಂದರೆಯಾಗಿರಬಹುದೇ ಎಂಬ ಯೋಚನೆಯೂ ಆಗಾಗ ಗೊಂದಲವೆಬ್ಬಿಸುತ್ತದೆ. ವಾರ್ಡುಗಳ ಭೇಟಿ ಮುಗಿಸಿದಾಗ ಹೊತ್ತು ಹನ್ನೊಂದರ ಸಮಯ. ಹೋಗಿ ಅಂದಿನ ಟಪ್ಪಾಲಿಗೆ ಕೈ ಹಚ್ಚುವುದರೊಳ ಗಾಗಿ ಬಾಗಿಲಲ್ಲಿ ಕಟ ಕಟ ಸದ್ದು ಕೇಳಿ ಬಂತು.

"Yes pLease!"

ಬಾಗಿಲನ್ನು ತಳ್ಳಿ ಒಳ ಬಂದವರು ಡಾ|| ಯಶಪಾಲ್. ಹಿರಿಯ ವೈದ್ಯ ರನ್ನು ನೋಡುತ್ತಲೂ ಎದ್ದು ನಿಂತು ಗೌರವಪೂರ್ವಕವಾಗಿ ಬರಮಾಡಿ ಕೊಂಡಳು. ಅವರ ಹಿಂದೆ ಅವರ ಮಗಳೂ ಆಗಮಿಸಿದಳು. ಅವಳ ನಸು ಕಂದು ಬಣ್ಣದ ಕಣ್ಣುಗಳಲ್ಲಿ ಚಂಚಲತೆ ತುಂಬಿದರೂ ಭಾವೋನ್ಮತ್ತವಾಗಿವೆ.

"ಇವಳಿಗೆ ಆಗಾಗ್ಗೆ ಹೊಟ್ಟೆ ನೋವು ಬರುತ್ತದೆ. ಏನಾಗಿದೆ ನೋಡಿ ಬಿಡಿ ಡಾಕ್ಟರ್!" ಎಂದರು ಯಶಪಾಲ್.

"ಬನ್ನಿ ನೋಡುವಾ." ಮುಖಮಂಡಲದಲ್ಲಿ ಮುಗುಳು ನಗೆ ಸೂಸಿ ನುಡಿದಳು ಕಮಲೇಶ್. ತನ್ನನ್ನು ಹಿಂಬಾಲಿಸಿದ ಆ ತರುಣಿಯ ಸಹಿತ ಒಳ ಕೊಠಡಿಗೆ ಹೋಗಿ ಪರೀಕ್ಷೆಗೆ ಕೈ ಹಚ್ಚಿ–"ಮದುವೆಯಾಗಿ ಎಷ್ಟು ವರ್ಷಗ ಳಾದುವು?"

"ನಾಲ್ಕು ವರ್ಷ"

"ಮಕ್ಕಳಿದ್ದಾರೆಯೆ?"

"ಇಲ್ಲ." ಎಂದಳು ವನಜಾ.

"ಈಗಿನ ದಂಪತಿಗಳಿಗೆ ನಾಲ್ಕು ದಿನ ಹಾಯಾಗಿರುವ ಮನಸ್ಸು ಅಲ್ಲವೆ?"

ಇಬ್ಬರ ಮುಖದಲ್ಲೂ ಮುಗುಳು ನಗೆ ಮೂಡಿತು.

ಪರೀಕ್ಷೆಯ ಫಲಿತಾಂಶ ಫೈಬ್ರಾಯಿಡ್ ಯೂಟ್ರೆಸ್ (FIBROID UTERUS)

"ಛೆಃ! ಛೆಃ! ಇನ್ನೂ ಚಿಕ್ಕವಯಸ್ಸು." ಚಿಂತಾಕುಲರಾಗಿ ನುಡಿದರು

ಡಾ|| ಯಶಪಾಲ್.

....ಈಶ್ವರೇಚ್ಛೆ !....

" ಎಳೆವಗುಸ್ಸಿನಲ್ಲಿ ಬರುವುದು ತುಂಬ ಅಪರೂಪ ಡಾಕ್ಟರ್....ಬೇಗನೆ ಆಪರೇಶನ್ ಮಾಡಿಸಿದರೆ ಉತ್ತಮ ಫಲಿತಾಂಶ ದೊರೆಯುಬಹುದು."

" ಹೌದು, ಮುಂದಿನ ವಾರವೇ ಮಾಡಿ ಬಿಡಿ. ಅದರ ಏರ್ಪಾಟು ಮಾಡುವೆ."

" ಆಗಲಿ, ಸರ್."

ಅವಳಿಗೆ ಸುಮಾರು ಇಪ್ಪತ್ತನಾಲ್ಕು ಇಪ್ಪತ್ತೈದು ವರ್ಷಗಳಿರಬಹುದು. ನಾಟ್ಯರಾಣಿಯಲ್ಲಿರಬಹುದಾದ ಠೀವಿ ಹುರುಪು ತುಂಟತನ ಮೊದಲಾದ ಪ್ರಧಾನ ಲಕ್ಷಣಗಳು ಅವಳಲ್ಲಿ ಕಾಣುತ್ತಿವೆ. ಬಣ್ಣ ನಸುಗಪ್ಪಾದರೂ ಮುಖ ಸಲ್ಲಕ್ಷಣವಾಗಿದೆ. ನಾಗರಿಕ ಜೀವನ ತಾರುಣ್ಯಕ್ಕೆ ಹುರುಪು ನೀಡಿರುವುದಷ್ಟೇ ಅಲ್ಲ, ಸ್ವತಂತ್ರವಾಗಿ ಆಲೋಚಿಸಬಲ್ಲ ಶಕ್ತಿಯನ್ನು ಸಹ ನೀಡಿದೆ.

ಮೂವರೂ ಸ್ಥಿತಿಗತಿಯ ಬಗ್ಗೆ ಮಾತನಾಡಿ ಆಪರೇಷನ್ನಿಗೆ ಒಳ ಪಡುವುದೆಂಬ ತೀರ್ಮಾನ ಕೈಕೊಂಡನಂತರ ಡಾಕ್ಟರು ಮಗಳೊಂದಿಗೆ ಹೊರ ಡಲಣಿಯಾದರು. ಕೊನೆಯ ಪ್ರಕರಣವಾಗಿ ಕಮಲೇಶ್ ಕರಗಳನ್ನು ಅನು ನಯದಿಂದ ಜೋಡಿಸಿದಳು.

ಮೇಜಿನ ಮೇಲಿದ್ದ ಟಪ್ಪಾಲಿನಲ್ಲಿ ಸಾಸಿರ ಸಾಸಿರ ಸಾಸಿರ ಸಾಸಿರ ಮೈಲಿಗಳಿಂದಾಚೆಯಿಂದಾಗಮಿಸಿದ ಹಸುರು ಪತ್ರವು ಮೊದಲು ಗಮನ ಸೆಳೆಯಿತು.

....ಆಧುನಿಕ ಜಗತ್ತಿನಲ್ಲಿ ಮಹಾವಿಜ್ಞಾನ ಸಂಪತ್ತು ದಿನೇ ದಿನೇ ತೀವ್ರಗತಿಯಲ್ಲಿ ವಿಸ್ತೃತಗೊಳ್ಳುತ್ತ ವಿಶ್ವವ್ಯಾಪ್ತಿಯಾಗುತ್ತಿದೆ. ಆದರೂ ನಿಮ್ಮ ಮುನ್ನಡೆ ಸಾಕಷ್ಟು ನಡೆಯಲಿಲ್ಲವೆಂಬುದು ಅತ್ಯಂತ ಶೋಚನೀಯ. ಪಾಶ್ಚಾತ್ಯ ರಾಷ್ಟ್ರಗಳ ಸರಿಸಮಾನ ಭಾರತವು ನಿಲ್ಲಬೇಕಾದರೆ ವಿಜ್ಞಾನದ ಮುನ್ನಡೆಗೆ ಭಾರತ ಪ್ರಧಾನ ಲಕ್ಷ್ಯ ನೀಡಲೇಬೇಕು.

ಇದುವರೆವಿಗೆ ಸಾಂಕ್ರಾಮಿಕ ರೋಗ ತಗುಲಿದ ಶರೀರ ಪ್ರಕೃತಿಯಲ್ಲಿ ಕ್ಷಣ ಕ್ಷಣಕ್ಕೂ ಉತ್ಪತ್ತಿಯಾಗುವ ಸೂಕ್ಷ್ಮಾತಿಸೂಕ್ಷ್ಮವಿಷಕ್ರಿಮಿಗಳು ಯಾವ ರೋಗಕ್ಕೆ ಸಂಬಂಧಪಟ್ಟವೆಯೆಂಬುದನು ತಕ್ಷಣ ಕಂಡುಕೊಳ್ಳುವುದೆಷ್ಟು

ಕಷ್ಟವಾಗಿತ್ತು ? ಎಂತಹ ಗಹನವಾದ ವಿಷಯವೂ ಸಹ....? ಇಂದು ನವೀನ ವಿಜ್ಞಾನ ಇದಕ್ಕೊಂದು ಅದ್ಭುತ ಯಂತ್ರ ಸಾಧನೆಯನ್ನು ಕಂಡು ಹಿಡಿದಿದೆ....

ಕೇವಲ ಒಂದೆರಡು ಗಂಟೆಗಳಲ್ಲಿ ಉತ್ಪತ್ತಿಯಾಗುವ ಲಕ್ಷೋಪಲಕ್ಷ ವಿಷಕ್ರಿಮಿಗಳು ಇವರ ಸಹಾಯದಿಂದ ಕೇವಲ ಕೆಲವು ನಿಮಿಷಗಳಲ್ಲಿ ಕಂಡು ಹಿಡಿಯಲ್ಪಟ್ಟು, ರೋಗಿಯನ್ನು ತಕ್ಷಣ ಚಿಕಿತ್ಸೆಗೆ ಗುರಿಮಾಡಿ ಬದುಕಿಸಲು ಸಾಧ್ಯವಿದೆ. ಅಲ್ಲದೆ ಈ ಅಂಟುರೋಗ ಹರಡದಂತೆಯೂ ತಡೆಗಟ್ಟಬಹುದು.

ವಿಜ್ಞಾನ ಕ್ಷೇತ್ರ....

ಡಾ|| ಕಮಲೇಶ್ ಪತ್ರವನ್ನು ಬದಿಗಿಟ್ಟು ಚಂದ್ರಕಾಂತನಿಗೆ ಟೆಲಿ ಫೋನಿನಲ್ಲಿ ಕರೆ ನೀಡಿದಳು. " ಡಾಕ್ಟರ್, ಏಕೆ ಡ್ಯೂಟಿಗೆ ಬರಲಿಲ್ಲ ? ಚೆನ್ನಾಗಿದ್ದೀರಷ್ಟೆ ?"

" ಏನೋ ಸಣ್ಣ ತೊಂದರೆ ...." ಎಂದವನೇ ಸಂಪರ್ಕವನ್ನು ತುಂಡು ಗಡಿದ. ಅವನ ರೀತಿ ಮನವನ್ನು ಮುಳ್ಳಿನಂತೆ ಚುಚ್ಚಿತು. ಹೃದಯವೀಣೆ ವಿಷಾದ ಗೀತೆಯನ್ನು ಹಾಡಿತು....ಒಳಗಣ್ಣುಗಳನ್ನು ವಿಶಾಲವಾಗಿ ತೆರೆದು ಜೀವನವನ್ನು ಪರಿಶೀಲನಾದೃಷ್ಟಿಯಿಂದ ನೋಡಿದರೆ ಸ್ತ್ರೀಪುರುಷರ ಕೃಷಿ ಯಿಂದ ಹೊರಹೊಮ್ಮುವ ಪ್ರಧಾನ ಅಂಶವಾದರೂ ಯಾವುದು ? ಬದುಕಿ ನೊಡನೆ ಹೊಂದಿಕೊಳ್ಳುವ ಸ್ನೇಹ ವಿಶ್ವಾಸಗಳನ್ನು ಬದಿಗಿಟ್ಟರೆ ಇನ್ನೇನಾ ದರೂ ಉಂಟೇ ? ಉದರಪೋಷಣೆಯ ರಂಗ ; ಬಾಳಿಗೊಂದು ನೆಲೆ ; ಗಳಿಕೆ ಗೊಂದು ಗತಿ ; ಈ ಜೀವನ ಇಷ್ಟೆ. ಪ್ರೇಮದ ಹೆಸರಿನಲ್ಲಿ ಆರಾಧಿಸುವ ಕಾಮ ನಿಜವಾದ ಅನುರಾಗಕ್ಕೆ ಕಿಚ್ಚು ಹಚ್ಚಿ ಮನಸ್ಸನ್ನು ಕಲುಷಿತಗೊಳಿಸು ತ್ತದೆ. ಆದರೂ....ಈ ಜೀವನವನ್ನು ಪ್ರೇಮಶೂನ್ಯವೆಂದು ಯಾರು ಹೇಳ ಬಲ್ಲರು ?

ಮನೆಯ ಹಾದಿ ಹಿಡಿದರೂ ಹಾದಿ ಸಾಗುತ್ತಿಲ್ಲ. ಅಪಘಾತಕ್ಕೀಡಾಗಿ ರೈಲನ್ನು ಕ್ರೇನಿನ ಸಹಾಯದಿಂದ ಹಳಿಯಮೇಲೆ ತಂದು ನಿಲ್ಲಿಸಿದಾಗ ಹರಿ ಯುವಂತಾಗಿದೆ ಸ್ಥಿತಿ. ಹತ್ತು ಮಾರು ಹೋಗುವುದರೊಳಗಾಗಿ ನಾಲ್ಕಾರು ಮಂದಿಯ ಮಧ್ಯೆ ಪರಿಚಿತ ಮುಖವೊಂದು ಕಾಣಿಸಿದಂತಾಯಿತು. ಯಾರಿರ ಬಹುದೆಂದು ನೋಟ ಹೊರಳಿಸಿದರೆ ಸಕ್ಕೂ. ಅವಳು ಮುಖದಲ್ಲಿ ಎಳೆ ನಗು ವನ್ನು ಸೂಸುತ್ತಾ ಗುಂಪಿನ ಮಧ್ಯದಿಂದ ಹೊರ ಬಿದ್ದಳು.

"ಸಕ್ಕೂ....!" ಅನುರಾಗಪೂರ್ಣವಾಗಿ ಕೈಯನ್ನು ಅದುಮಿ ಹಿಡಿದಳು, ಕಮಲೇಶ್.

"ಕಮಲೇಶ್ !"

"ಸ್ವಲ್ಪ ಸಣ್ಣಗಾಗಿದ್ದಿ. ನೀನು ಅಗತ್ಯವಾಗಿ ಮೈ ಕರಗಿಸಲೂ ಬೇಕಿತ್ತು. ಒಳ್ಳೆಯದಾಯಿತು."

ಸಕ್ಕೂ ತನ್ನ ಸಂಸಾರದ ಪೂರ್ಣ ಪರಿಚಯ ಮಾಡಿಸಿದಳು. ಐವರು ಮಕ್ಕಳು, ಪ್ರೌಢವಯಸ್ಕನಾದ ಪತಿ. ಕುತೂಹಲದಿಂದ ಎಲ್ಲರನ್ನೂ ಪೂರ್ಣ ಲಕ್ಷ್ಯವಿಟ್ಟು ನೋಡಿದಾಗ ಸಕ್ಕೂ ಔದಾರ್ಯಕ್ಕೆ ಲಕ್ಷ್ಯವೇ ಇಲ್ಲ ಎನ್ನಿಸಿತು. ಪ್ರಾಮುಖ್ಯವಾಗಿ ಮನೋಗತವಾದ ವಿಷಯವೆಂದರೆ ಸದೃಢಕಾಯನಾದ ಪತಿ ಮತ್ತು ಮಕ್ಕಳು....ಹೋಗಲಿ, ಭಗವಂತ ಅಷ್ಟಾದರೂ ದಯಪಾಲಿಸಿದ್ದಾನಲ್ಲ ಅಂತಹ ಆರೋಗ್ಯವಿಲ್ಲದಿದ್ದರೆ ಅವಳಾದರೂ ಏನು ಮಾಡಬೇಕಿತ್ತು?

"ಎಂದಾದರೂ ಬಿಡುವು ಮಾಡಿಕೊಂಡು ಬಾ ಸಕ್ಕೂ."

"ಹೇಗಿದ್ದರೂ ನಿನ್ನ ಬಳಿಗೆ ಬರಲೇಬೇಕಲ್ಲ ?"

"ಓ ! ಆಗಲೇ ಸಂಪಾದಿಸಿದ್ದೀಯೇನು ?"

ಸಕ್ಕೂ ಮುಗುಳು ನಕ್ಕಳು. ಪತಿಯ ಮುಖ ಹೂವಿನಂತರಳಿತು.

ನವದಂಪತಿಗಳಿಗೆ ಅಭಿನಂದಿಸಿ ಕಮಲೇಶ್ ಹೊರಟಳು. ತಾಯಿಯೊಂದಿಗೆ ಉಂಡು ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳುವುದರೊಳಗಾಗಿ ರೋಗಿಗಳ ಪ್ರವಾಹ ಹರಿಯಲಾರಂಭಿಸಿತು. ಅವ್ಯಾಹತ ಪರೀಕ್ಷೆ-ಚಿಕಿತ್ಸೆ ನಡೆಯುತ್ತಿದ್ದಂತೆ ಟೆಲಿಫೋನು ಟಂಟಣಿನಾದಗೈದು ಕರೆ ನೀಡಿತು. ಕಮಲೇಶ್ ರಿಸೀವರನ್ನು ಕೈಗೆತ್ತಿಕೊಂಡಳು. ಆ ಕಡೆಯಿಂದ ಡಾ|| ಶುದ್ಧೋಧನರ ದನಿ ಮೊಳಗಿತು.

"ಡಾಕ್ಟರ್, ದಯವಿಟ್ಟು ಕ್ಷಮಿಸಿರಿ."

"ಏನು ? ಅಂತಾದ್ದೇನು ?"

"ಡಾ|| ಚಂದ್ರಕಾಂತ್ ಅಲರ್ಜಿ ಆಗಿ ಇಲ್ಲಿ ಅಡ್ಮಿಟ್ಟಾಗಿದ್ದಾರೆ. ಗಾಬರಿಯೇನೂ ಇಲ್ಲ. ನಿಮ್ಮ ಕೆಲಸವಾದ ನಂತರ ನಿಧಾನವಾಗಿ ಬಂದು ನೋಡಿರಿ."

"ಹೇಗಾಯಿತು ?" ಕಮಲೇಶ್ ಉದ್ವಿಗ್ನಳಾಗಿ ಪ್ರಶ್ನಿಸಿದಳು.

" ತಲೆ ಬಾಚಿಕೊಳ್ಳುವಾಗ ಹೊಸ ಬಾಚಣಿಗೆ ತಲೆಗೆ ತಾಗಿತಂತೆ ಅಷ್ಟೆ."

" ಬಂದು ನೋಡುವೆ."

ಕಮಲೇಶ್ ಕಳೆದುಳಿದ ಕೆಲಸವನ್ನು ಬೇಗನೆ ಮುಗಿಸಿ ಅವಸರವಸರವಾಗಿ ಆಸ್ಪತ್ರೆಗೆ ಹೊರಡುವಾಗ ಸ್ವರ್ಣಮಾಲಿನಿಯು ಚಹವನ್ನು ತಂದು ಮುಂದಿಟ್ಟು " ಇದನ್ನೂ ಸಹ ಮರೆತು ಬಿಟ್ಟೆ." ಎಂದಳು ಆತಂಕಪೂರ್ಣ ಧನಿಯಲ್ಲಿ.

" ಓ....ಬಹುಶಃ ಹಾದಿಯಲ್ಲಿ ಜ್ಞಾಪಿಸಿಕೊಳ್ಳುತ್ತಿದ್ದೆ !"

ಆ ಕರ್ಮಚಾರಿಣಿ ಚಹವನ್ನು ಹೀರಿ ಏಕಾಂಗಿಯಾಗಿ ಹೊರಹೊರಟಳು. ಸದ್ದು ಗದ್ದಲಗಳಿಂದ ಕೂಡಿದ ಆ ರಸ್ತೆ ದಿನವೂ ನಡೆಯುತಿದ್ದ ಹಾದಿಯಾದರೂ ಇಂದು ತನ್ನ ಏಕಾಂತತೆ ಮನೋ ದೌರ್ಬಲ್ಯಕ್ಕೆ ಇಂಬು ಕೊಡುತ್ತಿದೆ. ಅನುದಿನವೂ ತಾನು ಎದುರಿಸಬೇಕಾದ ಕಷ್ಟಸುಖಗಳೇನಿದ್ದರೂ ಸಹ, ತಾನು ಮನಃಪೂರ್ವಕವಾಗಿ ಸ್ವೀಕರಿಸಿದ ಏಕಾಂತ ದುಃಖ ಹೃದಯ ವಿಹೀನತೆಯನ್ನು ವ್ಯಕ್ತಪಡಿಸುತ್ತದೆ. ದೈಹಿಕ ಕ್ರಿಯೆಗಳು ನಿಶ್ಶಕ್ತಿಯಿಂದ ನಡೆಯಲಾರದೆ ನಡೆಯುತ್ತಿರುವಂತೆ ಭಾಸವಾಯಿತು....ದೀರ್ಘನಿಶ್ವಾಸಗಳು ಮಂದ ಪವನನ ಹಿಂದೆ ತೇಲಿಹೋದುವು.

" ಈ ಜಗತ್ತು ನಿನಗಾಗಿ ಮಾತ್ರವಲ್ಲ...." ಎಂದು ಯಾರೋ ಕೂಗಿ ಹೇಳಿದಂತಾಗಿ ನೋಟ ಬೃಹತ್ ಮಾತೃಭೂಮಿಯ ಕಡೆ ಹರಿದಾಡಿತು. ಯಾರ ದಿವ್ಯಚರಣಗಳಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡು ಮುಂದೆ ಮುಂದೆ ಸಾಗುತ್ತಿರುವಳೋ ಆ ಶ್ರೀಚರಣಗಳೇ ತನ್ನನ್ನು ಕಷ್ಟ ಪರಿಸ್ಥಿತಿಯಲ್ಲೂ ಸಹ ಸೋಲದಂತೆ ಕರ್ಮಯೋಗಿಯನ್ನಾಗಿ ಮಾಡಿವೆ. ಜೀವನ ಮಾರ್ಗಯೋಗದಲ್ಲೂ ಸಹ ಸಹಭಾಗಿಯನ್ನಾಗಿಸಿವೆ. ಪತಿಗಾಗಿ ಜೀವತೆತ್ತ ಚೇತನಾ, ವಂಶೋದ್ಧಾರಕ ಮಗುವಿಗಾಗಿ ಪ್ರಾಣ ತೆತ್ತ ಚಂಪಾ ಇವರ ಹಾದಿಯಲ್ಲಿ ದಿಟ್ಟ ಹೆಜ್ಜೆಯನ್ನಿಡಲು ಶಕ್ತಿಯನ್ನು ಸಹ ನೀಡುತ್ತಿವೆ....ಅಂತಲೇ ಸಸ್ಯ ಶ್ಯಾಮಲಳಾದ ಮಾತೃ ಭೂಮಿಯ ದಿವ್ಯ ಸುಂದರ ಶ್ರೀಚರಣಗಳಿಗೆ ಮನದಲ್ಲೇ ನಮಿಸಿದಳು....ನಮೋನ್ನಮಃ ! ನಮೋನ್ನಮಃ !!

ಹಾದಿ ಹೇಗೆ ಕಳೆಯಿತೋ ಅದರ ಅರಿವು ಸಹ ಮೂಡಲಿಲ್ಲ. ಆಸ್ಪ

ತ್ರೆಯ ಸೆಂಟ್ರಲ್ ಹಾಲ್ ದಾಟಿ ಕಾರಿಡಾರಿಗೆ ಹೆಜ್ಜೆಯಿಟ್ಟಾಗ ಚಂದ್ರಕಾಂತ್ ಎಲ್ಲಿದ್ದಾರೆ ಎಂಬುದನ್ನು ಕೇಳಿ ತಿಳಿದುಕೊಳ್ಳದೆ ತಪ್ಪು ಮಾಡಿದ ವಿಚಾರ ಗಮನಕ್ಕೆ ಬಂತು. ಬಹುಶಃ ಅವರ ಡ್ಯೂಟಿ ರೂಮಿನಲ್ಲಿರಬಹುದು. ಸೀದಾ ಆಫೀಸಿಗೆ ಹೋಗಿ ನೋಡಿದರೆ ತಿಳಿಯುತ್ತದೆ. ಎಂಬ ಯೋಚನೆಯಿಂದ ಆ ಕಡೆ ಹೆಜ್ಜೆ ಇಟ್ಟಳು.

ಘಣ್! ಘಣಾರ್! ಘಣ್! ಘಣಾರ್ ! ಘಣ್ ! ಘಣಾರ್ !

ರಾಣೀ ಭವತಾರಿಣಿಯ ತುರ್ತು ಕರೆ !

ಕಮಲೇಶ್ ನಿಂತಲ್ಲೇ ನಿಂತು ಕತ್ತೆತ್ತಿ ಕೆಂಪು ದೀಪಗಳತ್ತ ನೋಡಿದಳು. ಮೂರನೆಯ ಸ್ಪೆಷಲ್ ವಾರ್ಡ್ ! ಅದು ಡಾ|| ಶುದ್ಧೋಧನರ ಅಫೀಸಿನ ಬಳಿಯಲ್ಲಿಯೇ ಇದೆ ಅವರೇ ಸುದ್ದಿ ಕೊಟ್ಟವರು. ಚಂದ್ರಕಾಂತರಿಗೇನಾದರೂ ಆಗಿರಬಹುದೇ ?....ಆ ಚಿಂತೆ ಮೂಡಿದೊಡನೆಯೇ ಯೋಚಿಸುವ ವ್ಯವಧಾನವೂ ಸಹ ಉಳಿಯಲಿಲ್ಲ. ಅಲ್ಲದ ಸಲ್ಲದ ವಿಷಯಗಳನ್ನು ತುಂಬಿ ಭಯ ಭೀತಿಯ ಕೀಟ ಮನೋಮಂದಿರವನ್ನು ಕೊರೆಯ ತೊಡಗಿತು.... ಅಲರ್ಜಿಯಿಂದ ಕೆಲವೊಮ್ಮೆ ಕಠಿಣ ಅಪಾಯವಿದೆ. ಏನುಗತಿ ?

ಕಮಲೇಶ್ ಧಾವಿಸಿದಳು.

ಅವಳಂತೆಯೇ ಅನೇಕರು ತುರ್ತುಕರೆಗೆ ಓಗೊಟ್ಟಿದ್ದಾರೆ. ಹತ್ತು ನಿಮಿಷಗಳ ಹಾದಿಯನ್ನು ಐದು ನಿಮಿಷಗಳಲ್ಲಿ ಕ್ರಮಿಸಿ ಒಳ ಹೋಗಿ ನೋಡಿದರೆ ವಯೋವೃದ್ಧ ಅತಿಸಾರದಿಂದ ನರಳುತಿದ್ದು ಸ್ಥಿತಿ ವಿಪನ್ನಾವಸ್ಥೆಗೇರಿತ್ತು. ದಡದಡನೆ ಓಡಿ ಬಂದಿದ್ದ ಕಮಲೇಶಳಿಗೆ ಅಲ್ಲೇ ಕುಳಿತುಕೊಳ್ಳುವಂತಾಯಿತು. ಆದರೆ ಕುಳಿತುಕೊಳ್ಳಲು ಬಿಡುವೆಲ್ಲಿ ? ಇತರ ಡಾಕ್ಟರುಗಳು ರೋಗಿಯ ತುರ್ತು ಚಿಕಿತ್ಸೆ ಕೈಕೊಂಡುದರಿಂದ ಕಮಲೇಶ್ ಡಾ|| ಚಂದ್ರಕಾಂತನ ಆಫೀಸಿನ ಕಡೆ ಹೊರಟಳು. ಅದಿರುವುದು ಮೈನ್ ಬಿಲ್ಡಿಂಗಿನಲ್ಲಿ. ಆಪರೇಶನ್ ಥಿಯೇಟರಿನ ಪುರಾಸ್ಕೃತ ಬಲಭಾಗ. ಐದನೆಯ ಯೂನಿಟ್ ಇನ್ನೂ ಆರೇಳು ನಿಮಿಷದ ಹಾದಿ ...ಯೋಚಿಸಿದೊಡನೆಯೇ ಇನ್ನಷ್ಟು ಉದ್ವಿಗ್ನತೆ ಮೂಡಿತು. ಕಾಲುಗಳು ಆವೇಶವೀಯದಿದ್ದರೂ ಚುರುಕುಗೊಂಡುವು. ನೋಡಿದರೆ ಆಫೀಸಿನ ಕದ ಮುಚ್ಚಿದೆ. ಅಲ್ಲಿ ಯಾರೂ ಇರಲಿಲ್ಲ. ಇನ್ನು ಶುದ್ಧೋಧನರ ಆಫೀಸಿಗೆ ಹೋಗುವುದರ ಹೊರತು ಗತ್ಯಂತರವಿಲ್ಲ. ಮತ್ತೆ

ಆ ಕಡೆಯು ಹಾದಿ ಹಿಡಿದುವು ಹೆಜ್ಜೆಗಳು. ಆದರೆ ಅವರ ಆಫೀಸೂ ಮುಚ್ಚಿರ ಬೇಕೆ ? ಏನುಗತಿ ? ಅಭಿಶಸ್ತ ಹೆಜ್ಜೆಗಳ ಗತಿ ಮತ್ತೆ ತೀವ್ರಗೊಂಡಿತು.... ಇನ್ನೂ....ಇನ್ನೂ....

ಅದೇ ಸಮಯದಲ್ಲಿ ಹೆಜ್ಜೆಗಳ ಪಟ ಪಟಾತ್ಕಾರ ಗಮನವನ್ನು ಸೆಳೆಯಿತು. ಕಣ್ಣುಗಳು ಹೊರಳುವುದರೊಳಗಾಗಿ ಪದ್ಮಾ ಕಮಲಾನಿ–" ಹಲೋ ಡಾಕ್ಟರ್ !" ಎಂದಳು ನಲ್ಮೆಯ ದನಿಯಲ್ಲಿ.

" ಹಲೋ....!"

" ಏನಮ್ಮಾ ಬೆಪ್ಪರಂತೆ ನಿಂತೆ ? ಮುಖವೇಕೆ ಬಾಡಿದೆ ?"

" ಬಾಡಿದೆ....?"

" ಮತ್ತಿನ್ನೇನು ?....ಎಲ್ಲಿಗೆ ಹೊರಟಿದ್ದಿ ?"

ಇದ್ದ ವಿಷಯವನ್ನು ಮುಂದಿಟ್ಟೊಡನೆ ಅವಳು ಹಸನಾದ ಹೂ ನಗೆಯನ್ನು ಬೀರಿ ನುಡಿದಳು,

" ಈಗಷ್ಟೆ ಚಂದ್ರಕಾಂತರನ್ನು ನೋಡಿ ಬಂದೆ. ಅವರು ಸೆಂಟ್ರಲ್ ಹಾಲ್‌ನಲ್ಲಿ ಇತರ ಡಾಕ್ಟರುಗಳೊಂದಿಗೆ ಹರಟೆ ಹೊಡೆದುಕೊಂಡಿದ್ದಾರೆ. ನಿನ್ನನ್ನು ನೋಡಿದರೆ, ಸಪ್ಪೆಯಾಗಿದ್ದಿ."

ವಿಷಯ ತಿಳಿದು ಮುಖ ಹೂವಿನಂತರಳಿತು. ಚೆಂದುಟಿಗಳಲ್ಲಿ ಮುಗುಳು ನಗೆಯನ್ನು ಚೆಲ್ಲಿ ತನ್ನ ವ್ಯರ್ಥ ಅನ್ವೇಶಣೆಯನ್ನು ಬಣ್ಣಿಸಿ ಗೆಳತಿಯೊಡನೆ ನಗೆಯ ಸವಿಯನ್ನುಂಡಳು. ಅನಂತರ ಪದ್ಮಾ ಕಮಲಾನಿ-" ಅವರಿಗೆ ಹಾಗಾಗಿದ್ದರಿಂದಲೇ ಇಲ್ಲಿಗೆ ಬಂದರಂತೆ ಈಗ ಗುಣವಾಗಿ ಮನೆಗೆ ಹೊರಟಿದ್ದಾರೆ. ಬಹುಶಃ ನಿನಗಾಗಿಯೇ ಅಲ್ಲಿ ಕಾದಿದ್ದಾರೇನೋ."

" ಸರಿ ; ಅಲ್ಲಿಗೆ ಹೋಗುವೆ."

" ನಾನು ಹೊರಟಿರುವುದೂ ಸಹ ಅಲ್ಲಿಗೇನೆ. ನಡಿ ಹೋಗುವ."

ಇಬ್ಬರೂ ಕೈ ಕೈ ಹಿಡಿದು ಹೊರಟರು.

" ನಾಳೆ ಚೇತನಳ ಹುಟ್ಟು ಹಬ್ಬ. ಖಂಡಿತಾ ಬಾ ಪದ್ಮಾ" ಆತ್ಮೀಯ ಆಹ್ವಾನ ನೀಡಿದಳು ಕಮಲೇಶ್.

ನಿಶ್ಶಬ್ದವಾಗಿರುವ ಆ ಹಾದಿಯಲ್ಲಿ ಪಾದರಕ್ಷೆಗಳ ಸದ್ದು ವಿನಾ ಬೇರಾವ

ಶಬ್ದವೂ ಇರಲಿಲ್ಲ. ಮನಮೋಹಕವಾದ ನಿಶ್ಶಬ್ದ, ನಯನಾಕರ್ಷಿತವಾದ ಕಾರಿಡಾರು ಒಂದರೊಡನೊಂದು ಸ್ಪರ್ಧೆ ಹೂಡಿವೆ. ಹೂದೋಟದಿಂದ ನುಗ್ಗಿ ಬರುವ ತಂಗಾಳಿಯ ಸೊಬಗಿಗೆ ಮುಗ್ಧರಾಗಿ ಮುಂದಿಟ್ಟ ಹೆಜ್ಜೆ ಹೆಜ್ಜೆಗಳೂ ಒಮ್ಮನ-ಒಮ್ಮತಗಳಿಂದ ಸಮ್ಮಿಲನವಾಗಿ, ಉದ್ದೇಶ-ಸಾಧನೆಗಳ ಸಂಯುಕ್ತವಾಗಿ, ಮಾನವೀಯತೆಯ ಶ್ರೇಯಸ್ಸಿಗಾಗಿ, ಶೃತಿಲಯ ಬದ್ಧತೆಯಿಂದ ಅನುರಂಜಿತವಾಗಿ ಸಾಗುತ್ತಲೇ ಇವೆ.

ಹಾಗೆ ಅದೆಷ್ಟು ಹೊತ್ತು ಸಾಗಿದುವೋ....

ಅಧ್ಯಾಯ

೩೨

ಉದಯ ರವಿ ಮೂಡುವ ಮುನ್ನ ಹರಿದು ಬರುವ ಹೊಂಗಿರಣಗಳು ಮೂಡಣವೆಣ್ಣಿನ ಮೈಗೆ ಓಕುಳಿಯ ರೆಚಿವೆ....

ಚಂದ್ರಕಾಂತ್ ಮಕ್ಕಳನ   ನ್ನ ಮನೆಗೆ ಕರೆತರಲು ಉತ್ಸಾಹದಿಂದ ಹೋಗಿ ಅವರೊಪ್ಪದೆ ಅತ್ತು ಕ   ರಂಪಾಟವೆಬ್ಬಿಸಿದಾಗ ಸಿಡಿಲು ಬಡಿದವನಂತಾದ. ಎಷ್ಟೆಷ್ಟು ಮುದ್ದಿಸಿ ಪ್ರಯತ್ನಿಸಿದರೂ ಮಕ್ಕಳು ಮಣಿಯಲಿಲ್ಲ. ತಂದೆ ಮಕ್ಕಳ ತಿಕ್ಕಾಟದಲ್ಲಿ ಕಮಲೇಶಳ ಮೈ ಮರವಟ್ಟಂತಾಯಿತು. ಕಿಟಕಿಯ ಬಳಿ ನಿಂತು ಕೆಲವು ನಿಮಿಷ ಯೋಚನೆಗೀಡಾದಳು. ತಿಲಕ್ ಸ್ವರೂಪರಷ್ಟೇ ಅಲ್ಲ, ಚೇತನಾ ಸ್ವರ್ಣಮಾಲಿನಿಯರೂ ಅಳುತಿದ್ದಾರೆ. ಸೀತಮ್ಮ ಒಳಗಡೆ ರೋದಿಸುತಿದ್ದಾಳೆ. ಮನೆ ಗೋಳಿನ ಕಣಜವಾದರೂ ಇನ್ನೊಮ್ಮೆ ಹೇಳದೇನೇ ತನ್ನ ಮನೆಗೆ ಕರೆದೊಯ್ಯಬಹುದೆಂದು ತೀರ್ಮಾನಿಸಿ ಸಿಟ್ಟಿನಿಂದ ಆಸ್ಪತ್ರೆಯ ಹಾದಿ ಹಿಡಿದ. ಅಳುತಿದ್ದ ಮಕ್ಕಳನ್ನು ಸಂತೈಸಿ ಶಾಲೆಯಲ್ಲಿ ಬಿಟ್ಟು ಬಂದ ಕಮಲೇಶ್ ಹಾದಿಯಲ್ಲಿ ಕೂಡಿಕೊಂಡಳು. ಮುಂದಿನ ಹಾದಿ ಬಿಗುಮಾನದಿಂದ ಸಾಗಹತ್ತಿತು. ನಿಮಿಷ ನಿಮಿಷಗಳು ರುದ್ರ ಗಂಭೀರವಾಗಿ ಉರುಳುತ್ತಿವೆ.

ಚಂದ್ರಕಾಂತ್ ಸಿಟ್ಟು ರೋಷಗಳ ಗಣಿಯಾಗಿ ಮೌನ ಮುರಿದ "ಮಕ್ಕಳನ್ನು ದಾದಿಯರಿಗೆ ಒಪ್ಪಿಸುವುದು ಎಂತಹ ಘೋರ ಅಪರಾಧ? ಈಗಷ್ಟೇ ಅಲ್ಲ, ಮುಂದೆಯೂ ಅವರಿಗೆ ನಮ್ಮ ಪರಿಚಯವಿಲ್ಲದಿದ್ದರೆ ಆಶ್ಚರ್ಯವಿಲ್ಲ."

"ನೀವು ನಿಮ್ಮಲ್ಲಿ ಉಳಿದುದರಿಂದ ಮಕ್ಕಳಿಗೆ ಹೆಚ್ಚು ಬಳಕೆ ಇಲ್ಲವಾಯಿತು. ನೀವಿಲ್ಲೇ ಇದ್ದು ಬಿಡಿ. ಎಲ್ಲಾ ಸರಿ ಹೋಗುತ್ತದೆ."

"ನಾನು........ನಾನು ನಿಮ್ಮಲ್ಲಿಗೆ ಬರಬೇಕೆ?" ಚಂದ್ರಕಾಂತ್ ತುಟಿ ಕಚ್ಚಿದ.

ಆ ಕೋಪಜ್ವಾಲೆಯ ಮಹಾಕಿಡಿಯಿಂದ ಹೃದಯಪುಷ್ಪ ಸುಟ್ಟು

ಭಸ್ಮೀಭೂತವಾಯಿತು.

ಹೊತ್ತು ಮೌನಿಗಳ ವೇಶ ತಳೆದಿದೆ.

“ಹಾ !” ಎಂದು ಸುಯ್ಯಿತು ಎದೆಯ ಹಕ್ಕಿ.

“ಮಕ್ಕಳನ್ನು ಇಲ್ಲೇ ಕರೆತನ್ನಿ....”

“ಇಲ್ಲಿಗೆ ಕರೆ ತಂದರೆ ಯಾರು ನೋಡಿಕೊಳ್ಳುತ್ತಾರೆ ?”

“ಆ ದಾದಿಯನ್ನು ಬರಹೇಳಿದರಾಯಿತು.”

“ಆಕೆ ಒಪ್ಪುವುದಿಲ್ಲ. ಹೇಳಿ ನೋಡಿದ್ದಾಯಿತು.”

“ಇದೆಲ್ಲ ಕುಂಟು ನೆವ....”

ಆ ಮಾತುಕತೆಯನ್ನು ಹಾದಿಯಲ್ಲಿ ಮುಂದುವರಿಸಲು ಇಷ್ಟವಾಗಲಿಲ್ಲ. ರಸ್ತೆಯನ್ನು ಕಳೆದು ಆಸ್ಪತ್ರೆಯ ಆವರಣಕ್ಕೆ ಕಾಲಿಟ್ಟಾಗ ಸುಂದರ ಹೂದೋಟದಲ್ಲಿ ಹರಿದ ಸುಮನೋಹರವಾದ ಹಾದಿ ಮನವನ್ನು ಶಾಂತಿ ಸಮಾಧಾನಗಳ ಸೋಪಾನಕ್ಕೆ ಹಚ್ಚಿತು. ಕೆಲವೇ ಕೆಲವು ಕ್ಷಣಗಳು ಸುಖ ಲೋಲುಪ್ತಿಯಲ್ಲಿ ಮುಳುಗಿದ ಮನವನ್ನು ಕರ್ಣಪಟಲಗಳ ಮೇಲೆ ತಾಗಿದ ಕಟೂಕ್ತಿ ತಟ್ಟನೆ ಸೆಳೆದುಕೊಂಡಿತು....ಕಮಲೇಶ್ !

ಮಿಂಚಿನಂತಹ ಅರಳುಕಂಗಳ ನೋಟ ಕೇಳಿತು “ಏನು ?”

“ಈಚೆಗೆ ನಮಗೆ ಮಕ್ಕಳಾಗಲಿಲ್ಲ. ಅದಕ್ಕೂ ಸಹ ನೀವೇ ತಡೆ ಹಾಕಿದ್ದೀರಿ!” ತೀಕ್ಷ್ಣವಾದ ನೋಟ ಬೀರಿ, ತುದಿನಾಲಿಗೆಯಿಂದ ತುಟಿಗಳನ್ನು ಒರಸಿಕೊಂಡು “ನನ್ನ ಅನುಮತಿಯಿಲ್ಲದೆ ತಡೆ ಹಿಡಿಯಲು ನಿಮಗೆ ಯಾವ ಅಧಿಕಾರವೂ ಇಲ್ಲ!”

ಅವನ ಮುರುಕು ಸ್ವಭಾವ ತಿಳಿದಿದ್ದರೂ ಈ ರೀತಿ ಆದಾನೆಂದು ಭಾವಿಸದ ಕಮಲೇಶಳಿಗೆ ಮೈ ನವಿರೆದ್ದಿತು. ಈ ದುಃಖಭರಿತ ಜೀವನವನ್ನು ಉದ್ಧರಿಸಲು ಆಳವಾಗಿ ಚಿಂತಿಸುವುದರಲ್ಲಿರುವ ತೃಪ್ತಿ ಆತನೊಡನೆ ವಾಗ್ವಾದ ಹೂಡುವುದರಲ್ಲಿ ಖಂಡಿತ ಬರುವುದಿಲ್ಲ. ನೀತಿ ಧರ್ಮ ಪವಿತ್ರತೆಗಳ ಹೆಸರಿನಲ್ಲಿ ಹೆಂಗಳೆಯರನ್ನು ಅಜ್ಞಾನದ ಅಂಧಕಾರದಲ್ಲಿ ಅಡಗಿಸಿಟ್ಟು ಸ್ವಸುಖವನ್ನು ಹೊಂದಿಸಿಕೊಂಡ ಪುರುಷ ಜಾತಿಗೆ ತಿಳಿಯಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲ.

ನನಗೆ ರೆಕ್ಕೆಗಳಿದ್ದಿದ್ದರೆ ಈ ಕಳಂಕಪೂರ್ಣ ಜಗತ್ತಿನಿಂದ ಹಾರಿ ಹೋಗ

ಬಹುದಾಗಿತ್ತು. ಸಂಶಯ ಭೂತದ ಪರಮಹಿಂಸೆ, ಸ್ನೇಹ ಸೌಹಾರ್ದತೆಗಳ ದಾರಿದ್ರ್ಯತೆ, ಸಹಕಾರರಹಿತ ದಿನಚರಿ ಇವುಗಳ ಭಯಂಕರ ಜಂಝಾವಾತದಲ್ಲಿ ದೂರಗವ್ಯದ ಹಾದಿ ನಿಚ್ಚಳವಾಗಿ ಹೊಳೆಯುವುದೇ ಇಲ್ಲ. ಅಂದಮೇಲೆ ಈ ಜಗತ್ತಿನಿಂದ ಎಂದಾದರೂ ಹೋಗುವ ಬದಲು ಇಂದೇ ಹೋಗಬಾರದೇಕೆ? ಈ ಬಗೆಗೆಟ್ಟ ಮನಸ್ಸಿಗಿಷ್ಟು ಶಾಂತಿಯನ್ನಾದರೂ ಪಡೆಯ ಬಹುದಲ್ಲ....

ಮರುಕ್ಷಣದಲ್ಲಿ ನಾನಾ ರೋಗಿಗಳ ಸೀರಿ ಸೀಕಲಾದ ದೇಹಗಳು ಸ್ಮೃತಿ ಪಟಲದಮೇಲೆ ಫೇರಿ ನಡೆಸತೊಡಗಿದುವು. ಹಿಂದೆಯೇ ಮೂವರು ಮುದ್ದು ಮಕ್ಕಳು ಮಾ ನೇತೃತ್ವದಲ್ಲಿ ಸಾಗಿ ಬಂದರು. ತನ್ನ ಹಿರಿಯ ಹೊಣೆ ವಿಕೃತವಾಗಿ ನಕ್ಕು ಅಣಕಿಸಿತು ...ಚಿಂತಾಕ್ರಾಂತಳಾಗಿ ನೀಳವಾದ ನಿಟ್ಟುಸಿರು ಬಿಟ್ಟಳು. ಮಾನಸ ಮುರಳಿ ವಿಶಾದಗೀತೆಯನ್ನು ಶೋಕಪೂರ್ವಕವಾಗಿ ಹಾಡುತ್ತಲೇ ಇದೆ; ಹೆಜ್ಜೆಗಳು ಯಾಂತ್ರಿಕವಾಗಿ ಮುನ್ನಡೆಯುತ್ತಲೇ ಇವೆ; ಅನುದಿನವೂ ದಿನಚರಿ ಸದ್ದು ಗದ್ದಲವಿಲ್ಲದೆ ಸ್ಮಶಾನ ಕೈಂಕರ್ಯದೋಪಾದಿಯಲ್ಲಿ ನಡೆಯುವ ತೆರದಿ....

ಪಟ. ಪಟ. ಪಟ. ಪಟ.

ಹೆಜ್ಜೆಗಳ ಪಟಿಶ್ಕಾರ ಗಮನವನ್ನು ಸೆಳೆಯಿತು. ಮರುಘಳಿಗೆಯಲ್ಲಿ ಸನಿಹಕ್ಕೈತಂದ ಮದನಾಪುರ್ ವಿಜಯಾ ಜುಬೇದಾಬೇಗಂರವರು ಜೊತೆಗೂಡಿಕೊಂಡರು.

“ ಏಕೆ ಕಮಲೇಶ್ ? ಏನೋ ಒಂದು ಬಗೆಯಾಗಿದ್ದಿ. ಮೈ ಸರಿಯಾಗಿಲ್ಲವೇ ?”

“ ಏನಿಲ್ಲ ಚೆನ್ನಾಗೇ ಇರುವೆ.”

“ ನನಗೆ ಸ್ವಲ್ಪ ಸಂದೇಹ !” ತುಂಟನಗೆ ಬೀರಿದಳು ಜುಬೇದಾ.

“ ಏನದು ?” ಆಸಕ್ತಿಯಿಂದ ಕೇಳಿದಳು ವಿಜಯಾ. ಇಬ್ಬರ ಮುಖವನ್ನೂ ನಗುಮುಖದಿಂದ ನಿಟ್ಟಿಸಿದಳು ಕಮಲೇಶ್.

“ ಮತ್ತೆ ಸಿಹಿ !”

“ ಸರಿ, ಸರಿ....ನಿನಗೇನು ?” ಸಪ್ಪೆ ಮೋರೆಯಿಂದ ನುಡಿದಳು ಕಮಲೇಶ್, ಚಂದ್ರಕಾಂತ್ ನಡುವೆ ಬಾಯಿಹಾಕಿದ “ ಸಿಹಿ....? ಏಕಿ ಅಂದರೆ

ಪ್ರೀತಿ ?"

ಹಾಸ್ಯಪ್ರಧಾನ ರಸ ಮೊಳಕೆಯಲ್ಲಿಯೇ ಮುದುಡಿತು. ಮೂವರೂ ಪರಸ್ಪರ ಮುಖ ನೋಡಿಕೊಂಡರು. ಪುನಃ ಯಾರ ತುಟಿಗಳೂ ಬಿರಿಯಲಿಲ್ಲ. ಹೂದೋಟದ ಸುಂದರ ಹಾದಿಯನ್ನು ಕಳೆದು, ನೀರು ಚಿಮ್ಮುವ ಕಾರಂಜಿಯನ್ನು ಬಳಸಿ, ಒಳಹೊಕ್ಕು ವಾರ್ಡುಗಳ ಭೇಟಿಯಿಂದ ದಿನಚರಿಯನ್ನು ಆರಂಭಿಸಿದಳು.

ಎಷ್ಟೋ ಮಂದಿ ರೋಗಿಗಳ ಆಶಯ,

" ಡಾಕ್ಟರ್, ಮೊದಲ ಔಷಧವನ್ನು ನೀವೇ ಕೊಡಿ. ಅದೇ ನಮಗೆ ಅಮೃತ ಸಂಚಯನ."

" ನಿಮ್ಮ ಮುಖದರ್ಶನವಾದರೆ ಸಾಕು, ಅರ್ಧರೋಗ ಹರಿಯುತ್ತೆ.".

" ನೀವು ಬರುವುದನ್ನೇ ಕಾಯುತ್ತಿರುತ್ತೆ ಈ ಜೀವ. ನಿಮ್ಮ ಹಸ್ತಗುಣ ಅಪಾರ."

" ಸಾಕ್ಷಾತ್ ಲಕ್ಷ್ಮಿಯ ಅವತಾರ! ನೀವು ಮಾತಾಡಿದರೆ ನಕ್ಕರೆ ಅದೇ ಧನ್ವಂತರಿ."

ಎಲ್ಲರ ಹರಿಕೆಗೆ ಸಿಹಿ ತುಂಬಿದ ನಗೆಯೇ ಉತ್ತರ.

ವಾರ್ಡಿಂದ ವಾರ್ಡಿಗೆ ಹಾಸಿಗೆಯಿಂದ ಹಾಸಿಗೆಗೆ ಧಾಳಿಯಿಡುತ್ತಾ ಬಂದ ಕಮಲೇಶಳಿಗೆ ಹೊತ್ತು ಉರುಳಿದುದರ ಪರಿವೆಯೂ ಇರಲಿಲ್ಲ. ಮೂರನೆಯ ಮಂಚದ ಮೇಲೆ ಬಿಳಿಯ ಹೊದ್ದಿಕೆಯಡಿ " ಮೈ ಮುದುಡಿ ಮಲಗಿದ ಹೆಣ್ಣೊಂದು ಎದ್ದು ಕುಳಿತುಕೊಂಡಿತು. ಮುಪ್ಪು ಆವರಿಸಲು ವಯಸ್ಸೇ ಆಗಬೇಕೆಂಬ ಸಿದ್ಧಾಂತವನ್ನು ಪ್ರತಿಭಟಿಸುವಂತಿರುವ ಸುಕ್ಕುಸುಕ್ಕಾದ ಮುಖ, ಬೆಳ್ಳಿಯಂತೆ ಮಿನುಗುವ ನೆರೆಗೂದಲು. ಕಾಂತಿ ವಿಹೀನವಾದ ಕಣ್ಣುಗಳು....

" ನೀವಿಂದು ಮನೆಗೆ ಹೋಗಬಹುದು." ಡಿಸ್‌ಛಾರ್ಜ್ ಪತ್ರಕ್ಕೆ ಸಹಿ ಹಾಕಿದಳು ಕಮಲೇಶ್.

............"

" ನೀವು ಯಾವ ಯೋಚನೆಯನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳದಿದ್ದರೆ ನಿಮ್ಮ ಆರೋಗ್ಯ ಕ್ಷಿಪ್ರವಾಗಿ ಸುಧಾರಿಸುತ್ತದೆ."

ಜಯಮ್ಮ ಮಾತಾಡಲಿಲ್ಲ. ಕಣ್ಣುಗಳಲ್ಲಿ ಮಿನುಗಿದ ಹನಿ ಉತ್ತರ

ನೀಡಿತು.

"ನಿಮ್ಮ ಆರೋಗ್ಯ ನಿಮ್ಮ ಕೈಯ್ಯಲ್ಲಿದೆ. ಚಿಂತಿಸುತ್ತಾ ಮಾತ್ರೆ ನುಂಗಿದರೆ ಏನಾದೀತು ? ಮನದಲ್ಲಿ ಯಾವ ಭಯವನ್ನು ಇಟ್ಟುಕೊಳ್ಳದೆ ಇದ್ದರೆ ಎಲ್ಲಾ ಸರಿ ಹೋಗುತ್ತದೆ."

ಚಿಂತಾಕ್ರಾಂತಳಾಗಿ ಕುಳಿತಿದ್ದ ಜಯಮ್ಮ ಎರಡೂ ಕೈಗಳನ್ನು ಜೋಡಿಸಿಕೊಂಡು ಮೆಲ್ಲನೆ ಕೇಳಿಕೊಂಡಳು- "ದಯವಿಟ್ಟು ನನಗಿಲ್ಲಿ ಸೇವೆಮಾಡಲು ಅವಕಾಶ ಕಲ್ಪಿಸಿಕೊಟ್ಟರೆ ನಾನಿಲ್ಲೇ ಇದ್ದುಬಿಡುವೆ. ನನಗಿನು ಸಂಸಾರ ತಾಪತ್ರಯ ಬೇಡವೇ ಬೇಡ."

"ಹಾ ! ಹಾಗೆನ್ನಬಾರದು. ಮಕ್ಕಳಿದ್ದಾರೆ, ಯಜಮಾನರಿದ್ದಾರೆ. ಎಲ್ಲರನ್ನೂ ನೋಡಿಕೊಂಡು ಸುಖವಾಗಿರಿ"

ಜಯಮ್ಮ ಮರುನುಡಿಯಲಿಲ್ಲ. ಭಾವವಿಭಾವಗಳಿಂದ ಕಣ್ಣು ಮೂಗುಗಳಲ್ಲಿ ರಂಗು ಮೂಡಿತು.

"ಗಂಡ ಆಫೀಸರು ; ಕೈತುಂಬ ಸಂಬಳ ಬರುತ್ತೆ.... ಕಷ್ಟ ಸುಖಗಳು ಯಾರಿಗಿಲ್ಲ ? ಜೀವನಕ್ಕೆ ಎಂದೂ ಅಳುಕಬಾರದು."

"ಹೋಗುವೆ ಡಾಕ್ಟರ್....ಎಂದಿದ್ದರೂ ಹೋಗಬೇಕಲ್ಲ ?"

"ಎರಡುವಾರಕ್ಕೊಮ್ಮೆ ಬಂದು ತೋರಿಸಿಕೊಂಡು ಹೋಗಿರಿ."

ಜಯಮ್ಮ ಎದ್ದುನಿಂತು ಕರಗಳನ್ನು ಜೋಡಿಸಿದಳು. ಮ್ಲಾನವಾದ ಮುಖದಲ್ಲಿ ಕಿರುನಗುವೊಂದು ಮಿನುಗಿ ಮಾಯವಾಯಿತು. ಅವಳಿಗೆ ಧೈರ್ಯ ಹೇಳಿ ಅಲ್ಲಿಂದ ಕಾಲ್ತೆಗೆಯುತಿದ್ದಂತೆ ಜೀವನದ ಸಹಸ್ರ ಸಹಸ್ರ ಕಡು ದಾರುಣ ಚಿತ್ರಗಳು ಚಿತ್ತಭಿತ್ತಿಯಲ್ಲಿ ಸುಳಿಸುಳಿದಳಿದುವು. ಹೊಸ್ತಿಲು ದಾಟುತ್ತಲೂ ಬಳಿಯಲ್ಲಿ ಹೆಜ್ಜೆ ಹಾಕುತಿದ್ದ ಸೇವಿಕೆ-"ಜಯಮ್ಮನ ಮಕ್ಕಳಿಬ್ಬರೂ ಬುದ್ಧಿರಹಿತರು. ಮಿದುಳು ಸರಿಯಾಗಿ ಬೆಳೆಯಲಿಲ್ಲ. ಮುಂದೆ ಅವರ ಸ್ಥಿತಿ ಕಷ್ಟ.... ಆ ಚಿಂತೆಯನ್ನಷ್ಟು ಅವಳು ಮನಸ್ಸಿಗೆ ಹಚ್ಚಿಕೊಂಡಿದ್ದಾಳೆ. ಗಂಡ ತುಂಬ ಕುಡುಕನಂತೆ. ಅವನು ಅಲ್ಲಿ ಬಂದರೆ ಇವಳಿಗೆ ಇಲ್ಲಿ ನಡುಕ ಮೂಡುತ್ತದೆ."

"ಪಾಪ" ಒಂದೆರಡು ಕ್ಷಣ ಚಿಂತಿಸಿ ನುಡಿದಳು. ಕಮಲೇಶ್ "ಈ ಕಾರಣದಿಂದಲೇ ಅವಳು ಮನೆಗೆ ಹೋಗಲು ಇಷ್ಟ ಪಡುವುದಿಲ್ಲ...ಜೀವನ ಇಷ್ಟೊಂದು ನರಕಮಯವಾದರೆ ಬದುಕು ಬಹಳ ಕಷ್ಟ. ಅಂಥಾದ್ದರಲ್ಲೂ

ಹೆಣ್ಣು ಜೀವನಕ್ಕೆ ಅಂಟಿಕೊಳ್ಳುತ್ತಾಳೆ. ಅದೇ ಪುಣ್ಯ........"

ವಾರ್ಡುಗಳ ಭೇಟಿಯನ್ನು ಮುಗಿಸಿ ತನ್ನ ಆಫೀಸಿಗೆ ಹೋಗಿ ದೈನಂದಿನ ಕೆಲಸಕ್ಕೆ ಗಮನ ಕೊಟ್ಟಳು. ಕೆಲಸ ತೀವ್ರಗತಿಯಲ್ಲಿ ಸಾಗಿದರೂ ಯಾಂತ್ರಿಕ ವಾಗಿ ನಡೆದಂತೆ ಭಾಸವಾಯಿತು. ಮಾನಸಿಕ ಅವ್ಯವಸ್ಥೆ ಕ್ರಮವಿಹೀನ ಆಲೋಚನೆಗಳ ಮಧ್ಯೆ, ಹಠಾತ್ತಾಗಿ ಟೆಲಿಫೋನಿನ ಟಂಟಣಿನಾದ ಕರೆ ನೀಡಿತು. ರಿಸೀವರನ್ನು ಕೈಗೆತ್ತಿಕೊಳ್ಳುತ್ತಲೂ ಆ ಕಡೆಯಿಂದ ಮೇಟ್ರನ್ನಳ ಉದ್ವಿಗ್ನಪೂರ್ಣವಾದ ದನಿ ಕೇಳಿ ಬಂತು,

"ಡಾಕ್ಟರ್, ಈಗ ಡಿಸ್‌ಚಾರ್ಜ್ ಮಾಡಿದ 'ಜಯಮ್ಮ' ಪತ್ತೆಯೇ ಇಲ್ಲ. ಆಕೆಯ ಗಂಡ ಕರೆದೊಯ್ಯಲು ಬಂದ ಮೇಲೆ ನಮಗೆ ವಿಷಯ ತಿಳಿದು ಬಂತು."

"ಎಲ್ಲಾದರೂ ಇತರ ವಾರ್ಡುಗಳಿಗೆ ಹೋಗಿರಬಹುದೇ ನೋಡಿರಿ."

"ಎಲ್ಲಾ ಕಡೆ ನೋಡಿದ್ದಾಯ್ತು"

"ಮನೆಗೆ ಹೋಗಿರಬಹುದೇ ?"

"ಇಲ್ಲ ಡಾಕ್ಟರ್....ಅವಳ ಜೀವನ ಸುಖಕರವಾಗಿರಲಿಲ್ಲ. ಮನೆಗೆ ಹೋಗಲು ಇಷ್ಟಪಡದೆ ಎಲ್ಲಾದರೂ ಹೋಗಿರಬಹುದೇನೋ ಎನಿಸುತ್ತಿದೆ."

"ಹಾಗಿದ್ದರೆ ಪೋಲೀಸಿಗೆ ವರದಿ ಮಾಡುವುದೊಳ್ಳೆಯದು....ಈಗಲೇ ವರದಿ ಮಾಡಿಬಿಡಿ."

ಕಮಲೇಶ್ ರಿಸೀವರನ್ನು ಕೆಳಗಿಟ್ಟಳು. ಹೃದಯ ಬನದ ಪಕ್ಷಿ ಉಲಿಯಿತು,

'....ಜೀವನ ಯಜ್ಞದಲ್ಲಿ ಸ್ತ್ರೀ ಅತ್ಯಂತ ಮುಗ್ಧಪಶು. ಅವಳ ಬಾಳು ತನ್ನ ಸುತ್ತಮುತ್ತಣ ಆಲೋಚನಾರಹಿತ ಮಾನವ ಗುಂಪಿನ ಅಗತ್ಯ-ಅನಗತ್ಯಗಳನ್ನು ಪೂರೈಸುವುದರಲ್ಲಿಯೇ ಕಳೆಯುತ್ತದೆ. ಅಶೃಂಖಲ ನಾರೀಶ್ರೀ ಚರಣಗಳ ಪವಿತ್ರ ಪದವಿನ್ಯಾಸವಲ್ಲಿ ದಿಟ್ಟತೆಯನ್ನು ಕಾಣದ ಯಾವ ಜೀವನವೂ ಪ್ರಫುಲ್ಲವಾಗದು....ಭಾರತಶ್ರೀಯ ಶ್ರೇಯಸ್ಸು ಪ್ರಕಾಶಿತವಾಗದು....

ಜಯಮ್ಮನಿಗಾಗಿ ನಡೆದ ಶೋಧನೆ ವ್ಯರ್ಥವಾಯಿತು.

ಮರುದಿನ ಅರುಣೋದಯವಾದಾಗ ಬೃಹತ್ ಪೃಥ್ವಿಯ ಮೇಲೆ

ಅರುಣ ಕಿರಣಗಳ ಮಹಾ ಜ್ಯೋತಿರ್ಧಾರೆ ಹೊನ್ನಿನ ತೆರೆಯಂತೆ ಹರಿದಿತ್ತು. ಡಾ|| ಚಂದ್ರಕಾಂತ್ ದಂಪತಿಗಳು ಆಸ್ಪತ್ರೆಯನ್ನು ಸೇರಿದ ಮೇಲೆ ತಿಳಿದು ಬಂದ ಮೊದಲ ಸುದ್ದಿಯೆಂದರೆ ಹಿಂದಿನದಿನ 'ಡಿಸ್ ಛಾರ್ಜ್'.ಆದ ಜಯಮ್ಮ ಬಾವಿಗೆ ಹಾರಿ ಆತ್ಮಹತ್ಯ ಮಾಡಿಕೊಂಡದ್ದು.

ಛೇ !........

ಅವಳ ಕೊನೆಯ ಬೇಡಿಕೆ ಕಿವಿಯಲ್ಲಿ ದುಂಬಿಯ ಮೊರೆತದಂತೆ ಮರ್ಮರಿಸಿತು "ದಯವಿಟ್ಟು ನನಗಿಲ್ಲಿ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಟ್ಟರೆ ನಾನಿಲ್ಲೇ ಇದ್ದು ಬಿಡುವೆ. ನನಗಿನ್ನು ಸಂಸಾರ ತಾಪತ್ರಯ ಬೇಡವೇಬೇಡ."

ಹಾಗೊಂದು ವೇಳೆ ಏನಾದರೊಂದು ತನ್ನಿಂದ ಸಹಾಯ ಮಾಡಲು ಸಾಧ್ಯವಾಗಿದ್ದರೆ ಅವಳು ಬದುಕುತಿದ್ದಳೇನೋ. ಛೀ ! ಎಂತಹ ಅನ್ಯಾಯವಾಯಿತು... ಕಮಲೇಶ್ ಮೆಲ್ಲನೆ ನಿಟ್ಟುಸಿರು ಬಿಟ್ಟಳು. ಸುತ್ತುಮುತ್ತೂ ಜೀವನದ ವಿಕೃತರೂಪ ಹಲ್ಕಿರಿದು ಅಣಕಿಸುತ್ತಿದೆ....ಆಕೆಯ ಸಿಂಧೂರ ಯುಕ್ತ ಮ್ಲಾನವದನ ಅಕ್ಷಿಪಟಲದ ಮೇಲೆ ಸುಳಿಸುಳಿದಳಿದಾಗ ಅವಯವಗಳು ನಿಷ್ಕ್ರಿಯೆಯಾದಂತೆ ಭಾಸವಾಯಿತು. ಜೀವನಕಾಂತಾರದ ಕಟುಸತ್ಯತೆಯಿಂದ--ನಾರೀ ಜನ್ಮದ ಅಸಾರ್ಥಕತೆಯಿಂದ ಮಂದ ಮಂದ ಆಲೋಚನಾ ತರಂಗಗಳು ಒಮ್ಮಿಂದೊಮ್ಮೆಲೇ ತೀವ್ರವಾಗಿ ತರಂಗಿತವಾಗತೊಡಗಿವೆ. ಶರೀರದ ಹುರುಪು ತಗ್ಗಿ ಕೆಲಸ ಮಾಡುವ ಉತ್ಸುಕತೆಯೂ ಸಹ ತೋರದು.

ಈಗಲೀಗ ಇನ್ನೊಂದು 'ಡಿಸ್ ಛಾರ್ಜ್' ಪತ್ರಕ್ಕೆ ಸಹಿ ಹಾಕುವುದಿದೆ. ಗರ್ಭಿಣಿಯಾದ ಮಾಲತೀ ಕರ್ವೆ ಒಂದು ವಾರದಿಂದ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆಯುತಿದ್ದು ಇಂದು ಮನೆಗೆ ಹಿಂದಿರುಗಲಿದ್ದಾಳೆ. ಅವಳು ಒಂದು ವಾರ ಆಸ್ಪತ್ರೆಯಲ್ಲಿರಬೇಕಾದರೆ ಅದೆಷ್ಟು ಕಷ್ಟ ಪಟ್ಟಿದ್ದಳೋ.... ಜೀವನ ಜ್ಯೋತಿಯನ್ನು ಆತ್ಮ ಪ್ರತಿಭೆಯ ತೈಲದಿಂದ ನವೋಜ್ವಲಗೊಳಿಸುತ್ತ ದೂರಗಮ್ಯದೆಡೆಗೆ ಸಾಗಿ ಹೋಗುವ ಆ ಆದರ್ಶ ದಂಪತಿಗಳ ಹಾಗೆ ಎಷ್ಟು ಮಂದಿ ಈ ಅಖಂಡ ಭಾರತದಲ್ಲಿರುವರೋ....ಹೀಗೆ ಎಲ್ಲಾ ಸ್ತ್ರೀಪುರುಷರೂ ಆದರ್ಶದ ಮಹಾಕ್ರಾಂತಿಗೆ ಓಗೊಟ್ಟು ಟೊಂಕಕಟ್ಟಿದಂದು ಜೀವನ ಯಜ್ಞಕುಂಡದಲ್ಲಿ ಸಾಮಾನ್ಯ ಸ್ತ್ರೀಯೂ ಸಹ 'ಸೀತಾದೇವಿ' ಆಗಳೇ....

ಕಮಲೇಶ್ ಮನದಲ್ಲೆಯೇ ತರ್ಕಿಸಿಕೊಂಡಳು.

ವಾರ್ಡಿಗೆ ಕಾಲಿಟ್ಟಾಗ ಕುಳಿತಿದ್ದ ಚಿತ್ರಸೇನ ಎದ್ದು ನಿಂತು ನಗು ಮುಖದಿಂದ ಬಿತ್ತರಿಸಿದ " ಈಗಲೇ ಡಿಸ್‌ಛಾರ್ಜ್ ಮಾಡಿ ಬಿಡಿ ಡಾಕ್ಟರ್. ಇಲ್ಲದೆ ಇದ್ದಲ್ಲಿ ಮಾಲತಿಯೊಂದಿಗೆ ನನಗೂ ಸಹ ಆಸ್ಪತ್ರೆಯ ವಾಸ ತಪ್ಪು ವಂತಿಲ್ಲ."

ಮೂವರ ಮುಖದಲ್ಲೂ ಮಂದಹಾಸ ಮಿನುಗಿತು.

ಕಮಲೇಶ್ ಅವಳನ್ನು ಡಿಸ್‌ಛಾರ್ಜ್ ಮಾಡಿದ ನಂತರ ತನ್ನ ದಿನಚರಿ ಯನ್ನು ಆರಂಭಿಸಿದಳು. ಅಂದಿನ ಮೊದಲ ಆಪರೇಶನ್ ಡಾ|| ಯಶಪಾಲರ ಸುಕುಮಾರ್ತೆ ವನಜಳದ್ದು. ಪುಕ್ಕಲು ಎದೆಯ ಮಗಳಿಗೆ ಧೈರ್ಯ ತುಂಬಲು ಅಂದಿನಿಂದಲೂ ಡಾ|| ಯಶಪಾಲ್ ಮಗಳ ಬಳಿ ಕಾದಿದ್ದಾರೆ. ಪಾಪ, ನನ್ನಿಂದಾಗಿ ಅವರಿಗೆ ತಡವಾಗಬಾರದು....ಕಮಲೇಶ್ ಬೇಗಬೇಗನೆ ಹೆಜ್ಜೆ ಹಾಕಿದಳು.

ಆಪರೇಶನ್ ಥಿಯೇಟರಿಗೆ ಹೆಜ್ಜೆಯಿಟ್ಟಾಗ ಡಾ|| ಯಶಪಾಲ್ ಎದು ರಾದರು, ಕರಗಳನ್ನು ಜೋಡಿಸಿದಳು ಕಮಲೇಶ್ " ಪ್ರಣಾಮ್ ಸರ್ !"

" ಪ್ರಣಾಮ್ ಡಾಕ್ಟರ್ !"

ಕೆಲವೇ ಕೆಲವು ಕ್ಷಣಗಳೊಳಗಾಗಿ ಗಾಲಿ ಕುರ್ಚಿಯಮೇಲೆ ವನಜಾ ಆಗಮಿಸಿದಳು. ಮೈ ಸಿಡಿದೊಡೆಯುವಷ್ಟು ಭಯ ಭೀತಿ ದುಃಖಗಳ ಗಣಿ ಯಾದ ಅವಳಿಗೆ ಧೈರ್ಯ ತುಂಬುವುದೂ ಸಹ ಆಪರೇಶನ್ನಿನಷ್ಟೇ ಶ್ರಮ ವಾಯಿತು. ಡಾ|| ಶರಣ್ ಕತ್ತರಿಯ ಸಹಿತ ಮಗ್ಗುಲಲ್ಲಿ ಸಿದ್ಧನಾಗಿದ್ದ. ಡಾ|| ಯಶಪಾಲ್ ಮಗಳ ಬಳಿ ಕಾದಿದ್ದರು. ಡಾ|| ಚಂದ್ರಕಾಂತನ ಕೈಗ ಳೊಂದು ರೀತಿಯಲ್ಲಿ ಕಾರ್ಯನಿರತವಾಗಿದ್ದರೆ ಮನಸ್ಸು ಇನ್ನೊಂದು ರೀತಿಯಲ್ಲಿ ಕಾರಾಗಾರವಾಗಿತ್ತು. ಒಮ್ಮೆ ಹುಬ್ಬೆತ್ತಿ ಅವನ ಕಡೆ ನಿಟ್ಟಿಸಿದ ಕಮಲೇಶ ಳಿಗೆ ಮತ್ತೊಮ್ಮೆ ಆಕಡೆ ದಿಟ್ಟಿಯನ್ನು ಹೊರಳಿಸುವ ಸಾಹಸ ಮಾಡಲಾಗ ಲಿಲ್ಲ. ಈ ಅಖಂಡ ಯಜ್ಞದಲ್ಲಿ ಅಶಾಂತಿಯ ಕಿಡಿ ನವಚೈತನ್ಯತರಂಗಗ ಗಳನ್ನು ಒಂದೇ ಸಮನೆ ಸುಡುತ್ತಿರುವಾಗಲೂ ಕಲಿತ ಜೀವ ವರ್ತಮಾನ ಯುಗಧರ್ಮವನ್ನಾದರೂ ತಿಳಿದುಕೊಳ್ಳುವುದಿಲ್ಲವೇಕೋ....

ಚರ್ಮವನ್ನು ಕತ್ತರಿಸಿ, ಮಾಂಸದ ಪದರನ್ನು ಬಿಡಿಸಿ, ನೆತ್ತರು ಸ್ರವಿ ಸುವ ನಾಳಗಳನ್ನು ಕಟ್ಟಿ ಒಳಪ್ರದೇಶಕ್ಕೆ ಕೈಯಿಟ್ಟಾಗ ಮೊದಲು ದಿಟ್ಟಿಗೆ

ಬಿದ್ದುದು ' ಅಪೆಂಡಿಸೈಟಿಸ್ ' ಅನಂತರ ' ಫೈಬ್ರಾಯಿಡ್ ಯೂಟ್ರಿಸ್. ಗರ್ಭಕೋಶದ ಸುತ್ತಮುತ್ತ ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಾರು ಗೆಡ್ಡೆಗಳು ಬೆಳೆದಿವೆ. ಗರ್ಭಕೋಶವನ್ನು ಈಗಲೇ ತೆಗೆಯದ ಹೊರತು ಗತ್ಯಂತರವಿಲ್ಲ. ಸ್ಥಿತಿಗತಿಯನ್ನು ಗಮನಿಸಿದೊಡನೆ ತಂದೆಯ ಮುಖ ನಸುಗಪ್ಪು ತಳೆಯಿತು.

"ಏನು ಮಾಡೋಣ ಡಾಕ್ಟರ್?" ದನಿಯಲ್ಲಿ ಅಸಹಾಯಕತೆಯಿತ್ತು.

" ನಾನೇನು....ಹೇಳ ಬಲ್ಲೆ ಸರ್ ?" ಎಂದ ಸುಕೋಮಲ ಸರಳ ದನಿ ನಸು ಕಂಪಿಸಿತು. ಚೇತನಳನ್ನು ಸದೃಢ ಆರೋಗ್ಯವಂತಳನ್ನಾಗಿಸಿದ ಹಿರಿಯ ವೈದ್ಯರ ಮಗಳಿಗೆ ತನ್ನ ಸ್ವಹಸ್ತಗಳಿಂದ ಗರ್ಭಕೋಶವನ್ನು ಕಿತ್ತು ಹಾಕುವುದು ಅನಿವಾರ್ಯವಾಗಿದೆ. ಹಾ....! ಅನುಪಮ ಪ್ರಭಾವಶಾಲಿನೀ ಜೀವನಧರ್ಮ ವನಸುಮದಂತೆ ವ್ಯರ್ಥ....

ಡಾ|| ಯಶಪಾಲ್ ಹೊರಗಡೆ ಕಾದಿದ್ದ ತಮ್ಮವರಿಗೆ ವಿಷಯವನ್ನು ವರದಿಮಾಡಿ ಅಪ್ಪಣೆ ಪಡೆದುಕೊಂಡು ಬಂದರು. ಕತ್ತರಿ ಪ್ರಯೋಗ ಮಾಡುವಾಗ ಮನಸ್ಸು ಮುದುಡಿತು. ಕಮಲೇಶ್ ನುಡಿಯಲಾರದೆ ನುಡಿದಳು " ಛೀಃ ! ಪಾಪ ಹೀಗಾಗಬಾರದಿತ್ತು."

" ಭಗವಂತನ ಇಚ್ಛೆ !" ಆರ್ದ್ರತೆ ಇಂದ ಮರುನುಡಿದರು ಡಾ|| ಯಶಪಾಲ್, ಶೋಕಾಕುಲತೆಯಿಂದ ಧ್ವನಿ ಭಾರಾಕ್ರಾಂತವಾಗಿತ್ತು.

ಅಂದಿನ ಉಳಿದೆಲ್ಲಾ ಆಪರೇಶನ್ನುಗಳು ಮುಗಿಯುವಷ್ಟರಲ್ಲಿ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಬೆಳಗಿನಿಂದ ಒಂದೇ ಸಮನೆ ನಿಂತ ಕಾಲುಗಳು ಜೋಮು ಹಿಡಿದಿದ್ದುವು. ಕತ್ತರಿ ಹಿಡಿದ ಕೈಗಳೂ ನೋಯುತ್ತಿವೆ. ಮನೆಗೆ ಹೋಗಿ ಒಂದಿಷ್ಟು ವಿಶ್ರಾಂತಿಯನ್ನು ತೆಗೆದುಕೊಂಡರೆ ಸಾಕು ಎಂಬಷ್ಟು ಎದೆಯ ಹಂಬಲ. ಆಸ್ಪತ್ರೆಯನ್ನು ಬಿಡುವ ಮುನ್ನ ವನಜಳ ವಾರ್ಡಿಗೆ ಹೋದಾಗ ಮೂರ್ತಿಮತೀ ಶ್ಯಾಮಲಲಕ್ಷ್ಮಿಯಂತೆ ಕಣ್ಸೆಸೆದ ಅವಳು ಅರೆಬರೆ ಜ್ಞಾನದಲ್ಲಿದ್ದಳು. ಬಳಿಯಲ್ಲಿದ್ದ ಡಾ|| ಯಶಪಾಲ್ "ತುಂಬ ವಂದನೆಗಳು ಡಾಕ್ಟರ್." ಎಂದರು.

ಒಡನೆ ಏನೆನ್ನಬೇಕೋ ಹೊಳೆಯಲಿಲ್ಲ, ಒಂದೆರಡು ಕ್ಷಣ ತಬ್ಬಿಬ್ಬಾಗಿ " ನನಗೆ ತುಂಬ ವ್ಯಸನವಾಗಿದೆ ಸರ್ !" ಎಂದುತ್ತರವಿತ್ತಳು. ನಿರ್ನಿಮೇಶ

ನಯನಗಳಲ್ಲಿ ವ್ಯಾಕುಲಭಾವ ಹೊಮ್ಮುತ್ತಿತ್ತು.

" ಏನು ಮಾಡೋಣ ? ದಂಪತಿಗಳು ಮನಸ್ಸಿಗೆ ತೆಗೆದುಕೊಳ್ಳದಿದ್ದರೆ ತೊಂದರೆಯಿಲ್ಲ."

ತನುಮನಗಳು ಮಿಡಿದುವು....ನಿಜ....

ಕಮಲೇಶ್ ಮೆಟ್ಟಿಲಿಳಿದು ಚಂದ್ರಕಾಂತನಿಗಾಗಿ ಅತ್ತಿತ್ತ ನೋಡುವುದರೊಳಗಾಗಿ ಟ್ಯಾಕ್ಸಿಯೊಂದು ಭರ್ರನೆ ಬಂದು ಗಕ್ಕನೆ ನಿಂತಿತು. ಒಳಗಿನಿಂದ ನರಳು ದನಿಯಲ್ಲಿ ಕೂಗಿದಳು ಸಕ್ಕೂ " ಕಮಲೇಶ್ !"

" ಏನಮ್ಮಾ?"

ಬಳಿಯಲ್ಲಿ ಕುಳಿತಿದ್ದ ಸಕ್ಕೂ ತಾಯಿ ಕಾರಿನ ಕದ ತೆಗೆದು ಹೊರಗಿಳಿದು " ಸಕ್ಕೂಗೆ ನೋವು ಬಂದಿದೆ. ದಯಮಾಡಿ ಮನೆಗೆ ಹೋಗಬೇಡ, ಕಮಲೇಶ್." ಎಂದು ಅಂಗಲಾಚಿದಳು.

" ನಾನಿನ್ನೂ ಊಟ ಮಾಡಲಿಲ್ಲ. ಆಸ್ಪತ್ರೆಯಲ್ಲಿ ಡ್ಯೂಟಿ ಡಾಕ್ಟರು ಇರುತ್ತಾರೆ, ಅವರಿಗೆ ಹೇಳಿ ಹೋಗುವೆ."

" ನೀನೇ ಇದ್ದರೆ ಅನುಕೂಲ. ಒಂದಿಷ್ಟು ಉಪಕಾರ ಮಾಡು ಕಮಲೇಶ್ " ದನಿ ಗೋಗರೆಯಿತು.

ಅವರಿಗೆ ಪ್ರತಿ ಹೇಳದೆ ಲೇಬರ್ ವಾರ್ಡಿಗೆ ಹಿಂದಿರುಗಿ ಸಜ್ಜುಗೊಳಿಸುವುದರೊಳಗಾಗಿ ಅವಳಿಗೆ ಹೆರಿಗೆಯಾಗುವ ಸೂಚನೆ ಕಂಡು ಬಂದುದರಿಂದ ಮನೆಗೆ ಹೋಗುವ ವಿಚಾರವನ್ನು ಬದಿಗಿಟ್ಟು ಸಿದ್ಧಳಾದಳು. ಲೇಬರ್ ವಾರ್ಡಿನ ಕದ ಮುಚ್ಚಿತು. ಅತೀವ ಕ್ಲಿಷ್ಟಕರವಾದ ನೋವುಂಡು ಅವಳಿ ಹೆಣ್ಣು ಮಕ್ಕಳಿಗೆ ಜನ್ಮವಿತ್ತಳು ಸಕ್ಕೂ. ಸುಖ ಪ್ರಸವವಾದಾಗ ಸಂತಸವುಂಟಾದರೂ ಅನಂತರ ಶಾಲಾ ಮಾಸ್ತರ ಹೆಂಡತಿಗೆ ಅವಳಿ ಹೆಣ್ಣು ಮಕ್ಕಳಾಗಬೇಕೆ ಎನ್ನಿಸಿತು. ಹೊರಗಡೆ ಕಾದಿದ್ದ ತಾಯಿಗೆ ಸುದ್ದಿ ಮುಟ್ಟಿ ಒಳಬಂದಾಗ ಆತಂಕಪೂರ್ಣ ದೃಷ್ಟಿ ಮಗಳನ್ನು ತಾಗಿತು. ಸಕ್ಕು ಖಿನ್ನಳಾಗಿ ಮಲಗಿದ್ದಳು. ಕಮಲೇಶ್ ಕೈಯನ್ನು ಅದುಮಿ ಹಿಡಿದು ಸಂತೈಸಿ ನಕ್ಕು ನಗಿಸಿ, ಉತ್ತರಾರ್ಧವನ್ನು ಡ್ಯೂಟಿಯ ಡಾಕ್ಟರಿಗೆ ಒಪ್ಪಿಸಿ ಅಲ್ಲಿಂದ ಹೊರಟಾಗ ಸುಕೋಮಲ

ಧ್ವನಿ ಹೊರಬಿತ್ತು "ಅದನ್ನಿಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಡ ಸಕ್ಕೂ."

"ಕಷ್ಟ ಕೊಟ್ಟವರಿಗೆ ಪುನಃ ಪುನಃ ಕೊಡುತ್ತಲೇ ಇರುತ್ತಾನೆ ಭಗವಂತ." ಕಂಬನಿ ಮಿಡಿದಳು ಸಕ್ಕೂ ತಾಯಿ.

"ಬಿಡಿ, ಇನ್ನೊಮ್ಮೆ ಹೆರುವ ಶ್ರಮ ತಪ್ಪಿತಲ್ಲ."

"ಎರಡೂ ಕೈಗಳಿಂದ ನೀಡಿದ ದೇವರಿಗೆ ಒಂದು ಗಂಡು ಕೊಟ್ಟಿದ್ದರೆ ಏನು ನಷ್ಟವಾಗುತಿತ್ತು ?"

"ಹೆಣ್ಣಾದರೇನು ? ಗಂಡಾದರೇನು ? ಎಲ್ಲಾ ಒಂದೇ."

"ವಂಶಕ್ಕೊಬ್ಬನಾದರೂ ಮಗ ಬೇಕಲ್ಲ."

ಕಮಲೇಶ್ ನಿರುತ್ತರಳಾದಳು.

ಮನೆ ಮುಟ್ಟುವಷ್ಟರಲ್ಲಿ ಹೊತ್ತು ನಾಲ್ಕರ ಅಂಚನ್ನು ದಾಟುವುದರಲ್ಲಿತ್ತು. ವೃದ್ಧ ಜನನಿ ಮಗಳ ಹಾದಿಯನ್ನು ಕಾಯುತ್ತ ಕುಳಿತಿದ್ದಳು. ಪುಸ್ತಕ ಪ್ರಪಂಚದಲ್ಲಿ ಮೈಮರೆತಿದ್ದ ಸ್ವರೂಪರಾಣಿ "ಮಾ ! ನಾನು ಡಾಕ್ಟರಾಗುವೆ !" ಎಂದಳು ಉತ್ಸುಕತೆಯಿಂದ, ಕಮಲ ನಯನಗಳು ಉಜ್ವಲವಾಗಿ ಬೆಳಗಿದುವು.

"ಆಗು ಮಗೂ !"

ನುಡಿ ತುಟಿ ಮಿಾರಿತು. ತಕ್ಷಣ ಎದೆಯ ಹಕ್ಕಿ ಚೀರಿತು....ಏನೇ ಆಗಿರು ನಿನ್ನ ಬಾಳು ಹಸನಾಗಿರಲಿ, ಪಕ್ಷಿಯ ಪಂಜರ ಬಂಗಾರದ್ದಾದರೂ ಒಂದೇ ಕಬ್ಬಿಣದ್ದಾದರೂ ಒಂದೇ.

ಕೈ ಕಾಲು ತೊಳೆದು ಒಳಬರುವಷ್ಟರಲ್ಲಿ ತಟ್ಟೆಯಲ್ಲಿ ಚಪಾತಿ ಪಲ್ಯ ತಯಾರಾಗಿತ್ತು. ಊಟ ಬಡಿಸುತಿದ್ದ ಸ್ವರ್ಣಮಾಲಿನಿ ಆತಂಕಪೂರ್ಣ ದನಿಯಲ್ಲಿ ನುಡಿದಳು "ಹೀಗಾದರೆ ಹೇಗೆ ಕಮಲೇಶ್ ?"

"ದೇವರಿದ್ದಾನೆ !" ವಿಶ್ವಾಸ ಪೂರ್ಣ ಕಿರುನಗೆ ತುಟಿಗಳ ಮೇಲೆ ಹರಡಿತು.

ಊಟ ಮುಗಿಸಿ ಕೈ ತೊಳೆಯುವುದರೊಳಗಾಗಿ ಚಿತ್ರಸೇನ ಹಿತ್ತಿಲ ಕಡೆಯಿಂದಲೇ ಒಳ ಬಂದ. ಸ್ವರ್ಣಮಾಲಿನಿ ಕೇಳಿದಳು "ಹೇಗಿದ್ದಾಳೆ ಮಾಲತಿ ?"

"ನೋವು ಆರಂಭವಾಗಿದೆ ; ಹೇಳಿ ಹೋಗೋಣವೆಂತಲೇ ಬಂದೆ."

"ಆಗಲೇ ಒಮ್ಮೆ ನೋಡಿ ಬಂದೆ....ನೋವಿರಲಿಲ್ಲ."

"ಈಗ ಆರಂಭವಾಗಿದೆ." ಕಮಲೇಶಳ ಕಡೆ ತಿರುಗಿ "ನೀವು ಈಗ ಬಂದಿರಾ ಡಾಕ್ಟರ್ ?"

"ಹೌದು, ತುಂಬ ಕೆಲಸವಿದ್ದುದರಿಂದ ಬೇಗ ಬರಲಾಗಲಿಲ್ಲ."

"ನಿಮಗೆ ನಾನು ಇನ್ನಷ್ಟು ತೊಂದರೆ ಕೊಡುತ್ತಿದ್ದೇನೆ, ಮಾಲತಿಯನ್ನು ನಿಮಗಲ್ಲದೆ ಮತ್ತಾರಿಗೂ ಒಪ್ಪಿಸಲಾರೆ. ದಯಮಾಡಿ ಕ್ಷಮಿಸಿಬಿಡಿ."

ಇಲ್ಲವೆನ್ನಲು ಬಾಯಿ ಬರಲಿಲ್ಲ. ಮೈ ಆಯಾಸದ ಬೀಡಾಗಿತ್ತು. ಸ್ವಲ್ಪಹೊತ್ತಾದರೂ ಕುಳಿತು ದಣಿವಾರಿಸಿಕೊಳ್ಳುವ ಮನಸ್ಸು. ಅಷ್ಟೂ ಬಿಡುವು ಕೊಡದಷ್ಟು ಚಿತ್ರಸೇನ ತರಾತುರಿಯಲ್ಲಿದ್ದುದರಿಂದ ಕ್ಷಿಪ್ರವಾಗಿ ಹೊರಡಬೇಕಾಯಿತು. ಧೈರ್ಯವೇ ಮೈವೆತ್ತು ಬಂದಂತೆ ನಿಂತ ಅವನ ಬಗೆಗೆ ಮನ ಮರುಗಿ ಔಷಧಿಯ ಬ್ಯಾಗಿಗೆ ಕೈ ಹಚ್ಚಿದೊಡನೆ ಪುಸ್ತಕ ಪ್ರಪಂಚದಲ್ಲಿ ಮೈಮರೆತಿದ್ದ ಸ್ವರೂಪರಾಣಿ ಅಚ್ಚರಿಯಿಂದ ಕಣ್ಣರಳಿಸಿದಳು "ಪುನಃ ಹೊರಟಿರಾ ?"

"ಮಾಲತಿಯನ್ನು ಆಸ್ಪತ್ರೆಗೆ ಕರೆದೊಯ್ಯುವೆ. ಈಗ ಹೇಳು, ನಿನಗೆ ತಮ್ಮ ಬೇಕೋ ? ತಂಗಿ ಬೇಕೋ ?"

ಅಂದವಾದ ಮುಖಕ್ಕೆ ಇನ್ನಷ್ಟು ಕಳೆಗೂಡಿಸುವಷ್ಟು ಹಿರಿ ಹಿರಿ ಹಿಗ್ಗಿ ನುಡಿದಳಾ ಬಾಲೆ "ಓ....! ನನಗೆ ತಂಗಿ ಬೇಕು !"

ಎಲ್ಲರ ಮುಖದಲ್ಲೂ ಎಳೆನಗು ಮಿನುಗಿತು. ಚಿತ್ರಸೇನ ನಕ್ಕು ನುಡಿದ, "ಸ್ವರೂ, ನಾವು ಕೊಡುವುದು ತಮ್ಮನನ್ನೆ !"

"ಉಹೂ....ನನಗೆ ತಂಗಿ ಬೇಕು !"

ಕಮಲೇಶ್ ಮಗಳ ಕೆನ್ನೆಯನ್ನು ಮೃದುವಾಗಿ ಹಿಂಡಿ ಹೊರಡಲಣಿಯಾದಳು. ಅದೇ ತಾನೆ ಕಾಲೇಜು ಮುಗಿಸಿ ಬಂದ ಚೇತನಾ "ಈಗಲೇ ಹೊರಡುವಿರಾ ?"

ತಾನು ಹೊರಡುವ ಉದ್ದೇಶವನ್ನು ಮುಂದಿಟ್ಟೊಡನೆಯೇ ಪುಸ್ತಕಗಳನ್ನು ಅವಸರವಸರವಾಗಿ ಒಳಗೊಯ್ದಿಟ್ಟು "ನಾನೂ ಬರುವೆ." ಎಂದಳು ಅವಳು.

"ಮೊದಲು ಮುಖ ತೊಳೆದುಕೊ. ಅನಂತರ ನೋಡಿದರಾಯಿತು."

"ಆಸ್ಪತ್ರೆಗೆ ಹೊರಡುವ ಮೊದಲು ನೋಡಿ ಬರುವೆ...."

"ಈಗಲೇ ನೋಡಬೇಕಾದುದು ಕಿರಿಯ ಸೊಸೆಯ ಕರ್ತವ್ಯ!" ಚಿತ್ರಸೇನ ಹಾಸ್ಯದ ಚಟಾಕಿ ಹಾರಿಸಿದ. ಸರಳವೂ ಸ್ವಚ್ಛವೂ ಆದ ಮಂದಹಾಸ ತುಟಿಗಳಲ್ಲಿ ಹರಡಿ ಉಜ್ವಲವಾದ ನೋಟ ಅವಳನ್ನು ತಾಗುತ್ತಲೂ ಅವಳ ಚೆಂಗೆನ್ನೆಗಳ ಮೇಲೆ ಲಜ್ಜೆಯ ರಂಗೊರೆಯಿತು, ಕಮಲೇಶಳ ಬೆನ್ನಿನನುರಿಗೆ ನಿಂತು ಅವಳ ಬಿಳಿಯ ಸೀರೆಯ ಸೆರಗನ್ನು ಮುಖಕ್ಕೆ ಮುಚ್ಚಿಕೊಂಡಳು. ಎಲ್ಲರೂ ನಗುವಿನ ಗುಲ್ಲೆಬ್ಬಿಸಿದರು. ಕಮಲೇಶ್ ಅವರ ಮನೆಗೆ ಹೋಗಿ ನೋಡಿ, ಮಾಲತಿಯೊಂದಿಗೆ ಕಾರು ಹತ್ತುವಾಗ "ನಾನಿಂದು ಇಲ್ಲೇ ಬರುವೆ ಚೇತನಾ." ಎಂದಳು. ಜೊತೆಗೆ ಹೇಮರತಿ ಸ್ವರ್ಣಮಾಲಿನಿಯರು ಹೊರಟರು....ಅಲ್ಲಿಗೆ ಹೊತ್ತಾಗಿ ಹೋಗಿ ಸಣ್ಣ ಮಾತು ಕೇಳುವುದಕ್ಕಿಂತ ಇಲ್ಲೇ ಇರುವುದು ಲೇಸು ಎಂದುಕೊಂಡಳು ಸ್ವರ್ಣಮಾಲಿನಿ. ತಾಯಿಕರುಳು ಒಳಗಿಂದೊಳಗೇ ನುಲಿಯಿತು. ಹೇಮರತಿಯ ಚಿತ್ತ ಭವಿಷ್ಯದ ಬನದಲ್ಲಿ ಮೊಮ್ಮಕ್ಕಳೊಡನೆ ಕೂಡಿ ನಲಿದಾಡುವ ಹೊಂಗನಸನ್ನು ನೇಯುತಿತ್ತು ಬಹುಶಃ.

ಕಾರು ಆಸ್ಪತ್ರೆ ತಲುಪಿದಾಗ ವಾರ್ಡ್‌ಬಾಯ್‌ಗಳು ಒಬ್ಬ ವ್ಯಕ್ತಿಯನ್ನು ಹೊರಗಡೆ ದಬ್ಬುತಿದ್ದುದು ಕಂಡುಬಂತು. ಮನಸ್ವೀ ಬೈದು ಉಗುಳಿ ರಾದ್ಧಾಂತ ಮಾಡುತಿದ್ದ ಅವನ ವಿಕಲ್ಪಮತಿ, ಉದ್ಭ್ರಾಂತಚಿತ್ತ ಅತುಲ ವಿಭ್ರಮ ವೀಚಿಯಲ್ಲಿ ತೊಳಲುತ್ತಿದೆ ಎಂಬುದನ್ನು ತಿಳಿದಾಗ ಅಚ್ಚರಿಯೆನಿಸದಿದ್ದರೂ ವಿಷಯ ಗಂಟಲಗಾಳವಾಯಿತು. ಬಾಗಿಲಲ್ಲಿ ಗಲಾಟೆಯಿದ್ದುದರಿಂದ ಅವನನ್ನು ಹೊರಗೆ ಕಳುಹಿಸುವವರೆಗೆ ಕಾರಿನಿಂದ ಇಳಿಯದೆ ಕುಳಿತರು. ಸಂಜೆಯ ಡ್ಯೂಟಿಯನ್ನು ಮುಗಿಸಿ ಹೊರಹೋಗಲಿದ್ದ ಚಂದ್ರಕಾಂತ ತನ್ನ ಮಡದಿಯು ಚಿತ್ರಸೇನನ ಕಾರಿನಲ್ಲಿ ಕುಳಿತುದುದನ್ನು ದುರುದುರು ನಿಟ್ಟಿಸಿ ನೋಡಿ ಹೊರಹೋದ. ಬಹುಶಃ ಇತರ ಮೂವರು ಕೋಪದ ಮುಸುಕಿನಲ್ಲಿ ಕಾಣಿಸಲಿಲ್ಲವೇನೋ....ಕಮಲೇಶ್ ಗಲಾಟೆಯಲ್ಲಿ ಮಗ್ನಳಾದವಳಂತೆ ನಟಿಸಿ ಸುಮ್ಮನಾದಳು. ಎಲ್ಲರೆದುರಿಗೆ ಆತನ ಅಸಹ್ಯಕರ ನಿರ್ಲಜ್ಜ ವರ್ತನೆ ಹೂಮನಸ್ಸಿಗೆ ಮುಳ್ಳನ್ನು ನೆಟ್ಟಿತು. ವಾರ್ಡ್‌ಬಾಯ್‌ಗಳು ಗಲಾಟೆಗಾರನನ್ನು ದಬ್ಬಿಕೊಂಡು ಹೋಗುತ್ತಲೂ, ಎಲ್ಲರೂ ಇಳಿದು ಲೇಬರ್ ವಾರ್ಡ್‌ಕಡೆ ಹೋಗು

ತಿದ್ದಂತೆ ದಬ್ಬಿನವರು ಬಂದು ಹೇಳಿದರು. "ಆತ ಜಯಮ್ಮನ ಗಂಡ ಶಿವ ರಾಂ. ಚೆನ್ನಾಗಿ ಕುಡಿದುಬಿಟ್ಟು ನನ್ನ ಹೆಂಡತಿಯನ್ನು ಕೊಡಿ ಎಂದು ಗದ್ದಲವೆಬ್ಬಿಸಿದ್ದಾನೆ. ತಾನೇ ಶವವನ್ನು ಕೊಂಡೊಯ್ದು ಮಣ್ಣುಕೊಟ್ಟ ವ್ಯಕ್ತಿ ಹಿಹಿಹ್ಹೀ!"

ಕಮಲೇಶ್ ಮೌನವಾಗಿ ಹೆಜ್ಜೆ ಹಾಕಿದಳು.

ಹೊತ್ತು ಉರುಳಿತು....ಜೀರ್ದುಂಬಿಗಳು ಜೀರಿಡುತ್ತಿವೆ.

ಲೇಬರ್ ವಾರ್ಡಿನಲ್ಲಿ ಸಾಲುಮಂಚಗಳ ಮೇಲೆ ಮಲಗಿದ್ದ ಹೆಣ್ಣುಗಳ ಚೀರಾಟ ಕರುಣಾಜನಕವಾಗಿತ್ತು. ಮುಚ್ಚಿದ ಬಾಗಿಲ ಹಿಂದೆ ಜೀವನ್ಮರಣ ಹೋರಾಟ ಅವ್ಯಾಹತವಾಗಿ ನಡೆಯುತ್ತಿದೆ. ಸಹಕಾರ ಹಸ್ತಗಳು ನೆರವು ನೀಡಲು ಮುಂದಾಗಿದ್ದರೂ ವಿಧಿ ಯಾವ ಹೆದ್ದೆರೆಯ ಹಿಂದೆ ಹೊಂಚು ಹಾಕುತಿತ್ತೊ....ಆಗ ತಾನೇ ಜನಿಸಿದ ಮುದ್ದು ಮಗುವೊಂದು ಅದರ ಪಿಶಾಚ ಹಸ್ತಕ್ಕೆ ಬಲಿಯಾಯಿತು.

ಹೊರ ವಲಯದಲ್ಲಿ ಕೃಷ್ಣಪಕ್ಷದ ಕಾಳಗಪ್ಪು ಹೆಪ್ಪುಗಟ್ಟಿದಂತೆ ದಟ್ಟೈಸಿದೆ. ಒಮ್ಮೊಮ್ಮೆ ತೇನೆ ಹಕ್ಕಿ ದುಃಖಪೂರ್ಣ ದನಿಯಲ್ಲಿ ಕೂಗುವುದೂ ಸಹ ಕೇಳಿಬರುತ್ತಿದೆ. ಪಾಪ, ಅದರ ಕುಟುಂಬದ ಕತೆ ಏನಾಗಿದೆಯೋ ಯಾವ ಕಾರಣದಿಂದಾಗಿ ರೋದನವೋ....

ಇನ್ನಷ್ಟು ಹೊತ್ತಿನೊಳಗಾಗಿ ಈ ಪಾಪಪೂರ್ಣ ಜಗತ್ತಿಗೆ ಪವಿತ್ರಾತ್ಮವೊಂದು ಆಗಮಿಸಿ ತನ್ನ ಒಡಲ ಸಂಕಟವನ್ನು ರೋದನರೂಪದಲ್ಲಿ ಪ್ರಕಟಗೊಳಿಸಿತು. ಕಮಲೇಶ್ ಪ್ರಸನ್ನವದನದಿಂದ ಮಗುವಿಗೆ ಸ್ವಾಗತ ನೀಡಿದಳು.

"ಎಂಥ ಮಗು ಡಾಕ್ಟರ್?" ತಾಯಿಯ ಪ್ರಶ್ನೆಯಲ್ಲಿ ತವಕ ತುಂಬಿತ್ತು.

" ಎಂಥ ಮಗು ಬೇಕೆಂಬುದನ್ನು ಹೇಳಿರಿ. " ಹುಬ್ಬೇರಿಸಿದಳು ಕಮಲೇಶ್.

" ಯಾವುದಾದರೂ ಸರಿ." ಉತ್ತರ ಸರಳರೂಪದಲ್ಲಿ ಹರಿದು ಬಂತು.

" ಉಹೂ, ನೀವು ಹೇಳಲೇ ಬೇಕು ."

" ಗಂಡು ಮಗು !" ಕಣ್ಣರಳಿಸಿದಳು ಮಾಲತಿ.

" ಈಗ ಸೈನ್ಸ್ ಮುಂದೆ ಮುಂದೆ ಹೋಗುತ್ತಿದೆ. ಹೆಣ್ಣು ಮಗುವನ್ನು ಮುಂದೆ ಗಂಡು ಮಗು ಮಾಡಿಕೊಂಡರಾಯಿತು!!" ಲಘುಹಾಸ್ಯದ ನಗು ವಿರಾಜಮಾನವಾಯಿತು ತುಟಿಗಳಲ್ಲಿ.

ಮಾಲತಿ ಹಸನಾದ ಪ್ರತಿಹಾಸ ಬೀರಿದಳು.

ಲೇಬರ್ ವಾರ್ಡಿನ ಕದ ತೆರೆಯಿತು. ಹೊರಗಿದ್ದ ತಮ್ಮವರು ಒಳ ಬಂದರು. ಚೆಂದುಟಿಗಳಲ್ಲಿ ಚೆಲ್ಲುವ ಹೂನಗೆ ಆನಂದ ಪುಳಕಿತ ಹಾವಭಾವಗಳು ಮುಖಮುದ್ರೆಯಲ್ಲಿ ಅಚ್ಚೊತ್ತಿ ಹಸನಾದ ಹೃದಯಕರಂಡದ ಸ್ವಚ್ಛ ಆಶಾಸ್ಫೂರ್ತಿಯನ್ನು ಪ್ರದರ್ಶನಕ್ಕೆ ಇಟ್ಟಂತೆ ಅತ್ಯಂತ ಆಕರ್ಷಣೀಯವಾಗಿ ಕಂಡು ಬರುತಿತ್ತು. ಸೂರ್ಯಾಗಮನದಿಂದ ಅತೀ ಪ್ರಸನ್ನಳಾದ ಅರುಣ ರಾಗವತಿ ಸಂಧ್ಯಾ ಸುಂದರಿಯಂತೆ!

ಅಧ್ಯಾಯ

೩೩

ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ |
ಶೀತೋಷ್ಣ ಸುಖದುಃಖೇಷು ಸಮಃ ಸಂಗವಿವರ್ಜಿತಃ ||

ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ |
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ ||

ಸುಶ್ರಾವ್ಯವಾದ ಹೆಣ್ದನಿಯೊಂದು ಬಾನುಲಿಯಲ್ಲಿ ಭಗವಾನ್ ಶ್ರೀಕೃಷ್ಣನ ಸಂದೇಶವನ್ನು ಭಕ್ತಿಪೂರ್ವಕವಾಗಿ ಬಿತ್ತರಿಸುತ್ತಿದೆ. ಅಲೆಯಲೆಯಾಗಿ ಹರಿದು ಬರುವ ದನಿಯ ಮಾಧುರ್ಯವು ತನುಮನಗಳನ್ನು ಮಾಯೆಯಂತೆ ಮುಸುಗಿದಾಗ ಮೈ ಪುಳಕಿತವಾಯಿತು. ಭಾವೋದ್ವೇಗದಿಂದ ಕಣ್ಣುಗಳು ಮುಚ್ಚಿಕೊಂಡುವು. ಭಾವ ಸಮಾಧಿಯಲ್ಲಿ ಸವಿದ ಆನಂದಾಮೃತವು ಹೃದ್ದೇಶದ ಹೊಂಗಿಂಡಿಗೆ ಧಾರೆಧಾರೆಯಾಗಿ ಇಳಿಯಿತು. ಶತ ಶತ ಶತ ಶತ ಶತಮಾನಪೂರ್ವ ಸಂದೇಶವನ್ನು ಭಕ್ತಿಗೌರವಗಳಿಂದ ಹೃದಯ ಸ್ವೀಕರಿಸಿತು.

....ಈ ಮನಸ್ಸನ್ನು ಕೊಟ್ಟವನೂ ನೀನೆ. ಈ ಹೃದಯವನ್ನು ಕೊಟ್ಟವನೂ ನೀನೆ. ಕಷ್ಟ ಸುಖಗಳನ್ನು ಕೊಡುವವನೂ ನೀನೆ. ಮೇಲಾಗಿ ಈ ಮಹೋಪದೇಶವನ್ನು ನೀಡುವವನೂ ನೀನೆ....ಬಾಳಿನ ಭಯಂಕರ ನದಿಯನ್ನು ದಾಟಿ, ಕಷ್ಟಸುಖಗಳ ಸಪ್ತ ಮಹಾಸಾಗರಗಳನ್ನು ಹರಿಹಾಯ್ದು ಸುರಲೋಕದಲ್ಲಿರುವ ನಿನಗೆ ಪ್ರಿಯವಾಗಬಹುದಾದ ಮಾನವಕೀಟ ಈ ಭುವಿಯ ಮೇಲೆ ಇದೆಯೋ ಇಲ್ಲವೋ ಊಹಿಸುವುದೂ ಸಹ ಕಷ್ಟ. ಈ ಭವಬಂಧನದೊಳಿದ್ದು ನಿನಗೆ ಪ್ರಿಯವೆನಿಸುವುದು ಸಾಧ್ಯವೇ ಭಗವನ್....? ಭಾವಪರವಶತೆಯಿಂದ ತುಂಬಿ ಬಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತ ಭಾವೋದ್ವೇಗದಿಂದ ನುಡಿದಳು ಕಮಲೇಶ್.

ವ್ಯೋಮಶ್ರೀ ವಿಸ್ತಾರವಾದ ದುಸ್ತಮವು ಇಳೆಯನ್ನು ಮುಸುಗುತಿತ್ತು.

ಇಂದೇಕೋ ಎಲ್ಲಿಲ್ಲದ ಬೇಸರ. ಸಂಜೆಯಲ್ಲಿ ಆಸ್ಪತ್ರೆಗೆ ಪುನರ್ಭೇಟಿ-ಯಿಾಯುವುದನ್ನೂ ಸಹ ತೊರೆದು ಮನೆಯಲ್ಲಿ ಉಳಿದಿದ್ದಳು ಕಮಲೇಶ್. ಡ್ಯೂಟಿಯ ಡಾಕ್ಟರುಗಳಿಗೂ ತನ್ನ ಅಸಿಸ್ಟೆಂಟರಿಗೂ ಅಂದಿನ ಕೆಲಸಗಳನ್ನು ನೋಡಿಕೊಳ್ಳಲು ಹೇಳಿಯಾಗಿದೆ. ಆಟಪಾಠಾದಿಗಳಿಗೆ ಹೊರಹೋದ ಮಕ್ಕಳಿನ್ನೂ ಹಿಂದಿರುಗಿರಲಿಲ್ಲ. ಅವರು ಬರುವವರೆಗೆ ಹಾಯಾಗಿ ಮಲಗಿದರಾಯಿತು, ಎಂಬಂತೆ ಎದೆಯ ಮೇಲೆ ಕೈಗಳೆರಡನ್ನೂ ಕಟ್ಟಿ ಮಾಡಿನ ನೇರಕ್ಕೆ ದಿಟ್ಟಿಯನ್ನಟ್ಟಿದಳು.

....ನಾಟ್ಯಕಲೆಯ ಉತ್ತುಂಗ ಶಿಖರಕ್ಕೇರಿದ್ದರೂ....ಬಾಳಿಗಾಗಿ ಚಕಚಕ ಕೆಳಗಿಳಿದು ಬಂದ ವನಮಾಲಿ ಸರ್ವೇಸಾಮಾನ್ಯ ಜೀವನದಲ್ಲಿ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ಹೆಣ್ಣುಮಕ್ಕಳನ್ನು ಅತ್ತ ಕಾಲೇಜಿಗೂ ಕಳಿಸುವಂತಿಲ್ಲದೆ ಇತ್ತ ಭರತನಾಟ್ಯವನ್ನೂ ಕಲಿಸದೆ ಸಮಾಜ ಪ್ರಾಕಾರಗಳಿಗೆ ತಲೆಬಾಗಿ, ಜೀವನ ಯಜ್ಞದಲ್ಲಿ ಅವಾಂಛಿತ ಅತಿಥಿಯಂತೆ ರಾಗದ್ವೇಷರಹಿತ ಸುರಾಪಾನದಲ್ಲಿ ಮೈ ಮರೆತು ಕುಂಟುತ್ತ ಕುಗುರುತ್ತ ದೂರಗಮ್ಯದೆಡೆಗೆ ಸಾಗುವ ಬಗೆ ಅಕ್ಷಿಪಟಲದ ಮೇಲೆ ಸುಳಿಸುಳಿದಳಿದಾಗ ಮಾನಸ ಮುರುಳಿ ಅನಿರೀಕ್ಷಿತವಾದ ಶಾಂತಿ ಗೀತೆಯನ್ನು ರಾಗಪೂರ್ಣವಾಗಿ ಹಾಡಿತು.

ಹಾ....!

....ತಾನೆಷ್ಟೇ ಕಷ್ಟಪಟ್ಟರೂ ಯಾವುದೇ ಉದ್ದಾಮ ಗುರಿಯನ್ನು ಹೊಂದಿದರೂ ಈ ಯೋಜನ ಯೋಜನ ಯೋಜನ ಹಬ್ಬಿರುವ ಸಾಮಾಜಿಕ ನೆಲೆಯಿಂದ ಅಶೃಂಖಲೆಯಾಗಿ ತಪ್ಪಿಸಿಕೊಂಡು ದೂರ-ಬಹುದೂರಗಮ್ಯವನ್ನು ಸೇರುವುದು ಸಾಧ್ಯವೇ ಇಲ್ಲ. ಈ ದುರ್ದಮನೀಯವಾದ ಸಾಮಾಜಿಕ ಪ್ರಾಕಾರವನ್ನು ದಾಟಿ ಸುಖಿಯಾಗುವುದು ಕನಸಿನ ಮಾತು ...ಎಷ್ಟೆಂದರೂ ಈ ಜೀವನ ಇಷ್ಟೆ.

ಈಚಿನ ದೃಢ ಅಭಿಪ್ರಾಯ ಅದೇ.

ಮನೆಗೆ ಬಂದು ಚಿಕಿತ್ಸೆ ಹೊಂದುವ ರೋಗಿಗಳು, ಆಸ್ಪತ್ರೆಯಲ್ಲಿ ತನ್ನ ಆರೈಕೆಯಲ್ಲಿದ್ದು ಗುಣ ಹೊಂದಿ ಮನೆಗೆ ಮರಳಿದ ಗೃಹಿಣಿಯರು ಪ್ರೀತಿಪೂರ್ವಕವಾಗಿ ಗೌರವಪೂರ್ವಕವಾಗಿ ಕೈ ತುಂಬ ಕಾಣಿಕೆಗಳನ್ನು ತರುತ್ತಾರೆ.

ಬೇಡವೆಂದರೂ ಕೇಳರು. ಅವುಗಳಲ್ಲಿ ಬಹಳ ಪಟ್ಟಿಗೆ ಸೀರೆಗಳಿರುತ್ತವೆ. ಸೀರೆ....ಸೀರೆ. ಬೀರು ಹಿಡಿಸಲಾರದಷ್ಟು ಸೀರೆ. ಚೇತನಳಿಗಾಗಿ ಮಾ-ಗಾಗಿ ಸೀತಮ್ಮನಿಗಾಗಿ ತಾನೊಂದು ಸೀರೆಯನ್ನೂ ಕೊಳ್ಳುವುದಿಲ್ಲ. ಆದರೂ, ಮಿಗುತ್ತವೆ. ಪಾಪ, ಹೆಂಗರುಳಿನ ಹೃದಯವೈಶಾಲ್ಯತೆಯನ್ನು ಅಳೆಯಬಲ್ಲವರಾರು?

ತಲೆ ಬಾಗಿಲ ಕರೆಗಂಟೆ ಸದ್ದು ಮಾಡಿ ಕರೆ ನೀಡಿತು.

ಮಲಗಿ ಬೇಸರವಾಗಿದ್ದುದರಿಂದ ತಾನೇ ಎದ್ದು ಹೋಗಿ ಕದ ತೆರೆದಳು. ನೋಡಿದರೆ ತನ್ನ ಕಣ್ಣುಗಳನ್ನೂ ಸಹ ನಂಬಲಾಗದಂತಹ ದೃಶ್ಯ. ಎದುರಿಗೆ ಚಂದ್ರಮುಖಿ ದಂಪತಿಗಳು. ಹಿಂದೆ ಮುರಳೀಧರ ದಲ್ವಾಲಿ ಪತ್ನೀಸಮೇತನಾಗಿ....ಮಂದಸ್ಮಿತ ವದನಾರವಿಂದನಾಗಿ ನಿಂತಿದ್ದಾನೆ. ತಲೆತುಂಬ ಬೆಳ್ಳಿಯ ಕೂದಲನ್ನು ಹೊತ್ತು ಭೂಸುರರಂತೆ ನಗು ಮುಖದಿಂದ ನಿಂತುದುದನ್ನು ನೋಡಿದಾಗ ಹೃದಯ ತುಂಬಿ ಬಂತು. ಎಲ್ಲರಿಗೂ ಹೃತ್ಪೂರ್ವಕ ಸ್ವಾಗತ ನೀಡಿದಳು ಕಮಲೇಶ್. ದೇವರ ಧ್ಯಾನದಲ್ಲಿದ್ದ ಮಾ ಹೊರ ಬಂದಳು.

ಚಂದ್ರಮುಖಿ ಅಪರೂಪವಾಗಿ ಬಂದು ಹೋಗುತ್ತಿದ್ದುದುಂಟು. ಅವಳಿಗೆ ಬಗೆ ಬಗೆಯ ಪ್ರಾಣಿಗಳನ್ನು ಸಾಕುವ ಹವ್ಯಾಸವಿದ್ದುದರಿಂದ ಹೊರಗಡೆ ಹೋಗಿ ಬರಲು ಸಮಯ ಕಡಿಮೆ. ಬಂದರೂ ನಿಲ್ಲದೆ ಹೊರಟು ಬಿಡುತ್ತಿದ್ದಳು. ಅಂದು ಮಧ್ಯಾಹ್ನ ತಮ್ಮನ ಮನೆಗೆ ಬಂದ ಅವಳು ಅವನನ್ನು ಪತ್ನೀಸಮೇತ ಎಳೆದು ಕೊಂಡೇ ಇಲ್ಲಿಗೆ ಬಂದಿದ್ದಳು. ಎಲ್ಲರೂ ಕುಳಿತರು. ಔಪಚಾರಿಕವಾಗಿ ಮಾತುಕತೆಗಳಾದುವು. ಕ್ಷೇಮ ಸಮಾಚಾರಗಳ ವಿನಿಮಯವೂ ನಡೆಯಿತು. ಎಲ್ಲರಿಗೂ ತಂಪೊರೆಯುವ ತಣ್ಣನೆಯ ಪಾನೀಯವನ್ನು ತಂದು ತಾನೇ ನೀಡಿದಳು ಕಮಲೇಶ್. ಹೊರಹೋದ ಮಕ್ಕಳೂ ಬಂದು ಕೂಡಿಕೊಂಡರು. ಆಳೆತ್ತರಕ್ಕೆ ಬೆಳೆದ ಚೇತನಾ ತಿಲಕ್‌ರನ್ನೂ ಅವರಿಬ್ಬರಿಗೂ ನಸುಗಿಡ್ಡವಾಗಿದ್ದ ಸ್ವರೂಪಳನ್ನೂ ಮುರಳೀಧರ ದಲ್ವಾಲಿ ದಂಪತಿಗಳು ಅಚ್ಚರಿಯಿಂದ ನಿಟ್ಟಿಸಿದರು. ಹಿಂದೆಂದೂ ಬಾರದೆ ಸಂಪರ್ಕವನ್ನು ಸಂಪೂರ್ಣ ಕಡಿದುಕೊಂಡಿದ್ದ ದಂಪತಿಗಳಿಗೆ ನೀರಿನಿಂದ ಹೊರತೆಗೆದ ಮೀನಿನಂತಾಯಿತು ಪರಿಸ್ಥಿತಿ. ಸ್ವರ್ಣಮಾಲಿನಿಯ ಹೃದಯ ಸುಖದುಃಖಗಳಿಂದ ತುಂಬಿದರೂ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಂಡಳು. ಮುರಳೀಧರ ದಲ್ವಾಲಿ ದಂಪತಿಗಳ ವರ್ಚಸ್ಸು ಅವರ ಸ್ಥಿತಿಗತಿ ಸಾಮಾನ್ಯ ಸ್ಥಿತಿಯಲ್ಲಿರುವುದನ್ನು

ಸಾರಿ ಹೇಳುತಿತ್ತು....ಚಂದ್ರಮುಖಿ ಜನ್ಮ ಎತ್ತಿದ್ದು ಉತ್ತಮ ಘಳಿಗೆಯಲ್ಲಿ. ಈ ಮನೆಯಲ್ಲಿ ಔರಸ ಪುತ್ರಿಯಾಗಿ ಜನಿಸಿ ಎಲ್ಲರ ಮುದ್ದಿಗೂ ಪಾತ್ರಳಾಗಿ ಇನ್ನೂ ಎಳೆಯ ದಿನಗಳಲ್ಲೇ ಶ್ರೀಮಂತನ ಭಾಗ್ಯಲಕ್ಷ್ಮಿಯಾಗಿ ಶೋಭಿಸುವ ಮಹಾಭಾಗ್ಯ ಪಡೆದ ಆಕೆ ಶನೀಶ್ವರನ ಕಾಟವಾಗಲೀ, ದುರ್ವಿಧಿಯ ಕೈವಾಡವಾಗಲೀ, ಸಾಮಾಜಿಕ ಪ್ರಾಕಾರಗಳ ಇತಿ ಮಿತಿಯಾಗಲೀ ಕಂಡು ಅರಿಯುಳು. ಯಾರಾದರೂ ತಿಳಿಯಹೇಳಿದರೂ ಆಕೆ ನಂಬಲಾರಳು ಬಹುಶಃ. ಬೆಳೆದ ನಾಲ್ವರು ಮಕ್ಕಳಿಗೂ ಆಸ್ತಿ ಹಣಕಾಸನ್ನು ಸಮಭಾಗವಾಗಿಸಿದ ಹೆಮ್ಮೆ ಆವಳಿಗೆ. ಹಿಂದೂ ಧಾರ್ಮಿಕ ವಿಧಿಯಲ್ಲಿ ಹೆಣ್ಣು ಮಕ್ಕಳಿಗೆ ಆರ್ಥಿಕ ಸಮಾನತೆ ಇಲ್ಲದುದನ್ನು ಆಕೆ ಉಂಟು ಮಾಡಿದ್ದಾಳೆ. ಹುಡುಗಿಯರಿಬ್ಬರೂ ಮಾಸ್ಟರ್ ಡಿಗ್ರಿ ಪಡೆದವರು ಮೇಲಾಗಿ ಆರ್ಥಿಕ ಸಮಾನತೆ ಹೊಂದಿದವರು ಆಂದ ಮೇಲೆ ಯಾವ ಗಂಡಾದರೂ ಕೈಮುಗಿದು ಬರುತ್ತಾನೆ ಎಂಬಷ್ಟು ಶಾಂತಿ.... ಸಮಾಧಾನ....ಸಂತೋಷ. ಸದಾ ಕುಲುಕುಲು ನಗೆಯ ಸ್ವಭಾವದವಳಾದ ಚಂದ್ರಮುಖಿ ಆ ನಗುವಿನ ವರವನ್ನು ಸುರೇಶ ದಲ್ವಾಲಯಿಂದ ಆನುವಂಶಿಕವಾಗಿ ಪಡೆದುಕೊಂಡಿದ್ದಾಳೆ. ಕಷ್ಟ ಸುಖಗಳೆರಡರಲ್ಲೂ ಆ ನಗು ಹೇಗೆ ಸುರೇಶ ದಲ್ವಾಲಿಗೆ ಸಹಜವಾಗಿ ಹೋಗಿತ್ತೋ ಹಾಗೆಯೇ ಈ ಮಗಳಿಗೂ ಸಹ ಅದು ಸಹಜವಾಗಿ ಹೋಗಿದೆ.

ಮುರುಳೀಧರ ದಲ್ವಾಲಿ ಹಾಲೋಗರ ಉಂಡು ಹೊರಟು ನಿಂತಾಗ ಎದೆಯಾಳದಲ್ಲಿ ಸುಖದುಃಖಗಳು ನೆಲೆಸಿದ್ದುವು. ಕಮಲೇಶ್ ಊರ್ಮಿಳೆಗೆ ಹೊಸ ಸೀರೆಯ ಉಡುಗೊರೆಯನ್ನಿತ್ತು ಬೀಳ್ಕೊಟ್ಟಳು. ಚಂದ್ರಮುಖಿ ದಂಪತಿಗಳು ಕಮಲೇಶಳ ಒತ್ತಾಯದ ಮೇಲೆ ಮೂರು ದಿನಗಳಿದ್ದು ಹೊರಟರು. ಹಿರಿಯ ಮಗಳ ಸಾಮೀಪ್ಯ ವೃದ್ಧ ಜನನಿಯ ಹೃದಯಕ್ಕೆ ಹರ್ಷವನ್ನೂಡಿಸಿತು.

ಇನ್ನೂ ಕತ್ತಲಾಗಿಲ್ಲ. ಆಸ್ಪತ್ರೆಯಿಂದ ಈಗಷ್ಟೆ ಕಮಲೇಶ್ ಹಿಂದಿರುಗಿದ್ದಾಳೆ. ಚಂದ್ರಕಾಂತ್ ದೈನಿಕದಲ್ಲಿ ಕಣ್ಣಾಡಿಸುತ್ತ ಹಜಾರದಲ್ಲಿ ಕುಳಿತಿದ್ದ. ಆಫೀಸು ಮುಗಿಸಿಕೊಂಡು ಬಂದಿದ್ದ ಕೃಷ್ಣಮೂರ್ತಿ ಚಹಪಾನಾನಂತರ

ಮಕ್ಕಳೊಡನೆ ಗಾಳಿ ಸವಾರಿ ಹೋಗಿದ್ದ. ಒಳಗಡೆ ಮೂವರು ಹೆಂಗಳೆಯರ ವಿನಾ ಇನ್ನಾರೂ ಇಲ್ಲ. ಇಂದು ಮನೆಗೆ ಮುಂದಾಗಿ ಬಂದುದರಿಂದ ನಾಗ ವೇಣಿಗೆ ಸಹಾಯ ಮಾಡುವ ಹುರುಪು. ಆದರೆ ರೂಪರೇಷೆಗಳಿಲ್ಲದ ಆ ಮನೆಗೆ ಎಷ್ಟೇ ಶ್ರಮಪಟ್ಟರೂ ಅಂದ-ಚೆಂದ ಬರುವುದಿಲ್ಲ ಸ್ವಚ್ಛಗೊಳಿಸೋಣವೆಂದರೂ ಯಾವಕಡೆ ಕೈ ಹಾಕುವುದು ಎಂಬುದು ಸಹ ಸಮಸ್ಯೆ. ಆಚಾರ ವ್ಯವಹಾರಗಳು ಶುದ್ಧಿಯಾಗದ ಹೊರತು ಈ ವಲಯ ಶುಚೀಭೂತವಾಗುವಂತಿಲ್ಲವೆಂಬುದು ಕರತಲಾಮಲಕ....ಅಶಾಂತಿಯ ಬಿರುಗಾಳಿಯಲ್ಲೇ ಕೆಲಸ ಸಾಗಿತು. ರುಬ್ಬುವ ಕಲ್ಲಿನಲ್ಲಿ ಮೆತ್ತಿದ ಕೊಳೆಯನ್ನು ನಿರ್ಮೂಲನ ಗೊಳಿಸುತಿದ್ದ ಕಮಲೇಶ್ ಮಿಂಚಿನಂತಹ ನೋಟ ಬೀರಿ "ಪುರಾತನ ಸಮಗ್ರ ವಿಧಿವಿಧಾನಗಳನ್ನು ಒಳ್ಳೆಯವೆಂದು ನೆಚ್ಚಿಕೊಂಡಿದ್ದರೆ ನಮ್ಮ ಜೀವನ ಸುಧಾರಿಸಿಕೊಳ್ಳಲಾರದು...."

ನಾಗು ಮಾತನ್ನು ಮುಂದುವರಿಯಗೊಡದಂತೆ ನಡುವೆ ಬಾಯಿ ಹಾಕಿದಳು. "ಎಲ್ಲವೂ ಸೃಷ್ಟಿ ವಿಧಾನವೇ ಆಗಿರುವಾಗ ನಮ್ಮ ನೆಚ್ಚನ್ನು ಕೇಳುವವರಾರು ? ಯಾವ ಸುಧಾರಣೆ ಸ್ತ್ರೀಯನ್ನು ಗಂಡುಬೀರಿಯನ್ನಾಗಿ ಮಾಡುವುದೋ ಅಂತಹ ಸುಧಾರಣೆ ನನಗೆ ಬೇಡವೇ ಬೇಡ. ಈ ಶರೀರ ಬಿದ್ದುಹೋಗುವವರೆಗೆ ಈ ಮನೆಗೆ ದಾಸಿಯಾಗಿ ದುಡಿಯುವುದನ್ನು ಯಾರಾದರೂ ಅಲ್ಲಗಳೆಯುವುದಾದರೆ ಅಂತಹವರ ನೆರಳೂ ಸಹ ನನಗೆ ಸೇರದು...."

ಅವಳು ಇಂತಹ ಮಾತು ಆಡಿಯಾಳೆಂದು ಊಹಿಸದ ಕಮಲೇಶಳಿಗೆ ಚಾಟಿ ಏಟು ಬಿದ್ದಂತಾಯಿತು. ಕಲಿಯದ ಹೆಣ್ಣಿಗೆ ಒಂದಿಷ್ಟು ತಿಳಿವಳಿಕೆ ನೀಡುವ ಉದ್ದೇಶವಿತ್ತು. ಈಗ ಅದಕ್ಕೂ ಕಲ್ಲು ಬಿತ್ತು. ಒಳಗಿನ ಕೆಲಸ ಮುಗಿಸಿ ಕೈ ತೊಳೆಯುತ್ತಾ ಯೋಚಿಸಿದಳು....ಬಹುಶಃ ಇಂತಹ ಒಂದು ಸಂದರ್ಭಕ್ಕಾಗಿ ಆಕೆ ಕಾದಿದ್ದು ತನ್ನ ಅಭಿಪ್ರಾಯವನ್ನು ಹೊರ ಹಾಕಿರಬಹುದು. ಒಂದುವೇಳೆ ಅದೇ ಅವಳ ಅಭೀಷ್ಟವಾಗಿದ್ದರೆ ಯಾರು ತಾನೇ ಏನು ಮಾಡಿಯಾರು ? ಅವಳು ದಾಸಿಯಾಗಿ ದುಡಿಯುತ್ತಿರುವುದೂ ನಿಜ. ನೂತನ ವಿಧಿ–ವಿಧಾನಗಳ ಬಳಕೆಯೂ ಸಹ ಅವಳಿಗಿಲ್ಲ. ಮತ್ತೇಕೆ ಯೋಚನೆ ? ಸೀರೆ ಬಟ್ಟೆ ಒಡವೆಗಳ ವ್ಯಾಮೋಹವಿದೆ. ಅವನ್ನಿಷ್ಟು ಅವಳಿಗೆ ನೀಡಿದರೆ ತೃಪ್ತಿ ಹೊಂದಿಯಾಳು ...ಒಡನೆ ಊಹೆಗೂ ನಿಲುಕದ ಸಣ್ಣನಗು ತುಟಿ

ಗಳಲ್ಲಿ ಮೂಡಿ ಮಾಯವಾಯಿತು.

ಕೈಯನ್ನು ಟವಲಿಂದ ಒರೆಸಿಕೊಂಡು ಕೆಂಪು–ಹಸುರುವರ್ಣಗಳ ಹೊಸ ಸೀರೆಗಳನ್ನು ಅವಳ ಕೈಯಲ್ಲಿಟ್ಟು " ನಿನ್ನ ಬಳಿ ಒಳ್ಳೆಯ ಸೀರೆಗಳಿಲ್ಲ, ಇವನ್ನಿಟ್ಟುಕೊ ನಾಗೂ." ಎಂದಳು.

ಆ ದನಿಯಲ್ಲಿ ಸಕ್ಕರೆಯ ಸವಿಯನ್ನು ಕಂಡಳು ಮಡದಿ ಆಕ್ಷಣ ಮೂಡಿದ ಹರ್ಷ ಸುಗ್ಗಿಮಯವಾಗಿ ಮುಖಕ್ಕೆ ನುಗ್ಗಿ ಬಂದಾಗ ಕಣ್ಣುಗಳು ಅರಳಿ, ತುಟಿಗಳಲ್ಲಿ ಹೂನಗೆ ಚೆಲ್ಲಿತು.

" ನಿಜವಾಗಿಯೂ ಇವು ನನಗೇನಾ ?"

" ಹೌದು, ನಾಗೂ."

ಟ್ರೆಣ್. ಟ್ರೆಣ್. ಟ್ರೆಣ್. ಟ್ರೆಣ್. ಸದ್ದು ಅದೇ ಸಮಯದಲ್ಲಿ ಕೇಳಿ ಬಂತು.

ರಿಸೀವರನ್ನು ಕೈಗೆತ್ತಿಕೊಂಡೊಡನೆ ಆ ಕಡೆಯಿಂದ ಕೇಳಿ ಬಂದುದು ಪದ್ಮಾ ಕಮಲಾನಿಯ ಧ್ವನಿ " ಡಾಕ್ಟರ್, ಎಮರ್ಜನ್ಸಿ ಕೇಸೊಂದು ನಿನಗಾಗಿ ಕಾದಿದೆ."

" ಹೇಗೂ ನಿನ್ನ ಡ್ಯೂಟಿ ಇದೆ. ನೀನೇ ನೋಡಿಕೊಂಡು ಬಿಡು."

" ಆಗಲೇ ಹೇಳಿದೆನಲ್ಲಾ, ನಿನಗಾಗಿ ಕಾದಿದೆ.... ಪೇಷೆಂಟ್ ಯಾರು ಗೊತ್ತೆ ?"

" ಯಾರು?"

" ಜುಬೇದಾ ಬೇಗಂ !"

" ಓ....ಹೋ! ಅವಳೆಂದೂ ನೋವು ಪಟ್ಟುದೇ ಇಲ್ಲವಲ್ಲಾ ?"

" Intestinal obstruction ನೋವು ತುಂಬ ಇದೆ, ತಡೆದು ಕೊಳ್ಳಲಾರಳು. ನಿನ್ನ ನಿರೀಕ್ಷೆಯಲ್ಲೇ ಇದ್ದಾಳೆ. ಬರುವಾಗ ಡಾ|| ಚಂದ್ರಕಾಂತರನ್ನೂ ಕರೆದು ತಾ. ಅವರೇ ಅನಸ್ತೇಶಿಯಾ ಕೊಡಬೇಕಂತೆ, ಆಪರೇಶನ್ನಿಗೆ ನೀನು...."

" ಓ ! ಹಾಗಿದ್ದರೆ ವ್ಯಾನು ಕಳುಹಿಸು."

ಕಮಲೇಶ್ ವಿಷಯವನ್ನು ಚಂದ್ರಕಾಂತನ ಮುಂದಿಟ್ಟಳು. ಅವನು

ಯೋಚಿಸಿ ಅಂದ " ಆಸ್ಪತ್ರೆಯಿಂದ ಈಗಷ್ಟೆ ಬಂದದ್ದು. ಡಾ|| ಜುಬೇದಾ ಅಲ್ಲದಿದ್ದರೆ ಬೇರೆ ಯಾರಿಗಾದರೂ ನೋಡಿಕೊಳ್ಳಿ ಎನ್ನಬಹುದಾಗಿತ್ತು."

ಚಂದ್ರಕಾಂತ್ ಎದ್ದು ನಿಂತ. ಕಮಲೇಶ್ ಹೊರಡಲು ಅಣಿಯಾದಳು. ಹೊತ್ತು ಮಿಂಚುವುದರೊಳಗಾಗಿ ವ್ಯಾನು ದೂರದಲ್ಲಿ ಘಂಟಾರವಗೈಯ್ಯುತ್ತಾ ಬರುತಿದ್ದುದು ಕೇಳಿಸಿತು. ಹೊರಡಲು ಕಳಚಿದ ಬಟ್ಟೆಗಳನ್ನು ಜೋಡಿಸಿ ಬೀರುವಿನಲ್ಲಿಟ್ಟು, ಹರಡಿ ಬಿದ್ದಿದ್ದ ಇತರೆ ವಸ್ತುಗಳಿಗೆ ಕೈ ಹಚ್ಚುವುದರೊಳಗಾಗಿ ವ್ಯಾನು ಮನೆಯ ಮುಂದೆ ನಿಂತಿತು. ಚಂದ್ರಕಾಂತ್ ಅಣಿಯಾಗುವುದರೊಳಗಾಗಿ ಅನೇಕ ವಸ್ತುಗಳು ಸ್ವಸ್ಥಾನವನ್ನಲಂಕರಿಸಿದುವು.

ಆಸ್ಪತ್ರೆಯ ಸಾಲು ಮೆಟ್ಟಿಲುಗಳನ್ನು ಹತ್ತುವಾಗ ತಣ್ಣನೆಯ ತಂಗಾಳಿ ಮುಖ ಮೈಗಳನ್ನು ಮೃದುವಾಗಿ ನೇವರಿಸಿತು. ದಂಪತಿಗಳು ಆಪರೇಶನ್ ಥಿಯೇಟರನ್ನು ಸೇರುವಷ್ಟರಲ್ಲಿ ತುರ್ತು ಆಪರೇಶನ್ನಿಗೆ ಅಣಿಯಾಗಿತ್ತು. ನೋವನ್ನು ತಡೆಯಲಾರದ ಸ್ಥಿತಿಗೆ ಬಂದಾಗ ಆಪರೇಶನ್ನಿಗೆ ಅಣಿಮಾಡಲು ಅವಳೇ ಹೇಳಿದ್ದಳು. ಡಾ|| ಶರಣ್ ಡಾ|| ಪದ್ಮಾಕಮಲಾನಿ ಆಗಲೇ ಅಲ್ಲಿದ್ದರು. ಸಕಲವೂ ಸುವ್ಯವಸ್ಥೆಯಲ್ಲಿ ನಡೆಯುತ್ತಿರುವುದನ್ನು ಸ್ವಯಂ ಜುಬೇದಳೇ ಗಮನಿಸುತಿದ್ದಾಳೆ. ಕಮಲೇಶ್ ಒಳಹೋಗುತ್ತಲೂ ಕೈಯನ್ನು ಅದುಮಿ ಹಿಡಿದುಕೊಂಡು " ತಡೆಯಲಾರೆ ಕಮಲೇಶ್ !" ಎಂದಳು. ಆ ನಿಮೀಲಿತ ನೇತ್ರಗಳಲ್ಲಿ ನಸು ಭಯ ಭೀತಿಯ ಛಾಯೆ ಹೊರ ಹೊಮ್ಮುತಿತ್ತು. ಹಣೆಯ ಮೇಲೆ ಕೈಯಿಟ್ಟು ಅನುಕಂಪಿತ ಧ್ವನಿಯಲ್ಲಿ " ಭಯಪಟ್ಟುಕೊಳ್ಳಬೇಡ." ಎಂದಳು ಕಮಲೇಶ್. ಚಂದ್ರಕಾಂತ್ ತಿಳಿಹಾಸ್ಯವಾಣಿಯಲ್ಲಿ ಅಂದ " ಇದೆಲ್ಲಾ ಏನು ಮಹಾ ಡಾಕ್ಟರ್ !"

" ಪರವಾಯಿಲ್ಲ...."

ಹೊತ್ತು ಯಾವುದೋ ದಿವ್ಯಮಂತ್ರ ಶಕ್ತಿಗೊಳಗಾದಂತೆ ಮಾಯಕತೆಯಿಂದ ಉರುಳುತ್ತಿದೆ, ಕಾರ್ಯ–ಕಾರಣಗಳೊಡನೆ ಸ್ಪರ್ಧೆ ಹೂಡಿ....

ಯಶಸ್ವೀ ಆಪರೇಶನ್ ಮುಗಿದ ಮೇಲೆ ಡಾ|| ಚಂದ್ರಕಾಂತ್ ಮನೆಗೆ ಹೊರಟುನಿಂತ. ಡಾ|| ಜುಬೇದಳಿಗೆ ಪ್ರಜ್ಞೆ ಬರುವತನಕ ಇಲ್ಲಿದ್ದು ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದ ಕಮಲೇಶಳಿಗೆ ಏನು ಮಾಡುವುದೆಂಬ ಯೋಚನೆ ಮೂಡಿತು. ಪ್ರಾಣಾಪಾಯ ಸ್ಥಿತಿಯಲ್ಲಿ ಯಶಸ್ವೀ ಆಪರೇಶನ್

ನಡೆಸಿ ತಕ್ಷಣ ಬಿಟ್ಟು ಹೋಗಲು ಮನಸ್ಸಾಗಲಿಲ್ಲ. ಪದ್ಮಾ ಕಮಲಾನಿ ಮುದನಾಪುರ್ ವಿಜಯಾರವರು ರಾತ್ರಿ ಡ್ಯೂಟಿಯನ್ನು ಹೊತ್ತಿದ್ದುದರಿಂದ ನಿಶ್ಚಿಂತೆಯಿಂದ ಮನೆಗೆ ಹೋಗಬಹುದಾಗಿದ್ದರೂ ಅವಳಿಗೆ ಮಾತು ಕೊಟ್ಟುದುದಕ್ಕಾಗಿ ಒಂದು ಗಂಟೆ ಇದ್ದು ಹೋಗೋಣವೆಂಬ ಮನಸ್ಸು. ನೋಡಿಕೊಳ್ಳಲು ನುರಿತ ಡಾಕ್ಟರುಗಳೇ ಇರುವಾಗ ಇನ್ನೇಕೆ ಎಂಬುದು ಚಂದ್ರಕಾಂತನ ನಿಲುವು.

"ಇನ್ನೂ ಸಾಕಷ್ಟು ಸಮಯವಿದೆ ಡಾಕ್ಟರ್. ಸ್ವಲ್ಪ ಹೊತ್ತು ಇದ್ದೇ ಹೋಗೋಣ."

ಇತರ ಡಾಕ್ಟರುಗಳ ಮಧ್ಯದಲ್ಲಿದ್ದ ಚಂದ್ರಕಾಂತನಿಗೆ ಮಡದಿಯ ಕೇಳಿಕೆ ಗಂಟಲು ಹಿಸುಕಿದಂತಾಯಿತು. ಪ್ರತಿ ನುಡಿಯದೆ ಸುಮ್ಮನೆ ನಿಂತ. ಡಾ|| ಶರಣ್ ಜುಬೇದಳಿಗೆ ಡ್ರಿಪ್ ಕೊಡುವುದರಲ್ಲಿದ್ದ. ಕಮಲೇಶ್ ನಾಡಿ ನೋಡಿದಳು. ಅಲ್ಲಿ ಇನ್ನು ತನ್ನ ಅಗತ್ಯವಿರದಿದ್ದುದರಿಂದ ಚಂದ್ರಕಾಂತನಿಗೆ ಸಮಾಧಾನವೂ ಇಲ್ಲ. ಸಹನೆಯೂ ಉಳಿಯಲಿಲ್ಲ. ವೈ ಮನಸ್ಸುಗಳು ನಂಜಿನ ಉಗ್ರಾಣವಾದುವು. ಕಮಲೇಶಳಿಗೆ ಇನ್ನು ಅಲ್ಲಿರಲು ಮನಸ್ಸಾಗದೆ ಎದೆಯಾಳದಲ್ಲಿ ಉಭಯ ಸಂಕಟ ತುಂಬಿಕೊಂಡು ಹೊರಟಳು.

"ನೀವು ಈಗಲೇ ಹೊರಟುದುದು ತಿಳಿದರೆ ಡಾ|| ಜುಬೇದಾ ಬೇಸರಪಟ್ಟುಕೊಳ್ಳಬಹುದು. ಪ್ರಜ್ಞೆ ಬರುವವರೆಗೆ ಇದ್ದು ಹೋಗಿಬಿಡಿ." ಎಂದ ಡಾ|| ಶರಣ್.

"ನಿಮಗಿಂದು ರಾತ್ರಿ ಡ್ಯೂಟಿಯೇ ?"

ಆ ವಕ್ರೋಕ್ತಿ ಚಂದ್ರಕಾಂತನಿಗೆ ಎಷ್ಟೊಂದು ಸಹಜವಾಗಿತ್ತೋ ಇತರರಿಗೆ ಅಷ್ಟೇ ಅಸಹ್ಯವಾಯಿತು. ಕಮಲೇಶ್ ಕರವಸ್ತ್ರವನ್ನು ತಡುಕುವ ನೆವದಲ್ಲಿ ಬೇರೆಡೆಗೆ ಗಮನ ಹರಿಸಿದಂತೆ ನಟಿಸಿ ಆ ಘಟನಾವಳಿಯಿಂದ ವಿಮುಖಳಾದರೂ ಗಾಣಕ್ಕೆ ಕೊಟ್ಟ ಕಬ್ಬಿನಂತಾಯಿತು ಎದೆ. ಗೆಳತಿಯರಿಗೆ ಹೇಳಿಕೊಂಡು ಅಲ್ಲಿ ನಿಲ್ಲದೆ ಹೊರಟೇ ಬಿಟ್ಟಳು. ಹೊಸ್ತಿಲು ದಾಟುವ ಮುನ್ನ ನೋಟ ಜುಬೇದಳ ಕಡೆ ಹರಿಯಿತು. ಮುಖ ಕೆಂಪಡರಿ ಹಣೆಯ ಮೇಲೆ ಬೆವರಿನ ಹನಿಗಳು ತುಂತುರು ತುಂತುರಾಗಿ ಮೂಡಿವೆ. ಮಾಂಸಲ ಶರೀರ ತುಂಡುಗಡಿದ ಮರದ ದಿಮ್ಮಿಯಂತೆ ಮಂಚದ ಮೇಲೆ ಮಲಗಿತ್ತು.

ವ್ಯಾನು ದಂಪತಿಗಳ ಸಹಿತ ಹೊರಟಿತು.

ವ್ಯಾಕುಲಿತ ಹೃದಯದಲ್ಲಿ ವಿಪ್ಲವಕಾಂಡ ನಡೆಯುತಿತ್ತು. ಯಾವುದೋ ಅತ್ಯಂತ ಹರಿತವಾದ ಕತ್ತಿಯಲುಗಿನ ಮೇಲೆ ಹರಿದಾಡುತಿದ್ದ ಮನಸ್ಸು ವ್ಯಾನು ಗಕ್ಕನೆ ನಿಂತೊಡನೆ ಬಾಹ್ಯ ಜಗತ್ತಿಗೆ ಮರಳಿತು. ಇಳಿದು ಬ್ಯಾಗನ್ನು ಕೊಂಡೊಯ್ದು ಕೊಠಡಿಯಲ್ಲಿಟ್ಟು ನೀರುಮನೆಗೆ ಹೋದಳು. ಏಕಾದಶಿ ಆಚರಿಸಿದ ಪಾರ್ವತಮ್ಮ ಮಣೆಯಮೇಲೆ ಕುಳಿತು ಬತ್ತಿ ಹೊಸೆಯುವದರಲ್ಲಿದ್ದಳು. ಸೊಸೆಯ ಆಗಮನ ಗಮನವನ್ನು ಸೆಳೆದೊಡನೆ ಕಲ್ಲು ಬಂಡೆಗಳ ತಾವಿನಲ್ಲಿ ನುಗ್ಗಿ ಹರಿಯುವ ತೊರೆಯಂತೆ ಆಕೆಯ ಜ್ಞಾನಧಾರೆ ಹರಿಯ ಹತ್ತಿತು. ಹೆಣ್ಣಾದವಳು ಸಂಸಾರಕ್ಕೆ ನಡೆದುಕೊಳ್ಳಬೇಕಾದ ರೀತಿ ನೀತಿಗಳನ್ನು ಸಾರಿ ಸಾರಿ ಹೇಳುವಾಗ ತಾನು ಕಷ್ಟಪಟ್ಟ ಬಗೆಯನ್ನು ನೂರು ವಿಧದಲ್ಲಿ ಬಣ್ಣಿಸಿದುದು ಎಲ್ಲರಿಗಿಂತ ಹೆಚ್ಚಾಗಿ ಚಂದ್ರಕಾಂತನಿಗೆ ಕೇಳಿಸಿತು. ಅದರ ಹಿತಾಹಿತಗಳನ್ನು ಬದಿಗೊತ್ತಿ ಒಳಹೋದ ಕಮಲೇಶಳಿಗೆ ಮಾಡುವಂತಹ ಕೆಲಸವೇನೂ ಇರಲಿಲ್ಲ. ಸವಿಗಾಳಿಯ ಸೇವನೆಗಾಗಿ ಮೆಟ್ಟಲಿಳಿದು ಅಂಗಳದ ಕಡೆ ಹೋದಳು. ಒಳಗಡೆ ಊಟ ಉಪಚಾರ ನಡೆಯುತಿತ್ತು. ಮಕ್ಕಳು ತಮ್ಮ ಹೆಚ್ಚಿನ ಭಾಗಕ್ಕಾಗಿ ಉತ್ತಮ ಭಾಗಕ್ಕಾಗಿ ಪರದಾಡುತ್ತಿದ್ದರು. ಯಜಮಾನಿಯೂ ಯಜಮಾನರುಗಳೂ ಲೋಪದೋಷಗಳನ್ನು ಬೆದಕಿ ಕೂಗಾಡುತಿದ್ದರು. ಕೇಳಲಾರದೆ ಒಳಬಂದು ಮಕ್ಕಳನ್ನು ಸಂತೈಸಲು, ಅವರು ಬಯಸಿದ 'ಹೆಚ್ಚಿನ ಭಾಗ' 'ಉತ್ತಮ ಭಾಗ'ಗಳನ್ನು ನೀಡಿ ಹಿತವಾದ ಹೇಳಿದರೂ ಗದ್ದಲ ಮುಗಿಯುವಂತಿಲ್ಲ.

" ಬುದ್ಧಿ ಬಂದ ಕಾಲಕ್ಕೆ ಕಲಿತುಕೊಳ್ಳುತ್ತಾರೆ ಬಿಡಿ " ಎಂದಳು ನಾಗವೇಣಿ. ಚಂದ್ರಕಾಂತ್ ಅಲ್ಲಿಂದಲೇ ಗದರಿಕೊಂಡ. ಕೃಷ್ಣಮೂರ್ತಿಯ ದನಿಯೂ ಹೊರಬಿತ್ತು. ಯಜಮಾನಿಯ ಬೆದರಿಕೆಯೂ ಕೇಳಿಸಿತು. ಆದರೂ ಮಕ್ಕಳು ಮಣಿಯಲಿಲ್ಲ.

" ಕಾಲ ಕೆಟ್ಟುಹೋಯಿತು. ಗುರುಹಿರಿಯರಿಗೆ ಕಲಿತವರೇ ಮಣಿಯದಿರುವಾಗ ಮಕ್ಕಳು ಮಣಿಯದಿದ್ದರೆ ಆಶ್ಚರ್ಯವೇನಿಲ್ಲ." ಎಂದು ಮಂಗಳ ಹಾಡಿದಳು ಯಜಮಾನಿ. ಅವಳ ಮಂಗಳಗಾನ ಇಂದು ನಿನ್ನೆಯದಲ್ಲವಾದು

ದರಿಂದ ಅದರೆಡೆಗೆ ಸೊಸೆಯರ ಗಮನ ಹರಿಯಲಿಲ್ಲ.

ಕಾರಿರುಳು ಹೆಜ್ಜೆ ಇಡುತ್ತಿದೆ....

ಇಲ್ಲಿ ಎಚ್ಚರಿರುವುದಕ್ಕಿಂತ ನಿದ್ದೆ ಮಾಡುವುದು ಲೇಸು....ಅಂಬರವನ್ನು ನಿಟ್ಟಿಸುತ್ತಾ ಚಿಂತಿಸಿದಳು ಕಮಲೇಶ್. ಆದರೆ ಮಕ್ಕಳನ್ನು ನಿದ್ದೆ ಮಾಡಿಸಲು ಕರೆದೊಯ್ದ ನಾಗು ಇನ್ನೂ ಬಂದಿಲ್ಲ. ಆ ಮಕ್ಕಳು ಮಲಗಿ ಇವಳು ಬರುವುದು ಇನ್ನೆಷ್ಟು ಹೊತ್ತಿಗೋ....ಊಟಕ್ಕೆ ಅಣಿಗೊಳಿಸಿ ಬಿಸಿ ಬಟ್ಟಲುಗಳನ್ನು ತೊಳೆಯತೊಡಗಿದಳು.

....ನಾಗವೇಣಿಯ ಹೊಣೆಗಾರಿಕೆಗೆ ನಿಜವಾಗಿಯೂ ಪುರಸ್ಕಾರವಿಲ್ಲ. ಗಾಣದೆತ್ತಿನಂತೆ ಅವಳು ದುಡಿಯುವುದೂ ಹೌದು. ನಾಗರಿಕತೆ ಸುಳಿಯದ ಮನೆಯಲ್ಲಿ ನಾಗರಿಕ ಸೌಲಭ್ಯಗಳೂ ಇಲ್ಲ, ಮುಂದೆ ಒದಗುವ ನಂಬುಗೆಯೂ ಇಲ್ಲ. ಇಷ್ಟಾದರೂ ಕಟೂಕ್ತಿ ಕಣ್ಣೀರು ತಪ್ಪುವಂತಿಲ್ಲ ...ತನ್ನ ವಲಯದಾಚಿನ ವಿಶಾಲ ಜಗತ್ತಿನೆಡೆಗೆ ಖಿನ್ನ ಲೋಹಿತ ನೇತ್ರಗಳನ್ನಟ್ಟಿ ಅದರ ವೈಶಾಲ್ಯತೆಯನ್ನು ಅಳೆಯುವಾಗ ಅನಂತವೂ ಅಪ್ರಮೇಯವೂ ಆದ ನಕ್ಷತ್ರ ಖಚಿತ ನಭೋ ಮಂಡಲದ ಮುಂದೆ ಮಹಾ ಪೃಥ್ವಿ ಸಾಮಾನ್ಯ ಮಾನವ ಸಂಸರ್ಗದಿಂದ ಅಪವಿತ್ರಳಂತೆ ಅಸ್ಪೃಶ್ಯಳಂತೆ ತೋರುತ್ತಾಳೆ ಎಂದುಕೊಂಡಳಾ ಲಲನೆ.

ದೂರದ ಚರ್ಚಿನ ಗಂಟೆ ಗಂಭೀರ ದನಿಯಲ್ಲಿ ಹತ್ತು ಬಾರಿ ಮೊಳಗಿತು. ನಾಗವೇಣಿ ಮಕ್ಕಳನ್ನು ಮಲಗಿಸಿ ಒಳ ಬಂದಾಗ ಕಮಲೇಶ್ ಕಸವುಡುಗುತಿದ್ದಳು.

" ನಿಮಗೆ ಹೊತ್ತಾಯಿತೇನೋ...."

" ಇಲ್ಲ ...ನಾಗೂ."

ಊಟ ಮುಗಿದ ನಂತರ ನಾಗವೇಣಿಯ ಕೈಗೆ ಇನ್ನೂರು ರೂಪಾಯಿನ ಎರಡು ನೀಲಿ ನೋಟುಗಳನ್ನಿಟ್ಟು—" ನಿನಗೇನಾದರೂ ಬೇಕಿದ್ದರೆ ತೆಗೆದುಕೋ ನಾಗೂ."

" ಇನ್ನೂರು ರೂಪಾಯಿ....?" ಅರಳಿದ ಕಣ್ಣುಗಳಲ್ಲಿ ಭಯಾಶ್ಚರ್ಯದ ಛಾಯೆ ಸುಳಿದಾಡಿತು. ಎಂದೆಂದೂ ಅಷ್ಟು ಮೊತ್ತದ ಹಣ ತನ್ನ ಕೈಗೆ ಬಂ

ದಿರಲಿಲ್ಲವಾದುದರಿಂದ ತನ್ನ ಕಣ್ಣುಗಳನ್ನೇ ನಂಬದಷ್ಟು ಅಚ್ಚರಿಯಿಂದ ಬೊಗಸೆಗಂಗಳು ಇನ್ನಷ್ಟು ವಿಸ್ತೃತವಾದುವು.

"ಹೌದು....ನಿನಗೇನು ಬೇಕೋ ತೆಗೆದುಕೋ."

"ನಿಜವಾಗಿಯೂ ನನಗೆ ?"

"ಹೌದು ನಾಗೂ." ಮುಗುಳುನಗೆ ಬೀರಿದಳು ಕಮಲೇಶ್.

ಆ ಸುಮುಹೂರ್ತದಲ್ಲಿ ಉಂಟಾದ ಆನಂದಾತಿರೇಕದಿಂದ ಮಾತುಕತೆಗಳೇ ಹೊರಡದಾದುವು ಹೇಗೆ ಕೃತಜ್ಞತೆ ಸಲ್ಲಿಸಬೇಕೋ ಅದೂ ಸಹ ಹೊಳೆಯಲಿಲ್ಲ. ಅತ್ಯಂತ ಸಂಭ್ರಮವೇಗಕ್ಕೆ ಸಿಲುಕಿ ಅವಳ ಚಂಚಲ ಚಿತ್ತ ಉತ್ಕ್ರಾಂತವಾಗ ತೊಡಗಿದುದನ್ನು ನೋಡು ನೋಡುತ್ತ ಕಮಲೇಶಳ ಸ್ನೇಹಪೂರ್ಣ ನಯನಗಳಲ್ಲಿ ಬಾಷ್ಪ ಬಿಂದುಗಳು ತುಂಬಿ ಬಂದುವು.

"ಎಷ್ಟು ದುಡಿದರೂ ವರ್ಷಕ್ಕೆರಡು ಸೀರೆ ದಕ್ಕಿಸಿಕೊಳ್ಳಬೇಕಾದರೆ ಸೇರುಗಟ್ಟಲೆ ಕಂಬನಿ ಕರೆಯಬೇಕು. ಹಿಡಿ ಶಾಪ ಹಾಕಿಸಿಕೊಳ್ಳಬೇಕು. ಈ ಎಲ್ಲಾ ಕಷ್ಟಗಳಿಂದಾಗಿ ಸೀರೆ ಬೇಡುವುದೂ ಸಹ ಬೇಡ ಅನ್ನಿಸುತ್ತೆ".

ಕಮಲೇಶ್ "ಹೂ"ಗುಟ್ಟಿದಳು. ಚಿತ್ತ ಕಮಲಕೋಮಲವಾಗಿತ್ತು.

ಮರುದಿನ ಆಸ್ಪತ್ರೆ ಮುಟ್ಟಿದಾಗ ಮೊದಲ ಭೇಟಿ ಜುಬೇದಳದ್ದು. ನೋವು ತಡೆಯಲಾರದೆ ಎಳೆಯ ಮಗುವಿನಂತಾಡುತ್ತಿದ್ದುದನ್ನು ನೋಡಿ–

"ಏಕೆ ಇಷ್ಟೊಂದು ಸಪ್ಪೆಯಾಗಿದ್ದಿ ?"

"ಬಹಳ ನೋವು !"

"ಈ ದೊಡ್ಡ ಶರೀರಕ್ಕೆ ಆ ನೋವು ಇರುವೆ ಕಚ್ಚಿದಷ್ಟೂ ಆಗಿರಲಿಕ್ಕಿಲ್ಲ!"

"ಸಿಕ್ಕಿದ್ದೇ ಸಾಕು ಅಂತ ಕುರಿ ಕೊಯ್ದಂತೆ ಕೊಯ್ದಿದ್ದಿ ನೀನು !"

"ಕುರಿ ಕೊಯ್ದಂತೆ ಕೊಯ್ಯುವುದು ಬೇಗಂ ಸಾಹೇಬರು !"

"ನಿನಗೊಂದು ವೇಳೆ ಹೀಗಾಗಿದ್ದರೆ ಕೊಯ್ದು ಅದರ ಸುಖ ತೋರಿಸುತ್ತಿದ್ದೆ !"

ಇಬ್ಬರ ಮುಖದಲ್ಲೂ ಮಂದಹಾಸ ನಲಿಯಿತು.

ಕಮಲೇಶ್ ಅವಳ ಬಳಿಯಲ್ಲಿ ಕುಳಿತು ನಕ್ಕು ನಗಿಸಿ ಸಾನಂದದಿಂದ ಸ್ವಲ್ಪಹೊತ್ತು ಕಳೆದು, ಆಫೀಸಿಗೆ ಹೋಗಿ ಮೂರುದಿನಗಳ ರಜೆ ಬರೆದು ಹಾಕಿ, ಚಂದ್ರಕಾಂತನಿಗೆ ವರದಿ ಒಪ್ಪಿಸಿ ಮನೆಯ ಹಾದಿ ಹಿಡಿದಳು. ಶಾಲಾ ಕಾಲೇಜಿಗೆ ಹೊರಡುತಿದ್ದ ಮಕ್ಕಳಿಗೆ ಕಮಲೇಶಳನ್ನು ನೋಡುತ್ತಲೂ ತಮಗೂ ಮನೆಯಲ್ಲಿರುವ ಮನಸ್ಸು. ಚೇತನಾ ಎದೆಗಾಂತು ಹಿಡಿದ ಪುಸ್ತಕಗಳನ್ನು ಮೇಜಿನ ಮೇಲಿಟ್ಟು "ನನಗೀಗ ಹೋಗಲು ಮನಸಿಲ್ಲ!" ಎಂದಳು.

"ಓ....! ಪರೀಕ್ಷೆ ಸಮೀಪಿಸುತ್ತಿದೆ. ಒಳ್ಳೆಯ ಅಂಕಗಳನ್ನು ಪಡೆಯದಿದ್ದಲ್ಲಿ ಮೆಡಿಕಲ್ ಕಾಲೇಜಿಗೆ ಸೀಟು ಸಿಗುವುದಿಲ್ಲ. ಬಸಂತ್ ಆಗಲೇ ಮುಂದಿದ್ದಾನೆ. ನೀನವನನ್ನು ಬೆನ್ನಟ್ಟಬೇಕು!"

ಚೇತನಳ ಕೆನ್ನೆಗಳು ಚೆಂಗುಲಾಬಿಗಳಾದುವು. ಆ ಕ್ಷಣ ಅಲ್ಲಿಂದ ಓಟ ಕಿತ್ತಳು. ಹಿಂದಿನಿಂದ ನಯನದ್ವಯಗಳೆರಡೂ ಅವಳನ್ನೇ ನಿಟ್ಟಿಸಿದುವು. ತಕ್ಷಣ ಅಳಿದ ಆತ್ಮೀಯ ಗೆಳತಿ ಜೇತನಳೊಡನೆ ಕಳೆದ ಸುದಿನಗಳು ಸ್ಮೃತಿಪಥದಲ್ಲಿ ಮಿನುಮಿನುಗಿ ಮುಖಮುದ್ರೆ ಮಳೆಬಿಸಿಲಾಯಿತು.

ಇಂಥ ಮಗುವನ್ನು ಹಾದಿಯಲ್ಲಿ ಹಾಕಿ ಹೋದಳಲ್ಲ, ಹೇಗೆ ಮನಸ್ಸು ಬಂತೋ....ಕಲಿತ ಹೆಣ್ಣು, ಸುಕುಮಾರನನ್ನು ಹೆತ್ತು ವಿದ್ಯೆ ಬುದ್ಧಿ ಕಲಿಸಿ ಪತಿಯ ಸ್ಥಾನಕ್ಕೆ ಅವನನ್ನು ತರಬಹುದಾಗಿತ್ತು. ಅಷ್ಟಲ್ಲದೆ ಗರ್ಭಸ್ಥ ಮುಗ್ಧ ಶಿಶುವನ್ನು ಹಿಂತಿರುಗಿ ಬಾರದ ಹಾದಿಗೆ ಹಚ್ಚಿ ಮಾರಣ ಹೋಮ ಗೈಯ್ಯುವುದೇ? ಹಾ....ಜೇತನಾ! ನಿನ್ನ ಕ್ರಮ ನಿಜವಾಗಿಯೂ ಅಕ್ರಮ!

"ಕಮಲೇಶ್!"

"ಹಾ! ಅದೆಲ್ಲಿಯ ಕರೆ?"

"ಇಲ್ಲೇ, ನಿನ್ನ ಒಳಿಯಲ್ಲೇ! ಕೇಳು, ಕಮಲೇಶ್. ಹುಟ್ಟಿಸಿದವ ಹುಲ್ಲ ಮೇಯಿಸುತ್ತಾನೆ. ಈ ಭೂಮಿಯಲ್ಲಿ ಯಾರಿಗೆ ಯಾರೂ ಅಲ್ಲ!"

"ಆದರೂ...."

"ಆದರೂ ಏನು?"

"ನಿನ್ನವರಾರೂ ಇಲ್ಲದಾಗ ಮಗುವನ್ನು ಕೈ ಬಿಡಲು ನಿನಗೆ ಹೇಗೆ ಮನಸ್ಸು ಬಂತು? ನೀನೇ ಯೋಚಿಸಿ ನೋಡು. ನಿಜವಾಗಿಯೂ ಇದು ಆತುರದ ಕ್ರಮ, ಚೇತನಾ!"

"ಅದೇನೇ ಇರಲಿ, ನಿನಗೂ ನನಗೂ ಇರುವ ಸಂಬಂಧ ಅಲೌಕಿಕ. ನಿನಗೂ ನನ್ನ ಮಗಳಿಗೂ ಇರುವ ಸಂಬಂಧವೂ ಸಹ ಅಲೌಕಿಕ. ಮುಂದೆ ನಿನ್ನವರಿಗೂ ನನ್ನ ಮಗಳಿಗೂ ಇರಬಹುದಾದ ಸಂಬಂಧವೂ ಕೂಡ ಅಲೌಕಿಕ. ಅಂದಮೇಲೆ ನಮ್ಮಿಂದೇನಾದೀತು ?....ಸರ್ವಂಶ್ರೀಚರಣೈ ಸಮರ್ಪಯಾಮಿ."

"ನಿಜ, ನಿಜ." ತನುಮನಗಳು ಮಿಡಿದುವು.

"ನನ್ನ ಮಗಳು ನಿನ್ನವಳಾಗಿದ್ದಾಳೆ. ನಿನ್ನ ಮಗಳು ನನ್ನವಳಾಗುತ್ತಾಳೆ !"

"ದೈವೇಚ್ಛೆ !"

ಹೊತ್ತು ಮಿಂಚಿತು. ತಂಗಾಳಿ ತಣ್ಣಗೆ ಬೀಡಿತು.

ಮಿಂದು ಒಳಬಂದ ಸ್ವರ್ಣಮಾಲಿನಿ- "ಇದೇನು ಸುಮ್ಮನೆ ಕುಳಿತುಬಿಟ್ಟೆದ್ದಿ ?"

ಬಂಡೆದ್ದ ಹಲವು ತರ್ಕವಿತರ್ಕಗಳ ಸಮುದಾಯದಿಂದ ಹೊರ ಬಂದಾಗ ನೀಳವಾದ ನಿಟ್ಟುಸಿರು ಹೊಮ್ಮಿತು. ಹೃದಯರಂಗದಲ್ಲಿ ನಾಟ್ಯವಾಡುತ್ತಿರುವ ಭಾವತರಂಗಿಣಿಯ ರುದ್ರಲಾಸ್ಯ ಒಮ್ಮೆಗೇ ನಿಂತುಹೋದರೂ ಅದರ ಧ್ವನಿ ತರಂಗ ಅಲೆಯಲೆಯಾಗಿ ಕೇಳಿಸುತ್ತಲೇ ಇದೆ. ಅನುದ್ದೇಶಿತ ಪ್ರಸಂಗ ಎಲ್ಲಿ ಹೇಗೆ ಆರಂಭವಾಯಿತೋ, ಆರಂಭವಾದ ಕ್ಷಣಗಳಿಗೆಯಲ್ಲೇ ಹೇಗೆ ಪುರಾತನವಾಯಿತೋ ಎಂಬುದೇ ಅರ್ಥವಾಗುವುದಿಲ್ಲ ಎಂದು ಕೊಂಡಾಗ ಹೃದಯದ ನೆಲೆಯಲ್ಲಿ ಅಸ್ತಿತ್ವ ಪಡೆದ ಯಾವುದೋ ಕಾತರ ಪ್ರಾರ್ಥನೆ ಪ್ರತಿಧ್ವನಿತವಾಗುತಿತ್ತು.

ಕಮಲೇಶ್ ಮಂದಹಾಸ ಬೀರಿ ಎದ್ದಳು. ತಣ್ಣೀರಿನಲ್ಲಿ ಮಿಂದು ಮಡಿಯುಟ್ಟು ಹಣೆಗೆ ತಿಲಕವಿಡುವಾಗ ಈ ಮೂರು ದಿನಗಳನ್ನೂ ಭಾರತಲಲನೆಯರಂತೆ ಪೂರ್ಣ ಗೃಹಿಣೀತ್ವದಲ್ಲಿಯೇ ಕಳೆಯುವೆ ಎಂದುಕೊಂಡು ಮನೆಗೆಲಸದಲ್ಲಿ ನಿಮಗ್ನಳಾದಳು.

"ನಿನಗಿರುವ ಶ್ರಮದಾನವೇ ಸಾಕು. ಮತ್ತೇಕೆ ಈ ತೊಂದರೆಯನ್ನೂ ತೆಗೆದುಕೊಳುತ್ತಿ?" ತಾಯಿಯ ನಲ್ಮೆಯ ನುಡಿ ಕಲ್ಸಕ್ಕರೆ ಪೂಸಿದಂತೆ ಹೊರಬಿತ್ತು.

"ಈ ಮೈಗೊಂದಿಷ್ಟು ವ್ಯಾಯಾಮ ಬೇಕು."

"ನಿನಗೆ ವ್ಯಾಯಾಮ ಕಡಿಮೆಯೆ ?"

ಕಮಲೇಶ್ ನಕ್ಕುಬಿಟ್ಟಳು.

ತಾಯಿಯೊಂದಿಗೆ ಮಾತುಕತೆಯಲ್ಲಿ ತೊಡಗಿರುವಂತೆಯೇ ಹೊತ್ತು ಕಳೆಯಿತ್ತು. ಕೈ ತುಂಬ ಕೆಲಸ ಮಾಡಬೇಕೆಂದು ಉದ್ದೇಶಿಸಿದ ಕಮಲೇಶಳಿಗೆ ಹೊತು ಉರುಳಿದುದರ ಪರಿವೆಯೇ ಇಲ್ಲವಾದಾಗ ಆಲಸ್ಯಕ್ಕೆ ಸೋಮಾರಿತನಕ್ಕೆ ನಾಂದಿಯಾದ ರಜೆ ಅಸಹ್ಯವಾಗಿ ತೋರಿ ಇನ್ನೆಂದೂ ರಜೆ ತೆಗೆದುಕೊಳ್ಳುವುದಿಲ್ಲ ಎಂದುಕೊಂಡಳು....ಬಾಳ್ಮಂಟಪವನ್ನು ಹೊಕ್ಕಿದ್ದಾಗಿದೆ. ಆದರ್ಶದ ಪೀಠವನ್ನೇರಿದ್ದೂ ಆಗಿದೆ. ಮತ್ತೇಕೆ ರಜೆಯ ಚಿಂತೆ? ಯೋಧ ಸೋತರೂ ಮುಕ್ತಿ. ಗೆದ್ದರೂ ಮುಕ್ತಿ. ಇಂದು ಮನಸ್ಸಿಗೆ ಶಾಂತಿ ಇಲ್ಲದಿದ್ದರೇನು ? ಆತ್ಮಕ್ಕೆ ಮುಕ್ತಿ ದೊರೆತರೆ ಸಾಕು....

"ಮಾ....!"

ಶಾಲೆಯಿಂದ ಬಂದ ಮಕ್ಕಳು ಕೈ ಕಾಲು ಮುಖ ತೊಳೆದುಕೊಂಡು ಒಳಗಡೆ ಗುಡುಗುಡು ಓಡಿ ಬಂದರು. ಎಡಬಲಗಳಲ್ಲಿ ಮೈ ಹಚ್ಚಿ ಕುಳಿತ ಮಕ್ಕಳಿಗೆ ಸಕ್ಕರೆಯ ಸವಿಯನ್ನು ಸವಿದಷ್ಟು ಹಿತ.

" ಊಟವಾದನಂತರ ನೀವಿಬ್ಬರೂ ಅಪ್ಪನಲ್ಲಿಗೆ ಹೋಗಿ ಬನ್ನಿ. ಮಧ್ಯಾಹ್ನ ಅವರು ಮನೆಯಲ್ಲಿರುತ್ತಾರೆ. ನೀವಿಲ್ಲದೆ ಅವರಿಗೆ ಬೇಸರ."

"ಕಳೆದವಾರ ಹೋಗಿದ್ದಾಗಿದೆ. ಮತ್ತೇಕೆ ಈಗ?" ಎಂದ ತಿಲಕ್.

"ಅಷ್ಟೇಕೆ ? ಮೊನ್ನೆ ಶಾಲೆಯಿಂದ ಬರುವಾಗ ಸಿಕ್ಕಿ ತುಂಬ ಹೊತ್ತು ಮಾತಾಡಿದ್ದೇವೆ." ನೆನಸಿದಳು ಸ್ವರೂಪ್.

"ಆದರೂ ಸಹ ಹೋಗಿ ಬನ್ನಿ."

ಊಟಕ್ಕೆ ಅಣಿಯಾಗುವಷ್ಟರಲ್ಲಿ ಚೇತನಾ ಆಗಮಿಸಿದಳು. ತಾಯಿ ಮಕ್ಕಳೊಡನೆ ಕಲೆತು ಆರಾಮವಾಗಿ ಮಾಡಿದ ಊಟ ಸುಗ್ಗಿಯಲ್ಲಿ ಮಾಡಿದ ಹುಗ್ಗಿಯಂತಿತ್ತು. ಊಟ ಮುಗಿಸಿದ ನಂತರ ತಿಲಕ್ ತಂಗಿಯೊಡನೆ ಹೊರಟ. ಕಮಲೇಶಳಿಗೆ ಮಧ್ಯಾಹ್ನದವರೆವಿಗೂ ಚೇತನಾ ತಾಯಿಯರೊಂದಿಗೆ ಮನೆಯ ಅಲಂಕಾರದಲ್ಲಿ ನಿರಾಳವಾಗಿ ಹೊತ್ತುಕಳೆಯಿತು.ಅನಂತರ ರೋಗಿಗಳ ಪರಿಷೆ. ತಿಲಕ್ ಹಿಂದಿರುಗಿ ಬರುವವರೆಗೂ ಕೈಗೆ ಬಿಡುವಿರಲಿಲ್ಲ. ಕೊನೆಯ ರೋಗಿಯನ್ನು ಬೀಳ್ಕೊಟ್ಟು ಒಳಬಂದಾಗ ತಿಲಕ್ ತಮ್ಮನ್ನು ಅಲ್ಲೇ ಇರಲು

ತುಂಬ ಒತ್ತಾಯ ಮಾಡಿದ ಸುದ್ದಿಯನ್ನು ಮುಂದಿಟ್ಟ.

"ನೀನು ಮದುವೆಗೆ ಮೊದಲೇ ಮನೆ ಮಾಡಿಕೊಳ್ಳದಿದ್ದಲ್ಲಿ ಇನ್ನೇನು ಗತಿಯಾಗಬೇಕಾಗಿತ್ತೋ" ನಿಟ್ಟುಸಿರು ಬಿಟ್ಟಳು ಸ್ವರ್ಣಮಾಲಿನಿ. ಆಕೆಯ ಸ್ನೇಹ ಮೇದುರ ನಯನಗಳಲ್ಲಿ ಬಾಷ್ಪ ಬಿಂದುಗಳು ತುಂಬಿ ಬಂದುವು.

ಸುಖ ಸಂಪತ್ತುಗಳಿಂದ ಕೂಡಿದ ಆಧುನಿಕ ಜೀವನದಲ್ಲಿ ಸಂತೋಷವೇ ಮಾಯವಾಗಿದೆ, ಆನಂದಪುರದಲ್ಲಿ ಆನಂದವೇ ಇಲ್ಲದಂತೆ. ಮಾನವ ಸುಖ ಸಂಪತ್ತುಗಳನ್ನು ಪಡೆಯಲು ಎಷ್ಟೊಂದು ಉತ್ಸಾಹ ತೋರುತ್ತಾನೋ ಅಷ್ಟೇ ಉತ್ಸಾಹವನ್ನು ಕಷ್ಟ ನಷ್ಟಗಳನ್ನು ಪಡೆಯಲು ಸಹ ತೋರಿಸುತ್ತಾನೆ. ಜನ್ಮ ಜನ್ಮಾಂತರಗಳ ದುರ್ನಿವಾರ ಕರ್ಮವೇಗ ಚಿತ್ತವನ್ನು ಉತ್ಕ್ರಾಂತಗೊಳಿಸು ವುದೆಂದು ಯಾರು ತಾನೇ ಬಲ್ಲರು? ಹಾ! ಈ ಜೀವನ ಎಷ್ಟು ಅದ್ಭುತವಾದು ದೋ ಅದನ್ನು ತಿಳಿದುಕೊಳ್ಳುವ ಆತ್ಮಾನುಭೂತಿ ಮೂಡುವುದೂ ಸಹ ಅಷ್ಟೇ ಅದ್ಭುತ....

ಕೋಟಿ ಕೋಟಿ ನಕ್ಷತ್ರಗಳ ಮಾಲೆ ಸೂಡಿದ ನಿಲಾಂಬರಧಾರಿಣಿ ನಿಶಿ ಯನ್ನು ಸಂವೇದನಾಶೂನ್ಯಳಂತೆ ಸುವಿಶಾಲ ನೇತ್ರದ್ವಯಗಳಿಂದ ನೋಡುತ್ತಾ ನಿಂತಳು ಕಮಲೇಶ್.

ತಿಲಕ್ ಆತ್ಮಗ್ಲಾನಿಯಿಂದ ನುಡಿದ "ಅಪ್ಪ ಚಿಕ್ಕಪ್ಪ ಅಜ್ಜ ಮೂವರೂ ರೌದ್ರಾವತಾರ ತಾಳಿದ್ದರು. ನಮ್ಮನ್ನು ಇದುವರೆವಿಗೆ ಹೊರಗೆ ಕಾಲಿಡಲು ಬಿಡಲಿಲ್ಲ. ಅಬ್ಬಬ್ಬ ನಮಗಂತೂ ಬಹಳ ಹೆದರಿಕೆಯಾಯಿತು. ಎಂದೂ ಅವರು ಇಷ್ಟು ಜೋರು ಮಾಡಿರಲಿಲ್ಲ....ಇನ್ನು ನಮ್ಮನ್ನು ಅಲ್ಲಿಗೆ ಕಳುಹಿಸ ಬೇಡಿ ಮಾ."

ಸ್ವರೂಪ್ ಮಾತಾಡದೆ ಸ್ವರ್ಣಮಾಲಿನಿಯನ್ನು ಬಿಗಿದಪ್ಪಿ ಮುಸು ಮುಸು ಅತ್ತಳು. ತಾಯಿ ಮಗಳು ಕೂಡಿ ಸಂತೈಸಿದರೂ ಅವಳ ದುಃಖ ಆರದು. ಚೇತನಾ ಅವಳನ್ನು ಮುದ್ದುಗೈದು ಮಾಲತಿಯ ಮಗುವಿನೊಂದಿಗೆ ಆಟವಾಡಲು ಎಳೆದೊಯ್ದಳು. ಅವರನ್ನು ಹಿಂಬಾಲಿಸಿದ ತಿಲಕ್ ಅಲ್ಲಿಂದಲೇ ಕೂಗಿ ಹೇಳಿದ "ಅವರೆಷ್ಟೇ ಒತ್ತಾಯ ಮಾಡಿದರೂ ಅಲ್ಲಿಗೆ ಹೋಗುವವ ರ್‍ಯಾರು ?"

ಕಮಲೇಶ್ ಊರ್ಧ್ವಮುಖಿಯಾಗಿ ಚಿಂತಿಸಿದಳು... ದಿನೇ ದಿನೇ ಉಗ್ರ

ಕ್ಷಿಸಿ ಹೋಗುತ್ತಿರುವ ಪ್ರೇಮ ನಿಧಿಯನ್ನು ಹೇಗಾದರೂ ಊರ್ಜಿತ ಗೊಳಿಸಲು ಸಾಧ್ಯವೆ? ಈ ಹರಿದು ಹಂಚಿದ ಸಂಸಾರವನ್ನು ಒಂದುಗೂಡಿಸಲು ದಾರಿಯಾದರೂ ಯಾವುದು?....ಈ ಪ್ರಶ್ನೆಗಳಿಗೆ ಉತ್ತರವನ್ನು ಭಯಗ್ರಸ್ತ ಮನಃಬುದ್ಧಿಗಳು ಹುಡುಕುತ್ತಲೇ ಇವೆ. ಆದರೆ ಅದರ ಜಾಡು ಇನ್ನೆಲ್ಲೋ....

ಮರುದಿನ ರಜೆಯಿದ್ದರೂ ಆಸ್ಪತ್ರೆಗೆ ಹೊರಡಲು ಅಣಿಯಾದ ಕಮಲೇಶಳನ್ನು ಕುರಿತು ಸ್ವರ್ಣನಾಲಿನಿ "ಅಂದಿನಿಂದ ಇಂದಿನವರೆವಿಗೆ ನಿನಗೆ ಬಿಡುವೇ ಇಲ್ಲ. ಚಂದ್ರಕಾಂತ್ ಹೇಗೂ ಸಂಸಾರಕ್ಕಾಗಿ ಚಿಕ್ಕಾಸೂ ಖರ್ಚು ಮಾಡಲಿಲ್ಲ. ಅವರೇನಾದರೂ ಸ್ವಲ್ಪ ಹಣಕೊಟ್ಟರೆ ಪಕ್ಕದಲ್ಲೊಂದು "ನರ್ಸಿಂಗ್ ಹೋಂ" ತೆರೆದು, ನೀನು ಅಲ್ಲಿಗೂ ಇಲ್ಲಿಗೂ ಅಲೆಯುವುದನ್ನು ತಪ್ಪಿಸಿಕೊಳ್ಳಬಹುದು. ಆಸ್ಪತ್ರೆಗೂ ಮನೆಗೂ ಓಡಾಡುವ ಶ್ರಮ ತಪ್ಪಿದರೆ ಎಷ್ಟೋ ಶ್ರಮ ಕಡಿಮೆಯಾಗುತ್ತದೆ"

ಕಣ್ಣ ಮುಂದಿನ ವಸ್ತುಗಳೆಲ್ಲಾ ಮೆಲ್ಲನೆ ಸುತ್ತಿದಂತಾಯಿತು. ಕಮಲೇಶ್ ಜಾಹಿರಾತಿಗೆ ಬೀರುವಂತಹ ಕೃತಕ ನಗೆ ಬೀರಿ ಸುಮ್ಮನಾದಳು.

ಅಧ್ಯಾಯ

೩೪

....ಹೇಮಂತ ಕಾಲೀನ ಮಧ್ಯಾಹ್ನ.

....ಮೇಲೆ ಸುಡು ಬಿಸಿಲು.

....ಒಳಗೆ ತಾಳಲಾರದ ಕಡು ಹಸಿವು.

ಮನೆಗೆ ಬೇಗ ಹೋಗೋಣವೆಂದು ಮನಸ್ಸು. ಆದರೆ ಚಂದ್ರಕಾಂತ ನೆಲ್ಲೂ ಕಾಣಸಿಗಲಿಲ್ಲ. ಅವನಿರುವೆಡೆಗಳಲ್ಲೆಲ್ಲಾ ಅಲೆದಲೆದು ಬೇಸತ್ತು ಹೊರಬಂದಾಗ ಅವನು ಪೋರ್ಟಿಕೋ ಬಳಿ ಡಾ|| ಥಾಮಸ್‌ರವರೊಡನೆ ಮಾತಾಡುತ್ತಾ ನಿಂತುದು ಗೋಚರಿಸಿತು. ಡಾ|| ಥಾಮಸ್‌ರವರಿಗೆ ವಿನೀತ ಳಾಗಿ ಕರಗಳನ್ನು ಜೋಡಿಸಿದಳು. ಅವರು ಪ್ರತಿವಂದಿಸಿ–"ದಂಪತಿಗಳಿಬ್ಬರೂ ಡಾಕ್ಟರು. ಒಂದೇ ಕಡೆ ಕೆಲಸ. ಇದಕ್ಕಿಂತ ಸುಖ ಇನ್ನೊಂದಿಲ್ಲ. ಇದ್ದರೆ ಹೀಗಿರಬೇಕು!" ಎಂದರು ತಿಳಿಹಾಸ್ಯ ಸರಸ ವಾಣಿಯಲ್ಲಿ.

ಮೂವರ ಮುಖದಲ್ಲೂ ಮೃದುಹಾಸ ನಲಿಯಿತು.

"ಎಂದಾದರೂ ಜಗಳವಾಡಿದ್ದೀರಾ?"

ಚಂದ್ರಕಾಂತ್ ನಕ್ಕು ಬಿಟ್ಟ.

" ಎರಡೂ ಕಡೆ ಓಡಾಡಬೇಕು. ಅಷ್ಟಕ್ಕೆ ಸಮಯವೇ ಇಲ್ಲ, ಸರ್!" ಇನಿದನಿ ಉತ್ತರಿಸಿತು.

" ಬರೀ ಸಿಹಿಯಿಂದೇನು? ಸ್ವಲ್ಪ ಖಾರವೂ ಬೇಕು!"

" ಸ್ವಂತ ಅನುಭವ!" ಚಂದ್ರಕಾಂತ್ ನಗೆ ಚಟಾಕಿ ಹಾರಿಸಿದ.

" ನನಗದು ಇಷ್ಟ. ಆದರೆ ನಮ್ಮವರು ಬರೀ ಸಪ್ಪೆ ಸಪ್ಪೆ. ನೀವಿಬ್ಬರೂ ಒಂದೇ ಮಟ್ಟಿಯಲ್ಲಿ ತಯಾರಾದವರು. ಸುಘಳಿಗೆಯಲ್ಲಿ ಆ ಖಾಡಕ್ಕಿಳಿದು ನೋಡಿ!"

ಮೂವರೂ ಕಿಲಕಿಲ ನಕ್ಕರು.

ಸ್ವಿಚ್ ಕೀಯನ್ನು ಜಣಿ ಜಣಿ ಸದ್ದು ಮಾಡುತ್ತಾ- "ಬನ್ನಿ ನಿಮ್ಮನ್ನೂ

ಹಾಗೇ ಬಿಟ್ಟು ಹೋಗುವೆ."

ಹಿರಿಯ ಡಾಕ್ಟರು ಹಾಗೆಂದಾಗ ಇಲ್ಲವೆನ್ನಲಾಗಲಿಲ್ಲ. ಇಬ್ಬರೂ ಹೊರಟರು. ಕಾರು ಸ್ಟಾರ್ಟ್ ಮಾಡಿದ ನಂತರ ಕೇಳಿದರು ಥಾಮಸ್–"ಎಲ್ಲಿ ಬಿಡಲಿ ?"

ದಿನವೂ ಮಧ್ಯಾಹ್ನ ರೋಗಿಗಳು ಮನೆಗೆ ಬರುತ್ತಿದ್ದುದರಿಂದ ಅವಳು ಮನೆಯಲ್ಲಿರಲೇಬೇಕು. ಎರಡೂ ಕಡೆ ಬಿಡಿ ಎನ್ನುವುದು ಸರಿಯಲ್ಲವೆಂದು "ಅಲ್ಲೇ ಬಿಟ್ಟು ಬಿಡಿ ಸರ್ !" ಎಂದ ಚಂದ್ರಕಾಂತ್. ಒಂದೆರಡು ಘಳಿಗೆಯೊಳಗಾಗಿ ಅವರನ್ನು ಅವಳ ಮನೆಯ ಮುಂದೆ ಇಳಿಸಿ ಸ್ಟಿಯರಿಂಗನ್ನು ತಿರುಗಿಸುತ್ತಲೂ ಇಬ್ಬರೂ ಕರಗಳನ್ನು ಜೋಡಿಸಿದರು–"ಪ್ರಣಾಮ್ ಸರ್!"

" ಪ್ರಣಾಮ್ !"

ಕಾರು ಸರ್ರನೆ ಹರಿದು ಹೋಯಿತು. ಇಬ್ಬರೂ ಒಳಗಡೆ ಹೋದರು. ಚಂದ್ರಕಾಂತ್ ಈಚೆಗೆ ಬಂದೇ ಇರಲಿಲ್ಲ. ಇಬ್ಬರೂ ಒಟ್ಟಿಗೆ ಕುಳಿತು ಉಂಡು ಅದೆಷ್ಟು ಕಾಲವಾಗಿತ್ತೋ. ಆದರೂ ಒಂದೆರಡು ಮಾತುಗಳಲ್ಲಿ ಎಲ್ಲವೂ ಮುಗಿಯಿತು. ಅವನಿಗೆ ವಿಶ್ರಾಂತಿ ತೆಗೆದುಕೊಳ್ಳಲು ತಿಲಕನ ಹಾಸಿಗೆಯನ್ನು ಅಣಿಮಾಡಿ ಕೊಟ್ಟು ತನ್ನ ದಿನಚರಿಯಲ್ಲಿ ತೊಡಗಿದಳು ಕಮಲೇಶ್. ಒಂದೊಂದಾಗಿ ಎಲ್ಲವನ್ನೂ ಮುಗಿಸುವುದರೊಳಗಾಗಿ ಚಹ ಅಣಿಯಾಯಿತು. ಲಗುಬಗನೆ ಮುಗಿಸಿ ರೋಗಿಗಳನ್ನು ನೋಡಲು ಸಿದ್ಧಳಾದಳು. ಚಂದ್ರಕಾಂತ್ ಪುಸ್ತಕಾವಲೋಕನದಲ್ಲಿ ಗಮನ ತೆತ್ತರೂ ಮನಸ್ಸು ನೂರು ವಿಧದಲ್ಲಿ ಅವಳ ಸುತ್ತಮುತ್ತ ಹರಿದಾಡುತಿತ್ತು. ಒಂದಾದಮೇಲೊಂದು ಸಿಗರೇಟುಗಳು ಉರಿದು ಬೂದಿಯಾದುವು. ಆಕೆಯ ವಿಚಕ್ಷಣೆ ಸಂತೃಪ್ತಿಯನ್ನು ನೀಡಿದರೂ ಯಾವುದೋ ಕೀಟ ಮನೋಮಂದಿರದಲ್ಲಿ ಭ್ರಮರದಂತೆ ಹರಿದಾಡುತ್ತಿದೆ.

ಮಕ್ಕಳು ಶಾಲಾಕಾಲೇಜುಗಳಿಂದ ಉತ್ಸಾಹದಿಂದ ಬಂದೊಡನೆ ತಂದೆಯ ದರ್ಶನದಿಂದ ಬೆಚ್ಚಿದರೂ ಪ್ರಕಟಗೊಳಿಸದೆ ಒಳಗಡೆ ಓಡಿದರು. ಚಂದ್ರಕಾಂತ್ ಇಬ್ಬರನ್ನೂ ಕರೆದು ಪಾಠಗಳನ್ನು ತಿರುವಿ ಹಾಕಿದ. ಓದಿನಲ್ಲಿ ನಿಸ್ಸೀಮರಾಗಿರುವುದನ್ನು ಅಂಕಿ ಅಂಶಗಳು ಸಾರಿ ಹೇಳುತ್ತಿದ್ದುವು. ಸಮರ್ಥನೀಯ ಪಾಠ, ದೈಹಿಕ ಬೆಳವಣಿಗೆ, ಬುದ್ಧಿಶಕ್ತಿ, ಚಟುವಟಿಕೆ, ಉತ್ಸಾಹಗಳ ವಿಶೇಷತನ ನರನರಗಳಲ್ಲೂ ಝುರಿಯಂತೆ ಹರಿದಾಡಿ.... ನೀನೆಷ್ಟೇ ವಿಚಕ್ಷಣತೆಯುಳ್ಳ

ವನಾದರೂ ಈ ವಿಚಾರಗಳಲ್ಲಿ ಮಡದಿಯನ್ನು ಸೋಲಿಸಲಾರೆ ಎಂದು ದೃಢವಾಗಿ ಹೇಳುತ್ತದೆ. ಅದೇ ವಿಚಾರವನ್ನು ಮೆಲಕು ಹಾಕುತ್ತಾ ನಿಟ್ಟುಸಿರು ಬಿಟ್ಟ, ಹೇಳಿ ಕೇಳುವುದೆಲ್ಲಾ ಕೆಲವು ಮಾತುಗಳಲ್ಲಿ ಮುಗಿಯಿತು. ಬಿಟ್ಟುದಷ್ಟೇ ಸಾಕೆಂದು ಪುಸ್ತಕಗಳನ್ನು ಬೇಗನೆ ತೆಗೆದುಕೊಂಡು ಒಳಗೋಡುತಿದ್ದ ಮಕ್ಕಳನ್ನು ತಡೆದು " ತಿಂಡಿ ಮುಗಿಸಿ ಬನ್ನಿರಿ. ಹೊರ ಹೋಗಿ ಬರೋಣ." ಎಂದ, ಮಕ್ಕಳಿಗೆ ಬಳಕೆಯಾಗಲಿ ಎಂಬ ಘನೋದ್ದೇಶ ಮನವನ್ನು ಆವರಿಸಿತ್ತು.

ಆ ಮುಹೂರ್ತದಲ್ಲಿ ಏನು ಹೇಳಬೇಕೋ ಹೊಳೆಯದೆ ಇಬ್ಬರೂ ಒಳಗಡೆ ಓಡಿದರು. ಮುಖ ಮಜ್ಜನ ಮಾಡಿ ಅವರು ತಿಂಡಿಗೆ ಕುಳಿತೊಡನೆಯೇ ಚಿತ್ರಸೇನನ ಕಾರು ಮನೆಯ ಮುಂದೆ ಗಕ್ಕನೆ ನಿಂತಿತು. ಚಿತ್ರಸೇನ ಸಣ್ಣಗೆ ಹಾರನ್ ಮಾಡಿ ಅಲ್ಲಿಂದಲೇ ಕೂಗಿದ " ತಿಲಕ್....ತಿಲಕ್ " ದನಿ ಕೇಳಿಬರುತ್ತಲೂ ಎಂಜಲ ಕೈಯನ್ನು ಹಿಂದಕ್ಕಿಟ್ಟುಕೊಂಡು ಚಂಗನೆ ಹಾರಿ ಬಂದ ತಿಲಕ್ " ಏನು ಮಾಮಾ ?"

ಚಂದ್ರಕಾಂತ್ ಕುತೂಹಲಾವಿಷ್ಟನಾಗಿ ಕತ್ತು ಆನಿಸಿ ಯಾರಿರಬಹುದೆಂದು ರಸ್ತೆಯ ಕಡೆ ನೋಟ ಹರಿಸಿದರೆ ಚಿತ್ರಸೇನ....! ಒಡನೆ ಚೇಳು ಕುಟುಕಿದಂತಾಯಿತು.

ಇದೇನು ? ತಂದೆಯಲಿಲ್ಲದ ವಿಶ್ವಾಸ ಆತನಲ್ಲಿ ?

ತಟ್ಟನೆ ಮುಖ ಕೆಂಪು ಕಳೆದು ನರನಾಡಿಗಳಲ್ಲಿ ಕೋಪಜ್ವಾಲೆ ಹರಿದಾಡತೊಡಗಿತು. ತಾಳಲಾರದೆ ಅಲ್ಲಿಂದ ಎದ್ದು ಹೋಗಿ ಒಳಬದಿಯಲ್ಲಿನ ಕುರ್ಚಿಯಲ್ಲಿ ಕುಳಿತುಕೊಂಡ.

" ಮೂವರೂ ಬನ್ನಿ. ಶಕ್ತಿ ಬಂದಿದ್ದಾಳೆ. ಒಂದು ಸುತ್ತು ತಿರುಗಾಡಿ ಬರೋಣ." ಚಿತ್ರಸೇನನ ನುಡಿ ಕಿವಿಗೆ ಬಿತ್ತು.

" ಅಪ್ಪ ಬಂದಿದ್ದಾರೆ !"

" ಓ ! ಹಾಗಿದ್ದರೆ ಬೇಡ. ಅನಂತರ ಎಲ್ಲರೂ ಮನೆಗೆ ಬನ್ನಿ." ಚಿತ್ರಸೇನ ತಟ್ಟನೆ ಕಾರು ಸ್ಟಾರ್ಟ್ ಮಾಡಿದ. ಮಕ್ಕಳು ಆನಂದಪರವಶರಾಗಿ ಕೈಯೆತ್ತಿ ಶಕ್ತಿಗೆ " ಟಾ ಟಾ " ಹೇಳಿದರು. ಮಗು ಜಿಂಗೆನ್ನಗಳಲ್ಲಿ ಜೇನುವನ್ನು ಚೆಲ್ಲಿ ಮರುದನಿ ಕೊಟ್ಟಿತು " ಟಾ ಟಾ !"

ನಿಶ್ಶಬ್ದವಾಗಿರುವ ಆ ದಾರಿಯಲ್ಲಿ ನಡೆದ ಮಾತುಕತೆಗಳು ಸ್ಪಷ್ಟವಾಗಿ ಕೇಳಿ ಬಂದುವು.

....ಯಾರದೋ ಅಸಹನೀಯ ವಿಕಟವೇದನೆ........ಯಾವುದೋ ಚೂರ್ಣವಿಚೂರ್ಣವಾದ ಜೀವನಧರ್ಮ....ಎಲ್ಲಿಯದೋ ಛಿನ್ನವಿಚ್ಛಿನ್ನ ಅನುಭಾವ....ತನ್ನ ಮನೋಮಂದಿರದಲ್ಲಿ ರುದ್ರವೀಣೆಯಂತೆ ರುದ್ರನಾದ ಗೈಯ್ಯಿತು.

ಚಂದ್ರಕಾಂತ್ ದಿಕ್ಕೆಟ್ಟು ಆ ಮುಹೂರ್ತದಲ್ಲಿ ಒಡಲುರಿಗೆ ತಂಪೊರೆಯಲು ರೇಡಿಯೋ ಸ್ವಿಚ್ ಅದುಮಿದ. ಅದರಿಂದ ಹರಿದುಬಂದ ಅಮೃತ ಧಾರೆ....ತಾಳಲಾರನೋ ಹರಿ ಕೇಳಲಾರನೋ ಪ್ರೇಮವಿಲ್ಲದ ಗಾನ.......!

ಧಿಕ್ ! ಈ ಬದುಕು ಇಷ್ಟೆ....! ನಟನೆ ! ಮೋಸ !

ಮಕ್ಕಳು ಚಹ ಮುಗಿಸಿ ಮಡಿ ಬಟ್ಟೆಯುಟ್ಟು ಬಜಾರಿನ ಕಡೆ ಹೊರಟರು. ಚಂದ್ರಕಾಂತ್ ಮಡದಿಗೆ ಹೇಳುವ ತೊಂದರೆಯನ್ನೂ ಸಹ ತೆಗೆದುಕೊಳ್ಳದೆ ಅಂತಃಶತ್ರುಗಳ ಆಳಾಗಿ ಹೊರಬಿದ್ದ.

" ಚಿತ್ರಸೇನ್ ಯಾವಾಗಲೂ ಮನೆಗೆ ಬರುತ್ತಾರೆಯೇ ?"

" ಅವರು ಬರುವುದಿಲ್ಲ. ಮಾಲತಿಮಾಮಿ ಹೇಮರತಿಮಾಮಿ ಬರುತ್ತಾರೆ." ಎಂದ ತಿಲಕ್.

" ನಿಮ್ಮನ್ನು ಯಾವಾಗಲೂ ಹೊರಗೆ ಕರೆದುಕೊಂಡು ಹೋಗುತ್ತಾರೆಯೇ ?"

" ಚಿತ್ರಸೇನ್ ಮಾಮನಿಗೆ ಬಿಡುವಾಗುವುದಿಲ್ಲ. ಆತ್ಮಾರಾಂ ಮಾಮ ಬಿಡುವಿದ್ದಾಗ ನಮ್ಮನ್ನು ಹೊರಗಡೆ ಕರೆದುಕೊಂಡು ಹೋಗುತ್ತಾರೆ."

ತಾನು ಯಾವುದರ ಪುಷ್ಟೀಕರಣಕ್ಕಾಗಿ ಆ ಪ್ರಶ್ನೆ ಹಾಕಿದನೋ ಅದರ ಬಡತನಕ್ಕಾಗಿ ಹೇಳಿ ಮಾಡಿಸಿದಂತಿದ್ದ ಉತ್ತರ ಸಿಕ್ಕಿದಾಗ ಚಂದ್ರಕಾಂತ ಅತ್ಯಂತ ಸಪ್ಪೆಯಾದ. ಸುಖಕರವಾದ ಹಾದಿ ಮುಳ್ಳು ಕಳ್ಳಿಗಳ ನೆಲೆಯಂತೆ ಚುಚ್ಚುತಿತ್ತು. ಆಸ್ಪತ್ರೆಯ ಮಾರ್ಗಮಧ್ಯದಲ್ಲಿ ಬಜಾರ್. ಅಂಗಡಿಯಲ್ಲಿ ಮೂವರೂ ಬೆಲೆಯುಳ್ಳ ಬಗೆಬಗೆಯ ಬಹುಮಾನಗಳನ್ನು ಕೊಂಡುಕೊಳ್ಳುವುದನ್ನು ನೋಡುತ್ತ " ಇದೆಲ್ಲಾ ಏತಕ್ಕಾಗಿ ?" ಎಂದ ಚಂದ್ರಕಾಂತ್.

" ಇಂದು ಶಕ್ತಿಯ ಹುಟ್ಟು ಹಬ್ಬ !"

“ ಯಾವ ಶಕ್ತಿ ?”

“ ಚಿತ್ರಸೇನ್ ಮಾಮನ ಮಗಳು !”

“ ಒಬ್ಬರು ಕೊಂಡರೆ ಸಾಲದೆ ?”

“ ಅವರು ನಾವು ಮೂವರಿಗೂ ಕೊಡುತ್ತಾರೆ, ನಾವದನ್ನು ಹಿಂತಿರುಗಿಸಬೇಕಷ್ಟೆ ?”

ಆ ಅಮಾಯಕ ಉತ್ತರ ಕೇಳಿದ ನಂತರ ಮತ್ತೇನನ್ನೂ ಪ್ರಶ್ನಿಸಬೇಕೆನಿಸಲಿಲ್ಲ. ಕೈದೀವಿಗೆ ತಂದಾಗ ಕತ್ತಲೆಯು ಹಿಂದೆ ಸರಿಯುವಂತೆ ಮಗನ ನಿರ್ಮಲಭಾವ ತನ್ನ ಮನದ ಚಂಚಲತೆಯನ್ನು ಹಿಂದೆ ಸರಿಯುವಂತೆ ಮಾಡಿತು. ಒಂಟಿಯಾಗಿ ತನ್ನ ಹಾದಿ ಹಿಡಿದಾಗ ಕಲ್ಲು ಮಣ್ಣುಗಳ ನಿರ್ಮಲ ಶೃತಿ ತನಗೇನನ್ನೋ ತಿಳಿಯಹೇಳುವಂತಿವೆ....ದೂರದ ಬಾನುಲಿಯಿಂದ ಹೊರ ಹೊಮ್ಮುವ ಮಧುರವಾದ ಹೆಣ್ದನಿ ತನ್ನನ್ನೇ ಉದ್ದೇಶಿಸಿ ಹಾಡುವಂತಿದೆ,

ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕಿತಾ |

ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಮ್ ||

ದೂರದಿಗಂತದಲ್ಲಿ ಮಿಂಚಿದ ಮಿಂಚು ತಮಸ್ಸನ್ನು ಅಪ್ಪಳಿಸಿದಂತಾಯಿತು. ಚಂದ್ರಕಾಂತ್ ತಲೆಬಾಗಿ ಹೆಜ್ಜೆ ಹಾಕಿದ. ಕಮಲೇಶಳಿಗೆ ಹಾಗೆ ಅವನು ಹೇಳದೆ ಕೇಳದೆ ಹೊರಟುಹೋದುದೇಕೆಂಬುದು ಅರ್ಥವಾಗಲಿಲ್ಲ. ದಿನೇ ದಿನೇ ವಿನೂತನಗೊಳ್ಳುವ ಆತನ ದಿನಚರಿ ಲೇಶಮಾತ್ರವೂ ಸಾತ್ವಿಕತೆಯತ್ತ ಸರಿಯುದಲ್ಲಾ ಎಂದುಕೊಂಡಳು. ವೇದನಾಭರಿತವಾದ ಆ ಅಂದುಕೊಳ್ಳುವಿಕೆ ನಾರಿಯ ಶೀತಲ ಅಂತರಂಗವನ್ನು ದುಗುಡದಿಂದ ತುಂಬಿತು.

ಕಮಲೇಶ್ ಆಸ್ಪತ್ರೆಯ ವಾರ್ಡುಗಳನ್ನೊಂದು ಸುತ್ತು ಹಾಕಿ ಹೊರಬರುವಷ್ಟರಲ್ಲಿ ಪಮ್ಮಿಕಮಲಾಗಿ ಮದನಾಪುರ ವಿಜಯನಗರದ ಎದುರಾದರು. ಔಷಧಿ ಲೋಷನ್‌ಗಳ ಕಟುವಾಸನೆ ಬಡಿದ ಮೂಗಿಗೆ ಅತ್ತರಿನ ಸುಗಂಧ ಆಹ್ಲಾದ ನೀಡಿದಾಗ ಕೇದಗೆಯ ಬನದಲ್ಲಿ ನಿಂತಂತಾಯಿತು ಕಮಲೇಶಳಿಗೆ.

ಘಮ....ಘಮ....ಘಮ !

"ಇಂದೇನು ಬಹಳ ಶೃಂಗಾರ ?" ಕಣ್ಣರಳಿಸಿದಳು ಕಮಲೇಶ್, ಪ್ರಸನ್ನ ಭಾವದಿಂದ ಮುಖ ಬಿಂಬ ಬೆಳಗಿತು, ಶುಭ್ರಧವಳ ಮಲ್ಲಿಕೆಯಂತೆ.

"ಇಂದು ನನ್ನ ಹುಟ್ಟು ಹಬ್ಬ! ಮೂರನೆಯ ದಶಕವನ್ನು ದಾಟಿ ನಾಲ್ಕನೆಯದಕ್ಕೆ ಕಾಲಿಡುತಿದ್ದೇನೆ!" ಪದ್ಮಾಕಮಲಾನಿಯ ಶೀತಲ ನುಡಿ ಕರ್ಣಪಟಲಗಳಿಗೆ ತಾಗಿದಾಗ ಕಮಲೇಶಳ ಅಂತರಂಗ ಪುಲಕಗೊಂಡಿತು. ಭಾವೋನ್ಮಾದದಿಂದ ಹಾರ್ದಿಕವಾಗಿ ಕೈ ಕುಲುಕಿ ಅಭಿನಂದಿಸಿದಳು. ಆ ಸುಮುಹೂರ್ತ ಅವಳ ಮುಖವನ್ನು ಹುಣ್ಣಿಮೆ ಚಂದ್ರನಂತೆ ಶೋಭಾಯಮಾನಗೊಳಿಸಿತು.

"ಅತ್ತರು ಬಲು ಸೊಗಸಾಗಿದೆ!"

"ನನ್ನ ಯಜಮಾನರ ಉಡುಗೊರೆ–ಈವ್ನಿಂಗ್ ಇನ್ ಪ್ಯಾರಿಸ್." ಸಂತಸಪೂರ್ಣದನಿಯಲ್ಲಿ ನುಡಿದು ಆಹ್ವಾನಿಸಿದಳು–"ಬಾ, ಕಮಲೇಶ್, ಒಂದು ಐಸ್‌ಕ್ರೀಮ್ ಮೆದ್ದು ಬರೋಣ."

"ಬಾ, ಹೋಗಿ ಬರೋಣ" ಎಂದಳು ವಿಜಯ.

"ದಯವಿಟ್ಟು ಕ್ಷಮಿಸು. ಡಾಕ್ಟರು ಆಗಲೇ ಹೋಗಿಬಿಟ್ಟಿದ್ದಾರೆ. ಈ ಕತ್ತಲೆಯಲ್ಲಿ ನಾನೊಬ್ಬಳೇ ಮನೆಗೆ ಹೋಗಬೇಕು." ದಟ್ಟವಾದ ಕತ್ತಲೆಯನ್ನು ನಿಟ್ಟಿಸುತ್ತಾ ಹೇಳಿದಳು ಕಮಲೇಶ್.

"ನಾವು ಒಟ್ಟಿಗೆ ಹೋದರಾಯಿತು ಬಾ."

ಅವಳ ಒತ್ತಾಯಕ್ಕೆ ಮಣಿದು ಕಮಲೇಶ್ ಕಾಫಿ ಮನೆಯ ಹಾದಿ ತುಳಿದಳು. ಪದ್ಮಾಕಮಲಾನಿ ಸಿಹಿ ಖಾರಗಳಿಗೆ ಆರ್ಡರು ಕೊಟ್ಟಳು. ಐಸ್ ಕ್ರೀಮೂ ಬಂತು. ಕೈ ಬಾಯ್ ಕಾಳಗ ನಡೆಯುತಿದ್ದಂತೆ ಮದನಾಪುರ್ ವಿಜಯಾ–"ಡಾಕ್ಟರ್, ನಾಲ್ಕು ದಿನಗಳ ಹಿಂದೆ ನಂದಗುಡಿಯಲ್ಲಿ ಪೋಸ್ಟ್ ಮಾರ್ಟಂ ಮಾಡಿ ಹೂತ ಹೆಣವೊಂದನ್ನು ಕಿತ್ತು ಇಲ್ಲಿಗೆ ತಂದು ಪುನಃ ಪೋಸ್ಟ್ ಮಾರ್ಟಂ ಮಾಡಿಸಿದ್ದಾರೆ."

"ಏಕೆ....?"

"ಇನ್ನೂ ಹದಿನೆಂಟು ಹತ್ತೊಂಭತ್ತರ ಹುಡುಗಿಯನ್ನು ಕೊಲೆಮಾಡಿ ಹೃದಯಾಘಾತದಿಂದ ಮರಣ ಸಂಭವಿಸಿತೆಂದು ಸುದ್ದಿ ಹರಡಿದ ಅಳಿಯನ ದುಷ್ಟ ಸ್ವಭಾವವನ್ನು ಅರಿತಿದ್ದ ತೌರು ಮನೆಯವರಿಗೆ ಅನುಮಾನ ತೋರಿ

ಪೋಸ್ಟ್‌ಮಾರ್ಟಂ ಮಾಡಿಸಿದರು. ಇವನು ಡಾಕ್ಟರನ್ನು ಬುಟ್ಟಿಯೊಳಗೆ ಹಾಕಿಕೊಂಡು ನಾಟಕೀಯವಾಗಿ ಪೋಸ್ಟ್‌ಮಾರ್ಟಂ ಮಾಡಿಸಿದ. ವೈದ್ಯ ವರದಿ ಹೊರಬಿದ್ದನಂತರ ಅಲ್ಲಿ ಶವಸಂಸ್ಕಾರ ನಡೆಯಿತು. ಆದರೂ ತಂದ ತಾಯಿಗಳ ಅನುಮಾನ ಪರಿಹಾರವಾಗಲಿಲ್ಲ. ಮತ್ತೆ ಅದು ಗೊಂದಲಕ್ಕೆ ಕಾರಣವಾಯಿತು. ಹೂತ ಹೆಣವನ್ನು ಕಿತ್ತು ಇಲ್ಲಿಗೆ ತಂದರು. ಈಗ ನೋಡಿ ದರೆ ಅಲ್ಲಿಯ ಪೋಸ್ಟ್‌ಮಾರ್ಟಂ ಅಪೂರ್ಣ. ತಲೆಯ ಚಿಪ್ಪನ್ನು ತೆರೆದೇ ಇರಲಿಲ್ಲ. ಇಲ್ಲಿಯ ವೈದ್ಯ ವರದಿ ತೀರ ವ್ಯತಿರಿಕ್ತವಾಗಿ ಹೊರಬಿದ್ದಿದೆ. ಇನ್ನು ಆ ಡಾಕ್ಟರಿಗೆ ಗಂಡಾಂತರ ತಪ್ಪಿದ್ದಲ್ಲ."

"ಒಳ್ಳೆಯದಾಯಿತು. ಅಂತಹವರಿಗೆ ಬುದ್ಧಿ ಬರಲೇಬೇಕು!"

"ಇನ್ನು ಕೇಸು ಕೋರ್ಟು ಕಛೇರಿ ಹತ್ತುತ್ತೆ. ಆ ಡಾಕ್ಟರಿಗೆ ಇದೆಲ್ಲಾ ಏಕೆ ಬೇಕಿತ್ತು? ಕೋರ್ಟಿನಲ್ಲಿ ಉತ್ತರ ಹೇಳುವುದಿರಲಿ, ಪರಮಾತ್ಮನಿಗೆ ಏನು ಉತ್ತರ ಹೇಳಿಯಾರು? ಶಿವ....ಶಿವಾ!"

....ಕಾಲಃ ಕ್ರೀಡತಿ ಗಚ್ಛತ್ಯಾಯುಃ....

"ನಿಜ...."

ಮೂವರೂ ಐಸ್‌ಕ್ರೀಮನ್ನು ಮೆದ್ದು ಹೊರಬಂದಾಗ ಹೊತ್ತು ಏಳರ ಸಮಯ. ಇನ್ನು ತಡಮಾಡಲಾಗದೆಂದು ಬೇಗ ಬೇಗನೆ ಹೆಜ್ಜೆ ಹಾಕಿದರು. ಮನೆಯ ಬಳಿಗೆ ಬರುತ್ತಲೂ ಗೆಳತಿಯರನ್ನು ಕರೆಯಲೋ ಬೇಡವೋ ಎಂಬ ಸಮಸ್ಯೆ ಮೂಡಿತು. ಕರೆಯಲು ಎಷ್ಟು ಸಂಕೋಚವೋ ಕರೆಯದಿರಲೂ ಸಹ ಅಷ್ಟೇ ಸಂಕಟ. ಮನೆಯ ಬಾಗಿಲಿಗೆ ಕಳುಹಿಸಬಂದವರನ್ನು ಕರೆಯ ದಿರುವುದು ಹೇಗೆ?....ಮನದಲ್ಲೇ ಸಂಕೋಚಪಟ್ಟುಕೊಳ್ಳುತ್ತಾ ಹೇಳಿದಳು ಕಮಲೇಶ್ "ಬನ್ನಿ, ಮನೆಯಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು ಹೋಗ ಬಹುದು."

"ಈಗಲೇ ಹೊತ್ತಾಗಿದೆ. ಇನ್ನೊಮ್ಮೆ ಬರುವೆ, ಏನೂ ತಿಳಿದುಕೊಳ್ಳ ಬೇಡ, ಕಮಲೇಶ್." ಗೆಳತಿಯರ ಕಂಠಶ್ರೀಗಳು ಏಕೀಭವಿಸಿ ನುಡಿದುವು.

ಅವರು ಹೊರಟರು. ತಂಗಾಳಿಯಲ್ಲಿ ತುಂಬಿ ಹರಡಿದ ಪುಷ್ಪಸೌರಭ ವನ್ನು ಆಘ್ರಾಣಿಸುತ್ತಾ ಕತ್ತಲೆಯಲ್ಲಿ ಸ್ವಲ್ಪ ಸ್ವಲ್ಪವಾಗಿ ಕರಗುತ್ತಿರುವ

ಅವರ ಮೇಲೆ ನೋಟ ಹರಿಸಿ ಹೆಜ್ಜೆ ಕೀಳದೆ ಅಲ್ಲೇ ನಿಂತಳು. ಸಂಪೂರ್ಣ ಕಣ್ಮರೆಯಾಗುವ ಮುನ್ನ ಅವರ ಕಂಠಸ್ವರ ಮೊಳಗಿತು "ಚೀರಿಯೋ!" ಅದೇ ನೇರಕ್ಕೆ ಇಲ್ಲಿಂದಲೂ ಮರುದನಿ ಹೊಮ್ಮಿತು "ಚೀರಿಯೋ!"

ತಲೆ ಬಾಗಿಲಲ್ಲಿ ನಿಂತ ಪಾರ್ವತಮ್ಮ ಇಲ್ಲಿಯವರೆವಿಗೂ ಬಂದು ಬೀಳ್ಕೊಟ್ಟು ಹೋದವರಾರೆಂಬುದನ್ನು ತಿಳಿಯಲು ಅತ್ಯಂತ ಕುತೂಹಲಿಯಾಗಿ ಈಕ್ಷಿಸುತ್ತಿದ್ದಾಳೆ. ಕತ್ತಲೆಯ ತೆರೆಯಲ್ಲಿ ಬಿಳಿಯುಡುಪಿನ ವ್ಯಕ್ತಿಗಳು ಕರಗಿ ಹೋಗುವುದನ್ನೇ ನಿಟ್ಟಿಸುತ್ತಾ "ಅನ್ಯಾಯಾರ್ಜನೆ" ಎಂದುಕೊಂಡು ತನ್ನೊಳಗೇ ಆಕ್ರೋಶಿಸಿದಳು. ಎದೆಯ ಬಡಬಾಗ್ನಿ ತುದಿ ನಾಲಿಗೆಯವರೆಗೆ ನುಗ್ಗಿದಾಗ ಸಂಶಯ ದೃಷ್ಟಿಗೆ ಕತ್ತಲೆಯಲ್ಲಿ ಕರಗಿ ಹೋದ ಬಿಳಿಯುಡುಪಿನ ವ್ಯಕ್ತಿಗಳ ರೂಪ ಗಂಡಿನಂತೆಯೇ ತೋರಿತು....ಇಲ್ಲಿಯ ತನಕ ಪರಗಂಡಿನೊಡನೆ ಬರಲು ಅವಳಿಗೇನು ಗಂಡೆದೆಯೆ? ಎಂದೂ ಪ್ರಶ್ನಿಸಿತು ವಿವೇಕ ದೃಷ್ಟಿ. ಆದರೂ ಹೆಣ್ಣು ಮಣಿಯಲಿಲ್ಲ.

ಗೆಳತಿಯರು ಕಣ್ಮರೆಯಾಗುತ್ತಲೂ ಪ್ರಾಕಾರದ ಬಾಗಿಲನ್ನು ಮುಚ್ಚಿ ಖಣಿಲ್ಲನೆ ಚಿಲಕ ಹಾಕಿ....ಅವರು ಹೋಗಿದ್ದು ಒಳ್ಳೆಯದಾಯಿತು. ಈ ಮನೆಯಲ್ಲಿ ಬರಮಾಡಿಕೊಂಡಿದ್ದರೆ ನನ್ನ ಮಾನ ಉಳಿಯುತ್ತಿರಲಿಲ್ಲ ಎನಿಸಿತು ಅವಳಿಗೆ. ಬಾಗಿದ ತಲೆಯನ್ನು ಎತ್ತದೆ ಅಂಗಳವನ್ನು ದಾಟಿ ಮೆಟ್ಟಿಲು ಹತ್ತುತ್ತಲೂ ಕತ್ತಲೆಯಲ್ಲಿ ಕರಗಿ ಬಾಗಿಲಿಗಾಂತು ನಿಂತ ಅತ್ತೆಯನ್ನು ನೋಡಿ "ಇದೇನು? ದೀಪ ಹಚ್ಚದೆ ಕತ್ತಲೆಯಲ್ಲಿ ನಿಂತಿದ್ದೀರಲ್ಲಾ?" ಎಂದಳು ಕಮಲೇಶ್

"ಬಂದವರಾರೆಂದು ನೋಡಿದೆ."

"ಇಬ್ಬರೂ ನನ್ನ ಜೊತೆಯವರು. ಒಬ್ಬಳು ಪದ್ಮಾ ಕಮಲಾನಿ. ಇನ್ನೊಬ್ಬಳು ವಿಜಯಾ."

ನುಡಿ ಸಂಶಯಭೂತವನ್ನು ಅಪ್ಪಳಿಸಿದರೂ ಬಿಡದೆ ತನ್ನ ಅನುಭವ ಧಾರೆ-ಜ್ಞಾನದಾರೆಗಳನ್ನು ಸ್ವಚ್ಛಂದವಾಗಿ ಹರಿಯಬಿಟ್ಟಳು ಹಿರಿಯಾಕೆ. ಇದುವರೆವಿಗೂ ಕಿಟಕಿಯಲ್ಲಿ ಮೊಗವಿಟ್ಟು ನೋಡುತ್ತಿದ್ದ ಚಂದ್ರಕಾಂತ್ ಹಿಂದಿರುಗಿ ಪಲ್ಲಂಕದ ಮೇಲೆ ಕುಳಿತು ಪುಸ್ತಕದ ತೆರೆಯೊಳಗೆ ಮೋರೆಯನ್ನು ಅಡಗಿಸಿಕೊಂಡ.

ಆ ಪ್ರಾಚೀನೆ ಯಾವ ಶುಭಕ್ಕಾಗಿ ಸೊಸೆಯ ಚಲನವಲನಗಳನ್ನು ಕಣ್ಣಿನ ಮೇಲೆ ಕಣ್ಣಿಟ್ಟ ನೋಡುತ್ತಿರುವಳೋ ಯಾವ ರೀತಿನೀತಿಗಳನ್ನು ಹಗಲಿರುಳೂ ತಪ್ಪದೆ ತತ್ವಬೋಧನೆಗೈಯ್ಯುವಳೋ ಅದರ ರಹಸ್ಯ ಇಷ್ಟೆ; ಅವಳು ಅಂದಿಂದಿಗೂ ಆ ಕಠೋರ ಕಮನೀಯ ಮಾರ್ಗಯೋಗದಲ್ಲಿ ಕಷ್ಟ ನಷ್ಟಗಳ ಪಾಲಾದರೂ ಕ್ಲಿಷ್ಟಕರವಾದ ಸಮಸ್ಯೆಗಳನ್ನೆದುರಿಸಿದರೂ ಧೃತಿ ಗೆಡದೆ ಬಾಳಿನ ಸಂಜೆಯವರೆಗೆ ಅಡರಿ ಬಂದ ನಿಷ್ಣಾತೆ. ಅಂತಲೇ ಅವಳ ಹೃದಯ ಸಮುದ್ರದಿಂದ ತುಂಬಿ ತುಳುಕುವ ಅನುಭವಧಾರೆ ದಿನಚರಿಯ ಕಮಂಡಲಕ್ಕೆ ತೊಟ್ಟಿಕ್ಕಿ ವೇದವಿದ್ಯಾಲಹರಿಯಂತೆ ಹೊರ ಚಿಮ್ಮುವುದು. ಸುಖದುಃಖಗಳ ಕಣ್ಣೀರಿನಿಂದ ತುಂಬಿ ತುಳುಕುವ ನಾರಿಯ ಅಂತರಂಗ ಜೀವನ ದುರಂತಕ್ಕಾಗಿಯೇ ಸೃಷ್ಟಿಯಾಗಿದೆ ಎಂಬುದು ಅವಳ ಧೃಢವಾದ ಅಭಿಪ್ರಾಯ.

ಪ್ರಾಚೀನೆಯ ಅನುಭವ ಸಲಿಲಧಾರೆ ಪ್ರವಹಿಸುತಿದ್ದಂತೆ ಕಮಲೇಶಳ ಪದ್ಮರಾಗವರ್ಷಿತ ಶರೀರ ರೋಮಾಂಚನಗೊಂಡಿತು. ತನ್ನ ಶಕ್ತಿಯ ಕಣ ಕಣವೂ ಅಗಾದವಾದ ಪ್ರಕೃತಿಯ ವಶವಾದಂತೆ ತೋರಿ ಅಪೂರ್ವ ಭಾವ ಸಮಾಧಿಯಲ್ಲಿ ಮುಳುಗಿ ಸಜಲನೇತ್ರೆಯಾದಳು. ಬಹಳ ಮಟ್ಟಿಗೆ ಕೈಯ ಲ್ಲಿದ್ದ ಸ್ಟೆತಸ್ಕೋಪನ್ನು ಗೂಟಕ್ಕೆ ತಗಲಿಸಲೂ ಸಹ ಮರೆತು ಹೋಯಿತೋ ಏನೋ....

ಮೃದಂಗ ಘೋಷ!

ಕರ್ಣಾಪಟಲಗಳನ್ನು ಬಡಿದು ಭೇದಿಸುವಂತೆ ಎಲ್ಲಿಂದಲೋ ಕೇಳಿ ಬರುತ್ತಿದೆ ಅದೇ ಆ ಘೋಷ! ಸ್ತಬ್ಧ ಪ್ರಕೃತಿಯ ಮೇಲೆ ಬೀಳುವ ಸುತ್ತಿ ಗೆಯ ಪೆಟ್ಟಿನಂತೆ ಎದೆಯ ನೆಲೆಯಿಂದಲೇ ಕೇಳಿ ಬರುತ್ತಿದೆ. ಬಹುಶಃ ಹೃದಯ ಮೃದಂಗವೇ ಘೋಷಿಸುತ್ತಿರಬೇಕು!

ಪ್ರಾಕಾರದ ಬಾಗಿಲಿನಲ್ಲಿ ಕಾರು ನಿಂತ ಸದ್ದು ಕೇಳಿ ಬಂತು. ಚಂದ್ರ ಕಾಂತ್ ಹೊರ ಹೋಗಿ ಬಾಗಿಲು ತೆರೆದ. ಹೇಮರತಿ ಕರ್ವೆ ಕಾರಿನಿಂದಿಳಿದು, ಕಮಲೇಶಳನ್ನು ಮೊಮ್ಮಗಳ ಹುಟ್ಟುಹಬ್ಬದ ಪ್ರಯುಕ್ತ ಏರ್ಪಡಿಸಲಾದ ಔತಣಕೂಟಕ್ಕೆ ಕರೆದೊಯ್ಯಲು ಬಂದಿರುವುದಾಗಿ ತಿಳಿಸಿದಾಗ ಚಂದ್ರಕಾಂತ ನಿಗೆ ತಕ್ಷಣ ಏನು ಹೇಳಬೇಕೋ ಹೊಳೆಯದೆ ಸುಮ್ಮನೆ—ಔಪಚಾರಿಕವಾಗಿ

" ಒಳಗೆ ಬನ್ನಿ " ಎಂದ.

ಹೇಮರತಿ ಕರ್ವೆ ಒಳ ಬಂದಳು. ಸುಣ್ಣ ಬಣ್ಣ ಕಾಣದ ಮನೆ ನೋಟ ವನ್ನು ಸೆರೆಹಿಡಿಯಿತು. ಅವರಿವರ ಮಾತುಕತೆಗಳಿಂದ ಎಂದೋ ಗ್ರಹೀತವಾ ಗಿದ್ದುದನ್ನು ಇಂದು ಸ್ವಂತ ಕಣ್ಣುಗಳಿಂದ ನೋಡುವಾಗ ಮನಸ್ಸು ಮುದು ಡಿತು. ನಾಗವೇಣಿಗೆ ಸಹಾಯ ಮಾಡುತಿದ್ದ ಕಮಲೇಶ್ ಹೊರ ಬಂದಳು. ಹೇಮರತಿಯನ್ನು ನೋಡಿ ಹೃದಯ ತುಂಬಿ ಬಂದರೂ ' ಈ ಮನೆಗೆ ಅವರು ಬರದಿದ್ದರೆ ಹಿತವಾಗಿತ್ತು ' ಎನಿಸದಿರಲಿಲ್ಲ.

"ಇಷ್ಟು ದೂರ ಬರುವ ತೊಂದರೆಯನ್ನೇಕೆ ತೆಗೆದುಕೊಂಡಿರಿ ಮಾಮಿ? ನಾನೇ ಬರುತಿದ್ದೆ " ಎಂದಳು ಸೌಜನ್ಯಪೂರ್ವಕವಾಗಿ.

" ಕತ್ತಲಾಗಿ ಬಿಟ್ಟಿದೆ, ನೀನು ಬರುವಂತಿಲ್ಲವೆಂದು ನಾನೇ ಬಂದೆ. ಹೊರಡು, ಹೋಗೋಣ."

ಕಮಲೇಶಳಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಈಗ ಅಪ್ಪಣೆ ಪಡೆ ಯುವುದೆಂದರೆ ತುಂಬ ಕಷ್ಟ. ಅದರಲ್ಲೂ ಮಾಮಿಯ ಮುಂದೆ ಕೇಳುವು ದಾದರೂ ಹೇಗೆ? ಏನು ಮಾಡಲಿ ? ಎಂಬ ಪ್ರಶ್ನೆ ಮನದಲೆಯಲ್ಲಿ ನಿಮಿರಿ ನಿಂತಿತು. ಕಮಲೇಶ್ ಒಂದೆರಡು ಘಳಿಗೆ ಮನದಲ್ಲೇ ಚಿಂತಿಸಿದಳು.

ಹೇಮರತಿಯ ಆತ್ಮೀಯ ಆಹ್ವಾನ ಮತ್ತೊಮ್ಮೆ ಹೊರಬಿತ್ತು.

ಈಗ ಹೊರಡುವುದೆಂದರೆ ದ್ವೇಷಾಸೂಯೆಗಳನ್ನು ಹೆಚ್ಚಿಸಿಕೊಳ್ಳುವುದೇ ವಿನಾ ಮತ್ತಾವ ಲಾಭವೂ ಇಲ್ಲವೆಂಬುದು ಗೊತ್ತು. ಚಂದ್ರಕಾಂತ್ ಒಳ ಕೊಠಡಿಗೆ ಹೋದವನು ಹೊರ ತಲೆ ಹಾಕಲಿಲ್ಲ. ಪಾರ್ವತಮ್ಮ ಅಡುಗೆ ಮನೆಯ ಪಾರುಪತ್ಯ ಕೈಕೊಂಡರೂ ಮನೋ ರಾಜ್ಯದ ಆಧಿಪತ್ಯವೇ ಬೇರೆ.

" ಮಾಮಿ, ನನಗಿಂದು ಆರೋಗ್ಯವಿಲ್ಲ. ಬೇಗನೆ ಮಲಗುವ ಯೋ ಚನೆಯಿದೆ, ದಯಮಾಡಿ ಕ್ಷಮಿಸಿಬಿಡಿ."

" ನೀನು ಕೊನೆಯವರೆವಿಗೂ ಇರುವ ಅವಶ್ಯಕತೆಯಿಲ್ಲ. ಉಂಡು ಮಲಗಿಬಿಡು."

" ಇನ್ನೊಂದಾದರೂ ಬರುವೆ ಇಂದಿಗೆ ಕ್ಷಮಿಸಿಬಿಡಿ."

ಖಿನ್ನಮುಖದಿಂದ ಹೊರಬಿದ್ದ ನುಡಿಯನ್ನು ಕೇಳಿ ಮಾನಸ ಮುರುಳಿ ವಿಶಾದಗೀತೆಯನ್ನು ದುಃಖತಪ್ತವಾಣಿಯಲ್ಲಿ ಹಾಡಿತು. ಹೇಮರತಿ ತುಟಿ

ಪಿಟಕ್ಕೆನ್ನದೆ ಎದ್ದುನಿಂತಳು. ಕಮಲೇಶ್ ಅವಳೊಡನೆ ಕಾರಿನವರೆವಿಗೂ ಹೋಗಿ ಬೀಳ್ಕೊಟ್ಟು ಹಿಂದಿರುಗುವಾಗ ಅವರ ಮನೆಯ ಸಂತೋಷಕೂಟವನ್ನು ನೆನಪಿಗೆ ತಂದುಕೊಂಡು ನಿಡಿದಾದ ನಿಟ್ಟುಸಿರುಬಿಟ್ಟಳು.

ಯಾವ ಆದರ್ಶಕ್ಕಾಗಿ ಆ ಸಂತೋಷವನ್ನು ಬಲಿಗೊಟ್ಟಿಯೋ ಆ ಆದರ್ಶವೇನೆಂಬುದನ್ನು ಅರಿತುಕೊಳ್ಳುವ ವೇಳೆಗೆ ಈ ಜೀವನವೇ ಮುಗಿದು ಹೋಗಿರುತ್ತದೆ....ಎಂದು ಯಾವುದೋ ಅಶರೀರವಾಣಿ ಕೂಗಿ ಹೇಳಿದಂತಾಯಿತು.

ಆ ಕಠೋರ ಅಣಕವಾಣಿಯನ್ನು ಕೇಳಿ ಒಂದು ಘಳಿಗೆ–ಒಂದೇ ಒಂದು ಘಳಿಗೆ ಶರೀರ ಪ್ರಕೃತಿ ಸ್ತಬ್ಧಗೊಂಡಿತು.

ಕಮಲೇಶ್ ಮೆಲ್ಲನಡಿಯಿಟ್ಟಳು.

ಅಧ್ಯಾಯ

೩೫

....ಸಸ್ಯ ಶ್ಯಾಮಲಾಂ ಮಾತರಂ.

ಕಾರ್ಗಾಲದ ಭೋರ್ಗರೆವ ಮಳೆಯಲ್ಲಿ ಮಿಂದು ನಾಡಿಗೆ ನಾಡೇ ಹಸುರ್ಗಟ್ಟಿ ಹಸುರುಕ್ಕಿಸುತ್ತಿದೆ. ಬಿತ್ತರದ ಬಾಂದಳದಲ್ಲಿ ಕಾರ್ಮೋಡಗಳನ್ನು ಬೆನ್ನಟ್ಟಿ ಶ್ರಾವಣಾನಿಲ ಶಬ್ದವೇಗದಲ್ಲಿ ತೀಡುತಿದ್ದಾನೆ. ಬೇಸಗೆಯ ದಳ್ಳುರಿ ಮಳೆಗಾಳಿಯ ತಂಪಿನಲ್ಲಿ ಕರಗಿ ಹೋಗಿ ಗಿಡ ಮರಗಳು ಕೆಂದಳಿರು ಹೊಂದಳಿರು ಹಸಿರ್ದಳಿರುಗಳನ್ನು ಹೊತ್ತು ಮೈ ಸಿಂಗರಿಸಿಕೊಂಡಿವೆ. ಈ ಸುವಿಶಾಲ ಪ್ರಪಂಚದಲ್ಲಿ ನವಚೈತನ್ಯತರಂಗಗಳು ಹೇಗೆ ಕಾಲ ಧರ್ಮವನ್ನು ನಡೆಸುತ್ತಿವೆ ಎಂಬುದು ಇದುವರೆವಿಗೂ ಸರಿಯಾಗಿ ಅರ್ಥವಾಗಿಲ್ಲ. ಪುರಾತನವೂ ಚಿರನೂತನವೂ ಅನಂತವೂ ಆದ ಈ ಅದ್ಭುತ ವ್ಯಾಪಾರವು ಕುತೂಹಲವನ್ನು ಕೆರಳಿಸುತ್ತದೆ....ಆದರೂ....

ಈ ಪ್ರಪಂಚದಲ್ಲಿ ನೆಲೆಯಿಲ್ಲದೆ ಉಸಿರಾಡುವ ಮಾನವ ಜಂತುಗಳ ಜೀವನ ವ್ಯಾಪಾರವೂ ಸಹ ಅಷ್ಟೇ ಅದ್ಭುತವಾಗಿದೆ ಎಂದು ಯಾರಾದರೂ ಹೇಳಿದರೆ 'ಭ್ರಮೆ' ಎನ್ನಬಹುದೆ? ಅಥವಾ 'ಹೌದು' ಎನ್ನುವುದು ಸೂಕ್ತವೆ?

ಪಾರ್ವತಮ್ಮನ ದನಿ ಒಳಗಿನಿಂದ ಮೊಳಗಿತು "ಕತ್ತಲಾದಮೇಲೆ ಕಸ ಬಳಿಯುವುದುಂಟೇ? ಮಕ್ಕಳು ಮರಿ ತುಂಬಿದ ಮನೆಗೆ ದರಿದ್ರ ತರಬೇಡ. ಕಲಿತವರಿಗೆ ಧರ್ಮ ಕರ್ಮ ಎಲ್ಲಿಂದ ಬರಬೇಕು? ಏನೋ ಒಂದು ರೀತಿ ಅಡ್ಡಾದಿಡ್ಡಿ ಬದುಕು ಮುಗಿದರೆ ಸರಿ."

ನಗುವುಕ್ಕಿ ಬಂದರೂ ತಡೆಹಿಡಿದಳು ಕಮಲೇಶ್–"ಕಸ ಈಗ ಹೊರ ಹಾಕುವುದಿಲ್ಲ. ಹಾಗೇ ಇಟ್ಟಿದ್ದು ಬೆಳಿಗ್ಗೆ ಹೊರಹಾಕುವೆ."

ಕಮಲೇಶ್ ಕೋಣೆ ಕೋಣೆಗೂ ಪೊರಕೆಯೊಡನೆ ಧಾಳಿ ಇಟ್ಟಳು. ಜಾಡನ ಪೊರೆ ಜಾರಿ ಬಿತ್ತು. ಧೂಳು ಕಸ ಕಡ್ಡಿಗಳು ಮೂಲೆಯನ್ನು ಸೇರಿ

ದುವು. ಹಾಸಿಗೆಯ ಕೊಳಕು ದುಪ್ಪಟಿಗಳು ಬುಟ್ಟಿಯನ್ನು ಸೇರಿದುವು.

ಒಳಗಿನಿಂದ ಪಾರ್ವತಮ್ಮನ ದನಿ ಪುನಃ ಮೊಳಗಿತು–“ ಒಂದೇ ಬಾರಿಗೆ ಎಲ್ಲಾ ದುಪ್ಪಟಿ ತೆಗೆದರೆ ಒಗೆಯುವವರಾರು ?”

“ ದೋಬಿಗೆ ಹೇಳುವೆ.”

“ ಹೆಣ್ಣು ದುಡಿದರೆ ದುಡ್ಡು ಕಾಸಿಗೆ ಬೆಲೆ ಇರುತ್ತದೆಯೇ ?”

ನಾಗವೇಣಿ ತೌರಿಗೆ ಹೋಗಿ ಒಂದು ವಾರವಾಗಿತ್ತು. ಅಂದಿನಿಂದ ಪಾರ್ವತಮ್ಮನದೇ ಅಡುಗೆಯ ಪಾರುಪತ್ಯ. ಬೆಳಗಿನ ಹೊತ್ತು ಬಹಳಷ್ಟು ಸಹಾಯ ಮಾಡಿ ಹೋಗುತಿದ್ದ ಕಮಲೇಶಳಿಗೆ ಅದೇನು ಹೆಚ್ಚಿನ ಶ್ರಮ ವೆನಿಸಲಿಲ್ಲ. ನಾಗು ನಾಲ್ಕುದಿನ ಹಾಯಾಗಿದ್ದೇ ಬರಲಿ, ಇಲ್ಲಿದ್ದರೆ ಬಿಡುವೆಂ ಬುದೇ ಇಲ್ಲ. ಇನ್ನೂ ಚಿಕ್ಕ ವಯಸ್ಸಾದರೂ ಬಾಳಿದಲ್ಲಿ ಬಂದಿಯಾಗಿ ನಾಲ್ಕು ಮಕ್ಕಳನ್ನು ಹೆತ್ತಿದ್ದಾಳೆ. ಇಲ್ಲಿ ಅವಳ ಮನೋವಿಕಾಸಕ್ಕೆ ಅವಕಾಶ ವೇನುಂಟು ? ಪುಸ್ತಕಗಳೇ ? ಪತ್ರಿಕೆಗಳೇ ? ಹೊರಹೋಗೋಣವೇ ? ಕಲಿ ಯೋಣವೇ ? ಏನುಂಟು ?

ಕೇವಲ ಚಿಂತನೆಯಲ್ಲಿ ಸಮಯ ಕಳೆಯುವಷ್ಟು ಸಹನೆ ಈಗಇಲ್ಲ. ತನ್ನಿಂದ ಸಾಧ್ಯವಾದಷ್ಟು ಕರ್ತವ್ಯಪಾಲನೆ ಮಾಡಬೇಕೆಂಬುದು ಅತ್ಯಂತ ಉತ್ಕಟ ಆಕಾಂಕ್ಷೆ. ಅತ್ತೆಯ ಚಿತ್ರವಿಚಿತ್ರ ಸಲಹೆಗಳಿಗೆ, ಪತಿಯ ರುದ್ರ ಗಂಭೀರ ಜಿಹಾಸೆಗೆ, ರೋಗಿಗಳ ಭಯಂಕರ ರೋಗ ವಿನ್ಯಾಸಗಳಿಗೆ, ಸುವಿಶಾಲ ಜಗತ್ತಿನ ಆಕರ್ಷಣೀಯವಾದ ಉಜ್ವಲ ಭವಿಷ್ಯತ್ತಿಗೆ ಗಮನ ಕೊಡುವಾಗ ಒಂದೊಂದೂ ತನ್ನನ್ನು ಒಂದೊಂದು ದಿಕ್ಕಿಗೆ ಎಳೆಯುವಂತೆ ಭಾಸವಾಗು ತ್ತದೆ. ದೂರಗಮ್ಯದೆಡೆಗೆ ನವ್ಯಪಥವನ್ನು ಸೃಷ್ಟಿಸಿಕೊಳ್ಳುವಾಗ ಕುಂಟುತ್ತ ನಡೆಯಲು ಮನಸ್ಸು ಬರುವುದಿಲ್ಲ. ಅಖಂಡ ಭಾರತದ ಎಲ್ಲಾ ಜನಜೀವನ ದಲ್ಲೂ ಈ ಗೋಳು ಇದ್ದದ್ದೆ. ಅಂದಮೇಲೆ ಕಣ್ಮುಚ್ಚಿ ಮುನ್ನುಗ್ಗುವುದೊಂದೇ ಗುರಿ. ದಾರಿ ಸುಗಮವಾದರೂ ಸರಿಯೆ ; ದುರ್ಗಮವಾದರೂ ಸರಿಯೆ. ಕೃತಾ ರ್ಥತೆಯ ಸಂತೃಪ್ತಿ ಹೊಂದಿದರೆ ಸಾಕು....ಜೀವನ ಮಾರ್ಗಯೋಗದಲ್ಲಿ ಸ್ತ್ರೀಪುರುಷರು ಸರಿಸಮಾನಸ್ಕಂಧತೆಯನ್ನು ಹೊಂದಿದಂದು ಭವ್ಯ ಭಾರತದ ದಿನಮಣಿ ಇನ್ನೆಂತು ಬೆಳಗಿಯಾನು ? ಶಶಿಯ ಶೀತಲಕಾಂತಿ ಇನ್ನೆಷ್ಟು ಶೀತಲವೋ....?

ಚೇತನಾ ಮೆಡಿಕಲ್ ಕಾಲೇಜನ್ನು ಸೇರಿದಂದು ಅವಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಬಸಂತ್–"ಚೇತನಾ ರಾಣಿಯವರೇ! ಎಲ್ಲೂ ನಿಲ್ಲದೆ ಮುಂದೆ ಬಂದರೇನೇ ನನ್ನ ಹೃದಯ ಸಂಪುಟದಲ್ಲಿ ಸ್ಥಳ!"

ಬಿಸಿ ನೆತ್ತರಿನ ತುಂಟತನವೆಲ್ಲಾ ಮುಖಕ್ಕೆ ಹಾಲ್ಗಡಲಂತೆ ಹರಿದು ಬಂತು. ಅರಳಿದ ಕಂಗಳ ಮೇಗಡೆ ಕಾಮನ ಬಿಲ್ಲಿನಂತಹ ಹುಬ್ಬುಗಳು ಏರಿಳಿದುವು. "ಅರ್ಧಾಂಗಿಯಾಗುವುದು ಸಾಮಾನ್ಯವಲ್ಲ, ತಿಳಿಯಿತೋ?"

"ಅರ್ಧ ಅಂಗಿಯೂ ಬೇಡ. ಪೂರ್ತಿ ಅಂಗಿಯೂ ಬೇಡ." ಎನ್ನುತ್ತ ನುಣ್ಣನೆಯ ಹಾಲ್ಗೆನ್ನೆಗಳಲ್ಲಿ ಕೆಂಪನ್ನು ಸೂಸಿ ಓಡಿಹೋದಳು ಅವಳು.

ತಿಲಕ್ ಶಾಲೆಯ ಕೊನೆಯ ಹಂತವನ್ನು ದಿಟ್ಟತನದಿಂದ ಏರಿದ. ಸ್ವರೂಪರಾಣಿ ನಗುನಗುವ ಪುಟಾಣಿಯಂತೆ ಹಿರಿಹಿರಿ ಹಿಗ್ಗುತ್ತ ಅವನನ್ನು ಹಿಂಬಾಲಿಸಿದಳು. ಮನದಳಲು ಏನೇ ಇರಲಿ, ಮಕ್ಕಳು ಪ್ರಗತಿಯ ಪಥದಲ್ಲಿ ಕಾಲಿಟ್ಟಿದ್ದಾರೆಂಬುವ ಮಹಾ ಸಮಾಧಾನವಿತ್ತು ಕಮಲೇಶಳಿಗೆ. ಅದೇ ನೇರಕ್ಕೆ ಸ್ವರ್ಣಮಾಲಿನಿ ಹೇಮರತಿಯರ ಬದುಕು ಹಾಸು ಹೊಕ್ಕಾಗಿದ್ದುದ್ದು ಇನ್ನೊಂದು ಕುಂದಿಲ್ಲದ ಸಮಾಧಾನ. "ಈ ಎಲ್ಲಕ್ಕೂ ಕುಂದು ಬಾರದಿದ್ದರೆ ಇನ್ನೆಷ್ಟು ತೊಂದರೆಯಾದರೂ ಸಹಿಸಿಕೊಳ್ಳಬಲ್ಲೆ" ಎಂದೊಮ್ಮೆ ಪ್ರಾಸಂಗಿಕವಾಗಿ ನುಡಿದಾಗ ಹೇಮರತಿ ಎಚ್ಚರಿಸಿದಳು "ಮನೆ ಮನೆಯಲ್ಲೂ ದೇವತೆಗಳ ಶಕ್ತಿ ಸುಳಿದಾಡುತ್ತಿರುತ್ತೆ. ಯಾವುದೇ ಬೇಡಿಕೆಯನ್ನು ಮುಂದಿಟ್ಟಾಗಲೂ ಅವು "ಅಸ್ತು" ಎನ್ನಬಹುದು. ಆದುದರಿಂದ ಎಂದೂ ಅಮಂಗಳ ನುಡಿಯಬಾರದು"

ಹಾಗಾದರೆ....!

"ನನ್ನ ಬೇಡಿಕೆ ನಿಜವಾಗಿಯೂ ತಪ್ಪಾಯಿತೇನು?"

ತಕ್ಷಣ ಗೋಡೆಯಮೇಲಿನ ಹಲ್ಲಿ ನುಡಿಯಿತು. ಲೊಚ. ಲೊಚ. ಲೊಚ. ಲೊಚ.

ಶಕುನಗಳಲ್ಲಿ ಸ್ವಲ್ಪವೂ ನಂಬಿಕೆ ಇರದ ಕಮಲೇಶಳಿಗೆ ಅದರಿಂದ ಅಲ್ಪ ಸ್ವಲ್ಪ ನಂಬಿಕೆ ಬೆಳೆಯತೊಡಗಿತು. ಅನಂತರ ಮಾತಿನ ಮಧ್ಯೆ ಹಲ್ಲಿ ನುಡಿದಾಗ ತಾನಾಡಿದುದೇನು? ಎಂದು ಪುನರ್ಯೋಚಿಸುವಷ್ಟು ದೂರ ಬುದ್ಧಿ ಕೆಲಸ ಮಾಡುತಿತ್ತು. ಒಮ್ಮೆ ಮನಸ್ಸು ಹಲವು ಚಿಂತೆಗಳ ಬೀಡಾಗಿ ತನು

ನೊಂದು–" ಒನ್ಮೆ ಈ ಬಾಳು ಮುಗಿದರೆ ಸಾಕು " ಎಂದುಕೊಂಡಳು. ಆಗಲೂ ಹಲ್ಲಿ ನುಡಿಯಿತು. ಲೊಚ. ಲೊಚ. ಲೊಚ. ಲೊಚ.

ಕ್ಷಣ ಮೌನವಿರೆದ್ದಿತು.

ಶಕ್ತಿ ಕೈಯ್ಯಲ್ಲೊಂದು ಬೊಂಬೆಯನ್ನೆತ್ತಿಕೊಂಡು ಹಿತ್ತಿಲು ಬಾಗಿಲ ಕಡೆಯಿಂದ ಓಡೋಡಿ ಬಂದಳು. ಚೆಂಗೆನ್ನೆಗಳಲ್ಲಿ ಹೂನಗೆಯನ್ನು ಚೆಲ್ಲುತ್ತ ಹರ್ಷವೇ ಮೈಯೆತ್ತಿ ಬಂದಂತೆ ಆಗಮಿಸಿದ ಮಗುವಿಗೆ ಎರಡೂ ಕೈಗಳಿಂದ ಸ್ವಾಗತ ನೀಡಿದಳು ಕಮಲೇಶ್.

" ಶಕ್ತೀ.....! "

" ನನ್ನ ಹೊಸ ಬೊಂಬೆ ನೋಡಿ ಮಾಮಿ !"

" ಓ....ಹೋ....ಹೋ ! ಬಲು ಸೊಗಸಾಗಿದೆ....ಯಾರು ಕೊಟ್ಟರು ಮಗೂ ?"

" ಬಸಂತ್."

" ನೀನು ಸ್ಕೂಲಿಗೆ ಹೋಗುವುದಿಲ್ಲವೇ ?"

" ಊಹೂ....ನಾನು ಬಸಂತನ ಜೊತೆ ಕಾಲೇಜಿಗೆ ಹೋಗುವೇ !"

ಹಾಲ್ಗಲ್ಲದ ಮೇಲೆ ಹಸನಾದ ಎಳೆನಗು ತುಂಬಿ ಹರಡಿತು. ಕಮಲೇಶ್ ಮಗುವನ್ನು ಮನಸಾರೆ ಮುದ್ದಿಟ್ಟುಕೊಂಡಳು. ಹಿತ್ತಿಲು ಬಾಗಿಲು ಕಡೆಯಿಂದಲೇ ಬಸಂತ್ ಒಳಬಂದ. ಇಪ್ಪತ್ತರ ನವತರುಣ. ಆತ್ಮಾರಾಂ ಕರ್ವೆಯ ಮೈಸಂಪತ್ತನ್ನೂ ಗುಣಸಂಪತ್ತನ್ನೂ ಬಸಿದು ಮೈದುಂಬಿಸಿಕೊಂಡ ಬಸಂತ್ ಶ್ರೀ !

" ಬಾಪ್ಪಾ. ಕೂಡು."

ಕಮಲೇಶ್ ನಗುಮುಖದಿಂದ ಸ್ವಾಗತ ನೀಡಿದಳು. ಸಾಮಾನು ಸರಂಜಾಮು ಕೊಳ್ಳಲು ಹೋದ ಹೇಮಾ, ಸ್ವರ್ಣಮಾಲಿನಿಯರು ಇನ್ನೂ ಹಿಂದಿರುಗಿರಲಿಲ್ಲ. ಶಾಲಾಕಾಲೇಜುಗಳಿಂದ ಮಕ್ಕಳು ಹಿಂದಿರುಗಲು ಇನ್ನೂ ಬಹಳ ಹೊತ್ತಿದೆ. ಮನೆಗೆ ಬಂದಿದ್ದ ರೋಗಿಗಳನ್ನು ಆದೇ ತಾನೆ ನೋಡಿ ಕಳುಹಿಸಿ ಕುಳಿತಿದ್ದ ಕಮಲೇಶಳಿಗೆ ಶಕ್ತಿಯ ದರ್ಶನವಾಗಿತ್ತು. ಮಗುವನ್ನು ಮುದ್ದಿಟ್ಟುಕೊಳ್ಳುತ್ತ ಹೇಳಿದಳು ಕಮಲೇಶ್–" ಕೈಯ್ಯಲ್ಲೊಂದು ಮಗು ಇದ್ದರೆ ಪ್ರಪಂಚವನ್ನೆ ಮರೆತುಬಿಡಬಹುದು ಬಸಂತ್."

ಬಸಂತ್ ತಲೆಯಲುಗಿಸುತ್ತ ಹರಿಸಿದ ಸನ್ಮೋಹನ ನಗೆ ಹೌದೆಂಬುದನ್ನು ಮನಸಾ ಒಪ್ಪಿಕೊಂಡಿತು.

ಶಕ್ತಿಯ ಮುದ್ದು ಮುಖದಲ್ಲಿ ನಗುವಿನ ಹೊನಲು ಹರಿದಾಗ ಚಿತ್ರಸೇನನ ಪ್ರತಿರೂಪ 'ಫಳಕ್ಕ'ನೆ ಮಿನುಗಿತು. ಆತನ ರೂಪವನ್ನು ಪ್ರಧಾನು ಅಂಶವಾಗಿ ಪಡೆದ ಮಗು ಪ್ರಫುಲ್ಲ ಮಾಲತೀ ಪುಷ್ಪದಂತೆ ಮನಮೋಹಕವಾಗಿತ್ತು. ಶುಭ್ರಧವಳ ವರ್ಣರಂಜಿತವಾದ ತುಂಬು ನಿರಿಯ ಅಂಗಿಯನ್ನು ಧರಿಸಿ ಶೋಭಾಸಂಪತ್ತಿಯಲ್ಲಿ ವಿಜೃಂಭಿಸುವ ಅವಳನ್ನು ಮನಸಾರೆ ಮುದ್ದಿಟ್ಟುಕೊಳ್ಳುವಾಗ ಅವನವೇ ಆದ ಕಣ್ಣು ಮೂಗು ತುಟಿಗಳಲ್ಲಿ ಚಂದ್ರಮನ ಧವಳ ಪ್ರಭೆ ಚೆಲ್ಲಿದಂತಿದ್ದುದನ್ನು ನೋಡುತ್ತ ನೋಡುತಿದ್ದಂತೆ ಯಾವುದೋ ಖೇದರಾಗ ನರನಾಡಿಗಳಲ್ಲಿ ವಿದ್ಯುಲ್ಲಹರಿಯಂತೆ ಹರಿದಾಡಿತು.... ಈ ಜೀವನವನ್ನು ಪರಿಶೀಲನಾದೃಷ್ಟಿಯಿಂದ ವಿಶ್ಲೇಷಣೆ ಮಾಡಿದರೆ ಬಾಳು ಸಂತಸಭರಿತವಾಗಿದ್ದಲ್ಲಿ ಅದೇ "ಆದರ್ಶ" ಎಂಬುದು ಅರ್ಥವಾಗುತ್ತದೆ ಎಂದುಕೊಂಡಳಾ ನಾರೀಮೂರ್ತಿ.

ಮೆಲ್ಲನೆ ನಿಟ್ಟುಸಿರು ಬಿಟ್ಟು ಕಮಲೇಶ್ ಹೇಳಿದಳು "ಬಾಲ್ಯವೆಂಬುದ ಮನುಷ್ಯನ ಜೀವನದಲ್ಲಿ ಸ್ವರ್ಣಯುಗ."

ಬಸಂತ್ ಮೆಲು ನಗೆ ಬೀರಿ ಸಮ್ಮತಿ ಸೂಚಿಸಿದ.

ಮಗು ತೊಡೆಯಿಂದ ಇಳಿದು ಬೊಂಬೆಯನ್ನು ಸೀತಮ್ಮನಿಗೆ ತೋರಲು ಒಳಗಡೆ ಓಡಿದಳು. ಏನೋ ಒಂದು ಬಗೆಯ ಆಲಸ್ಯದಿಂದ ಮೈಕೈ ಮುರಿಯುತ್ತ-- "ಆಸ್ಪತ್ರೆಯ ಡ್ಯೂಟಿಯಿದೆ....ಬಸಂತ್ !"

" ಹೊರಡಿ, ನಾನೂ ಆ ಕಡೆ ಹೋಗುವುದಿದೆ."

" ಹಾಗಿದ್ದರೆ ಬರುತ್ತೀರಿಯೇನು ?"

" ಹ್ಞೂ ...."

ಕಮಲೇಶ್ ಮುಖ ಮಜ್ಜನ ಮಾಡಲು ಹೊರಟಳು. ಬಸಂತ್ ಆಲ್ಬಮ್‌ಗಳಿಗೆ ಕೈಹಚ್ಚಿದ. ಮುಖ್ಯವಾಗಿ ಅವನ ಗಮನ ಸೆಳೆದುದು ಹರೀಶ್ ಚೇತನರ ಆಲ್ಬಮ್. ಚೇತನಾ ಎಂ. ಎ., ತರಗತಿಗೆ ಕಾಲಿಟ್ಟಾಗಿನಿಂದ ಅವಳ ಘೋರ ಅಂತ್ಯದವರೆಗಿನ ಚಿತ್ರಗಳು ಸನ್ಮೋಹನವಾಗಿವೆ. ಹರೀಶ್ ಚೇತನರ ಪ್ರೇಮಭರಿತ ಜೀವನದಲ್ಲಿ ಪ್ರಧಾನ ಅಂಶವಾಗಿ ತೋರುತ್ತಿರುವುದು ಸಂತಸದ

ಮುದ್ರೆ. ಆವನು ಚಿತ್ರಗಳನ್ನು ತಿರುವಿ ಹಾಕುತಿದ್ದಂತೆಯೇ ಚೇತನಾ ಆಗಮಿಸಿದಳು.

"ಓಹೋ! ಇಂದೇನು ಇದರಲ್ಲಿ ಆಸಕ್ತಿ?"

"ಯಾರೂ ಇಲ್ಲ. ಇನ್ನೇನು ಮಾಡಲಿ?"

"ನಾ ಇಲ್ಲವೇ?"

"ಇದ್ದಾರೆ ಮುಖ ತೊಳೆಯುತ್ತಿರಬಹುದು."

ಆತನೊಂದಿಗೆ ಚಿತ್ರಗಳನ್ನು ನೋಡುವುದರಲ್ಲಿ ತಾನೂ ಪಾಲ್ಗೊಂಡ ಆವಳು "ಇವನ್ನೆಲ್ಲಾ ನೋಡುವಾಗಲೂ ನನಗೊಬ್ಬ ಅಪ್ಪ-ಅಮ್ಮ ಇದ್ದರು ಅಂತ ಅನ್ನಿಸುವುದೇ ಇಲ್ಲ. ನನ್ನ ತಾಯಿ ಬರೆದ ಕಾಗದಗಳನ್ನೂ ಸಹ ಓದಿರುವೆ. ಆದರೂ ಸಹ...."

ತಟ್ಟನೆ ಹನಿತ ಕಣ್ಣುಗಳನ್ನು ಕರವಸ್ತ್ರದಿಂದ ಒತ್ತಿಕೊಂಡಳು.

ಬಸಂತ್ ನಕ್ಕು ನುಡಿದ "ನಿನಗೆ ಅಳು ಬೇರೆ ಬರುತ್ತದೆಯೆ?"

ಹಠಾತ್ತಾಗಿ ಅನಿರೀಕ್ಷಿತವಾಗಿ ಪ್ರದರ್ಶಿತವಾದ ತನ್ನ ಮನೋದೌರ್ಬಲ್ಯವನ್ನು ಹೇಗೆ ಅಡಗಿಸಿಕೊಳ್ಳಬೇಕೋ ಹೊಳೆಯದೆ ನಸು ಲಜ್ಜಿತಳಾದರೂ ತೋರಗೊಡದೆ ಪುಸ್ತಕಗಳನ್ನು ಎತ್ತಿಡುವ ನೆವದಲ್ಲಿ ಕಾರ್ಯನಿಮಗ್ನಳಾದಳು ಆ ಮುಖದಲ್ಲಿ ರಾಗರಂಜಿತವಾದ ಅನಿರ್ವಚನೀಯ ಮಾಧುರ್ಯ ಗಂಭೀರಮುದ್ರೆಯಲ್ಲಿ ಹೊಮ್ಮಿದಾಗ ಮನ್ಮಥನು ಪರೋಕ್ಷವಾಗಿ ಎಸೆದ ಬಾಣದಂತೆ ತೋರಿ ಸರಳ ಶೀಲವಾದ ತೀಕ್ಷ್ಣತೆಗೊಳಗಾಗಿ ಬಸಂತ್ ಲಜ್ಜಿತನಾದ.

ಅದೇ ಘಳಿಗೆಯಲ್ಲಿ ಶಾಲಾ ಕಾಲೇಜುಗಳಿಂದ ತಿಲಕ್ ಸ್ವರೂಪರು ಆಗಮಿಸಿದರು. ಸೀತಮ್ಮ ಎಲ್ಲರಿಗೂ ತಿಂಡಿ ಚಹವನ್ನು ತಯಾರಿಸಿದಳು. ಕಮಲೇಶ್ ಎಲ್ಲರೊಡನೆ ಕೂತಿ ಚಹ ಮುಗಿಸಿ ಏಳುವಷ್ಟರಲ್ಲಿ ಟೆಲಿಫೋನು ಕರೆ ನೀಡಿತು.

"ಹಲೋ!"

ಆ ಕಡೆಯಿಂದ ಡಾ|| ಶರಣನ ದನಿ ಮೊಳಗಿತು–"ಡಾಕ್ಟರ್, ಒಂದು ಎಮರ್ಜನ್ಸಿ ಕೇಸಿದೆ. ಅದು ನೀವಿಲ್ಲದೆ ನಡೆಯುವಂತಿಲ್ಲ."

"ಏನಾಗಿದೆ"?

" ಆರೇಳು ತಿಂಗಳ ಗರ್ಭಿಣಿಗೆ ಹೊಟ್ಟೆಯ ಮೇಲೆ ಬಿದ್ದ ಒದೆತದಿಂದ ವಿಪರೀತ ರಕ್ತಸ್ರಾವವಾಗಿದೆ. ಆಕೆ ತುಂಬ ಸುಸ್ತಾಗಿದ್ದಾಳೆ."

" ಪಾಪ...."

"ಆಂಬುಲೆನ್ಸ್ ಕಳುಹಿಸಲೇ "?

" ಕಳುಹಿಸಿರಿ."

ರಿಸೀವರನ್ನು ಸ್ವಸ್ಥಾನದಲ್ಲಿ ಅಳವಡಿಸಿ ಬಸಂತನಿಗೆ ಹೇಳಿದಳು "ಈಗ ಆಸ್ಪತ್ರೆಯಿಂದ ವ್ಯಾನು ಬರುತ್ತದೆ. ಅರ್ಜೆಂಟಾಗಿ ಹೋಗಬೇಕಾಗಿದೆ. ನೀನು....?"

" ನಾನೂ ಬರುವೆ ನಡೆಯಿರಿ ನನಗೂ ಅಲ್ಲಿ ಸ್ವಲ್ಪ ಕೆಲಸವಿದೆ."

ಇಬ್ಬರೂ ಅಣಿಯಾದರು.

ಕೆಲವೇ ಕೆಲವು ನಿಮಿಷಗಳೊಳಗಾಗಿ ವ್ಯಾನು ಗಂಟಾರವಗೈಯುತ್ತಾ ಬಾಗಿಲಿಗೆ ಬಂದಿತು. ಸ್ವರೂಪರಾಣಿ ಚೇತನ ಮತ್ತು ತಿಲಕರೊಂದಿಗೆ ತಲೆ ಬಾಗಿಲಲ್ಲಿ ನಿಂತು ವ್ಯಾನು ಹೋಗುವುದನ್ನೇ ನಿಟ್ಟಿಸಿದಳು ಶಕ್ತಿ. ಜನಭರಿತ ವಾದ ರಸ್ತೆಯಲ್ಲಿ ಹರಿದು, ಹೆದ್ದಾರಿಯನ್ನು ಹಿಡಿದು ಆಸ್ಪತ್ರೆಯನ್ನು ಮುಟ್ಟಿತು. ಬಸಂತ್ ಆಫೀಸ್ ಕಡೆ ಹೋದ. ಕಮಲೇಶ್ ಲೇಬರ್ ವಾರ್ಡ್ ಕಡೆ ನಡೆದಳು. ಮೇಜಿನ ಮೇಲೆ ಬಸವಳಿದು ಮಲಗಿದ ಹೆಣ್ಣು ನಿಶ್ಚಲವಾಗಿದೆ. ಅರೆದೆರೆದ ಕಣ್ಣುಗಳು ಏನನ್ನೂ ನೋಡದಿವೆ. ರಕ್ತದ ಕೋಡಿಯಲ್ಲದ್ದಿದ ದೃಶ್ಯ ಕರುಣಾಜನಕವಾಗಿತ್ತು. ಅತ್ಯಂತ ಅಪಾಯಕರ ಸ್ಥಿತಿಯಲ್ಲಿದ್ದ ಅವಳ ಆಪರೇಶನ್ ಮುಗಿಸಿ ಹೊರ ತಲೆಹಾಕುವಷ್ಟರಲ್ಲಿ ಹೊತ್ತು ಎಂಟರ ಅಂಚನ್ನು ತಬ್ಬುವುದರಲ್ಲಿತ್ತು.

ಹೊರಗಡೆ ತನಗಾಗಿ ಕಾದಿದ್ದ ವ್ಯಾನಿಗೆ ಹತ್ತಿ ಕುಳಿತಾಗ ತನು ಆಯಾಸದ ಬೀಡಾಗಿರುವುದರ ಅರಿವಾಯಿತು. ಆ ಕರ್ಮಚಾರಿಣಿ ಆತುರ-ಕಾತರಗಳನ್ನು ಮನದಲ್ಲಿ ತುಂಬಿಕೊಂಡು ಏಕಾಕಿಯಾಗಿ ಪಯಣಿಸಿದಳು. ಅದೇ ತಾನೇ ಆಪರೇಶನ್ನಿಗೆ ಒಳಗಾದ ನಾರೀ ಮೂರ್ತಿಯ ಸ್ಥಿತಿಗತಿ ಮನಃಪಟಲದಮೇಲೆ ಪುನಃಪುನಃ ಮೂಡಿ ಜೀವನಾರಣ್ಯದ ಮಹಾ ಗಾಢಾಂಧಕಾರ ಮಾರ್ಗವನ್ನು ಪರಿಚಯ ಮಾಡಿಸುತಿತ್ತು. ಭಾರವಾದ ಹೃದಯದಿಂದ ಒಳ ಹೋಗುತ್ತಲೂ ಪಾರ್ವತಮ್ಮ "ಚಂದ್ರಕಾಂತ್ ಕತ್ತಲಾಗುವುದ

ರೊಳಗಾಗಿಯೇ ಬಂದ. ನೀನಿನ್ನೂ ಬರುವುದರಲ್ಲಿದ್ದಿ. ವೇಳೆ ಅವೇಳೆ ಎಂಬುದರ ಪರಿಬೇಧವೂ ಸಹ ನಿನಗಿಲ್ಲ. ಗಂಡು ಬೀರಿ...."

" ತುರ್ತು ಆಪರೇಶನ್ ಇತ್ತು...."

ಆ ಮುಹೂರ್ತದಲ್ಲಿ ಆಲೋಚನಾರಹಿತ ಮಾಯಿಗೆ ಇನ್ನೇನಾದರೂ ಹೇಳುವುದಿದೆಯೇ ? ಎಂಬ ವಿಷಯವೂ ಸಹ ಹೊಳೆಯದು. ಆಪರೇಶನ್ನಿನ ವ್ಯಾಪ್ತಿ, ಆದರ ಸ್ಥಿತಿಗತಿ, ಅದಕ್ಕೆ ತಗಲುವ ಸಮಯ ಒಂದೂ ತಿಳಿಯದ ಆ ಪ್ರಾಚೀನೆಯೊಂದಿಗೆ ಮಾತುಕತೆಯೂ ಸಹ ವ್ಯರ್ಥ ಎನಿಸಿದುದರಲ್ಲಿ ಆಶ್ಚರ್ಯವೂ ಇಲ್ಲ ತಾಯಿಯ ಅಭಿಪ್ರಾಯದೊಂದಿಗೆ ಏಕೀಭವಿಸಿ ಚಂದ್ರಕಾಂತ್ ಹೌಹಾರಿದ " ಗೃಹಲಕ್ಷ್ಮಿಗೆ ಇರಬೇಕಾದ ಎಲ್ಲಾ ಎಲ್ಲೆಯನ್ನೂ ದಾಟಿದವರಿಗೆ ಹೇಳುವ ಸಾರ್ಥಕತೆಯಾದರೂ ಏನು ? ಈ ಅರ್ಥರಹಿತ ಸ್ವಭಾವಕ್ಕೆ 'ಸೇವೆ' 'ತ್ಯಾಗ' ಎಂಬ ದೊಡ್ಡ ದೊಡ್ಡ ಹೆಸರಿಟ್ಟು ಆರ್ಯ ಸಂಸ್ಕೃತಿಗೆ ಮಸಿ ಬಳಿಯ ಬೇಡಿರಿ. ಈ ಗೃಹಯಜ್ಞದಲ್ಲಿ ನಾನೊಂದು 'ಪಶು' ಹಿಂದೂ ನಾರಿಯ ಪಾತಿವ್ರತ್ಯ ಪವಿತ್ರತೆ ಇಂದು ಅಳಿಸಿ ಹೋಗುತ್ತಿರುವುದರ ಮರ್ಮವೇನು ? ಎಲ್ಲಿ ಪತಿಯ ಛಾಯಾನುವರ್ತಿಯಾಗಿ ಹೆಣ್ಣು ಉಳಿಯಲಾರಳೋ ಅಲ್ಲಿ ಹಿಂದೂ ಸಂಸ್ಕೃತಿ ಉಳಿಯುವುದಾದರೂ ಹೇಗೆ ?"

ಆ ಪ್ರಸಂಗದಾವೇಗದಲ್ಲಿ ಕೊಚ್ಚಿ ಹೋಗುತ್ತಿರುವಾಗಲೂ ಆಸ್ಪತ್ರೆಯಲ್ಲಿ ಮೇಜಿನಮೇಲೆ ಬಸವಳಿದು ಮಲಗಿದ ಹೆಣ್ಣು ಅಕ್ಷಿಪಟಲದ ಮೇಲೆ ಸುಳಿವಳಿದಳು. ಎಲ್ಲಿ ಹೆಣ್ಣುಗಳು ಕಣ್ಣೀರಿನಲ್ಲಿ ಕೈತೊಳೆದು ಮೃತ್ಯುವಿನ ಬಾಯಿಯೊಳಗೆ ನಿರಾಯಾಸವಾಗಿ ನುಸುಳುವರೋ ಅಲ್ಲಿ ಸಹಾಯ ಹಸ್ತ ನೀಡುವುದರಲ್ಲಿ ಇರುವ ಆತ್ಮಶಾಂತಿ 'ಗಂಡುಬೀರಿ' ಎಂಬ ಕೀರ್ತಿಯನ್ನು ಪಡೆಯುವುದರಲ್ಲಿ ಸಹ ಇರುತ್ತದೆ. ಯಾವ ಸಂಸ್ಕೃತಿ ಅಕ್ಕತಂಗಿಯರ ಜೀವನವನ್ನು ಲೀಲಾಜಾಲವಾಗಿ ಬಲಿ ತೆಗೆದುಕೊಳ್ಳುವುದೋ ಅಂತಹ 'ಸಂಸ್ಕೃತಿ'ಯ ಅವಶ್ಯಕತೆ ಖಂಡಿತವಾಗಿಯೂ ನನಗೆ ಇಲ್ಲ.

ಶತ ಶತ ಶತ ಶತಮಾನಗಳ ಆಧ್ಯಾತ್ಮಿಕ ಸಂಸ್ಕಾರವು ಭಾರತೀಯರ ಮನೋವಿಕಾಸವನ್ನುಂಟುಮಾಡಲು ಶಕ್ತವಾಗಿಲ್ಲವೇಕೆ? ಭರತಖಂಡದ ಆಧ್ಯಾತ್ಮಿಕ ಶಕ್ತಿ ಮಹಾ ಸ್ರುಷ್ಟ್ಯಂಶಗಳಾಗಿ ಚಕ್ಷ್ವಂಶಗಳಾಗಿ ಲೋಕಾಂಶಗಳಾಗಿ ಬೆಳಗಿ ಚಿರಂತನವಾಗಿ ನಿತ್ಯನೂತನವಾದರೂ ಇದುವರೆವಿಗೆ ಮನುಷ್ಯ

ಮನುಷ್ಯನಾಗಿ ಉಳಿಯಲಿಲ್ಲವಲ್ಲಾ ಅದು ಹೇಗೆ ? ಕಾರಣವಾದರೂ ಏನಿರ ಬಹುದು ?....ಯೋಚನಾಮಗ್ನಳಾದ ಕಮಲೇಶಳ ರುದ್ರಮೌನ ಎಲ್ಲರಿಗೂ ಉತ್ತರ ನೀಡಿತು.

ಹೇಮರತಿ ಕರ್ವೆ ಸುಚಿತ್ರಸೇನನಿಗೆ ಹೆಣ್ಣು ಗೊತ್ತುಮಾಡಿಕೊಂಡು ಒಮ್ಮೆ ಬಂದು ಹೋಗಲು ಬರೆಯುತ್ತಲೇ ಇದ್ದರೂ ಅವನು ಇಂದು ನಾಳೆ ಯೆಂದು ತಳ್ಳಿಕೊಂಡೇ ಬಂದಿದ್ದು ಇಂದು ಹೇಳದೆ ಬಂದು ಮನೆಯ ಬಾಗಿಲು ತಟ್ಟಿದಾಗ ಆದ ಆಶ್ಚರ್ಯ ಆನಂದಗಳಿಗೆ ಕೊನೆ ಮೊದಲಿಲ್ಲ. ಸುಮಾರು ಹತ್ತು ವರ್ಷಗಳ ನಂತರ ಆದ ದರ್ಶನದಿಂದ ತಾಯಿಯ ಹೂ ಹೃದಯ ರವಿಯಾಗಮನದಿಂದ ಬಿರಿಯುವ ಕಮಲ ಪುಷ್ಪದಂತಾಯಿತು.

ಕಮಲೇಶ್ ಆಸ್ಪತ್ರೆಯಿಂದ ಮನೆಗೆ ಬಂದಾಗ ಸ್ವರೂಪರಾಣಿ ಆತನು ತಂದ ಬಹುಮಾನಗಳ ಹೊರೆಯನ್ನು ಮುಂದಿಟ್ಟು ಹೃದಯ ಬಿರಿಯುವಷ್ಟು ಹಿಗ್ಗಿ—“ ಮಾ ! ಸುಚಿತ್ರಸೇನ್ ಮಾಮಾ ಬಂದಿದ್ದಾರೆ !”

“ ಓಹೋ ! ಸುದ್ದಿ ಕೊಡದೆ ಬಂದಿದ್ದಾನೆಯೆ ?” ಕಮಲೇಶ್ ಕಣ್ಣರ ಳಿಸಿದಳು.

ಅದೇ ಸಮಯಕ್ಕೆ ಸುಚಿತ್ರಸೇನ್ ಪಾದರಕ್ಷೆಗಳ ಪಟಪಟ ಸದ್ದು ಮಾಡುತ್ತಾ ಒಳ ಬಂದ. ಚಳಿದೇಶದ ಕೆಂಪಿನೊಂದಿಗೆ ಆನಂದದ ಪೆಂಪು ಕೂಡಿ ಆತನ ಸೌಂದರ್ಯರಾಶಿಯನ್ನು ಸಮೃದ್ಧಿಗೊಳಿಸಿವೆ. ತಾಯಿಯ ರೂಪ ವನ್ನೂ ತಂದೆಯ ಆಳ್ತನವನ್ನೂ ಪಡೆದುಕೊಂಡ ಹುಡುಗನನ್ನು ನೋಡಿದರೆ ಇನ್ನೊಮ್ಮೆ ನೋಡೋಣವೆನ್ನಿಸುವಂತಿದೆ. ಕಮಲೇಶ್ ಆತ್ಮೀಯತೆಯಿಂದ ಆಲಂಗಿಸಿಕೊಂಡು “ ಎಷ್ಟು ಎತ್ತರ ಬೆಳೆದಿದ್ದಿ ?” ಎಂದಳು.

“ ಆಗಲೇ ಬಂದಿದ್ದೆ, ನೀವು ಬಂದಿರಲಿಲ್ಲ. ” ಸಂತಸವೇ ಮೈವೆತ್ತು ಬಂದಂತೆ ಸಂತಸಮೂರ್ತಿಯಾಗಿ ನಿಂತ.

“ ತಾಯಿ ಸೊಗಸಾದ ಹುಡುಗಿ ಹುಡುಕಿಟ್ಟಿದ್ದಾರೆ. ಮಗ ಓಡಿ ಬಂದ !”

ಹುಡುಗ ಪ್ರಸನ್ನನಾದ.

ಕಮಲೇಶ್ ಪುನಃ ನುಡಿದಳು,

" ನೀನು ತಿಳಿಸಿ ಬಂದಿದ್ದರೆ ಕನ್ಯೆಯನ್ನು ವಿಮಾನ ನಿಲ್ದಾಣದಲ್ಲೇ ಭೇಟಿ ಮಾಡಿಸಬಹುದಿತ್ತಲ್ಲಾ ?"

ಸುಚಿತ್ರಸೇನ್ ಮುಗುಳು ನಗೆ ಬೀರಿದ.

" ಧಾರಾ ಮುಹೂರ್ತದಲ್ಲೇ ನೋಡಿದರೆ ಒಳ್ಳೆಯದು. ಅದು ಸುಮುಹೂರ್ತ!" ಎಂದಳು ಸ್ವರ್ಣಮಾಲಿನಿ.

" ನೀವು ಈಗಷ್ಟೆ ಬಂದಿದ್ದೀರಿ. ನಾನು ಅನಂತರ ಬಂದು ಭೇಟಿ ತೆಗೆದುಕೊಳ್ಳುವೆ."

ಹುಡುಗ ಎಷ್ಟು ಹಠಾತ್ತಾಗಿ ಆಗಮಿಸಿದನೋ ಅಷ್ಟೇ ಹಠಾತ್ತಾಗಿ ನಿರ್ಗಮಿಸಿದ.

" ಇರು, ಅಂತಾದ್ದೇನಿಲ್ಲ." ಎಂದ ಕಮಲೇಶಳ ನುಡಿ ಹಿಂದೆಯೇ ಉಳಿಯಿತು.

ಕಮಲೇಶ್ ದಿನಚರಿಯನ್ನು ಮುಗಿಸುವ ವೇಳೆಗೆ ಸುಚಿತ್ರಸೇನ ತಾಯಿಯೊಡನೆ ಪುನಃ ಆಗಮಿಸಿದ. ಅವನನ್ನು ಸಂತಸದಿಂದ ಬರಮಾಡಿಕೊಳ್ಳುತ್ತ ಕೇಳಿದಳು ಕಮಲೇಶ್ " ಸ್ವರೂಪಳಿಗೆ ಅಷ್ಟು ಬಹುಮಾನ ತರುವುದೇ ?"

" ಅವಳು ನನ್ನನ್ನು ಮದುವೆಯಾಗುತ್ತಾಳಂತೆ ! ಅದಕ್ಕೆಂದೇ ತಂದೆ!"

ಹಾಸ್ಯ ಮನೋವೃತ್ತಿಯವನಾದ ಅವನಿಗೆ ಸ್ವರೂಪಳನ್ನು ಪೇಚಿಗೆ ಸಿಕ್ಕಿಸುವುದರಲ್ಲಿ ಅತುಳ ಸಂತೃಪ್ತಿ. ತುಟಿಗಳಲ್ಲಿ ತುಂಟ ನಗೆ ತುಂಬಿ ಹರಿಸಿದ.

" ನಿಮ್ಮನ್ನು ಮದುವೆಯಾಗುವುದು ನಾನಲ್ಲ. ಉ-ಷಾ-ರಾ-ಣಿ !" ಆಣಕದ ಧಾಟಿಯಲ್ಲಿ ಮೋಹಕದನಿಯಲ್ಲಿ ಬಿತ್ತರಿಸಿದಾಗ ಕುಂಕುಮ ಗೌರವ ಕಾಂತಿಗೆ ಮೆರಗು ಕೊಟ್ಟಂತಾಯಿತು.

ಒಡನೆ ನಗುವಿನಲೆ ಉಕ್ಕಿ ಹರಿಯಿತು.

" ಆ ದೇಶದಲ್ಲಿ ಇಬ್ಬರು ಹುಡುಗಿಯರನ್ನು ಮಾಡಿಕೊಳ್ಳುತ್ತಾರೆ! ಒಬ್ಬಳು ಮನೆಗೆಲಸಮಾಡುವುದಕ್ಕೆ ! ಇನ್ನೊಬ್ಬಳು ಜೊತೆಗೆ ಓಡಾಡುವುದಕ್ಕೆ !"

ಸ್ವರೂಪಳಿಗೀಗ ನಿಜವಾಗಿಯೂ ಸಿಟ್ಟು ಬಂತು. ಆತನ ಬಹುಮಾನ

ಗಳನ್ನೆಲ್ಲಾ ಮುಂದಿಟ್ಟು "ಹೋಗಿ! ನೀವೂ ಬೇಡ! ನಿಮ್ಮ ಬಹುಮಾನವೂ ಬೇಡ!" ಎಂದಳು ಹುಬ್ಬು ಗಂಟಿಕ್ಕಿ.

"ಇದ್ದ ಸಿಟ್ಟನ್ನೆಲ್ಲಾ ಇಂದೇ ತೀರಿಸಬೇಡ. ನಾಳೆಗೂ ಸ್ವಲ್ಪ ಇರಲಿ! ಮದುವೆಯಾದಮೇಲೂ ಸ್ವಲ್ಪ ಲಟಾಪಟಿ ಮಾಡೋಣ!"

ಸರಳ ಸಲಿಲ ಹಾಸ್ಯವಾಣಿ ನಗುವಿನ ಗುಲ್ಲೆಬ್ಬಿಸಿತು.

ಸ್ವರೂಪಳಿಗೆ ಇನ್ನು ತಡೆಯಲಾಗಲಿಲ್ಲ. ಅವನನ್ನು ತಳ್ಳಿಕೊಂಡೇ ಹೋಗಿ ಹೊರದಬ್ಬಿದಳು. ಸ್ವರ್ಣಮಾಲಿನಿ ಕಮಲೇಶರು ಎಷ್ಟು ಬೇಡವೆಂದರೂ ಅವಳು ಮಣಿಯಲಿಲ್ಲ. ಹಿಂದುಗಡೆಯ ಬಾಗಿಲಿನಿಂದ ಹೊರ ಹೋದ ಅವನು ಎದುರುಗಡೆಯ ಬಾಗಿಲಿನಿಂದ ಪುನರಾಗಮಿಸಿದೊಡನೆ ಪುನಃ ನಗುವಿನ ಗುಲ್ಲೆದ್ದಿತು.

"ಕಳ್ಳಬೆಕ್ಕು!" ಅಣಕಿಸಿದಳು ಸ್ವರೂಪ್.

"ಅಲ್ಲ ಅ-ಳಿ-ಯ।" ಸುಚಿತ್ರಸೇನ ಹಸನಾದ ನಗೆ ಬೀರಿದ.

"ನೋಡಿ ಮಾ!" ಸ್ವರೂಪ್ ದೂರಿತ್ತಳು.

"ಅಂದರೆ ಅನ್ನಲಿ ಬಿಡು."

"ನೋಡಿದೆಯಾ?" ಸುಚಿತ್ರಸೇನ್ ಹುಬ್ಬೇರಿಸಿದ.

ಸ್ವರೂಪರಾಣಿ ಅವನನ್ನು ಕೊಠಡಿಯೊಳಗೆ ತಳ್ಳಿ ಕದ ಮುಚ್ಚಿದಳು. ಅವಳ ಬಾಲಹಸ್ತಗಳಿಗೆ ನೋವಾಗದಂತೆ ಲಘುವಾಗಿ ತಳ್ಳಿಸಿಕೊಂಡ ಅವನು ಒಳಗಿನಿಂದ ನಗುವಿನ ಗುಲ್ಲೆಬ್ಬಿಸಿದರೂ ಅವಳಿಗೆ ಅವನನ್ನು ಬಂಧಿಸಿದ ಹೆಮ್ಮೆ; ಪ್ರತಿಕಾರ ತೋರಿದ ಹಿತ.

....ಅದೊಂದು ಶೀತಲ ಸಂಧ್ಯೆ!

....ಬಾನಂಚಿನಲ್ಲಿ ಬೆಳಗುವ ಚಂದನರಾಗದ ರವಿ ಇನ್ನೇನು ಮುಳುಗುವುದರಲ್ಲಿದ್ದಾನೆ.

ಕಾರಿಡಾರಿನಲ್ಲಿ ಹಾದಿಯ ನೇರಕ್ಕೆ ಜೊತೆಗೂಡಿ ಹೆಜ್ಜೆಹಾಕುತಿದ್ದ ಜುಬೇದಾ ತನ್ನ ಹೊಟ್ಟೆಯ ಮೇಲೆ ಕೈಯಾಡಿಸುತ್ತ-"ನೀನು ಅಪರೇಶನ್ ಮಾಡಿದ್ದರಲ್ಲಿ ಏನೋ ದೋಷವಿದೆ. ಯಾವುದೋ ಸಹಿಸಲಾಗದ ವಿಚಿತ್ರ

ತೊಂದರೆಯನ್ನು ನಾನು ಅನುಭವಿಸುತ್ತಿದ್ದೇನೆ ಕಮಲೇಶ್ !"

ಎಂತಹ ಆಶ್ಚರ್ಯ !

ಕಮಲೇಶಳಿಗೆ ಎಲ್ಲಿಲ್ಲದ ಆತಂಕ ಮೂಡಿತು. "ಏನಾಗಿದೆ? ಏನು ತೊಂದರೆ?"

" ಏನೆಂಬುದನ್ನು ಕಂಡು ಹಿಡಿಯುಲಾಗುವುದಿಲ್ಲ. ನೀನು ನಿನ್ನ ಕೆಲಸವನ್ನು ಲಕ್ಷ್ಯವಿಟ್ಟು ಮಾಡಿಯೇ ಇಲ್ಲ...."

" ಛೀ ! ಛೀ ! ಎಂಥ ಮಾತು....? ನಾನು ಖಂಡಿತವಾಗಿಯೂ ಲಕ್ಷ್ಯದಮೇಲೆ ಲಕ್ಷ್ಯವಿಟ್ಟು ಮಾಡಿರುವೆ. ನೀನು ಅನ್ಯಥಾ ಭಾವಿಸಬಾರದು."

" ಇಲ್ಲ ಕಮಲೇಶ್, ಇನ್ನೊಮ್ಮೆ ಯೋಚಿಸಿ ನೋಡು, ನಿನ್ನ ಕೆಲಸ ನಿರ್ಲಕ್ಷ್ಯದಿಂದಲೇ ನಡೆದಿದೆ. ಅಥವಾ ಮರೆತು ತಪ್ಪು ಮಾಡಿದ್ದಿ. ನನ್ನ ಹೊಟ್ಟೆಯೊಳಗೆ ಕೀಟದಂತೆ ಕೊರೆಯುತ್ತಿದೆ ಅದು !"

" ಅಯ್ಯೋ....ದೇವರೇ !"

ನಡೆಯುತ್ತ ನಿಟ್ಟುಸಿರು ಬಿಟ್ಟಳು ಜುಬೇದಾ.

" ಇನ್ನೊಮ್ಮೆ ಪರೀಕ್ಷೆ ಮಾಡೋಣ."

" ಸದ್ಯ, ಇಲ್ಲಿ ಬೇಡವೇಬೇಡ. ಯಾರಾದರೂ 'ಮುಸ್ಲಿಂ' ಡಾಕ್ಟರ ವಿನಾ ಇನ್ನಾರ ಬಳಿಯೂ ನಾನು ತೋರಿಸಿಕೊಳ್ಳಲಾರೆ!"

ಇದೆಂಥ ಅಪಾದನೆ ? ಆ ಕರ್ಣ ಕಠೋರ ಕಟೂಕ್ತಿ ತನುಮನವನ್ನು ದಾವಾನಲದಂತೆ ದಹಿಸುತ್ತಿದೆ. ಅವಳ ಹೊಳೆಹೊಳೆಯುವ ಕಣ್ಣಾಗಳ ತೀಕ್ಷ್ಣತೆಯನ್ನು ಎದುರಿಸುವಂತೆಯೇ ಇಲ್ಲ. ಮೈಯಲ್ಲಿ ನಸು ಕಂಪನದ ಅಲೆಹರಿದಾಡಿ ಹೋಯಿತು. ವಿಚಾರಗತ್ತರಿಯಲ್ಲಿ ಸಿಕ್ಕಿ ತತ್ತರಿಸಿದ ಕಮಲೇಶ್ ಅವಳ ಕೋಪ ಜ್ವಾಲೆಯಿಂದ ತಪ್ಪಿಸಿಕೊಳ್ಳಲೆಂದು ಆಪರೇಶನ್ ಥಿಯೇಟರಿನೊಳಗೆ ನುಸುಳಿದಳು. ಮೇಜಿನ ಬಳಿ ಚಾಕು ಕತ್ತರಿಯೊಡನೆ ಡಾ|| ಶರಣ್ ಸಜ್ಜಾಗುತಿದ್ದ. ಆವನು ಇತ್ತಲೇ ದುರುಗುಟ್ಟಿ ನೋಡಿ ಹುಬ್ಬು ಗಂಟಿಕ್ಕಿ- " ಡಾಕ್ಟರ್ ನೀವು ಮಾಡಿದ್ದೇನು ? ಕೊಯ್ಯುವುದೆಂದರೆ ಹೀಗೆ ಹುಚ್ಚಾಪಟ್ಟೆಯೆ ?"

....ಅಯ್ಯೊ, ದೇವರೇ !

ಒಮ್ಮೆಲೇ ಚಾಟಿ ಏಟು ಬಿದ್ದ ಕುದುರೆಯಂತೆ ಮಿಡುಕಿ ಬಿದ್ದಳು.

ದಿಕ್ಕೆಟ್ಟ ಮೇಘದಂತಾಯಿತು ಮನಸ್ಸು. ಅವನು ಸಿಟ್ಟಿನಿಂದ ಕೆಂಪಡರಿ, ಮೇಜಿನ ಮೇಲೆ ಮಲಗಿದ ಹೆಣ್ಣಿ ದೇಹದತ್ತ ಬೆರಳು ತೋರಿ- "ನೋಡಿ, ಇವಳ ಸ್ಥಿತಿ !"

ಭಯ ಭೀತಿಯ ಗಣಿಯಾಗಿ ಆವಳತ್ತ ಕಣ್ಣು ಹೊರಳಿಸಿದಳು ಕಮಲೇಶ್. ಅಡಿಯಿಂದ ಮುಡಿಯವರೆಗೆ ಅಡ್ಡಾದಿಡ್ಡಿ ಕೊಯ್ದ ಗಾಯಗಳಿಂದ ಕೂಡಿದ ಹೆಣ್ಣು ನಿಶ್ಚಲಳಾಗಿದ್ದಾಳೆ ಮೈಯ್ಯ ಹಲವು ಗಾಯಗಳಲ್ಲಿ ನೆತ್ತರು ಹೆಪ್ಪುಗಟ್ಟಿದೆ. ಆ ಭಯಂಕರ ದೃಶ್ಯ ತನ್ನ ಮೈಯ ನೆತ್ತರನ್ನು ಹೆಪ್ಪುಗಟ್ಟಿಸಿತು. ಆಯತಪ್ಪಿ ಮಿಡಿಯಹತ್ತಿದ ಹೃದಯವನ್ನು ಎರಡೂ ಕೈಗಳಿಂದ ಒತ್ತಿ ಹಿಡಿದುಕೊಂಡು ನೋಟ ತಗ್ಗಿಸಿದಳು. ಭಯಂಕರ ಮನೋವಿಪ್ಲವದಲ್ಲಿ ಯೋಚಿಸಿದರೂ ವಿಚಾರ ಹೊಳೆಯದು.. ....ನಾನು ಹೀಗೆ ಕೊಯ್ದಿದ್ದೇನೆಯೇ....ಇದು ಹೇಗೆ ಸಾಧ್ಯ.... ಹಾ !

" ನಿಮಗೆ ಹೃದಯವಿಲ್ಲ ಡಾಕ್ಟರ್!" ಶರಣ್ ಚೀರಿದ.

" ಛೆಃ ! ಇದೆಂತಹ ಮಾತು ?"

" ನೀವು ತಪ್ಪಿಸಿಕೊಳ್ಳುವ ಸಾಹಸವನ್ನು ಬದಿಗಿಟ್ಟು ಉತ್ತರ ಹೇಳಿರಿ!" ಸಿಡಿಲೆರಗುವಂತೆ ಸಿಡಿದುಬಿತ್ತು ದನಿ. " ಈ ಭಯಂಕರ ಪಾಪದಿಂದ ನೀವೆಂದೂ ಮುಕ್ತರಾಗಲಾರಿರಿ !"

" ಸಾಕು ನಿಲ್ಲಿಸಿ !' ತನ್ನೆಲ್ಲಾ ಶಕ್ತಿಯನ್ನು ಒಟ್ಟುಗೂಡಿಸಿ ಅತ್ಯಂತ ಪ್ರಯಾಸದಿಂದ ನುಡಿಯನ್ನು ಹೊರಹಾಕಿದಳು ಕಮಲೇಶ್. ಭಯ ಭೀತಿಯ ಭಯಂಕರ ತರಂಗಗಳು ತಲೆಯನ್ನು ಮುತ್ತಿದುವು. ಹೃದಯ-ಮಸ್ತಿಷ್ಕಗಳೆರಡೂ ನಿಷ್ಕ್ರಿಯೆಯಾದಂತೆ ಭಾಸವಾಯಿತು.

ಆ ತಕ್ಷಣ ಅವನು ತನ್ನ ಕೈಯ್ಯಲ್ಲಿದ್ದ ಚಾಕು ಕತ್ತರಿಗಳನ್ನು ಸಿಟ್ಟಿನಿಂದ ಇತ್ತ ಒಗೆದ. ಒಂದು ಹಣೆ ಮೂಗು ಮುಖಗಳನ್ನು ಬೇಧಿಸಿಕೊಂಡು ಹೋಯಿತು ! ಇನ್ನೊಂದು ಎದೆಯನ್ನು ಬಗೆದು ನೆತ್ತರನ್ನು ಹೊರಚೆಲ್ಲಿತು ! ಮಗದೊಂದು ಕೈಕಾಲುಗಳನ್ನು ಕತ್ತರಿಸಿತು ! ಕಮಲೇಶ್ ಚಿಟ್ಟನೆ ಚೀರಿದಳು " ಅಯ್ಯೋ, ಶರಣ್, ಶರಣ್ !"

ಪಕ್ಕದಲ್ಲಿ ಮಲಗಿದ್ದ ಚಂದ್ರಕಾಂತ್ ಬಲವಾಗಿ ಗುದ್ದಿ ಅಬ್ಬರಿಸಿದ " ಮನಸ್ಸಿನಲ್ಲೂ ಶರಣನ ಧ್ಯಾನ. ಕನಸಿನಲ್ಲೂ ಶರಣನ ಧ್ಯಾನ ! ಅವಿವೇಕಿ! ಪಾಪಿ !"

ಮೈ ಜಿಲ್ಲನೆ ಬೆವರಿ ಒದ್ದೆಯಾಯಿತು. ಭಯ ಭೀತಿಯಿಂದ ಮೈ ಗಡ ಗಡ ನಡುಗಹತ್ತಿತು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತ್ತಿದೆ....ಏನು ಗತಿ ? ಏನು ಮಾಡಿ ಬಿಟ್ಟೆ ? ಇದೇನು ಪ್ರಾರಬ್ಧಕರ್ಮವೇ ? ಅಥವಾ ಶನಿ ಕಾಟವೇ ? ನಾನು ನಿಜವಾಗಿಯೂ ಚೀರಿರಲೇಬೇಕು. ಇಲ್ಲದಿದ್ದಲ್ಲಿ ಚಂದ್ರ ಕಾಂತರಿಗೆ ತಿಳಿಯುವುದಾದರೂ ಹೇಗೆ ? ಇದೇಕೆ ಹೀಗಾಗುತ್ತಿದೆ ? ಇದೆಂತಹ ಗ್ರಹಚಾರ !

ಚಂದ್ರಕಾಂತ್ ಅಲ್ಲಿಗೂ ಸುಮ್ಮನಾಗಲಿಲ್ಲ. ಒದ್ದು ಬಸುಗುಡುತ್ತಾ ಹೊರ ಹೋದ. ರೋಮರೋಮಗಳಲ್ಲೂ ಕೋಪದ ಕಿಡಿ ಹೊಮ್ಮುತಿತ್ತು.

ಎಂಥಾ ಹಾಳು ಕನಸು ! ನಾನೇಕೆ ಹಾಗೆ ಚೀರಿದೆ ? ಹೀಗಾದರೆ ಚಂದ್ರಕಾಂತರಿಗೆ ಅನುಮಾನ ಕೆರಳುವುದೂ ಸಹ ಸಹಜ. ಭಗವಂತ ! ನನ ಗೇಕೆ ಇಷ್ಟು ತೊಂದರೆ ಕೊಡುತಿದ್ದಿ ? ಎಂದು ಮುಂತಾಗಿ ಹಲುಬಿದಳು ಸಾಧ್ವಿ. ಅವನೆಲ್ಲಿಗೆ ಹೋದನೆಂಬುದನ್ನರಿಯಲು ಎದೆ ಹಾ ತೊರೆಯುತಿತ್ತು. ಎದ್ದು ಹೊರ ಹೋಗಿ ನೋಡಿದರೆ ವರಾಂಡದಲ್ಲಿ ಉದ್ದನೆಯ ಸೋಫಾದ ಮೇಲೆ ಅಡ್ಡಾಗಿದ್ದ.

" ಮಾತು ಮಾತಿಗೂ ಇಷ್ಟೊಂದು ಸಿಟ್ಟಾದರೆ ಹೇಗೆ ?.... ಇಲ್ಲಿದ್ದರೆ ಸೊಳ್ಳೆಗಳು ಹೀರಿಬಿಟ್ಟಾವು ! ಒಳಗೆ ಬನ್ನಿ " ದನಿ ವಿಜಾತೀಯವಾಗಿತ್ತು. ಬೆವರನ್ನು ತೀಡಿಕೊಳ್ಳುತ್ತಲೇ ನುಡಿದಳು ಕಮಲೇಶ್.

" ನೀನು ಹೀರಿದುದಕ್ಕಿಂತ ಅವೇನೂ ಹೆಚ್ಚು ಹೀರಲಾರವು."

" ಎಲ್ಲಕ್ಕೂ ಅಪಾರ್ಥ ಮಾಡುವುದು ಸರಿಯಲ್ಲ."

" ನಿನ್ನ ಹಿತವಾದ ಬೇಕಿಲ್ಲ."

" ಕೇವಲ ಒಂದು ಕನಸಿಗಾಗಿ ಇಷ್ಟೊಂದು ರಾದ್ಧಾಂತ....ಡಾಕ್ಟರಾದ ವರಿಗೆ ಸ್ವಲ್ಪವೂ ವಿವೇಚನಾಶಕ್ತಿ ಬೇಡವೆ ?"

" ವಿವೇಚನಾ ಶಕ್ತಿ ! ದೊಡ್ಡ ಮಾತಾಡುವವರೇ ಸಣ್ಣ ಕೆಲಸ ಮಾ ಡುವುದು ! ಶುದ್ಧ ಪಶು ! ಕಪಟ....ಮೋಸ !"

" ಏನಾದರೂ ಅನ್ನಿ...."

" ಚಾಂಡಾಲಿ !....ಆಶಾಡ ಭೂತಿ !"

"........"

" ಮೊದಲಿಷ್ಟು ಒಳಗಡೆ ಬಂದು ಮಲಗಿಕೊಳ್ಳಿ ; ಅನಂತರ ಎಷ್ಟಾದರೂ ಅನ್ನಿ."

" ನೋ !"

ಇನ್ನು ಮಾತಾಡಿದರೆ ಮನೆಯವರಿಗೆ ಎಚ್ಚರವಾದೀತೆಂದು ಹೆದರಿ ಒಳ ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡಳು. ಮೈಯ್ಯಲ್ಲಿ ಸಣ್ಣ ಚಳಿ ಮೂಡಿ ಹೊದ್ದಿಕೆಯ ಅವಶ್ಯಕತೆ ಮೂಡಿದುದರಿಂದ ಎದ್ದು ಕಾಲದೆಶೆಯಲ್ಲಿದ್ದ ಹೊದ್ದಿಕೆಯನ್ನು ಮೈ ತುಂಬ ಹೊದ್ದುಕೊಂಡು ಎರಡೂ ಕೈಗಳನ್ನು ಜೋಡಿಸಿ ಭಗವಂತನಿಗೆ ಪ್ರಾರ್ಥನೆ ಸಲ್ಲಿಸಿದಳು.

ಹೊತ್ತು ಮೆಲ್ಲನುರುಳಿತು.

ಲಕ್ಷೋಪಲಕ್ಷ ಸೊಳ್ಳೆಗಳು ಒಕ್ಕೊರಲಿನಿಂದ ಹಾಡುತ್ತಿವೆ. ಅವುಗಳಿಂದ ಹೊಮ್ಮುವ ಚೀಂಕಾರ ಕಿವಿಯಮೇಲೆ ಅಖಂಡವಾಗಿ ಬೀಳುವಾಗ ಹೊರಗಡೆ ಚಂದ್ರಕಾಂತ್ ಹೇಗಿದ್ದಾರೋ ಮತ್ತೆ ಹೋಗಿ ಕರೆಯಲೇ ಎನಿಸಿ ಎದ್ದು ಕೂರುವುದಕ್ಕೂ ಚಂದ್ರಕಾಂತ್ ಸೊಳ್ಳೆಗಳ ಕಾಟವನ್ನು ತಡೆಯಲಾರದೆ ಒಳ ಬರುವುದಕ್ಕೂ ಮೇಳ ಬಿದ್ದಿತು. ' ಸಾಕಪ್ಪಾ ' ಎಂದುಕೊಂಡಳು ಕಮಲೇಶ್. ಮನಃಕ್ಷೋಭೆಯಿಂದ ಹೃದಯ ದೀರ್ಣವಿದೀರ್ಣವಾಗಿತ್ತು.

ಮಹದ್ ಭವಿಷ್ಯದ ಸಂಕಲ್ಪ ನುಚ್ಚುನೂರಾಯಿತು.

ಇಂದಿನ ಕಷ್ಟ ನಿಷ್ಠೂರಗಳನ್ನು ಬದಿಗೊತ್ತಿ ಹಳೆಯ ದಿನಗಳನ್ನು ಮೆಲುಕು ಹಾಕಿತು ಮನಸ್ಸು. ಶಾಲಾ ಕಾಲೇಜಿನ ದಿನಗಳು ಚಿತ್ತಭಿತ್ತಿಯಲ್ಲಿ ಸಾಗಿ ಹೋದುವು. ಹಕ್ಕಿಯಂತೆ ಹಾರಿ, ಕೋಗಿಲೆಯಂತೆ ಹಾಡಿ, ಗಿಣಿಯಂತೆ ನಲಿದು, ಪಾರಿವಾಳದಂತೆ ಕುಣಿದು ಕುಪ್ಪಳಿಸಿ ಮುದ್ದಾಗಿ ಬೆಳೆದ ಸುಮಧುರ ದಿನಗಳ ಸವಿ ನೆನಪು ಕಣ್ಣುಗಳಲ್ಲಿ ಕಂಬನಿಯನ್ನು ತರಿಸಿತು.

ಇಲ್ಲೇಕೆ ಹೆಜ್ಜೆ ಹೆಜ್ಜೆಗೂ ನಂಜು ಒಸರುತ್ತದೆ ?

ಹೊತ್ತು ಉರುಳಿದರೂ ನಿದ್ದೆಯ ಸುಳಿವಿಲ್ಲ. ಹಳೆಯ ದಿನಗಳನ್ನು ಮತ್ತೆ ಮತ್ತೆ ಮೆಲಕು ಹಾಕಿತು ಮನಸ್ಸು. ಸಂದು ಹೋದ ಕಾಲವಾದರೂ ಅದರ ಪುನಃಸ್ಮರಣೆಯಿಂದ ಮನಸ್ಸಿಗೆ ಎಷ್ಟೋ ಹಿತ. ಎಷ್ಟೋ ಸಮಾಧಾನ.

ಇರುಳು ಉರುಳಿ ಬೆಳಕು ಹರಿದಾಗ ಮನಸ್ಸು ತುಸು ಹಗುರವಾಗಿದ್ದರೂ ಹೃದಯ ಬನದಲ್ಲಿ ಕಿಚ್ಚು ಉರಿಯುತಿತ್ತು.

ಸುಪ್ರಭಾತವನ್ನು ಹಾಡುತ್ತಾ ತಾಲಚಂಚು ಪಕ್ಷಿಗಳಿಂಡು ಅಲ್ಲಲ್ಲಿ ಹಾರಾಡುತ್ತಿವೆ.

ಚಿತ್ರಸೇನ ತನಗೆ ಪುತ್ರೋತ್ಸವವಾದ ಸಂದರ್ಭದಲ್ಲಿ ನಾಮಕರಣದ ಅಂಗವಾಗಿ ಇಂದು ಭಾರಿ ಔತಣ ಕೂಟ ಏರ್ಪಡಿಸಿದ್ದಾನೆ....ಹೋಗುವುದೋ ಬೇಡವೋ....ಹತ್ತು ದಿನಗಳು ತುಂಬಿದ ಆ ಸುಂದರ ಮಗುವನ್ನು ನೆನಪಿಸಿ ಕೊಳ್ಳುತ್ತಾ ಯೋಚಿಸಿದಳು ಕಮಲೇಶ್.

ಆದರೆ....

ಹೆಜ್ಜೆ ಹೆಜ್ಜೆಯೂ ‘ ಆದರೆ ’ ಮಯ. ಜೀವನ ಎಂದೂ ಯಾವಾಗಲೂ ಯಾರಿಗೂ ಬಯಸಿದ್ದನ್ನೇ ಪ್ರಸಾದಿಸುವುದಿಲ್ಲ.

ಅಧ್ಯಾಯ

೩೬

....ಚಿದಾಕಾಶದಲ್ಲಿ ಮೇಘಗಳ ಸಾಲೆ ತುಂಬಿ ಹರಡಿತ್ತು.

ಈಗೀಗ ಏನೋ ಒಂದು ಬಗೆಯ ವಿರಕ್ತಿ. ಏನೋ ಒಂದು ಬಗೆಯ ಅನಾಸಕ್ತಿ. ಕೆಲವು ದಿನ ಅಥವಾ ಕೆಲವು ತಿಂಗಳು ಅಥವಾ ಕೆಲವು ವರ್ಷಗಳು ಅಥವಾ ಬಾಳಿನಂತ್ಯದವರೆವಿಗೂ ಈ ಮಾನವ ಸಂಪರ್ಕದಿಂದ ದೂರವಾಗಿ ಸಂನ್ಯಾಸಯೋಗವನ್ನು ಕೈ ಕೊಂಡರೆ....? ಛೇ ! ಅದು ಸರಿಯಲ್ಲ. ನೂರಾರು-ಸಾವಿರಾರು ದೀನದಲಿತ ಹೆಂಗಳೆಯರಿಗೆ ಒದಗುವ ಸೇವೆಯನ್ನು ನಿಲ್ಲಿಸುವುದು ಧರ್ಮವಲ್ಲ. ಆದರೂ ಈ ಮನುಕುಲದ ಗುಂಪನ್ನು ಕಾಯುವುದರಲ್ಲಿ ಅವರ ಆಗತ್ಯಗಳನ್ನು ಪೂರೈಸುವುದರಲ್ಲಿ ಅವರ ರೋಗಾದಿಬಾಧೆಗಳನ್ನು ನೀಗಿಸುವುದರಲ್ಲಿ ವ್ಯರ್ಥ ಕಾಲಹರಣವಾಯಿತೆ ? ಈ ಮಾನವ ಸೇವೆಗೆ ನನ್ನ ಮರಣಾನಂತರ ಸ್ಮಾರಕವೇನಾದರೂ ಇದೆಯೇ ? ಅಥವಾ ಭಾರತ ಇತಿಹಾಸದಲ್ಲಿ ಒಂದು ಅಕ್ಷರ–ಒಂದೇ ಒಂದು ಅಕ್ಷರ ನನ್ನಿಂದ ತುಂಬಲ್ಪಡುವುದೇ ?

ಇದುವರೆಗಿನ ಕಾಲಮಾನವನ್ನು ಯಾವ ಅಳತೆಗೋಲಿನಿಂದ ಅಳೆದರೂ ಕೊನೆಯ ಪಕ್ಷ ಕಿಂಚಿತ್ ಮನಶ್ಶಾಂತಿಯನ್ನು ಪಡೆಯಲಾಗಲಿಲ್ಲ. ಅಥವಾ ವೃದ್ಧ ಜನನಿಯ ಮನಸ್ಸಿಗಿಷ್ಟು ಸಂತಸವನ್ನೂ ಡಿಸಲಾಗಲಿಲ್ಲ. ಕೈಲವಾರಿ ಜ್ಯೋತಿರ್ವಿಹೀನವಾದ ಹಣತೆಯ ಕುಡಿಯಂತಿದೆ ಈ ಸಂಪ್ರದಾಯ ಬದ್ಧ ಜೀವನಯಾತ್ರೆ. ಸಂಪ್ರದಾಯ, ಸಭ್ಯತೆ, ಯೋಗ್ಯತೆ, ಘನತೆಗಳ ತಳಹದಿಯ ಮೇಲೆ ಕಟ್ಟಿದ ಜೀವನ ಜಹಜಿನ ದೂರಗಮ್ಯಸ್ಥಾನ ಯಾವ ದಿಕ್ಕಿನಲ್ಲಿದೆಯೋ. ಇನ್ನೆಷ್ಟು ದೂರ ಈ ಅದ್ಭುತ ಅಲೆಗಳ ಪ್ರಚಂಡವೇಗಕ್ಕೆ ಸಿಕ್ಕಿ ತೊಳಲಿ ಬಳಲಿ ಪಯಣಿಸಬೇಕೋ, ಅದೇ ಅರ್ಥವಾಗುತ್ತಿಲ್ಲ.

ಅದ್ಭುತ ಪ್ರಕೃತಿ ವೈಚಿತ್ರ್ಯಕ್ಕಿರುವಂತೆಯೇ ಈ ಬಾಳಿಗೂ ಸಹ ಒಂದು ಪ್ರತ್ಯೇಕ ಭೀಕರ ಸ್ವರೂಪವಿದ್ದು ಅದು ಅಜ್ಞಾತದಲ್ಲಿದೆ. ತನಗೆ ಹಣೆಮಣಿಯುವವರಿಗಿಂತಲೂ ತೋಳು ಮಡಿಸುವವರಿಗೆ ತನ್ನ ವಿರಾಟ್

ದರ್ಶನ ನೀಡುವುದು ಅದರ ವೈಶಿಷ್ಟ್ಯ.

ಅದೇ ಯೋಚನೆಯ ಕರಾವಳಿಯಲ್ಲಿ ಸಾಗುತಿತ್ತು ಹಾದಿ.

ದುರ್ದಮನೀಯವಾದ ಹಲವು ಚಿಂತೆಗಳು ಮನವನ್ನು ಹಿಂಡುತ್ತಿವೆ.

ದೀರ್ಘ ನಿಶ್ವಾಸ ಬಿಡುತ್ತಾ ವಾರ್ಡುಗಳ ಭೇಟಿಯನ್ನಾರಂಭಿಸಿದಳು ಕಮಲೇಶ್. ಹೊನ್ನವರ್ಣದ ಬಿಸಿಲ್ಕೋಲುಗಳು ಕಿಂಡಿಗಳಿಂದ ತೂರಿ ಮೈಗೆ ತಾಗುತ್ತಿವೆ. ಬೆಳಗಿನ ಶುಭ್ರವಾದ ವಾತಾವರಣ ಪಲ್ಲವಿತ ಸುಮ ಸಮುಚ್ಚಯಗಳಿಂದ ಸೌಗಂಧ ಪೂರಿತವಾಗಿದೆ. ದೃಷ್ಟಿಯ ನೇರಕ್ಕೆ ಹೆಜ್ಜೆ ಹಾಕುತ್ತಾ ಯೋಚಿಸಿದಳು ಅವಳು....ಹಣದ ಪೂರೈಕೆ ಸಾಕಷ್ಟಿದ್ದಿದ್ದರೆ ಈ ಕೆಲಸವನ್ನು ಬಿಟ್ಟುಕೊಟ್ಟು ತಾನೇ ಸ್ವಂತವಾಗಿ 'ನರ್ಸಿಂಗ್ ಹೋಂ' ತೆರೆಯಬಹುದಾಗಿತ್ತು. ಇಲ್ಲಿಗೂ ಮನೆಗೂ ಅಲೆಯುವ ವೇಳೆಯನ್ನಾದರೂ ಉಳಿಸಿಕೊಂಡರೆ ಎಷ್ಟೋ ಕ್ಷೇಮ. ಅದರಿಂದ ಮಾ-ಗೂ ಸಮಾಧಾನ.

ಆದರೆ....

ವಾರ್ಡುಗಳ ಭೇಟಿ ಮುಗಿಸಿ ಆಫೀಸಿಗೆ ಕಾಲಿಡುವುದಕ್ಕೂ ಮೇಜಿನ ಮೇಲಿನ ಟೆಲಿಫೋನು ಟ್ರಿಣ್ ಟ್ರಿಣ್ ಸದ್ದು ಮಾಡಿ ಕರೆ ನೀಡುವುದಕ್ಕೂ ಸರಿಹೋಯಿತು. ಕಮಲೇಶ್ ರಿಸೀವರನ್ನು ಕೈಗೆತ್ತಿಕೊಂಡಳು.

ಆ ಕಡೆಯಿಂದ ಡಾ|| ಶುದ್ಧೋಧನರ ದನಿ "ಡಾಕ್ಟರ್....!"

"ಪ್ರಣಾಮ್ ಸರ್ !"

"ಈಗ ಎಕ್ಟೋಪಿಕ್ ಜಸ್ಟೇಶನ್ (ECTOPIC GESTATION) ಕೇಸಿನ ಆಪರೇಷನ್ ಇದೆ. ತರುಣಿ ನಮ್ಮ ಕಡೆಯವಳು. ನೀವು ಬಿಡುವಾಗಿದ್ದೀರಾ ?"

"ಬೇಕೆಂದರೆ ಬಿಡುವು ಮಾಡಿಕೊಳ್ಳುವೆ."

"ದಯುವಿಟ್ಟು ಮಾಡಿಕೊಳ್ಳಿ ಡಾಕ್ಟರ್."

"ಆಗಲಿ ಸರ್."

"ಪ್ಲೀಸ್, ಈಗಲೇ ಬಂದು ಬಿಡಿ."

"ಓ....ಅಗತ್ಯವಾಗಿ."

ಕಮಲೇಶ್ ಆಪರೇಶನ್ ಥಿಯೇಟರಿಗೆ ಹೆಜ್ಜೆಯಿಟ್ಟಾಗ ಡಾ|| ಶುದ್ಧೋಧನ ಮೇಜಿನ ಬಳಿ ತಯಾರಿದ್ದರು. ಅವರ ಮುಖದಮೇಲೆ ಮೂಡಿದ ಮುಗು

ಳ್ಳಗೆ ಸ್ವಾಗತ ಬಯಸಿತು. ಚಂದ್ರಕಾಂತ ಆಗಲೇ ಕಾರ್ಯತತ್ಪರನಾಗಿದ್ದ. ಮೇಜಿನ ಮೇಲೆ ಉಬ್ಬಿದ ಹೊಟ್ಟೆಯ ಹೆಣ್ಣು ಮಲಗಿತ್ತು. ಗರ್ಭಕೋಶದಲ್ಲಿ ಬೆಳೆಯಬೇಕಾದ ಮಗು ಹೊರಗಡೆ ಬೆಳೆದುದರಿಂದ ಆಪರೇಶನ್ ಮಾಡಿ ತೆಗೆದಲ್ಲದೆ ಹೊರಬರುವಂತಿರಲಿಲ್ಲ. ಅಪರೂಪದ ಆಪರೇಶನ್ ಆದುದರಿಂದ ಕಲಿಕೆಯ ಡಾಕ್ಟರುಗಳು ಸುತ್ತುವರಿದು ನೆರೆದರು. ಡಾ|| ಶುದ್ಧೋಧನರ ಸಮಕ್ಷಮದಲ್ಲಿ ಆಪರೇಶನ್ನಿಗೆ ಕೈಹಚ್ಚಿದಳು ಕಮಲೇಶ್. ಚರ್ಮವನ್ನು ಕತ್ತರಿಸಿ, ಮಾಂಸದ ಪದರನ್ನು ಒಂದೊಂದಾಗಿ ಸೀಳಿ, ನೆತ್ತರು ಸ್ರವಿಸುವ ನಾಳಗಳನ್ನು ಹಿಡಿದು ಕಟ್ಟಿ, ಚೆಲ್ಲಿ ಸೂಸಿದ ನೆತ್ತರನ್ನು ಅರಳೆಯಿಂದ ಒತ್ತಿ ತೆಗೆದು ಸ್ವಚ್ಛಗೊಳಿಸಿ ಆಪರೇಶನ್ ಮುಂದುವರಿಸಿದಳು.

ಎಕ್ಟೋಪಿಕ್ ಜಸ್ಟೇಶನ್ ಆಪರೇಶನ್ ಸಾವಧಾನದಿಂದ ನಡೆಯಿತು. ಆ ಕ್ಲಿಷ್ಟಕರವಾದ ಸಮಸ್ಯೆಯನ್ನು ಸೂಕ್ಷ್ಮವಾಗಿ ಬಿಡಿಸಿ ತಾಯಿ ಮಕ್ಕಳಿಗೆ ಜೀವದಾನ ಮಾಡಿ ಗ್ಲೌಸ್‌ಗಳನ್ನು ಕಳಚಿ ಹಾಕಿ ಕೈ ತೊಳೆದುಕೊಂಡು ಇತ್ತ ಬರುತ್ತಲೂ ಡಾ|| ಶುದ್ಧೋಧನ ನಗುಮುಖದಿಂದ ಅಭಿನಂದಿಸುತ್ತಾ ಬೆನ್ನಿನ ಮೇಲೆ ಕೈಯಿಟ್ಟು ಪ್ರೀತಿಪೂರ್ವಕವಾಗಿ ನುಡಿದರು " ತುಂಬ ಥ್ಯಾಂಕ್ ಡಾಕ್ಟರ್ !"

ಹಿಂದಿನಿಂದ ತೀಕ್ಷ್ಣ ನಯನದ್ವಯಗಳೆರಡು ಇತ್ತಲೇ ನಿರುಕಿಸಿದುದನ್ನು ಬಹುಶಃ ಅವರು ಗಮನಿಸಲಿಲ್ಲವೇನೋ. ಅಭಿಮಾನ ಸಂತಸಗಳ ಗಣಿಯಾಗಿ ಅವರು ಮಾತುಕತೆಯನ್ನು ಮುಂದುವರಿಸಿದ್ದರು,

" ಈ ವಿಶಾಲ ಪ್ರಪಂಚದಲ್ಲಿ ಒಬ್ಬರ ಕ್ಷೇಮವನ್ನು ಇನ್ನೊಬ್ಬರು ನೋಡಿಕೊಳ್ಳುವುದೇದರೆ ಡಾಕ್ಟರಾಗುವುದು ವಿನಾ ಮತ್ತಾವ ಕ್ಷೇತ್ರದಲ್ಲೂ ಸಾಧ್ಯವಿಲ್ಲ ಡಾಕ್ಟರ್. ದಂಪತಿಗಳಿಬ್ಬರೂ ಆರೋಗ್ಯ ಕ್ಷೇತ್ರದಲ್ಲಿ ದುಡಿಯುತ್ತಿದ್ದೀರಿ. ಇದರ ಪುಣ್ಯಫಲ ಇನ್ನು ಹಲವು ಜನ್ಮಗಳಿಗೂ ಇರುವಂತಾದ್ದು. " ಕೂಡ. ಡಾ|| ಶುದ್ಧೋಧನರ ದನಿ ನಲ್ಮೆಯಿಂದ ಹೊರಬಿತ್ತು.

ಕೆಲವು ಕ್ಷಣ ಏನು ಹೇಳಬೇಕೋ ಹೊಳೆಯಲಿಲ್ಲ. ಅವರ ಮಾತಿನ ವಾಸ್ತವಾಂಶ ಬೆಳಕನ್ನು ಚೆಲ್ಲುವಂತಿದ್ದುದರಿಂದ ಚಂದ್ರಕಾಂತನ ಪ್ರತಿಕ್ರಿಯೆ ಏನೆಂಬುದನ್ನರಿಯಲು ನೋಟ ಅವನೆಡೆಗೆ ಚಿಮ್ಮಿತು. ಆ ಕುತೂಹಲ ತೃಷಿತ ನೇತ್ರಗಳಲ್ಲಿ ಜ್ವಲಿಸುವ ಭಾವಜ್ವಾಲೆಯ ತೀಕ್ಷ್ಣತೆಯನ್ನು ಕಂಡು ಕರ್ಮ

ಯೋಗಿನಿ ನಸು ಬೆಚ್ಚಿದಳು. ಆತನ ವಿಭಿನ್ನ ದೃಷ್ಟಿ ಹಣತೆಯ ಕುಡಿಯನ್ನು ಪ್ರಜ್ವಲಿತಗೊಳಿಸುವುದರಲ್ಲಿ ಉಜ್ಜ್ವಗಿಸಿ ಆತ್ಮಪ್ರದೀಪವನ್ನು ನಿರ್ಲಕ್ಷ್ಯದಿಂದ ವಿನಾಶಗೊಳಿಸುತ್ತಿರುವುದನ್ನು ನೋಡಲಾಗದೆ ನೋಟವು ಬೇರೆಡೆಗೆ ಜಗಿಯಿತು.

ಎದೆಯ ಹಕ್ಕಿ ಮೆಲ್ಲನೆ ಉಲಿಯಿತು...ಸೇವಾ ಭಾವನೆ ತಮ್ಮಲ್ಲಿರುವಾಗ. ಹೆರವರ ಕಾಕುನುಡಿಗಳಿಗಾಗಲೀ ಕಾಕದೃಷ್ಟಿಗಾಗಲೀ ಏಕೆ ಪ್ರಾಧಾನ್ಯತೆ ಕೊಡಬೇಕು?

ಆತನ ಅಭಿಪ್ರಾಯಕ್ಕಾಗಿ ಸಮಯ ಕಳೆಯುವಷ್ಟು ಸಮಯವಿರಲಿಲ್ಲವಾದುದರಿಂದ ಕಮಲೇಶ್ ಬಾಯಿ ಬಿಟ್ಟಳು. "ಈ ಜಗತ್ತು ಮಾಯೆಯಿಂದ ತುಂಬಿ ಹೋಗಿದೆ. ನಮ್ಮ ಕೈಯಲ್ಲಿ ಏನೂ ಇಲ್ಲ ಸರ್." ಕಾರ್ಗಪ್ಪು ತಳೆದ ಕಾದಂಬಿನಿಯಂತೆ ಹೃದಯ ಭಾರವಾಗಿತ್ತು.

ಡಾ|| ಶುದ್ಧೋಧನ 'ಹೌದು' ಎಂಬಂತೆ ತಲೆದೂಗಿದರು.

ಡಾ|| ಚಂದ್ರಕಾಂತ್ ತನ್ನ ಅಭಿಪ್ರಾಯವನ್ನು ಮುಂದಿಟ್ಟ– "ಸೇವೆ ...ಸೇವೆ ಮಾಡುವುದೇ ಗುರಿಯಾದರೆ ಇಷ್ಟು ದೂರ ಬರಬೇಕೆ ಸರ್? ಯಾವುದು ಸೇವೆ ಅಲ್ಲ? ಸತೀತ್ವ ಮಾತೃತ್ವವೂ ಸಹ ಅಮೋಘವಾದ ಸೇವೆ ಅಲ್ಲವೇ? ಆ ಸ್ವರ್ಣ ಚಿತ್ರಕಲ್ಪನೆಯನ್ನು ಗಮನಿಸಿರಿ."

"ಅದೂ ನಿಜ ..." ಎಂದರು ಡಾ|| ಶುದ್ಧೋಧನ.

ದಮನಿಗಳಲ್ಲಿ ಹರಿದಾಡುವ ರಕ್ತದ ಒತ್ತಡವನ್ನು ತಡೆಯಲಾರದೆ ನರಗಳು ಸೀಳಿ ಹೋಗುವಂತಾದುವು ಕಮಲೇಶಳಿಗೆ. ಸುಮ್ಮನೆ ತಲೆಬಾಗಿ ಅವಳು ಅಲ್ಲಿಂದ ಹೊರಟಾಗ ತಲೆಯ ಸುತ್ತಮುತ್ತ ನೂರು ವಿಚಾರಗಳ ಸರಣಿಯಿತ್ತು. ಮೆಟ್ಟಿಲಿಳಿದು ಹೂದೋಟದ ಸುಂದರ ಹಾದಿಗೆ ಹೆಜ್ಜೆಯಿಟ್ಟೊಡನೆ ಅರಳಿದ ಹೂಗಳ ನೆಲೆ ವ್ಯಥಿತ ಮನಸ್ಸನ್ನು ಅರಳಿಸಿತು. ಮರದಡಿಯ ತಂಪಿನ ನೆಲೆಯಲ್ಲಿ ಕುಳಿತು ಪುಸ್ತಕಾವಲೋಕನದಲ್ಲಿ ಮೈ ಮರೆತಿದ್ದ ಕೃಷ್ಣಭಾನು ಮಹಾಶಯ ತಲೆಯೆತ್ತಿ ನೋಡಿ ಮುಗುಳು ನಕ್ಕರು. ಕಮಲೇಶ್ ಅವರ ಬಳಿಸಾರಿ ಯೋಗಕ್ಷೇಮವನ್ನು ವಿಚಾರಿಸಿಕೊಂಡಳು.

"ನಾನೀಗ ನಿರೋಗಿ! ಎಲ್ಲರೂ ಹೋದ ಮೇಲೆ ನನ್ನ ಬದುಕು

ನಿರಾಳ !"

ಭಾವಪೂರ್ಣವಾದ ಕಣ್ಣುಗಳಲ್ಲಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು.

" ದೈವ ಚಿತ್ತ...." ಪ್ರಯತ್ನಿಸಿದರೂ ಮುಂದೆ ಮಾತು ಹೊರಡಲಿಲ್ಲ.

ಕೃಷ್ಣಭಾನು ಭಾವಪರವಶರಾಗಿ ಆಕೆಯ ಪ್ರತಿಕ್ರಿಯೆಯನ್ನು ಸಂಕಟಭರಿತ ಹೃದಯದಿಂದ ಒಪ್ಪಿಕೊಂಡರೇನೋ. ಏನೂ ಹೇಳದೆ ಸುಮ್ಮನಾದರು. ಕಮಲೇಶ್ ಹತ್ತು ಹೆಜ್ಜೆ ಮುಂದುವರಿಯುವಷ್ಟರಲ್ಲಿ ಕಾವೇರಿ ತನ್ನ ಮಗ ಧಿಲಾರಾಮನೊಡನೆ ಎದುರಾದಳು. ಬಲರಾಮನ ಪ್ರತೀಕವೋ ಎಂಬಂತಿದ್ದ ಬಾಲಕ ಗಮನವನ್ನು ಆಕ್ಷಣ ಸೆಳೆದುಕೊಂಡ. ನಗುಮುಖದಿಂದ ಈಕ್ಷಿಸುತ್ತಾ " ಈಗ ಹೇಗಿದ್ದಾನೆ ? ಕೆಮ್ಮಲು ಕಡಿಮೆಯಾಯಿತೇ ?"

" ಈಗ ಏನೂ ಇಲ್ಲ. ಸುಖವಾಗಿ ಶಾಲೆಗೆ ಹೋಗುತಿದ್ದಾನೆ." ಕಾವೇರಿ ಉತ್ತರಿಸಿದಳು.

" ಪರವಾಯಿಲ್ಲ. ಚೆನ್ನಾಗಿ ಓದು ಮಗೂ. "

" ಹ್ಞೂ " ಎಂಬಂತೆ ಹುಡುಗ ತಲೆಯಾಡಿಸಿದ.

ಬಹುಶಃ ಸುಧಾರಾಣಿ ಈ ಬಾಲಕನನ್ನು ನೋಡಿಯೇ ಇಲ್ಲವೇನೋ ಎಂದು ಕೊಳ್ಳುತ್ತಾ ತನ್ನ ಹಾದಿ ಹಿಡಿದಳು ಕಮಲೇಶ್.

ಸುಚಿತ್ರಸೇನನ ಮದುವೆ ಅದ್ದೂರಿಯಿಂದ ನಡೆದು ಹೇಮರತಿ ಕರ್ವೆ ಸ್ವರ್ಣಮಾಲಿನಿಯೊಡನೆ ಆನಂದದ ಸವಿಯನ್ನು ಹೃತ್ಪೂರ್ವಕವಾಗಿ ಒಮ್ಮನದಿಂದ ಹಂಚಿಕೊಂಡಳು. ಸುಚಿತ್ರಸೇನ ಸತಿಯೊಡನೆ ಪಾಶ್ಚಾತ್ಯ ಭೂಮಿಗೆ ಮರಳುವಂದು ತಲೆಬಾಗಿ ಅಭಿವಾದಿಸಿ ಸ್ವರ್ಣಮಾಲಿನಿಯ ಆಶೀರ್ವಾದ ಪಡೆದು, ಕಮಲೇಶಳ ಶುಭಾಶಯಗಳನ್ನು ಹೊತ್ತು, ಸ್ವರೂಪರಾಣಿಯನ್ನು ಕೀಟಲೆಗೈದು ಅವಳಿಂದ ಬಾಲಘಾತವನ್ನು ತಿಂದು, ಹಾಸ್ಯದ ಹೊನಲನ್ನು ಹರಿಸಿ, ನಗುವಿನ ಸವಿಯನ್ನುಣ್ಣಿಸಿ ಹೊರಬಿದ್ದಿದ್ದ. ಆತನ ಸರಳತೆ ಸ್ನೇಹಭಾವ ನಿರ್ಮಲಮನಸ್ಸು ಎಂತಹವರನ್ನೂ ಮುಗ್ಧಗೊಳಿಸುವಂತಿತ್ತು.

ಅಂದು ಮಧ್ಯಾಹ್ನ ರಜೆ ಪಡೆದುಕೊಂಡಿದ್ದ ಕಮಲೇಶ್ ಆಸ್ಪತ್ರೆಗೂ ಹೋಗದೆ ಚಂದ್ರಕಾಂತನಲ್ಲಿಗೂ ಹೋಗದೆ ಮನೆಯಲ್ಲುಳಿದಳು. ರೋಗಿಗಳು ಮನೆಯಲ್ಲಿ ಕಲೆತುದರಿಂದ ಮನೆಮಂದಿಯೊಡನೆ ಕಲೆತು ಮಾತಾಡಲೂ

ಸಹ ಬಿಡುವಾಗಲಿಲ್ಲ. ಅವರಿಂದ ಬಿಡುಗಡೆ ಹೊಂದಿ ಒಳ ಬಂದಾಗ ಮಕ್ಕಳು ಸರಸ್ವತಿಯಾರಾಧನೆಯಲ್ಲೂ, ಸ್ವರ್ಣಮಾಲಿನಿ ಮಗಳ ನಿರೀಕ್ಷಣೆಯಲ್ಲೂ ತಲ್ಲೀನರಾಗಿದ್ದರು. "ದಿನಕ್ಕೆ ಒಂದೆರಡು ಗಂಟೆಯಾದರೂ ಮಕ್ಕಳೊಂದಿಗೆ ಆರಾಮವಾಗಿದ್ದರೆ ಹತ್ತು ವರ್ಷ ಆಯುಷ್ಯ ವೃದ್ಧಿಯಾಗುತ್ತಿತ್ತು, ಕಮಲೇಶ್" ಎಂದು ಅನೇಕ ಬಾರಿ ವ್ಯಾಖ್ಯೆ ಮಾಡಿದಂತೆ ಅಂದೂ ಸಹ ನುಡಿದಾಗ ದಯಾರ್ದ್ರ ಹೃದಯ ದ್ರವಿತ ಮೇಘವಂತಾಯಿತು.

"ನಮ್ಮ ಭಾಗಕ್ಕೆ ಇಷ್ಟೆ ಲಭ್ಯ ಮಾ."

ಮಗಳ ನುಡಿ ಕೇಳಿ ಒಮ್ಮೆ 'ಹೌದು' ಎನ್ನಿಸಿದರೂ ಇನ್ನೊಮ್ಮೆ 'ಅನ್ಯಥಾ ಶ್ರಮ' ಎನ್ನಿಸಿ ನಿಟ್ಟುಸಿರು ಬಿಡುವಳು. ಅದಕ್ಕೂ ಕಮಲೇಶಳ ನಿರಾಯಾಸ ಉತ್ತರ ಹೊರ ಬೀಳುವುದು "ಕೈ ಕಾಲು ಗಟ್ಟಿಯಾಗಿರುವಷ್ಟು ಕಾಲ ದುಡಿಯೋಣ. ಅನಂತರ ಭಗವಂತನಿಗೆ ಬಿಟ್ಟರಾಯಿತು."

ಹಲ್ಲಿ ನುಡಿಯಿತು ಲೊಚ. ಲೊಚ. ಲೊಚ. ಲೊಚ.

ದಿನವೂ ಊಟವಾದನಂತರ ಒಂದು ಘಂಟೆ ಪುಸ್ತಕ ಪಠಣ ಕೈಕೊಂಡು ವಿನೂತನ ದೈಹಿಕ ವಿಜ್ಞಾನವನ್ನು ಅಭ್ಯಸಿಸುತ್ತಿದ್ದ ಕಮಲೇಶಳಿಗೆ ಇಂದು ಏನೂ ಬೇಡವಾಗಿ ಹಾಸಿಗೆಯನ್ನು ಸೇರಿದಳು. ಯಾವುದೋ ಕಳವಳ ಮನದಲ್ಲಿ ಮನೆ ಮಾಡಿದಷ್ಟು ಕಸಿವಿಸಿ. ಎಷ್ಟು ಪ್ರಯತ್ನಿಸಿದರೂ ನಿದ್ದೆ ಬಾರದೆ ಅತ್ತಿತ್ತ ಹೊರಳಾಡಿ ಬೇಸರ ಹತ್ತಿದನಂತರ ನಿದ್ದೆ ಬರಿಸುವಂತ ಒಂದು ಸಣ್ಣ ಮಾತ್ರೆಯನ್ನು ನುಂಗಿ ಮಲಗಿದಳು. ಗಾಢ ನಿದ್ದೆ ಹತ್ತಿ ಒಂದು ಯಾಮ ಕಳೆದಿರಬಹುದು. ಸ್ವರ್ಣಮಾಲಿನಿಯೂ ಮಗಳೊಂದಿಗೆ ಬಹಳ ಹೊತ್ತಿನವರೆಗೆ ಎಚ್ಚರಿದ್ದುದರಿಂದ ಅನಂತರ ಅವಳಿಗೂ ಗಾಢ ನಿದ್ದೆ ಹತ್ತಿತೇನೋ. ಆ ನಟ್ಟಿರುಳಿನಲ್ಲಿ ಕಿಟಕಿಯ ಬಳಿ ಯಾರೋ ಕರೆದ ಧ್ವನಿ ಘನಶಾಂತ ನಿಶ್ಶಬ್ದತೆಯನ್ನು ಭೇದಿಸಿಕೊಂಡು ಕರ್ಣದೇಶಗಳನ್ನು ತಟ್ಟನೆ ತಾಗಿತು "ಡಾಕ್ಟರ್!"

"........"

"ಡಾಕ್ಟರ್!"

ಗಾಢನಿದ್ದೆಗೆ ಬಲಿಯಾದ ತನುಮನಗಳಿಗೆ ಕೇಳಿಸಿದರೂ ಓ ಗೊಡುವಷ್ಟು ಎಚ್ಚರವಿಲ್ಲ.

" ಡಾಕ್ಟರ್....ಡಾಕ್ಟರ್ !

" ಆ........!"

ಓ ಗೊತ್ತಿದ್ದರೂ ದನಿಯು ಗುರುತು ಹತ್ತಲಿಲ್ಲ.

" ಡಾಕ್ಟರ್, ನಾನು ಚಿತ್ರಸೇನ."

" ಓ...! ನೀವೋ?"

ಸ್ವರ್ಣಮಾಲಿನಿ ಎದ್ದು ಕದ ತೆರೆದಳು, ಚಿತ್ರಸೇನ್ ಒಳಬಂದ. ಅವನು ಸರಿ ರಾತ್ರಿಯಲ್ಲಿ ಬಂದು ಕರೆಯಬೇಕಾದರೆ ಯಾರಿಗೋ ಆರೋಗ್ಯ ಕೆಟ್ಟಿದೆ ಎಂಬುದನ್ನು ಅತೀಂದ್ರಿಯ ಪ್ರಜ್ಞೆ ತಟ್ಟನೆ ಗ್ರಹಿಸಿತು. ಕಾತರದಿಂದ ಕೇಳಿದಳು ಸ್ವರ್ಣಮಾಲಿನಿ. " ಏನಪ್ಪಾ ? "

" ಮಗುವಿಗೆ ಬಹಳ ಹೊಟ್ಟೆ ನೋವು." ವೇದನಾಭರಿತ ದನಿಯಲ್ಲಿ ನುಡಿದ ಚಿತ್ರಸೇನ

" ಓ... !"

" ಅದರ ಕಷ್ಟ ನೋಡುವಂತಿಲ್ಲ ಡಾಕ್ಟರ್."

ಕಮಲೇಶ್ ಔಷಧಿಯ ಕೈ ಬ್ಯಾಗನ್ನು ತೆಗೆದುಕೊಂಡು ಹಿತ್ತಿಲ ಬಾಗಿಲಿನ ಕಡೆಯಿಂದಲೇ ಹೊರಟಳು. ಚಿತ್ರಸೇನ ಹಿಂಬಾಲಿಸಿದ. ಚೇತನಾ ಸ್ವರ್ಣಮಾಲಿನಿಯರೂ ಹಿಂದೆಯೇ ಹೊರಟರು. ಇದುವರೆವಿಗೂ ಆರೋಗ್ಯವಾಗಿದ್ದ ಹತ್ತು ತಿಂಗಳ ಮಗು ಸುಂದರಸೇನನಿಗೆ ರಾತ್ರಿ ಅನಿರೀಕ್ಷಿತವಾಗಿ ಹೊಟ್ಟೆನೋವು ಕಾಣಿಸಿಕೊಂಡು ಉಲ್ಬಣವಾಗಿದ್ದುದರಿಂದ ಚಿತ್ರಸೇನನಿಗೆ ಎಲ್ಲಿಲ್ಲದ ಕಳವಳ. ಕಮಲೇಶಳಿಂದ ಬ್ಯಾಗನ್ನು ತಾನು ತೆಗೆದುಕೊಂಡು ಮುಂದೆ ಹೆಜ್ಜೆ ಹಾಕಿದ.

ಬೆಳಗಿನ ಒಂದನೆಯ ಯಾಮ.

ಶೀತಲ ಗಾಳಿ ತಣ್ಣಗೆ ತೀಡುತ್ತಿದೆ.

ಗ್ಹೂಊ ! ಗ್ಹೂಊ !

ಗೂಬೆಯ ವಿಕೃತ ಸ್ವರ ಕರ್ಣಪಟಲಗಳಿಗೆ ತಾಗಿದಾಗ ಎಲ್ಲರ ಮುಖದ ಮೇಲೂ ವ್ಯಸನ ಭರಿತ ಕಪ್ಪು ಛಾಯೆ ಮುದ್ರೆಯೊತ್ತಿತು. ಸ್ವರ್ಣಮಾಲಿನಿ ಕಾಣದ ಭಗವಂತನಿಗೆ ಕೈಮುಗಿದು ಮಗುವಿನ ಶುಭವನ್ನು ಕೋರಿ

ದಳು ......ಯಾವುದೋ ಅವ್ಯಕ್ತ ಭಯ ಹೃದಯ ಬನಕ್ಕೆ ಕಾಡ್ಗಿಚ್ಚನ್ನು ಹಚ್ಚಿ ಉದ್ವಿಗ್ನತೆಯನ್ನು ಮೂಡಿಸಿತು. ಅಂಗಳ ದಾಟಿ ಹೂದೋಟದ ಸುಂದರ ಹಾದಿಯನ್ನು ಕಳೆದು ಮೆಟ್ಟಿಲು ಹತ್ತುವಾಗ ಭಯ ವಿಹ್ವಲೆಯಾದ ಹೇಮರತಿ ಎದುರಾದಳು.

“ಬಂದೆಯಾ ತಾಯಿ....ನೀನಿಂದು ಮಗುವಿನ ಸಲುವಾಗಿಯೇ ಇಲ್ಲಿ ಉಳಿದಂತೆ ತೋರುತ್ತದೆ. ಉಪಕರಿಸುವ ಸಂದರ್ಭದಲ್ಲಿ ಭಗವಂತ ಹೀಗೆಯೇ ಅನಿರೀಕ್ಷಿತ ಸಹಾಯ ಒದಗಿಸುತ್ತಾನೆ.”

ಕಮಲೇಶ್ ಮಾತಾಡಲಿಲ್ಲ. ಹೌದೋ ಅಲ್ಲವೋ ಎಂಬುವಂತಹ ಸಣ್ಣ ಮುಗುಳುನಗೆ ತುಟಿಗಳಲ್ಲಿ ಮಿನುಗಿ ಮಾಯವಾಯಿತು. ನೇರವಾಗಿ ಒಳ ಹೋಗಿ ಮಗುವನ್ನು ನೋಡಿದಳು. ಇಂಟು ಸಸೆಪ್ಶನ್ (INTU SUSCEPTION) ಆದ ಹಾಗೆ ತೋರಿತು. ವಿಪರೀತ ನೋವಿನಿಂದ ಮಗು ಬಳಲಿ ಬೆಂಡಾಗಿ....ಗಟ್ಟಿಯಾಗಿ ಅಳಲೂ ಸಹ ಶಕ್ತಿಯುಳಿದಿರಲಿಲ್ಲ.

“ಚಿಕ್ಕ ಮಗುವಿಗೆ ಹೀಗಾಗುವುದು ಅಪರೂಪ....” ಯೋಚಿಸುತ್ತಾ ನುಡಿದಳು ಕಮಲೇಶ್.

“ಮಗುವನ್ನು ನಿಮಗೊಪ್ಪಿಸಿ ಬಿಡುವೆ ಡಾಕ್ಟರ್.” ದೈನ್ಯತೆಯಿಂದ ನುಡಿದ ಚಿತ್ರಸೇನ.

“ಬಹುಶಃ ಆಪರೇಶನ್ ಆಗಬೇಕು. ಸ್ವಲ್ಪ ಹೊತ್ತು ಕಾದು ನೋಡೋಣ.”

ಮಗುವಿಗೆ ನೋವು ಸ್ವಲ್ಪ ಶಮನವಾಗಿ ನಿದ್ದೆ ಹತ್ತುವವರೆಗೆ ಇದ್ದು ಅನಂತರ ಮನೆಗೆ ಮರಳಿದಳು. ಕೃಷ್ಣ ಪಕ್ಷದ ರುದ್ರ ಮಧುರ ರಾತ್ರಿ. ಚಂದ್ರಮನಿಲ್ಲದ ನಕ್ಷತ್ರ ಖಚಿತ ನೀಲಾಕಾಶ. ಪ್ರಶಾಂತ ಶೀತಲ ವಾತಾವರಣ ... ಇನ್ನೂ ಕಣ್ಣೋಚಾಸಿದ್ದೇನು ? ಬೃಹತ್ ಬ್ರಹ್ಮಾಂಡವನ್ನು ಬಾಯ್ದೆರೆದು ನುಂಗಿದ ಘನ ತಿಮಿರರಾಶಿ....ಓ ಘನತಿಮಿರ ಚಕ್ರವರ್ತಿಯೇ, ಈ ಬೃಹತ್ ಬ್ರಹ್ಮಾಂಡವು ನಿನಗೊಂದು ಗ್ರಾಸವಾದರೆ ನಮ್ಮಂತಹ ಅಣು-ತೃಣಗಳ ಕತೆಯೇನು ?....ಪ್ರಶ್ನೆಯೆದ್ದೊಡನೆಯೇ ಸಣ್ಣ ನಗು ಮಿನುಗಿ ಮಾಯವಾಯಿತು. ಇದ್ದಕ್ಕಿದ್ದಂತೆ ವಿದ್ಯುಚ್ಛಕ್ತಿ ತುಂಡಾಗಡಿದು ದೀಪವಾರಿ ಕಗ್ಗತ್ತಲೆಯಾವರಿಸಿತು. ಪ್ರಶ್ನೆಗನುಗುಣವಾಗಿ ಆಕ್ಷಣ ನುಗ್ಗಿ ಬಂದ ದುತ್ಸ್ವಪ್ನಃ

ಪ್ರಭಾವವನ್ನು ಚಿಂತಿಸುತ್ತ ಒಂದು ಲೋಟ ನೀರನ್ನು ಕುಡಿದು ತೈಲಾಂಜನವನ್ನು ಹಚ್ಚುವ ಗೋಜಿಗೆ ಹೋಗದೆ ಕಲ್ಪನೆಯ ಕಣ್ಣುಗಳ ಸಹಾಯದಿಂದ ಕದ ಮುಚ್ಚಿ ಸ್ವಿಚ್ಚನ್ನು ತೆಗೆದನಂತರ ಇಬ್ಬರೂ ಹಾಸಿಗೆ ಸೇರಿದರು. ತಾಯಿ ಮಗಳಿಬ್ಬರಿಗೂ ಮಧ್ಯೆ ಮಲಗಿದ್ದ ಸ್ವರೂಪ್ ಹಾಯಾಗಿ ನಿದ್ದೆ ಹೋಗಿದ್ದಳು. ಹೊತ್ತು ಉರುಳಿ ತಾಸೊಂದು ಕಳೆದಿತ್ತೋ ಏನೋ.

ರುದ್ರ ಭಯಂಕರ ಅಸುರ ರೂಪಿ ಕತ್ತಲೆಯ ಕಾರ್ಗಪ್ಪು ದೌಡಾಯಿಸಿ ಮೇಲಾಯ್ದು ಬರುತ್ತಿದೆ. ಅಯ್ಯೋ....!

ಕೊಸರಾಡಿ ಎದ್ದು ಮಂಚದಿಂದ ಹಾರಿ ಕತ್ತಲೆಯಲ್ಲಿ ಕರಗಿ ಹೋದಳು ಕಮಲೇಶ್. ಅವಳ ಹಿಂದೆಯೇ ನೆಗೆದ ಸ್ವರ್ಣಮಾಲಿನಿ " ಏಕೆ.... .. ಏನಾಯಿತು ?" ಎಂದಳು ಕಾತರದಿಂದ.

ಚಕ್ಕನೆ ಸ್ವಿಚ್ಚು ಒತ್ತಿದರೂ ದೀಪ ಹತ್ತಲಿಲ್ಲ. ಭಯಂಕರ ಭೀತಭೀತ ಭಾವದಿಂದ ಶರೀರ ಬಿರುಗಾಳಿಗೆ ಸಿಕ್ಕಿದ ದುರುಗೆಲೆಯಂತೆ ವಿಕಂಪಿಸಿತು. ಅರ್ಥಭರಿತವಾದ ಉಷ್ಣೋಧಿಕ ಜ್ವಾಲೆಯಲ್ಲಿ ತನು ಬೆಂದಿತು.

" ಏಕೆ ...ಏನಾಯಿತು ಕಮಲೇಶ್ ?"

" ಏನೋ ಕೆಟ್ಟ ಕನಸು ಕಂಡೆ, ಹಾ !" ಎನ್ನುತ್ತ ಎದೆಯಮೇಲೊರಗಿದ ಅವಳನ್ನು ತಾಯಿಯ ತೋಳುಗಳು ಬಿಗಿದಪ್ಪಿದಾಗ ತೋಳತೆಕ್ಕೆಯ ಅನುಪಮ ಬಂಧನದೊಳಗೆ ಕಂಪಿಸುತಿದ್ದುದು ಅನುಭವಕ್ಕೆ ಬಂದಿತು. ಹೃದಯ ದಡ ದಡ ಮಿಡಿಯುತಿದ್ದುದು ಸಹ ಕೇಳಿಸುತ್ತಿದೆ ಛೀಃ ! ಇದೇನು ಕತೆ ?

" ಏಕೆ ? ಇಷ್ಟೊಂದು ಹೆದರಿದುದಾದರೂ ಏಕೆ ?"

" ಭಯಂಕರ ರಾಕ್ಷಸ ಅಟ್ಟಿಸಿಕೊಂಡು ಬಂದು ಅಪ್ಪಳಿಸಿದಂತಾಯಿತು ....ಮಾ."

ದನಿ ಕಂಪಿಸುತ್ತಿದೆ....ಅಲ್ಲ, ಬಿಕ್ಕುತಿದ್ದಾಳೆ....ಅಲ್ಲ ; ಮುಸು ಮುಸು ಅಳುತಿದ್ದಾಳೆ.

" ಕಮಲೇಶ್.... "

ಆ ಧ್ವನಿಯಲ್ಲಿ ಊಹೆಗೂ ನಿಲುಕದ ವಾತ್ಸಲ್ಯದೊಂದಿಗೆ ಪ್ರೇಮವಾರಿಯೂ ಹರಿದುಬಂತು....

" ಬಹಳ ಭಯವಾಯಿತು. ಹಿಂದೆಂದೂ ಇಂತಹ ಅನುಭವವಾಗಿರಲಿಲ್ಲ. ಎಂದ ಕಮಲೇಶ್ ಸಾವರಿಸಿಕೊಂಡು ತಾಯಿಯೊಂದಿಗೆ ಹಿಂದಿರುಗಿ ಹಾಸಿಗೆ ಸೇರಿದರೂ ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ಸ್ವರೂಪಳನ್ನು ಬದಿಗೆ ಮಲಗಿಸಿ ತಾಯಿಯನ್ನು ತಬ್ಬಿ ಸಣ್ಣ ಮಗುವಿನಂತೆ ಮಲಗಿದಳು. ಆ ಶೀತಲ ಪ್ರಶಾಂತ ರಾತ್ರಿಯಲ್ಲಿಯೂ ಮೈಯ್ಯಲ್ಲಿ ಬೆವರಿನ ಕಣಗಳು ಮೂಡಿದುವು. ಅಪಾದ ಮಸ್ತಕವೂ ಜುಮುಜುಮುಗುಟ್ಟಿ ಎದೆಯಲ್ಲಿ ವಿಭಿನ್ನ ತೀಕ್ಷ್ಣಜ್ವಾಲೆ ಉರಿಯುತಿತ್ತು.

" ನೀನು ಹೆದರುವುದೆಂದರೆ ಆಶ್ಚರ್ಯ...."

" ಹೋಗಲಿ ಬಿಡಿ ಏನೋ ವಿಷಘಳಿಗೆ."

ಅನಂತರ ನಿದ್ರಾದೇವಿಯ ವರಪ್ರಸಾದ ಬಯಸಿದರೂ ಬೇಡಿದರೂ ದೊರೆಯಲಿಲ್ಲ.

ಬೆಳಗಿನ ತಂಗಾಳಿ ತಣ್ಣಗೆ ತೀಡಿ ಬೆಳ್ಳನೆ ಬೆಳಕು ಹರಿದರೂ ಏಳಲು ಮನಸ್ಸಿಲ್ಲ. ಕೆಟ್ಟ ಕನಸಿನ ಭವಿಷ್ಯತ್ತಿನ ದೋಷ ಪರಿಹಾರಾರ್ಥವಾಗಿ ದೇವರಿಗೆ ನಂದಾದೀಪ ಇಡುವುದರಲ್ಲಿ ಸಿಂಧೂರ ರಹಿತ ಸ್ವರ್ಣಮಾಲಿನಿ ಉದ್ಯುಕ್ತಳಾಗಿದ್ದಳು. ಕದ ತೆರೆಯುತ್ತಲೂ ಆತ್ಮಾರಾಂ ಕರ್ವೆ ಮಹಾಶಯ ಒಳ ಬಂದರು. ಅವರ ದನಿ ಕೇಳುತ್ತಲೂ ಹಾಸಿಗೆಯಿಂದ ಜಿಗಿದೆದ್ದು ಲಗುಬಗನೆ ಮುಖ ಮಜ್ಜನ ಮಾಡಿ ಹೊರ ಬಂದುದನ್ನು ನೋಡಿ-" ರಾತ್ರಿ ನಮ್ಮಿಂದಾಗಿ ನಿನಗೆ ನಿದ್ರೆಯಿಲ್ಲ....ಮಗೂ !"

" ಇರಲಿ, ಪರವಾಗಿಲ್ಲ....ಹೇಗಿದ್ದಾನೆ ಮಗು ?"

" ಹಾಗೇ....ಇನ್ನೂ ಸ್ವಲ್ಪ ನಿದ್ದೆಯ ಮಂಪರವಿದೆ. "

" ಬಂದು ನೋಡುವೆ. "

" ಹಾಗಾದರೆ...."

ನಡುವೆ ಬಾಯಿ ಹಾಕಿದಳು ಕಮಲೇಶ್ " ನಿಂತೇ ಇದೀರಲ್ಲ, ಮಾಮಾ ; ಕೂಡಿ."

" ಇರಲಿ ಮಗೂ, ಇದು ಕೂಡುವ ಹೊತ್ತಲ್ಲ. ನೀನು ಆಣಿಯಾದೊಡನೆ ಮನೆಗೆ ಬಂದು ಬಿಡು. ಆಸ್ಪತ್ರೆಗೆ ಕರೆದುಕೊಂಡು ಹೋಗೋಣ "

" ಬರುವೆ."

ಸೀತಮ್ಮ ಒಂದು ಬಿಸಿ ಬಿಸಿ ಕಾಫಿಯನ್ನು ತಂದಿಟ್ಟಳು. ಕರ್ವೆ ಮಹಾಶಯ ಕಾಫಿಯನ್ನು ಹೀರಿ ಹೊರಟಾಗ ನಡಿಗೆಯಲ್ಲಿ ಐರಾವತ ಗಾಂಭೀರ್ಯ ಕಾಣಿಸುತಿತ್ತು. ಹೋಗುತ್ತಾ ಹೊಸ್ತಿಲು ದಾಟುವಾಗ "ಪ್ರಣಾಮ್ ದೀದೀ!" ಎಂದುದು ಸಹ ಕಿವಿಗೆ ಬಿತ್ತು.

"ಪ್ರಣಾಮ್"

ಕಮಲೇಶ್ ಅಣಿಯಾಗಿ ಬರುತ್ತಲೂ ಎಲ್ಲರೂ ಹೊರಟರು. ಬಸಂತ್ ಮಗುವನ್ನು ಎತ್ತಿಕೊಂಡ. ಕಾರು ಹೊರಟಿತು ಕಮಲೇಶ್ ಆಪರೇಶನ್ ಥಿಯೇಟರಿಗೆ ಕಾಲಿಟ್ಟಾಗಲೇ ಚಂದ್ರಕಾಂತನೂ ಕಾಲಿಟ್ಟ. ಇಂದು ಆಪರೇಶನ್ ಥಿಯೇಟರು ಡಾ|| ಹೇಮಲಾಲ್ ಚಂದಾನಿಯ ಆಳ್ವಿಕೆಗೆ ಒಳಪಟ್ಟಿತ್ತು. ಆತನಿಗೆ ಟೆಲಿಫೋನಿನಲ್ಲಿ ಕರೆ ನೀಡಿ ತನಗೊದಗಿರುವ ತುರ್ತು ಆಪರೇಶನ್ನಿನ ವಿವರಣೆಯನ್ನು ನೀಡಿ ಮೊದಲ ಆಪರೇಶನ್ ಕೈಕೊಳ್ಳಲು ಅನುಮತಿ ಬೇಡಿದ ನಂತರ ಡಾ|| ಯಶಪಾಲರಿಗೆ ಟೆಲಿಫೋನಿನಲ್ಲಿ ಕರೆಕೊಟ್ಟಳು.

"ಆಗಲಿ ಡಾಕ್ಟರ್, ನೀವು ಅಣಿಯಾಗಿರಿ. ನಾನೂ ಇಷ್ಟರಲ್ಲೇ ಬರುವೆ."

ಆ ಮುಹೂರ್ತದಲ್ಲಿ ಅವರ ಅಮೂಲ್ಯ ಸಹಕಾರ ಹಸ್ತದೊಡನೆ ಕುಸುಮ ಕೋಮಲ ಮಗುವಿನ ಆಪರೇಶನ್ ಆರಂಭವಾಯಿತು. ಅಪರೂಪದ ಆಪರೇಶನ್ ತರುಣ ಡಾಕ್ಟರುಗಳ ಗಮನವನ್ನು ವಿಶೇಷವಾಗಿ ಆಕರ್ಷಿಸಿತು. ಅವರಿಗೆ ತಿಳಿವಳಿಕೆ ನೀಡುತ್ತ ಆಪರೇಶನ್ ಮುಗಿಸಿ ಮಗುವನ್ನು ಗಂಡಾಂತರದಿಂದ ಪಾರು ಮಾಡುವಾಗ ತಾಸೆರಡು ಸಂದು ಹೋದುವು.

ಅನಂತರ ಅಂದಿನ ದಿನಚರಿ ಆಪರೇಶನ್ ಆದವರಿಗೆ ಡ್ರೆಸಿಂಗ್—ಕಳೆದ ವಾರ ಆಪರೇಶನ್ ಆದವರಿಗೆ ಹೊಲಿಗೆ ತೆಗೆಯುವುದು ಮದ್ದು ಬಳಿದು ಬ್ಯಾಂಡೇಜ್ ಕಟ್ಟುವುದು ಇತ್ಯಾದಿ; ಇತ್ಯಾದಿ ಕೆಲಸದ ಮಧ್ಯೆ ಮಗುವನ್ನೊಮ್ಮೆ ನೋಡಿಕೊಂಡು ಬಂದು ಪುನಃ ಕೆಲಸ ಕೈಕೊಂಡಳು. ತನ್ನ ದಿನಚರಿ ಮುಗಿದಾಗ ಚಂದ್ರಕಾಂತನ ಕೆಲಸ ಮುಗಿದಿರಲಿಲ್ಲ.

ಭುವನ ಮಂಡಲ ಮೇಘಾಚ್ಛಾದಿತವಾಗಿತ್ತು.

ಹೊತ್ತು ಹನ್ನೆರಡರ ಅಂಚನ್ನು ದಾಟುವುದರೊಳಗಾಗಿ ಬಸಂತ್ ಕಮಲೇಶ್‌ಳನ್ನು ಕಾರಿನಲ್ಲಿ ಕರೆತಂದು ಮನೆಯ ಮುಂದೆ ಇಳಿಸಿ ಹೋದ. ಬಾಗಿಲಲ್ಲಿ ಎದುರಾದ ಚೇತನಾ ಪ್ರಪ್ರಥಮದಲ್ಲೇ ಅತ್ಯಂತ ಉತ್ಸುಕತೆಯಿಂದ

ತಾನು ಪ್ರಥಮ ತರಗತಿಯಲ್ಲಿ ಉತ್ತೀರ್ಣಳಾದ ಸುದ್ದಿಯನ್ನು ಮುಂದಿಟ್ಟಳು. ಚೆಂಗೆನ್ನೆಗಳು ಚೆಂಗುಲಾಬಿಗಳಂತೆ ಅರಳಿ ಆ ಸುಮುಹೂರ್ತದಲ್ಲಿ ಸುಮನೋಹರವಾಗಿ ಕಣ್ಗೆಸೆದಳು. ಸುದ್ದಿ ಸಂತಸವನ್ನು ತಂದಿತು. ಕಮಲೇಶ್ ಹೃತ್ಪೂರ್ವಕವಾಗಿ ಅಭಿನಂದಿಸಿ ತಲೆಯನ್ನು ನೇವರಿಸಿದಳು ಇಬ್ಬರ ಮುಖ ಮಂಡಲಗಳೂ ಆನಂದದಿಂದ ವಿಕಸನಗೊಂಡುವು.

"ನಮಗೆ ಸಿಹಿಯೆಲ್ಲಿ ?" ತಿಲಕ್ ಮತ್ತು ಸ್ವರೂಪರು ಒಂದೇ ಬಾರಿಗೆ ಪ್ರಶ್ನೆ ಹಾಕಿದರು.

"ನೀವೂ ಪ್ರಥಮ ತರಗತಿ ಪಡೆದರೆ ಅಲ್ಲಿಂದಲ್ಲಿಗೆ ಸರಿಹೋಯಿತು."

"ಉಹೂ, ನಮಗೆ ಬೇಕೇ ಬೇಕು."

"ಅದಕ್ಕೇನಂತೆ, ಬೀರುವಿನಲ್ಲಿದೆ !" ನಗುತ್ತ ಹುಬ್ಬೇರಿಸಿದಳು ಚೇತನಾ.

"ಇನ್ನೊಂದು ವರ್ಷ, ಅನಂತರ ನೀನು ಡಾಕ್ಟರಾಗುತ್ತಿ. ಮುಂದೆ ಎಲ್ಲವನ್ನೂ ನಿನಗೆ ವಹಿಸಿ ನಾನು ವಿಶ್ರಾಂತಿ ತೆಗೆದುಕೊಳ್ಳುವೆ." ತವಕಾಷೆಯ ಧಾಟಿಯಲ್ಲಿ ನುಡಿದಳು ಕಮಲೇಶ್.

ಅದೇ ಸಮಯಕ್ಕೆ ಗೋಡೆಯ ಮೇಲಿನ ಹಲ್ಲಿ ಲೊಚ ಲೊಚ ನುಡಿಯಿತು. ಒಡನೆ ಅವಳ ಅಂತರ್ಯದಲ್ಲಿ ಊಹಾತೀತವಾದ ವಿಪ್ಲವ ಮೆಲ್ಲನೆ ತಲೆ ದೋರಿತು.

"ಮಾ... !" ಹುಬ್ಬೇರಿಸಿ ನುಡಿದ ತಿಲಕ್ "ನಾನು ಇಂಜನಿಯರಿಂಗ್ ತೆಗೆದುಕೊಳ್ಳುವೆ."

ಮೆಡಿಸಿನ್ ತೆಗೆದುಕೊಳ್ಳುವುದೋ ಇಂಜನಿಯರಿಂಗ್ ತೆಗೆದುಕೊಳ್ಳುವುದೋ ಎಂಬ ಯೋಚನೆಯಲ್ಲಿದ್ದ ಅವನು ಅಂತ್ಯ ತೀರ್ಮಾನ ಕೈಕೊಂಡು ವಿಷಯವನ್ನು ನಗುಮುಖದಿಂದ ಮುಂದಿಟ್ಟ– "ಚಿತ್ರಸೇನ್ ಮಾವ 'ಫೌಂಡ್ರಿ' ತೆಗೆದರೆ ಅವರ ಮತ್ತು ನನ್ನ ಉದ್ಯೋಗಗಳನ್ನು ಒಂದಾಗಿ ನಡೆಸಿಕೊಳ್ಳಬಹುದು ಎನ್ನುತ್ತಾರೆ. ಹಾಗೆ ಮಾಡಲೇ ಮಾ ?"

"ಓ....ಸರಿ....! ಮುಂದೆ ಸುಚಿತ್ರಸೇನನೂ ಇದೇ ರಂಗಕ್ಕೆ ಬರುತ್ತಾನೆ. ಅವರ ಸಹಾಯವಿರುವುದರಿಂದ ನಿನಗೆ ಅನುಕೂಲ, ಸೇರಿಕೋ."

"ಚಿತ್ರಸೇನ ಆಗನಿಂದಲೂ ಅದನ್ನೇ ಹೇಳುತಿದ್ದಾನೆ" ಸ್ವರ್ಣಮಾ

ಲಿನಿ ದನಿಗೂಡಿಸಿದಳು.

" ನೀನೂ ಡಾಕ್ಟರಾಗಿದ್ದರೆ ಎಲ್ಲರೂ ಕೂಡಿ ಸ್ವಂತ ಆಸ್ಪತ್ರೆ ತೆಗೆಯ ಬಹುದಾಗಿತ್ತು." ಚೇತನಳ ನುಡಿ ಹೊರಬೀಳುವುದರೊಳಗಾಗಿ ತಿಲಕ್ ಕೇಕೆ ಹಾಕಿ ನುಡಿದ " ನಿನ್ನಪತಿ ಬಸಂತ್ ಮಹಾಶಯ ಇದ್ದಾನೆ ಸಾಕು !"

ಒಡನೆ ಎಲ್ಲರೂ ನಗುವಿನ ಗುಲ್ಲೆಬ್ಬಿಸಿದರು.

ತಾಯಿ ಮಕ್ಕಳ ಸಾನಿಧ್ಯದಲ್ಲಿ ಹೊತ್ತು ಸಾನಂದದಿಂದ ಉರುಳಿತು. ಅನಂತರ ರೋಗಿಗಳೊಡನೆ ವ್ಯವಹಾರ. ಎಲ್ಲರ ಚಿಕಿತ್ಸೆ ಮುಗಿಸಿ ಹೊರ ಬಂದಾಗ ಹೊತ್ತು ಐದರ ಅಂಚನ್ನು ದಾಟಿ ಆರರ ಹೊಸ್ತಿಲ ಬಳಿಸಾರಿ ಬಂದಿತ್ತು. ಬಸಂತ್ " ನೀವು ಆರುವರೆಗೆ ಬಂದರೆ ಸಾಕು. ನಾನೇ ಬಂದು ಕರೆದೊಯ್ಯುವೆ " ಎಂದಿದ್ದ. ಅದೇ ವಿಚಾರ ಸರಣಿಯಲ್ಲಿ ಸಿಕ್ಕಿ ಯೋಚಿಸುತ್ತ ಹೊರಬಂದೊಡನೆ ಮೇಜಿನ ಮೇಲಿನ ಟೆಲಿಫೋನು ಕರೆ ನೀಡಿತು.

ಆ ಕಡೆಯಿಂದ ಹೇಮಲಾಲ್ ಚಂದಾನಿಯ ದನಿ–" ಡಾಕ್ಟರ್, ಎಮರ್ಜನ್ಸಿ ಕೇಸಿದೆ. ದಯಮಾಡಿ ಈಗಲೇ ಬರುವಿರಾ ?"

" ಈಗಲೇ ಬರಬೇಕೆ ?"

" ಹೌದು, ವ್ಯಾನು ಕಳುಹಿಸುವೆ. ಬರುವಾಗ ಚಂದ್ರಕಾಂತರನ್ನೂ ಕರೆತನ್ನಿ; ಕೇಸು ಅವರ ಕಡೆಯವರದೇ. "

" ಆಗಲಿ ಡಾಕ್ಟರ್. "

ಇಂದು ಹೃದಯ ಬನದಲ್ಲಿ ಏನೋ ಒಂದು ಬಗೆಯ ಕಾಡ್ಗಿಚ್ಚು.... ಏನೋ ಒಂದು ರೀತಿಯ ನಿರುತ್ಸಾಹ. ಎಲ್ಲಿಗೂ ಹೋಗದೆ ಹಾಯಾಗಿ ಮಲಗಿಬಿಡೋಣವೇ ಎಂಬಷ್ಟು ಅಶಾಂತಿ....ಬೇಸರ. ಚಂದ್ರಕಾಂತನ ಕಡೆಯವರದ್ದಾದುದರಿಂದ ಹೋಗದಿರುವಂತೆಯೂ ಇಲ್ಲ. ಹೃದ್ಗತವಾದ ಯಾವುದೋ ದುರ್ದಮನೀಯವಾದ ಅಕಲ್ಪಿತ ಮರಣ ಸಂಕಟದಂತೆ ತೋರುತ್ತಿದೆ–ಆ ಅರ್ಥಗರ್ಭಿತ ಅಗ್ನಿಜ್ವಾಲೆ.

ಶ್ರೀಹೀನ ಕಾಳಿಕೆಯ ಭೀಕರ ಸಂಧ್ಯಾ ಸಮಯದಲ್ಲಿ, ಮಾನವ ನಿರ್ಮಿತ ಯಾಂತ್ರಿಕ–ತಾಂತ್ರಿಕ ಜೀವನಾರಣ್ಯದ ಮೇಲೆ ತಂಜೆಲರು ಭಾರತ ಮಾತೆಯ ನಿಟ್ಟುಸಿರಿನಂತೆ ಸುಯ್ಯನೆ ಸುಯ್ಯುತ್ತಾ ಸಾಗಿ ಹೋಯಿತು– ಕಿಂಕುರ್ವಾಣತೆ ತುಂಬಿ ತಾಳ್ಮೆಗೆಟ್ಟ ಪಯಣಿಗನಂತೆ.

ಸ್ವರೂಪರಾಣಿ ಬಾಲೋಚಿತ ಮಧುರವಾಣಿಯಲ್ಲಿ ಕೇಳಿದಳು. "ರಾತ್ರಿ ಇಲ್ಲೇ ಬರುತ್ತೀರಾ ?"

" ಜೊತೆಗೆ ಡಾಕ್ಟರಿರುತ್ತಾರೆ. ಇಂದು ಅಲ್ಲೇ ಹೋಗುವೆ ಮಗೂ."

" ಇಲ್ಲೇ ಬನ್ನಿ ಮಾ." ಗೋಗರೆದಳು ಸ್ವರೂಪ್ ಕಿರುವಾಯ್ ಕಿರಿದು.

" ಇಂದು ಆಗುವುದಿಲ್ಲ. ಇನ್ನೊಮ್ಮೆ ಬರುವೆ. "

ಮಾತು ಮುಗಿಯುವುದರೊಳಗಾಗಿ ದೂರದ ತಿರುವಿನಲ್ಲಿ ಅತೀತ ಲೋಕದ ಕರೆಯಂತೆ ವ್ಯಾನಿನ ಘಂಟಾನಿನಾದ ಕೇಳಿ ಬಂತು. ಠಣ್. ಠಣ್. ಠಣ್. ಠಣ್.

" ಈ ದಿನ ಕ್ಷಮಿಸಿ ಬಿಡು ಸ್ವರೂ....!" ಗ್ಲಾನಿಯಿಂದಲೂ ಪ್ರೀತಿಯಿಂದಲೂ ನುಡಿದಳು ಕಮಲೇಶ್. ದನಿ ವಿಜಾತೀಯವಾಗಿ ಯಾರೋ ನುಡಿದಂತಿತ್ತು.

ಅಸ್ಪಷ್ಟ ಸಂಧ್ಯಾ ಮರೀಚಿಕೆಯಲ್ಲಿ ಶೇಷ ಕರ್ತವ್ಯವನ್ನು ನೆರವೇರಿಸಲು ಸ್ಮಶಾಣಾಭಿಮುಖವಾಗಿ ಹೊರಡುವ ಶವವಾಹಕರಂತೆ ಆಕೆ ಕಂಕಣ ಬದ್ಧಳಾದಳು.

ಎಲ್ಲೋ ಹರಿದ ಗಮನವನ್ನು ಮಗಳ ದನಿ ಸೆಳೆದುಕೊಂಡಿತು–"ಖಂಡಿತವಾಗಿ ನಾಳೆ ರಾತ್ರಿ ಇಲ್ಲೆ ಬರುವಿರಾ ?"

" ಯಾವ ವಾಕ್ಯವೂ ಈಗಲೇ ಸಿದ್ಧಾಂತವಾಗಲಾರದು ಸ್ವರೂ. ನಾಳೆ ಖಂಡಿತ ನಿನಗಾಗಿ ಪ್ರಯತ್ನಿಸುವೆ."

ವ್ಯಾನು ಬಾಗಿಲಲ್ಲಿ ಗಕ್ಕನೆ ನಿಂತಿತು.

ಅಜ್ಜಿ ಮೊಮ್ಮಕ್ಕಳು ರಸ್ತೆಯಂಚಿನವರೆಗೂ ಬಂದು ಬೀಳ್ಕೊಟ್ಟರು. ವ್ಯಾನು ದೂರದ ತಿರುವಿನಲ್ಲಿ ಕಣ್ಮರೆಯಾಗುವವರೆಗೂ ನೋಡುತ್ತಾ ನಿಂತಿದ್ದ ತಾಯಿ ಮತ್ತು ಮಕ್ಕಳನ್ನು ನೋಡಿತು ನೋಟ. ಏಕೋ ಏನೋ ಧವಳ ವರ್ಣರಂಜಿತ ವ್ಯಾನು ದಯಾಶೂನ್ಯನಾದ ಕಟುಕನ ಅಂತರಂಗದಂತೆ, ಯಮಧರ್ಮನ ಪಾಶವೀಶಕ್ತಿಯಂತೆ ಘೋರವಾಗಿ ತೋರುತ್ತಿದೆ.

ಚಂದ್ರಕಾಂತನ ಮನೆಯ ಮುಂದೆ ವ್ಯಾನು ನಿಂತಿತು. ಆವಳು ಇಳಿದು ಒಳಗಡೆ ಹೋದಳು. ಚಂದ್ರಕಾಂತ್ ತಯಾರಾಗುವುದರಲ್ಲಿದ್ದ ; ಕಳಚಿದ ಬಟ್ಟೆ ಪಲ್ಲಂಕದ ಮೇಲೆ ಬಿದ್ದಿತ್ತು. ಎತ್ತಿ ಮಡಿಸಿಡುವಾಗ ಚಂದ್ರಕಾಂತನ

ಒಡಕು ದನಿ ಕಿವಿಯನ್ನು ತಾಗಿತು,

"ಅವುಗಳನ್ನು ಮುಟ್ಟುವ ಮುನ್ನ ಆತ್ಮಶೋಧನೆ ಮಾಡಿಕೊಳ್ಳಿ!"

ಈ ಬೆಳಿಗ್ಗೆ ಚಿತ್ರಸೇನನ ಮಗುವಿನ ಆಪರೇಶನ್ ನಡೆಸುವಾಗ ಅವರುಗಳೊಡನೆ ಹೊಂದಿದ ನೇರ ಸಂಪರ್ಕ ಆತನ ಅನುಮಾನದ ಕಿಚ್ಚಿಗೆ ದಧಿಸಾರವನ್ನು ಸುರಿದಂತಾಗಿದೆ....ದುಷ್ಕರ್ಮಿಗಳ ಬಳಿಯೂ ಸುಳಿಯದ ತಾನು ಅಪನಿಂದೆಯ ಪಾಲಾದುದು ಅಸಹನೀಯವಾಗಿ ತೋರಿತು. ಹಾಗೆಂದು ಬಾಯ್ದೆರೆದರೆ ಸುದ್ದಿ ಮನೆಯವರ ಕಿವಿಗೆ ಮುಟ್ಟಿ ರೆಕ್ಕೆ ಪುಕ್ಕ ತಳೆದು ಸಾವಿರ ಪಟು ವೃದ್ಧಿಯಾಗುತ್ತದೆ....ಶಿವ, ಶಿವಾ!

ಕಮಲೇಶ್ ಉದ್ವಿಗ್ನಳಾದರೂ ಸಾವರಿಸಿಕೊಂಡು, ಕಸಾಯಿ ಖಾನೆಯ ಕೈಂಕರ್ಯ ಕಟುಕನಿಗೆಂತು ಹಿತವೋ ಅಂತೆಯೇ ಈತನಿಗೆ ಈ ವ್ಯವಹಾರ ಹಿತವಾದರೆ ನಾನೇನು ಮಾಡ ಬಲ್ಲೆ? ಖಂಡಿತ ಅಂತಹ ತಪ್ಪು ಏನಾದರೂ ಸಂಭವಿಸಿದ್ದರೆ ನೀನೇ ನೋಡಿಕೋ ಪ್ರಭೂ....ಎಂದು ಕಾಣದ ಪರಮಾತ್ಮನಿಗೆ ಅಂತರಂಗವನ್ನರ್ಪಿಸಿಕೊಂಡಳು.

ಎಂದಿಗೂ ಯಾರಿಗೂ ಯಾವ ಪ್ರಶ್ನೆಗೂ ಉತ್ತರ ನೀಡದಿರುವಂತೆ ಇಂದೂ ಸಹ ಪರಮಾತ್ಮ ಅವಳ ಆತ್ಮನಿವೇದನೆಗೆ ಉತ್ತರ ನೀಡಲಿಲ್ಲ.

ಕಮಲೇಶ್ ಶೋಕ ವ್ಯಾಕುಲತೆಯಿಂದ ಖಿನ್ನ ಮನಸ್ಕಳಾಗಿ ವ್ಯಾನು ಹತ್ತಿದಳು. ಚಂದ್ರಕಾಂತ್ ಧೀರಗಂಭೀರ ಭಾವದಿಂದ ಬಂದು ಹತ್ತಿದ.

ವ್ಯಾನು ಹೊರಟಿತು.

ಕಮಲೇಶಳ ಮುಖ ಕಪ್ಪಿಟ್ಟಿತು. ಯಾಂತ್ರಿಕವಾಗಿ ಜೀವ ಉಸಿರಾಡಿತು.

ಮನೋ ಮಂದಿರದಲ್ಲಿ ನಡೆಯುವ ಮಹಾ ವಿಪ್ಲವಕಾಂಡದಲ್ಲಿ ಗಾಲಿಗಳುರುಳುತಿದ್ದುದೂ ಸಹ ಗಮನಕ್ಕೆ ಬೀಳಲಿಲ್ಲ........ಈ ಅಭಾಗ್ಯಳ ದೇಹ ಸಂಪತ್ತಿನೊಡೆಯನ ಪ್ರೇಮಭರಿತ ದಯಾಶೂನ್ಯ ಹೃದಯದಲ್ಲಿ ಅಡಗಿದ ಮಹಾ ಕಾಳಸರ್ಪ ಹೇಗೇ ಇದ್ದರೂ ಹೇಗೇ ನಡೆದರೂ ಹತ್ತು ರೀತಿಯಲ್ಲಿ ಹತ್ತು ತಲೆಗಳಿಂದ ಕುಟುಕುತ್ತಲೇ ಇರುತ್ತದೆ. ರೂಪವತಿಯಾದ ಭಾರ್ಯೆ ಶತ್ರುವೆಂದು ಯಾವ ಸೂತ್ರ ಹೇಳಿದೆಯೋ ಆ ಸೂತ್ರದ ವಶೀಭೂತನಾದ ಆತನಿಗೆ ಅದರಲ್ಲಿ ನಿಜವಾದ ಅನುಭೂತಿಯೂ ಸಹ ಇದೆ.

ಬಾಯಿ ಕಿರಿದು ವಿಕೃತ ಸ್ವರದಲ್ಲಿ ಕೂಗಿತು ಕಾಗೆ ಕಾ ! ಕಾ !

ದಿಟ್ಟಿಗೆದುರಾದ ಅಡ್ಡಗೋಡೆಯಂತೆಯೇ ಎದುರಿಗಿರುವ ಶಿಲಾಕಾಠಿಣ್ಯ ಮೂರ್ತಿಯಲ್ಲಿಯೂ ಉಳಿದಿರುವುದು ಶೂನ್ಯತೆಯೊಂದೇ ಎಂಬುದನ್ನು ಗ್ರಹಿಸಿದ್ದರೂ ಈ ದುರ್ಗಮವಾದ ಮಾರ್ಗಯೋಗದಲ್ಲಿ ಯಾವ ಸುಖ ದುಃಖಗಳೂ ಆಕೆಯನ್ನು ಪ್ರಲೋಭಿಸಲಿಲ್ಲ. ಪ್ರೀತಿ ಎಲ್ಲರ ಸೊತ್ತು. ಅವಳೂ ಸಹ ಪ್ರೀತಿಸುತ್ತಾಳೆ. ಪ್ರೀತಿಯ ಮಾಲಿನ್ಯವನ್ನು ಒರೆಗೆ ಹಚ್ಚಿ ನಿಷ್ಕಲ್ಮಶ ಹೃದಯದಿಂದ ಸೂಕ್ಷ್ಮವಾಗಿ ಪರಿಷ್ಕರಿಸುವುದರ ಮೂಲಕ ಆತನ ಆತ್ಮಶೋಧನೆ ಮಾಡದಿರುವಷ್ಟು ಅಜ್ಞಾನಿಯಲ್ಲವಾದರೂ ಈ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳುವುದು ಅಷ್ಟೊಂದು ಸರಾಗವಲ್ಲವೆಂಬುದು ಅವಳಿಗೂ ಗೊತ್ತು. ಅಂತಲೇ ಅನೇಕ ವೇಳೆ ಅವಳು ಮೌನಧಾರಣೆ ಮಾಡುವಳು. ವಾಣಿಗಿರುವಷ್ಟು ಮಿಥ್ಯಾಡಂಬರ ಮೌನಕ್ಕಿಲ್ಲ. ಮೌನ ಕಾಪಾಡಿದಷ್ಟು ಮಾನವ ಮಾತ್ರರನ್ನು ವಾಣಿ ಎಂದೂ ಕಾಪಾಡಲಾರದು.

ಕಾಗೆಯ ವಿಕೃತ ಸ್ವರ ಮತ್ತೆ ಹೊರ ಬಿತ್ತು ಕಾ ! ಕಾ !

ಚಿಂತಾ ವಿಹಾರಿಯಾಗಿದ್ದ ಗಮನವನ್ನು ಅತೀಂದ್ರಿಯ ಪ್ರಜ್ಞೆ ಬಾಹ್ಯ ಜಗತ್ತಿಗೆ ಅನಿರೀಕ್ಷಿತವಾಗಿ ಎಳೆಯಿತು, ಶಾಂತಿ ಪ್ರಿಯರನ್ನು ಸಂತೆಯ ಗೊಂದಲಕ್ಕೆ ಎಳೆದಂತೆ. ಹೃದಯ ಮೃದಂಗ ವ್ಯಾಪ್ತಿಗೆ ಮೀರಿ ಮಿಡಿಯಿತು ದಡ. ದಡ. ದಡ. ದಡ.

ಏನಿರಬಹುದು ? ಏತಕ್ಕಾಗಿ ಈ ಹೃದಯ ಮೃದಂಗ ಘೋಷ ?

ಅತೀಂದ್ರಿಯ ಪ್ರಜ್ಞೆ ತಳಮಳಗೊಂಡಿತು. ಕಣ್ಣುಗಳಂಚಿನಲ್ಲಿ ಜಾರಿದ ಎರಡು ಹನಿ ಕೆನ್ನೆಯನ್ನು ಮುದ್ದಿಟ್ಟುವು... ಮುಂಘಳಿಗೆಯಲ್ಲಿ ಏನಿದೆಯೋ ಏನೋ ಎಂದು ಯಾರೋ ಕೂಗಿ ಹೇಳಿದಂತಾಯಿತು.

ಥರ್ ! ಥರ್ ! ಥರ್ ರ್ರ್ರ್ರ್ರ್ ! ರೊಯ್ ಇಇಇಇ !

ದಡ್ ಬಡ್ಡನೆ ಬ್ರೇಕು ಹಾಕಿದ ಸದ್ದಿನೊಡನೆ ಆಯತಪ್ಪಿ ವಾಹನ ದೂರಕ್ಕೆಸೆಯಲ್ಪಟ್ಟಿತು. ಒಳಗಡೆ ಇದ್ದ ಪಯಣಿಗರ ಚೀರಾಟ ಸ್ವಲ್ಪ ಹೊತ್ತಿನೊಳಗಾಗಿ ಉಡುಗಿ ಹೋಯಿತು. ಹಿಂದಿನಿಂದ ಬರುತಿದ್ದ ಗುರುತು ಕಾಣದ ವಾಹನವೊಂದು ಗಾಯಾಳುಗಳನ್ನು ವ್ಯಾನಿನಿಂದ ಹೊರತೆಗೆದು ಆಸ್ಪತ್ರೆಗೊಯ್ದು ಉಪಕಾರ ಮಾಡಿತು. ಚಿಂತಾಜನಕ ರೀತಿಯಲ್ಲಿ ಚಂದ್ರಕಾಂತ

ದಂಪತಿಗಳು ಎಮರ್ಜನ್ಸಿ ವಾರ್ಡಿಗೆ ದಾಖಲಾದರು.

ಢಣ್ ! ಢಣಾರ್ ! ಢಣ್ ! ಢಣಾರ್ ! ಢಣ್ ! ಢಣಾರ್ !

ರಾಣೀ ಭವತಾರಣಿಯ ತುರ್ತುಕರೆ !

ಅಲ್ಲಲ್ಲಿ ಕೆಂಪು ದೀಪಗಳು ಹೊತ್ತಿ ಎಮರ್ಜನ್ಸಿ ವಾರ್ಡನ್ನು ತೋರಿ ಅಪಾಯದ ಸುದ್ದಿಯನ್ನು ಪುನಃಪುನಃ ಬಿತ್ತರಿಸಿತು.

ರಾಣೀ ಭವತಾರಿಣಿಯ ತುರ್ತು ಕರೆಗೆ ಓಗೊಟ್ಟು ವಾರ್ಡುಗಳಿಂದ ಆಫೀಸುಗಳಿಂದ ಸಂದಿಗೊಂದಿಗಳಿಂದ ಪಾದರಕ್ಷೆಗಳ ಪಟ ಪಟಾತ್ಕಾರದೊಡನೆ ಸಹಾಯ ಹಸ್ತಗಳು ಓಡಿ ಬಂದುವು. ಹಿರಿಯ ಡಾಕ್ಟರುಗಳು ಒಂದುಗೂಡಿ ಸುತ್ತುವರಿದು ನಿಂತು ತುರ್ತು ಚಿಕಿತ್ಸೆ ಕೈಕೊಂಡರು. ಪರಿತಾಪದ ಬಿಸುಸುಯ್ಲು ಎಲ್ಲರ ಹೃದಯಗಳಲ್ಲೂ ಎಣೆಯಿಲ್ಲದೆ ಹರಿದಾಡಿತು. ಕಣ್ಣುಗಳು ಕಂಬನಿಯನ್ನು ಧಾರಾಕಾರವಾಗಿ ಒಸರಿದುವು.

ಚಂದ್ರಕಾಂತನಿಗೆ ಎದೆಯಮೇಲೆ ಪೆಟ್ಟು ತಾಗಿ ಹೃದಯವನು ಜಜ್ಜಿತ್ತು. ಮುಖಕ್ಕೆ ತಾಗಿದ ಪೆಟ್ಟಿನಿಂದ ಕಣ್ಣುಗುಡ್ಡೆಯೊಂದು ಹಾರಿಹೋಗಿ ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡಿದ್ದ. ಕಮಲೇಶಳ ಮೈ ನಜ್ಜುಗುಜ್ಜಾಗಿ ಬೆನ್ನೆಲುಬು ನಲುಗಿ ಕಂದಿ ಪ್ರಜ್ಞಾಹೀನಳಾಗಿದ್ದಾಳೆ. ಹಿರಿಯ ಡಾಕ್ಟರುಗಳ ಕೊನೆ ಮೊದಲಿಲ್ಲದ ಪ್ರಯತ್ನ ನಡೆಯುತ್ತಿದ್ದಂತೆ ಕುಟುಂಬ ವರ್ಗದವರು ಬಂದು ನೆರೆದರು. ಎಲ್ಲರ ಕಣ್ಣುಗಳೂ ಬಳ ಬಳ ಕಂಬನಿಯನ್ನು ಸುರಿಸಿದುವು. ತನುಮನಗಳು ಮೌನವಾಗಿ ರೋದಿಸಿದುವು. ದುಃಖದ ನೆರೆಯುಕ್ಕಿ ಕೋಡಿ ಹರಿಯಿತು.

ಮರುದಿನ ಸೂರ್ಯೋದಯವಾಗುವ ಮುನ್ನ ಚಂದ್ರಕಾಂತ ತನ್ನ ಒಂದು ಕಣ್ಣನ್ನು ತೆರೆದು ಸುತ್ತಮುತ್ತ ಹೊರಳಿಸಿ ನೋಡಿದ. ಮೊದಲು ದಿಟ್ಟಿಗೆ ಬಿದ್ದವನು ಡಾ|| ಶರಣ್. ಅನಂತರ ಡಾ|| ಶುದ್ಧೋಧನ. ತನ್ನ ಸ್ಥಿತಿಗತಿ ನಿಚ್ಚಳವಾಗಿ ಹೊಳೆಯದೆ ಅವರನ್ನೇ ಸಿರಿಸಿರಿ ದಿಟ್ಟಿಸಿದ. ಅವರು ಕೈ ಹಿಡಿದುಕೊಂಡು ಮೈಬಾಗಿ ಕೇಳಿದರು “ ಹೇಗಿದ್ದೀರಿ ಡಾಕ್ಟರ್ ? ” ದನಿ ವಿಜಾತೀಯವಾಗಿತ್ತು.

ಚಂದ್ರಕಾಂತ್ ಮೌನವಾಗಿ ಬಿರುಗಣ್ಣ ನೋಟ ಬೀರಿದ.

“ ಡಾಕ್ಟರ್ !” ಸುತ್ತಲೂ ನಾಲ್ಕಾರು ದನಿಗಳು ಮೊಳಗಿದುವು.

ಮೈಯ್ಯಲ್ಲಿನ ಪ್ರಾಣಾಂತಕ ನೋವು ಮಾನಸಿಕ ಮಂಪರ ಮಾತಿನೆಳೆಯನ್ನು ಜಗ್ಗುತ್ತಿದೆ. ಸುತ್ತಲೂ ಇರುವವರ ಬಗ್ಗೆ ಕುತೂಹಲ ಮೂಡಿದರೂ ನೋಡಲು ಒಕ್ಕಣ್ಣು ನೋಟ ನೆರವು ನೀಡಲಿಲ್ಲವೇನೋ. ಬಿರುಗಣ್ಣು ನೋಟ ಪುನಃ ಸುತ್ತಲೂ ಹರಿಯಿತು. ಕಣ್ಣುಜ್ಜಿಕೊಳ್ಳಲೆಂದು ಕೈಯೆತ್ತಲು ಪ್ರಯತ್ನಿಸಿದರೆ ಆಗಲಿಲ್ಲ. ಎಡಗೈಯೆತ್ತಹೋದರೆ ಅದೂ ಆಗದು. ಎದೆಯ ಮೇಲೆ ಕೈಕಾಲುಗಳ ಮೇಲೆ ಮಣಭಾರ–ಉಹೂ, ದೈತ್ಯಭಾರ. ಸುತ್ತ ಮುತ್ತ ದೈತ್ಯ ಮಿಷನ್ನುಗಳು ಕೋಟೆಗಟ್ಟಿವೆ. ಎಲ್ಲಿ ನೋಡಿದರೂ ಡಾಕ್ಟರುಗಳ ಗಂಭೀರ ಮುಖ ...ಎಲ್ಲೂ ಗೆಲುವಿಲ್ಲ; ನಗುವಿಲ್ಲ; ಮಾತಿಲ್ಲ.

ಚಂದ್ರಕಾಂತ್ ಬಳಲಿ ಕಣ್ಣು ಮುಚ್ಚಿದ. ಎಡ ಬಲಗಳಿಂದ ಪುನಃ ಅನೇಕ ದನಿಗಳು ಮೊಳಗಿದುವು ...ಡಾಕ್ಟರ ! ಡಾಕ್ಟರ್ !!

ಚಂದ್ರಕಾಂತನಿಗೆ ಬಹಳ ಹೊತ್ತಿನ ಮೇಲೆ ಮೈಯರಿವು ಉಂಟಾಯಿತು. ಕ್ಷೀಣಿತ ದುಃಖಕಂಪಿತ ಸ್ವರ ಹೊರಬಿತ್ತು ‘ ಕಮಲೇಶ್ !’ ಅಕ್ಷರ ಅಕ್ಷರದಲ್ಲೂ ಮರಣಾಂತಕ ನೋವಿತ್ತು. ಒಕ್ಕಣ್ಣಿನಲ್ಲಿ ಕಂಬನಿ ಧಾರೆಧಾರೆಯಾಗಿ ಹರಿಯಿತು.

“ ಡಾಕ್ಟರ್, ಇಲ್ಲಿ ನಿಮ್ಮ ಮಕ್ಕಳಿದ್ದಾರೆ.”

ಡಾ|| ಥಾಮಸ್ ತಿಲಕ್ ಸ್ವರೂಪರನ್ನು ಕರೆತಂದು ಬಳಿಯಲ್ಲಿ ನಿಲ್ಲಿಸಿದರು. ತಾಯಿ ತಮ್ಮ ನಾದಿನಿ ಸ್ವರ್ಣಮಾಲಿನಿಯರೂ ಸನಿಹಕ್ಕೆ ಬಂದರು.

“ ಕಮಲೇಶ್........ಕಮಲೇಶ್ !” ನರಳುದನಿ ಕಂಪಿಸಿತು.

“ ಅಪ್ಪಾ !” ದನಿ ಗಡಗಡ ನಡುಗುತಿತ್ತು.

ಸ್ವರ್ಣಮಾಲಿನಿಯನ್ನೂ ಮಕ್ಕಳನ್ನೂ ಕುಟುಂಬ ವರ್ಗದವರನ್ನೂ ಸ್ವಲ್ಪ ಹಿಂದೆ ಸರಿಸಿ ಡಾಕ್ಟರುಗಳು ಬಳಿಗೈತಂದರು. ಇಳಿ ವಯಸ್ಸಿನ ತಾಯಿ ಕರುಳು ಕಿತ್ತು ಬರುವಂತೆ ರೋದಿಸುತಿದ್ದಳು. ಚಂದ್ರಕಾಂತ್ ತನ್ನ ಶಕ್ತಿಯನ್ನೆಲ್ಲಾ ಪ್ರಯತ್ನಪೂರ್ವಕವಾಗಿ ಒಟ್ಟು ಗೂಡಿಸಿ ಬಹಳ ಕಷ್ಟದಿಂದ ಹೇಳಿದ “ ನಾನಿನ್ನು....ಬದುಕಲಾರೆ....ಮಕ್ಕಳನ್ನು ನೋಡಿಕೊಳ್ಳಿ........ಕ....ಮ....ಲೇಶ್....ಕಮ....ಲೇಶ್.”

ದನಿ ಇನ್ನೂ ಕಮಲೇಶಳ ನಾಮಸ್ಮರಣೆಯಲ್ಲಿರುವಾಗಲೇ ಜರ್ಝರಿತ ಪಾಪ ಪೇಹವಲ್ಲಿ ವಾಸಿಸಲಾಗದ ಪ್ರಾಣಪಕ್ಷಿ ಹಾರಿ ಹೋಗಲು ಸುಮುಹೂ

ರ್ಗವನ್ನು ಅರಸುತ್ತಿತ್ತು. ಎದೆಯಲ್ಲಿ ಗುರುಗುಡು ಸದ್ದು ಏರಹತ್ತುತ್ತಲೇ ಡಾಕ್ಟರುಗಳು ಅಂತಿಮ ಸೇವೆಗೆ ಟೊಂಕ ಕಟ್ಟಿದರು. ಅನೇಕ ಹಸ್ತಗಳ ಸಹಕಾರದಿಂದ ಎಷ್ಟೋ ಮದ್ದುಗಳು ಮೈಯ್ಯನ್ನು ಸೇರಿದುವು. ಆದರೂ ಕಾಣದ ಕೈ ವಿಘಳಿಗೆಯಲ್ಲಿ ಹೃದಯವನ್ನು ಹಿಸುಕಿ ಬಿಟ್ಟಿತು.

ಡಾಕ್ಟರ್........

....ಮೂಡಣ ದಿಗಂತದಿಂದ ಅಡರಿ ಬಂದ ಅರುಣ ಕಿರಣಗಳು ಕ್ಷಣೇ ಕ್ಷಣೇ ಪ್ರಕಾಶಮಾನವಾಗುತ್ತಿವೆ.

....ಸುಪ್ರಭಾತವನ್ನು ನಲವಿಂದ ಹಾಡಿದ ಪಕ್ಷಿಗಳ ಇನಿಗಾನದಲ್ಲಿ ಚರಮ ಸಂದೇಶ ಹರಿದು ಬರುತ್ತಿದೆ.

ಅಧ್ಯಾಯ

೩೭

ನೀನೊಲಿದರೆ ಕೊರಡು ಕೊನರುವುದಯ್ಯಾ
ನೀನೊಲಿಯದಿರೆ ಹಯನು ಬರಡಹುದಯ್ಯಾ.

ಶತ ಶತ ಶತ ಶತಮಾನಗಳ ಹಿಂದೆ ಸ್ವಚ್ಛಂದವಾಗಿ ಹರಿದ ಅನುಭವ ವಾಣಿ ಚಿರಂತನವಾಗಿ ನಿತ್ಯ ನೂತನವಾಗಿ ನವನವೋಜ್ವಲವಾಗಿ ಕರ್ಣದೇಶಗಳ ಮೇಲೆ ಟಿಂಟಿಣಿನಾದಗೈಯುತ್ತಿದೆ.

ಬಿಳಿಯ ಹೊದಿಕೆಯಡಿ ಮಲಗಿದ ದೀರ್ಘದೇಹ ಆಯತಪ್ಪಿ ಉಸಿರಾಡುತಿತ್ತು. ಹಗಲಿರುಳೂ ಕ್ರೂರ ಮೃತ್ಯುವಿನೊಡನೆ ಸತತ ಹೋರಾಡಿದನಂತರ ಕಮಲೇಶ್ ಕಣ್ಣು ತೆರೆದಳು. ನೆತ್ತರು ಬಸಿದ ಮೈ ಬಿಳಿಚಿಕೊಂಡು ಗಾಯಗಳು ಊದಿ ನೀರು ಒಸರುತ್ತಿದೆ. ತುಟಿ ಒಣಗಿ ಸುಲಿದು ಸ್ಥಿತಿಗತಿಯನ್ನು ಸಾರಿ ಹೇಳುವ ರೀತಿ. ಭಯ ದೈನ್ಯ ಆಯಾಸಗಳಿಂದ ಕೂಡಿದ ಸ್ಥಿತಿ, ಸಹಸಾ ಶೀತವಾದ ನೋವಿನಿಂದ ಕೂಡಿದ ನೋಟ ಕಲ್ಲುಗಳನ್ನಾದರೂ ಕರಗಿಸುವಂತಿತ್ತು. ನೋಟ ತೃಪ್ತಿಯುತವಾಗಿ ಸುತ್ತ ಮುತ್ತ ಹರಿದಾಡಿ ಮೂರು ದಿನಗಳಿಂದ ಉಸಿರಿಡಿದು ಕಾದಿದ್ದ ತಾಯಿ ಮಕ್ಕಳು ಮತ್ತು ಕರ್ವೆ ಕುಟುಂಬದವರಿಗೆ ತುಸು ಜೀವದಾನ ಮಾಡಿತು. ಒಮ್ಮೆಲೇ ದುಃಖಪೂರ್ಣವಾದ ಹಲವಾರು ದನಿಗಳು ಹೊರ ಬಿದ್ದುವು. "ಮಾ ...! ಮಾ ....! ಕಮಲೇಶ್ ...! ಡಾಕ್ಟರ್ !"

"ಮಾ ...!" ಯಾತನಾ ಪೂರ್ಣವಾದ ದನಿ ಹೊರಬಿತ್ತು.

ಸ್ವರ್ಣಮಾಲಿನಿ ಹಣೆಯ ಮೇಲೆ ಕೈಯಿಟ್ಟು "ಕ ...ಮ....ಲೇ ಶ್ !" ದನಿ ಥರಥರ ಅದುರಿತು. ನಯನದ್ವಯಗಳಲ್ಲಿ ಗಂಗೆ ಯಮುನೆಯರು ಪ್ರವಹಿಸಿದರು. ಬಲವಾದ ಕೈಗಳ ಸಹಾಯದಿಂದ ನಿಂತ ದೇಹ ಅಲ್ಲೇ ಕುಸಿಯತೊಡಗಿತು. ಹೃದಯ ಸಿಡಿದೇಳುವಷ್ಟು ದುಃಖದ ಕುಂಭವಾಗಿ ಬಿಸುಸುಯ್ಲು ಏರಿ ಇಳಿಯುತಿತ್ತು.

ಕಮಲೇಶಳ ದೃಷ್ಟಿ ಸುತ್ತಲೂ ಹೊರಳಿ ಎಲ್ಲರ ಶೋಕ ತಪ್ತ ಮುಖ ಮುದ್ರೆಗಳನ್ನು ಸರಿಯಾಗಿ ನಿಟ್ಟಿಸಿತು. ಎಲ್ಲರ ಕಂಬನಿ ತುಂಬಿದ ನೋಟಗಳು ಇತ್ತಲೇ ನಿಟ್ಟಿಸುತ್ತಿವೆ. ಡಾ|| ಥಾಮಸ್ ಡಾ|| ನಂಜನ್ ದೇವ್ ಮಕ್ಕಳನ್ನು ತೆಕ್ಕೆಯುಲ್ಲಿಟ್ಟುಕೊಂಡು ಸಂತೈಸುತ್ತಾ. "ಡಾಕ್ಟರ್ ...ಹೇಗಿದ್ದೀರಿ?"

"ಹಾ....!"

"ನೀವು ಅಪಾಯದಿಂದ ಪಾರಾಗಿದ್ದೀರಿ ಡಾಕ್ಟರ್."

"ಮಾ....ಮಾ !"

"ಕಮಲೇಶ್ !" ಮಾಯಾಲೋಕದ ಕರೆಯಂತೆ ಕೇಳಿಸಿತು ಆ ಗದ್ಗದ ಸ್ವರ.

"ಮಾ...."

"ಚಂದ್ರಕಾಂತರೆಲ್ಲಿ ?" ದನಿ ಬಾವಿಯಾಳದಿಂದ ಹೊರ ಬಿದ್ದಂತೆ ಹೊರ ಬಿತ್ತು.

"ಅವರು ಇನ್ನೊಂದು ವಾರ್ಡಿನಲ್ಲಿದ್ದಾರೆ." ನುಡಿಯಲಾರದೆ ನುಡಿಯಿತು, ವ್ಯಥಿತ ಧ್ವನಿ.

"ಹೇಗಿದ್ದಾರೆ ?"

"ಉತ್ತಮವಾಗುತಿದ್ದಾರೆ." ಆತ್ಮವಂಚನೆಯಿಂದ ಅಂತರಂಗ ಕುದಿಯುತಿತ್ತು. ಡಾಕ್ಟರು ನಿಟ್ಟುಸಿರು ಬಿಟ್ಟರು. ಕಣ್ಣುಗಳಲ್ಲಿ ಅನಿರೀಕ್ಷಿತವಾಗಿ ರಂಗು ಮೂಡಿತು.

"ನಾನು ನೋಡಬಹುದೇ?"

"ಈಗಲೇ ಬೇಡ ಡಾಕ್ಟರ್. ಇನ್ನೂ ಕೆಲವುದಿನ ಹೋಗಲಿ...."

ಕಮಲೇಶ್ ನಿರಾಶಳಾಗಿ ಸಹನಾತೀತವಾದ ಯಾತನೆಯಿಂದ ಕಣ್ಮುಚ್ಚಿದಳು. ವೈದ್ಯಕೀಯ ಕ್ಷೇತ್ರದ ಕಟು ಭರವಸೆ ಶೀತ ದೇಶದ ಶೈತ್ಯಕ್ಕಿಂತಲೂ ಶೀತಲವಾಗಿ ಎದೆಯನ್ನು ಮುಟ್ಟಿತು ಅತೀಂದ್ರಿಯ ಪ್ರಜ್ಞೆ ಅನಾಹುತವಾಗಿದೆಯೆಂಬುದನ್ನು ಸಾರಿ ಹೇಳುತಿದ್ದರೂ ತೀರ ಮುಳುಗುವವರು ಮೇಲೆ ತೇಲುವ ಸಣ್ಣ ಕಡ್ಡಿಯನ್ನೂ ಸಹ ಅಪ್ಪುವಂತೆ ಆತ್ಮವಂಚನೆಯಿಂದ ಕಟು ಭರವಸೆಯನ್ನಪ್ಪಿಕೊಂಡಳು.

ದಿನಗಳುರುಳಿದಂತೆ ಸಕಲ ಔಷಧೋಪಚಾರಗಳಿಂದ ಪೈ ಮೇಲಿನ ಗಾಯುಗಳು ಮಾಗಿ, ಪ್ಲಾಸ್ಟರ್ ಬಿಗಿದ ಬಲಗೈ ಬೆರಳುಗಳು ಆಡುವಂತಾ ದುವು. ಆದರೆ ಶರೀರದ ಅಧೋಭಾಗ ಇನ್ನೂ ನಿಶ್ಚೇತನವಾಗಿಯೇ ಉಳಿದಿದೆ. ಕಾಲುಗಳನ್ನು ಮುಟ್ಟಿದರೂ ಕಚಗುಳಿಯಿಟ್ಟರೂ ಅವಳಿಗೆ ತಿಳಿಯುವುದಿಲ್ಲ.

ದಿನವೂ ಪಾದಗಳನ್ನು ಮುಟ್ಟಿ ತುರಿಸಿ "ನಿಮಗೆ ತಿಳಿಯುತ್ತದೆಯೇ ಡಾಕ್ಟರ್ ?" ಎಂದು ಹಿರಿಯ ಡಾಕ್ಟರುಗಳು ಆಸಕ್ತಿಯಿಂದ ಪ್ರಶ್ನಿಸುವರು. "ತಿಳಿಯುತ್ತದೆ" ಎಂಬ ಮಹತ್ತ್ವಾದ ಉತ್ತರದ ನಿರೀಕ್ಷಣೆಯಲ್ಲೇ ಆ ಪ್ರಶ್ನೆ ಹೊಮ್ಮುತ್ತದೆ. ಆದರೆ ಅವಳಿಂದ ಸಲಸಲವೂ ಹೊಮ್ಮುವುದು ಒಂದೇ ರೀತಿಯ ಅತ್ಯಂತ ನಿರಾಶಾಯುಕ್ತ ಉತ್ತರ "ಇಲ್ಲ ಸರ್."

ಉತ್ತರ ಸಂಕ್ಷಿಪ್ತವಾಗಿ ಹೊಮ್ಮಿದರೂ ಅಜ್ಞಾತ ಶಂಕೆಯಿಂದ ಹೃದಯ ಜರ್ಝರಿತವಾಗಿದ್ದುದನ್ನರಿತು ಎಲ್ಲರ ಒಡಲೂ ಸಂಕಟದಿಂದ ತುಂಬಿಕೊಳ್ಳು ವುದು.

"ಬೆನ್ನೆಲುಬಿಗೆ ತಾಗಿದ ಪೆಟ್ಟಿನಿಂದ ಹಾಗಾಗಿದೆ. ಕೆಲವು ಕಾಲ ಕಾದು ನೋಡೋಣ." ಎಂಬುದು ಹಿರಿಯ ಡಾಕ್ಟರುಗಳ ಗಗನ ಸದೃಶ ಭರವಸೆ.

ಸ್ವರ್ಣಮಾಲಿನಿ ಹೇಮರತಿಯರು ಅಹೋರಾತ್ರಿ ಬಳಿಯಲ್ಲಿದ್ದರೂ ಚಂದ್ರಕಾಂತನ ವಿಷಯವಾಗಿ ಚಕಾರ ಎತ್ತದುದರಿಂದ ಆತನಿಲ್ಲವೆಂಬುದು ಅವಳ ಅತೀಂದ್ರಿಯ ಪ್ರಜ್ಞೆಗೆ ಖಚಿತವಾಗಿತ್ತು. ತನಗೆ ತಾನೇ ಅಂಕುಶ ವಾಗಿ ತನುಮನಗಳನ್ನು ಕೃಷ್ಣಾರ್ಪಣ ಮಾಡಿಕೊಂಡರೂ ಸಂಸಾರ ಬಂಧನ ತನಗರಿಯದಂತೆಯೇ ಭೂತಳಕ್ಕೆ ಜಗ್ಗಿ, ತನ್ನವರ ಬಳಿಗೆ ನೂಂಕುತ್ತದೆ. ಒಂಪೆಡೆ ವೃದ್ಧ ಜನನಿ, ಇನ್ನೊಂದೆಡೆ ಅನಾಥ ಮಕ್ಕಳು, ಮೇಲಾಗಿ ತನ್ನ ಕರುಣಾಜನಕ ಸ್ಥಿತಿ ಒಡಲಿಗೆ ಸಂಕಟವನ್ನೂ, ಮನಸ್ಸಿಗೆ ದುಃಖವನ್ನೂ ಹೇರಳವಾಗಿ ತುಂಬುತ್ತದೆ.

ಮುಂದೇನು ?

ಹಿರಿಯ ಪ್ರಶ್ನೆ ಹಗಲೂ ರಾತ್ರಿ ಹಿಂಡು ತಿನ್ನುವುದು ಎಷ್ಟೇ ಪ್ರಯತ್ನ ಪಟ್ಟರೂ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಸಾಧ್ಯವಾಗದ್ದು ಎಡ ಬಲಗಳಲ್ಲಿ ವೃದ್ಧ ಜನನಿ ಮುಗ್ಧ ಮಕ್ಕಳು ಕಂಬನಿಗರೆದರೆ ತಾನೂ ಮಗುವಿನಂತಾಗಿ ಕಂಬನಿಗರೆಯುವಳು. ಹೇಮರತಿ ಮಾವಿಯ ಕಂಬನಿಗೆ

ಪ್ರತಿಯಾಗಿ ಕಂಬನಿಯ ಕಾಣಿಕೆಯನ್ನರ್ಪಿಸುವಳು. ಆತ್ಮಾರಾಂ ಕರ್ವೆಯ ಸಂಕಟಕ್ಕೆ ಪ್ರತಿ ಸಂಕಟವನ್ನು ತೋಡಿಕೊಳ್ಳುವಾಗ ಹೃದಯ ಬಿರಿಯುವಂತಾಗುವುದು. ಚಿತ್ರಸೇನ ಮರೆಯಲ್ಲಿ ಮಗುವಿನಂತೆ ಅಳುತಿದ್ದ. ಮಾಲತಿಯ ಕಂಬನಿ ಕೋಡಿಗಟ್ಟಿ ಹರಿಯುತಿತ್ತು. ತನ್ನ ಮರಣ ಸಂಕಟದಲ್ಲೂ ಸುಂದರ ಸೇನನ ಕ್ಷೇಮವನ್ನು ವಿಚಾರಿಸಿ ಕೊಳ್ಳುವಳು ಬಸಂತ್ ಕೆಲಸಕ್ಕೆ ಶರಣು ಹೊಡೆದು ಸಕಲ ಸೇವೆಗೆ ಸಿದ್ಧನಾದ ಹಗಲೂ ರಾತ್ರಿ ಅವನು ಮಾಡುತಿದ್ದ ಸೇವೆಗೆ ಮೇರೆಯೇ ಇಲ್ಲ. ಅವಳ ಮಗ್ಗುಲನ್ನು ಬಿಟ್ಟು ಅವನು ಕದಲುವ ಯೋಚನೆಯನ್ನು ಸಹ ಮಾಡಲಿಲ್ಲ ಸ್ನಾನ ಊಟ ಪಾನಾದಿಗಳು ಅಲ್ಲೇ ನಡೆದುವು. ಮಕ್ಕಳು ತಾಯಿ ಆತ್ಮಾರಾಂ ಕುಟುಂಬ ಅಹೋರಾತ್ರಿ ಸೇವೆಗೆ ಕಂಕಣ ಬದ್ಧರಾಗಿ ನಿಂತರು.

ಆದರೂ....

ಚಂದ್ರಮುಖಿ ಸಂಸಾರ ಸಹಿತ ಬಂದು ನಿಂತಳು ನಾಲ್ವರು ಹೆಣ್ಣು ಮಕ್ಕಳ ಸಹಿತ ಸತ್ಯಭಾಮೆ ಓಡಿಬಂದಳು. ಮನೆ ಜನ ಭರಿತವಾಯಿತು. ಯಾರಿದ್ದರೂ ಯಾರು ಬಂದರೂ ಆ ಕಾಣದ ಕಠೋರ ದುರ್ವಿಧಿ ಹಿಡಿದ ಹಿಡಿತ ಸಡಿಲಗೊಳಿಸಲಿಲ್ಲ.

ಮಕ್ಕಳನ್ನು ಎಡಗೈಯಿಂದ ಅಪ್ಪಿಕೊಂಡು "ನಿಮ್ಮನ್ನು ನೋಡಿದರೆ ಬಿಟ್ಟು ಹೋಗಲು ಮನಸ್ಸು ಬರುವುದಿಲ್ಲ. ಆದರೂ ಈ ಸ್ಥಿತಿಯಲ್ಲಿ ಬದುಕಲು ಸಹ ಮನಸ್ಸು ಬರುವುದಿಲ್ಲ." ಎಂದು ಅವಳ ಗದ್ಗದವಾಣಿ ಹೊರಬಿದ್ದಾಗ ಎಲ್ಲರ ಎದೆಗಳಲ್ಲೂ ಸಂತಾಪದ ಉಸಿರು ಹರಿದಾಡಿತು. ತನಗಾಗಿ ಕಣ್ಣೀರಿಡುವ ತನ್ನವರನ್ನು ಸಂತೈಸಬೇಕಾದರೆ ಧ್ಯಾನಾರೂಢಳಾಗುವುದೊಂದೇ ದಾರಿ. ಅಂತಹ ಪ್ರಸಂಗ ಬಂದಾಗಲೆಲ್ಲಾ ಅವಳು ಮಾಡುತಿದ್ದುದು ಅದೇ.

ಅಪಘಾತಕ್ಕೀಡಾದ ಹದಿಮೂರನೆಯ ದಿನ ಡಾ|| ಥಾಮಸ್‌ರವರಿಗೆಂದಳು ಕಮಲೇಶ್ "ಲೆಮಿನೆಕ್ಟಮಿ (LAMINECTOMY) ಆಪರೇಶನ್ ಮಾಡಿ ನೋಡಿರಿ. ಆಗಲಾದರೂ ದೇವರು ದಯಾಮಯನಾದರೆ ಬದುಕಿಕೊಳ್ಳುವೆ." ದನಿ ಸಂಕಟದ ಊಟೆಯಾಗಿತ್ತು. ಹಿರಿಯ ವೈದ್ಯರು ಅವಳೊಂದಿಗೆ ಸಮಾಲೋಚನೆ ನಡೆಸಿದನಂತರ ಒಪ್ಪಿಕೊಂಡರು. ಆಪರೇಶನ್ನಿಗೆ

ಒಳಪಡುವ ಮುನ್ನ ಕಮಲೇಶ್ ಭಗವಂತನಿಗೆ ದೀರ್ಘ ಪ್ರಾರ್ಥನೆ ಸಲ್ಲಿಸಿದಳು. ಆ ಕಾಣದ ದೇವರಿಗೆ ಕಿಸಿಕಿಗೆ ಹಿಡಿಯುವಷ್ಟು ಪ್ರಾರ್ಥನೆ ಹರಕೆಗಳು ಸಲ್ಲಿಸಲ್ಪಟ್ಟುವು. ದೇವ ದೇವಿಯರ ದೇವಾಲಯಗಳಲ್ಲಿ ನಂದಾದೀಪಗಳು ಉರಿದುವು. ಕತ್ತಿಗೆ ಕೈಹಚ್ಚುವ ಮುನ್ನ ಡಾ|| ಚಂದನ್ ಮೇಜಿನ ಬಳಿ ಮಂಡಿಯೂರಿ ಮನಃಪೂರ್ವಕವಾಗಿ ಪ್ರಾರ್ಥಿಸಿದರು. ಅನೇಕ ಹಿರಿಯ ಡಾಕ್ಟರ ಸಮಕ್ಷಮದಲ್ಲಿ ಅತ್ಯಂತ ಉತ್ತಮತರವಾದ ಉಸ್ತುವಾರಿಯಲ್ಲಿ ಲೆಮಿನೆಕ್ಟಮಿ ಆಪರೇಶನ್-ಬೆನ್ನು ಹುರಿಯ ಒಂದು ವಿಶಿಷ್ಟ ಶಸ್ತ್ರಕ್ರಿಯೆ-ಮಾಡಿದರು. ಅದರ ಗುಣ ಎರಡು ವಾರಗಳಲ್ಲಿ ತಿಳಿಯಲಿದೆ. ದಿನವೂ ಕಾಲು ಮುಟ್ಟಿನೋಡಿ " ನಿಮಗೆ ತಿಳಿಯುತ್ತದೆಯೆ ಡಾಕ್ಟರ್ ?" ಎನ್ನುವರು.

ಸಪ್ಪೆ ಮೋರೆಯಿಂದ ಉತ್ತರ ಹೊರ ಬೀಳುವುದು " ಇಲ್ಲ."

ಪ್ರತಿ ಘಳಿಗೆಯೂ ಕುಟುಂಬ ವರ್ಗದವರು ಕಾಲು ತುರಿಸಿ-ಚಿವುಟಿ ಕೇಳುವರು " ನಿಮಗೆ ಈಗ ತಿಳಿಯುತ್ತದೆಯೆ ?"

....ಈಗ....ಈಗ....ಆ ' ಈಗ 'ವು ಬೆಲೆಯಿಲ್ಲದೆ ಹೋದೀತೆಂದು ಡಾಕ್ಟರುಗಳು ಸಹ ಊಹಿಸಿರಲಿಲ್ಲ. ಯಾರ ಶುಭ ಚರಣಗಳಲ್ಲಿ ಆತ್ಮಾರ್ಪಣೆ ಮಾಡಿಕೊಂಡಳೋ ಆ ಪರಮಾತ್ಮನೂ ಸಹ ಕಿವುಡಾದಾನೆಂದು ಆಕೆ ಭಾವಿಸಲಿಲ್ಲ.

ದಿನಗಳು ಉರುಳಿದುವು. ದುಃಖ ದುಗುಡ ಆತಂಕಗಳ ಮೂಸೆಯಲ್ಲಿ ಎರಡು ವಾರಗಳ ಗಡು ಕಳೆದು ಹೋಯಿತು. ಅದರೊಂದಿಗೆ ಇದ್ದ ಒಂದು ಆಶಾಕಿರಣವು ಸಹ ನಂದಿತು. ಎಲ್ಲರ ಮುಖಗಳಲ್ಲೂ ದುಃಖತಪ್ತ ಕಪ್ಪು ಛಾಯೆ ದಟ್ಟೈಸಿತು.

" ನನಗೇನು ಹೇಳುತ್ತೀರಿ ?" ಕಮಲೇಶ್ ಉದ್ವಿಗ್ನಳಾಗಿ ಕೇಳಿದಾಗ ಡಾ|| ಥಾಮಸ್ ಚಿಂತೆಗೊಳಗಾಗಿ ಆಕೆಯ ಶುಷ್ಕ ವದನಾರವಿಂದವನ್ನು ನೋಡಲಾರದೆ ನಿಟ್ಟುಸಿರು ಬಿಟ್ಟರು.

" ದೇವರಿದ್ದಾನೆ ..." ಎಂದರು ಚಂದನ್. ಮುಂದೆ ಮಾತು ಹೊರಡಲಿಲ್ಲ.

" ಗಡು ಕಳೆಯಿತು. ಇನ್ನು ಕಾಲುಗಳು ಸಜೀವಗೊಳ್ಳುತ್ತವೆಂಬುದು ಕನಸಿನ ಮಾತು. ಲೆಮಿನೆಕ್ಟಮಿ ಆಪರೇಶನ್ ಆದಮೇಲೆ ಅವು ಸಜೀ

ತನಗೊಳ್ಳುವುದಿದ್ದರೆ ಎರಡು ವಾರಗಳೊಳಗಾಗಿ ಆಗಲೇಬೇಕಿತ್ತು." ದುಃಖ ಪೂರ್ಣವಾದ ದನಿ ಹೊರ ಬಿದ್ದಾಗ ಮುಖಮಂಡಲ ಬಾಡಿ ಕಳಾಹೀನವಾಯಿತು.

ಹಿರಿಯ ಡಾಕ್ಟರುಗಳ ಕಣ್ಣುಗಳೂ ಸಹ ರಂಗು ತಳೆದುವು.

ಮರುಘಳಿಗೆಯಲ್ಲಿ ತಮ್ಮನ್ನು ತಾವು ಸುಧಾರಿಸಿಕೊಂಡು ಡಾ|| ಥಾಮಸ್ ನುಡಿದರು "ದುಃಖಿಸುವುದರ ಫಲ ನಿಶ್ಶಕ್ತಿ ವಿನಾ ಇನ್ನೇನಿಲ್ಲ. ಈಗಲೇ ತಾಳ್ಮೆಯನ್ನು ಕಳೆದುಕೊಳ್ಳಬೇಡಿರಿ. ನಮ್ಮಿಂದ ಏನಾದೀತೋ ನೋಡೋಣ."

ವೃದ್ಧ ಜನನಿ ಮಗಳ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಕಂಬನಿಯನ್ನು ತೀಡಿ ಸಾಂತ್ವೈಸುತ್ತಲೇ ತಾನೂ ಕಂಬನಿಗರೆದಳು. ಮಕ್ಕಳ ಕಣ್ಣುಗಳಲ್ಲೂ ಕಂಬನಿಯೊಸರಿತು. ಕಮಲೇಶ್ ದುಃಖ ದುಗುಡಗಳನ್ನು ಬದಿಗೊತ್ತಿ ತನ್ನನ್ನು ತಾನು ಸುಧಾರಿಸಿಕೊಂಡು ಒಂದೇ ನಿರ್ಧಾರದಿಂದ ನುಡಿವಳು "ಎಲ್ಲರಿಗೂ ನನ್ನಿಂದಾಗಿ ದುಃಖವಾಗಬಾರದು...."

ಅವಳನ್ನು ಮುಂದುವರಿಯಗೊಡದಂತೆ ಡಾ|| ಥಾಮಸ್ ನಡುವೆ ಬಾಯಿ ಹಾಕಿದರು

"ಫಿಜಿಯೋ ಥೆರಪಿ ಚಿಕಿತ್ಸೆ ತೆಗೆದುಕೊಂಡು ನೋಡಿರಿ."

"ಗುಣವಾಗುವ ಯೋಗವಿದ್ದಿದ್ದರೆ ಇಷ್ಟರೊಳಗಾಗಿ ಆಗಲೇ ಬೇಕಿತ್ತು ಮುಖ್ಯವಾಗಿ ಭಗವಂತನಿಗೆ ಮನಸ್ಸಿಲ್ಲ."

ಬಾಗಿಲ ಬಳಿ ನಿಂತ ಬಸಂತಸೇನ ತಲೆಬಾಗಿ ಮೌನವಾಗಿ ರೋದಿಸಿದ.

ಫಿಜಿಯೋ ಥೆರಪಿ ಚಿಕಿತ್ಸೆ ನೀಡಲು ವೈದ್ಯರಿಗೆ ಕರೆ ಹೋಯಿತು. ಅವರು ಬಂದು ಅಂಗಾಂಗಗಳಿಗೆ ವ್ಯಾಯಾಮ ಮಾಡಿಸಹತ್ತಿದರು. ಸಹನಾತೀತವಾದ ನೋವು ಮೂಡಿ ಕಮಲೇಶ್ ಚೀರಿಕೊಳ್ಳುತಿದ್ದಳು. ಆಗ ಅನೇಕ ಬಾರಿ ಚಂದ್ರಕಾಂತನನ್ನು ನೆನೆದುಕೊಂಡು "ನೀವು ಸತ್ತು ಸ್ವರ್ಗಸುಖಿಯಾಗಿದ್ದೀರಿ. ನಾನು ಇದ್ದು ನರಕವಾಸಿಯಾಗಿದ್ದೇನೆ." ಎನ್ನುವಳು. ಆಗ ಯಾರ ತುಟಿಯೂ ಬಿರಿಯುತ್ತಿರಲಿಲ್ಲ. ಸಂತಾಪದ ಉಸಿರು ಸದ್ದಿಲ್ಲದೆ ಆಡುತಿತ್ತು. ಮನಸ್ಸಿನೊಳಗೆ ಎಲ್ಲರೂ ಸಂಕಟಪಟ್ಟುಕೊಳ್ಳುವರು.

ಫಿಜಿಯೋ ಥೆರಪಿಯೂ ಆಯಿತು. ಅಂಗ ಸಾಧನೆಯೂ ನಡೆಯಿತು. ಆಯುರ್ವೇದ ಚಿಕಿತ್ಸಕರ ತೈಲ ಚಿಕಿತ್ಸಾ ವಿಧಾನವೂ ನಡೆಯಿತು. ಯಾವುದ

ರಲ್ಲೂ ಪ್ರಯೋಜನ ಕಾಣಲಿಲ್ಲ ತೀಕ್ಷ್ಣಬುದ್ಧಿಯುಳ್ಳ ಆಕೆಯ ಅಂತರಂಗ ವ್ಯಾಮೋಹ ಮುಕ್ತವಾಗಿ ವಿಭ್ರಮೆ-ಸಂಕಟ-ದುಃಖಗಳು ದಿಕ್ಕೆಟ್ಟು ಫಲಾಯನ ಗೈದುವು. ರುದ್ರಮಧುರ ಸನ್ನಿವೇಶದಲ್ಲಿ ಸಾವು-ಉಳಿವುಗಳ ಅಹೋರಾತ್ರಿಯ ಸಂಘರ್ಷಣೆಯಿಂದ ಮನೋರಾಜ್ಯದಲ್ಲಿ ದೃಢತೆ ಬೆಳೆದು ಸಜಲ ನೇತ್ರಗಳು ಉಜ್ವಲ ಕಾಂತಿಯಿಂದ ಬೆಳಗಿದುವು. ಅಸ್ತಮಾನ ಸೂರ್ಯಭಗವಾನನಂತೆ ಅದ್ಭುತ ಶಾಂತಿ-ಕಾಂತಿಗಳಿಂದ ಮುಖ ಮಂಡಲ ಶೋಭಾಯಮಾನವಾಯಿತು. ಯಾವ ವಿಧವಾದ ಸಂವೇದನೆಯೂ ಅನುಭವಕ್ಕೆ ಬಾರದಷ್ಟು ಅಂತಃಶ್ಚೇತನ ಸ್ವರ್ಗೀಯ ಸೌರಭಸಿಕ್ತವಾಯಿತು.

ಲೋಕ ನಿಯಮ ಎಷ್ಟೊಂದು ನಿಯುಕ್ತವಾದುದೋ ಅಷ್ಟೇ ವಿಚಿತ್ರವಾದುದು. ಒಳಿತು-ಕೆಡಕು, ಪ್ರಗತಿ-ದುರ್ಗತಿ, ದಯೆ-ದಾಕ್ಷಿಣ್ಯಗಳ ಪರಿಭೇದವೇ ಇಲ್ಲ. ಅಂತಲೇ ಶಾಂತಿ ಸಂವಿಧಾನಗಳೂ ಇಲ್ಲ.

ಮುರುಳೀಧರ ದಲ್ದಾಲಿ ಪತ್ನೀ ಸಮೇತನಾಗಿ ಬಂದು ನೋಡಿಕೊಂಡು ಹೋದ ಇನ್ನು ಮುಂದೆ ಸಂಸಾರದ ಭಾರ ಹೊರುವುದಾರೆಂಬ ಪ್ರಶ್ನೆ ಎದ್ದಾಗ ಆತ ಸುಮ್ಮನೆ ತಲೆ ಕೆರೆದುಕೊಂಡ. ಭಗವಂತ ತನ್ನನ್ನು ಬಲವಂತವಾಗಿ ನಿವೃತ್ತಿಗೊಳಿಸಿದ್ದಾನೆಂಬುದು ಮನೋಗತವಾದಾಗ ಅದಕ್ಕಾಗಿ ಸ್ವಂತ ಏರ್ಪಾಡು ಮಾಡಿಕೊಳ್ಳುವುದು ಹಿತವೆಂದೆನಿಸಿ ಚಂದ್ರಕಾಂತನ ದುಡಿಮೆಯಲ್ಲಿ ಕೆಲವಂಶ ಇಳಿ ವಯಸ್ಸಿನ ತಾಯಿಗುಳಿಸಿ ಉಳಿದುದನ್ನು ತನ್ನ ಲೆಖ್ಖಕ್ಕೆ ಜಮಾ ಮಾಡಿಸಿ ಇನ್ಶ್ಯೂರೆನ್ಸ್ ಹಣ, ತನ್ನ ದುಡಿಮೆಯ ಭಾಗ ಎಲ್ಲವನ್ನೂ ಒಟ್ಟು ಗೂಡಿಸಿ ತನ್ನ ಮಕ್ಕಳಿಗೆ ತಾಯಿಯನ್ನು ಗಾರ್ಡಿಯನ್ ಆಗಿ ಮಾಡಿದಲ್ಲಿ ಅನ್ನಕ್ಕೆ ಕೊರತೆಯಿಲ್ಲವೆಂಬುದನ್ನು ಗ್ರಹಿಸಿ ಮನಸ್ಸಿಗೆ ಸಮಾಧಾನ ತಂದುಕೊಂಡಳು, ಕಮಲೇಶ್.

"ಏನೇ ಇರಲಿ, ಅದರ ಯೋಚನೆ ಬೇಡ. ಮನಸ್ಸಿಗೆ ಚಿಂತೆ ಹಚ್ಚಿಕೊಂಡು ಮೈ ಕೆಡಿಸಿಕೊಳ್ಳಬೇಡ. ಜೀವದಿಂದ ಉಳಿದಿದ್ದೀಯಲ್ಲಾ ಅಷ್ಟೇ ಸಾಕು." ಎಂದು ವೃದ್ಧ ಜನನಿ ಗೋಳಾಡಿದಳು. ತನ್ನವರು ತೀರಿಕೊಂಡಾಗ ಗೋಳಾಡುವಷ್ಟು ಗೋಳಾಡಿ ಅನಂತರ ವೇದಾಂತ ಹೇಳಿ ಸುಮ್ಮನಾಗುವಂತೆ ಆಗಿತ್ತು ಸ್ವರ್ಣಮಾಲಿನಿಯ ಸ್ಥಿತಿ.

ಒಂದು ಕಾಲದಲ್ಲಿ ಈ ಜೀವನ ಲೀಲೆ ಎಷ್ಟೊಂದು ಅದ್ಭುತವೋ ಅಷ್ಟೇ ದಾರುಣವಾದುದು ಎಂದು ಯಾರಾದರೂ ಹೇಳಿದ್ದರೆ ಅದಕ್ಕೇನೆನ್ನಬಹುದಾ

ಗಿತ್ತೊ ?

ಮಕ್ಕಳು ನುಗ್ಗುಲು ಬಿಟ್ಟು ಕದಲಲಿಲ್ಲ. ಬಸಂತ್ ತಲೆ ಬೆಸೆಯಿಂದ ಎದ್ದೇಳಲಿಲ್ಲ. ಸ್ವರ್ಣಮಾಲಿನಿ ಹೇಮರತಿಯರು ಪುರಾಣ ಪಠಣ ತಪ್ಪಿಸಲಿಲ್ಲ. ಚಿತ್ರಸೇನ ತನ್ನ ಆಫೀಸಿಗೆ ಮುಖ ಹಾಕಲಿಲ್ಲ. ಮಾಲತಿ ಮಗುವಿನೊಡನೆ ಇಲ್ಲೇ ಕೂಡುವಳು. ಆತ್ಮಾರಾಂ ಕರ್ವೆ ಕರ್ತವ್ಯ ದುಃಖಗಳ ಸಂಘರ್ಷಣೆ ಯಿಂದ ಚಿಂತಾಕ್ರಾಂತನಾಗಿ ಒಳಗೂ ಹೊರಗೂ ತಿರುಗಾಡುತ್ತಾ ಕಮಲೇ ಶಳಿಗೆ ಮಕ್ಕಳಿಗೆ ತಾಯಿಗೆ ಸಮಯೋಚಿತವಾಗಿ ಆಧ್ಯಾತ್ಮಿಕವಾಗಿ ಹಿತವಚನ ಗಳನ್ನು ಹೇಳಿ ದುಃಖದ ಕಟ್ಟೆಗೆ ಅಷ್ಟುಗಟ್ಟಿ ಹಾಕುತಿದ್ದರು. ಏನಾದರೂ ವಿಧಿ ಮಣಿಯಲಿಲ್ಲ.

" ನಾನು ಈ ಸ್ಥಿತಿಯಲ್ಲಿ ಬದುಕಲೇ ?"

" ಭಗವಂತನ ಇಚ್ಛೆ !"

" ಭಗವಂತನ ಇಚ್ಛೆಯೊಂದೇ ಅಲ್ಲ. ನನ್ನ ಇಚ್ಛೆಯೂ ಸಹ ಉಂಟು."

" ಇರಲಿ....ದೇವರು ದೊಡ್ಡವನು. ನಾನು ಓದು ಬಿಟ್ಟಾದರೂ ನಿಮ್ಮ ಸೇವೆ ಮಾಡುವೆ " ಚೇತನಾ ಕಂಬನಿ ಸುರಿಸುತ್ತಲೇ ನುಡಿದಳು.

" ಹ ಗೆಂದರೆ ಹೇಗೆ ಚೇತನಾ ? ನಿನ್ನ ಭವಿಷ್ಯವನ್ನೂ ನೋಡಿಕೊಳ್ಳ ಬೇಕಷ್ಟೆ ?" ಸಂಕಟಪೂರ್ಣವಾದ ದನಿಯಲ್ಲಿ ಕೇಳಿದಳು ಕಮಲೇಶ್.

" ಓದು ಒಂದಿಷ್ಟು ನಿಧಾನವಾದೀತು. ಅದರಿಂದ ನನಗೇನೂ ತೊಂ ದರೆಯಾಗುವುದಿಲ್ಲ. ನೀವು ನೆಮ್ಮದಿಯಿಂದಿದ್ದರೆ ಸಾಕು."

ತಿಲಕ್ ಸ್ವರೂಪರು ಗೋಳಾಡಿ ಅತ್ತು ನುಡಿದರು " ನಮಗೆ 'ಅಮ್ಮಾ' ಬೇಕು. " ದುಃಖ ದುಗುಡ ವಿಸ್ಮಯಗಳ ಗಣಿಯಾಗಿ ಮಗಳನ್ನು ಎದೆಗೆ ಯಿಂದ ಎದೆಗಪ್ಪಿಕೊಂಡು ಕೇಳಿದಳು ಕಮಲೇಶ್ " ಎದ್ದು ಕೂಡುವಂತೆ ಯೂ ಇಲ್ಲ, ಹೀಗಿದ್ದು ಬದುಕಿ ಏನು ಪ್ರಯೋಜನ ?"

" ಮಲಗಿದ್ದರೂ ಸಾಕು."

" ಎಷ್ಟು ಕಾಲ ಹೀಗಿರಲು ಸಾಧ್ಯ ?"

" ಹೇಗಾದರೂ...."

" ಕ್ರಮೇಣ ಸರಿಹೋದೀತೇನೋ....ದೇವರು ನಿನ್ನ ಬಗ್ಗೆ ಅಷ್ಟು ನಿರ್ದಯನೇ ?" ಸ್ವರ್ಣಮಾಲಿನಿ ದುಃಖಪೂರ್ಣ ದನಿಯಲ್ಲಿ ನುಡಿಯುವಾಗ

ಕಣ್ಣುಗಳು ಹನಿತುವು.

" ಇನ್ನು ಸರಿ ಹೋಗುವುದು ಸಾಧ್ಯವೇ ಇಲ್ಲ ಮಾ. ಕೊನೆಯ ಪಕ್ಷ ಎದ್ದು ಕೂಡುವಂತಿದ್ದರೆ...." ಮಾತನ್ನು ಅಷ್ಟಕ್ಕೆ ತುಂಡುಗಡಿದು ಒಂದು ಘಳಿಗೆ ಯೋಚಿಸಿ " ಮಾ, ನಾನು ಯೋಚಿಸಿದ್ದೇ ಒಂದು. ಆದದ್ದೇ ಒಂದು. ನಿಮ್ಮನ್ನು ಸುಖವಾಗಿಡಲು ನನ್ನ ಹಣೆಯಲ್ಲಿ ಬರೆಯಲಿಲ್ಲ. ಬಹುಶಃ ಅದು ಭಗವಂತನ ಇಚ್ಛೆಯಾಗಿರಲಿಲ್ಲ "

ಇಂದೂ, ಈಗಲೂ, ಈಕ್ಷಣವೂ, ಅಂತರಂಗದಲ್ಲಿ ರುದ್ರ ಲಾಸ್ಯವಾಡುವ ಭಾವತರಂಗಿಣಿಯ ನೂಪುರಗಳ ಟಿಂಟಿಣಿನಾದ ಸ್ಪಷ್ಟವಾಗಿ ಕೇಳಿಸುತ್ತಲೇ ಇದೆ. ಆದರೆ....ಆದರೆ, ಅದೆಲ್ಲವೂ ವ್ಯತಿರಿಕ್ತವಾಗಿ ; ಅಲ್ಲ–ಅಲ್ಲ. ಅಲ್ಲವೇ ಅಲ್ಲ ; ಸ್ವರ್ಗಕ್ಕೆ ಸೋಪಾನವಾಗಿ.

" ದಯಮಾಡಿ ಯಾವ ಚಿಂತೆಯನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ." ದುಃಖಕಂಪಿತಧ್ವನಿಯಲ್ಲಿ ನುಡಿದಳು ತಾಯಿ. ಕಣ್ಣೀರು ಕೆನ್ನೆಗಳನ್ನು ತೊಯ್ಸಿತು.

" ಇನ್ನು ಇದೆಲ್ಲಾ ಯಾವ ವೈಭವಕ್ಕಾಗಿ ?"

ಸ್ವಲ್ಪಹೊತ್ತು ಯಾರೂ ಮಾತಾಡಲಿಲ್ಲ. ಏನು ಮಾಡಿದರೆ ಸರಿಹೋದೀತೆಂಬ ಚಿಂತನೆಯಲ್ಲಿದ್ದಳು ಸ್ವರ್ಣಮಾಲಿನಿ. ಏಕಾಗ್ರ್ಯದಿಂದ ತಾಯಿಯ ಕೊರಳನ್ನು ಕಟ್ಟಿಕೊಂಡು ದುಃಖ ಮಿಶ್ರಿತದನಿಯಲ್ಲಿ ನುಡಿದಳು ಕಮಲೇಶ್. " ನನ್ನಿಂದ ನೀವು ದುಃಖಕ್ಕೆ ಒಳಗಾಗಬಾರದು. ನೀವು ಸುಖವಾಗಿದ್ದರೆ ಮಾತ್ರ ನನ್ನ ಆತ್ಮಕ್ಕೆ ಶಾಂತಿ. ಇಲ್ಲದಿದ್ದಲ್ಲಿ ನನಗೆ ತ್ರಿಶಂಕು ಸ್ವರ್ಗವೇ ಗತಿ."

ಹೃದಯ ಸಂಪುಟವು ಸಿಡಿದೊಡೆಯುವಷ್ಟು ದುಃಖದ ಕಡಲುಕ್ಕಿ ಹರಿಯಿತು. ಮಗಳ ಎದೆಯ ಮೇಲೆ ಮುಖವನ್ನು ಹುದುಗಿಟ್ಟು ಕಂಬನಿ ಮಿಡಿದಳು ಸ್ವರ್ಣಮಾಲಿನಿ. ತಾಯಿಯ ತಲೆ ಬೆನ್ನುಗಳನ್ನು ನೇವರಿಸಿ ಬಹು ಕಷ್ಟದಿಂದ ಸಂತೈಸಿದಳು ಕಮಲೇಶ್.

ಚಂದ್ರಕಾಂತನನ್ನು ಕರೆದುಕೊಂಡ ಭಗವಂತ ನನ್ನನ್ನು ಯಾವ ಕಾರಣಕ್ಕಾಗಿ ಈ ಸ್ಥಿತಿಯಲ್ಲಿ ಬಿಟ್ಟು ಹೋಗಿದ್ದಾನೆ ?... ಓ ! ಈಗೀಗ ಹೊಳೆಯುತ್ತಿದೆ. ವೃದ್ಧ ಜನನಿ ಮೂವರು ಮಕ್ಕಳಿಗೆ ಒಂದು ವ್ಯವಸ್ಥೆ ಮಾಡಲೋಸುಗ ಬಿಟ್ಟು ಹೋಗಿದ್ದಾನೆ. ಇಲ್ಲದಿದ್ದಲ್ಲಿ ಈ ಸ್ಥಿತಿಯಲ್ಲಿ ಖಂಡಿತ ನನ್ನನ್ನು

ಬಿಟ್ಟು ಹೋಗುತ್ತಿರಲಿಲ್ಲ. ಭಗವಂತನ ಎಲ್ಲಾ ಯೋಜನೆಗಳಲ್ಲೂ ಒಂದು ಉದ್ದೇಶವಿದೆ. ಆತನ ಉದ್ದೇಶಗಳನ್ನು ಪ್ರಶ್ನಿಸಲು ನಾವು ಯಾರು ?

ಮತ್ತೆ ಮೂರು ದಿನಗಳು ಸಂದುವು.

ಶರೀರ ಪ್ರಕೃತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಎಲ್ಲರ ಮನದಲ್ಲಿದ್ದ ಆಶಾಕಿರಣ ಸಂಪೂರ್ಣ ಬತ್ತಿ ಹೋಯಿತು. ಪಿತೃ ಸದೃಶ ಆತ್ಮಾರಾಂ ಕರ್ವೆ ಹಣೆಯ ಮೇಲೆ ಕೈಯಿಟ್ಟು ಗದ್ಗದ ಕಂಠದಿಂದ ನುಡಿದರು–" ಸುರೇಶ ದಲ್ವಾಲಿ ಬೇರೆ ಅಲ್ಲ; ನೀನು ಬೇರೆ ಅಲ್ಲ ನಾನು ಬದುಕಿರುವವರೆಗೆ ನಿನ್ನ ಸಂಸಾರದ ಹೊಣೆ ನನ್ನ ಮೇಲಿರಲಿ. ಹಣ ಕಾಸಿನ ಕೊರತೆಯಿಲ್ಲವೆಂಬುದು ನನಗೆ ಗೊತ್ತು. ನಿನಗಿರುವ ಕೊರತೆಯೆಂದರೆ ಸಹಕಾರ ಹಸ್ತವೊಂದೇ. ಈ ಎರಡೂ ಮನೆತನಗಳು ಇದುವರೆವಿಗೂ ಹಾಸುಹೊಕ್ಕಾಗಿವೆ. ಮುಂದೆಯೂ ಅದನ್ನು ನಡೆಸಿಕೊಳ್ಳುವ ಉದ್ದೇಶಕ್ಕಾಗಿ ಬಸಂತಸೇನನನ್ನು ನಿನಗೆ ದಾನವಾಗಿ ಕೊಡುವೆ. ನಿನ್ನ ಎಲ್ಲಾ ಭಾರವನ್ನು ಅವನ ಮೇಲೆ ಹಾಕಿ ನೀನು ನಿಶ್ಚಿಂತೆಯಿಂದ ಇರು ಕಮಲೇಶ್ !"

ಕಮಲೇಶಳ ಚಿತ್ತಭಿತ್ತಿಯಲ್ಲಿ ಅಂದಿನ ಚಿತ್ರಣವೆಲ್ಲಾ ಸುಳಿಸುಳಿದಳಿಯಿತು. ಅಂದೂ ಇದೇ ಮಾತು ಎದೆಯಾಳದಿಂದ ಸಕ್ಕರೆ ಪೂಸಿದಂತೆ ಹರಿದು ಬಂದಿತ್ತು. ಅಂದು ಮೈಯಲ್ಲಿ ಶಕ್ತಿಯು ಸಂಚಾರವಿದ್ದುದರಿಂದ ಒಪ್ಪಿಕೊಳ್ಳಲು ಮನಸ್ಸಾಗಿರಲಿಲ್ಲ. ಆದರೆ ಇಂದು....? ಕಮಲೇಶ್ ಆತ್ಮಾರಾಂ ಕರ್ವೆಯನ್ನು ಎಡಗೈಯಿಂದ ಅಪ್ಪಿಕೊಂಡು ದೀನಸ್ಥಿತಿಯಲ್ಲಿ ಕಂಬನಿಗರೆದಳು. ಎಂದೂ ಅವರೊಂದಿಗೆ ಮನೋದೌರ್ಬಲ್ಯವನ್ನು ತೋಡಿಕೊಳ್ಳದ ಕಮಲೇಶಳಿಗೆ ಇಂದು ಇದ್ದಕ್ಕಿದ್ದಂತೆ ಹತೋಟಿ ತಪ್ಪಿತು. ಬಳಿಯಲ್ಲಿದ್ದ ಬಸಂತನ ಕಣ್ಣುಗಳಲ್ಲೂ ಕಂಬನಿಗಳುಕ್ಕಿದುವು. ಮಿದು ಹೃದಯದ ಚಿತ್ರಸೇನ ಅಲ್ಲಿ ನಿಲ್ಲಲಾಗದೆ ಹೊರ ಹೋದ. ಕಣ್ಣುಗಳು ಕೆಂಪು ತಳೆದುವು.

" ಮಾಮಾ, ನಿಮ್ಮ ಋಣ ಭಾರವನ್ನು ನಾನು ಇನ್ನೊಂದು ಜನ್ಮಕ್ಕೂ ತೀರಿಸಲಾರೆ. ಈ ಜನ್ಮದಲ್ಲಿಯೇ ನಿಮ್ಮಗಳ ಸೇವೆಯನ್ನು ಮನಮುಟ್ಟಿ ಮಾಡಬೇಕೆಂದು ಬಯಕೆಯಿತ್ತು. ಆದರದು ಭಗವಂತನ ಮನಸ್ಸಿಗೆ ಬರಲಿಲ್ಲ. ಆವನು ಕರೆಯುತಿದ್ದಾನೆ. ನಾನು ಹೋಗುವೆ. ನನ್ನ ಸಂಸಾರದ ಭಾರ ಹೊತ್ತು ನನಗೆ ಅಪ್ಪಣೆ ಕೊಟ್ಟು ಆಶೀರ್ವಾದ ಮಾಡಿ ಮಾಮಾ. "

ಮನಸ್ಸನ್ನು ಹತೋಟಿಗೆ ತಂದುಕೊಂಡು ಸ್ಥಿರ ಭಾವದಿಂದ ನುಡಿದಳು

ಕಮಲೇಶ್.

ಎರಡು ಕುಟುಂಬಗಳೂ ಕಂಬನಿಯನ್ನು ಸೂಸಿದುವು.

ಆತ್ಮಾರಾಂ ಕರ್ವೆ ಮುಂದುವರಿದರು. "ಕಮಲೇಶ್, ಬಸಂತ್ ಹೇಗೂ ಡಾಕ್ಟರಾಗಿದ್ದಾನೆ. ಮುಂದಿನ ವರ್ಷ ಚೇತನಾ ಡಾಕ್ಟರಾಗುತ್ತಾಳೆ. ನಿನ್ನ ಹೆಸರಿನಲ್ಲಿ "ಕಮಲೇಶ್ ನರ್ಸಿಂಗ್ ಹೋಂ" ತೆರೆಯುವೆ. ನಮ್ಮ ಮನೆಯ ಪಕ್ಕದ ದೊಡ್ಡ ನಿವೇಶನವೇ ಅದಕ್ಕೆ ತಾಣ. ವರ್ಷೇ ವರ್ಷೇ ಅದನ್ನು ವೃದ್ಧಿ ಪಡಿಸುವೆ. ನೀನಲ್ಲಿ ಮಲಗಿದ್ದರೆ ಸಾಕು, ನಿನ್ನ ಸೇವೆಗೆ ಸದಾ ಚೇತನಾ ಬಸಂತರಿರುತ್ತಾರೆ."

"ಅಯ್ಯೋ, ದೇವರೇ !" ಒಂದು ಕ್ಷಣ ತಡೆದು ನಾಲಿಗೆಯನ್ನು ತುಟಿಯಿಂದ ಒರಿಸಿಕೊಂಡು "ನಿಜವಾಗಿಯೂ ಸಾವಿಗಾಗಿ ದುಃಖವಿಲ್ಲ ಮಾಮಾ. ಇಳಿ ವಯಸ್ಸಿನ ತಾಯಿ ಮತ್ತು ನನ್ನ ಅನಾಥ ಮಕ್ಕಳಿಗಾಗಿ ಮನಸ್ಸು ಮರುಗುತ್ತದೆ. ನೀವು ಅವರ ಭಾರವನ್ನು ಹೊರಲಿದ್ದೀರೆಂದಮೇಲೆ ನನಗೆ ಖಂಡಿತವಾಗಿಯೂ ದುಃಖವಿಲ್ಲ. ನಿಮ್ಮೆಲ್ಲರ ಒಳ್ಳಿತಕ್ಕಾಗಿ ಪ್ರಾರ್ಥಿಸುವೆ."

ಚೇತನಾ ನೆಲದಮೇಲೆ ಮಂಡಿಯೂರಿ ಹಾಸಿಗೆಯ ಮೇಲೆ ತಲೆಯಿಟ್ಟು ಎರಡೂ ಕೈಗಳಿಂದ ಅಪ್ಪಿ ಹಿಡಿದುಕೊಂಡು ಎಷ್ಟು ಕಾಲವಾದರೂ ನಿಮ್ಮ ಸೇವೆ ಮಾಡುವೆ ಮನಸ್ಸಿಗೆ ಏನೂ ತೆಗೆದುಕೊಳ್ಳಬೇಡಿ."

"ಉ....ಉ....ಊ" ಬಿಕ್ಕುತ್ತಾ ಹೊರಳಾಡಿದಳು ಸ್ವರೂಪ್. ತಿಲಕ್ ಎದೆಯ ಮೇಲೆ ತಲೆಯಿಟ್ಟು ಕಂಬನಿ ಮಿಡಿದ. ಮಕ್ಕಳ ಸ್ಥಿತಿಗತಿ ಕರುಣಾಜನಕವಾಗಿತ್ತು.

"ಆತ್ಮಾರಾಂ ಮಾಮಾ ಇದ್ದಾರೆ ಯೋಚಿಸಬೇಡಿ....ಎಲ್ಲರೂ ಧೈರ್ಯದಿಂದ ಸಂತೋಷದಿಂದ ನನಗೆ ಅಪ್ಪಣೆ ನೀಡಿರಿ."

"ಊ....ಊ, ನನಗಮ್ಮ ಬೇಕು."

"ಸ್ವರೂ, ನನಗೆ ಅದೃಷ್ಟವಿಲ್ಲ. ನಿನಗೆ ಪುಣ್ಯವಿಲ್ಲ. ಭಗವಂತನ ಇಚ್ಛೆ ಹಾಗಿರುವಾಗ ಏನು ಮಾಡಲಾದೀತು ?"

"ನೀವಿಲ್ಲದೆ ಅಜ್ಜಿಯೂ ಉಳಿಯುವುದಿಲ್ಲ. ನಮ್ಮ ಗತಿಯೇನು ?"

"ತಿಲಕ್, ನಿಮ್ಮನ್ನೆಲ್ಲಾ ಅವರ ಕೈಗೆ ಒಪ್ಪಿಸಿ ಹೋಗುತಿದ್ದೇನೆಂದರೆ ಅವರು ಬದುಕಲೇಬೇಕು. ಆತ್ಮಾರಾಂ ಮಾಮಾನು ಹೇಳುರತಿ ಮಾಮಿ ಇದ್ದಾರೆ.

ನಿಮಗೆ ಯಾವ ಕೊರತೆಯೂ ಬರುವುದಿಲ್ಲ. ಮುಖ್ಯವಾಗಿ ನಿಮ್ಮ ಕರ್ತವ್ಯವನ್ನು ನೀವು ನಿರ್ಲಕ್ಷಿಸದಿದ್ದರೆ ಸಾಕು."

"ಮಾ...."

"ಹಿಂದೆಯೂ ಮಾ ನಿನ್ನ ಅಮ್ಮ; ಮುಂದೆಯೂ ಮಾ ನಿನ್ನ ಅಮ್ಮ ಸ್ವರೂ."

ಚೇತನಳಿಗೆಂದಳು ಕಮಲೇಶ್ "ಇದುವರೆವಿಗೂ ನನ್ನ ಕರ್ತವ್ಯವನು ನಿರ್ವಂಚನೆಯಿಂದ ನಿರ್ವಹಿಸಿದ್ದೇನೆ. ಇನ್ನು ಮುಂದಿನದನ್ನು ನಿನಗೊಪ್ಪಿಸಿ ಹೋಗುವೆ. ಮಾ ಮತ್ತು ಮಕ್ಕಳ ಮನನೋಯದಂತೆ ನೋಡಿಕೊಳ್ಳಬೇಕಾದುದು ನಿನ್ನ ಧರ್ಮ. ನಿನ್ನ ತಾಯಿ ನನ್ನ ನೆನಪಿಗಾಗಿ ನಿನಗೆ 'ಕಮಲೇಶ್' ಎಂದು ಹೆಸರಿಟ್ಟಿದ್ದಳು. ಇನ್ನದು ನಿನಗೆ ಚಿರಂತನವಾಗುಳಿಯುತ್ತದೆ."

"ಬಸಂತ್ ?"

"ಮಾ...."

"ನೀವಿಬ್ಬರೂ ಸತಿಪತಿಗಳಾದುದನ್ನು ನೋಡಿ ಪ್ರಾಣ ಬಿಡುವೆ. ಮುಂದೆ ಅವಳನ್ನೋದಿಸುವುದು ನಿನ್ನ ಭಾರ."

"ನೀವು ಹೇಗೆ ಹೇಳಿದರೆ ಹಾಗೆ. ನಿಮ್ಮ ಆಶೀರ್ವಾದವಿದ್ದರೆ ಸಾಕು."

"ಭಗವಂತನ ಆಶೀರ್ವಾದ ನಿಮ್ಮ ಮೇಲಿರಲಿ" ಮನಸ್ಸು ಸ್ಥಿರವಾಗಿತ್ತು, ಕಣ್ಣು ಮುಖಗಳಲ್ಲಿ ಶಾಂತಿಯುತವಾದ ಅಪೂರ್ವ ಖಳೆ ಶೋಭಿಸುತಿತ್ತು.

"ಬಸಂತ್, ನೀನು ನನ್ನ ಮನೆಯಲ್ಲೇ ಇದ್ದು ಮಾ ಮತ್ತು ಮಕ್ಕಳನ್ನು ಸುಖವಾಗಿ ನೋಡಿಕೊಳ್ಳಪ್ಪಾ."

"ಹಾಗೆಂದು ನೀವು ಆಶೀರ್ವಾದ ಮಾಡಿ ಮಾ."

ಕಮಲೇಶ್ ಬಸಂತನನ್ನು ಎಳೆಗಪ್ಪಿಕೊಂಡು ವೈದಡವಿದಳು.

ಚಂದೆದೆಗಳ ಬಿಸುಸುಯ್ಲು ಕೊಠಡಿಯನ್ನೆಲ್ಲಾ ವ್ಯಾಪಿಸಿತು.

ಅಧ್ಯಾಯ

೩೮

ವಸಂತ ವೈಖರಿಯಲ್ಲಿ ಪ್ರಕೃತಿ ದೇವಿ ಲಾಸ್ಯವಾಡುತಿದ್ದಾಳೆ.

ಮೂಡಣ ದಿಕ್ಕಿನಲ್ಲಿ ಸೂರ್ಯೋದಯವಾಗುವುದನ್ನೇ ಗಮನಿಸುತ್ತ ....ಉದಯುವೇ ಶಾಶ್ವತವೆಂದು ನಾನು ಎಂದೂ ಭ್ರಮೆ ಪಟ್ಟಿರಲಿಲ್ಲ....ಉದ ಯವಾದುದು ಅಸ್ತಮವಾಗಲೂ ಬೇಕು." ಎಂದು ದೃಢ ಕಂಠದಿಂದ ಹೇಳಿ ಕೊಂಡಳು ಕಮಲೇಶ್. ಉಜ್ವಲ ಕಾಂತಿಯಿಂದ ಪ್ರಜ್ವಲಿಸುವ ಅವಳ ಮುಖದಲ್ಲಿ ಸಜಲ ಸುನೇತ್ರಗಳು ಭಾವಪೂರ್ಣವಾಗಿವೆ. ಹಣೆಯ ಮೇಲೆ ಮುಸುಗಿರುವ ಮುಂಗುರುಳುಗಳು ಲಕ್ಷ್ಯಕೊಡದಿದ್ದರೂ ಸಲ್ಲಕ್ಷಣವಾಗಿವೆ. ಉದಯಮಾನವೋ ಅಥವಾ ಅಸ್ತಮಾನವೋ ಅರ್ಥವಾಗದಂತಹ ಅದ್ಭುತ ಶಾಂತಿ ಮುಖದಲ್ಲಿ ತಾಂಡವವಾಡುತಿತ್ತು.

" ಮಾ...." ದೃಢಕಂಠದಿಂದ ಹೊರ ಬಿದ್ದ ಆ ಕರೆ ಮಧುರವಾಗಿತ್ತು.

" ಮಗೂ." ಕಂಪಾಯಮಾನವಾದ ವ್ಯಥಿತ ಧ್ವನಿ ಹೃದಯ ಕುಂಡ ಲಿನಿಯೊಳಗೆ ಸರ್ರನೆ ಇಳಿಯಿತು. ಒಂದು ಘಳಿಗೆ ಕಣ್ಮುಚ್ಚಿ ಸಂತಾಪವನ್ನು ತನ್ನೊಳಗೆ ನುಂಗಿಕೊಂಡಳು ಕಮಲೇಶ್. ಬಳಿಯಲ್ಲಿ ಕುಳಿತಿದ್ದ ಸ್ವರ್ಣಮಾ ಲಿನಿ ಮಗಳ ಕೈಯನ್ನು ಬಿಗಿಯಾಗಿ ಹಿಡಿದುಕೊಂಡಳು. ಹವಳದ ಕಡ್ಡಿ ಯಂತೆ ಸುಕೋಮಲವಾಗಿದ್ದ ಬೆರಳುಗಳು ರಕ್ತಹೀನತೆಯಿಂದ ಬಿಳಿಚಿಕೊಂಡು ಒಡಲಿಗೆ ಸಂಕಟವೂಡಿಸುವಂತಿದ್ದುವು.

" ನಿಮಗೆ ವಿಶ್ರಾಂತಿ ನೀಡುವ ಬದಲಾಗಿ ನನ್ನ ಸಂಪೂರ್ಣ ಭಾರ ವನ್ನು ನಿಮಗೇ ವಹಿಸಿ ಹೋಗುತ್ತಿದ್ದೇನೆ. ಅದಕ್ಕಾಗಿ ನೀವು ನೋಯಬಾ ರದು. ದುಃಖಿಸಬಾರದು. ಮಕ್ಕಳಿಗಾಗಿ ನಿಮ್ಮ ದುಃಖವನ್ನು ಬದಿಗಿಟ್ಟು ಅವ ರಿಗೆ ಆಶ್ರಯ ನೀಡಿರಿ. ನೀವು ಧೈರ್ಯ ತಳೆದರೆ ನಾನು ಸುಖವಾಗಿ ಪ್ರಾಣ ಬಿಡುವೆ. ಆತ್ಮಶಃ ಸಂತೋಷದಿಂದ ಬೀಳ್ಕೊಡುವ ಉಪಕಾರ ಮಾಡಿರಿ. ಭಗವಂತನಿಗೆ ನನ್ನ ಆತ್ಮಾರ್ಪಣೆ ಮಾಡಿ ನನ್ನ ಮನಸ್ಸಿಗೆ ಶಾಂತಿ ಪಡೆದು

ಕೊಳ್ಳುವೆ ನೀವು ಪೂರ್ಣ ಮನಸ್ಸಿನಿಂದ ನನ್ನ ಆತ್ಮಕ್ಕೆ ಶಾಂತಿಯನ್ನು ಕೋರಿ....ಎಲ್ಲರ ಒಳ್ಳಿತಕ್ಕಾಗಿ ನನಗೆ ಆಶೀರ್ವಾದ ಮಾಡಿ ಮಾ."

ಮಹದ್ ಸಂಕಲ್ಪಕ್ಕೆ ಎಂದೋ ನಿಮಿತ್ತವಾಗಿದ್ದ ಕ್ಲಾಂತ ಚಿತ್ತ ಇಂದು ಮೋಹಮುಕ್ತವಾಗಿ ಮೇಘ ಮುಕ್ತ ಗಗನದಂತೆ, ಅಲೆಗಳಿಲ್ಲದ ಸಾಗರದಂತೆ ಶುಭ್ರವಾಗಿತ್ತು.

" ನನಗೂ ನಿಮಗೂ ಇದ್ದ ಸಹಜೀವನ ಭಾಗ್ಯ ಇಷ್ಟೆ. ನೀವು ದುಃಖ ಕ್ಕೊಳಗಾಗಿ ಕಾಹಿಲೆ ಬಿದ್ದರೆ ನನ್ನ ಮಕ್ಕಳಿಗೆ ಗತಿಯಿಲ್ಲದೆ ಹೋಗುತ್ತದೆ. ಅನಾಥ ಮಕ್ಕಳಿಗಾಗಿ ನೀವು ಧೈರ್ಯವಾಗಿದ್ದು ನನಗೆ ಆಶೀರ್ವಾದ ಮಾಡಿ. ನನಗೂ ಸಹ ನಿಮ್ಮನ್ನು ಬಿಟ್ಟು ಹೋಗುವುದು ಕಷ್ಟ. ಆದರೂ ಸಹ ಧೈರ್ಯಮಾಡಿಲ್ಲವೇ ? ಹಾಗೆಯೆ...."

ನಿಜವಾದ ಅನುಭೂತಿಯ ಮುಂದೆ ಸ್ವರ್ಣಮಾಲಿನಿಯ ಆಲೋಚನೆ ಗಳು ಸ್ತಬ್ಧವಾದುವು.

ಅನಂತವೂ ಅನಿವಾರ್ಯವೂ ಆದ ಅಂತ್ಯ ಪಯಣದ ಮುಹೂರ್ತದ ಲ್ಲಿಯೂ ಗಮ್ಯಸ್ಥಾನ ತೋರದಲ್ಲಾ....ಎಂದು ತೊಳಲಿತು ಎದೆಯ ಹಕ್ಕಿ. ಹೊಳೆಹೊಳೆಯುವ ನೋಟ ಕಿಟಕಿಯಲ್ಲಿ ತೂರಿ ದಿಗಂತದಂಚಿನಲ್ಲಿ ರಮಿಸಿ ಅರಸುವಾಗ ನೀಲವಸನೆ ನಿಶಿ ಏನೆಂದು ಹರಸಿದಳೋ....

ಇಂದು ಹಿರಿಯ ಡಾಕ್ಟರುಗಳು ನೋಡಲು ಬಂದಾಗ ಕಮಲೇಶ್ ಒಂದೇ ನಿರ್ಧಾರದಿಂದ ನುಡಿದಳು " ಡಾಕ್ಟರ್, ನಾನು ದೃಢ ನಿಶ್ಚಯ ಮಾ ಡಿರುವೆ. ನನಗೆ ಈ ರೀತಿಯ ಬದುಕು ಬೇಡ."

" ಹಾಗೆಂದರೆ ?" ವಿಸ್ಮಯ ಚಕಿತರಾಗಿ ಕೇಳಿದರು ಡಾ|| ಥಾಮಸ್.

" ನನ್ನ ಆತ್ಮವನ್ನು ಭಗವಂತನಿಗೆ ಅರ್ಪಿಸಿಕೊಳ್ಳುವೆ."

" ದಯವಿಟ್ಟು ದುರಾಲೋಚನೆ ಕೈಬಿಡಿ ಡಾಕ್ಟರ್."

" ಏನೇ ಬರಲಿ, ಈ ನಿರ್ಧಾರದಿಂದ ಹಿಂತೆಗೆಯಲಾರೆ. ದಯವಿಟ್ಟು ನನ್ನನ್ನು ಆಶೀರ್ವದಿಸಿ ಡಾಕ್ಟರ್."

" ಡಾಕ್ಟರ್....!" ಉಚ್ಛ್ವಸ್ವರ ಉದ್ವೇಗಭರಿತವಾಗಿತ್ತು.

" ಏನು ಹೇಳುವಿರಿ ?"

" ನಿಮಗೆ ಮಕ್ಕಳಿದ್ದಾರೆ! ವೃದ್ಧ ಜನನಿ ಇದ್ದಾರೆ."

"ಭಗವಂತನ ಇಚ್ಛೆ!" ಬಾಗದ ಬಲಗೈಯನ್ನು ಹೇಗೋ ಹಾಗೆ ಜೋಡಿಸಿ ಹೇಳಿದಳು "ಅವರ ಸಲುವಾಗಿಯೇ ನಾನು ಆತ್ಮಾರ್ಪಣೆ ಮಾಡಿ ಕೊಳ್ಳುವೆ. ನನ್ನನ್ನೀ ಸ್ಥಿತಿಯಲ್ಲಿ ನೋಡುವುದು ಅವರಿಗೂ ಕಷ್ಟ. ನನಗೂ ಕಷ್ಟ."

"ಆತ್ಮಹತ್ಯ ಮಹಾ ಪಾಪ!" ಎಂದರು ಡಾ|| ಶುದ್ಧೋಧನ. ಕಣ್ಣು ಗಳಲ್ಲಿ ರಂಗು ಮೂಡಿತು.

"ಆತ್ಮಹತ್ಯವಲ್ಲ, ಆತ್ಮಾರ್ಪಣ!" ಕಣ್ಣುಗಳಲ್ಲಿ ಮಿಂಚಿನಂತಹ ಬೆಳಕು ಮಿಂಚಿತು

"ಎರಡೂ ಒಂದೇ....ಹೆಸರು ಬೇರೆ ಬೇರೆ." ಖಿನ್ನಮುಖಿಯಾಗಿ ನುಡಿ ದರು ಡಾ|| ಥಾಮಸ್.

"ಆತ್ಮಾರ್ಪಣೆ ಎಂಬುದು ಆತ್ಮ ಸಂತೋಷದಿಂದ ಮಾಡಿಕೊಳ್ಳು ವುದೇ ಹೊರತು ದುಃಖದಿಂದಲ್ಲ."

"ಒಂದಲ್ಲ ಒಂದು ದಿನ ಭಗವಂತ ನಿಮ್ಮ ಮೇಲೆ ದಯೆದೋರಿಯಾನು ಎಂಬ ನೆಚ್ಚಿನಲ್ಲಿ ದಿನಗಳೆಯಿರಿ ಡಾಕ್ಟರ್." ಸಂತಾಪದಿಂದಲೇ ನುಡಿದರು ಡಾ|| ಥಾಮಸ್.

"ಇದು ನನ್ನ ದೃಢ ಸಂಕಲ್ಪ. ದಯಮಾಡಿ ಕ್ಷಮಿಸಿರಿ." ನಮ್ರತೆ ಯಿಂದ ಕರಗಳನ್ನು ಜೋಡಿಸಿದಳು. ಡಾ|| ಥಾಮಸ್ ದಿಟ್ಟಿಯನ್ನು ಬೇರೆಡೆಗೆ ಹೊರಳಿಸಿ ನಿಂತರು. ಏನು ಹೇಳಬೇಕೋ ಹೊಳೆಯಲಿಲ್ಲ, ಒಂದೆರಡು ಕ್ಷಣ ಮನದಲ್ಲೇ ಪ್ರಾರ್ಥಿಸಿ "ನಾನಿನ್ನು ಬರುವೆ, ಡಾಕ್ಟರ್" ಎಂದಷ್ಟು ನುಡಿದು ಹೊರ ಹೋದರು. ರಾಗಾತ್ಮಕ ಹೃದಯದಲ್ಲಿ ಪ್ರಚಂಡ ಬಿರುಗಾಳಿ ಬೀಸು ತಿತ್ತು.

ಅನಾರೋಗ್ಯದಿಂದ ಡೀನ್ ವೃತ್ತಿಯಿಂದ ನಿವೃತ್ತಿಹೊಂದಿ ಮನೆಯಲ್ಲಿ ಉಳಿದಿದ್ದ ಡಾ|| ನಿರಂಜನ್‌ರವರು ಬಂದು ಹೋದರು. ಆತ್ಮೀಯ ಗೆಳತಿ ಯರೂ ಹೊರಗಡೆ ಉಳಿದಿದ್ದ ಸಹ ಡಾಕ್ಟರುಗಳೂ ಆಸ್ಪತ್ರೆಯ ಡಾಕ್ಟರು ಗಳೂ ಬಂಧುವರ್ಗದವರೂ ಬಂದು ಕೊನೆಯ ಭೇಟಿ ತೆಗೆದುಕೊಂಡರು. ಎಲ್ಲರ ಸಹಾನುಭೂತಿಯುತ ವಾಣಿಯಲ್ಲಿ ಉನ್ಮಾದ ಭಾವ ಹೊನಲಾಗಿ ಹರಿಯಿತು.

ಗೀತಾ ಪಾರಾಯಣ ನಡೆಯುತ್ತಿತ್ತು. ಓದುತ್ತಿದ್ದವಳು ಹೇಮರತಿಕರ್ವೆ.

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ |
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್ ||
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು |
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ||

ತದೇಕ ಚಿತ್ತದಿಂದ ಕೇಳುತ್ತಿದ್ದ ಕಮಲೇಶ್ ಸಮಾಧಾನದ ಉಸಿರನ್ನು ಬಿಟ್ಟಳು. ಸುತ್ತಲೂ ಸುತ್ತುವರಿದು ಕುಳಿತಿದ್ದ ತಮ್ಮವರ ಕಡೆ ದಿಟ್ಟಿ ಹೊರಳಿಸಿ ಭಗವದ್ಗೀತೆಯನ್ನು ಕಣ್ಣಿಗೊತ್ತಿ ಪೂಜ್ಯಭಾವದಿಂದ ಎದೆಯ ಮೇಲಿಟ್ಟು ಕೊಂಡು "ನೀವೆಲ್ಲರೂ ಮನ್ನಿಸಬೇಕು, ನಾನೊಂದು ನಿರ್ಧಾರಕ್ಕೆ ಬಂದಿರುವೆ." ಎಂದಾಗ ಸದೃಢವಾಣಿ ರುದ್ರ ಮನೋಹರವಾಗಿ ಮೊಳಗಿತು.

ಹಾ........!

ಅವಳ ನಿರ್ಧಾರವೇನೆಂಬುದು ಎಲ್ಲರಿಗೂ ಅರ್ಥವಾಗಿತ್ತು, ಸಿಡಿಲು ಬಡಿದಿದ್ದರೂ ಅಷ್ಟು ಕಷ್ಟವಾಗುತ್ತಿರಲಿಲ್ಲವೇನೋ. ಆ ಭೀಕರ ಅಸುರ ದೃಢ ನಿಶ್ಚಲತೆಯ ಮುಂದೆ ಶಿಲಾಕಾಠಿಣ್ಯ ಸಹಾನುಭೂತಿ ಮಾತ್ರ .ಉಳಿದಿದೆ. ಆದರೂ ಮಾತೆಯು ಬಿಕ್ಕಿಬಿಕ್ಕಿ ಅತ್ತಳು. ಸಹಾನುಭೂತಿಯುತವಾದ ಮಗಳ ಹೃದಯ ಮೌನವಾಗಿ ರೋದಿಸಿತು.

"ನೀವೆಲ್ಲರೂ ಪೂರ್ಣ ಮನಸ್ಸಿನಿಂದ ನನ್ನನ್ನು ಆಶೀರ್ವದಿಸಿರಿ. ನಾನು ಭಗವಂತನಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವೆ."

ಎಲ್ಲರಿಗೂ ಏನು ಹೇಳಬೇಕೋ ಹೊಳೆಯದೆ ಬಗೆಗ ಹಿಡಿದ ನಿಂತರು ಹೃದಯಗಳು ಅತೀವ ಸಂತಾಪದಿಂದ ಮಿಡಿದುವು. ತಾಯಿಯನ್ನು ಅದುಮಿ ಹಿಡಿದು "ದುಃಖಿಸಬೇಡಿ....ಇದೆಲ್ಲ ದೈವ ಸಂಕಲ್ಪ" ಎಂದು ಸಮಾಧಾನ ಹೇಳಿ ಒಣಗಿದ ತುಟಿಯನ್ನು ನಾಲಿಗೆಯಿಂದ ಸವರಿಕೊಂಡು "ಅದರ ಮೊದಲು ನನ್ನದೊಂದು ಇಚ್ಛೆ ಇದೆ. ಅದನ್ನು ನಡೆಸಿಕೊಡಲು ಸಾಧ್ಯವೇ ಹೇಳಿರಿ." ಎಂದಳು, ತುಟಿಗಳಲ್ಲಿ ಸರಸ ಸ್ನಿಗ್ಧ ಹಾಸ ಮಿಂಚಿ ಮಾಯವಾಯಿತು.

ಆತ್ಮಾರಾಂ ಕರ್ವೆ ಮುಂದೆ ಬಂದು "ಏನೆಂಬುದನ್ನು ಹೇಳು ಮಗೂ?"

"ಬಸಂತ್ ಚೇತನರ ವಿವಾಹ ಈಗಲೇ ನಡೆದರೆ ನನ್ನ ಆಶೀರ್ವಾದ

ವುಂಟು."

ಎಲ್ಲರ ಮುಖವನ್ನೊಮ್ಮೆ ನಿಟ್ಟಿಸಿ ನೋಡಿ "ಮುಖ್ಯವಾಗಿ ನಿನ್ನ ಆಶೀರ್ವಾದ ಬೇಕು. ಇಂದೇ ಯಾವುದನ್ನೂ ನಿರ್ಧರಿಸಿ ಹೇಳುವೆ." ಎಂದರು ಕರ್ವೆ,

ಇತ್ತ ಸ್ವರ್ಣವಾಲಿನಿ ಮತ್ತು ಮಕ್ಕಳ ದುಃಖದ ಕೋಡಿ ಹರಿಯುತ್ತಿದ್ದಂತೆ ಅತ್ತ ಬಸಂತ್ ಚೇತನರ ವಿವಾಹಕ್ಕೆ ಮಾತುಕತೆಯು ನಡೆದು ಸುಮುಹೂರ್ತವನ್ನು ಗೊತ್ತು ಹಚ್ಚಲಾಯಿತು. ಒಂದು ವಿಧವಾದ ಸಂಕಟ.... ಮತ್ತೊಂದು ವಿಧವಾದ ಗ್ಲಾನಿ...ಇನ್ನೊಂದು ವಿಧವಾದ ಸಂತಸ. ಮೇಲಾಗಿ ಈ ಸುಖ ದುಃಖಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲಾಗದ ಮನೋದೌರ್ಬಲ್ಯ....ಆ ನಾರೀಮೂರ್ತಿಯ ನಿರ್ಮಲ ಜ್ಯೋತಿಯ ಮುಂದೆ ಚಿತ್ರಸೇನ ಅಚೇತನನಾದನು ಆತ್ಮಾರಾಂ ಕರ್ವೆ ಭಾವಾವಿಷ್ಟರಾದರು ಬಸಂತ್ ಕರ್ತವ್ಯನಿಷ್ಠನಾದ.

ಸ್ವರೂಪರಾಣಿ ತಾಯಿಯ ಮೈ ಮೇಲೆ ಹೊರಳಾಡಿ ಕಂಬನಿ ಸುರಿಸಿದಳು.

"ಕೊನೆಯ ಪಕ್ಷ ಕುಳಿತುಕೊಳ್ಳುವಷ್ಟು ಶರೀರ ಪ್ರಕೃತಿ ಸುಸ್ಥಿತಿಯಲ್ಲಿದ್ದಿದ್ದರೆ ಕುಳಿತು ಕೆಲಸ ಮಾಡಬಹುದಾಗಿತ್ತು. ಆದರೆ ಈಗಿನ ಪರಿಸ್ಥಿತಿಯಲ್ಲಿ ಬದುಕಿ ಮಾಡುವುದೇನು ?"

"ಮಾ....ಮಾ...." ಬಿಕ್ಕುತ್ತಾ ಎದೆಯ ಮೇಲೆ ಹೊರಳಿದಳು ಸ್ವರೂಪ್, ಕಪೋಲ ಪ್ರಾಂತಗಳು ಕಂಬನಿಯಿಂದ ತೊಯ್ದು ಹೋದುವು.

ಹೇಮರತಿ ಕರ್ವೆ ಅವಳನ್ನು ತೆಕ್ಕೆಯಲ್ಲಿ ತೆಗೆದು ಕೊಂಡು ಸಂತೈಸಿದಳು. ಚಿತ್ರಸೇನ ತಿಲಕನನ್ನು ಬಿಗಿದಪ್ಪಿ ಹೊರಕರೆದುಕೊಂಡು ಹೋದ ಮಾಲತಿ ಚೇತನಳನ್ನು ಎಳೆದೊಯ್ದಳು. ದಿನಾಂತಕಾಲೀನ ಉನ್ಮತ್ತಗಾಳಿಗೆ ಸಿಕ್ಕಿ ಛಿದ್ರವಿಛಿದ್ರವಾದ ಮೇಘ ಪಟಲದಂತೆ ಎಲ್ಲರ ಹೃದಯಗಳು ಛಿದ್ರವಿಛಿದ್ರವಾಗಿ ಚರಮ ಘೋಷಗೈಯ್ಯತೊಡಗಿದುವು.

ಪೂರ್ವ ದಿಗಂತದಲ್ಲಿ ಚಂದ್ರೋದಯವಾದರೂ ಯಾಕೋ ಏನೊ ಮಾಂಗಲ್ಯದ ಮಳೆಗರೆಯುತ್ತಲೇ ಇಲ್ಲ. ಶೀತಲ ಶಾಂತಿಯಲ್ಲಿ ಸಮ್ಮೋಹಕತೆಯೂ ಇಲ್ಲ.

ಅದೇ ವಾರದಲ್ಲಿ ಬಸಂತ್‌ಸೇನ ಚೇತನರ ವಿವಾಹ ನಿರಾಡಂಬರವಾಗಿ

ನಡೆಯಿತು. ಧಾರಾಮುಹೂರ್ತವಾದ ನಂತರ ಇಬ್ಬರೂ ಬಂದು ಕಮಲೇಶಳ ಆಶೀರ್ವಾದವನ್ನು ಪಡೆದರು. ಸತಿ ಪತಿಗಳ ಕೈಹಿಡಿದುಕೊಂಡು " ನನ್ನ ಅತ್ಯಂತ ಅಮೂಲ್ಯವಾದ ಮೂರು ರತ್ನಗಳನ್ನು ನಿಮ್ಮ ಉಡಿಯಲ್ಲಿ ಹಾಕಿ ಹೋಗುವೆ. ಅವರನ್ನು ಕಾಪಾಡಿಕೊಳ್ಳುವ ಭಾರ ನಿಮ್ಮದು." ಎಂದೆನ್ನುವಾಗ ದನಿ ಗದ್ಗದವಾದರೂ ಅವಳ ಹವಳದ ಕುಡಿಯಂತಹ ಅಧರಗಳ ಮೇಲೆ ಸ್ಮಿತರೇಖೆಯಿತ್ತು. ನೀಲ ಲೋಚನಗಳಲ್ಲಿ ಲೀಲಾ ವಿಲಾಸ ಮಿಂಚುತಿತ್ತು.

ಮದುವೆಯ ಸಿಹಿಯನ್ನುಂಡು ತಮ್ಮವರೊಂದಿಗೆ ಒಂದುವಾರ ಸಂತಸದಿಂದ ಕಾಲಹರಣ ಮಾಡಿದಳು. ಅಪಘಾತ ನಡೆದು ಪಂಚಮಾಸಗಳು ಕಳೆದಂದು ಸ್ನಾನ ತೆಗೆದುಕೊಂಡು ಶುಚಿರ್ಭೂತಳಾದಳು. ಪಂಚತೀರ್ಥಗಳನ್ನೊಳಗೊಂಡ ಪುಣ್ಯಜಲ ವಿನಾ ಇನ್ನೇನೂ ತೆಗೆದುಕೊಳ್ಳಲಿಲ್ಲ. ಹೇಮರತಿ ಸ್ವರ್ಣಮಾಲಿನಿಯರು ಕಾದು ಕುಳಿತರು. ಉಪವಾಸ ಆರಂಭಿಸಿದಂದಿನಿಂದ ಅಖಂಡ ಭಜನೆಯು ಆರಂಭವಾಯಿತು. ಕಮಲೇಶ್ ಸಂಸಾರಿಕ ವ್ಯಾಮೋಹವನ್ನು ಬದಿಗೊತ್ತಿ ಭಗವಂತನಲ್ಲಿ ಲೀನವಾಗುತ್ತಾ ಹೋದಂತೆ ಜಗತ್ತೇ ಕೃಷ್ಣಮಯವಾಗಿ ಬಿಟ್ಟಿದೆ....

ಮಕ್ಕಳು ಕಂಬನಿ ಮಿಡಿಯಲವಕಾಶವಾಗದಂತೆ " ಭಜನೆ ಮಾಡಿ " ಎನ್ನುವಳು. ಅವರು ಹಿರಿಯರೊಂದಿಗೆ ಕುಳಿತು ಭಜನೆ ಹಾಡಿದರೆ ತನಗೂ ಸ್ವರ್ಗಕ್ಕೂ ಮೂರೇ ಗೇಣು ಎಂಬಷ್ಟು ಆನಂದ ಮೂಡುವುದು. ಎಲ್ಲರ ದನಿಯೊಂದಿಗೆ ತನ್ನ ಕ್ಷೀಣಿತ ದನಿಯನ್ನೂ ಹರಿಯ ಬಿಡುವಳು. ದನಿ ಬತ್ತಿದರೆ ಮನದಲ್ಲೇ ಧ್ಯಾನ. ಅತ್ಯಂತ ಜಾಗರೂಕತೆಯಿಂದ ಆಲೈಸಿದರೆ ಹೃದಯ ಮೃದಂಗದಿಂದ ಹೊಮ್ಮುವ ಘೋಷ ಹರಿ. ಹರಿ ಹರಿ. ಹರಿ ಶ್ರೀ ಕೇಂದ್ರದಿಂದ ವಿದ್ಯುಲ್ಲತೆಯಂತೆ ನರನರಗಳಲ್ಲೂ ಮರು ಪ್ರಸಾರ ಹೊಂದುವ ಅದೇ ಘೋಷ ಹರಿ. ಹರಿ. ಹರಿ. ಹರಿ.

ಹಾ....! ಆ ದಿವ್ಯಾನುಭೂತಿಗೆ ಸಾಟಿಯುಂಟೇ ?

ಅಂದು ಉಪವಾಸದ ಒಂಭತ್ತನೆಯ ದಿನ. ಸ್ನಾನಾದಿಗಳನ್ನು ಮುಗಿಸಿ ಶುಚಿರ್ಭೂತಳಾಗಿ ಎಲ್ಲರೊಡನೆಯೂ ಕುಶಲ ಸಂಭಾಷಣೆ ನಡೆಸಿ ಹಿರಿಯರ ಆಶೀರ್ವಾದವನ್ನು ಪಡೆದುಕೊಂಡಳು.

ಎಂದಿನಂತೆ ಇಂದೂ ಸುಪ್ರಭಾತವು ಪಕ್ಷಿಸಂಕುಲಗಳ ಇನಿಗಾನದೊಂ

ದಿಗೆ ಆರಂಭವಾಯಿತು. ಜೇಷ್ಠಾನಿಲ ಸಾವಧಾನದಿಂದ ಬೀಸಿ ಚಾಮರ ಹಾಕಿದ. ಪೂರ್ವದಿಶೆಯಲ್ಲಿ ಅರುಣ ಕಿರಣಗಳು ಮೂಡಿ ಬಂದುವು. ಕಮಲೇಶ್ ಸ್ವಹಸ್ತದಿಂದ ತೀರ್ಥಪಾನ ಮಾಡಿದಳು. ಬಂಧು ಬಳಗದವರೆಲ್ಲಾ ಸುತ್ತುವರಿದಿದ್ದರು. ತಿಲಕ್ ಸ್ವರೂಪರಾಣಿಯರನ್ನು ಚಿತ್ರಸೇನ್ ತೆಕ್ಕೆಯಲ್ಲಿ ತೆಗೆದುಕೊಂಡು ಧೈರ್ಯ ನೀಡುತಿದ್ದ.

"ಮಗೂ, ಕಮಲೇಶ್!" ಸ್ವರ್ಣಮಾಲಿನಿಯ ದನಿ ವಿಕಂಪಿಸಿತು.

ಕಮಲೇಶ್ ಎಲ್ಲರೆಡೆಗೆ ಕಾಂತಿಯುಕ್ತವಾದ ಸುನೀಲ ನೇತ್ರಗಳನ್ನು ಹೊರಳಿಸಿದಳು.

"ಮಾ....ಮಾ."

"ಕಮಲೇಶ್!"

ಕಮಲೇಶ್ ಮುಚ್ಚಿದ ಕಣ್ಣುಗಳನ್ನು ಮೆಲ್ಲನೆ ತೆರೆದು ಸ್ಥಿರವಾದ ದನಿಯಲ್ಲಿ ಕೇಳಿದಳು "ನನಗಿನ್ನು ಅಪ್ಪಣೆ ಕೊಡಿ."

ಭಜನೆ ಮಾಡಃಮುಟ್ಟುವಂತೆ ಮೊಳಗಿತು.

ಅಖಂಡ ಭಜನೆಯ ಗಂಭೀರ ಸದ್ದಿನೊಳಗೂ ಅಕ್ಕರೆಯ ದನಿ ಮೊಳಗಿತು "ಕಮಲೇಶ್!"

"ಮಾ....ಮಾ!"

"ಡಾಕ್ಟರ್...."

"ಕಮಲೇಶ್!....ಕಮಲೇಶ್!"

ತಾಯಿ ಮಕ್ಕಳ ಗೋಳಿನ ಕರೆ ಬಿಡುಗಡೆ ಹೊಂದಿದ ಪ್ರಾಣ ಪಕ್ಷಿಯೊಡನೆ ಅನಂತಾನಂತದಲ್ಲಿ ಲೀನವಾಯಿತು.

ಕೃಷ್ಣಂ ಶರಣಂ ಗಚ್ಛಾಮಿ.
ರಾಮಂ ಶರಣಂ ಗಚ್ಛಾಮಿ.
ಬುದ್ಧಂ ಶರಣಂ ಗಚ್ಛಾಮಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಮಲ್ಲಿಕಾ ಕೃತಿಗಳು

1)	ಜೀವನ ಗಂಗಾ	(ಕಾದಂಬರಿ)	10-00
2)	ಡಾ|| ಅಘೋರ	,,	12-00
3)	ಡಾ|| ಕಮಲೇಶ್	,,	15-00
4)	ವಂದೇಮಾತರಂ	,,	15-00
5)	ಅನಂತಾನಂತದೆಡೆಗೆ	,,	8-00
6)	ರತ್ನಗರ್ಭಾವಸುಂಧರಾ	(ಕಥಾ ಸಂಕಲನ)	6-00
7)	ಬಹುರತ್ನಾವಸುಂಧರಾ	,,	6-00
8)	ಲಿಯೋನಾ	,,	6-00
9)	ಶ್ರೀಮುಖಿ	,,	6-00
10)	ವೈಶಾಖೀ ಪರ್ವ	,,	8-00
11)	ಪೂಜಾವಸಾನಸಮಯೆ....!	(ಕವಿತಾ ಸಂಕಲನ)	4-00
12)	ಧ್ಯಾನಾವಸಾನಸಮಯೆ....!	,,	4-00
13)	ಗಾನ ತೀರ್ಥ	,,	6-00
14)	ನಾದ ಬಿಂದು	,,	6-00
15)	ವಿಜಯಗಾಥಾ	(ದೇಶಭಕ್ತಿ ಗೀತೆ)	3-00
16)	ಪುಣ್ಯಪಯೋನಿಧಿ	(ನಾಟಕ)	6-00
17)	ಪುಣ್ಯಾಭಿಸಾರ	,,	6-00
18)	ತರಂಗಿಣಿ	(ಸಾನೆಟ್ಟುಗಳು)	6-00

ಸದ್ಯದಲ್ಲಿಯೇ ಪ್ರಕಟವಾಗಲಿರುವ ಕೃತಿಗಳು :

ವೈತರಣಿ, ಕೃತಂ ಸ್ಮರ. ಕ್ರತುಂ ಸ್ಮರ. ಇಂದ್ರ ಧನುಷ್.

ಮುಂಬರಲಿರುವ ಕೃತಿಗಳು :

ಶೇಷರತ್ನ, ಶ್ಯಾಂ-ಶಾಂತಿ, ಹೇಮ-ಗಂಗಾ, ಭಗವಾನ್ ಸೂರಿ, ಗೂಢಚಾರ.